
ಜಿ.ಪಿ. ರಾಜರತ್ನಂ

ನಿರ್ಭಯಾಗ್ರಫಿ

ಎಂಬ ಹೊಸ ರೀತಿಯ ಹಾಸ್ಯವೈಭವ




ಸಪ್ನ



ನಿರ್ಭಯಾಗ್ರಫಿ

ಎಂಬ

ಹೊಸ ರೀತಿಯ ಹಾಸ್ಯವೈಭವ



ನಿರ್ಭಯಾಗ್ರಫಿ

ಎಂಬ

ಹೊಸ ರೀತಿಯ ಹಾಸ್ಯವೈಭವ

ಜೆ. ಪಿ. ರಾಜರತ್ನಂ

SINCE 1967 Sapna

ಸಪ್ನ ಬುಕ್ ಹೌಸ್®

3ನೇ ಮುಖ್ಯರಸ್ತೆ, ಗಾಂಧಿನಗರ, ಬೆಂಗಳೂರು - 9

ದೂರವಾಣಿ : 40114455

NIRBAYAGROPHY : by **Dr. G. P. Rajaratnam,** published by **Sapna Book House (P) Ltd.**, R.O. # 11, 3rd Main Road, Gandhinagar, Bangalore-560 009, Tel. : 40114455. [K.B. 1256]

ISBN : 978-81-280-0827-6

ಪ್ರಥಮ ಮುದ್ರಣ : 1974
ಇತ್ತೀಚಿನ ಮುದ್ರಣ : **ಮಾರ್ಚ್ 2008**

ಪುಟಗಳು : xii+456=468	**ಪ್ರತಿಗಳ ಸಂಖ್ಯೆ : 1000**
ಬೆಲೆ ರೂ. : 150/–	**Paper Used: 13.6 Kg D/C S.S. (70 gsm) Maplitho** **Book Size : 1/8 Crown**

ಹಂಚಿಕೆದಾರರು : **ಸಪ್ನ ಎಂಟರ್‌ಪ್ರೈಸಸ್**
ಸದ್ಗುರು ಕಾಂಪ್ಲೆಕ್ಸ್, ನಂ. 14, 27ನೇ ಅಡ್ಡರಸ್ತೆ
4ನೇ ಬ್ಲಾಕ್ (ಪಶ್ಚಿಮ), ಜಯನಗರ
ಬೆಂಗಳೂರು - 560 011, ದೂರವಾಣಿ : 41307322

ಅಕ್ಷರ ಜೋಡಣೆ : ದಿವ್ಯ ಪ್ರಿಂಟ್ರಾನಿಕ್ಸ್, ಬೆಂಗಳೂರು

ಮುಖಪುಟ ವಿನ್ಯಾಸ : ಮೋನಪ್ಪ, ಬೆಂಗಳೂರು

ಮುದ್ರಣ : ಪೂರ್ಣಿಮ ಪ್ರಿಂಟರ್ಸ್, ಬೆಂಗಳೂರು

ರಾಜರತ್ನಂ ಪರಕೆ

'ಎತ್ತಿಕೊಳ್ಳುತ್ತೂ ಇದೇನು ಅವಲಕ್ಷಣ!' ಎನ್ನಬೇಡಿ. ಅರ್ಥವಾಗದಿರುವ ವರೆಗೂ ಎಲ್ಲಾ 'ಅವಲಕ್ಷಣ'; ಅರ್ಥವಾದ ಮೇಲೆ ಅದೇ 'ನವಲಕ್ಷಣ'.

ಪ್ರತಿಯೊಂದು ಭಾಷೆಯಲ್ಲಿಯೂ ಕೆಲವು ಪದಗಳಿಗೆ ಒಂದಕ್ಕಿಂತ ಹೆಚ್ಚು ಅರ್ಥವಿರುತ್ತದೆ. ಅಂಥವುಗಳಲ್ಲಿ ಹಳಗನ್ನಡದ 'ಪರಕೆ'ಯೂ ಒಂದು. ಇದರಲ್ಲಿ 'ಒಳ್ಳೆಯದಾಗಲೆಂದು ಹರಕೆ'ಯೂ 'ಕಸಗುಡಿಸುವ ಪೊರಕೆ'ಯೂ ಒಂದೇ ಕಲ್ಲಿನಿಂದ ಎರಡು ಹಕ್ಕಿಗಳನ್ನು ಒಮ್ಮೆಗೇ ಬೀಳಿಸಿದ ಹಾಗೆ, ಉದ್ದಿಷ್ಟವಾಗಿದೆ.

'ನೀವು ಕೈಗೆತ್ತಿಕೊಂಡಿರುವ ಈ ಪ್ರಕಟನೆ ನಿಮ್ಮ ಕೈ ಕಚ್ಚದಿರಲಿ, ಇಂಥ ಇನ್ನಷ್ಟು ಹೊತ್ತಿಗೆಗಳನ್ನು ನೀವು ಶ್ರಮವಿಲ್ಲದೆ ಪ್ರಕಟಿಸುವಂತಾಗಲಿ, ನಿಮ್ಮ ಮೂಲಕವಾಗಿ ನನ್ನ ನಿರ್ಭಯಾಗ್ರಫಿಯು ಕಂತುಕಂತಾಗಿ ಕನ್ನಡಕ್ಕೆ ದೊರಕು ವಂತಾಗಲಿ'—ಎಂದು ನಿಮಗೆ ನನ್ನ ಹರಕೆ.

ಹೀಗಲ್ಲದೆ, ನೀವು ಮೊದಲು ಮಾಡಿದ ಸೂಚನೆಗೆ ನಾನು ಸೋತು ಹೂಂ ಅಂದಿದ್ದರೆ—ನಮ್ಮ ಮನೋರಮೆ ಹೇಳಿದ ಹಾಗೆ 'ನೀರಿಳಿಯದ ಗಂಟಲೊಳ್ ಕಡುಬಂ ತುರುಕಿದಂತೆ' ಆಗುತ್ತಿತ್ತು; ಅಥವಾ ನಮ್ಮ ಸ್ನೇಹಿತರೊಬ್ಬರ ಸ್ವಾನುಭವದ ಮಾತಿನಂತೆ—'ಬೀರಿಳಿಯದ ಗಂಟಲೊಳ್ ಬ್ರೆಡ್ಡಂ ತುರುಕಿದಂತೆ' ಆಗುತ್ತಿತ್ತು. ನಮ್ಮಲ್ಲಿ ಅನೇಕರು Lip-sympathyಯನ್ನು ತೋರಿಸುತ್ತಾರೆಯೇ ಹೊರತು Dip-sympathy ತೋರಿಸುವುದು ಕಡಿಮೆ. ಎಂದರೆ ಕಂಡವರ ಹತ್ತಿರ ಪುಸ್ತಕ ಕಡ ತಂದು ಓದಿ 'ಕೊಂಡಾಡು'ವವರು ಹೆಚ್ಚು; ಜೇಬಿಗೆ ಕೈ ಇಳಿಬಿಟ್ಟು, ತಮಗೆ ಬೇಕಾದ ಪುಸ್ತಕವನ್ನು 'ಕೊಂಡು, ಆಡು'ವವರ ಸಂಖ್ಯೆ (ನನ್ನ ಪುಸ್ತಕಗಳ ಮಟ್ಟಿಗೆ) ಸ್ವಲ್ಪವೇ. Many are called but few chosen ಅಂದ ಹಾಗೆ—'ಮೆಚ್ಚಿಕೊಳ್ಳುವವರು ಮೂರು ಸಾವಿರ; ಮೆಚ್ಚಿ, ಕೊಳ್ಳುವವರು ಮೂರು. ಆದ್ದರಿಂದ, let us be practical and down to earth.ಮಣ್ಣಿನ ಮಕ್ಕಳು ಆಗೋಣ. ದಂತದ ಗೋಪುರಕ್ಕೂ ನಮಗೂ ದೂರವಿರಲಿ.

ಹಿಂದೆ, ಕೈಲಾಸಂ ಅವರ ಎಲ್ಲಾ ನಾಟಕಗಳನ್ನೂ ಒಂದು Omni bus ಆಗಿ

ಪ್ರಕಟಿಸಬೇಕೆಂದಾಗ, ಅವರು 'It will neither be coming nor be becoming!' ಎಂದು ಬರೆದರು. ಅದರಂತೆ ನೀವಾದರೂ ನನ್ನ ನಿರ್ಭಯಾಗ್ರಫಿ ಯನ್ನು ಒಂದು ಸಂಪುಟವಾಗಿ ಪ್ರಕಟಿಸುವ ಯೋಚನೆಯನ್ನು ಬಿಟ್ಟು, ಹೀಗೆ ಪುಸ್ತಿಕೆಗಳಿಗಾಗಿ ಪ್ರಕಟಿಸಲು ಒಪ್ಪಿರುವುದು ಸಂತೋಷ. ಬೇಕಾದವರು ಆಮೇಲೆ ಅವುಗಳನ್ನು ಬೈಂಡ್ ಮಾಡಿಸಿ ಇಟ್ಟುಕೊಳ್ಳಲಿ.

'ರಾಜರತ್ನಂ ಪರಕೆ' ಎಂಬ ಈ ಹಣೆಬರಹದಲ್ಲಿ 'ಪರಕೆಯ ಹಾಗಿರುವ ರಾಜರತ್ನಂ' ಎಂದು ಉಪಮಾಲಂಕಾರವನ್ನು ಕಂಡರೂ ಸರಿಯೆ; ಅಥವಾ 'ರಾಜರತ್ನಮ್ಮೇ ಪರಕೆ' ಎಂದು ರೂಪಕಾಲಂಕಾರವನ್ನಾದರೂ ಕಾಣಿ. ನಾನಂತೂ ಎರಡೂ ಅರ್ಥಗಳನ್ನು ಈ ಪ್ರಯೋಗದೊಳಗೆ ತಂದು ತುಂಬಿ ಇರಿಸಿದ್ದೇನೆ.

'ಯಾವುದೂ ನಮ್ಮ ಕೈಯಲ್ಲಿಲ್ಲ. ದೈವ ನಡಸಿದಂತೆ ನಾವು ನಡೆಯಬೇಕು' ಎಂಬುದಕ್ಕೆ ಈ ಪುಸ್ತಕದ ಪ್ರಕಟನೆಯೆ ಸಾಕ್ಷಿ. ನಿಮ್ಮ ಮತ್ತು ಇತರ ಮಿತ್ರರ ಪ್ರೇಮ ಸೌಹಾರ್ದ ಸಹಕಾರಗಳ ಎದುರಿಗೆ ನಾನು 'ನಿರುತ್ತರ ಭೂಪ'ನಾಗಿದ್ದೇನೆ. ನಿಮಗೆ ನಾನು ಏನು ಪ್ರತಿಫಲ ಕೊಡಲಿ? Virtue is its own reward.

ಪುಸ್ತಕ ಪ್ರಪಂಚದಲ್ಲಿ ವಾನಪ್ರಸ್ಥಾಶ್ರಮವನ್ನು ಆಶ್ರಯಿಸಬೇಕೆಂದಿದ್ದ ನನ್ನನ್ನು ಪುನಃ ಹಿಂದಕ್ಕೆ ಎಳೆದಿದ್ದೀರಿ. ಇದಾದರೂ ನನಗೆ ಅನಿಷ್ಟವಾದದ್ದೇನಲ್ಲ. ಹಿಂದೆ ಯಾರೋ ಹೀಗೇ ರತ್ನನ ಪದಗಳನ್ನು ಹೀಯಾಳಿಸಿದರು. ನಾಗನ ಪದಗಳ ಅವತಾರವಾಯಿತು. Out of evil cometh good! ಈಗ ಅದೇ ರತ್ನನ ಪದಗಳು ಕುರಿತು ಲಘುವಾಗಿ ಮಾತನಾಡಿದ್ದಕ್ಕೆ—ಇದೋ! ನಿಮ್ಮ ಮೂಲಕವಾಗಿ ಈ 'ಪುರುಷ ಸರಸ್ವತಿಯ ಪುನರುತ್ಥಾನ'!

"A Lion in Art's cause must be a lamb in his own" ಎಂದು ಕೈಲಾಸಂ ನಮಗೆ ಹೇಳಿಕೊಟ್ಟರು. ವೈಯಕ್ತಿಕವಾಗಿ ನನ್ನನ್ನು ಯಾರು ಏನೂ ಬೇಕಾದರೂ ಅಂದು ಆಡಿಕೊಳ್ಳಲಿ; ಬಾರಾ ಖೂನ್ ಮಾಫ್! ಆದರೆ ನನ್ನ ಕೃತಿಗಳ 'ಸುದ್ದಿಗೇನ್ರ ಬಂದ್ರೆ—ಮಾನಾ ಉಳ್ಸಾಕಿಲ್ಲ'! ಏಕೆಂದರೆ—My works are the Real ME!

ಇದುವರೆಗೆ ಕುರಿಯಾಗಿ ಕೂತಿದ್ದವನನ್ನು ಹೀಗೆ ಎಬ್ಬಿಸಿ ಹರಿಯನ್ನಾಗಿ ಮಾಡಿದ ನನ್ನ ಮಿತ್ರರಿಗೆ ನನ್ನ ನಮನ.

ಪರುಷವಾದ ಎರಡು ಪದಾರ್ಥಗಳಿಗೆ 'ಘರ್ಷಣೆ' ನಡೆದಾಗ ಕಿಡಿ ಸಿಡಿಯುತ್ತದೆ, ಜೊತೆಗೆ ಎರಡು ಪದಾರ್ಥಗಳೂ ಸವೆದುಹೋಗುತ್ತವೆ. ಅದೇ, ಒಂದು ಗಟ್ಟಿಯಾಗಿ, ಒಂದು ಮೃದುವಾಗಿ, 'ಮಥನ' ನಡೆದರೆ—ಹಾಲನ್ನು

ಕಾಯಿಸಿ, ಹೆಪ್ಪು ಹಾಕಿ, ಕಡೆದರೆ ಹೇಗೆ ನವನೀತ ದೊರಕುತ್ತದೋ ಹಾಗೇ—ಸಾರ್ಥಕವಾದದ್ದು ಏನಾದರೂ ಅದರಿಂದ ಪ್ರಾಪ್ತವಾದೀತು. ಇದು ಆಗಬೇಕಾದರೆ —ಆಗ್ರಹವಿರಬಾರದು, ಅವಸರಮಾಡಬಾರದು, ಆತುರಪಡಬಾರದು, ಉದ್ವೇಗ ವಿರಬಾರದು; ತಾಳ್ಮೆಯಿರಬೇಕು, ಸಹನೆಯಿರಬೇಕು, ಕ್ಷಮೆಯಿರಬೇಕು, ಪ್ರೇಮವಿರ ಬೇಕು.

ಸಹಸಾ ವಿದಧೀ ತನ ಕ್ರಿಯಾಂ
ಅವಿವೇಕಃ ಪರಮಾಪದಾಂ ಪದಂ |
ವೃಣುತೇ ಹಿ ವಿಮೃಶ್ಯಕಾರಿಣಂ
ಗುಣಲುಬ್ಧಾಃ ಸ್ವಯಂಮೇವ ಸಂಪದಃ ||

ಎಂದು ಭಾರವಿ ತನ್ನ 'ಕಿರಾತಾರ್ಜುನೀಯ'ದಲ್ಲಿ ಧರ್ಮರಾಜನಿಂದ ಭೀಮಸೇನನಿಗೆ ಬುದ್ಧಿ ಹೇಳಿಸುತ್ತಾನೆ.

ನನ್ನ Brand of humour ನನಗಿರಲಿ; ಅವರ Brand(Y) of humour ಅವರಿಗಿರಲಿ. Let us livc and let live.ಅನವಶ್ಯಕವಾಗಿ ವೈಮನಸ್ಯಗಳನ್ನು ಬೆಳೆಸದೆ, ಒಂದೇ ಕನ್ನಡ ತಾಯಿಯ ಮಕ್ಕಳಾದ ನಾವು, ನಾವು ಬೆಳಸಿದ್ದನ್ನು ನಮ್ಮ ತಾಯಿಗೆ ಅರ್ಪಿಸಿ, ಕೃತಾರ್ಥರಾಗೋಣ.

ಕೆಲವು ತಿಂಗಳ ಹಿಂದೆ 'ಉಪಾಸನೆ' ಚಿತ್ರಕ್ಕೆ ಹೋದಾಗ ಇವರು ಪಕ್ಕದಲ್ಲೇ ಬಂದು ಕುಳಿತರು. ನಗುತ್ತಾ ಜೋಕ್ ಮಾಡಿ ನಗಿಸಿದರು. ಆ ಸನ್ನಿವೇಶವನ್ನು ಫೋಟೋ ಹಿಡಿಸಿದರು. ಅದು ಎರಡು ಪತ್ರಿಕೆಗಳಲ್ಲಿ ಪ್ರಕಟವಾಯಿತು. ಅವರೇ ಈಗ ಹೀಗೆ ತುಂತುರು ಹಾರಿಸಿದ್ದಾರೆ. ಈ ಥೂಕುದಾನಿಯ ಬುದ್ಧಿ ನನ್ನ 'ಯೆಂಡಕುಡುಕ'ನಿಗೂ ಇಲ್ಲ. ಈ ವಿದ್ಯೆ ನನಗೆ ಅರ್ಥವಾಗದು. ನಾನು 'ಪುರುಷ ಸರಸ್ವತಿ'ಯ ಸಂಪ್ರದಾಯದವನು

'ಕೊಂಡಿಯೆತ್ತಿತು ಚೇಳು, ಕೆದರಿತ್ತು ಮುಳ್‌ಹಂದಿ, ಚಕಲಗಿಲಿಯಿಕ್ಕಿತ್ತು ಕೆಣಕೆ ಕರಡಿ'ಎಂಬುದು ನನ್ನ ಪದ್ಧತಿ.

ಬಾಯ ನುಡಿಗಳ ಕೇಳಿ ಕಿವಿಯೊಳ-
ಗಾಯೆನುತ ಪರಿಣಮಿಸಿ ಹೋಹ ವಿ-
ಡಾಯವಲ್ಲಿದು ಪಂಕ್ತಿಪಂಕ್ತಿಯ ಹಿಂದೆ ನಡುನಡುವೆ
ಕಾಯುತಿಹ ಕುಟುಕುಗಳ ನಗುವಿನು-
ಪಾಯದುರು ಮೊಟಕುಗಳ ಸೋರುವ
ಗಾಯಕುಪ್ಪಿನ ಚಟಿಕೆಗಳ ತಿಳಿಯದೆಯೆ ಕಣ್ಮುಚ್ಚಿ

ಬರಿಗಳೋಪಾದಿಯಲಿ ಕಬ್ಬಿನ
ಹೊರಗಣೆಲೆಯನು ಮೋದಕಟ ಮೆಲು-
ಕಿರುವುತಲ್ಪಸುಖಕ್ಕೆ ಸೋಲದೆ ಕಬ್ಬಿನೊಳು ರಸವ
ನೆರೆ ಸವಿನ ಗಜದಂತೆ ಚುಚ್ಚಿನ
ತೆರನ ತಿಳಿದೆಚ್ಚರಲುಬೇಕೆಂ-
ದರಿವವರ ಕೈಯೆಡೆಯ ಮಾಡುವೆನೀ ವಿಡಂಬನವ.

ಜಯ ಭವಾನಿ! ಮಹಿಷಾಸುರಮರ್ದಿನಿಗೆ ಮೀಸಲಾದ ಈ ನವರಾತ್ರಿಯ ಪುಣ್ಯತಿಥಿಯಲ್ಲಿ ದಶಪ್ರಹರಣಧಾರಿಣಿಯ ಆಶೀರ್ವಾದವನ್ನು ಪಡೆದು, ನನ್ನ ನಿರ್ಭಯಾಗ್ರಫಿಯ ಮೊದಲನೇ ಕಂತನ್ನು ಪ್ರಕಟಿಸಲು ನನ್ನ ಮಿತ್ರರಿಗೆ ಒಪ್ಪಿಗೆ ಕೊಟ್ಟಿರುತ್ತೇನೆ.

ನಾನು ನನ್ನ 'ನಾಗ'ನ ಹಾಗೆಯೇ. 'ಶಾನೆ ದಿವಸಾಗಿತ್ತು ನಾನಿಂಗೆ ಯೆಡೆನೆತ್ತಿ ನಿತ್ತು!'

ಶ್ರೀ ರಾಮಕೃಷ್ಣರ ದೃಷ್ಟಾಂತಕಥೆಯೊಂದರಲ್ಲಿ ಮುನೀಶ್ವರರೊಬ್ಬರು ಒಂದು ನಾಗಕ್ಕೆ ಹೀಗೆ ಹಿತವಾದ ಹೇಳುತ್ತಾರೆ:—'ನಿನ್ನ ಮೇಲೆ ಕಲ್ಲೊಗೆದವರನ್ನು ನೀನು ಕಚ್ಚಬೇಕಾದ್ದಿಲ್ಲ. ಹೆಡೆಬಿಚ್ಚಿ ಬುಸ್ ಎನ್ನುವಷ್ಟಾದರೂ ರಕ್ಷಣೆಯನ್ನು ನೀನು ಮಾಡಿಕೊಳ್ಳಲೇಬೇಕು'.

ಆಕಾರದಿಂದ ಮಾನುಷವೂ ಆಚಾರದಿಂದ ತಿರಿಕವೂ ಆದ ಉಪಸರ್ಗವನ್ನು ಇನ್ನೂ ಸಹಿಸಿಕೊಂಡಿದ್ದೆನಾದರೆ ಅದರಿಂದ ನಮ್ಮ ಗರುಡಿಯ ಮರ್ಯಾದೆಗೆ ಹಾನಿ ಎಂಬ ಕಾರಣದಿಂದ ಈಗ ಹೀಗೆ ಮಟ್ಟಿ ಮುಟ್ಟಿ ಎದ್ದು ನಿಂತಿದ್ದೇನೆ. ಇಲ್ಲಿಂದ ಉಂಡೆಗಳ ಬಟವಾಡೆ ಷುರು!

'ಕಲೆಕಷನ ಘನಪಡಿಸಿ, ಕಂಪನಿಯ ಬದುಕಿಸೋ'—ಎಂದು ಕೈಲಾಸಂ ತಮ್ಮ 'ನಂ ಕಂಪ್ನಿ'ಯಲ್ಲಿ ಭರತವಾಕ್ಯ ಹಾಡಿಸಿದರು. ಆದರ ಅರ್ಥ; 'ಈ ಪುಸ್ತಕ ಬೇಗ ಮಾರಾಟವಾಗಿ, ಮುಂದಿನ ಪುಸ್ತಕಕ್ಕೆ ದುಡ್ಡು ಒದಗುವಂತೆ ಮಾಡು, ದೇವರೇ' ಎಂದು ಈಗ ನನ್ನ ಪ್ರಾರ್ಥನೆ.

—ರಾಜರತ್ನಂ

ಸಾಹಿತ್ಯ ಕ್ಷೇತ್ರದಲ್ಲಿ Pollution

ಪ್ರಿಯ ಚಂದ್ರಕೀರ್ತಿ,

ನಿಮ್ಮ ಪ್ರೀತಿಪೂರ್ವಕವಾದ ಕಾಗದ ಬಂತು. ಅದರ ಜೊತೆಗಿದ್ದ ವಾರ ಪತ್ರಿಕೆಯ (11-6-72) ಎರಡು ಹಾಳೆಯೂ ತಲಪಿದೆ. ಈಗ 7-8ದಿನಗಳಿಂದ ನಿಮ್ಮ ಹಾಗೆಯೇ ಹತ್ತಾರು ಹಿತೈಷಿಗಳ ಬಂದು, ಇದೇ ಎರಡು ಹಾಳೆಗಳನ್ನು ನನ್ನ ಮುಂದಿಟ್ಟು, ಅದಕ್ಕೆ ಸರಿಯಾದ ಉತ್ತರ ಕೊಡಬೇಕೆಂದು ಆಗ್ರಹಿಸುತ್ತಿದ್ದಾರೆ. ಅವರ ಅಸಮಾಧಾನ, ಅವರ ನೋವು, ಅವರ ಕೋಪ ನನಗೆ ಅರ್ಥವಾಗುತ್ತದೆ. ಇದು ಸಾಹಿತ್ಯಕ್ಷೇತ್ರದಲ್ಲಿ ಆಗಬಾರದ Pollution. ಪ್ರತಿ—Pollutionನಿಂದ ಇದು ಶಮನವಾಗುವುದಿಲ್ಲ. ಕೆಟ್ಟexhaustನಿಂದ ಕರಿಯ ಹೊಗೆಯನ್ನು ಉಗುಳುತ್ತಾ ಲಾರಿ, ಬಸ್ಸು, ಕಾರು, ಆಟೋ ಹೋಗುವಾಗ ಏನು ಮಾಡುತ್ತೇವೆ? ಜಗಳಕ್ಕೆ ನಿಲ್ಲುತ್ತೇವಾ? ಆ ದುಷ್ಟ ಆವರಣ ದೂರವಾಗುವವರೆಗೂ ಮೂಗು ಮುಚ್ಚಿಕೊಳ್ಳುತ್ತೇವೆ, ಅಲ್ಲವಾ? ಹಾಗೆಯೇ ಇಲ್ಲಿಯೂ. ಈ ವಾರದ ಪತ್ರಿಕೆ ಮುಂದಿನ ವಾರದ ವೇಳೆಗೆ ರದ್ದಿ! ಆದ್ದರಿಂದ—ತಾನ್ ತಿತಿಕ್ಷಸ್ವ! ತಾನಾಗಿಯೇ ಸಾಯುವ ಕುದುರೆಯನ್ನು ಸುತ್ತಿಗೆಯಿಂದ ಹೊಡೆಯುವುದು ಏಕೆ?

ಎದುರಿಗೆ ಬಂದಿದ್ದ ಸ್ನೇಹಿತರಿಗೂ ಇದೇ ಹೇಳಿದೆ. ನಿಮಗೂ ಇದೇ ಹೇಳುತ್ತಿದ್ದೇನೆ. ನಾನು—I refuse to be drawn into any controversy. ಎಂದ ಮೇಲೆ, ನನ್ನಲ್ಲಿ ಪ್ರೀತಿಯಿರುವ ನೀವಾದರೂ ಯಾರೂ ಇದನ್ನು ವಾದಕ್ಕೆ ವಿಷಯ ಮಾಡಿಕೊಳ್ಳಬೇಡಿ. ಗಾಳಿಯಲ್ಲಿ ಎಂಜಲೆಲೆ ಹಾರಾಡುವ ಹಾಗೆ ನನ್ನನ್ನು ಎಳೆದಾಡಬೇಡಿ. ಇಷ್ಟರ ಮೇಲೆ ನೀವೂ ನನಗೆ ಅನಿಷ್ಟವಾಗುವಂತೆ ನಡೆದು ಕೊಂಡರೆ, ನಾನು ಏನು ಮಾಡುವ ಹಾಗಿದ್ದೇನೆ? ಏನೂ ಇಲ್ಲ. ಆದರೆ ಅದನ್ನೂ ಸಹಿಸಿಕೊಳ್ಳುವ ಸತ್ತ್ವವನ್ನು ನಾನು ನಮ್ಮ ಸ್ವಾಮಿಯಿಂದ ಸಂಪಾದಿಸಿಕೊಂಡಿದ್ದೇನೆ.

ಇಷ್ಟರ ಮೇಲೂ ಈ ಲೇಖನ ಬರೆದವರು, ತಮ್ಮ ಒಳಗೆ ಹೋಗಿರುವ 'ಪರಮಾತ್ಮ' ಆಡಿಸಿದಂತೆ ಆಡಬೇಕು ಅಲ್ಲವೆ? ಆದ ಕಾರಣ. ನೀವು ನಿಮ್ಮ ನಿತ್ಯವಿಧಿಗಳಲ್ಲಿ ಹೇಳುವ ಹಾಗೆ ನಾನು ಹೇಳುತ್ತೇನೆ:

ಖಮ್ಮಾಮಿ ಸವ್ವಜೀವಾಣಂ, ಸವ್ವೇ ಜೀವಾ ಖಮಂತು ಮೇ|
ಮೆತ್ತೀ ಮೇ ಸವ್ವಭೂಏಸು, ವೇರಂ ಮಜ್ಝಂನ ಕೇಣಈ||

ನಾನು ಸರ್ವಜೀವಗಳನ್ನೂ ಕ್ಷಮಿಸುತ್ತೇನೆ, ಸರ್ವ ಜೀವಗಳೂ ನನ್ನನ್ನು ಕ್ಷಮಿಸಲಿ. ಸರ್ವಭೂತಗಳಲ್ಲಿಯೂ ನನಗೆ ಮೈತ್ರಿಯುಂಟು, ಯಾರ ನಡುವೆಯೂ ನನಗೆ ವೈರವಿಲ್ಲ.

ನೀವು ಕಳಿಸಿದ ಎರಡು ಹಾಳೆಗೆ ನನ್ನ ಪ್ರತಿಕ್ರಿಯೆ ಏನು? ಎಂದು ಕೇಳಿದ್ದೀರಿ. ನೀವು ಕಳಿಸಿದ್ದನ್ನೇ ಮನೆಗೆ ಬಂದವರೂ ಕೊಟ್ಟುಹೋಗಿದ್ದಾರೆ. ಅವುಗಳಲ್ಲಿ ನಿಮ್ಮದು ಒಂದನ್ನು ಫೈಲ್ ಮಾಡಿಕೊಳ್ಳುತ್ತೇನೆ. ಉಳಿದದ್ದರಿಂದ ನಾಳೆ ಕ್ಷೌರಕ್ಕೆ ಬಿಸಿನೀರು ಕಾಯಿಸಿಕೊಳ್ಳುತ್ತೇನೆ.

ನಾನು ಚಾಕರಿಯಿಂದ ವಿಶ್ರಾಂತವಾದ ಮೇಲೆ ನನ್ನ ಹಿತೈಷಿಗಳು ಹಲವಾರು ಕಡೆ ನನಗೆ ಸನ್ಮಾನ ಮಾಡಿದ್ದಾರೆ, ಬಿನ್ನವತ್ತಳೆಗಳನ್ನು ಕೊಟ್ಟಿದ್ದಾರೆ. ಅವುಗಳ ಜೊತೆಗೆ ಇದನ್ನೂ ಒಂದು 'ಭಿನ್ನವತ್ತಳೆ'ಯಾಗಿ ಸ್ವೀಕರಿಸುತ್ತೇನೆ. ಇದು 'ಭಿನ್ನ ವತ್ತಳೆ' ಏಕೆ ಎಂದರೆ, ಇದರಲ್ಲಿ ಹೊಕ್ಕುಳು ಸೀಳಿರುವುದು ಎದ್ದು ಕಾಣುತ್ತದೆ.

ಇನ್ನು, Joking apart, ಈ ಪ್ರಕರಣವನ್ನು ಇಲ್ಲಿಗೆ ಮರೆತುಬಿಡಿ. ನಾನು ಮರೆತುಬಿಡುತ್ತೇನೆ.

ಭವಭೂತಿಯ ಉತ್ತರರಾಮಚರಿತದಲ್ಲಿ—
ವಜ್ರಾದಪಿ ಕಠೋರಾಣಿ ಮೃದೂನಿ ಕುಸುಮಾದಪಿ|
ಲೋಕೋತ್ತರಾಣಾಂ ಚೇತಾಂಸಿ ಕೋ ನು ವಿಜ್ಞಾನುಮರ್ಹತಿ||

ಎಂದು ಶ್ರೀರಾಮನನ್ನು ಕುರಿತ ಮಾತು ಇದೆ. ಇದನ್ನು ನೆನಪಿನಲ್ಲಿರಿಸಿ ಕೊಂಡಿರೋ ನಾನು, ಯಾರೋ ಏನೋ ಅಂದರೆ, 'ಎದ್ದೆದ್ದು ಓದೀತಾನೆ ಮದ್ದೂರಾಯ' ಎನ್ನುವ ಹಾಗೆ, ಕತ್ತೆಯಂತೆ ಕೇಕೆ ಹಾಕಿಕೊಂಡು ಕಚ್ಚೋಕೆ ಹೋಗಲಾ? ನೀವೇ ಹೇಳಿ.

ಪುಸ್ತಕದೊಳಗೆ

ಜಿ. ಪಿ. ರಾಜರತ್ನಂ ಅಂತರ್ದರ್ಶನ - 1

ಚಕ್ರವರ್ತಿ ವಜ್ರ

ಅಥವಾ

ಪುರುಷ ಸರಸ್ವತಿಯ ಪುನರುತ್ಥಾನ

ಇದು

ಜಿ. ಪಿ. ರಾಜರತ್ನಂ ಅವರ

ನಿರ್ಭಯಾಗ್ರಫಿ

ಮೊದಲನೇ ಕಂತು

ಹಾಸ್ಯೇಂದ್ರಿಯ ಪಟುತ್ವ

ತನ್ನನ್ನು ಯಾರಾದರೂ ನೋಡಿ ನಕ್ಕರೆ, ನಕ್ಕು ನುಡಿದರೆ,
ಅದರಿಂದ ನೊಂದುಕೊಳ್ಳದೆ, ಅದರಿಂದ ಕೋಪಗೊಳ್ಳದೆ,
ಅದರಿಂದ moody ಆಗದೆ, ಅದನ್ನೇ brood ಮಾಡದೆ,
ಹೀಗೆ ಕೇಳಿ, ಹಾಗೆ ನಕ್ಕು ಮರೆತುಬಿಡುವುದು
ಪಕ್ವವಾದ Sense of humour ಇರುವವರ ಲಕ್ಷಣ.

ಕೈಲಾಸಂ ನೆಟ್ಟ ಸಾಲುಮರಗಳಿಂದ ನಿಬಿಡವಾದ ಕೊರವಂಜಿಯ ದಾರಿಯಲ್ಲಿ
ನಡೆದು ರಾಜರತ್ನಂ ಈ ಲಕ್ಷಣವನ್ನು ಮೆಯ್ಗೂಡಿಸಿಕೊಂಡಿದ್ದಾನೆ.
ಇದಕ್ಕೆ ಸಾಕ್ಷಿಯಾಗಿ ಈಗ ನಿಮ್ಮ ಕೈಯಲ್ಲಿದೆ :

"ಚಕ್ರವರ್ತಿ ವಜ್ರ"

ಇದನ್ನು ಓದಿ ಮುಗಿಸುವ ವೇಳೆಗೆ ಕೈಗೆ ಬರುತ್ತದೆ :

"ಕೊರವಂಜಿಯ ದಾರಿಯಲ್ಲಿ"

Here you have an unusual blend of
HUMOUR & RIGHTEOUS INDIGNATION

After ಪುರುಷ ಸರಸ್ವತಿ — Who?
ಒಂದೇ ಉತ್ತರ : ಚಕ್ರವರ್ತಿ ವಜ್ರ!

ಚಕ್ರವರ್ತಿ ವಜ್ರ

ನಿಮ್ಮ ಕಾಗದ ಮತ್ತೆ ಬಂದರೂ ಬರಬಹುದೆಂದು ನಾನು ನಿರೀಕ್ಷಿಸಿದ್ದೆ. ಆದರೆ, ನೀವು ಇಷ್ಟು ಸ್ಥೈರಣೆಗೆಡುವಿರೆಂದು ಕೊಂಡಿರಲಿಲ್ಲ. ಇದು ಅನಾವಶ್ಯಕವಾದ ಉದ್ವೇಗ. ಇದರಿಂದ ಲಾಭವಿಲ್ಲ.

ಎರಡು ಹಾಳೆಗಳಷ್ಟು ಹಿಂಜಿಕೊಂಡಿರುವ ಆ ಲೇಖನದಲ್ಲಿ ಅವರು ಹೇಳಿರುವುದರ ಸಾರಾಂಶವಾದರೂ ಏನು?

> **"ಭಗವಾನ್ ಶ್ರೀ ಸತ್ಯಸಾಯಿ ಬಾಬಾ**
> **ಅವರ ಹತ್ತಿರ ಹೋದ ಲಾಗಾಯಿತು—**
> **ಈ 'ರಾಜ'ನು 'ಚಕ್ರವರ್ತಿ'ಯಾಗುತ್ತಿದ್ದಾನೆ!**
> **ಈ 'ರತ್ನ'ವು 'ವಜ್ರ'ವಾಗುತ್ತಿದೆ!"**

ಎಂದಲ್ಲವೆ? ಇದು ನಿಜವೆಂದು ನಾನೇ ಒಪ್ಪಿಕೊಳ್ಳುವಾಗ ನೀವು ವೃಥಾ ಉದ್ವೇಗಪಡುವುದಕ್ಕೆ ಆಧಾರವಿಲ್ಲ. ಆದ್ದರಿಂದ, ಅವರು 'ನಗೆಯು ಬರುತಿದೆ' ಎಂದರೆ ಕೇಳಿ ನಕ್ಕುಬಿಡಿರಿ. ಅವರಿಗೆ ಸಂತೋಷವಾಗಲಿ. ಸಂತೋಷಂ ಜನಯೇತ್ ಪ್ರಾಜ್ಞಃ; ತದೇವ ಈಶ್ವರಪೂಜನಂ.

ನನ್ನ ತಾಯಿ ನನ್ನನ್ನು 'ರಾಜ' ಎಂದು ಕರೆದರು. ನನ್ನ ತಂದೆಯಿಂದ ನಾನು 'ರಾಜಯ್ಯಂಗಾರ್' ಆದೆ. ನಮ್ಮದು ಗುಂಡ್ಲು ಪಂಡಿತವಂಶ ಆದ್ದರಿಂದ 'ಜಿ.ಪಿ.ರಾಜಯ್ಯಂಗಾರ್' ಆದೆ. ಮುಂದೆ

ನನ್ನ ಕಪಿಚೇಷ್ಟೆಯಿಂದ **'ಜಿ.ಪಿ. ರಾಜರತ್ನಂ ಅಯ್ಯಂಗಾರ್'** ಆದೆ. ಮುಂದೆ ಯಾರದೋ ಬಾಯಿ ತಿರುಗದೆ, ಕೇವಲ **'ಜಿ.ಪಿ. ರಾಜರತ್ನಂ'** ಆದೆ. ಕೊನೆಗೆ, ಜಿ.ಪಿ.ಗೂ ಕತ್ತರಿ ಬಿದ್ದು ಬಚ್ಚಬರಿಯ **'ರಾಜರತ್ನಂ'** ಆಗಿ ಉಳಿದೆ. ನನ್ನ 'ಹತ್ತು ವರ್ಷ'ದಲ್ಲಿ ಇದನ್ನೆಲ್ಲ ಹೇಳಿದ್ದೇನೆ. ಈಗ ಈ 'ಚಕ್ರವರ್ತಿ ವಜ್ರ' is a new feather in my cap!

ಎಂಟುವರ್ಷ ಹಿಂದೆ ಸ್ವಾಮಿಯ ಹತ್ತಿರ ಹೋದ ಲಾಗಾಯಿತು—**'ಈ ರಾಜ ಚಕ್ರವರ್ತಿಯಾಗುತ್ತಿದ್ದಾನೆ, ಈ ರತ್ನ ವಜ್ರವಾಗುತ್ತಿದೆ'** ಎಂಬುದನ್ನು ಕಂಡುಕೊಂಡು, ಯಾರಾದರೂ ನನ್ನನ್ನು **'ಚಕ್ರವರ್ತಿ ವಜ್ರ'** ಎಂದು ನಿರ್ದೇಶಿಸಿದರೆ, ಅದನ್ನು ಉಪಚಾರವೆಂದು ಭಾವಿಸಬೇಕೇ ಹೊರತು ಅಪಚಾರವೆಂದು ಭಾವಿಸಲಾಗದು. ಒಳಗಿನ ತಿರುಳನ್ನು ಅರಿಯದೆ ಆಡಿದರೂ, ಸತ್ಯ ಸತ್ಯವೇ ಹೊರತು ಅನ್ಯಥಾ ಆಗಲಾರದು.

'ರತ್ನಂ ಸಮಾಗಚ್ಛತು ಕಾಂಚನೇನ' (ರತ್ನವು ಚಿನ್ನದೊಂದಿಗೆ ಚೆನ್ನಾಗಿ ಹೊಂದಿಕೊಳ್ಳಲಿ) ಎನ್ನುತ್ತಾರೆ. ತಮ್ಮ ಪ್ರೀತಿಗೆ ಪಾತ್ರರಾದವರನ್ನು 'ಬಂಗಾರು'(ಚಿನ್ನ) ಎನ್ನುವ ಬಾಬಾ ಅವರನ್ನು ಆಶ್ರಯಿಸಿ, ನಾನು ಈ ಸುಭಾಷಿತವನ್ನು ಸಾರ್ಥಕಪಡಿಸಿದ್ದೇನೆ.

'ಇಬ್ಬರು ಫಕೀರರು ಒಂದೇ ಹರಕುಚಾಪೆಯ ಮೇಲೆ ನೆಮ್ಮದಿಯಿಂದಿರುತ್ತಾರೆ. ಆದರೆ, ಒಂದು ಒರೆಯಲ್ಲಿ ಎರಡು ಕತ್ತಿಗಳು ಹೇಗೆ ಇರಲಾರವೋ ಹಾಗೆ ಇಬ್ಬರು ದೊರೆಗಳು ಒಂದು ರಾಜ್ಯದಲ್ಲಿ ಒಟ್ಟಿಗೆ ವಾಸಮಾಡಲಾರರು' ಎಂದಿದ್ದಾನೆ, ಸಾದಿ. ಈ ಶತಮಾನದ ಬಡಕನ್ನಡ ಲೇಖಕರಾದ ನಾವು 'ಕವಿಗೆ ಕವಿ

ಮುನಿವಂ' ಎಂಬ ಹಳೆಯ ಮಾತನ್ನು ಸಾರ್ಥಕಪಡಿಸಬೇಕೆ?

ಇಷ್ಟು ಹೇಳಿದ್ದರಿಂದ ನಿಮ್ಮ ಉದ್ವೇಗ ಸ್ವಲ್ಪವಾದರೂ ಶಮನವಾಗಬಹುದೆಂದು ನಂಬಿದ್ದೇನೆ. ನಿಲ್ಲಿಸಿಬಿಡಿ. ದಯಮಾಡಿ ಮುಂದುವರಿಸದೆ ಇಲ್ಲಿಗೆ ಈ ಪ್ರಸಂಗವನ್ನು ಬಿಡಿ.

(ಮೇಲು ಮಾತು: ನನ್ನ ಸಾಹಿತ್ಯ ಜೀವನಕ್ಕೆ ಸಂಬಂಧಪಟ್ಟ ಕೆಲವು ಸಂಗತಿಗಳನ್ನು —**'ಹತ್ತು ವರ್ಷ'—'ನಮ್ಮ ರಾಜರತ್ನಂ' —'ನೂರು ವರ್ಷದ ಅಚ್ಚುಮೆಚ್ಚು'** ಎಂಬ ಪುಸ್ತಕಗಳಲ್ಲಿ ಹೇಳಿಕೊಂಡಿದ್ದೇನೆ. 'ವಿಚಾರರಶ್ಮಿ'ಯ ಮುನ್ನುಡಿಯಲ್ಲಿಯೂ ಇತರ ಪುಸ್ತಕಗಳ ಮುನ್ನುಡಿಗಳಲ್ಲಿಯೂ ಇದಕ್ಕೆ ಪೂರಕವಾದ ಸಂಗತಿಗಳು ದೊರಕುತ್ತವೆ. ನಾನು 'ಸತ್ಯ–ಧರ್ಮ–ಶಾಂತಿ–ಪ್ರೇಮ'ಗಳಿಗೆ ಹೇಗೆ ಶರಣಾದೆ ಎಂಬುದು ನನ್ನ 'ಶ್ರೀ ಸಾಯಿ ಚಿಂತನ'ದಲ್ಲಿ ಚಿತ್ರಿತವಾಗಿದೆ. ಈ ಪುಸ್ತಕಗಳೆಲ್ಲ ನಿಮ್ಮ ಹತ್ತಿರ ಇವೆ. ನೀವು ಓದಿರುತ್ತೀರಿ. ಸುಮ್ಮನೆ ಜ್ಞಾಪಿಸುತ್ತಿದ್ದೇನೆ, ಅಷ್ಟೆ.)

ವಾಗ್ದಾನ

ಆಯ್ತು. ನೀವು ಒಣ ಕುತೂಹಲಕ್ಕಾಗಿ ಈ ಕಾಗದ ಬರೆಯುತ್ತಿಲ್ಲವೆಂಬುದನ್ನು ನಾನು ನಂಬುತ್ತೇನೆ. ನೀವು ಬೆಂಗಳೂರಿನ ಇಂಟರ್ ಮೀಡಿಯೆಟ್ ಕಾಲೇಜಿನಲ್ಲೂ ಸೆಂಟ್ರಲ್ ಕಾಲೇಜಿನಲ್ಲೂ ನನಗೆ ಶಿಷ್ಯರಾಗಿದ್ದ ಕಾಲದಿಂದ ನಿಮ್ಮನ್ನು ಬಲ್ಲೆ. ನನ್ನ ಒಂದೊಂದು ಪುಸ್ತಕ ಪ್ರಕಟವಾದಾಗಲೂ ಅದನ್ನು ನೀವು ತರಿಸಿಕೊಂಡಿದ್ದೀರಿ. ನಾನೇ ಕಳಿಸಿ ಕೊಟ್ಟಿದ್ದೇನೆ. ಕೊಂಡುಕೊಂಡ ಪುಸ್ತಕಗಳನ್ನು ನೀವು ಓದಿ ಮೆಚ್ಚಿಕೊಂಡಿದ್ದೀರಿ ಎಂಬುದಕ್ಕೆ ನೀವು ಬರೆದಿರುವ ಕಾಗದಗಳೆ ಸಾಕ್ಷಿ. ನಿಮ್ಮ ಮನೆಯಲ್ಲಿ ನನ್ನ ಪುಸ್ತಕಗಳ ಸಂಗ್ರಹ ಎಷ್ಟಿದೆಯೆಂಬುದನ್ನು ನಾಲ್ಕು ವರ್ಷದ ಹಿಂದೆ ನಿಮ್ಮೂರಿಗೆ ಬಂದಾಗ ನೋಡಿದ್ದೇನೆ. ನನ್ನ ಸಾಹಿತ್ಯದೊಡನೆ ಇಷ್ಟು ನಿಕಟವಾದ ಸ್ನೇಹ ಬೆಳಸಿಕೊಂಡಿರುವ ನೀವಲ್ಲದೆ ಇನ್ನು ಯಾರು ಕೇಳಬೇಕು? ನಿಮಗಲ್ಲದೆ ನಾನು ಯಾರಿಗೆ ಹೇಳಬೇಕು?

'ಕೂಪರಿಗೆ ಹೇಳುವೆನು ಕುಳಸ್ಥಳಂಗಳನೆಲ್ಲವ. ಕೂರದವರಿಗೆ ಹೇಳಿ ನಾನೇವೆನು ಶಿವನೇ? ಕರಲಭೂಮಿಯಲ್ಲಿ ಕರೆದ ವೃಷ್ಟಿಯ ತೆರನಂತೆ ಅವರೆತ್ತ ಬಲ್ಲರೆನ್ನ ಸುಖದುಃಖವ? ಇದು ಕಾರಣ, ಕೂಡಲಸಂಗಮ ದೇವಾ, ನಿಮ್ಮ ಶರಣರಿಗಲ್ಲದೆ ಬಾಯ ತೆರೆಯೆನು' ಎಂದು ಬಸವಣ್ಣನವರು ಒಂದು ಕಡೆ ಹೇಳಿದ್ದಾರೆ. (ಕೂಪರು = ಪ್ರೀತಿಸುವವರು. ಕೂರದವರು =

ಪ್ರೀತಿಯಿಲ್ಲದವರು. ಕರಲಭೂಮಿ=ಜೌಗುನೆಲ, ವೃಷ್ಟಿ=ಮಳೆ.)

ಓದುಗರಿಗೆ ಮೇಲ್ಪಂಕ್ತಿಯಾಗಿರಬೇಕಾದ ಸಾಹಿತಿಗಳು ನಾವೇ ಹಾದಿ ಬೀದಿಯ ಪತ್ರಿಕೆಗಳಲ್ಲಿ ಒಬ್ಬರೊಡನೊಬ್ಬರು ಕಚ್ಚಾಡಿದರೆ —ನಾವು ಹಾಸ್ಯವೆಂದು ಹೇಳಿದುದೆಲ್ಲ ಹಾಸ್ಯಾಸ್ಪದವಾಗುತ್ತದೆ. ಈಗ ಗೊತ್ತಾಯಿತಾ—ಪತ್ರಿಕೆಗಳಲ್ಲಿ ಬಂದದ್ದಕ್ಕೆ ನಾನೇಕೆ ಪ್ರತಿ ಬರೆಯುವುದಿಲ್ಲ ಅನ್ನುವುದು?

ಆದರೂ ನಿಮಗೆ ಈ ಕಾಗದ ಬರೆಯುತ್ತಿದ್ದೇನೆ. ಏಕೆಂದರೆ —ಗೀತೆಯಲ್ಲಿ ಕೃಷ್ಣ ಅರ್ಜುನನಿಗೆ ಹೇಳಿದ ಹಾಗೆ—'ಇಷ್ಟೋಽಸಿ ಮೇ ದೃಢಮಿತಿ ತತೋ ವಕ್ಷ್ಯಾಮಿ ತೇ ಹಿತಮ್'—ನೀವು ನನಗೆ ತುಂಬ ಬೇಕಾದವರಾಗಿದ್ದರಿಂದ ನಿಮಗೆ ಹಿತವಾಗುವುದನ್ನು ಹೇಳುತ್ತೇನೆ.

ಆದರೆ, ಅದೇ ಗೀತೆಯಲ್ಲಿ ಬರುವ ಇನ್ನೊಂದು ಮಾತನ್ನೂ ನಿಮಗೆ ಹೇಳಿಬಿಡುತ್ತೇನೆ. ಅದು ಏನೆಂದರೆ—

ಇತಂ ತೇ ನಾತಪಸ್ಕಾಯ ನಾಭಕ್ತಾಯ ಕದಾಚನ|
ನ ಚಾಶುಶ್ರೂಷವೇ ವಾಚ್ಯಂ ನ ಚ ಮಾಂ ಯೋಽಭ್ಯಸೂಯತಿ||

ತಪಸ್ಸು ಮಾಡದವನಿಗೆ, ಭಕ್ತನಲ್ಲದವನಿಗೆ, ಇದನ್ನು ಎಂದಿಗೂ ಹೇಳಕೂಡದು; ಶುಶ್ರೂಷೆ ಮಾಡದವನಿಗೂ ನನ್ನಲ್ಲಿ ಅಸೂಯೆ ಪಡುವವನಿಗೂ ಇದನ್ನು ಹೇಳಕೂಡದು.

ಈ ಮಾತನ್ನು ಪಾಲಿಸುತ್ತೇನೆಂದು ನೀವು ನನಗೆ ವಾಗ್ದಾನ ಮಾಡಿದರೆ, ನೀವು ಕೇಳಿದ ಪ್ರಶ್ನೆಗಳಿಗೆ ವಿರಾಮ ದೊರಕಿದಾಗ ಉತ್ತರ ಬರೆಯುತ್ತೇನೆಂದು ನಾನೂ ವಾಗ್ದಾನ ಮಾಡುತ್ತೇನೆ.

ನಾನು ಬರೆದದ್ದನ್ನು ನೀವು ಯಾರಿಗೂ ತೋರಿಸಕೂಡದು, ಯಾರೊಡನೆಯೂ ಪ್ರಸ್ತಾಪಿಸಕೂಡದು; ಅದನ್ನು ಬಳಸಿಕೊಂಡು ಯಾವ ಪತ್ರಿಕೆಯಲ್ಲೂ ಬರೆಯಕೂಡದು.

ನೀವು ಹಾಗೆಲ್ಲ ಮಾಡುವವರಲ್ಲ ಎಂಬ ನಂಬಿಕೆ ನನಗಿದೆ. ಇನ್ನೂ ನೀವು ಬೇಕಾದ್ದು ಕೇಳಿ.

ಆದರೆ ಒಂದು ವಿಜ್ಞಾಪನೆ: ನನಗೆ ವಯಸ್ಸಾಗಿದೆ, ವೇಳಾವಕಾಶ ಕಡಮೆ; ಅಂಚೆಯ ವೆಚ್ಚ ಏರಿರುವುದರಿಂದ ಮೂರು ಮೂರು ದಿನಕ್ಕೊಮ್ಮೆ ಬರೆಯಲಾರೆ.

ಕೇಳುವಾಗ ನನ್ನ ವೈಯುಕ್ತಿಕವಾದ ವಿಷಯಗಳನ್ನು ಕಡಮೆ ಮಾಡಿ; ನನ್ನ ಸಾಹಿತ್ಯಕ್ಕೆ ಸಂಬಂಧಪಟ್ಟದನ್ನು ಸಂಕೋಚವಿಲ್ಲದೆ ಕೇಳಿ.

ನಿಂದಾಸ್ತುತಿ

ನೀವು ಕಳಿಸಿರುವ ಎರಡು ಪುಟಗಳ 'ಭಿನ್ನವತ್ತಳೆ'ಯಲ್ಲಿ ಪ್ರಧಾನವಾದ ಅಲಂಕಾರ—'ನಿಂದಾಸ್ತುತಿ'. ಮೇಲೆ ನೋಡಿದರೆ ಬೈದಹಾಗಿರಬೇಕು, ಒಳಗಿರುವುದೆಲ್ಲ ಹೊಗಳುವುದಾಗಿರಬೇಕು—ಇದು 'ನಿಂದಾಸ್ತುತಿ'ಯ ಲಕ್ಷಣ. ಬರೆದವರಿಗೆ ಈ ಲಕ್ಷಣ ಗೊತ್ತಿದೆಯೋ ಇಲ್ಲವೋ? ಬರವಣಿಗೆಯ ಪೂರ್ವಾರ್ಧವಂತೂ ಈ ಅಲಂಕಾರಕ್ಕೆ ಒಳ್ಳೆಯ ಲಕ್ಷ್ಯ.

ಪೂರ್ವಾರ್ಧದಲ್ಲಿ ಅವರು ಏನು ಹೇಳಿದ್ದಾರೆ? ಪಟ್ಟಿಮಾಡಿ:

೧) ಇವನು ಲಾರಿಗಟ್ಟಳೆ ವಿದ್ಯೆ ಸಂಪಾದಿಸಿದ್ದಾನೆ;

೨) ಇವನ ಗರಡಿಯಲ್ಲಿ ಅನೇಕ ಡಿಗ್ರಿವಂತರು ತಯಾರಾಗಿದ್ದಾರೆ; ಅವರಲ್ಲಿ ಅನೇಕರು ಇವನಿಗಿಂತ ದೊಡ್ಡ ಅಧಿಕಾರದಲ್ಲಿದ್ದಾರೆ;

೩) ಇವನಿಗೆ ಸಂಸ್ಕೃತ, ಪ್ರಾಕೃತ ಪಾಲಿ, ಕನ್ನಡ, ಇಂಗ್ಲೀಷು ಎಲ್ಲಾ ಬರುತ್ತೆ;

೪) ಇವನು ಸಿಗರೇಟ್ ಸೇದುವುದಿಲ್ಲ; ಬೀರು ಕುಡಿಯುವುದಿಲ್ಲ; ಆ ಇನ್ನೊಂದು, ಅದರ ಗಂಧವೇ ಇಲ್ಲ;

೫) ಶ್ರುತಿ ಮಾಡಿಟ್ಟ ವೀಣೆಯ ಮೇಲೆ ಯಾವನಾದರೂ ನಿದ್ದೆಯಲ್ಲಿದ್ದವನ ಕೈ ಬಿದ್ದರೆ ಅದು ಹೇಗೆ ಅಪಶ್ರುತಿ

ನುಡಿಯುವುದಿಲ್ಲವೋ ಹಾಗೆ ಇವನು ಎದ್ದಿರಲಿ, ನಿದ್ರೆಯಿಂದಿರಲಿ, ಇವನ ಬಾಯಿಂದ ಒಂದಾದರೂ ಅಪಶಬ್ದ ಬರಲಾರದು;

೬) ಪಾಂಡಿತ್ಯದಲ್ಲಿ ಇವನು ಮದಗಜವಾದರೂ ಇವನಿಗೆ ಮದವಿಲ್ಲ;

೭) ಮುಗ್ಗರಿಸದೆ ಮಾತನಾಡಿ, ಸಭಿಕರನ್ನು ಮೂಕರಾಗಿ ಮಾಡಬಲ್ಲ; ಇವನ ಭಾಷಣಗಳಿಗೆ ತುಂಬ ಬೇಡಿಕೆಯಿದೆ;

೮) ಇವನ ಸಾಹಿತ್ಯ ಸಾಧನೆಯನ್ನು ಕಂಡು ಹಿರಿಯರು ಬೆನ್ನು ಚಪ್ಪರಿಸಿದ್ದಾರೆ, ಕಿರಿಯರು ನಮೋನಮಃ ಎಂದಿದ್ದಾರೆ;

೯) ಪದ್ಯವೇ, ಗದ್ಯವೇ, ಗಂಭೀರ ಬರಹವೇ, ಅಧ್ಯಾತ್ಮವೇ, ಯಾವುದು ಕೇಳಿ; ಎಲ್ಲದರಲ್ಲಿಯೂ ಇವನು ಎತ್ತಿದ ಕೈ;

೧೦) ಪತ್ರಿಕೆಗಳ ಸಂಪಾದಕರು ಲೇಖನಗಳಿಗಾಗಿ ಇವನ ಮನೆಯ ಬಾಗಿಲಿನಲ್ಲಿ ಕ್ಯೂನಿಂತರೂ ಇವನು ಯಾರಿಗೂ ಪುಕಸಟ್ಟೆ ಬರೆದುಕೊಡುವುದಿಲ್ಲ; ವೃತ್ತಿ ಬರಹಗಾರ ಎಂದು ಹೇಳಿಕೊಳ್ಳುವುದರಲ್ಲಿ ಇವನಿಗೆ ಎಳ್ಳಷ್ಟೂ ಸಂಕೋಚವಿಲ್ಲ;

೧೧) ಇವನಲ್ಲಿ ಜಾತೀಯತೆ ಸುತರಾಂ ಇಲ್ಲ; ವಿಶಿಷ್ಟಾದ್ವೈತ ಇವನ ಹುಟ್ಟುಧರ್ಮವಾದರೂ ಜೈನ ಸಾಹಿತ್ಯದ ಬಗ್ಗೆ, ಬೌದ್ಧ ಸಾಹಿತ್ಯದ ಬಗ್ಗೆ ಟನ್‌ಗಟ್ಟಲೆ ಬರೆದಿದ್ದಾನೆ; ಎರಡು ಸಲ ಗೋಮಟೇಶ್ವನಿಗೆ ಅಭಿಷೇಕ ಮಾಡಿದ್ದಾನೆ—ಮಂತ್ರ ಸಮೇತವಾಗಿ.

೧೨) ಇವನ ಧಾರ್ಮಿಕ ಸೃಷ್ಟಿ ಅಪಾರ, ಪ್ರಕಟವಾದ ಪುಸ್ತಕಗಳು ಅಗಣಿತ; ಅವನ ಪುಸ್ತಕಗಳಿಗೆ ಇವನೇ ಪ್ರಕಾಶಕ; ಇವನು ತನ್ನ ಪುಸ್ತಕಗಳನ್ನು ತಾನೇ ಮಾರುತ್ತಾನೆ;

೧೩) ಇವನು ಕಚಡಾ ಕಾದಂಬರಿಗಳನ್ನು ಬರೆಯಲಾರ, ಕ್ಯಾಬರೇ ನೃತ್ಯಗಳನ್ನು ನೋಡಲಾರ; ಅನೈತಿಕ ಸಾಹಿತ್ಯಕ್ಕೂ ಇವನಿಗೂ ಸಂಬಂಧವೇ ಇಲ್ಲ:

೧೪) ಜನತೆಗೆ ಏನು ಬೇಕೋ ಅದನ್ನು ಇವನು ಕೊಡುವುದಿಲ್ಲ; ನಾನು ಕೊಟ್ಟಿದ್ದನ್ನು ನೀವು ಓದಿ ಎನ್ನುತ್ತಾನೆ; ಆದರೂ ಜನರಿಗೆ ಇವನು ಬೇಕು!

೧೫) ಇವನು ಧಾರ್ಮಿಕ ಸಾಹಿತ್ಯವನ್ನೇ ಸೃಷ್ಟಿಸುತ್ತಾನೆ. ಮಕ್ಕಳಿಗೂ ಅದೇ, ಮುದುಕರಿಗೂ ಅದೇ;

೧೬) ಕೈಯಿಂದ ದುಡ್ಡು ಹಾಕಿ ಸುರಿದು ಸಾವಿರಾರು ಪುಸ್ತಕಗಳನ್ನು ತುಂಬಿಕೊಂಡ ಇವನ ಮನೆ ಒಂದು ಪವಿತ್ರ ಗೋಡೌನಾಗಿದೆ;

೧೭) ಭಾಷಣ ಮಾಡು ಬಾ ಎಂದು ಯಾರಾದರೂ ಕರೆದರೆ 'ನನ್ನ; ಪುಸ್ತಕಗಳನ್ನು ಕೊಂಡುಕೊಳ್ಳಿ, ಬರುತ್ತೇನೆ', ಎನ್ನುತ್ತಾನೆ. ಆದರೂ ಇವನನ್ನು ಕರೆಯುತ್ತಾರೆ! 'ಹಾತ್ಮೆ ಪೈಸಾ, ಕಿವಿ ಮೆ ಭಾಷಣ' ಎನ್ನುತ್ತಾನೆ!

೧೮) 'ಇವನಿಗೆ ಹಣದಾಸೆ' ಎಂದು ಹಿಂದುಗಡೆ ಕೆಲವರು ಆಡಿಕೊಂಡರೆ, ಅದನ್ನು ಕೇಳಿ, ನಾಚಿಕೆಯಿಲ್ಲದೆ ನಗುತ್ತಾನೆ!

ಈ ಅಷ್ಟಾದಶ ಆರೋಪಗಳಲ್ಲಿ, ಚಂದ್ರಕೀರ್ತಿ, ಯಾವ

ಒಂದನ್ನೂ ನಾನು ಸುಳ್ಳು ಎನ್ನುವ ಹಾಗೆಯೇ ಇಲ್ಲವಲ್ಲಾ! ನನಗೆ ಸಾಹಿತ್ಯ ಅಕಡಮಿ ಸನ್ಮಾನಮಾಡಿದಾಗ ಆಗಲಿ, ರಾಜ್ಯೋತ್ಸವ ಸನ್ಮಾನ ಮಾಡಿದಾಗ ಆಗಲಿ, ಇಂಥ ಸರ್ವಧಾರಿCitationಅನ್ನು ಯಾರೂ ಓದಲಿಲ್ಲ. ಚಂದ್ರಕೀರ್ತಿ, ನಿಮ್ಮ ಪ್ರೀತಿಯ ಉಪಾಧ್ಯಾಯನಿಗೆ ಪ್ರಜಾಮತೀಯವಾಗಿ ಇಂಥ ಅಭಿನಂದನ ಹಾಗೂ ಅಭಿವಂದನ ಪತ್ರ ಸಮರ್ಪಿತವಾಗಿರುವಾಗ ಸಂತೋಷ ಪಡುವುದು ಬಿಟ್ಟು ಸಹನೆ ಕೆಟ್ಟು ಕೂಗಾಡುತ್ತೀರಲ್ಲಾ! ನಿಮಗೆ ಏನು ಹೇಳಬೇಕು?

ನಾನು ಸರ್ವಿಸಿನಲ್ಲಿರುವಾಗ, ಚಂದ್ರಕೀರ್ತಿ, ಇಂಥ ಪ್ರಶಸ್ತಿ ಪತ್ರವನ್ನು ನನಗೆ ಯಾರಾದರೂ ಕೊಟ್ಟಿದ್ದಿದ್ದರೆ, ನಾನೂ ಮೇಲು ಮೇಲಕ್ಕೆ ಏರಿ, ಇನ್ನೂ ಯಾರು ಯಾರ ಕೈಲಿ ಏನೇನು ಬಯ್ಯಿಸಿ ಕೊಳ್ಳಬೇಕಾಗಿತ್ತೊ! ಸದ್ಯಃ ನಿವೃತ್ತನಾದ ಮೇಲೆ ಬಂತಲ್ಲ! ದೇವರ ದಯೆ!

ಆರೋಪ ೧೧ಕ್ಕೆ ಟಿಪ್ಪಣಿ: ಜಗತ್ತಿನ ೧೧ ಜೀವಂತವಾದ ಮತಗಳನ್ನು ಕುರಿತು ನಾನು ಮಾಡಿರುವ ಹತ್ತಾರು ಭಾಷಣಗಳು ಅಚ್ಚಿಗೆ ಸಿದ್ಧವಾಗಿವೆ. ಗೋಮಟೇಶ್ವರಸ್ವಾಮಿಗೆ ಮೊದಲನೇ ಸಲ ೧೯೫೭ರಲ್ಲಿ, ಎರಡನೇ ಸಲ ೧೯೬೭ರಲ್ಲಿ ಮಹಾಮಸ್ತಕಾಭಿಷೇಕ ನಡೆದಾಗ, ಆಕಾಶವಾಣಿಯಲ್ಲಿ ವೀಕ್ಷಕವರದಿಯನ್ನು ಬಿತ್ತರಿಸುವ ಭಾಗ್ಯ ನನ್ನದಾಗಿತ್ತು.

ಆರೋಪ ೧೨ ಕ್ಕೆ ಟಿಪ್ಪಣಿ: 'ಭಾಷಣ ಮಾಡಿ ಎಂದು ಕರೆಯಲು ಹೋದರೆ ನನ್ನ ಪುಸ್ತಕ ಕೊಂಡುಕೊಳ್ಳಿ ಎನ್ನುತ್ತಾನೆ

ಇವನು; ಅದೇ ನಾನು ಭಾಷಣ ಮಾಡುತ್ತೇನೆ ಎಂದು ನಾನಾಗಿಯೇ ಹೋದರೆ ನೀನು ನಮಗೆ ಎಷ್ಟು ಹಣ ಕೊಡುತ್ತೀಯೆ? ಎಂದು ನನ್ನನ್ನೇ ಕೇಳುತ್ತಾರೆ' ಎಂದು ಅವರು ಬರೆದಿರುವುದನ್ನು ಗಮನಿಸಿದಿರಾ? ಇಂಥವರನ್ನೇ ಕೈಲಾಸಂ 'ಪರಿಶೋಚನೀಯ ಪ್ರಾಣಿ' ಅನ್ನುವುದು.

ಆದಿಮೂರ್ತಿಯ ಕನಸು

'ಭಿನ್ನವತ್ತಳೆ'ಯ ಪೂರ್ವಾರ್ಧವನ್ನು ಒಪ್ಪಿಕೊಳ್ಳುವ ಹಾಗೆ, ಮೆಚ್ಚಿಕೊಳ್ಳುವ ಹಾಗೆ, ಅದರ ಉತ್ತರಾರ್ಧವನ್ನು ಒಪ್ಪಿಕೊಳ್ಳಲು ಆಗುವುದಿಲ್ಲ. ಏಕೆಂದರೆ—

ಅದೊಂದು 'ಆದಿಮೂರ್ತಿಯ ಕನಸು.'

ಆದಿಮೂರ್ತಿ ಯಾರು, ಗೊತ್ತಾಯಿತಾ? ಕೈಲಾಸಂ ಅವರ ತಾವರೆ ಕೆರೆಯ ಕಥಾನಾಯಕರಲ್ಲೊಬ್ಬ, ಅಪರೂಪದ ಹಾಸ್ಯ ರತ್ನಾಕರ.

"ಗೊಂತ ಕೋಸ್ಕೋನಿ ರಕ್ತಮು ಕಾರ್ರು ಗೆಜ್ಜಲು ಕಟ್ಟಿನ ಕಾಳ್ಳೋ ಕುಲುಕ್ತಾ ನಾ ಬಾಡಗಿಲ್ಲಲೊ ಕುಲ್ಕೆ ಆಡ್ಡಿ—ಸಾಬ್ಲು ಚೆಪ್ಪಿನ ಗೂಬಪ್ಪೈನ ನಿಲ್ಚೊನಿ—'ಮುದ್ದೂ ಕದ್ದೂ' ಪಲ್ಲವಿ ಪಾಡ್ತಾ—ಒಕ ಗೋಸಾಯಿ ವೆನಕ'ನಿಧಿ ನಿಧಿ'ಅನಿ ತಾಳಂ ವೇಸ್ತ ಮಾಯಿಂಟಿಕೊಚ್ಚಿ—ನಡುರಾತ್ರಿಲೊ 'ಓಟ್ಲ್ ಪುಟ್ಟಮ್ಮ ಅಂಗಡಿ ನಿಂಚಿ ಮೆಂತ್ಯಾಲು ದೋಸ ಕೊತ್ಮಿರಿ ಚಟ್ನಿ ಇಷ್ಟೇ ತೆಪ್ಪಿಚ್ಚಿಸ್ತಾವ, ಲೇಕಾಪೋತೆ ನೀ ಗೊಂತು ಪಿಸುಕುತ್ನಾ' ಅನಿ ನನ್ನು ದಬಾಯಿಂಚಿನ ಐಕಟ್ಟು ಕಲಲೊ ಚೂಸಿತ್ನಿ" ಅನ್ನೋ ಭಾಗಾನ ಓದಿನೋಡಿ. ಇದಕ್ಕೂ ಅದಕ್ಕೂ ಎಷ್ಟು ಹೋಲಿಕೆ ಇದೆ, ಗಮನಿಸಿ.

ಈ ಉತ್ತರಾರ್ಧ ಒಂದು ಕಲಸುಮೇಲೋಗರ. ಇದರಲ್ಲಿ

ಸುಳ್ಳು ನಿಜ ಎರಡೂ ರಾಗಿ ಜೊತೇಲಿ ಸಾಸಿವೆ ಸೇರಿಕೊಂಡ ಹಾಗೆ ಸೇರಿಕೊಂಡಿವೆ. ಇದನ್ನ ಬಿಡಿಸೋಕೆ ಹೋದರೆ ಅದೇ ಒಂದು ಪ್ರತ್ಯೇಕ ಆದಾತು. ಸದ್ಯಕ್ಕೆ ಅದರ ಗೋಜು ಬೇಡ. ಮುಂದೆ ನೋಡೋಣ.

ಇದು ಕಾಚಿ ಪೂಚಿ Night-mare ಅಲ್ಲ: ಇದು 'ಹುತ್ತ ದಲ್ಲಿ ಹುತ್ತ'ದ ಕಪ್ಪಣ್ಣ ಹೇಳಿದ ಹಾಗೆ 'Night Mayor!'

ಆದಿಮೂರ್ತಿಯ ಹಾಗೆ ಭಯದಲ್ಲಿ ಹುಟ್ಟಿ ಭಯದಲ್ಲಿ ಬೆಳೆದವರು ನಮ್ಮ ಸಹಾನುಭೂತಿಗೆ ಪಾತ್ರರಾಗಬೇಕೇ ಹೊರತು ಅವರು ನಮ್ಮ ಖಂಡನೆಗೆ ಗುರಿಯಾಗಬಾರದು.

ಮುಂದಿನ ಕಾಗದದಲ್ಲಿ ಒಂದು ಪರಮ ಗಂಭೀರವಾದ ರಹಸ್ಯವನ್ನು ಕುರಿತು ಬರೆಯುತ್ತೇನೆ. ಎದುರು ನೋಡುತ್ತಿರಿ.

◆ ತವ್ ಎಂಬ ಧರ್ಮ ಮಾರ್ಗ ◆

ಕ್ರಿ.ಪೂ. ಆರನೇ ಶತಮಾನದಲ್ಲಿ ಭಗವಂತನಾದ ಮಹಾವೀರನೂ ಭಗವಂತನಾದ ಬುದ್ಧನೂ ನಮ್ಮ ದೇಶದಲ್ಲಿದ್ದರು. ಅದೇ ಕಾಲದಲ್ಲಿ ಲೌಡ್ಸ ಮತ್ತು ಕಾಂಫೂಷ ಎಂಬ ಇಬ್ಬರು ಮಹರ್ಷಿಗಳು ಚೀನಾದೇಶದಲ್ಲಿದ್ದರು. ಇವರಲ್ಲಿ ಲೌಡ್ಸ ಮಹರ್ಷಿಯು 'ತವ್ ತೆ ಥಿಂಗ್' (ಮಾರ್ಗವೂ ಅದರ ಮಹಿಮೆಯೂ) ಎಂಬ ಉಪನಿಷತ್ ಸಮಾನವಾದ ಗ್ರಂಥವನ್ನು ಬರೆದಿದ್ದಾನೆ. ಅದರ ೪೧ನೇ ಪರಿಚ್ಛೇದದಲ್ಲಿ ಈ ಮಹಾವಾಕ್ಯಗಳಿವೆ:-

> **ಉತ್ತಮವಾದ ಬುದ್ಧಿಶಾಲಿಯು ತೌವನ್ನು ಕೇಳಿದಾಗ—**
> **ತಾನು ಅದರಂತೆ ಆಚರಿಸಿ ಬದುಕಲು ಯತ್ನಿಸುತ್ತಾನೆ;**
> **ಮಧ್ಯಮವಾದ ಬುದ್ಧಿವಂತನು ತೌವನ್ನು ಕೇಳಿದಾಗ—**
> **ಅವನ ಮನಸ್ಸು ಹಾಗೂ ಹೀಗೂ ಆಡುತ್ತದೆ;**
> **ಅಧಮನಾದ ಬುದ್ಧಿಹೀನನು ತೌವನ್ನು ಕುರಿತು ಕೇಳಿದಾಗ—**
> **ಗಟ್ಟಿಯಾಗಿ ನಕ್ಕು, ಅದನ್ನು ಅಪಹಾಸ್ಯ ಮಾಡುತ್ತಾನೆ.**
> **ಹಾಗೆ ಅವನು ಅದನ್ನು ಅಪಹಾಸ್ಯ ಮಾಡದಿದ್ದರೆ—**
> **ಅದು ನಿಜವಾದ ತೌ ಎಂಬ ಹೆಸರಿಗೆ ಪಾತ್ರವಾಗದು.**

ಯಾವುದನ್ನು ಲೌಡ್ಸ 'ತವ್' ಎಂದು ಕರೆದಿದ್ದಾನೋ ಅದನ್ನೇ ಸತ್ಯ, ಧರ್ಮ, ಶಾಂತಿ, ಪ್ರೇಮ, ಪರಬ್ರಹ್ಮ, ದೇವರು, ಸಾಯಿ ಎಂಬ ಯಾವ ಹೆಸರಿನಿಂದ ಬೇಕಾದರೂ ಕರೆಯಿರಿ—The

description holds equally good.

ಇದರ ಮೇಲೆ ಇತರ ವ್ಯಾಖ್ಯಾನ ಅನವಶ್ಯಕ. They who cannot understand IT laugh at IT.

ಜಯ್ ಸಾಯಿರಾಮ್!

Yes, Yes, Yes,

ಹೌದು. ನೀವು ಬರೆದಿರುವುದು ಸರಿ.

'ನೀನ್ ಅಂತನ್ನೋ ನಾಮರ್ದನ್ನ ನಿನ್ ಅಪ್ಪಾಂತ್ ಅನ್ಬೇಕು!'

ಇದನ್ನ ಬರೆದವನು ನಾನೇ! ಆವಾಗ ನನಗೆ ೨೪ ವರ್ಷ ವಯಸ್ಸು. ಗಂಡುಗೊಡಲಿ ಬರೆದಾಗ ೨೨! ಶೀರ್ಷಿಕ ಪ್ರಸಂಗ ನಡೆದಾಗ ೨೮! ಪುರುಷ ಸರಸ್ವತಿ ಬರೆದಾಗ ೩೦! ಹತ್ತು ವರ್ಷ ಬರೆದದ್ದು ಆಗಲೇ! ಅದು ಆ ವಯಸ್ಸಿಗೆ ಉಚಿತವಾದದ್ದೇ!

ಹಾಗಂತ—ಈಗ ನನಗೆ ೬೬!— ಈಗಲೂ ಹಾಗೇ ಆಡಿದರೆ, ನಾನು ಅರುವತ್ತನ್ನು ದಾಟಿದ್ದಕ್ಕೆ ಏನು ಸಾರ್ಥಕ? ವಯಸ್ಸಿಗೆ ತಕ್ಕಂತೆ ಮನಸ್ಸು ಮಾಗಬೇಕು. ಅಲ್ಲವಾ?

ಸ್ವಾಮಿಯ ಹತ್ತಿರ ಹೋದ ಮೇಲೆ ನಾನು ಸಪ್ಪೆಯಾಗಿಲ್ಲ. ರಜೋ ಗುಣವನ್ನು ಕಡಮೆಮಾಡಿಕೊಂಡು, ಸತ್ತ್ವವನ್ನು ಹೆಚ್ಚಿಸಿಕೊಳ್ಳುತ್ತಿದ್ದೇನೆ.

ಯಾರಾದರೂ ಏನಾದರೂ ಅನ್ಯಾಯ ಮಾಡಿದರೆ, ನನಗೆ ಈಗಲೂ ಕೋಪ ಬರುತ್ತದೆ. ಹಿಂದೆಲ್ಲ ಬಂದಾಗ, ನಾನು ಅದರ ಕೈಗೆ ಸಿಕ್ಕಿಹಾಕಿ ಕೊಳ್ಳುತ್ತಿದ್ದೆ. ಈಗ ಅದು ಬಂದಾಗ, ಕಾಲ ಕೆಳಕ್ಕೆ ಹಾಕಿ ತುಳಿದು ಅಡಗಿಸುತ್ತೇನೆ; ಅಂಧಕಾಸುರನನ್ನು ನಟರಾಜ

ತುಳಿದ ಹಾಗೆ.

'ಸ್ವಾಮಿಕಿ ಸರ್ವಮು yes, yes, yes' ಎಂದು ಕೇಳಿದ್ದೀರಲ್ಲಾ? ಅವರ ಹೆಜ್ಜೆಯ ಹಿಂದೆ ಹೆಜ್ಜೆಯಿಡುವವನು ನಾನು. ಒಂದು ಕತೆ ಕೇಳಿ:

ಹಕುಯಿನ್ ಎಂಬ ZEN ಗುರುವನ್ನು, ಅವನು ಪರಿಶುದ್ಧವಾದ ಜೀವನ ನಡಸುತ್ತಿದ್ದಾನೆಂದು, ನೆರೆಹೊರೆಯವ ರೆಲ್ಲ ಹೊಗಳುತ್ತಿದ್ದರು.

ಅಲ್ಲಿ ಹತ್ತಿರದಲ್ಲಿ ದಿನಸಿ ಅಂಗಡಿಯನ್ನು ಇಟ್ಟುಕೊಂಡಿದ್ದ ದಂಪತಿಗಳಿಗೆ ಸುಂದರಿಯಾದ ಒಬ್ಬಳು ಮಗಳಿದ್ದಳು. ಇನ್ನೂ ಮದುವೆಯಾಗದ ಆ ಮಗಳು ಬಸುರಿಯಾಗಿದ್ದಾಳೆ ಎಂಬುದು ಅವಳ ತಾಯಿ ತಂದೆಗೆ ಇದ್ದಕ್ಕಿದ್ದಂತೆ ಒಂದು ದಿನ ಗೊತ್ತಾಯಿತು.

ಅವರಿಗೆ ಕೋಪ ಬಂತು. ಮಗುವಿನ ತಂದೆ ಯಾರೆಂದು ಕೇಳಿದರು. ಏನು ಮಾಡಿದರೂ ಅವಳು ಹೇಳಲಿಲ್ಲ. ತುಂಬ ಹಿಂಸೆ ಮಾಡಿದ ಮೇಲೆ ಅವಳು ಹಕುಯಿನ್ನನ ಹೆಸರು ಹೇಳಿದರು.

ಆಗ ಅವಳ ತಾಯಿ ತಂದೆ ಮಹಾರೋಷದಿಂದ ಆ ಗುರುವಿನ ಹತ್ತಿರ ಹೋಗಿ ಅವರನ್ನು ಬೈದರು, ಕೂಗಾಡಿದರು. ಅವರು ಅಂದದ್ದನ್ನೆಲ್ಲ ಕೇಳಿಸಿಕೊಂಡು, ಹಕುಯಿನ್ 'ಹಾಗೇನು?' ಎಂದಷ್ಟೇ ಹೇಳಿದ.

ಮಗು ಹುಟ್ಟಿದ ಮೇಲೆ ಅದನ್ನು ತಂದು ಅವನ ಹತ್ತಿರ ಬಿಟ್ಟು ಹೋದರು. ಆ ವೇಳೆಗೆ ಅವನು ಅಪಖ್ಯಾತಿಗೆ ಗುರಿ ಯಾಗಿದ್ದ. ನೆರೆ ಹೊರೆಯುವರೆಲ್ಲ ಅವನಲ್ಲಿ ನಂಬಿಕೆ ಕಳ

ಕೊಂಡಿದ್ದರು. ಆದರೆ ಹಕುಯಿನ್ ಅದನ್ನು ಅಷ್ಟಾಗಿ ಮನಸ್ಸಿಗೆ ಹಚ್ಚಿಕೊಳ್ಳಲಿಲ್ಲ—ಮಗುವನ್ನು ತಾಯಿಗಿಂತ ಚೆನ್ನಾಗಿ ನೋಡಿಕೊಂಡ. ಅವರಿವರ ಹತ್ತಿರ ಹೋಗಿ, ಮಗುವಿಗೆ ಬೇಕಾದ ಹಾಲು ಮುಂತಾದವುಗಳನ್ನು ತಂದು ಅದಕ್ಕೆ ಆರೈಕೆ ಮಾಡಿದ.

ಸುಮಾರು ಒಂದು ವರ್ಷ ಹೀಗೇ ಕಳೆಯಿತು. ಮದುವೆಯಾಗದೆ ಮಗುವನ್ನು ಹೆತ್ತಿದ್ದ ಆ ಹುಡುಗಿಗೆ ಇನ್ನು ತಡೆಯಲಾಗಲಿಲ್ಲ. ತನ್ನ ತಾಯಿ ತಂದೆಯ ಹತ್ತಿರ ನಿಜವನ್ನು ಹೇಳಿಕೊಂಡಳು; 'ಪಕ್ಕದ ಮೀನು ಮಾರುಕಟ್ಟೆಯಲ್ಲಿ, ಇಂಥ ಕಡೆ ಕೆಲಸ ಮಾಡುವ ಆ ಯುವಕನು ನನ್ನ ಮಗುವಿನ ತಂದೆ' ಎಂದು

ಅವಳ ತಾಯಿ ತಂದೆ ಕೂಡಲೆ ಹಕುಯಿನನ ಹತ್ತಿರ ಹೋದರು. 'ನಿಜ ಈಗ ತಾನೇ ತಿಳಿದುಬಂತು ನಾವು ಅಕಾರ್ಯ ಮಾಡಿದೆವು. ತಪ್ಪಾಯಿತು. ಕ್ಷಮಿಸಿಬೇಕು' ಎಂದು ಬೇಡಿಕೊಂಡರು. 'ಮಗುವನ್ನು ಕರೆದೊಯ್ಯಲು ಬಂದಿದ್ದೇವೆ' ಎಂದರು.

ಅವರು ಹೇಳಿದ್ದನ್ನೆಲ್ಲ ಹಕುಯಿನ್ ಕೇಳಿಕೊಂಡ. 'ಹಾಗೇನು?' ಎಂದಷ್ಟೇ ಹೇಳಿ, ಮಗುವನ್ನು ಅವರಿಗೆ ಒಪ್ಪಿಸಿದ.

ಕತೆ ಚೆನ್ನಾಗಿದೆ, ಅಲ್ಲಾ? ಈಗ ನಾನೂ ಹಕುಯಿನ್ನದ ಹಾಗೆಯೇ 'ತುಲ್ಯನಿಂದಾಸ್ತುತಿಃ, ಮೌನಿ' ಆಗಿದ್ದೇನೆ. ಯಾರು ಏನು ಬೇಕಾದರೂ ಹೇಳಿಕೊಳ್ಳಲಿ.

♦ ಹಂದಿಗೆ ಸೋತ ಹುಲಿ ♦

'ಪಂದಿ ಡುರುಕೆಂದೊಡೆ, ಅದರೊಳು ಮುನಿವುದು ಅನೀತಿ' ಎಂದು ನಮ್ಮ ಪ್ರಾಚೀನ ಕವಿಯೊಬ್ಬ ಹೇಳಿದ್ದಾನೆ. ಇದನ್ನು ಮರೆತರೆ ಏನಾಗುತ್ತದೆ ಎಂಬುದಕ್ಕೆ ಒಂದು ಚಿಕ್ಕಕತೆ:—

ಆ ಹುಲಿ ಇನ್ನೂ ಶುದ್ಧ ಹುಡುಗು. ಎಳೇ ನಿಂಬೇಕಾಯಿ. ಲೋಕದ ಅನುಭವ ಸಾಲದು. ಬಹಳ ದುಡುಕು. ತಿಳಿದವರು ಹೇಳಿದ ಮಾತು ಎಂದರೆ ತಾತ್ಸಾರ.

ಆ ಹುಲಿಗೆ ಒಂದು ಸಲ ಒಂದು ಹಂದಿಯ ಮೇಲೆ ಅಸಾಧ್ಯವಾದ ಆಗ್ರಹ ಉಂಟಾಯಿತು. ಕೆಸರಿಗೆ ಕಲ್ಲೊಗೆದರೆ ಏನಾಗುತ್ತದೆ ಎಂಬ ಪರಿಜ್ಞಾನ ಇನ್ನೂ ಬಂದಿರಲಿಲ್ಲ. ಆ ಹುಲಿಗೆ.

ಇಂಥ ಬುದ್ಧಿಯಿಲ್ಲದ ಮೊದ್ದು ಹುಲಿಗೆ ಹಂದಿಯ ಮೇಲೆ ಏಕೆ ಅಂತಹ ಆಗ್ರಹ?

ಆ ಹಂದಿ ಕಾಡಹಂದಿ ಕೂಡ ಅಲ್ಲ. ಅದು ಊರಹಂದಿ. ಅದರ ಮೇಲೆ ಏಕೆ ಹೀಗೆ, ಹರಿದು ಹೊಸಗಿಬಿಡುವಷ್ಟು ಕೋಪ, ಈ ಕಾಡಹುಲಿಗೆ?

ಆ ಹಂದಿ ಎರಡು ವರ್ಷಗಳ ಹಿಂದೆ ಊರಿನಿಂದ ಕಾಡಿಗೆ ಬಂದಿತಂತೆ. ಕಾಡಿನ ಪ್ರಾಣಿಗಳು 'ಹೋಗಲಿ. ಅದರ ಪಾಡಿಗೆ ಅದು ಇದ್ದುಕೊಳ್ಳಲಿ' ಅಂತ ಅದನ್ನು ಸಹಿಸಿಕೊಂಡುವಂತೆ. ಎರಡು

ವರ್ಷ ಕಳೆದರು ಕೂಡ, ಕಾಡಿಗೆ ಬಂದರೂ ತನ್ನ ಊರ ನಡತೆಯನ್ನೂ ಬಿಡಲಿಲ್ಲ ಆ ಹಂದಿ. ಹಾಗಾಗಿ ಕಾಡಿಗೆ ಬಂದರೂ ಊರಹಂದಿ ಊರಹಂದಿಯಾಗಿಯೇ ಉಳಿಯಿತು. ಕಾಡ ಹಂದಿಯಾಗಿ ಬೆಳೆಯಲಿಲ್ಲ. ಅದರಿಂದಾಗಿ, ಕಾಡಿನ ಪ್ರಾಣಿಗಳು ಅದನ್ನು ತಮ್ಮ ಜೊತೆಗೆ ಕರೆಯಲಿಲ್ಲ. ಆ ಕಾರಣದಿಂದ, ಊರಹಂದಿಯ ಹೊಟ್ಟೆಯಲ್ಲಿ ಕಾಡುಗಿಚ್ಚು ಹತ್ತಿಕೊಂಡು ಉರಿಯಿತು.

'ಹುಲಿಗಳು ಹಲ್ಲೇ ಉಜ್ಜುವುದಿಲ್ಲ.......ಸಿಂಹಗಳ ಮೂಲ ಪುರುಷರು ಸಿವಂಗಿಗಳಾಗಿದ್ದರು.......ಸಲಗಗಳ ಸೊಂಡಿಲುಗಳೆಲ್ಲ ಸತ್ವವಿಲ್ಲದೆ ಸುಕ್ಕುಸುಕ್ಕಾಗಿ ಸುರುಳಿಬಿದ್ದು ಹೋಗಿವೆ.... ಮುದಿ ಸರ್ಪಗಳು ಸಂತಾನಾಭಿವೃದ್ಧಿಗಾಗಿ ಸಿದ್ಧಮಕರಧ್ವಜವನ್ನು ಸೇವಿಸುತ್ತಿವೆ... ಕಾಡುಕೋಣಗಳಿಗೆ ಕೊಂಬೇ ಇಲ್ಲ...' ಇತ್ಯಾದಿಯಾಗಿ ಸುಮ್ಮನೆ ಬಾಯಿಗೆ ಬಂದದ್ದನ್ನು ಒದರಿಕೊಳ್ಳುತ್ತ ಆ ಹಂದಿ ತನ್ನ ಹೊಟ್ಟೆಯುರಿಯನ್ನು ಹೆಚ್ಚಿಸಿಕೊಳ್ಳುತ್ತಿತ್ತು.

'ಹುಲಿಗಳೂ ಸಿಂಹಗಳೂ ತಮ್ಮ ಆಹಾರವನ್ನು ತಾವೇ ಏಕೆ ಬೇಟೆಯಾಡಿ ಕೊಲ್ಲಬೇಕು? ನನ್ನ ಹಾಗೆ ದಾರಿಯಲ್ಲಿ ಬಿದ್ದಿರುವುದನ್ನೇ ಏಕೆ ತಿನ್ನಬಾರದು? ದಾರಿದ್ರ್ಯದೇವತೆಗೆ ತವರುಮನೆಯಾದ ನಮ್ಮ ಭಾರತಾರಣ್ಯದಲ್ಲಿ ಇದೇ ಬೇಕು, ಅದೇ ಬೇಕು ಎಂಬ ರುಚಿ ಬೆಳಸಿಕೊಂಡರೆ, ನಮ್ಮ ಮೂವತ್ತುಮೂರು ಕೋಟಿ ಬಡಪ್ರಾಣಿಗಳ ಗತಿಯೇನು? ನಮ್ಮ ದಲಿತರ ಗತಿಯೇನು?... ಆನೆಗಳೂ ಕಾಡುಕೋಣಗಳೂ ಹಸಿರು ಸೊಪ್ಪನ್ನೇ ಏಕೆ ಆರಿಸಿ ಮೇಯಬೇಕು? ಹೀಗೆ ಮಾಡಿದರೆ, ನಮ್ಮ ಸೋದರ ಸೋದರಿಯರಾದ ಗಿಡಮರ ಬಳ್ಳಿಗಳ ಗತಿಯೇನು? ನಮ್ಮ ಬಂಧುಬಾಂಧವರ

ರಕ್ತವನ್ನು ಹೀರಿ ಬೊಜ್ಜು ಬೆಳಸುವ ಮೊದಲು, ನನ್ನ ಹಾಗೆ ಕೊಳೆತದ್ದನ್ನೇ ಹಳಸಿದ್ದನ್ನೇ ತಿಂದು, ತಿಪ್ಪೆಯಲ್ಲಿ ತಪಸ್ಸು ಮಾಡಬಾರದೆ?...ನನ್ನ ಆದರ್ಶವನ್ನು ಇವರು ಅನುಸರಿಸುವುದು ಯಾವಾಗ? ಸಿಂಹ ಹೆತ್ತರೆ, ಒಂದು ಮರಿ; ಗಜ ಪ್ರಸವಕ್ಕೆ— ಹತ್ತು ವರ್ಷ! ಹಂದಿಗಾದರೋ— ವರ್ಷಕ್ಕೆ ನೂರು ಮರಿ! ನನ್ನನ್ನು ನೋಡಿ ಕಲಿಯಬಾರದೆ?' ಎಂದು ಒಂದೇ ಸಮನೆ ಕೊರಲು ಕುಯಿದ ಹಾಗೆ ಕಿರ್ರೋ ಎಂದು ಕಿರಿಚಿಕೊಳ್ಳುತ್ತಿತ್ತು.

ಆ ಕಿರಿಚನ್ನು ಕೇಳಿಯೇ ತಡೆಯಲಾರದೆ ನಮ್ಮ ಹುಡುಗ ಹುಲಿ ಕೆರಳಿ ಮೀಶೆ ತಿರಿಚಿದ್ದು. 'ಹಳ್ಳ ತೆಗೆದು ಈ ಹಂದಿಯನ್ನು ಹೂತುಬಿಡುತ್ತೇನೆ'! ಎಂದು ಹನುಮಂತನ ಹೆಜ್ಜೆ ಹಾಕಿ ಹೊರಟಿದ್ದು.

ಹುಲಿಯ ಆರ್ಭಟಕ್ಕೆ ಹಂದಿಯೇನೂ ಹೆದರಲಿಲ್ಲ. 'ಇದಕ್ಕೆಲ್ಲ ಇಟ್ಟಿದ್ದೇನೆ ಮಂತ್ರ!' ಎಂದುಕೊಂಡು, ಕಾಡಿನ ಪ್ರಾಣಿಗಳೆಲ್ಲ ತಮ್ಮ ದೇಹಬಾಧೆ ತೀರಿಸಲು ಬಳಸುತ್ತಿದ್ದ ಬಹಿರ್ಭೂಮಿಗೆ ಹೋಗಿ, ಹತ್ತು ಸಲ ಹೊರಳಾಡಿ ಹುಲಿಯ ಎದುರಿಗೆ ಬಂತು.

ಹಂದಿಯ ಅದೃಷ್ಟವೋ, ಹುಲಿಯ ದುದೃಷ್ಟವೋ—ಗಾಳಿ ಹುಲಿಗೆ ಎದುರಾಗಿ ಬೀಸುತ್ತಿತ್ತು. ಹಂದಿಯ ಮೈಮೇಲೆ ಬೀಸಿ ಬಂದ ಗಾಳಿಗೆ ಹುಲಿ ಬೆಚ್ಚಿ, ಬಾಲದಿಂದ ಮೂಗು ಮುಚ್ಚಿ ಕೊಂಡು ನಿಂತಿತು. ಹಂದಿ ಒಂದೊಂದು ಹೆಜ್ಜೆ ಮುಂದೆ ಇಟ್ಟ ಹಾಗೆಲ್ಲ ಹುಲಿ ಒಂದೊಂದು ಹೆಜ್ಜೆ ಹಿಂದೆ ಹಾಕಿತು.

'ಹಳ್ಳ ತೆಗೆದು ಹೂಳ್ತೀಯಾ ನನ್ನ?' ಎಂದಿತು, ಹಂದಿ.

‘ಜಗಳಕ್ಕೆ ಬರ್ತೀಯಾ ನನ್ನ ಮೇಲೆ?’ ಎಂದಿತು, ಹಂದಿ.

‘ನನ್‌ಸುದ್ದಿ ಎತ್‌ತೀಯಾ ಇನ್‌ಮೇಲೆ?’ ಅಂತು.

ಒಂದೊಂದು ಸವಾಲಿಗೂ ಎರಡೆರಡು ಹೆಜ್ಜೆ ಮುಂದಕ್ಕೆ ಬಂದಿತು, ಹಂದಿ. ಅದರ ನಾತ ಸಹಿಸಲಾರದೆ, ಬಾಯಿ ಬಿಡಲಾರದೆ, ಪಾಪ, ಹುಲಿ ಉಸಿರೆತ್ತದೆ. ಬಂದ ದಾರಿಯನ್ನು ಹಿಡಿದು ಓಡಿದ್ದೇ ಓಟ!

ಆ ಹೊತ್ತಿನಿಂದ ಈಚೆಗೆ, ‘ಹಂದಿ’ ಎಂಬ ಹೆಸರು ಎತ್ತಿದರೆ ಸಾಕು—ಹುಲಿಗಳೆಲ್ಲ ಹತ್ತು ಮೈಲು ಆಚೆಗೆ!

ಹೀಗೆ, ಹಿಂದೆ ಒಂದು ಸಲ, ಒಂದು ಹಂದಿ ಒಂದು ಹುಲಿಯನ್ನು ಸೋಲಿಸಿಯೇಬಿಟ್ಟಿತು!!!

ಹಂದಿಯ ‘ಅನ್ಯಾಪದೇಶ’ವನ್ನು ನೋಡಿದಿರಿ. ಕಾಗದದಲ್ಲಿ ಇನ್ನೂ ಜಾಗ ಇದೆ. ಈ ಕತ್ತೆಯ ‘ಅನ್ಯಾಪದೇಶ’ವನ್ನೂ ನೋಡಿ:-

ಕತ್ತೆ ಕೇಳ್ಳೈ ವಸ್ತ್ರಭಾರವ
ಹೊತ್ತು ಹೀನಾನ್ನಗಳ ತಿನಲೇ-
ಕತ್ತ ರಾಜನ ಕುದುರೆಲಾಯನ
ಹತ್ತಿ ಸುಖದಲಿ ಕಡಲೆಗುಗ್ಗುರಿಗಳನೆ ತಿನ್ನುತಿರು.
ಅತ್ತಣಧಿಕಾರಿಗಳು ಬಾಲಂ-
ಬೆತ್ತುದೆಲ್ಲವು ಕುದುರೆಯೊಂದೇ
ಗೆತ್ತು ನುಡಿದವರು; ರಾಜನೋಲಿವ-
ರಿತ್ತುದೇ ಪರಸತ್ಯವೆಂಬ; ತಟಸ್ಥರುಳಿದವರು.

ಅನ್ವಯ—ಹಗಲು ಕಂಡ ಬಾವಿಯ ಹಾಗೆ ಸುಸ್ಪಷ್ಟವಾಗಿದೆ. ಬೀಳುವುದೊಂದೇ ಬಾಕಿ.

ಶ್ರದ್ಧಾ ಹಿ ಪರಮಾ ಗತಿಃ

ಹೌದು, ಹಂದಿಗೆ ಸೋತ ಹುಲಿಯ ಕತೆ ನಾನು ಬರೆದದ್ದೆ. ೨೫ವರ್ಷ ಹಿಂದೆ 'ಕೊರವಂಜಿ'ಯಲ್ಲಿ ಬಂತು. ಅನಂತರ ನನ್ನ 'ಪರಗತಿಪಕ್ಷಿ'ಯಲ್ಲೂ ಈಗ ನನ್ನ 'ಹನಿಗಳು' ಸಂಕಲನದಲ್ಲೂ ಅಚ್ಚಾಗಿದೆ. ಈಗ ನಡೆದ ಒಂದು ಪ್ರಕರಣಕ್ಕೆ ಇದು ಅಂದು ನನ್ನ ಪ್ರತಿಕ್ರಿಯೆ.

ನಮ್ಮ ಪಾಡಿಗೆ ನಾವು ಇದ್ದರೂ ನಮ್ಮ ವಿಷಯದಲ್ಲಿ ಇಂಥ ಮಾತನ್ನು ಏಕೆ ಆಡುತ್ತಾರೆ? ಎಂದು ಕೇಳಿದ್ದೀರಿ. ಇವೆಲ್ಲ ನಮ್ಮ ಸತ್ತ್ವಪರೀಕ್ಷೆಗಾಗಿ ಆಗಾಗ ಬಂದು ಹೋಗುವ ಅನಿಷ್ಟಗಳು. 'ಆಗಮಾಪಾಯಿನಃ ಅನಿತ್ಯಾಃ ತಾನ್ ತಿತಿಕ್ಷಸ್ವ' ವಡ್ಡಾರಾಧನೆಯಲ್ಲಿ ಉಪಸರ್ಗ ಕೇವಲಿಗಳ ಕತೆ ಓದಿದ್ದೀರಿ. ಅವರಿಗಿಂತ ದೊಡ್ಡವನಾ ನಾನು? ಇದು ಆಕಾರದಿಂದ ಮಾನುಷೋಪಸರ್ಗ, ಆಚಾರದಿಂದ ತಿರಿಕೋಪಸರ್ಗ. ಹಣ್ಣು ಹೆಚ್ಚಾಗಿರುವ ಮರಕ್ಕೇ ಅಲ್ಲವೆ ತುಂಟ ಹುಡುಗರು ಹೆಚ್ಚು ಕಲ್ಲು ಬೀರುವುದು?

ಭೀಮನು ಸೌಗಂಧಿಕ ಪುಷ್ಪವನ್ನು ತರುವುದಕ್ಕೆ ಹೋದ ಕತೆ ನಿಮಗೆ ಗೊತ್ತು. ಮುದಿವಾನರನಿಂದ ಅಲ್ಲಿ ಅವನಿಗೆ ಆದ ಗರ್ವ ಭಂಗವೂ ಗೊತ್ತು. ಅದನ್ನು ಜ್ಞಾಪಿಸಿಕೊಂಡು, ಈಗ ನಾನು ಹೇಳುವುದನ್ನು ಕೇಳಿ :

ಯಾವ ಭೀಮಸೇನನೇ ಆಗಲಿ-
ಎಷ್ಟೇ ಮುಕ್ಕಿರಿದು ತನ್ನ ಬಟ್ಟೆಯನ್ನು
ಕೆಡಿಸಿಕೊಳ್ಳಬಹುದಾದರೂ—
ನನ್ನ ಶ್ರದ್ಧೆಯೆಂಬ ಆಂಜನೇಯದ ಬಾಲದ
ತುದಿಯ ಒಂದು ಕೂದಲನ್ನಾದರೂ ಕದಲಿಸಲಾರನು!

ಇದು ಜಲಲಿಪಿಯಲ್ಲ (ನೀರಿನ ಮೇಲೆ ಬರೆದದ್ದಲ್ಲ): ಶಿಲಾನಿಕ್ಷಿಪ್ತಾಕ್ಷರ (ಕಲ್ಲಿನಲ್ಲಿ ಕೊರೆದ ಬರವಣಿಗೆ!)

('ಬಟ್ಟೆ' ಎಂಬ ಪ್ರಯೋಗದಲ್ಲಿರುವ ಶ್ಲೇಷೆಯನ್ನು ಪರಿಭಾವಿಸಿಕೊಳ್ಳಿ.)

◆ ಸಮತ್ವಂ ಯೋಗ ಉಚ್ಯತೇ ◆

'ಮಾತನಾಡದೆ ಮೌನವಾಗಿರುವವರನ್ನು ನಿಂದಿಸುತ್ತಾರೆ, ಬಹುವಾಗಿ ಮಾತನಾಡುವವರನ್ನು ನಿಂದಿಸುತ್ತಾರೆ. ಮಿತವಾಗಿ ಮಾತಾಡುವವರನ್ನೂ ನಿಂದಿಸುತ್ತಾರೆ. ಲೋಕದಲ್ಲಿ ನಿಂದೆಗೆ ಗುರಿಯಾಗದಿರುವವರು ಯಾರೂ ಇಲ್ಲ. ಇದು ಪುರಾತನವಾದ ಮಾತು, ಅಸಮಾನವಾದ ಮಾತು, ಇದು ಇವೊತ್ತಿನ ಮಾತಲ್ಲ. ಕೇವಲ ಸ್ತುತಿಗೆ ಗುರಿಯಾದವರಾಗಲಿ, ಕೇವಲ ನಿಂದೆಗೆ ಗುರಿಯಾದವರಾಗಲಿ—ಹಿಂದೆ ಇರಲಿಲ್ಲ, ಈಗ ಇಲ್ಲ, ಮುಂದೆ ಇರುವುದಿಲ್ಲ.' ಇದು ಬುದ್ಧವಚನ.

'ಬೆಟ್ಟದ ಮೇಲೊಂದು ಮನೆಯ ಮಾಡಿ, ಮೃಗಂಗಳಿಗಂಜಿದಡೆಂತಯ್ಯ! ಸಮುದ್ರದ ತಡಿಯಲ್ಲಿ ಮನೆಮಾಡಿ, ನೊರೆತೆರೆಗಳಿಗಂಜಿದೊಡೆಂತಯ್ಯ! ಸಂತೆಯೊಳಗೊಂದು ಮನೆಯಮಾಡಿ, ಶಬ್ದಕ್ಕೆ ನಾಚಿದೊಡೆಂತಯ್ಯ! ಚನ್ನಮಲ್ಲಿಕಾರ್ಜುನದೇವ ಕೇಳಯ್ಯ! ಲೋಕದೊಳಗೆ ಹುಟ್ಟಿರ್ದ ಬಳಿಕ ಸ್ತುತಿನಿಂದೆಗಳು ಬಂದೊಡೆ, ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು'. ಇದು ಮಹಾದೇವಿ ಅಕ್ಕನವರ ವಚನ.

ನಮ್ಮ 'ಭರತೇಶ ವೈಭವ'ದ ರತ್ನಾಕರ ಕಥೆ ಹೇಳಿದಾಗ—'ಧರೆಯೊಳನೇಕರು ಹರುಷವೇರಿದರು'; ಆದರೆ 'ಪೋಕರು ನಾಲ್ಕೆಂಟು ಮಂದಿ ಚಿತ್ತದೊಳತಿ ವ್ಯಾಕುಲಬಟ್ಟರು.' ಏಕೆಂದರೆ

'ಕೀರ್ತಿಯ ಬಯಸಿ ನಾನುಸುರಿತಿಲ್ಲೆನಗೆ ಸತ್ಕೀರ್ತಿ ತಾನೆ ಬರುತಿಹುದು; ಕೀರ್ತಿಯು ಬಯಸಿ ಕಣ್ಣುಸುರಾಗಿ ಕೆಲಬರು ಧೂರ್ತರು ಪೇಚಾಡುತಿಹರು'. ಅವರು 'ತರ್ಕಪುರಾಣ ತಳ್ಳಿಯ ತೋರಿಬೆದೆಬೆಂದರರ್ಕನ ಪಳಿದ ಗೊಗೆಯೊಲು; ಮಾರ್ಕೊಳ್ಳದಾನು ಮೋನದೊಳಿರ್ದೆ; ಬುಧರು ರಾಜರ್ಕಳೆ ನೂಂಕಿದರವರಾ'. 'ನಾನೊಬ್ಬರೊಡನೆ ಮತ್ಸರಕೆ ಪೇಳ್ದವನಲ್ಲ. ಮೋನದೊಳಿಹೆನದು ಸಾಕು. ಹಂಸನಾಥನ ಶಕ್ತಿಯೊಳು ಪೇಳ್ದ ಕಾವ್ಯಕೆ ಸಂಶಯವುಂಟೆ ಲೋಕದೊಳು? ನಾ ಸೂಚಿಸದ ಮುನ್ನ ಮುನಿಗಳು, ನೃಪರು, ವಿದ್ವಾಂಸರು ಕೊಂಡೊಯ್ದರೊಲಿದು.' ಇದು ರತ್ನಾಕರನ ನುಡಿಸೊಡರಿನ ಸಾಲುಮಾಲೆ.

ಇದನ್ನೆಲ್ಲ ತಿಳಿದವನಾಗಿಯೂ ನಾನು ಸೈರಣೆ ಕಳೆದು ಕೊಂಡರೆ, ನಾಳೆ ನೀವೇ ಏನೆಂದೀರಿ? 'ಸೈರಣೆಗೂ ಒಂದು ಮಿತಿ ಯಿರಬೇಕಲ್ಲವೆ?' ಎಂದಿದ್ದೀರಿ. ನನ್ನ ಮಟ್ಟಿಗೆ ಹೇಳುವುದಾದರೆ— The sky is the limit!

A cat may look at a king. it can even cry: ಮಿಯಾವ್!.... ಆನೆಯ ಮೇಲೆ ಹೋಹವನ ಶ್ವಾನ ಕಚ್ಚಬಲ್ಲುದೆ, ಕೂಡಲ ಸಂಗಮದೇವ?.... ಆರು ಜರೆದು ನಮ್ಮನೇನು ಮಾಡುವರು? ಕೂಡಲಸಂಗಮ ದೇವರ ರಾಜತೇಜ ದಲ್ಲಿಪ್ಪೆನಾಗಿ ಗಟ್ಟಿಯಾಗಿ ಅಂದರೆ, ಗಾಳಿಗೆ ಹೋಯ್ತು; ಮೆಲ್ಲಗಂದರೆ, ತನಗೇ ಆಯ್ತು—The dogs do bark; but the caravan passes on!...

ನಾ ನಿನ್ನ ಧ್ಯಾನದೊಳಿರಲು ಮಿಕ್ಕ
ಹೀನಮಾನವರೇನು ಮಾಡಬಲ್ಲರೋ ರಂಗ?

ಮಚ್ಚರಿಸುವರೆಲ್ಲ ಕೂಡಿ ಮಾಡುವುದೇನು
ಅಚ್ಯುತ ನಿನದೊಂದು ದಯೆಯಿರಲು?
ವಾತ್ಸಲ್ಯ ಬಿಡದಿರು ನಿನ್ನ ನಂಬಿದೆ ದೇವ
ಕಿಚ್ಚಿಗೆ ಇರುವೆ ಮುತ್ತುವುದೆ?

ಧೂಳಲಿ ಕುದುರೆ ವೈಯಾರದಿ ಕುಣಿಯಲು
ಧೂಳು ರವಿಯ ಮೇಲೆ ಮುಸುಕುವುದೆ?
ತಾಳಿದವರಿಗೆ ವಿರುದ್ಧ ಲೋಕದಲುಂಟೆ?
ಗಾಳಿಗೆ ಗಿರಿಯು ಅಲ್ಲಾಡಬಲ್ಲುದೆ?

ಈಗ ನಿಮಗೆ ನಾನು ಬರೆಯುತ್ತಿರುವ ಜವಾಬುಗಳನ್ನು ಪತ್ರಿಕೆಗಳಿಗೆ ಕಳಿಸಿದ್ದರೆ, ಯಾವ ಪತ್ರಿಕೆ ಇದನ್ನು ಪ್ರಕಟ ಮಾಡುತ್ತಿತ್ತು? ಅಷ್ಟು ಋಜುತ್ವವಿದ್ದಿದ್ದರೆ, ಈ ಕಿರುಕುಳಕ್ಕೆ ಮೂಲ ಕಾರಣವಾದ 'ಭಿನ್ನವತ್ತಳೆ'ಯನ್ನು ಹಾಗೆ ಪ್ರಕಟಿಸುತ್ತಿದ್ದರೆ? ಒಂದು ವೇಳೆ ಪ್ರಮಾದದಿಂದ ಪ್ರಕಟವಾದರೂ ಅನಂತರ ಒಂದು ಪಂಕ್ತಿ Regret ಬೇಡಾ? ಆ ಪತ್ರಿಕೆ ವಿಶೇಷ ಸಂಚಿಕೆಗಳನ್ನು ಪ್ರಕಟಿಸಿದಾಗಲೆಲ್ಲ ಅದಕ್ಕೆ ಕೈ ತುತ್ತು ಹಾಕಿದ್ದೇನೆ. ಇಂಥ ಕೈಯನ್ನು ಅದು ಹೀಗೆ ಕಚ್ಚಬಹುದಾ?

ಅದಕ್ಕೆಂದೇ—'ಮೌನಂ ಸರ್ವಾರ್ಥಸಾಧನಂ!' ಸುಮ್ಮನಿದ್ದೇನೆ.

ಇನ್ನೊಂದು ನೀವು ಗಮನಿಸಬೇಕಾದ ಸಂಗತಿ: ಏನೆಂದರೆ—

ನನ್ನನ್ನು ಯಾರೋ ಒಬ್ಬರು ಯಾವುದೋ ಕಾರಣದಿಂದ ನಿಂದಿಸಿದರೆ, ಜನ ಅದನ್ನು ಪ್ರಚಾರಮಾಡುವ ಹಾಗೆ, ನನಗೆ

ಸಮಾನಧರ್ಮರಾಗಿ, ನಾನು ಮಾಡುತ್ತಿರುವುದನ್ನು ಅರ್ಥಮಾಡಿ ಕೊಂಡು ಪ್ರೀತಿಯ ಮಾತುಗಳನ್ನಾಡಿದರೆ, ಅದನ್ನೇಕೆ ಪ್ರಚಾರ ಮಾಡುವುದಿಲ್ಲ? ಉದಾಹರಣೆಗೆ—೧೯೭೧ರಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷನನ್ನಾಗಿ ನನ್ನನ್ನು ಕರೆದಿದ್ದರು. ಆ ಸಮ್ಮೇಳನದ ವರದಿಯಾದ 'ಬಾಸಿಗ'ದಲ್ಲಿ ನನ್ನನ್ನು—

"ಅರುವತ್ತನಾಲ್ಕರ ಇಳಿವಯಸ್ಸಿನಲ್ಲೂ, ಆರೋಗ್ಯವು ಆಗಾಗ ಹದಗೆಡುವ ಭಯವಿದ್ದರೂ, ಕನ್ನಡದ ಮೇಲಿನ ಭಕ್ತಿ ಯಿಂದ, ಕಾರ್ಕಳದ ಮೇಲಣ ಆಸಕ್ತಿಯಿಂದ, ಸಮ್ಮೇಳನಾಧ್ಯಕ್ಷ ಸ್ಥಾನವನ್ನು ವಹಿಸಿ, ಶರೀರಶ್ರಮವನ್ನು ಕಡೆಗಣಿಸಿ, ಎರಡು ದಿನಗಳ ಉತ್ಸವದಲ್ಲಿ ಭಾಗವಹಿಸಿದ, ಹಿರಿ-ಕಿರಿಯರ ನಡುವೆ ಓಡಿ-ಆಡಿ, ತಮ್ಮ ವರ್ಚಸ್ವಿತೆಯಿಂದ, ವಚಸ್ವಿತೆಯಿಂದ, ಮನಸ್ವಿತೆ ಯಿಂದ ಜನರ ಕಣ್ಣು, ಕಿವಿ, ಮನಸ್ಸುಗಳನ್ನು ತುಂಬಿನಿಂತ, 'ಅಧ್ಯಕ್ಷರೆಂದರೆ ಹೀಗಿರಬೇಕು' ಎಂದೆನಿಸಿಕೊಂಡ ಶ್ರೀ ಜಿ.ಪಿ. ರಾಜರತ್ನಂ"—

'—ಎಂದು ವರ್ಣಿಸಿದ್ದಾರೆ. ಮತ್ತೆ ಆ ಸಮ್ಮೇಳನವನ್ನು ಉದ್ಘಾಟಿಸಿದ ಸನ್ಮಾನ್ಯ ಶ್ರೀ ದೇ. ಜವರೇಗೌಡ ಅವರು ಪರಸ್ಪರವಾದ ಪ್ರೀತಿಯನ್ನು ಬೆಳಸುವ ಈ ಮಾತುಗಳನ್ನು ಹೇಳಿದ್ದಾರೆ ('ಬಾಸಿಗ': ಪುಟ ೭-೮):—

"ಕರ್ನಾಟಕದಲ್ಲಿ ಮನೆಮನೆಯ ಮಾತಾಗಿರುವ, ಆಧುನಿಕ ಕನ್ನಡ ಸಾಹಿತ್ಯದ ಸೀಮಾಪುರುಷರಲ್ಲೊಬ್ಬರಾಗಿರುವ, ಜನಪ್ರಿಯ ಸಾಹಿತಿ ಶ್ರೀ ರಾಜರತ್ನಂ ಅವರ ಅಧ್ಯಕ್ಷತೆಯಲ್ಲಿ ಕಾರ್ಕಳದಲ್ಲಿ ಈ

ಸಮ್ಮೇಳನ ನಡೆಯುತ್ತಿರುವುದು ಅತ್ಯಂತ ಉಚಿತವಾಗಿದೆ. ಅವರು ಶ್ರೀ ವೈಷ್ಣವರಾಗಿಯೂ ಬೌದ್ಧ ಜೈನದರ್ಶನಗಳನ್ನು ಕರತಲಾ ಮಲಕ ಮಾಡಿಕೊಂಡ ಅಭಿನವ ಆಳ್ವಾರರೋ ಬೌದ್ಧ ಭಿಕ್ಷುವೋ ಎಂಬ ಅನುಮಾನವನ್ನು ಜನತೆಯಲ್ಲಿ ಮೂಡಿಸಿದೆ. ಜನತೆಗೆ ಬೌದ್ಧದರ್ಶನವನ್ನು ಮಾಡಿಕೊಟ್ಟು ಕೃತಾರ್ಥರಾದ ಅವರಲ್ಲದೆ, ಶಿಶುಸಾಹಿತ್ಯದ ಭೀಷ್ಮಾಚಾರ್ಯರಾಗಿ, ಗಂಡುಗೊಡಲಿಯ ಪರಶು ರಾಮರಾಗಿ, ಪಡಖಾನೆಯ ರಸಿಕರ ಗೆಳೆಯರಾಗಿ, ಐದು ದಶಕ ಗಳಿಂದ ಶ್ರದ್ಧಾನಿಷ್ಠೆಗಳಿಂದ, ಅವಿಚ್ಛಿನ್ನವಾಗಿ ಸಾಹಿತ್ಯಸೇವೆ ಸಲ್ಲಿಸುತ್ತಿರುವ ಇವರಲ್ಲದೆ ಈ ಸಮ್ಮೇಳನಕ್ಕೆ ಮತ್ತಾರು ಅರ್ಹರು? ಎರಡು ಸಾವಿರವರ್ಷಗಳ ಇಡೀ ಸಾಹಿತ್ಯದಲ್ಲಿ ಇಬ್ಬರು ರತ್ನರು. ಒಬ್ಬ ಹತ್ತನೆಯ ಶತಮಾನದವನು, ಇನ್ನೊಬ್ಬರು ಇವರು. 'ರನ್ನನಿರುವ ಕನ್ನಡಕ್ಕೆ ಧಕ್ಕೆಯಿಹುದೆ?' ಎಂಬ ಕವಿ ಘೋಷಣೆ ಇವರಿಗೂ ಅತ್ಯುಚಿತವಾಗಿ ಸಲ್ಲುತ್ತದೆ. ಕನ್ನಡದ ಬಗ್ಗೆ ಇವರಿಗಿರುವ ಮಾಹೇಶ್ವರ ನಿಷ್ಠೆಯೇ ಈ ಮಾತಿಗೆ ಸಾಕ್ಷಿ. ಇಂಥ ಮಹಾಮಹಿಮರು ನಮ್ಮೆಲ್ಲರಿಗೂ ಆದರ್ಶವಾಗಬೇಕು. ಅವರ ಶ್ರದ್ಧಾನಿಷ್ಠೆಗಳು ನಮಗೆ ಆದರ್ಶವಾಗಬೇಕು. ಅಂಥ ಶ್ರದ್ಧಾನಿಷ್ಠೆ ಗಳನ್ನು ಸದಾ ಪ್ರತಿಬಿಂಬಿಸುತ್ತಿರುವ 'ಕನ್ನಡ ಪದಗೊಳು' ಎಂಬ ಕವನ ನಮಗೆ ಯಾವಾಗಲೂ ಸ್ಫೂರ್ತಿ ನೀಡುತ್ತಿರಲಿ".

ನನ್ನನ್ನು ಸುಮಾರು ೪೫ ವರ್ಷಗಳಿಂದ ಬಲ್ಲ ನನ್ನ ಇನ್ನೊಬ್ಬ ಮಿತ್ರರಾದ ಶ್ರೀ ಕ. ವೆಂ. ರಾಘವಾಚಾರ್ಯರು ತಮ್ಮ 'ನಂದಾ ನೆನಪು' ಎಂಬ ಗ್ರಂಥದಲ್ಲಿ (ಪುಟ ೩೬೭) ನಾನು ಮೂರನೇ ದರ್ಜೆಯ ಎಂ. ಎ, ಪದವೀಧರನಾದ

ವಾಸ್ತವಕಥೆಯನ್ನು ಹೇಳುವಾಗ—

'ರಾಜರತ್ನಂ ಅವರ ತರುವಾಯದ ಗ್ರಂಥರಾಶಿಯನ್ನೂ ಬರವಣಿಗೆಯ ಬೆಲೆಯನ್ನೂ ಬೋಧನ ಸಾಮರ್ಥ್ಯವನ್ನೂ ವಾಗ್ಮಿತೆಯನ್ನೂ ನೋಡಿದರೆ, ಪರೀಕ್ಷೆಯ ದರ್ಜೆಗೂ ನಿಜವಾದ ಯೋಗ್ಯತೆಗೂ ಸಂಬಂಧವಿದೆಯೆ ಎನ್ನಿಸುತ್ತದೆ' ಎಂದಿದ್ದಾರೆ.

ರತ್ನಕ್ಕೆ ಬೆಲೆ ಬರುವುದು ರತ್ನ ಪರೀಕ್ಷೆಯನ್ನು ಬಲ್ಲವರು ಹೇಳಿದಾಗ ಮಾತ್ರ, ಅಲ್ಲವೇ?

ವಿದ್ವಾನೇವ ವಿಜಾನಾತಿ ವಿದ್ವಜ್ಜನ ಪರಿಶ್ರಮಂ |
ನ ಹಿ ವಂಧ್ಯಾ ವಿಜಾನಾತಿ ಗುರ್ವೀಂ ಪ್ರಸವವೇದನಾಂ ||

ಸಂಸಾರವೊಂದಿಗರಾದ ನೀವು ಈ ಸಂದರ್ಭದಲ್ಲಿ ಇನ್ನೂ ಒಂದು ಸುಭಾಷಿತವನ್ನು ಕೇಳಿ ಸಂತೋಷಪಡಬಹುದು:—

ಕವಿತಾರಸಚಾತುರ್ಯಂ ರಸಿಕೋ ವೇತ್ತಿ ನೋ ಕವಿಃ |
ದುಹಿತಾರತಚಾತುರ್ಯಂ ಜಾಮಾತಾ ವೇತ್ತಿ ನೋ ಪಿತಾ ||

ಒಟ್ಟಿನಲ್ಲಿ, ಕೈಲಾಸಂ ಹೇಳುತ್ತಿದ್ದ ಹಾಗೆ ಇವೆಲ್ಲಾ 'ತಿಳಿದವರಿಗೆ ತಾರೀಫು!' ಅದು ಬಿಟ್ಟು—'ಕತ್ತೆ ಬಲ್ಲುದೆ ಹೊತ್ತ ಕತ್ತುರಿಯ ಪರಿಮಳವ!' ಕಸ್ತೂರಿಯ ಯೋಗ್ಯತೆಯನ್ನು ತಿಳಿಯುವುದಕ್ಕೂ ಕೇಳಿಕೊಂಡುಬಂದಿರಬೇಕು!

ಯಾವ ಮರ ಗಿಡ ಬಳ್ಳಿ ಬೆಳೆಯಬೇಕಾದರೂ ಅದಕ್ಕೆ ಹೊಯ್‌ನೀರೂ ಬೇಕು, ಗೊಬ್ಬರವೂ ಬೇಕು. ನನ್ನನ್ನು ಕುರಿತ ಒಳ್ಳೆಯ ಮಾತೆಲ್ಲ ನನಗೆ ಹೊಯ್‌ನೀರು, ನನ್ನನ್ನು ಕುರಿತ ಕೆಟ್ಟ ಮಾತೆಲ್ಲ ನನಗೆ ಗೊಬ್ಬರ. ಆದ್ದರಿಂದಲೇ ನಾನು ಯಾವುದನ್ನೂ

ಬೇಡವೆನ್ನುವುದಿಲ್ಲ.

ಕನ್ನಡದ ಹಿತೈಷಿಗಳು, ತಮ್ಮ ಜೊತೆಯ ಸಾಹಿತ್ಯಸೇವಕನ ಬಗ್ಗೆ ಎಂತಹ ಒಳ್ಳೇ ಪ್ರೀತಿಯ ಮಾತುಗಳನ್ನು ಆಡಬಲ್ಲರು ಎಂಬುದಕ್ಕೆ ಮೇಲ್ಪಂಕ್ತಿಯಾಗಿ ಈ ಉದಾಹರಣೆಗಳನ್ನೂ ನೋಡಬಹುದು:-

೧) ಹಾ ಮಾ. ನಾಯಕರ 'ಸಾಹಿತ್ಯಸಲ್ಲಾಪ,' ಪುಟ ೨೨೦-೨೨೩: 'ರತ್ನಂಗಾಯ್ತುರುವತ್ತು'.

೨) ಎಚ್ಚೆಸ್ಕೆ ಅವರ 'ಬದುಕು-ಬೆಳಕು,' ಪುಟ ೪೯-೫೩: 'ಜಿ. ಪಿ. ರಾಜರತ್ನಂ'.

೩) ನಿರಂಜನ ಅವರ 'ದಿನಚರಿಯಿಂದ,' ಪುಟ ೩೭-೩೯: 'ಮಹಾಭಿಕ್ಕು ರತ್ನ'.

◆ ದ್ವಾದಶಾಹ ◆

ಇಲ್ಲಿಗೆ, ಒಂದು ಊನವೂ ಸೇರಿಕೊಂಡು ದ್ವಾದಶಾಹ ಮುಗಿಯಿತು. ನಮೋ ಪಿತೃಭ್ಯಃ! ಎಂದರೆ, ಶ್ರದ್ಧೆಯಿಂದ ಮಾಡ ಬೇಕಾಗಿ ಬಂದ ಶ್ರಾದ್ಧಕಾರ್ಯದಲ್ಲಿ ಪ್ರಮುಖವಾದ ಮೊದಲನೆಯ ಮಾಸಿಕ ಮುಗಿಯಿತು.

ಪ್ರಿಯ ಚಂದ್ರಕೀರ್ತಿ! ಆ ಕಡೆಯಿಂದ ನನ್ನ ಕಿರೀಟಭಂಗದ ಪ್ರಯತ್ನ ನಡೆದರೆ, ಈ ಕಡೆಯಿಂದ ಅವರ ಊರುಭಂಗದ ಪ್ರಯತ್ನ ನನ್ನಿಂದ ನಡೆಯಬೇಕಾದ್ದು ನ್ಯಾಯವೇ ಆಗಿದೆ. ಇದು self—defence, ಇದು ಧರ್ಮಯುದ್ಧ. All is fair in love and war!

ಬಸವಣ್ಣನವರ ವಚನಗಳಲ್ಲಿ ಹೀಗೊಂದು ಭಯಂಕರ ಚಿತ್ರವಿದೆ:

'ಹಾವಿನ ಹೆಡೆಗಳ ಕೊಂಡು ಕೆನ್ನೆಯ ತುರಿಸಿಕೊಂಬಂತೆ, ಉರಿವಕೊಳ್ಳಿಯ ಕೊಂಡು ಮಂಡೆಯ ಸಿಕ್ಕ ಬಿಡಿಸುವಂತೆ, ಹುಲಿಯಮೀಸೆಯ ಹಿಡಿದುಕೊಂಡು ಒಲೆದುಯ್ಯಾಲನಾಡುವಂತೆ. ಕೂಡಲಸಂಗನ ಶರಣರೊಡನೆ ಮರೆದು ಸರಸವಾಡಿದರೆ, ಸುಣ್ಣದ ಕಲ್ಲ ಮಡಿಲಲ್ಲಿ ಕಟ್ಟಿಕೊಂಡು ಮಡುವ ಬಿದ್ದಂತೆ.

'ಉರಿವ ಕೊಳ್ಳಿಯ ಮಂಡೆಯಲಿಕ್ಕಿದಡುರಿವುದ ಮಾಬುದೆ?

ಕಲ್ಲ ಗುಗ್ಗರಿಯ ಮೆಲಿದರೆ, ಹಲ್ಲು ಹೋಹುದು ಮಾಬುದೆ?

'ಕೋಣನ ಹೇರಿಂಗೆ ಕುನ್ನಿ ಬುಸುಗುಡುತ್ತ ಬಾಲವ ಬಡಿವಂತೆ ತಾವು ನಂಬರು, ನಂಬುವರನ್ನು ನಂಬಲೀಯರು. ತಾವು ಮಾಡರು. ಮಾಡುವವರನು ಮಾಡಲೀಯರು....'

'ನಾನು ನರಕಕ್ಕೆ ಹೋಗಿದ್ದೆ. ಅಲ್ಲಿ ಯೆಂಡಕುಡುಕರನ್ನ ಕಂಡಿದ್ದೆ. ನಮ್ಮ ಸಂದರ್ಶನಾನ ಕುರಿತು ಮುಂದಿನ ವಾರ ಪತ್ರಿಕೇಲಿ ಬರೀತೇನೆ' ಅಂತ Blackmail ಮಾಡಿದರೆ... ಅವರಿಗೆ ಹೇಳುತ್ತೇನೆ:' ಗದೆಯ ಸವಿ ಕಾಣಾ? ಅಂತ ಭೀಮಸೇನ ಗದೆ ಕುಣಿಸಿದರೆ, 'ನನ್ನ Coat-of-mail ನೋಡಿದೀರಾ? ಅಂತ ನಾನೂ ಕೇಳಬೇಕಾಗುತ್ತೆ.

ಹೂಬತ್ತಿಗೂಡಿಗೆ ನಿರ್ಯೋಚನೆಯಿಂದ ಕೈ ಹಾಕುವ ಹಾಗೆ ಇರುವೆ ಗೂಡಿಗೆ, ಜೇನುಗೂಡಿಗೆ, ಕಣಜದ ಗೂಡಿಗೆ, ಗಿಡಗನ ಗೂಡಿಗೆ ಕೈ ಹಾಕಬಾರದು.

ಅವರ ಒಡಕುಗಂಟೆ ಅವರು ಆಡಿಸಿಕೊಳ್ಳಲಿ. ಅದರಿಂದ ಅವರ ಕೈ ಸೋಲಬೇಕೇ ಹೊರತು ಅದಕ್ಕೆ ನನ್ನ ಕಿವಿ ಸೋಲುವುದಿಲ್ಲ, ನನ್ನ ಮನಸ್ಸು ಮೊದಲೇ ಸೋಲುವುದಿಲ್ಲ. ನನ್ನದು 'ದುಂದುಭಿಗಭೀರ ನಿನದಂ'

ಇಲ್ಲಿಗೆ, ಇದು Round No1, ಮುಗಿಯಿತು.

ಭರತವಾಕ್ಯ

"The King is dead!
Long live the King!"

ಎಂದು ಹಿಂದೆ ಹೇಳುತ್ತಿದ್ದರು. ಆದರೆ ಈಗ ನನ್ನ ವಿಷಯದಲ್ಲಿ—

"The King is alive and kicking!
Long live the Emperor also!"

ರಾಜ ರಾರಾಜಿಸುತ್ತಿದ್ದಾನೆ! ಚಕ್ರವರ್ತಿ ಚಿರಾಯುವಾಗಲಿ! ಏಕೆಂದರೆ:—

'ರಾಜ ರತ್ನಂ' ಬೇರೆಯಲ್ಲ, 'ಚಕ್ರವರ್ತಿ ವಜ್ರ' ಬೇರೆಯಲ್ಲ;

ಇಬ್ಬರೂ ಒಂದೇ!

ಅ.ನ.ಕೃ. ಮತ್ತು ರಾಜರತ್ನಂ

ಇಂಗ್ಲಿಷಿನಲ್ಲಿ 'Who Killed Cock Robin? ಎಂಬ ಒಂದು Nursery Rhyme ಇದೆ. ಅದರ ಹಾಗೇ 'Who Killed ಅ.ನ.ಕೃ?' ಎಂದು ಕೇಳಿದರೆ—ಅವರದೇ 'ಬರಹಗಾರನ ಬದುಕು? ಎಂಬ ಗ್ರಂಥದ ಪುಟ ೩೪೮-೩೪೯ರಲ್ಲಿ ಉತ್ತರ ಇದೆ. ಕೊಂದವರು ಯಾರು? "ಮೇಲೆ ಸ್ನೇಹಿತರಂತೆ ನಟಿಸುತ್ತಾ ಅಂತರಂಗದಲ್ಲಿ ಅವರ ರಕ್ತಹೀರುವ ಜಿಗಣೆಗಳಾಗಿದ್ದ ನರಮಾಂಸಭಕ್ಷಕರು!"

ಅ ನ ಕೃ ಅವರ ಬಯಾಗ್ರಫಿಯ ಮೂರು ಭಾಗಗಳಂತಿರುವ 'ರಸ ಚೇತನ'—'ಚಿರಚೇತನ' 'ಬರಹಗಾರನ ಬದುಕುಗಳು' ಅವರು ಕಂಡು ಉಂಡ ಸ್ವರ್ಗ, ಮರ್ತ್ಯ, ಪಾತಾಳಗಳಿಗೆ ಕೈಪಿಡಿ ಇದ್ದಂತಿವೆ. ತನ್ನ ಸ್ವಪ್ರಯತ್ನದಿಂದ ಎಂಥ ಧೀಮಂತಿಕೆಯನ್ನು ಬೆಳಸಿಕೊಂಡ ವ್ಯಕ್ತಿ! ಕೊನೆಕೊನೆಗೆ ಸಹವಾಸದೋಷದಿಂದ, ಪಾಪ! ಏನಾಗಿಹೋದರು! 'ಶ್ರುತೇನ ಯೇನ ಭವ್ಯಾನಾಂ ಭವೇತ್ ಭೂಯೋ ಭವಾತ್ ಭಯಂ' ಎನ್ನಿಸಿಬಿಡುತ್ತದೆ, ಇವರ ದಾರುಣವಾದ ಜೀವನ ಕಥೆಯನ್ನು ಓದಿದರೆ.

ಅನಕೃ ಅವರು ವಯಸ್ಸಿನಿಂದಲೂ ಕನ್ನಡದ ಸೇವೆಯಲ್ಲಿಯೂ ನನಗೆ ಹಿರಿಯರು. ಅವರ, ನನ್ನ ಪ್ರವೃತ್ತಿಗೂ ರುಚಿಗಳೂ ಬೇರೆಯಾಗಿದ್ದರೂ ನಮ್ಮ ಸ್ನೇಹ ಒಣಗದೆ ಇತ್ತು. ಅವರಿಂದ ನಾನು ಅನೇಕ ಒಳ್ಳೆಯ ಪಾಠ ಕಲಿತಿದ್ದೇನೆ. ಅವರು ನನ್ನನ್ನು ಕೆಡಿಸಲಿಲ್ಲ, ನಾನು ಅವರನ್ನು ಕೆಡಿಸಲಿಲ್ಲ. We agreed to disagree. ಅ ನ ಕೃ ಅವರನ್ನು ಕುರಿತು ಹೇಳಬೇಕಾದ ಒಳ್ಳೆಯದೆಲ್ಲವನ್ನೂ ನಾನು ಇನ್ನೂ ಹೇಳಿಮುಗಿಸಿಲ್ಲ ದೇವರ ಕೃಪೆಯಿದ್ದರೆ, ಮುಂದಿನ ವರ್ಷಾಬ್ದಿಕದ ವೇಳೆಗೆ ಬರೆಯಬೇಕೆಂದಿದ್ದೇನೆ.

ಅನಕೃ ಕಾಲವಾದ ತರುಣದಲ್ಲಿ, ಮಲ್ಲೇಶ್ವರದ ಗಾಂಧೀ ಸಾಹಿತ್ಯ ಸಂಘದಲ್ಲಿ, ಪ್ರತಿ ತಿಂಗಳೂ ಒಂದು ಅನಕೃ ಸ್ಮಾರಕೋಪನ್ಯಾಸ ನಡೆಯಿತು; ಪ್ರತಿ ತಿಂಗಳೂ ಒಂದು ಸ್ಮಾರಕ ಪುಸ್ತಿಕೆ ಪ್ರಕಟವಾಯಿತು. ಅದನ್ನೆಲ್ಲ ಒಟ್ಟು ಗೂಡಿಸಿದ ಒಂದು ಸಂಯುಕ್ತ ಸಂಪುಟವು **'ಸ್ನೇಹದ ದೀಪ'** ಎಂಬ ಹೆಸರಿನಿಂದ ಪ್ರಕಟವಾಗಿದೆ.

Sri Satya Sai Workshop WHITEFIELD

ನಾವೆಲ್ಲ God—made Cars. ಪರಮಪದ Factory ಇಂದ ಹೊರಟಾಗ ಎಲ್ಲಾ ಕಾರುಗಳೂ ಚೆನ್ನಾಗಿದ್ದುವು. ಒಳಗೂ ಹೊರಗೂ, ಭೂಮಿಗೆ ಬಂದ ಮೇಲೆ ನಾವೂ ಏನೇನೋ ಮಾಡಿಕೊಂಡು, ಮಿಕ್ಕವರೂ ಏನೇನೂ ಮಾಡಿ, ಕಾರಿನ ಕೆಲವು ಭಾಗ ಸವೆದುಹೋಯಿತು; ಕೆಲವು ಭಾಗ ಒಡೆದುಹೋಯಿತು; ಕೆಲವು ಭಾಗ ಕಳವಾಗಿಹೋಯಿತು. ಲೊಡಕಲು ಕಾರು ರಿಪೇರಿಗೆ ಹೋಗ ಬೇಕಾಯಿತು.

ವೈಟ್‌ಫೀಲ್ಡಿನಲ್ಲಿ ಒಂದು Work-shop. ಅಲ್ಲಿನ Master Mechanic ಶ್ರೀ ಸತ್ಯಸಾಯಿ. ಬಂದ ಕಾರನ್ನ ಅವರು ಬಿಚ್ಚಿ ನೋಡಬೇಕಾದ್ದೇ ಇಲ್ಲ. ಅದು ನಿಲ್ಲೋ ರೀತಿ, ನಡೆಯೋ ರೀತಿ, ಸದ್ದು ಮಾಡೋ ರೀತಿ ಗಮನಿಸಿಯೇ ಅವರು ಅದಕ್ಕೆ ಬೇಕಾದ ರಿಪೇರಿಯೆಲ್ಲಾ ಮಾಡುತ್ತಾರೆ. ಹಳೇದನ್ನ ತೆಗೆದುಹಾಕುತ್ತಾರೆ, ಹೊಸದನ್ನ ಜೋಡಿಸುತ್ತಾರೆ; Battery run—down ಆಗಿದ್ದರೆ charge ಮಾಡುತ್ತಾರೆ; ಒಟ್ಟಿನಲ್ಲಿ recondition ಮಾಡಿ, ಹಳೇ ಕಾರನ್ನ ಹೊಸಕಾರು ಮಾಡುತ್ತಾರೆ.

Charges? 'ಏನೂ ಇಲ್ಲ' ಅಂತಾರೆ; 'Start the day with Love, fill the day with Love, end the day with Love. For Love Is God' ಅಂತಾರೆ' `ಕಾರು ಕೆಟ್ಟ ದಾರೀಲಿ ಹೋಗದಿರಲಿ. ಬೇಕಾದರೆ ನನ್ನ Driver ಆಗಿ ಇಟ್ಟುಕೊಳ್ಳಿ ನಾನು ಸನಾತನ ಸಾರಥಿ' ಅಂತಾರೆ. ಇದರ ಅನುಭವ ನನಗೆ ಚೆನ್ನಾಗಿ ಆಗಿದೆ.

'ಕಾಗೆ ಒಂದಗಳ ಕಂಡರೆ, ಕರೆಯದೆ ತನ್ನ ಬಳಗವನು? ಕೋಳಿ ಒಂದು ಕುಟುಕ ಕಂಡರೆ, ಕರೆಯದೆ ತನ್ನ ಕುಲವೆಲ್ಲವ?' ಎಂದಿದ್ದಾರೆ, ಬಸವಣ್ಣನವರು. ನಾನು ಕಂಡ ಸಾಯಿಮಾರ್ಗವನ್ನು ಇತರರಿಗೂ ತಿಳಿಸುವ ಪ್ರಯತ್ನದಲ್ಲಿ ನನ್ನ ಈಚಿನ ಪುಸ್ತಕಗಳು; ಸಾಯಿ ಮಹಾಪರ್ವ ಮತ್ತು ಸಾಯಿ ದಾಸೋಹ

ಜಿ. ಪಿ. ರಾಜರತ್ನಂ ಅಂತರ್ದರ್ಶನ - 2

ಕೊರವಂಜಿಯ ದಾರಿಯಲ್ಲಿ

ಇದು

ಜಿ. ಪಿ. ರಾಜರತ್ನಂ ಅವರ

ನಿರ್ಭಯಾಗ್ರಫಿ

ಎರಡನೇ ಕಂತು

ಒಳಗಿನ ವಿವರ

◆ ಕೊರವಂಜಿಯ ದಾರಿ ◆

"ಕೊರವಂಜಿಯ ದಾರಿ" ಎನ್ನುವುದು ಕೈಲಾಸಂ ಹಾಕಿಕೊಟ್ಟು ಹೋದ ದಾರಿಯ Continuation. ಕೈಲಾಸಂ ಅವರು ತೋರಿಸಿದ ಹಾಸ್ಯದ ಹೆದ್ದಾರಿಯನ್ನು ಮುಂದುವರಿಸಿದ ಅಗ್ರಗಣ್ಯರಲ್ಲಿ "ಕೊರವಂಜಿ"ಯ ಸಂಪಾದಕರಾದ ರಾ. ಶಿ. ಅನನ್ಯರು.

ಕೆಲಾಸಂ ತಮ್ಮ ಹಾಸ್ಯದ ಹೊನಲಿನಿಂದ ಇಡೀ ಕನ್ನಡ ನಾಡಿಗೇ ಸ್ನಾನ ಮಾಡಿಸಿದವರಾದರೂ, ಅವರು ನಡೆದ ದಾರಿಯು —ಅವರೇ ಹೇಳುತ್ತಿದ್ದ ಹಾಗೆ "Permanently penury—paved path" ಆಗಿತ್ತು. ಕೊರವಂಜಿಯ ಸಂಪಾದಕರಾದರೂ ಹೀಗೇ: ಇಪ್ಪತ್ತೈದು ವರ್ಷಗಳ ಉದ್ದಕ್ಕೂ ಆ ಪತ್ರಿಕೆಯನ್ನು "ನಷ್ಟಿಪ"ರಾಗಿಯೇ ನಡೆಸಿಕೊಂಡು ಬಂದರು. ಅದನ್ನು ನಿಲ್ಲಿಸಿದ್ದೇ ಅದರ ಬೆಳ್ಳಿಯ ಹಬ್ಬವಾಯಿತು.

Louis Pasteur ಕುರಿಗಳನ್ನು ಸಂರಕ್ಷಣೆಮಾಡುವ Anthrax ಎಂಬ vaccineಅನ್ನು ಕಂಡುಹಿಡಿದಾಗ, ಅವನ ಪ್ರಯೋಗ ಸಫಲವೋ ವಿಫಲವೋ ಅನ್ನುವುದನ್ನು ನೋಡುವುದಕ್ಕೆ ಬಂದಿದ್ದವರು ಕೇವಲ ಹತ್ತಾರು ಮಂದಿ. ಅಲ್ಲಿಯೇ ಪಕ್ಕದಲ್ಲಿ ಡೊಂಬರವನೊಬ್ಬನು ಗಣೆಕಟ್ಟಿ ಆಡುತ್ತಿದ್ದರೆ, ಅದನ್ನು ನೋಡಲು ಜಮಾಯಿಸಿದ್ದವರು ಸಾವಿರಾರು ಮಂದಿ, ಕುರಿಗಳ ಹಾಗೆ!

ಕೈಲಾಸಂ‌ಇಂದಲೂ ಕೊರವಂಜಿಯ ಸಂಪಾದಕರಿಂದಲೂ ನಾನು ಅನೇಕ ವಿಧವಾದ ಪಟ್ಟುವರಿಸೆಗಳನ್ನು ಕಲಿತಿದ್ದೇನೆ. ಸಮಯ ಸಂದರ್ಭ ಒದಗಿದಾಗಲೆಲ್ಲ ಅವುಗಳನ್ನು ಯಶಸ್ವಿಯಾಗಿ, ಪ್ರಯೋಗಿಸುತ್ತಿದ್ದೇನೆ. "ಶಾನೆ ದಿವಸಾಗಿತ್ತು ನಾನಿಂಗೆ ಯೆಡೆನೆತ್ತಿನಿತ್ತು."

ಈಗ ಈ ಹೊಸ ಪ್ರಯೋಗವು ನನ್ನಿಂದ ನಡೆಯುವ ಹಾಗೆ, ಕೆಲವರನ್ನು ಎತ್ತಿ ಕಟ್ಟಿ, ತಮಾಷೆ ನೋಡುತ್ತಿರುವ ನನ್ನ ದೇವರಿಗೆ ನಾನು ಹಾಸ್ಯಪೂರ್ಣವಾದ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

—ರಾಜರತ್ನಂ

◆ ನನ್ನ ಹಾಸ್ಯದ ಗುರುಪರಂಪರೆಗೆ ◆

ಹಾಸ್ಯದ "ಕ್ಷೇಮಕಾರೀ" ಮಾರ್ಗದಲ್ಲಿ ನನಗೆ ಪೂರ್ವ ಸೂರಿಗಳಾದ ಕಸ್ತೂರಿ, ಶ್ರೀನಿವಾಸ, ಕೈಲಾಸಂ, ಕಾರಂತ, ಶ್ರೀರಂಗ, ರಾ.ಶಿ. ಗೊರೂರು ಮೊದಲಾದ ಆಧುನಿಕರಿಗೂ;–ಪ್ರಾಚೀನರಲ್ಲಿ ಪ್ರಮುಖವಾಗಿ ರತ್ನಾಕರ, ಮುದ್ದಣ ಮಹೋದಯದ್ವಯರಿಗೂ;– "ಕುಕವಿನಿಂದಾ" ಪದ್ಧತಿಯನ್ನು ಪ್ರಾರಂಭಿಸಿ ಪೋಷಿಸಿಕೊಂಡು ಬಂದ ಹಿಂದಿನ ಎಲ್ಲಾ ಕವಿಗಳೂ—

ಅನ್ಯಾಪದೇಶವೇ ಮೊದಲಾದ ಅನೇಕ ಚಾಟುಗಳನ್ನು ಕೊಟ್ಟಿರುವ ಸಂಸ್ಕೃತದ ಅಜ್ಞಾತಕವಿಗಳಿಗೂ—

ಗಹನವಾದ ಅಧ್ಯಾತ್ಮವನ್ನು ಹಾಸ್ಯದ ಹೊದಿಕೆಯಲ್ಲಿ ಸ್ವಾದುವಾಗಿ ತಿಳಿಸಿಕೊಟ್ಟ ಭಗವಂತನಾದ ಬುದ್ಧನಿಗೂ ಶ್ರೀ ರಾಮಕೃಷ್ಣ ಪರಮಹಂಸರಿಗೂ; ತಿಳಿಸಿಕೊಡುತ್ತಿರುವ ಭಗವಾನ್ ಶ್ರೀ ಸತ್ಯಸಾಯಿ ಬಾಬಾ ಅವರಿಗೂ—

ನನ್ನ ಕೃತಜ್ಞತೆಗಳನ್ನು ಸಲ್ಲಿಸಿ, ಮುಂದುವರಿಯುತ್ತೇನೆ.

ಪಂಪಾವಿರೂಪಾಕ್ಷನಿಗೆ ನಾಲಗೆಯನ್ನು ಮಾರಿಕೊಂಡ ಹರಿಹರನು, ತನ್ನ ಸೋದರಳಿಯನಾದ ರಾಘವಾಂಕನು ಹರಿಶ್ಚಂದ್ರ ಕಾವ್ಯವನ್ನು ಬರೆದಾಗ, ದಾಕ್ಷಿಣ್ಯವಿಲ್ಲದೆ ಅವನ ಹಲ್ಲುಗಳನ್ನು ಉದುರಿಸಿದನಂತೆ, ನಾನಾದರೂ ಆ ಮಾವನ ಮೇಲ್ಪಂಕ್ತಿಯನ್ನು

ಅನುಸರಿಸಿ, ಉದ್ಧಟರ ಹಲ್ಲುಗಳನ್ನು ಉದುರಿಸುವ ಸಂಪ್ರದಾಯ ವನ್ನು ಊರ್ಜಿತಗೊಳಿಸುತ್ತಿದ್ದೇನೆ. ನಾನು—

ಮುಂತೆ ಸರಿಯಿಲ್ಲೆಂದು ಪೊಗಳ್ದು,
ಅವರು ಪೊರಮಟ್ಟ ಪಿಂತವರ ಕವಿತೆಯೇನೆಂದು ನಿಂದಿಸಿ,
ಕಾಳ್ಗೆಡೆದು ಊಳ್ವ ಕವಿಯ
ಎದೆಯ ಕೊಂತ, ಮೂಗಿನ ಕತ್ತಿ, ಅಧಟಕವಿನಿಕರಚೌದಂತ,
ವಿಕಟಕವಿಶರಭಭೇರುಂಡ,
ಗುಂಡ್ಲು ಪಂಚಿತವಂಶಜಲಧಿಸಂಭವರತ್ನ
ರಾಘುವಾಂಕನ ಮನೆಯ ಕಸಮುಸುರೆಯುವನು.

೨೩, ನವೆಂಬರ್

ಪ್ರಿಯ ಚಂದ್ರಕೀರ್ತಿ, ನನ್ನ "ನಿರ್ಭಯಾಗ್ರಫಿ"ಯ ಎರಡನೇ ಕಂತಾದ ಈ "ಕೊರವಂಜಿಯ ದಾರಿ"ಯನ್ನು ನೀವು ಈ ದಿವಸಕ್ಕೆ ಸರಿಯಾಗಿ ಪ್ರಕಟಿಸುತ್ತಿರುವುದು ನನಗೆ ತುಂಬ ತೃಪ್ತಿ. ಏಕೆಂದರೆ, ಎರಡು ಕಾರಣಗಳಿಂದಾಗಿ ನವೆಂಬರ್ ೨೩ ನನಗೆ ಸ್ಮರಣಾರ್ಹ ವಾದ ದಿನವಾಗಿದೆ.

೨೮ ವರ್ಷಗಳ ಹಿಂದೆ, ನವೆಂಬರ್ ೨೩ರಂದು, ನಮ್ಮ ಕೈಲಾಸಂ ಕಾಲವಾದರು. (೨೩ರಂದು ರಾತ್ರಿಯೋ ೨೪ರಂದು ಬೆಳಗಿನ ಜಾವದಲ್ಲಿಯೋ ಅವರ ಪ್ರಾಣಪಕ್ಷಿ ದೇಹಪಂಜರದಿಂದ ಹಾರಿಹೋದದ್ದು ಎಂಬುದು, ಅವರೇ ಬಂದು ಹೇಳಿದ ಹೊರತು, ಎಂದೆಂದಿಗೂ ಇತ್ಯರ್ಥವಾಗದಿರುವ ಪ್ರಶ್ನೆ. ಅದು ಹಾಗಿರಲಿ) ಅದರಿಂದ ಈ ತೇದಿ ನನಗೆ ಪ್ರಿಯ.

ಮತ್ತೆ, ೪೯ ವರ್ಷಗಳ ಹಿಂದೆ, ನವೆಂಬರ್ ೨೩ರಂದು, ನಮ್ಮ ಸ್ವಾಮಿ, ಭಗವಾನ್ ಶ್ರೀ ಸತ್ಯಬಾಯಿಬಾಬಾ, ನಮ್ಮ ನಡುವೆ, ನಿರಾಕಾರವು ನರಾಕಾರವನ್ನು ತಾಳಿ ಬಂದಂತೆ ಮೆಯ್ದೋರಿ ದರು. ಎಂಟುವರ್ಷಗಳಿಂದ ಅವರ ದರ್ಶನ—ಸ್ಪರ್ಶನ— ಸಂಭಾಷಣೆ ಭಾಗ್ಯಗಳನ್ನು ಪಡೆದಿರುವೆನಾದ ಕಾರಣದಿಂದ ಈ ತೇದಿ ನನಗೆ ಪ್ರಿಯ.

"ಕರ್ಣಾಟಕ ಪ್ರಹಸನ ಪ್ರಪಿತಾಮಹ"ರಾದ ಕೈಲಾಸಂ ಇಂದ "ಸತ್ರೂನನ್ ಶವ ನಗ್ತಿರಬೇಕು" ಎನ್ನುವ ಮಂತ್ರೋಪದೇಶವನ್ನು ನಾನು ಪಡೆದಿದ್ದೇನೆ. ಶ್ರೀ ಸತ್ಯಸಾಯಿ ಆದರೂ "ಮಂದಸ್ಮಿತ ಮುಖ ಮಧುರ ಭಾಷಣ... ವಿಕಸಿತ ಸುಂದರ ಮುಖಾರವಿಂದ... ವಿಭೂತಿಸುಂದರ"ರಾದ ಸೌಖ್ಯಮುಖರು. ಸ್ವಾಮಿ ಉಪದೇಶ ಮಾಡುವಾಗ ಹಾಸ್ಯವನ್ನು ಹೇಗೆ ಹಿತವಾಗಿ ಬಳಸುತ್ತಾರೆ ಎಂಬುದನ್ನು, ನಾನು ಸಂಪಾದಿಸಿ ಪ್ರಕಟಿಸಿರುವ "ಕೆಲವು ಸತ್ಯಸಾಯಿ ಕತೆಗಳು"ಎಂಬ ಸಂಗ್ರಹದಲ್ಲಿ ನೋಡಬಹುದು.

ಹಾಸ್ಯಕ್ಕೆ ಸಂಬಂಧಪಟ್ಟ ಹಲವು ವಿಷಯಗಳನ್ನು ಒಳಕೊಂಡ ಈ ಪುಸ್ತಿಕೆಯು, ಉತ್ತಮ ಹಾಸ್ಯರಸಜ್ಞರಾದ ಇಬ್ಬರು ಮಹನೀಯರ ಮರಣ—ಜನನ ದಿವಸದಂದು ಪ್ರಕಟವಾಗುತ್ತಿರುವುದು ಅತ್ಯಂತ ಔಚಿತ್ಯಪೂರ್ಣವಾಗಿದೆ.

ಹಾಸ್ಯದ ಹಸು

ತಾವು ಹೇಳಿದ್ದೆಲ್ಲ humour ಆಗುತದೆ ಅಂತ ಕೆಲವರು ತಿಳಿದುಕೊಂಡಿರೋಹಾಗಿದೆ. Mental humour ಅನ್ನೋದು ಬಹುಮಟ್ಟಿಗೆ Bodily humours ಅನ್ನ ಅವಲಂಬಿಸಿಕೊಂಡಿರುತ್ತದೆ ಅನ್ನೋದನ್ನ ಇವರು ಮರೆತುಬಿಡುತ್ತಾರೆ.

ಹಾಸ್ಯ ಅನ್ನೋದು ಅಷ್ಟು ಸುಲಭವಾದ ಚೀಸ್(ಹಿಂದಿ) ಅಲ್ಲ, ಅದ್ನು ಎಲ್ಲರೂ ತಯಾರು ಮಾಡೋಕೆ ಆಗೋ cheeseಊ ಅಲ್ಲ. ಹಾಸ್ಯದ ಹಾಲನ್ನ ಕಾಯಿಸಿ ಕುದಿಸಿದರೆ ಸಾಲದು. ಅದು Sublimate ಆಗಬೇಕು.

ಹಾಸ್ಯ ಒಂದು ಹಸು ಇದ್ದಹಾಗೆ; ಯಾರು ಬೇಕಾದರೂ ಅದನ್ನ ತಂದು ಕಟ್ಟಿ ನಿಲ್ಲಿಸಿಕೋಬಹುದು; ಆದರೆ ಅದರ ಕೆಚ್ಚಲನ್ನ ಹಿಂಡಿ ಹಾಲು ಕರೆಯೋದು ಎಲ್ಲರಿಗೂ ಸಾಧ್ಯವಿಲ್ಲ.

ಅದರಲ್ಲೂ Satire! ಮಂಗಳವಾರ ಮಧ್ಯಾಹ್ನ ಏಟು ಬಿದ್ದರೆ, ಶನಿವಾರ ಸಂಜೆಗೆ ನೋವು ಕಾಣಿಸಿಕೊಳ್ಳುತ್ತೆ. ಅದು Satireನ ಸ್ವಭಾವ!

ಒಂದು ಉದಾಹರಣೆ; ನರಕಕ್ಕೆ ಹೋಗಿ ಬಂದದ್ದನ್ನು ತಿಳಿಸಲು ೪ ಪುಟ ಸಾಕಾದರೆ—

ರಷ್ಯಾಕ್ಕೆ ಹೋಗಿ ಬಂದದ್ದನ್ನು ತಿಳಿಸಲು ೧೦೪ ಪುಟ

ಬೇಕಾದರೆ—What is the inference? 1 ರಷ್ಯ=26 ನರಕ ಎಂದಾ ಇದರ "ಧ್ವನಿ"?

ಭೀಮಸೇನನಿಗೆ "ಅಹೋಧ್ವನಿ" ಗೊತ್ತಿರಬಹುದು, ಅಡುಗೆಯ ಪಾತ್ರೆಗಳ ಧ್ವನಿ ಗೊತ್ತಿರಬಹುದು. ಆದರೆ "ಧ್ವನಿ" ಗೊತ್ತಾ? ಆನಂದವೇ ಗೊತ್ತಿಲ್ಲದವರಿಗೆ ಆನಂದವರ್ಧನ ಹೇಗೆ ಗೊತ್ತು?

ನಾನಾದರೋ ಆನಂದವರ್ಧನನನ್ನೂ ಬಲ್ಲೆ, ಕುಂತಕನನ್ನೂ ಬಲ್ಲೆ. ವಕ್ರೋಕ್ತಿಜೀವಿತದಲ್ಲಿಯೇ ನನ್ನ ನಿತ್ಯವ್ಯವಹಾರ.

"ಕುಂತ" ಎಂದರೂ ಒಂದೇ, ಕುಂತಕ ಎಂದರೂ ಒಂದೇ; ಗೊತ್ತಾ? ಸ್ವಾರ್ಥೇ ಚ ಅಲ್ಪಾರ್ಥೇ ಚ ಕಪ್ರತ್ಯಯಃ!

ಕುಂತವೆಂಬುದು ರಾಘವಾಂಕನ "ಕೊಂತ," ಎಂದರೆ ಶೂಲ!

◆ ನಮೋಸ್ತು ಮೇ! ◆

"ಟೊಳ್ಳು ಗಟ್ಟಿ" ನಾಟಕದ ಕರ್ತೃವಾದ ಗುಂಡೂರಾಯ ನಾಟಕದ ಪ್ರಾರಂಭದಲ್ಲಿ "ನಮೋಸ್ತು ತೇ!" ಅಂತ ಯುವರಾಜರ ಪಠಕ್ಕೆ ಹಾರ ಅರ್ಪಿಸಿಯಾದ ಮೇಲೆ—

ಜೇಬಿನಿಂದ ಮುರುಕು ಕನ್ನಡಿ ತೆಗೆದು, ಅದರಲ್ಲಿ ತನ್ನ ಮುಖ ನೋಡಿಕೊಂಡು, "ಗುಂಡೂರಾಯ ನಮೋಸ್ತು ಮೇ" ಎಂದು ಹಾಡುತ್ತಾ ಕನ್ನಡಿಗೆ ಕಾಗದದ ಹೂವಿನ ಮಾಲೆಯನ್ನು ಹಾಕಿದಾಗ—

ಸಭಿಕರ ಪರಿಹಾಸ್ಯಧ್ವನಿಯನ್ನು ಕೇಳಿ, ಕೆಂಪೇರಿದ ಕಣ್ಣು ಗಳಿಂದ ಹೇಳುತಾನೆ:—

"ನಗ್ಬೇಕಾದ್ದೇನೂ ಇಲ್ಲ... ಈ ಕಾಲ್ದಲ್ಲಿ ಅವರವರ ಯೋಗ್ತೆ ಅವರವರಿಗೆ ಗೊತ್ತೇಹೊರ್ತು ಇತರರಿರಿಗೇನ್ ಗೊತ್ತು? ಆ... Englishನಲ್ಲಿ poet ಅಂಬೋ ಕವಿ ಹೇಳ್ತಾನಲ್ಲಾ...To fall in love with one's own self is the only life-long passion possible... ಅಂಬೋ ಹಾಗೆ... ಕವಿಕೇಸರಿಗಳಲ್ಲಿ ನನಗಿರುವ ಮಮತೆ, ಮರ್ಯಾದೆ, ವಿಶ್ವಾಸ, ವ್ಯಾಮೋಹ, ಭಕ್ತಿಶ್ರದ್ಧಾದಿಗಳು, ನನ್ನ ಯಾವಜ್ಜೀವವೂ ತೃಣಮಾತ್ರವೂ ಲೋಪಿಸದಿರುವುದರಲ್ಲಿ ಸಂದೇಹವೇ ಇಲ್ಲ".

ಅದರ ಹಾಗೆಯೇ ಈಗ ನನಗಾದರೂ: ನಿಮಗೆ ನಾನು ಬರೆದಿರುವ ಕಾಗದಗಳಲ್ಲಿ ನನ್ನನ್ನೇ ನಾನು ಕಂಡುಕೊಂಡು,"ತನ್ನ ಕಾವ್ಯಕೆ ಮಹಾಕವಿ ತಾಂ ಮಣಿಯುವಂತೆ...ಹೃಷ್ಯಾಮಿ ಚ ಮುಹುರ್ಮುಹುಃ"

"Mischief, thou art afoot; Take what course thou wilt" ಅಂತ ಬರೆದಿದ್ದೀರಿ. ನಿಜ; ನಾನು ಕೊಡುತ್ತಿರುವ course ಮೈಗೆ ಹಿಡಿದರೆ, ಎಂಥ ಭೀಮಸೇನನಾದರೂ wilt ಆಗಬೇಕಾದ್ದೇ. ಆದರೆ ಇದರಲ್ಲಿ coarse ಆದದ್ದು ಕಡಿಮೆ. ಬಹುಮಟ್ಟಿಗೆ fine, ಕೆಲವು ಕಡೆಯಂತೂ superfine ಆಗಿ ಬಂದಿದೆ ಎನ್ನಿಸುತ್ತೆ. ಒಟ್ಟಿನಲ್ಲಿ ಈ courseಉ, ಈ trackಉ smoothಆಗಿ ಇದೆಯಾದರೂ ಎಲ್ಲಿಯೂ slip ಆಗಿಲ್ಲ ಅಂದು ಕೊಂಡಿದ್ದೇನೆ. ಆದರೂ, there's many a slip 'twixt the cup and the lip, ಅಲ್ವಾ?

◆ ಇಂಡಿವಿಜುಯಲ್ ವಾಸ್ನೆ ◆

ಅವರವರ individuality ಅವರವರಿಗೆ ಇರಬೇಕು, ನಿಜ. This is a free country! ಯಾರು ಯಾರನ್ನ ಏನು ಬೇಕಾದರೂ ಅನ್ನಬಹುದು. ಆದರೂ—"ಬಂಡವಾಳವಿಲ್ಲದ ಬಡಾಯಿ" ಅಹೋಬ್ಳು ಬಾಳೂನ ಕೇಳಿದ ಹಾಗೆ—"Duty—Decency — Devotion — Discipline — Dignity ಇವುಗಳನ್ನು ಕೇಳಿದೀರಾ? Dictionaryಲಾದ್ರೂ ನೋಡಿದೀರಾ?" ಅಂತ ನಾವೂ ಕೇಳಬಹುದಲ್ಲಾ? ಕೇಳಬಹುದು; ಉತ್ತರ ಹೇಳೋ ಭೂಪರು ಯಾರು?

ನೆನ್ನೆ ಏನು ತಿಂದಿರುತೀವಿ ಇವೊತ್ತು ಅದರದೇ ತೇಗು, ಅಲ್ಲಾ? ತಿನ್ನೋದು ಒಂದು, ತೇಗೋದು ಇನ್ನೊಂದು; ಎಲ್ಲಾದರೂ ಉಂಟೆ? ಅವರವರ ತೋಟದಲ್ಲಿ ಅವರವರು ಬೆಳೆದದ್ದನ್ನೇ ಅಲ್ಲವೆ, ಅವರವರು ಮಾರುಕಟ್ಟೆಗೆ ತರೋದು?

ಮುದ್ಮಣಿ ವಿಷಯದಲ್ಲಿ ಅವರಪ್ಪ ಅಹೋಬ್ಳುವಿನ ಮುಖದಿಂದ ಬಂದ ಈ ಮುಕ್ತಾಫಲ ನೋಡಿ:-

"Various boys various ವಾಸ್ನೇಸ್! ಬೆಳ್ಳುಳ್ಳಿ biting boys ಬೆಳ್ಳುಳ್ಳಿವಾಸ್ನೆ! ಈರುಳ್ಳಿ eating boys ಈರುಳ್ಳಿವಾಸ್ನೆ! ಕಳ್ಳೆಕಾಯಿ eating boys....ಒಟ್ನಲ್ಲಿ all sorts of eatablesನ eating boys will now and then expire, exude or

even explode all sorts of ವಾಸ್ನೇಸ್! Each boy his own individual ವಾಸ್ನೇ! question of personal equation....ಇದನ್ನೆಲ್ಲಾ ಗಮನಿಸಬಹುದೇ detailed ಆಗಿ?"

ಚಿಕ್ಕಂದಿನಲ್ಲಿ ನಮಗೊಂದು ಪದ್ಯ ಹೇಳಿಕೊಡುತ್ತಿದ್ದರು:

ನಂಜನಗೂಡಿಗೆ ಹೋಗಿದ್ಯಾ?
ನಂದೀಕಂಬ ನೋಡಿದ್ಯಾ?
ಕಾಸಿನ್ ಕಳ್ಳೆ ತಿಂದಿದ್ಯಾ?
ಹೂಸಿನ ನಾತ ಕುಡಿದಿದ್ಯಾ?

ಹೇಳಿಕೊಂಡು ನಾವು ನಗುತಿದ್ದಿವಿ, ಕೇಳಿದ ದೊಡ್ಡವರೂ ನಗುತಿದ್ದರು. ಇಷ್ಟು ವರ್ಷ ಆದಮೇಲೂ ಅಲ್ಲಿಂದ ಮೇಲಕ್ಕೆ ಏರಲೇಬೇಡವೆ, ನಮ್ಮ ಸುಡುಗಾಡು ಹಾಸ್ಯ ಅನ್ನೋದು?

◆ ಗಾಡ್ರೆಜಿನ ಘೋರ ◆

ಮೊನ್ನೆ ಒಂದು ಪೇಪರಿನಲ್ಲಿ ಒಂದು ಕತೆ ಓದಿದೆ. ಅವರು ಬರೆದದ್ದು ಹಾಸ್ಯ ಅಂತ. ಅದರಿಂದ ಮನಸ್ಸಿಗೆ ಆದದ್ದು ಹೇಸಿಗೆ. ಹಾಸ್ಯ ಯಾವ ಅಧೋಗತಿಗೆ ಬಂದು ನಿಂತಿದೆ ಅನ್ನೋದಕ್ಕೆ ಇದೊಂದು Stinking ಉದಾಹರಣೆ.

ಬೀಭತ್ಸ ಒಂದು ರಸ ಅಂತ ಒಪ್ಪಿಕೊಂಡಿದ್ದಾರೆ ಸರಿ. ಹಾಗಂತ, ಮನೆಯವರ ಮಲಮೂತ್ರಗಳನ್ನು ಯಾರಾದರೂ ಗಾಡ್ರೆಜಿನಲ್ಲಿ ಇಟ್ಟುಕೋತಾರಾ? ಹಾಗೆ ಒಂದು ವೇಳೆ ಅವರ ಮನೇಲಿ ಇಟ್ಟುಕೊಂಡರೂ ಹಾಗಂತ ಪೇಪರಿನಲ್ಲಿ ಬರೀತಾರಾ?

ಪೇಪರ್ ಅನ್ನೋದೇನು ಪಬ್ಲಿಕ್ ಲವೇಟರಿ ಕೆಟ್ಟು ಹೋಯ್ತಾ? ಹಾಲು ಕೊಡುತದೆ ಅಂತ ಹಸೂ ಕಟ್ಟಿಕೊಂಡರೆ, ಅದು ಬಿಟ್ಟಿದ್ದೆಲ್ಲ ಬರೀ ಗಂಜಳ, ಸೆಗಣಿ ಆದರೆ? ಕಸಾಯಿ ಖಾನೇನೇ ಕೊನೇಗದಕ್ಕೆ ಗತಿ!

ನಂ ನಾಗತ್ತೆ ಹೇಳಿದ್ದು ಜ್ಞಾಪಕ ಬಂತು:"ಮನೇಲಿ ಇರೋವರಿಗೆ ಜ್ಞಾನ ಇಲ್ಲ ಅನ್ನೋದು ಎಲ್ಲರಿಗೂ ಗೊತ್ತು. ಆದರೂ ಬೀದೀಲಿ ಹೋಗೋವರೆಲ್ಲ ತಿಳಿಕೊಳ್ಳಿ ಅಂತ ಮನೇ ಮುಂದೆ ಜ್ಞಾನ —Villaಅಂತ ಬೋರ್ಡು ತಗುಲಿಸಿಕೊಳ್ಳೋದೆ!"

"ಆಹಾರ-ನಿದ್ರಾ-ಭಯ-ಮೈಥುನಾನಿ

ಸಾಮಾನ್ಯಮೇತತ್ ಪಶುಭಿರ್ನರಾಣಾಂ"

ಹೌದು, ನಿಜ. ಭಯದ ಗ್ರಾಫ್ ಕೊಂಚ ಮೇಲಕ್ಕೆ ಹೋದರೆ ಎಂಥವರಿಗಾದರೂ ಒಂದೂ ಎರಡೂ ಆಗೋದೇ! ಪ್ರಾಣಿಗಳಾದರೆ ಏನು ಮಹಾ! ಆದರೆ ಪ್ರಾಣಿಗಳ ಪುಣ್ಯ: ಅವಕ್ಕೆ ಚೆಡ್ಡೀನೂ ಇಲ್ಲ! ಗಾಡ್ರೆಜ್ಜೂ ಇಲ್ಲ! ಅವು ಕತೆ ಬರೆಯೋದೂ ಇಲ್ಲ.

ಮುಚ್ಚು, ಬಿಚ್ಚು

"ತಮ್ಮ 'ನಿರ್ಭಯಾಗ್ರಫಿ' ಓದಿ ತಲೆ ಚೆಚ್ಚಿಕೊಂಡರೂ ಅದರಿಂದೇನೂ ಅರ್ಥವಾಗದ್ದು ನಮ್ಮ ಕರ್ಮ" ಎಂದು ಮೊದಲನೇ ಕಂತನ್ನು ಓದಿದವರೊಬ್ಬರು ಬರೆದಿದ್ದಾರೆ. ಅವರ ಕಷ್ಟ ನನಗೆ ಅರ್ಥವಾಗುತ್ತದೆ. ನಾನು ಬೀರಿರುವ ಅನೇಕ allusions ಅವರಿಗೆ ಅರ್ಥವಾಗುವುದು ಕಷ್ಟ. ಏಕೆಂದರೆ ವಯಸ್ಸು ಸಣ್ಣದು, ಓದು ಸಾಲದು, ಅನುಭವ ಇನ್ನೂ ಆಗಬೇಕು. ಅದರಲ್ಲೂ ಇಂತಹ ಹಾಸ್ಯದ ವ್ಯೂಹಗಳೊಳಕ್ಕೆ ಹೊಕ್ಕು, ಅಕ್ಷತವಾಗಿ ಹೊರಗೆ ಬರಬೇಕಾದರೆ, ಅದಕ್ಕೂ ಒಂದು ಶಿಕ್ಷಣ ಆಗಿರಬೇಕು. ಅಂಥವರು ನಮ್ಮ ಜೊತೆಯಲ್ಲಿ ಇದ್ದಾರೆಂಬ ಭರವಸೆಯಿಂದಲೇ ಇಂತಹ ಬರವಣಿಗೆಗಳನ್ನು ಬರೆಯುವ ಪ್ರೇರಣೆ, ಉತ್ಸಾಹ ಬರುವುದು. ಹಾಗಲ್ಲದೆ ಇದ್ದರೆ, ವೃಥಾ ಅರಣ್ಯರೋದನ ಮಾಡುವುದಕ್ಕೆ ಏನು ಬುದ್ಧಿ ಕೆಟ್ಟಿದೆಯೆ?

"God provides us with nuts;
He does not break them open."

ಎಂದು ಮಹಾಕವಿ ಗಯಟೆ ಹೇಳುತ್ತಾನೆ. ಕವಿಗಳನ್ನು "ಅಘಟಿತಘಟನಾ ನೂತನ ಬ್ರಹ್ಮ" ಎಂದು ಕರೆಯುತ್ತಾರೆ. ಆತನಿಂದ ನಮಗೆ ಸಿಕ್ಕಿದ್ದನ್ನು ನಾವು ದಕ್ಕಿಸಿಕೊಳ್ಳಬೇಕಾದರೆ, ನಾವೂ ಕಷ್ಟಪಡುವುದು ಬೇಡವೆ?

ಈಗ ಎಲ್ಲಾ "ದಿಢೀರ್" ಯುಗ. ದಿಢೀರ್ ತಯಾರಿಕೆಗೆ ತಡತ ಕಡಮೆ, ಅದರಿಂದ ಉಂಟಾಗುವ ರುಚಿಯೂ ಕಡಮೆ.

ಮುಚ್ಚಿ ಹೇಳಿದನು ಕವಿ—
ಕೇಳುವರ ಬಗೆ ಮೆಚ್ಚಿಬರಲಿ ಎಂದು;
ಬಿಚ್ಚಿ ಹೇಳದೆ ಬಿಟ್ಟ—
ಕೇಳುವರ ಬಗೆ ಬೆಚ್ಚದಿರಲಿ ಎಂದು.

ತಾವಾಗಿ ಓದಿಕೊಂಡು, ಒಳಹೊಕ್ಕು, ರಸಗ್ರಹಣ ಮಾಡುವ ಸಾಮರ್ಥ್ಯವುಳ್ಳವರು ಮೊದಲು ಇದನ್ನು ಓದಿನೋಡಲಿ. ಈ ತುರಿಚಿಸೊಪ್ಪಿನ ಮಾಲೆಯನ್ನು ಮುಡಿಸಿಯಾದ ಮೇಲೆ, ಇದನ್ನು ಅರ್ಥಮಾಡಿಕೊಳ್ಳಲು ಬೇಕಾಗಬಹುದಾದ ಸಹಾಯಕ ಸಾಹಿತ್ಯವನ್ನು ಬಾಲವಾಗಿ ಕೊಡೋಣ.

◆ ಕನ್ನಡದ ಕಸ್ತೂರಿ ◆

ಪ್ರಿಯ ಚಂದ್ರಕೀರ್ತಿ!

"ರೋಗಿ ಬಯಸಿದ್ದೂ ಹಾಲೂ ಅನ್ನ, ವೈದ್ಯ ಹೇಳಿದ್ದೂ ಹಾಲೂ ಅನ್ನ" ಅನ್ನುವ ಹಾಗೆ, ನಾನು ಯಾವುದನ್ನು ನಿಮಗೆ ಹೇಳಬೇಕೆಂದಿದ್ದೆನೋ ಅದನ್ನೇ ನೀವೂ ಕೇಳಿದ್ದೀರಿ. ಈ ತಲೆಮಾರಿನವರು ಅನೇಕರಿಗೆ ಕಸ್ತೂರಿಯವರ ವಿಷಯ ಗೊತ್ತಿಲ್ಲ.

ನಾನು ಹೈಸ್ಕೂಲಿನ ವಿದ್ಯಾರ್ಥಿಯಾಗಿದ್ದಾಗ ನನಗೆ ಸಮ್ಯಕ್ ಸಾಹಿತ್ಯದ ಪರಿಚಯವನ್ನು ಮಾಡಿಕೊಟ್ಟ ಮೇಷ್ಟರು ಇವರು. ನಾನು ಬೆಳೆದ ಮೇಲೆ, ಕಳೆದ ಎಂಟು ವರ್ಷಗಳಿಂದ ಇವರು ನೀಡುತ್ತಿರುವ ಶ್ರೀಸತ್ಯಸಾಯಿ ಸಾಹಿತ್ಯದ ಸಂಪುಟಗಳು ನನ್ನನ್ನು "ಧರ್ಮಸ್ಥ"ನನ್ನಾಗಿ ಮಾಡಿವೆ. ನನ್ನ ಮೇಲೆ ಪ್ರಭಾವ ಬೀರಿರುವವರಲ್ಲಿ ಶ್ರೀ ಕಸ್ತೂರಿ ಅವರೂ ಒಬ್ಬರು ಪ್ರಮುಖರು.

ಕೆಲವು ತಿಂಗಳ ಹಿಂದೆ ಇವರನ್ನು ಕುರಿತು ಒಂದು ಲೇಖನ ಬರೆದೆ. ಅದು "ಪ್ರಜಾವಾಣಿ"ಯಲ್ಲಿ ಪ್ರಕಟವಾಯಿತು. ಅದರ Cutting ಇದರ ಜೊತೆಯಲ್ಲಿ ಕಳಿಸಿದ್ದೇನೆ. ಬಹುಶಃ ನಿಮ್ಮ ಕಡೆ ಇದನ್ನು ನೋಡಿರಲಾರಿರಿ. ಓದಿಯಾದ ಮೇಲೆ ದಯಮಾಡಿ ನನಗೆ ಹಿಂದಿರುಗಿಸಿರಿ.

ಕಸ್ತೂರಿ ಹುಟ್ಟಿದ್ದು ೧೮೯೭ರಲ್ಲಿ, ಕೇರಳದಲ್ಲಿ. ಅಲ್ಲಿ

ಪದವೀಧರರಾಗಿ ೧೯೨೧ರಲ್ಲಿ ಮೈಸೂರಿಗೆ ಬಂದು ಬನುಮಯ್ಯ ನವರ ಹೈಸ್ಕೂಲಿನಲ್ಲಿ ಉಪಾಧ್ಯಾಯರಾದರು; ೧೯೨೮ರಲ್ಲಿ ಮಹಾರಾಜರ ಕಾಲೇಜಿನಲ್ಲಿ ಅಧ್ಯಾಪಕರಾದರು; ೧೯೫೨ರಲ್ಲಿ ದಾವಣಗೆರೆ ಕಾಲೇಜಿನ ಪ್ರಿನ್ಸಿಪಾಲರಾಗಿ ವಿಶ್ರಾಂತಿ ಪಡೆದರು. ಅಂದಿನಿಂದ ಪುಟ್ಟಪರ್ತಿಯ ಪ್ರಶಾಂತಿನಿಲಯದಿಂದ ಪ್ರಕಟವಾಗುವ "ಸನಾತನ ಸಾರಥಿ" ಮಾಸಪತ್ರಿಕೆಯ ಸಂಪಾದಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಮೈಸೂರಿಗೆ ಬಂದ ಹೊಸದರಲ್ಲಿ ಇವರಿಗೆ ಕನ್ನಡ ಮಾತ ನಾಡುವುದಕ್ಕೆ ಕೂಡ ಬರುತ್ತಿರಲಿಲ್ಲ. ಬಹಳ ಬೇಗ ಕನ್ನಡ ಜನದೊಡನೆ ಹೊಂದಿಕೊಂಡು ಒಂದಾಗಿ, ಕನ್ನಡವನ್ನು ಸಹಜವಾಗಿ ಮಾತನಾಡುವುದಕ್ಕೂ ಕನ್ನಡದಲ್ಲಿ ಭಾಷಣ ಮಾಡುವುದಕ್ಕೂ ಕನ್ನಡದಲ್ಲಿ ಕನ್ನಡಿಗರಂತೆ ಬರೆಯುವುದಕ್ಕೂ ಕಲಿತರು. ಮೀನು ಈಜು ಕಲಿಯುವಂತೆ ಕಲಿತರು. ಕೇರಳದಿಂದ "ಎನ್. ಕಸ್ತೂರಿ" ಆಗಿ ಬಂದವರು ಬಹುಬೇಗ ಕನ್ನಡದಲ್ಲಿ "ನಾ. ಕಸ್ತೂರಿ" ಆಗಿ ಹೋದರು. ಮಹಾರಾಜಾ ಕಾಲೇಜಿನಲ್ಲಿ ಅವರು ಎಷ್ಟು ಸೊಗಸಾದ ಕನ್ನಡ ನಾಟಕಗಳನ್ನು ಆಡಿಸುತ್ತಿದ್ದರೆಂಬುದನ್ನು ಮೆಚ್ಚಿ ಕೊಂಡು, ಶ್ರೀ ಎ. ಆರ್. ಕೃಷ್ಣಶಾಸ್ತ್ರಿಗಳು "ನಾ ಕಸ್ತೂರಿ ಎಂದರೆ ನಾಟಕದ ಕಸ್ತೂರಿ" ಎಂದು ಯಥಾರ್ಥವನ್ನು ಚಮತ್ಕಾರವಾಗಿ ಹೇಳಿದರು.

ಕನ್ನಡ ಸಾಹಿತ್ಯದ ನಂದನವನದಲ್ಲಿ ಹಾಸ್ಯದ ಹಸಿರುತೋಪು ಗಳನ್ನು ಬೆಳಸಿದವರಲ್ಲಿ ಇವರೂ ಒಬ್ಬರು. ಇವರು ಮೈಸೂರಿನಲ್ಲಿ ವಾಸವಾಗಿದ್ದ ಮನೆಗೆ "ಕಲ್ಪವೃಕ್ಷ"ವೆಂದು ನಾಮಕರಣ

ಮಾಡಿದ್ದರು. ಕಸ್ತೂರಿಯವರ ಮುಖದಿಂದ ಬಂದ ಹಾಸ್ಯದ ಫಲಗಳು ಬಹುಪಾಲು ತೆಂಗಿನ ವರ್ಗದವು; ಈಚಲುವರ್ಗಕ್ಕೂ ಇವರಿಗೂ ದೂರ.

ಗಾಳಿಗೋಪುರ, ಚಕ್ರದೃಷ್ಟಿ, ಶಂಖವಾದ್ಯ, ಚೆಂಗೂಲಿ ಚೆಲುವ, ಗೃಹದಾರಣ್ಯಕ, ರಂಗನಾಯಕಿ ಎಂಬ ಆರು ಕಾದಂಬರಿಗಳು; ಯದ್ವಾ-ತದ್ವಾ, ಡೊಂಕುಬಾಲ, ಅಲ್ಲೋಲ-ಕಲ್ಲೋಲ, ಉಪಾಯವೇದಾಂತ ಎಂಬ ಐದು ಹಾಸ್ಯಪ್ರಬಂಧಗಳ ಸಂಕಲನ; ಗಗ್ಗಯ್ಯನ ಗಡಿಬಿಡಿ ಎಂಬ ಮೂರು ಏಕಾಂಕ ಹಾಸ್ಯ ನಾಟಕಗಳ ಸಂಗ್ರಹ; ಅಣಕು ಮಿಣಕು ಎಂಬ ಅಣಕುವಾಡುಗಳ ಪುಸ್ತಕ; ಅನರ್ಥಕೋಶ ಎಂಬ ಚಿತ್ರ ವಿಚಿತ್ರ ಶಬ್ದಾರ್ಥಗಳ ನಿಘಂಟು— ಇವಿಷ್ಟೂ ಇವರು ಕನ್ನಡದ ಹಾಸ್ಯಪ್ರಪಂಚಕ್ಕೆ ಕೊಟ್ಟ ಕೊಡುಗೆ.

ಇವುಗಳ ಜೊತೆಗೆ, ೧೯೪೨ರಲ್ಲಿ ಶ್ರೀ ರಾ. ಶಿ. ಆರಂಭಿಸಿದ "ಕೊರವಂಜಿ"ಯಲ್ಲಿ ಕಸ್ತೂರಿ ಸುಮಾರು ಆರು ವರ್ಷಕಾಲ ನಾಮಾಂತರಗಳ ಮರೆಯಲ್ಲಿ ಬರೆದ ಗದ್ಯಗಳನ್ನೂ ಪದ್ಯಗಳನ್ನೂ ಸಂಪಾದಿಸಿದರೆ ಅವು ಇನ್ನೊಂದು ಕೆಲವು ಪುಸ್ತಕ ಆದಾವು.

ಕಸ್ತೂರಿ ಕೇವಲ ಹಾಸ್ಯಗಾರನ ಮಿತಿಯಲ್ಲಿ ಮುಗಿದು ಹೋದವರಲ್ಲ. ಅವರು ವಿಶೇಷವಾಗಿ ಅಧ್ಯಯನ ಮಾಡಿದ್ದೂ ಕಾಲೇಜಿನಲ್ಲಿ ಪಾಠ ಹೇಳಿದ್ದೂ: ಚರಿತ್ರೆ ಮತ್ತು ಮಾನವಶಾಸ್ತ್ರ ಇವುಗಳನ್ನು. ತಾವು ಬಲ್ಲ ಶಾಸ್ತ್ರವನ್ನು ಕುರಿತು ಅವರು ಹೆಚ್ಚು ಬರೆಯಲಿಲ್ಲವಾದರೂ-ಮನೋಹರ ಗ್ರಂಥಮಾಲೆ ಆರಂಭವಾದ ಕಾಲಕ್ಕೆ ಅವರು ಬರೆದ "ದಿಲ್ಲೀಶ್ವರನ ದಿನಚರಿ" ಎಂಬ ಬಾಬರನ ಆತ್ಮಕಥೆ; ಮೈಸೂರು ವಿಶ್ವವಿದ್ಯಾನಿಲಯ ಪ್ರಕಟಿಸಿರುವ

"ಮದುವೆ" ಮತ್ತು "ಅಶೋಕ" ಪ್ರಬುದ್ಧ ಕರ್ಣಾಟಕದಲ್ಲಿ ಇವರು ಬರೆದ "ಕುಮಾರಜೀವ - ಬೋಧಿಧರ್ಮ - ಅಶೋಕನ ಧರ್ಮದೃಷ್ಟಿ" ಮುಂತಾದ ಲೇಖನಗಳು-ಕಸ್ತೂರಿಯವರ ವಿಷಯ ಪ್ರಭುತ್ವಕ್ಕೂ ಭಾಷಾಪ್ರಭುತ್ವಕ್ಕೂ ಸಾಕ್ಷಿಗಳಾಗಿವೆ.

ನಮ್ಮಲ್ಲಿ ಮಕ್ಕಳ ಸಾಹಿತ್ಯ ಈಗಿರುವುದಕ್ಕಿಂತ ಇನ್ನೂ ಕೃಶವಾಗಿ ಇದ್ದಕಾಲದಲ್ಲಿ ಲೂಯಿಕೆರೋಲನ Adventures of Alice ಅನ್ನು "ಪಾತಾಳದಲ್ಲಿ ಪಾಪಚ್ಚಿ"ಯಾಗಿ ಪರಿವರ್ತಿಸಿ ಕೊಟ್ಟರು. ಮಕ್ಕಳಿಗಾಗಿ "ಕೆಂಪನ ನವರಾತ್ರಿ"ಯನ್ನು ಬರೆದರು. ವಿಕ್ಟರ್ ಹ್ಯುಗೋವಿನ "ಲೆ ಮಿಸರಬೆಲ್" ಅನ್ನು"ನೊಂದ ಜೀವಿಗಳು" ಎಂದು ಸಂಗ್ರಹಿಸಿ ಕೊಟ್ಟರು. SLBT ಅವರಿಗಾಗಿ ಇವರು ಬರೆದುಕೊಟ್ಟ "ಚೇರಮನ್ ಪೆರುಮಾಳ್" ಅನ್ನೂ ಇಲ್ಲಿ ನೆನೆಯಬಹುದು.

ಕಸ್ತೂರಿ ಮಲೆಯಾಳದಿಂದ ಬಂದು ಅಪ್ಪಟ ಮೈಸೂರಿನವರೇ ಆಗಿಹೋದರೂ ತಮ್ಮ ತಾಯ್ನುಡಿಯಾದ ಮಲೆಯಾಳವನ್ನು ಮರೆಯಲಿಲ್ಲ. ಅದಕ್ಕೆ ಸಾಕ್ಷಿಯಾಗಿ ಇವರು ಶ್ರೀ ತಕಳಿ ಶಿವಶಂಕರ ಪಿಳ್ಳೆಯವರ ಎರಡು ಸುಪ್ರಸಿದ್ಧ ಕಾದಂಬರಿಗಳನ್ನು "ಕೆಂಪು ಮೀನು" ಮತ್ತು"ಎರಡು ಬಳ್ಳ" ಎಂಬ ಹೆಸರಿನಿಂದ ಕನ್ನಡಿಸಿಕೊಟ್ಟಿದ್ದಾರೆ.

ಕಸ್ತೂರಿಯವರಿಗೆ ಈಗ ೭೭ ಮುಗಿದು ೭೮. ಸುಮಾರು ೨೨ ವರ್ಷಗಳಿಂದ ಇವರು, ಪುಟ್ಟಪರ್ತಿಯ ಶ್ರೀ ಸತ್ಯಸಾಯಿ ಬಾಬಾ ಅವರ ಪರಿಚರ್ಯೆ ಮಾಡುತ್ತಿದ್ದಾರೆ. ತೆಲುಗಿನಲ್ಲೂ ಇಂಗ್ಲೀಷಿನಲ್ಲೂ ಪ್ರಕಟವಾಗುತ್ತಿರುವ "ಸನಾತನ ಸಾರಥಿ"ಯ ಸಂಪಾದಕರಾಗಿದ್ದಾರೆ.

"ಸತ್ಯಂ ಶಿವಂ ಸುಂದರಂ" (ಬಾಬಾ ಅವರ ಜೀವನ ಚರಿತ್ರೆ) ಮೂರು ಸಂಪುಟಗಳು; "ಸತ್ಯಸಾಯಿ ಸ್ಪೀಕ್ಸ್" (ಬಾಬಾ ಅವರ ದಿವ್ಯೋಪದೇಶಗಳು) ಏಳು ಸಂಪುಟಗಳು; ಗೀತಾ ವಾಹಿನಿ, ಭಾಗವತವಾಹಿನಿ, ಸಂದೇಹನಿವಾರಿಣಿ, ಉಪನಿಷದ್‌ವಾಹಿನಿ. ಪ್ರಶಾಂತಿವಾಹಿನಿ, ಧರ್ಮವಾಹಿನಿ, ಧ್ಯಾನವಾಹಿನಿ, ಪ್ರೇಮವಾಹಿನಿ, ಜ್ಞಾನವಾಹಿನಿ (ಬಾಬಾ ಅವರು ತೆಲುಗಿನಲ್ಲಿ ಬರೆದದ್ದರ ಇಂಗ್ಲಿಷ್ ಅನುವಾದ); "ಸಾರಥಿ"ಯಲ್ಲಿ ಈಗ ಕ್ರಮಶಃ ಪ್ರಕಟವಾಗುತ್ತಿರುವ "ಶ್ರೀ ರಾಮಕಥಾ ರಸವಾಹಿನಿ—ಇವು ಕಸ್ತೂರಿಯವರ ಈಗಿನ ಸಾಹಿತ್ಯ ಚಟುವಟಿಕೆಗಳು, ಸಾವಿರಗಟ್ಟಲೆ ಪುಟಗಳಾಗುತ್ತವೆ.

ಕಸ್ತೂರಿ ಕನ್ನಡಕ್ಕೆ ಆಗಮಿಸಿ ೫೦ ವರ್ಷಗಳ ಮೇಲಾದುವು. ಮೊದಲಿನ ೨೫ ವರ್ಷಗಳಲ್ಲಿ ಕನ್ನಡದ ಮೂಲಕವಾಗಿ ಇವರು ಮಾಡಿದ್ದು "ಸರೋವರ"ದ ಸೇವೆ; ಅನಂತರದ ೨೫ ವರ್ಷಗಳಲ್ಲಿ ಇಂಗ್ಲಿಷಿನ ಮೂಲಕವಾಗಿ ಇವರು ಮಾಡುತ್ತಿರುವುದು "ಸಮುದ್ರ"ದ ಸೇವೆ.

ಇಂಥ ಕಸ್ತೂರಿಯನ್ನು ನಾವು ಕನ್ನಡಿಗರು ಮರೆತುಬಿಟ್ಟರೆ— ಕಸ್ತೂರಿಯನ್ನು ಮರೆತುಬಿಟ್ಟೆವೆಂದಲ್ಲ; ಕೃತಜ್ಞತೆಯೆಂಬ ಗುಣ ವನ್ನು ಮರೆತುಬಿಟ್ಟಂತೆ.

* * *

ಈ ಲೇಖನ ಪ್ರಕಟವಾದ ಕೂಡಲೆ, ಪತ್ರಿಕೆಗಳಲ್ಲಿ ಒಂದು ಸಣ್ಣ "Storm in a tea-cup" ಆರಂಭವಾಯಿತು. ಯಾಕಂತೆ? "ಕನ್ನಡದ ಮೂಲಕ ಮಾಡಿದ್ದು ಸರೋವರದ ಸೇವೆ, ಇಂಗ್ಲಿಷಿನ ಮೂಲಕ ಮಾಡಿದ್ದು ಸಮುದ್ರದ ಸೇವೆ" ಎಂದದ್ದಕ್ಕೆ. ಕನ್ನಡದ

ಬಗ್ಗೆ ನಾವು Sensitive ಆಗಿರಬೇಕು, ನಿಜ. ಆದರೆ touchy ಆಗಿರಬಾರದು. Sense of proportion ಕಳಕೋಬಾರದು. ಕನ್ನಡದಲ್ಲಿ ಬಂದ ಅತ್ಯುತ್ತಮ ಕೃತಿಗಳನ್ನು ಕನ್ನಡದವರೇ ಓದದೇ ಇರೋವಾಗ, ಇದನ್ನ "ಸರೋವರದ ಸೇವೆ" ಅನ್ನೋದೇ ಅತಿಶಯೋಕ್ತಿ. ಯಾಕೆಂದರೆ, ನಮ್ಮಲ್ಲಿ ಕೂಪಕೂರ್ಮಗಳಿಗೂ ಕೂಪಮಂಡೂಕಗಳಿಗೂ ಏನೂ ಕೊರತೆಯಿಲ್ಲ. ಭೀಮಸೇನನಂತೆ ಗದೆ ತಿರುಗಿಸುವ ಬಾಹುಬಲವನ್ನು ಬೆಳಸದೆ, ತೊಡೆಯಲ್ಲಿ ಹದಗಡಲೆ ಬಂದವನಂತೆ ಕಿಸುಗಾಲು ಮಾಡಿಕೊಂಡು ಅಡ್ಡಡ್ಡ ನಡೆದರೆ, ನಗುಪಾಟಲಾಗುತ್ತದೆ.

"ಎನಿತಂ ಒರಲ್ದು ಪೇಳ್ವ ಕವಿ ಏವನ್? ಅದನ್ ಪೆಸರಿಟ್ಟು ಮೆಚ್ಚ ಬಲ್ಲನನ್ ಅರಸಲ್ಕೆ ವೇಳ್ಪುದು. ಆತನ ಮುಖದಿಂದಂ ಅಲ್ಲದೆ ಅದು ಸಲ್ಲದು!" ಎಂದ, ನಮ್ಮ ಕವಿಚಕ್ರವರ್ತಿ ಜನ್ನ. ಬರೆಯುವವರು ಬೇಕಾದ ಹಾಗೆ ಬರೆಯಬಹುದು. ಆದರೆ ಬರೆದದ್ದನ್ನು ಸರಿಯಾಗಿ ಓದಿಕೊಳ್ಳುವವರಿಲ್ಲದೆ ಹೋದರೆ, ಬರೆದದ್ದನ್ನು "ಕೊಂಡು ಆಡು"ವವರಿಲ್ಲದಿದ್ದರೆ, ಆ ಭಾಷಾ ಸಾಹಿತ್ಯಗಳ ಬೆಳವಣಿಗೆ ಸೀಮಿತವಾಗುತ್ತದೆ. ಕನ್ನಡಕ್ಕೆ ಬಂದಿರು ವುದು ಬರೆಯುವವರ ಕೊರತೆಯಿಲ್ಲ; ಓದುವ ರಸಿಕರ ಕೊರತೆ, ಕೊಳ್ಳುವ ಉದಾರಿಗಳ ಕೊರತೆ.

ಸತ್ಯಂ ಶಿವಂ ಸುಂದರಂ

"ಸತ್ಯಂ ಶಿವಂ ಸುಂದರಂ" ಎಂಬುದು ಭಗವಾನ್ ಶ್ರೀ ಸತ್ಯ ಸಾಯಿ ಬಾಬಾ ಅವರ ದಿವ್ಯಜೀವನವನ್ನು ತಿಳಿಸಿಕೊಡುವ ಪುಸ್ತಕ. ಇದು ಮೂರು ಭಾಗಗಳಲ್ಲಿ ಇದೆ. ಇದನ್ನು ತಿಳಿಸಿಕೊಟ್ಟವರು ಶ್ರೀಮಾನ್ ನಾ. ಕಸ್ತೂರಿ. ಇದನ್ನು ಇವರು ಇಂಗ್ಲಿಷಿನಲ್ಲಿ ಬರೆದಿದ್ದಾರೆ.

೧೯೬೨ರ ಶರನ್ನವರಾತ್ರಿಯ ಹೊತ್ತಿಗೆ, "ಸತ್ಯಂ ಶಿವಂ ಸುಂದರಂ" ಗ್ರಂಥದ ಇಂಗ್ಲಿಷ್ ಮೂಲಕ್ಕೆ ಮೂರನೆಯ ಮುದ್ರಣ ವಾಯಿತು; ಅದೇ ವೇಳೆಗೆ ಅದರ ತೆಲುಗು ಭಾಷಾನುವಾದ ಎರಡನೇ ಮುದ್ರಣವಾಯಿತು; ಅದರ ತಮಿಳು ಭಾಷಾಂತರ ಎರಡನೇ ಮುದ್ರಣವಾಯಿತು.

ಒಂದು ದಿನ ಬಾಬಾ ಅವರು—"ಏನು? ಎಲ್ಲ ಭಾಷೆ ಗಳಲ್ಲೂ ಬರುತ್ತಾ ಇದೆ. ನೀನೇಕೆ ಕನ್ನಡದಲ್ಲಿ ಬರೆಯಬಾರದು?" ಎಂದು ಕೇಳಿ, ಕಸ್ತೂರಿಯವರನ್ನು ಆಶೀರ್ವದಿಸಿದರು. ಕಸ್ತೂರಿ ಯವರ ಕನ್ನಡ "ಸತ್ಯಂ ಶಿವಂ ಸುಂದರಂ" ಹೀಗೆ ೧೯೬೪ರಲ್ಲಿ ಪ್ರಕಟವಾಯಿತು. ಅಂದಿನಿಂದ ಇದು ಪುನರ್ಮುದ್ರಣಗಳನ್ನು ಕಾಣುತ್ತಲೇ ಇದೆ.

ಪಂಪ ತನ್ನ ಆದಿಪುರಾಣ, ವಿಕ್ರಮಾರ್ಜುನ ವಿಜಯಗಳು

ತನ್ನ "ಮುನ್ನಿನ ಕಬ್ಬಮನೆಲ್ಲಂ ಇಕ್ಕಿಮೆಟ್ಟಿದುವು" ಎಂದು ಹೇಳಿದ್ದಾನೆ. ಹಾಗೆಯೇ ಕಸ್ತೂರಿಯವರ "ಸತ್ಯಂ ಶಿವಂ ಸುಂದರಂ" ಕನ್ನಡದಲ್ಲಿ ಪ್ರಕಟವಾದ ಮೇಲೆ ಅವರು ಹಿಂದೆ ಕನ್ನಡದಲ್ಲಿ ನಮಗೆ ಕೊಟ್ಟ ಹಾಸ್ಯದ ವಿವಿಧ ಫಲಗಳನ್ನು ಶ್ರೀಸಾಮಾನ್ಯರು ಮರೆತುಬಿಟ್ಟಿದ್ದಾರೆ. ತಿಳಿದವರಲ್ಲಿಯೂ ಒಬ್ಬಿಬ್ಬರು ಅವರನ್ನು "ಮಾಜಿ ಹಾಸ್ಯ ಸಾಹಿತಿ" ಎಂದು ಕರೆಯುವುದಕ್ಕೂ ಹೇಸುತ್ತಿಲ್ಲ. ಆದರೆ ಹಾಸ್ಯದಂತೆ ಸಮಗ್ರಸಾಹಿತ್ಯಸಾಮ್ರಾಜ್ಯವೂ "ಕಿರೀಟಪತಿಗಳ ರಾಜ್ಯವಿದಲ್ಲ" ಎಂಬುದನ್ನು ಈ ಬಡವುಗಳು ಅರಿಯವು. ಇದೇನು ಸ್ವಾತಂತ್ರ್ಯೋತ್ತರ ಕಾಲದ ಅನರ್ಥರಾಜಕೀಯ ಕೆಟ್ಟುಹೋಯಿತೇನು?—ತಮಗೆ ಬೇಡವಾದವರನ್ನು ಬೇಕಾದ ಹಾಗೆ De-recognise ಮಾಡುವುದಕ್ಕೆ? ಸಾಹಿತ್ಯದ ಸಿಂಹಾಸನವನ್ನು ಹತ್ತಿದವರು ಸಿಂಹಗಳು ಎಂಬುದನ್ನು "ಏನ್ ಬಲ್ಲರ್ ಈ ನಮ್ಮ ಸುಖಪುರುಷರ್? ಈ ಕ್ಷುದ್ರದೇವತೆಗಳ್!" ಸಿಂಹತ್ವವೆಂಬುದು ಸ್ವಯಾರ್ಜಿತವಾದ ಅಕ್ಷಯ ಸಂಪತ್ತು. ಇದು "ತೋಳಬಲ"ದಿಂದ ಬರತಕ್ಕಂಥದೂ ಅಲ್ಲ, "ತೋಳಬಲ"ದಿಂದ ಹೋಗತಕ್ಕಂಥದೂ ಅಲ್ಲ.

ನಾಭಿಷೇಕೋ ನ ಸಂಸ್ಕಾರೋ
ಸಿಂಹಸ್ಯ ಕ್ರಿಯತೇ ಮೃಗೈಃ
ವಿಕ್ರಮಾರ್ಜಿತವಿತ್ತಸ್ಯ
ಸ್ವಯಂಮೇವ ಮೃಗೇಂದ್ರತಾ

ಕಸ್ತೂರಿ ಹೀಗೆ ಕನ್ನಡಿಗರ ಹೃದಯದಲ್ಲಿ ತಮ್ಮ ಸ್ಥಾನವನ್ನು ತಾವು ಸ್ವಂತ ಪ್ರಯತ್ನದಿಂದ ಸಂಪಾದಿಸಿಕೊಂಡಿದ್ದಾರೆ. ದೇವರು ಕೊಟ್ಟಿದ್ದನ್ನು ಮೂಲ ಬಂಡವಾಗಿಟ್ಟುಕೊಂಡು, ಸ್ವಂತ

ಉದ್ಯಮದಿಂದ ಅದನ್ನು ಊರ್ಜಿತಪಡಿಸಿಕೊಂಡವರಿಗೆ ಯಾರಿಂದಲೂ ಯಾವಾಗಲೂ ಎಲ್ಲಿಯೂ ಹಾನಿಯಿಲ್ಲ.

ಕನ್ನಡ "ಸತ್ಯಂ ಶಿವಂ ಸುಂದರಂ"ನ ಮುನ್ನುಡಿಯಲ್ಲಿ ಕಸ್ತೂರಿ ಹೀಗೆ ಹೇಳುತ್ತಾರೆ:

"ಹತ್ತೊಂಬತ್ತನೆಯ ಶತಮಾನ ಕಳೆದು ಇಪ್ಪತ್ತನೆಯದು ಬರಲು ಇನ್ನೂ ಮೂರು ಸಂವತ್ಸರಗಳೂ ಒಂದು ವಾರವೂ ಇದೆ ಎನ್ನುವಾಗ, ನಾನು ಉತ್ತರ ತಿರುವಾಂಕೂರಿಗೆ ಸೇರಿದ ಒಂದು ಸಣ್ಣ ಗ್ರಾಮದಲ್ಲಿ ಜನಿಸಿದೆ. ನನ್ನ ವಿದ್ಯಾಭ್ಯಾಸ ಕೊಚ್ಚಿನ್ ಸಂಸ್ಥಾನದಲ್ಲಿ ಜರುಗಿತು; ನನ್ನ ಶಾಲೆಯ ಮುಖ್ಯೋಪಾಧ್ಯಾಯರು ಸಾಕ್ಷಾತ್ತಾಗಿ ಸ್ವಾಮಿ ವಿವೇಕಾನಂದರನ್ನು ಕಂಡು ಮಾತನಾಡಿ ಸ್ಫೂರ್ತಿಗೊಂಡಿದ್ದರು. ಆದ್ದರಿಂದ ಅವರು ನಮ್ಮ ಪುಟ್ಟಹೃದಯಗಳಲ್ಲಿ ಪ್ರಾರ್ಥನೆಯ ಹಣತೆಯನ್ನಿರಿಸಿ, ಶ್ರದ್ಧಾತೈಲದಿಂದ ಅದನ್ನು ಬೆಳಗಿಸಿರೆಂದು ಬೋಧಿಸಿದರು. ತಿರುವನಂತಪುರಂ ಮಹಾರಾಜಾ ಕಾಲೇಜಿನಲ್ಲಿ ಓದಿ ಎಂ.ಎ., ಪದವಿಯನ್ನೂ ಅಲ್ಲಿಯ ಲಾ ಕಾಲೇಜಿನಲ್ಲಿ ವ್ಯಾಸಂಗಮಾಡಿ ಬಿ.ಎಲ್. ಪದವಿಯನ್ನೂ ಪಡೆದೆ. ೧೯೨೮ರಲ್ಲಿ ನನಗೆ ಮೈಸೂರು ನಗರದ ಕಾಲೇಜೊಂದರಲ್ಲಿ "ಲೆಕ್ಚರರ್"ಹುದ್ದೆ ದೊರೆಯಿತು.

"ನಾನು ೧೭ ಸಂವತ್ಸರಗಳ ಕಾಲ ಮೈಸೂರು ನಗರದ ಶ್ರೀ ರಾಮಕೃಷ್ಣಾಶ್ರಮದ ಕಾರ್ಯದರ್ಶಿಯಾಗಿದ್ದೆ; ಸಿದ್ಧಾರೂಢ ಸ್ವಾಮಿ, ರಮಣ ಮಹರ್ಷಿ, ನಾರಾಯಣ ಗುರು ಮೊದಲಾದ ಮಹಾತ್ಮರನ್ನು ಸಂದರ್ಶಿಸಿ ಅವರ ವಾಗಮೃತವನ್ನು ಪಾನ ಮಾಡುವ ಪುಣ್ಯ ನನಗೆ ಲಭಿಸಿದೆ; ಶ್ರೀ ರಾಮಕೃಷ್ಣ ಪರಮಹಂಸದ

ಖಾಸಾ ಶಿಷ್ಯರಲ್ಲೊಬ್ಬರೂ ಮಹಾತಪಸ್ವಿಗಳೂ ಆದ ಶ್ರೀ ಮಹಾಪುರುಷ್‌ಜಿ ಅವರಿಂದ ಮಂತ್ರದೀಕ್ಷೆ ಹೊಂದುವ ಮಹಾಭಾಗ್ಯ ಪೂರ್ವಜನ್ಮಸುಕೃತದಿಂದ ನನಗೆ ಲಭ್ಯವಾಗಿದೆ; ಈ ಎಲ್ಲದರ ಫಲದಿಂದಲೇ ನನಗೆ ೧೯೪೮ರಿಂದಲೂ ಸತ್ಯಸಾಯಿಬಾಬಾ ದೊರಕಿರುವುದು ಎಂದು ನಾನು ಧೈರ್ಯವಾಗಿ ಹೇಳಬಲ್ಲೆ".

ಕಸ್ತೂರಿ ಅವರು ಹುಟ್ಟಿದ್ದು, ಬೆಳೆದದ್ದು, ವಿದ್ಯೆ ಪಡೆದದ್ದು ಕೇರಳದಲ್ಲಿ. ಉದ್ಯೋಗ ನಡಸಿ ಬದುಕಿದ್ದು ಕನ್ನಡ ದೇಶದಲ್ಲಿ. ಬಿಟ್ಟು ಬಂದ ಮಲೆಯಾಳವನ್ನು ಮರೆಯದೆ, ಕಟ್ಟಿಕೊಂಡ ಕನ್ನಡದಲ್ಲಿ ಕರಗಿ, ಎರಡೂ ಭಾಷಾಸಾಹಿತ್ಯ ಸಂಸ್ಕೃತಿಗಳಿಂದ ದಷ್ಟ ಪುಷ್ಟರಾಗಿ, ಶ್ರೀ ಬಾಬಾ ಅವರ ಕೃಪೆಗೆ ಪಾತ್ರರಾದರು. ಈಗ ಅವರು ಇರುವುದು ಆಂಧ್ರಪ್ರದೇಶದ ಪ್ರಶಾಂತಿನಿಲಯದಲ್ಲಿಯಾದರೂ ಅವರು ಮಾಡುತ್ತಿರುವ ಎಲ್ಲ ಕೆಲಸವೂ "ಜಗದ್ಧಿತಾಯ". "ಯದ್ಯದ್‌ಕರ್ಮ ಕರೋಮಿ ತತ್ತದಖಿಲಂ ಸಾಯೀ ತವಾರಾಧನಮ್" ಎಂದುಕೊಂಡು ಕೃತ ಕೃತ್ಯರಾಗುತ್ತಿದ್ದಾರೆ.

೧೯೬೭ರಲ್ಲಿ "ಸತ್ಯಂ ಶಿವಂ ಸುಂದರಂ"ದ ಆರನೆಯ ಮುದ್ರಣ ಆದಾಗ "ಕನ್ನಡಿಗರ ಮನ, ಕನ್ನಡಿಗರ ಮನೆಗಳು, ಜಗದ ಒಳಗು ಹೊರಗುಗಳನ್ನರಿತು ಸುಖಶಾಂತಿಗಳಿಂದ ಬಾಳಬೇಕೆಂಬುದು ನಮ್ಮೆಲ್ಲರ ಹಂಬಲ. ಆ ಹಂಬಲವೀಡೇರಲು ಬಾಬಾರವರ ಆಶಿಸ್ಸಿನ ಬಲದಿಂದ ಈ ಗ್ರಂಥದ ಪಠಣ ಸಹಕಾರಿಯಾಗಲಿ" ಎಂದರು.

ಕನ್ನಡದ ಕ್ಷೇಮಚಿಂತನೆಯನ್ನು ಮರೆಯದಿರುವ ಈ "ಕನ್ನಡದ ಕಸ್ತೂರಿ" ತಮ್ಮ ಕನ್ನಡ "ಸತ್ಯಂ ಶಿವಂ ಸುಂದರಂ"ದ

೧೯೭೦ನೇ ಆವೃತ್ತಿಯಲ್ಲಿ ಹೇಳಿರುವ ಮಾತುಗಳು ಮನನೀಯವಾದವು:-

"ಕೇರಳದಲ್ಲಿ ಹುಟ್ಟಿ ಬೆಳೆದ ನನ್ನನ್ನು ಕನ್ನಡನಾಡು ಕರೆದು ಉಣಬಡಿಸಿ, ಉತ್ಸಾಹ ತುಂಬಿ, ಗೆಳೆಯ ಬಳಗವನ್ನೊದಗಿಸಿ, ಯುವಕವೃಂದದ ಸೇವೆಗವಕಾಶವಿತ್ತು, ಗುರುಪೀಠವನ್ನು ತೋರಿಸಿ, ಕೈಂಕರ್ಯಗಳಿಗೆ ನೆರವಾಗಿ, ಒಳಿತನ್ನಾಡಿಸಿ ಮಾಡಿಸಿ, ಹೆಸರನ್ನು ಹಸುರಾಗಿಸಿ, ನನ್ನ ಬಾಳನ್ನು ಪ್ರಶಾಂತಿನಿಲಯದೆಡೆ ಸಾಗುವ ಸುಗಮಪ್ರಯಾಣವಾಗಿ ಪರವರ್ತಿಸಿದೆ. ಉಪಾಧ್ಯಾಯನಾಗಿ, ಕಾಲೇಜು ಸೂಪರಿಂಟೆಂಡೆಂಟಾಗಿ, ನಟನಾಗಿ, ಹರಿದಾಸನಾಗಿ, ಶ್ರೀ ರಾಮ ಕೃಷ್ಣಾಶ್ರಮದ ಕಾರ್ಯದರ್ಶಿಯಾಗಿ, ವಿಶ್ವವಿದ್ಯಾನಿಲಯದ ಅಧ್ಯಾಪಕ ಸಂಘದ ಕಾರ್ಯದರ್ಶಿಯಾಗಿ, ಮಹಾರಾಜಾ ಕಾಲೇಜ್ ವಿದ್ಯಾರ್ಥಿ ಸಂಘದ ಕಾರ್ಯದರ್ಶಿಯಾಗಿ, ಆಕಾಶವಾಣಿಯ ಸಹಾಯಕ ಸಂಚಾಲಕನಾಗಿ, ಪ್ರೊಡ್ಯೂಸರಾಗಿ, ವಯಸ್ಕರ ಶಿಕ್ಷಣ ಸಂಘದ ಕಾಯನಿರ್ವಾಹಕರಲ್ಲೊಬ್ಬನಾಗಿ, "ಕೊರವಂಜಿ"ಯ ಲೇಕಕವೃಂದದಲ್ಲೊಬ್ಬನಾಗಿ, ಕನ್ನಡ ಜನತೆಯ ಸೇವೆ ಸಲ್ಲಿಸಲು ಕನ್ನಡತಾಯಿ ನನ್ನನ್ನು ಅಕ್ಕರೆಯಿಂದ ಆಶೀರ್ವದಿಸಿದ್ದಾಳೆ.

"ಈ ಋಣವನ್ನು ನಾನು ಹೇಗೆ ತೀರಿಸಬಲ್ಲೆ? ಎಂದು ತೀರಿಸಬಲ್ಲೆ? ಇಗೋ! ಈ ಗ್ರಂಥದಿಂದಲೇ ತೀರಿಸುತ್ತೇನೆ. ಹೊನ್ನಿಂದ ತೀರದು, ಈ ಹೂವಿಂದ ತೀರುತ್ತದೆ.

"ಸರ್ವದೇವತಾಸ್ವರೂಪರೂ, ಸರ್ವಜ್ಞರೂ, ಸರ್ವಶಕ್ತರೂ, ಸಹಜಕರುಣಾ ಮೂರ್ತಿಯೂ ಆದ ಭಗವಾನ್ ಶ್ರೀ ಸತ್ಯ ಸಾಯಿ ಬಾಬಾರವರ ಈ ದಿವ್ಯ ಚರಿತ್ರೆಯನ್ನು ಕನ್ನಡಿಗರ ಕೈಯಲ್ಲಿರಿಸಿ

ಋಣಮುಕ್ತನಾಗಿರುವೆನು.

"ಅವರ ಪಾದಸನ್ನಿಧಿಯಲ್ಲಿ ೨೨ ಸಂವತ್ಸರಗಳಿಂದಲೂ ನಾನು ಪಡೆಯುತ್ತಿರುವ ಮಹದಾನಂದವನ್ನೂ ಶಾಂತಿಸಮಾಧಾನ ಗಳನ್ನೂ ಧೈರ್ಯಸ್ಥೈರ್ಯಗಳನ್ನೂ ಕನ್ನಡಿಗರೆಲ್ಲರೂ ಪಡೆದು ನಲಿಯಲಿ ಎಂಬ ಕೃಪಾಪೂರಿತ ಸಂಕಲ್ಪದಿಂದಲೇ ಇರಬೇಕು, ಬಾಬಾ ಅವರು ನನ್ನ ಅಂತರಂಗದಲ್ಲಿ ಈ ಗ್ರಂಥ ರಚನೆಯ ಪ್ರೇರಣೆಯನ್ನಂಕುರಿಸಿದ್ದು. ಚಿತ್ರ ಅವರದು, ಹಸ್ತ ನನ್ನದು, ಅಷ್ಟೆ. 'ಬನ್ನಿ, ಅವಲೋಕಿಸಿ, ಆಲಿಸಿ, ಪರೀಕ್ಷಿಸಿ, ನಂಬಿ, ಆನಂದಿಸಿ, ಅನುಸರಿಸಿ' ಎಂಬುದೇ ಬಾಬಾ ಅವರ ಕರೆ! ಆ ಕರೆಗೆ ಓಗೊಟ್ಟವರು ಧನ್ಯರು".

◆ ಹಾಸ್ಯದ ಗುತ್ತಿಗೆ ◆

ಹಾಸ್ಯ ಎನ್ನುವುದು ಮನುಷ್ಯಜಾತಿಗೆ ಮೀಸಲಾಗಿದ್ದರೂ, ಅದು ಯಾರೊಬ್ಬರದೂ ಗುತ್ತಿಗೆಯಲ್ಲ. ನಗುವುದೂ ನಗಿಸುವುದೂ ಪ್ರತಿಯೊಬ್ಬರಿಗೂ ಹುಟ್ಟುಗುಣ. ಕೆಲವರಿಗೆ ದೈವದತ್ತವಾಗಿ ಇದು ಹೆಚ್ಚಾಗಿರುತ್ತದೆ; ಕೆಲವರು ದೈವ ಕೊಟ್ಟದ್ದನ್ನು ಕೃಷಿಮಾಡಿ ಹೆಚ್ಚಿಸಿಕೊಳ್ಳುತ್ತಾರೆ; ಇನ್ನು ಕೆಲವರು, ದೈವ ಕೊಟ್ಟದ್ದನ್ನು ಕಾಪಾಡಿಕೊಳ್ಳಲಾರದೆ ಅದನ್ನು ಕಳೆದುಕೊಳ್ಳುತ್ತಾರೆ; ಮತ್ತೆ ಕೆಲವರು, ತಾವು ಹೇಳಿದ್ದೆಲ್ಲ ಹಾಸ್ಯವಾಗುತ್ತದೆ ಎಂಬ ಭ್ರಮೆಯಿಂದ ಹಾಸ್ಯಾಸ್ಪದರಾಗುತ್ತಾರೆ.

ಬರೀ ಹಾಸ್ಯಕ್ಕೇ ತಲೆಮಾಡಿಸಿಕೊಂಡು ಕೂತವರು ಇದ್ದಾರೆ—ಹಸಿ ಮೆಣಸಿನಕಾಯಿ, ಕೊತ್ತುಂಬರಿ ಸೊಪ್ಪು, ಕರಿಬೇವಿನ ಸೊಪ್ಪುಗಳನ್ನು ಮಾತ್ರ ಬೆಳೆದು, ಮಾರುವವರ ಹಾಗೆ. ಇನ್ನೂ ಕೆಲವರಿದ್ದಾರೆ—ವಿಧವಿಧವಾದ ಸೊಪ್ಪುಗಳ ಜೊತೆಗೆ ವಿಧವಿಧವಾದ ತರಕಾರಿಗಳನ್ನೂ ತರಹವಾರಿಯಾದ ಹೂವು ಹಣ್ಣುಗಳನ್ನೂ ಬೆಳೆಯುತ್ತಾರೆ, ಮಾರುತ್ತಾರೆ. ಇವರನ್ನು ಕಂಡು ಅವರಿಗೆ ಹೊಟ್ಟೆಯುರಿ ಏಕೆ? ಅವರನ್ನು ಕಂಡು ಇವರಿಗೆ ತಿರಸ್ಕಾರ ಏಕೆ? ದೇವರು ಯಾರ ಕೈಯಳತೆಯಲ್ಲಿ ಏನು ಹಾಕುತ್ತಾನೋ, ಎಷ್ಟು ಹಾಕುತ್ತಾನೋ ಅದನ್ನು ಗಮನಿಸಿ, ತನ್ನ ಪಾಲಿನ ಪಂಚಾಮೃತವನ್ನು ಸವಿಯಬೇಕೇ ಹೊರತು ಸಕ್ಕರೆಗೆ

ಉಪ್ಪನ್ನು ಬೆರಸಿಕೊಳ್ಳಬಾರದು.

ಸಾಹಿತ್ಯದ ರಸಗಳಲ್ಲಿ ಎಲ್ಲ ರುಚಿಗಳಿಗೂ ಅವಕಾಶವಿದೆ. ಒಂದು ವಿಧವಾದ ಅಡುಗೆಯಲ್ಲಿ ವಿಶೇಷ ಪರಿಣತಿ ಸಾಧಿಸಿಕೊಳ್ಳಬೇಕಾದ್ದು ನ್ಯಾಯ. ಆದರೂ, ಇತರ ಅಡುಗೆಗಳಲ್ಲಿ ದಿನಮಟ್ಟದ, ಮನೆಯ ಮಟ್ಟಿಗೆ ಸಾಕಾಗುವ ಇತರ ಅಡುಗೆಗಳನ್ನೂ ಕಲಿತರೆ ಯಾರು ಬೇಡವೆನ್ನುತ್ತಾರೆ? ಹೊಟ್ಟೆಯ ಅಡುಗೆಯನ್ನು ತಯಾರಿಸುವ ಒಲೆಗೆ ಉರಿ ಇಲ್ಲದಿದ್ದರೆ ಆಗುವುದಿಲ್ಲ. ಆದರೆ ಸಾಹಿತ್ಯದ ಅಡುಗೆಗೆ ಉರಿ ಅಲ್ಲ ಬೇಕಾದದ್ದು; ಬೇಕಾದದ್ದು ಕಾವು. ಕಾವು ಇದ್ದರೇನೇ ಮಾತು ಕಾವ್ಯವಾಗುವುದು.

ನನ್ನ ಸ್ನೇಹಿತರೊಬ್ಬರು 'ಸುಹಾಸ'ವೆಂಬ ಒಂದು ಸಾವಿರ ಪುಟಗಳಷ್ಟು ಹಾಸ್ಯಲೇಖನಗಳ ಸಂಗ್ರಹವನ್ನು ಪ್ರಕಟಿಸುವ ಸಾಹಸವನ್ನು ಮಾಡಿದ್ದಾರೆ. ಇದು ಸಹಸಾ ಮಾಡಿದ್ದಲ್ಲ; ಸುಮಾರು ಐದಾರು ವರ್ಷಗಳ ಸಂತತವಾದ ಪರಿಶ್ರಮದ ಫಲವಾಗಿ. ಪುಸ್ತಕದ ಅಚ್ಚು ಇನ್ನೇನು ಮುಗಿಯುತ್ತಿದೆ. ಪಂಪನ ಕಾಲದಿಂದ ಹಿಡಿದು ಇವೊತ್ತಿನವರೆಗೂ ಪ್ರಕಟವಾಗಿರುವ ಪುಸ್ತಕಗಳಲ್ಲಿ ಸ್ಥಾಲೀಪುಲಾಕ ನ್ಯಾಯದಿಂದ ಖಂಡಗಳನ್ನು ಆಯ್ದು ಗೊಂಚಲು ಮಾಡಿದ್ದಾರೆ. ಹೀಗಾಗಿ-ಇದರಲ್ಲಿ Good, bad, indifferent ಎಲ್ಲದರ ಪ್ರಾತಿನಿಧ್ಯವಿರುವ ಸಂಭವವುಂಟು. ಇರಲಿ. ಸಾಹಿತ್ಯದಲ್ಲಿ—ಅದರಲ್ಲೂ ಹಾಸ್ಯದಲ್ಲಿ—ಸಣ್ಣದಕ್ಕೂ ಅದರ ಸ್ಥಾನವಿದೆ. ದೊಡ್ಡದಕ್ಕೂ ಅದರ ಸ್ಥಾನವಿದೆ. ಇದನ್ನು ತಿಳಿಯದವನಿಗೆ ಹಾಸ್ಯದ ಹೃದಯ ಗೊತ್ತಿಲ್ಲ.

"ಕರ್ಣಾಟಕ ಪ್ರಹಸನಪ್ರಪಿತಾಮಹ" ನೆನಿಸಿಕೊಂಡ ಕೈಲಾಸಂ

ಒಂದು ಮಾತನ್ನು ಹೇಳಿದ್ದಾರೆ;"Error in judgement ಪರವಾ ಇಲ್ಲ, ಹೇಗಾದರೂ ತಡಕೋಬಹುದು; Error in taste ಮಾತ್ರ ಆಗಬಾರದು, ಮಗೂ, ಆಗಬಾರದು". ಅದು ಆಗಿಬಿಟ್ಟರೆ ಹಾಸ್ಯ ವಾಗಬೇಕಾದದ್ದು ಹೇಸಿಗೆಯಾಗಿಹೋಗುತ್ತದೆ.

ಹಾಸ್ಯದಲ್ಲಿಯೂ ಉತ್ತಮ, ಅಧಮ, ಮಧ್ಯಮ ಉಂಟು. ನಮ್ಮವರು ಅಧಮಹಾಸ್ಯಕ್ಕೆ ಕೊಡುವ ಒಂದು ಉದಾಹರಣೆ ಯೊಂದಿಗೆ ಈ ಪತ್ರವನ್ನು ಮುಗಿಸುತ್ತೇನೆ.

ಕುಳ್ಳಿರ್ದುಂ ಕುಳಿರ್ವ ಮೆಳೆಯೊಳ್
ಪಳ್ಳದ ಕೇದಗೆಗೆ ಪಾಯ್ದು ಪತ್ತಿದ ಕೆಯ್ಯಂ
ಮುಳ್ಳುರ್ಚೆ ತೆರೆದು ಪಲ್ಲಂ
ಘೊಳ್ಳನೆ ನಗಿಸಿದುದು ಕಟಕಮಂ ಮರ್ಕಟಕಂ

ಕೋತಿ ನಕ್ಕದ್ದು "ಹಲ್ಲುಕಿರಿತ"; ಅದನ್ನು ನೋಡಿ ಸೈನಿಕರಿಗೆ ಉಂಟಾದ ನಗು—"horse-laugh!" ಇವೂ ನಗೆಯ ಪ್ರಕಾರ ಗಳೇ. ಇವುಗಳಿಗೂ ತಕ್ಕ ಸ್ಥಾನ ಉಂಟು. ಬಾಗಿಲಿನ ಹಿಂದುಗಡೆ ಚಪ್ಪಲಿಗಳಿಗೆ ಇರುವ ಹಾಗೆ!

ಶವಸ್ಥಾನ

"ಸನಾತನ ಧರ್ಮ"ವನ್ನು "ಸತ್ತಾತನ ಧರ್ಮ"ವೆನ್ನುವುದೂ, "ಸತ್ಸಂಗ"ವನ್ನು "ಸತ್ತ ಸಂಗ"ವೆನ್ನುವುದೂ, "ಹರಿನಾಮಾಮೃತ" ವನ್ನು "ಮೃತ ಹರಿನಾಮ"ವೆನ್ನುವುದೂ ಉತ್ತಮ ಹಾಸ್ಯಕ್ಕೆ ಉದಾಹರಣೆಗಳಲ್ಲ. Thinker ಎಂಬುದನ್ನು Tinker ಎಂದರೆ ಹೇಗೋ ಹಾಗೆ, ಭೀಮಸೇನನನ್ನು 'ಭೀಮಶೇಣ' ಎಂದಾಗಲಿ 'ಭೀಮಶ್ಯೇನ' ಎಂದಾಗಲಿ ಕರೆದರೆ ಹೇಗೋ ಹಾಗೆ—cheap and Vulgar.

ಸೇದೋದೂ ಕುಡಿಯೋದೂ—fashion ಅಂತ ಆರಂಭ ಆದದ್ದು ಹೇಗೆ passion ಆಗಿ ಪರಿಣಮಿಸುತ್ತದೋ-Verbal jokes ಕೂಡ ಹಾಗೇ ಒಂದು ಕೆಟ್ಟ ಚಟ ಆಗಿಬಿಡುತ್ತೆ. ಇದು ನಾಲಿಗೆ ಮೇಲಿನ ಕಜ್ಜಿ ಇದ್ದ ಹಾಗೆ, ನಿತ್ಯನವೆ.

ಮನಸ್ಸಿನಲ್ಲಿ ಇಂಥದನ್ನ ತುಂಬಿಕೊಂಡು, ಬಾಯಿಂದಲೂ ಬರಹಗಳಿಂದಲೂ ಇಂಥ ಜೊಲ್ಲು ಸುರಿಸುವವರು "ಶವ"ಗಳಿಗೆ ಅವಾಸಸ್ಥಾನವಾಗುತ್ತಾರೆಯೇ ಹೊರತು "ಶಿವ"ಗಳಿಗೂ ಇವರಿಗೂ ದೂರ.

ಈ ಸಂದರ್ಭದಲ್ಲಿ. ಕೈಲಾಸಂ ಅವರ "ನಂ ಕಂಪ್ನಿ"ಯಲ್ಲಿ ರಾಜನು ಕಾಡಿಗೆ ಹೋಗುವಾಗ ಮಂತ್ರಿಗಳು ಹಾಡುವ "ಬುಡು

ಬುಡು ಬುಡು ಭೀಪನೆ" ಎಂಬ ಹಾಡನ್ನು ಜ್ಞಾಪಿಸಿಕೊಳ್ಳಿ. ಭೂಪರು ಕಾಡಿಗೆ ಹೋಗುವುದನ್ನು ಕಂಡಾಗ ಯಾರಿಗಾದರೂ ನಾಲಿಗೆ ಹೊರಳಿ ಸ್ವರ ವರ್ಣ ವಿಧಿ ವಿಪರ್ಯಾಸವಾಗುವುದು ಸಹಜ.

ಒಬ್ಬರು. ಇನ್ನೊಬ್ಬರನ್ನು ಸಣ್ಣವರು ಅನ್ನುವುದು ದೊಡ್ಡ ತನದ ಲಕ್ಷಣವಲ್ಲ. ಸಣ್ಣವರಲ್ಲಿಯೂ ಇರಬಹುದಾದ ದೊಡ್ಡತನ ವನ್ನು ಕಾಣುವುದು, ಅದೇ ನಿಜವಾದ ದೊಡ್ಡತನದ ಲಕ್ಷಣ.

◆ ಸುಮಂಗಲಿಯ ಸುಖ ◆

ದೇವರನ್ನೂ ದೇವರ ಸನ್ನಿಧಿಯಲ್ಲಿ "ದರ್ಶನ—ಸ್ಪರ್ಶನ—ಸಂಭಾಷಣ" ಭಾಗ್ಯ ಪಡೆದವರನ್ನೂ ಪರಿಹಾಸ್ಯ ಮಾಡುವವರನ್ನು ನೋಡಿದರೆ ನಮ್ಮ ನಾಗತ್ತೆಯ ಜ್ಞಾಪಕವಾಗುತ್ತೆ:—

"ಟೊಳ್ಳುಗಟ್ಟಿ"ಯ ನಾಗತ್ತೆ ಗೊತ್ತಲ್ಲ. ನಿಮಗೆ? ಅತ್ತೆ ಭಾಗೀರಥಮ್ಮ ತನ್ನ ಸೊಸೇರಿಗೆ ಅರಿಸಿನ ಕುಂಕುಮ ಕೊಡುತಾ" ತಾಳೀಕಟ್ಕೊಂಡು ಸುಖವಾಗಿರ್ರಿ" ಅಂತ ಆಶೀರ್ವಾದ ಮಾಡಿದಾಗ, ಚಿಕ್ಕಂದಿನಲ್ಲೇ ಗಂಡನ್ನ ಕಳಕೊಂಡ ನಾಗತ್ತೆ—"ತಾಳಿಕಟ್ಕೊಂಡು ಸುಖವಾಗಿರ್ರಿ. ಅದೇನು ಸುಖವೋ ನಾನು ಬೇರೆ ಕಾಣೆ!" ಅಂತ ಸೊಸೇರ ಮೂತಿ ತಿವಿದದ್ದು ಜ್ಞಾಪಕ ಆಗುತ್ತಾ?

ಅವಳ ಹೊಟ್ಟೆಸಂಕಟ ಏನು ಅನ್ನೋದನ್ನ ಅರ್ಥಮಾಡಿಕೊಂಡವರು ನಮ್ಮ ಸಾತು ಸಾಯಿ ನರಸಮ್ಮ ಒಬ್ಬರೇ! ಅವರು ಮಗಳಿಗೆ ಏನು ಬುದ್ಧಿವಾದ ಹೇಳಿದರು, ನೋಡಿ—

"ಅಯ್ಯೋ ಪಾಪ! ಕೈ ಹಿಡಿದವನನ್ನೂ ಕಳಕೊಂಡು, ತನ್ನ ಹಣೆಯಲ್ಲಿ ಬರೆಯದ ಸಂಸಾರದ ಸುಖಾನ ಸುತ್ತಮುತ್ತಲೂ ಇರೋರು ಅನುಭವಿಸೋದೂ... ತನಗೆ ಮಕ್ಕಳಿಲ್ಲದ್ದಲ್ಲದೆ, ಇತರರು ಮಕ್ಕಳನ್ನ ಹೆತ್ತು ಸಾಕೋ ಸುಖಾನ ನೋಡುತ್ತೂ ಇಧಾರಲ್ಲಾ! ಇವರಿಗೆ ಹುಚ್ಚು ಹಿಡೀದೆ ಇರೋದು ಆಶ್ಚರ್ಯ!..

ತನ್ನ ಭಾಗ್ಯಾನ ಕಳಕೊಂಡ ಯಾತ್ನೇಲಿ ಅಲ್ಪಸ್ವಲ್ಪ ರೇಗಿದಾ ಕ್ಷಣವೇ, ಅದನ್ನ ನಾವು ಮನಸ್ಸಿಗೆ ತಂದುಕೊಳ್ಳೋದೇ? ತಪ್ಪು, ಸಾತೂ.. ಇನ್ನು ಮೇಲೆ ನಾಗತ್ತೆ ಏನ್ ಹೇಳಿದ್ದರೂ, ಏನ್ ಮಾಡಿದರೂ.. ಖಾಯಿಲೇಲಿ ರೋಗಿಗಳು ನೋವು ತಡೀಲಾರದೆ ರೇಗಿದರೆ ಹ್ಯಾಗೆ ಮನಸ್ಸಿಗೆ ತಂದುಕೋಬಾರದೋ ಹಾಗೆ ಮನಸ್ಸಿಗೆ ತಂದುಕೊಳ್ಳದೇ ನಡಕೊಳ್ಳೋದು.. ಅದು ಜಾಣತನ! ಸಾಯೋವರಿಗೂ ಇದನ್ನ ಮರೆಯಬೇಡ!"

ಮಾ-ಧವನನ್ನಾಗಲಿ, ಉಮಾ-ಧವನನ್ನಾಗಲಿ, ಲೋಕದ ಯಾವನೇ ಅನುಕೂಲ-ಧವನನ್ನಾಗಲಿ ಕೈಹಿಡಿದು ಬದುಕುವವರು ಅನುಭವಿಸುವ ಸುಖವನ್ನು ವಿಧವೆಯಾಗಲಿ, ಮದುವೆಯೇ ಆಗದ ಮುದುಕಿಯಾಗಲಿ ಅರ್ಥಮಾಡಿಕೊಳ್ಳುವುದು ಆಗದ ಕೆಲಸ. ಸುಮಂಗಲಿಯರಾದವರು ವಿಧವೆ ನಾಗತ್ತೆಯರ ವಿಷಯದಲ್ಲಿ ನರಸಮ್ಮ ಹೇಳಿದ ಹಾಗೆ ನಡಕೊಳ್ಳಬೇಕು. ಅದು ಜಾಣತನ! ಅದನ್ನ ಸಾಯೋವರೆಗೂ ಮರೀಬಾರದು.

ಸ್ನೇಹಿತರಿಲ್ಲದ ಸುಡುಗಾಡು

"ಅಲ್ಲಾ! ಈಚೆಗೆ ಏನಾಗಿದೆ ಇವರಿಗೆ?" ಅಂತ ನನ್ನ ಕೇಳುತಾರೆ, ನನಗೇ ಏನೋ ಆಗಿದೆ ಅನ್ನೋ ಹಾಗೆ!

"ನೀವಾದರೂ ಅವರಿಗೆ ಹೇಳಬಾರದಾ?" ಅಂತ ನಮ್ಮ Common friend ಒಬ್ಬರಿಗೆ ಹೇಳಿದೆ. ಅದಕ್ಕೆ ಅವರು— "ಯಾಕೆ? ಈಗ ನೀವು ಅನ್ನಿಸ್ಕೋತಿರೋದು ಸಾಲ್ದು ಅಂತ ನಾನೂ ಅನ್ನಿಸ್ಕೋಬೇಕಾ?" ಅಂದು ಬಿಟ್ಟರು.

ಯಸ್ಯ ಮಾತಾ ಗೃಹೇ ನಾಸ್ತಿ ಭಾರ್ಯಾ ಚ ಪ್ರಿಯವಾದಿನೀ|
ಅರಣ್ಯಂ ತೇನ ಗಂತವ್ಯಂ ಯಥಾರಣ್ಯಂ ತಥಾ ಗೃಹಂ ||

ಅಂತ ಒಂದು ಸುಭಾಷಿತ ಇದೆ. ಅದರ ಹಾಗೇನೇ, ಸುಹೃತ್ತುಗಳಾದ ಸ್ನೇಹಿತರು ಇಲ್ಲದ ಬದುಕು ಸುಡುಗಾಡಿನ ಬದುಕು. ಕಾಡಿನಲ್ಲಾದರೂ ಜೊತೆಗೆ ಪ್ರಾಣಿಗಳಿರುತ್ತವೆ. ಸುಡುಗಾಡಿನಲ್ಲಿ ಜೊತೆಗೆ ಸುತ್ತೋದು ಭೂತ, ಪ್ರೇತ, ಪಿಶಾಚಿ, ನಾಯಿ, ನರಿ, ರಣಹದ್ದು.

◆ ಭ್ರಮರ ಕೀಟನ್ಯಾಯ ◆

ಮನುಷ್ಯರಾದವರು ವೈರಾನುಬಂಧದಿಂದಾಗಲಿ, ವೈರವಿಲ್ಲದ ಪ್ರೇಮದಿಂದಾಗಲಿ, ಭಯದಿಂದಾಗಲಿ, ಸ್ನೇಹದಿಂದಾಗಲಿ, ಕಾಮ ದಿಂದಾಗಲಿ, ಬೇರೆ ಯಾವುದರಲ್ಲಿಯೂ ದೃಷ್ಟಿಯಿಡದೆ ಭಗವಂತ ನನ್ನು ಕಟ್ಟಿಕೊಳ್ಳಬೇಕು" ಎಂದು ಶುಕಮಹರ್ಷಿಗಳು ಪರೀಕ್ಷಿತ್ ರಾಜನಿಗೆ (ಭಾಗವತ 7-1-26) ಹೇಳುತ್ತಾರೆ.

"ದುಂಬಿಯು ಗೂಡಿನಲ್ಲಿ ಸೆರೆಯಿಟ್ಟ ಹುಳುವು, ಅದು ಯಾವಾಗ ಬಂದು ಕಚ್ಚುತ್ತದೋ ಎಂಬ ಗಾಬರಿಯಿಂದ ಅದನ್ನೇ ನೆನೆದು, ಕೊನೆಗೆ ತಾನೂ ಅದೇ ರೂಪವನ್ನು ಪಡೆಯುತ್ತದೆ. ಅದರ ಹಾಗೆಯೇ ಕಾಮದಿಂದ, ದ್ವೇಷದಿಂದ, ಭಯದಿಂದ, ಸ್ನೇಹದಿಂದ, ಭಕ್ತಿಯಿಂದ ಈಶ್ವರನಲ್ಲಿ ಮನಸ್ಸನ್ನು ನೆಲೆಗೊಳಿಸಿ, ಕಾಮಾದಿ ಪ್ರಯುಕ್ತವಾದ ಪಾಪವನ್ನು ಕಳಕೊಂಡು ಅನೇಕರು ಭಗವಂತನನ್ನು ಪಡೆದವರಿದ್ದಾರೆ" ಎಂದು ಹೇಳಿ, ಕೆಲವು ದೃಷ್ಟಾಂತಗಳನ್ನು ಕೊಡುತ್ತಾರೆ.

"ಗೋಪ್ಯಃ ಕಾಮಾತ್ (ಗೋಪಿಯರು ಕಾಮದಿಂದ), ಭಯಾತ್‌ಕಂಸೋ(ಭಯದಿಂದ ಕಂಸ), ದ್ವೇಷಾತ್ ಚೈದ್ಯಾದಯೋ (ದ್ವೇಷದಿಂದ ಶಿಶುಪಾಲ ಮೊದಲಾದವರು), ಸಂಬಂಧಾತ್ ವೃಷ್ಣಯಃ (ಒಂದೇ ಕುಲದವರೆಂಬ ಸಂಬಂಧದಿಂದ ವೃಷ್ಣಿಗಳು), ಸ್ನೇಹಾತ್ ಯೂಯಂ (ಸ್ನೇಹದಿಂದ ನೀವು ಪಾಂಡವರು), ಭಕ್ತ್ಯಾ

ವಯಂ(ಭಕ್ತಿಯಿಂದ ನಾವು) ಭಗವಂತನನ್ನು ಪಡೆದಿದ್ದೇವೆ" ಎನ್ನುತ್ತಾರೆ.

ಅದರ ಹಾಗೆಯೇ ಇವರಿಗಾದರೂ—ಸ್ವಾಮಿ ಎಂದರೆ ಸಿಂಹಸ್ವಪ್ನ! ರಾಜರತ್ನಂ ಎಂದರೆ ಶಾರ್ದೂಲ ಸ್ವಪ್ನ! ಮೂರು ಮೂರು ನಿಮಿಷಕ್ಕೂ ಅವರುಗಳನ್ನು ನೆನೆಸಿಕೊಂಡು ಬೆಚ್ಚಿಬೀಳದೆ ಹೋದರೆ ಇವರ ಬರವಣಿಗೆ ಮುಂದೆ ಸಾಗುವುದೇ ಇಲ್ಲ!

ಅವರ ಮಾರ್ಗದಲ್ಲಿ ಅವರು ಮುಂದುವರಿಯಲಿ. ಅವರ ಅಭಿವೃದ್ಧಿಗೆ ನಾವು ಅಡ್ಡಬರುವುದು ಬೇಡ. "ತೇಽಪಿ ಯಾಸ್ತಿ ಪರಾಂ ಗತಿಂ" ಅಂದ ಹಾಗೆ ಅವರು ನಿತ್ಯನಾರಕಿಗಳಾಗಿರಬಹುದಾದರೂ "ಸೋಽಪಿ ಯಾತಿ ಪರಾ ಗತಿಂ!" ಅವರಿಗೂ ಒಂದು ಕಾಲಕ್ಕೆ ಮುಕ್ತಿಯುಂಟು.

◆ ಚಾರಚಕ್ಷು ◆

ರಾಜರನ್ನು ಹಿಂದೆ "ಚಾರಚಕ್ಷು" ಎಂದು ಕರೆಯುತ್ತಿದ್ದರು. ಸುದ್ದಿಗಳನ್ನು ಗೂಢಚಾರರು ಸಂಗ್ರಹಿಸಿ ತಂದು ತಿಳಿಸುತ್ತಿದ್ದರು; ಅದರ ಆಧಾರದ ಮೇಲೆ ರಾಜನು drew his own inference. ಇದು ಯಶಸ್ವಿಯಾಗ ಬೇಕಾದರೆ, ರಾಜನೂ ಚಾರನೂ ಚಾಣಾಕ್ಷ ರಾಗಿರಬೇಕು. ಬರಿಯ ಚಾಣಕ್ಯರಾಗಿದ್ದರೆ ಸಾಲದು, ಚಾಣಾಕ್ಷ ರಾಗಿರಬೇಕು.

ಚಕ್ರವರ್ತಿಯಾದ ನನಗೆ ವಜ್ರಾಭಿಷೇಕವಾದ ಕಾಲದಲ್ಲಿ ಒಂದು ಭಿನ್ನವತ್ತಳೆಯು ಸಮರ್ಪಿಸಲ್ಪಟ್ಟಿತು ಎಂಬುದನ್ನು ನೀವು ಮರೆತಿಲ್ಲ; ನಾನು ಮರೆಯುವುದಕ್ಕೂ ಬಿಡುತ್ತಿಲ್ಲ. ನನ್ನ ಹೆಸರಿನ ನನ್ನ ಪೂರ್ವಜ–ರನ್ನ–"ಅನಲಾ ನಿಲಸಂಯೋಗ"ವನ್ನು ಕುರಿತು ಹೇಳಿದ. ಅಲ್ಲಿ ಅಗ್ನಿಪುತ್ರಿಯು ವಾಯುಪುತ್ರನನ್ನು ಉದ್ರೇಕಿಸು ತ್ತಿದ್ದಳು. ಈಗ ನೀವೂ ಅದೇ ಕೆಲಸ ಮಾಡುತ್ತಿದ್ದೀರಿ. "ಇದೆಲ್ಲಂ ಕೃಷ್ಣನ ಮಾಯೆ. ದೈವದ ಮುಂದೆ ನಾಮಲ್ತು".

ಕಾಡಿನಲ್ಲಿದ್ದ ಪಾಂಡವರಿಗೆ ಊರಿನಲ್ಲಿದ್ದ ಕೌರವರ ವಿಷಯ ವನ್ನು ಗೂಢಚಾರರು ತಂದು ವರದಿಮಾಡುತ್ತಿದ್ದರು. ಅವರ ವರದಿ ಯಿಂದ ತಿಳಿಯಬೇಕಾದದ್ದು ಏನೆಂದು ಎಲ್ಲರಿಗೂ ಗೊತ್ತಾದರೂ ಭೀಮಸೇನನೊಬ್ಬನಿಗೆ ಮಾತ್ರ infer ಮಾಡುವ ಬುದ್ಧಿ ಊನ ವಾಗಿತ್ತು. ಅದಕ್ಕೆ ಕಾರಣವೇನೆಂದರೆ—ಅವನಿಗೆ ಕೌರವರ ಮೇಲೆ

ಇದ್ದ ಮಾತ್ಸರ್ಯ. ಕ್ರೋಧ, ವೈರ. ಅದರಿಂದ ಅವನ mind was always clouded.

ಇಲ್ಲಿ ಆ ಕತೆ ತಿರುಗುಮುರುಗಾಗಿದೆ. ವೈಟ್‌ಫೀಲ್ಡಿನ ಬೃಂದಾವನಕ್ಕೂ ನನಗೂ ಇರುವ ಋಣಾನುಬಂಧಗಳನ್ನು ತಿಳಿದು ಕೊಳ್ಳಲು, ಇವರು ಗೂಢಚಾರರನ್ನು ಪೂರ್ಣವಾಗಿ ನಂಬಿ, ಕೆಟ್ಟಿದ್ದಾರೆ. ಇವರ obeservation ಪರವಾ ಇಲ್ಲ; inference ಮಾತ್ರ ಅದಕ್ಕಿಂತ ಹೀನ. Collection of data : 50ಕ್ಕೆ 12; inference 50ಕ್ಕೆ3; Total-100ಕ್ಕೆ 15; ಫಲಿತಾಂಶ: ಮುಂದಿನ ಸೆಪ್ಟೆಂಬರ್!

◆ ಕೆಸರಿನ ದಾರಿ ◆

ಪ್ರಿಯ ಚಂದ್ರಕೀರ್ತಿ,

ನನಗೆ "ಚಕ್ರವರ್ತಿ ವಜ್ರ" ಎಂದು ನಾಮಕರಣವಾದದ್ದರ ಸ್ಮಾರಕಾರ್ಥವಾಗಿ ಹನ್ನೆರಡು ಮಾಸಿಕಗಳೂ ಒಂದು ವರ್ಷಾಬ್ದಿಕವೂ ನಡೆದುಹೋಗಿದ್ದರೂ, ನೀವು ಇನ್ನೂ ಅದನ್ನು ಮರೆಯದೆ ಇರುವುದು ಸರಿಯಲ್ಲ. ಈ ಸಂಬಂಧವಾಗಿ ಒಂದು ಕತೆ. ಜಪಾನ್ ದೇಶದ ZEN ಎಂಬ ಬೌದ್ಧ ಸಂಪ್ರದಾಯದಲ್ಲಿ ಇದು ಪ್ರಸಿದ್ಧವಾಗಿದೆ.

ತಾನ್‌ಸಾನ್ ಮತ್ತು ಎಕೀಡೊ ಎಂಬ ಇಬ್ಬರು ವಿರಕ್ತರು ಒಮ್ಮೆ ಸಂಚಾರ ಹೊರಟಿದ್ದರು. ದಾರಿಯ ತುಂಬ ಕೆಸರು. ಮಳೆ ಧಾರಾಕಾರವಾಗಿ ಬೀಳುತ್ತಿತ್ತು. ರಸ್ತೆಯ ತಿರುವಿಗೆ ಅವರು ಬಂದಾಗ, ಅಲ್ಲಿ ಯುವತಿಯೊಬ್ಬಳು ನಿಂತಿದ್ದಳು. ತಾನು ಉಟ್ಟಿದ್ದ ರೇಶಿಮೆ ಕಿಮೊನೊ ಎಲ್ಲಿ ಕೆಸರಾಗುವುದೋ ಎಂದು ರಸ್ತೆಯನ್ನು ದಾಟಲು ಹಿಂದೂ ಮುಂದು ನೋಡುತ್ತಿದ್ದಳು. ತಾನ್‌ಸಾನ್ ಅವಳ ಪರಿಸ್ಥಿತಿಯನ್ನು ನೋಡಿದ ಕೂಡಲೆ–"ಬಾಮ್ಮ" ಎಂದು ಅವಳನ್ನು ತನ್ನ ತೋಳುಗಳಲ್ಲಿ ಎತ್ತಿಕೊಂಡು, ರಸ್ತೆಯನ್ನು ದಾಟಿ ಆಚೆ ಇಳಿಸಿದ.

ಎಕೀಡೊ ಅವನೊಡನೆ ಮತ್ತೆ ಮಾತಾಡಲಿಲ್ಲ. ಆ ರಾತ್ರಿ

ಒಂದಾನೊಂದು ದೇಗುಲದಲ್ಲಿ ಅವರು ತಂಗಿದ್ದಾಗ, ತಡೆಯ ಲಾರದೆ–"ತಾನ್‌ಸಾನ್! ನಾವು ವಿರಕ್ತರು ಹೆಂಗಸರ ಹತ್ತಿರ ಸುಳಿಯಬಾರದು. ಅದರಲ್ಲಿಯೂ ಇಂಥ ಯುವತಿಯರ ಹತ್ತಿರ! ನೀನೇಕೆ ಅವಳನ್ನು ಮುಟ್ಟಿ ಎತ್ತಿಕೊಂಡು ಹೋದೆ?" ಎಂದು ಆಕ್ಷೇಪಿಸಿದ. ಅದಕ್ಕೆ ತಾನ್‌ಸಾನ್ ಹೇಳಿದ: "ಅಯ್ಯೋ, ಆ ಹುಡುಗಿಯನ್ನು ನಾನು ಅಲ್ಲೇ ಇಳಿಸಿಬಿಟ್ಟೆ. ನೀನು ಇನ್ನೂ ಅವಳನ್ನು ಹೊತ್ತುಕೊಂಡು ತಿರುಗುತಾ ಇದ್ದೀಯಾ!"

ಈ ಕಥೆಯ ತತ್ತ್ವವನ್ನು ಪರಿಭಾವಿಸಿ. "ಕೆಸರಿನ ದಾರಿ" ಯಾವುದು ತಿಳಿಯಿತಾ? ಇನ್ನು ಈ ಪ್ರಕರಣಕ್ಕೆ ಪೂರ್ಣವಿರಾಮ ಬೀಳಲಿ.

ಚತುರ್ಮುಖ ದರ್ಶನ

"ಚೆನ್ನೂರ ನರಸಿಂಹ ಭವ್ಯ ಸುಂದರಮೂರ್ತಿ
ಅದರಿಂದ ಕುಡುಮಿ ಪಡೆದಿದೆ ಜಕ್ಕಣ್ಣನ ಕೀರ್ತಿ.
ಅದನು ನೋಡದೆ ಸತ್ತವನ ಬದುಕು ಬದುಕಲ್ಲ.
ಕಂಡವರ ಕತೆ ಕೇಳಿ, ಬರಿದೆ ಸುರಿಸದೆ ಜೊಲ್ಲ,
ಎಂಟು ಕಣ್ಣುಗಳಾದರೆ ಕುಡಿದು ಬರುವಣ ಹೋಗಿ
ಶಿಲ್ಪಮಂಥನದಿಂದ ಮೇಲೆದ್ದ ಕಲೆಯ ಸುಧೆಯ"

"ಆಹ ಚೆನ್ನೂರೆ! ನಿನಗಾವ ಕುರುಡನು ಕೊಟ್ಟು-
ದೀ ಹೆಸರು? ಅಂದವಗೆ ನೆಗಡಿ ನಿಗುರಿತ್ತೇನು?
ಕಿವಿಯ ತಮಟೆಯ ಚರ್ಮ ತೂತುಬಿದ್ದಿತ್ತೇನು?
ಬರಲುಕೊಂಬೆಯ ಕೈಯನೆತ್ತಿ ತಡೆವೀತೋಟ!
ಪಾಸೆಗಟ್ಟಿದ ನೀರು ಮಲೆಯುವೀ ಊರಕೆರೆ!
ಬೆರಳು ಸೋಕಿತೆ ಸಾಕು—ದೂಳು ಕಕ್ಕುವ ಬೀದಿ!
ಉರುಳುಮನೆ! ಪಕ್ಕದಲಿ ವಿಂಧ್ಯವಾಗಿದೆ ಬೂದಿ!
ಇದು ತಿಪ್ಪೆ, ಇದು ಗುಂಡಿ, ಇದು ನಾತ, ಇದು ಹೇತ!
ನೊಣ, ನಾಯಿ, ನುಸಿ, ಹಂದಿ, ಕೋಳಿ, ದನ, ಮೆರವಣಿಗೆ!
ನಿಲುವ, ನೆಗೆಯುವ, ಮಲಗಿ ಹೊರಳಿ ದೂಳೆಬ್ಬಿಸುವ,
ಕಿವಿಯೊಡೆಯೆ ಕಿರುಚುವೀ ಕತ್ತೆಗಳ ಕೇರಿಯಲಿ—
ಇಲ್ಲಿ ನರನೆಲ್ಲಿ? ನರಸಿಂಹ ತಾನೆಲ್ಲಿ?"

"ಇದು ಗುಡಿಯೆ? ಜಕ್ಕಣನ ಕೈವಾಡಕಿದೆ ಎಡೆಯೆ?
ಹನುಮನೇ ಹಗ್ಗವನು ತಿನುವಾಗ ಪೂಜಾರಿ
ಶಾವಿಗೆಗೆ ಬಾಯ್ಬಿಟ್ಟರೇನಕ್ಕು? ಭಕ್ತರದು

ಭಂಗ-ಭೃಂಗದ ಹಾಗೆ-ಕಣ್ಣುಳಿಸಿದಲ್ಲೆಲ್ಲ
ಮೂಗು ಹಿಡಿದಲ್ಲೆಲ್ಲ ಕಿವಿ ತುಂಬಿದಲ್ಲೆಲ್ಲ
ಢಣಢಣರು ಡಂಗುರವನಿಕ್ಕುತಿರಲವರೊಡನೆ
ಬದುಕಬೇಕಾದವಗೆ ತನ್ನ ಭಾಗ್ಯವ ತೆರೆದು
ಮೆರೆಯಲಿಕೆ ಸಂಕೋಚವಾಯಿತೋ? ಭಕ್ತರಿಗೆ
ಮುಖಭಂಗಮಾಡನೀ ಭಗವಂತ. ಮೇಲರ್ಧ
ಸಿಂಹತನ ತೋರಿದರು, ಕೀಳರ್ಧ ನರತೆಯಾಂ—
ತದರಿಂದೆ ನರರೊಡನೆ ಸಮರಸತೆ ಸಾಧಿಸಿತ್ತು."

"ಗರ್ಭಗುಡಿ ಎಂಬುದಿದೊ? ಇದು ಕತ್ತಲೆಯ ಗರ್ಭ!
ಹುಡುಕಿ ಬಂದವಗೆ ಹೊರತನ್ಯರಿಗೆ ದೊರೆವಡದ
ಪರತತ್ತ್ವವಿಲ್ಲಿಹುದೆ? ಎದೆಯ ಹಣತೆಗೆ ತೈಲ—
ವರೆದು, ಬತ್ತಿಯ ಮೀಟಿ, ಮೇಲೆದ್ದ ಮಾಜೀವ—
ಗಳಿಗೆ ನೆನೆದಲ್ಲೆ ಮನದಲ್ಲಿ ಮೆಯ್ದೋರುವನ
ಕಾಣಿಸುವರಾರೆಮಗೆ? ದೃಷ್ಟಿದಾನಕೆ ದೈವ
ಕರುಣಿಸಿದ ಹೊರತು, ಯಾತ್ರೆಯಿದರಿಂದೆಮಗೆ
ಹಾವುಗೆಯ ಕೇಡು, ನಡೆದದ್ದು ನಷ್ಟ, ಅಷ್ಟೆ!"

ಬಂದನರ್ಚಕ ನಗುತ ದೀವಟಿಗೆ ಹಿಡಿದೆತ್ತಿ-
ನಟ್ಟನಡುರಾತ್ರಿಯಲಿ ಸೂರ್ಯನುದಯಿಸಿದಂತೆ.
"ಇದು ದೇವ ನರಸಿಂಹ! ಎಡಗಡೆಗೆ ಶ್ರೀದೇವಿ!
ಬಲದಲ್ಲಿ ಪ್ರಹ್ಲಾದ! ಹರಿಯ ತೊಡೆಗಳ ಮೇಲೆ
ರಾಕ್ಷಸ ಹಿರಣ್ಯ ಕಶಿಪುವಿನಂಗ ಸೀಳಿಹೋಗಿ...."
ಕಲಿತ ಪಾಠದ ಪಟ್ಟಿ ಪಟಪಟನೆ ದುಮುಕಿತ್ತು
ದೇವಂಗೆ ನಿತ್ಯದೂಳಿಗದಾತನವನ ಮುಖದಿಂದ.
ನೋಡಿದರು ನಾಲ್ವರೂ ನಾಲ್ಕುತೆರ ಭಯಭಕ್ತಿಯಿಂದ.

"ಏನು ಉಗ್ರತೆ ನಾರಸಿಂಹನಯನಗಳಲ್ಲಿ!
ಕರುಣೆ ತುಳುಕುವ ಕಡಲು ಕಮಲೆಯೀ ಕಣ್ಕಮಲ!

ಹರಿಯ ನಂಬಿದ ಭಾವ ಮೂರ್ತಿಮತ್ ಪ್ರಹ್ಲಾದ!
ಉಗ್ರ ನರಸಿಂಹ ತಾನುಗುರಿನಾಯುಧವೆತ್ತಿ
ಕರುಳ ಹಿಣಿಲನು ಬಗೆದು ಮಾಲೆಗೊಂಡಾರ್ಭಟಿಸು-
ತಿರ್ದೊಡಂ, ತಾಯ ತೊಡೆಯಲಿ ಮಲಗಿ ನಿದ್ರಿಸುವ
ಮಗುವಿನಂತಿರ್ಪನೀರಾಕ್ಷಸನು ಸೌಮ್ಯನಾಗಿ !
ಉಗ್ರತೆಯಿನುಗ್ರತೆಗೆ ವಿಶ್ರಾಂತಿಯಾಯಿತಿಲ್ಲಿ!
ಕಲ್ಲೊ ಇದು? ಮಯಣವೋ? ಇಲ್ಲಿ ಶಿಲ್ಪಿಯ ಕರಣ
ಸಾರುತಿದೆ-ನೋಡು, ನೋಡಿದು ಹರಿಯ ವರ! ಕರುಣ!
ಧನ್ಯವೀ ವರಶಿಲ್ಪ! ಧನ್ಯನಾ ಜಕ್ಕಣ್ಣ!
ಧನ್ಯನೀದರ್ಶನದಿ ನಾನಾದೆ ಮುಕ್ಕಣ್ಣ!
ಜಯ ಉಗ್ರನರಸಿಂಹ! ಜಯ ತಾಯಿ ಲಕ್ಷ್ಮೀ!
ಜಯ ಭಕ್ತ ಪ್ರಹ್ಲಾದ! ಜಯ ರಾಕ್ಷಸೇಂದ್ರಾ!
ಜಯ ಜಯಾ ಜಯತು ಜಯತು!"

"ದೇವನಂತಿರಲೇಳು. ಪಂಜಿನ ಬೆಳಕು ನೋಡು!
ಕಿಡಿಯಿಲ್ಲ, ಹೊಗೆಯಿಲ್ಲ, ನಿಶ್ಶಬ್ದದೊಂದೆ ಉರಿ!
ಧಗಧಗನೆ ನೆಗೆದಾಡುತಿಲ್ಲ! ನಿಶ್ಚಲವಾಗಿ!
ಗಿಣಿಹಸಿರು, ನಸುಕೆಂಪು, ತುಸುನೀಲಿ, ಕಿಂಚಿತ್ತು
ಕಿತ್ತೀಳೆ! ಎಲ್ಲಿಂದ ಬಂದಿತೀ ರಂಗುರಂಗು?
ತೈಲವಾವುದೊ? ಉರಿವ ಬಟ್ಟೆಯೆಂಥದೊ? ಚೋದ್ಯ!
ಇಂಥದನು ನಮ್ಮ science ಇನಲಾರೂ ತಿಳಿಸಿಲ್ಲ!
ನಮ್ಮ Labಇನಲಿಂಥದನು ಯಾರೂ ಕಂಡಿಲ್ಲ!
ಇದರ ಗುಟ್ಟನು ತಿಳಿದು, ಮೊದಲುpatent ತೆಗೆದು,
ಬೇಗ Market ಮಾಡಿ—! ಭಗವಂತ! ನಿನ್ನ ದಯೆ-
ಯಿಂದೆನಗೆ ಈ Tripಉ ಲಭಿಸಿತ್ತೈ! ಇದುವರೆಗೆ
ತಿನುತಿದ್ದ ತುಪ್ಪದನ್ನಕೆ ನೀನು ಸವಿಯುಪ್ಪು
ಬೆರೆಸಿದ್ದೈ! ಜಯ ಜಯಾ ಜಯತು ಜಯತು!"

"ಎಲ ಇವನ! ಮೈನ ಯೆಂಗ್ ಬೆಳಶ್ಯಾನೊ ಪೂಜಾರಿ!
ಏನು ಖಳೆ! ಕಪ್ಪಗಿದ್ದರು ಇವನ ಮೂರ್ನಾಮ ಮಾರಿ!
ಇವನ ದೇವರಿಗೂನೆ ಇವಗೂನೆ ಮುಜರಾಯಿ
ಮೂಸಿಸುವ ತಸ್ದೀಕು ತಿಂದೆ ಯಿಂಗಿರುವಾಗ-
ನಮ್ಮ ಗಲ್ಡೀಬುಟ್ಟಿಗಿವನನೆಳಕೊಂಬಂದು,
ತಯ್ಯಾರಿ ತಿನ್ನಿಸಿ, ಕುಸ್ತಿಗಳ ಕಲಿಸಿ,
ಕಾಚ ಕಟ್ಟಿಸಿ, ಮಟ್ಟಿಗಿಳಿಸಿದೇಂತಂದ್ರೆ—
ಎಂತೆಂಥ ಪಾಂಡೋನೂ ಯೋಳದೇ ಕ್ಯೋಳದೇ
ಪೇರಿ ಕೀಳ್ಬೇಕಣ್ಣ! ಕೀಳಲೇಬೇಕಣ್ಣ!
ಇಂದಿನಿಂದಿವ ನಮ್ಮ ಷಾಗಿರ್ದು!
ತಟಕೆ ಬೊಂಬನು ಬಿಗಿಸಿ ತಿಕಿಟಿಕ್ಕಿದಾಂತಂದ್ರೆ—
ಕೊಚ್ಚಿ ಬರಬೇಕು ವೊಳೆ ಚಿನ್ನದ್ದು ಅರ್ದು!
ದ್ಯಾವರೇ! ದಯಮಾಡು, ಬುಟ್ಟುಕೊಡು ಐಯನ್ನ!
ನಿಂಗೆ ಮಾಡಿಸತೀನಿ ಬೆಳ್ಳಿದೆಳ್ಡ್ ಕೈಯನ್ನ!
ಜಯ ಜಯಾ ಜಯತು ಜಯತು!"

"ಸ್ರೀ ರಾಮರಕ್ಸೆ! ಏನಯ್ಯ ಕಂಕುಳ ಕೆಳಗೆ
ದಂಡಕಾರನ್ಯ! ದೇವರದು ದಯೆ! ಜೊತೆಗೆನ್ನ
ಪುನ್ಯ! ಈ ಮಾರಾಯ ನಮ್ಮೂರಲಿದ್ದು, ನಂ
ಖಾಯಂ ಗಿರಾಕಿಯಾಗಿದ್ದಿದ್ದರಮ್ಮಯ್ಯ...!
ದೇವರೇ! ನೀನಿವನನಿಲ್ಲೆ ನಿಲಿಸಿಕೊ ನಿನ್ನ ದಮ್ಮಯ್ಯ!
ವೊರಗಿಂದ ರೇಜರುಗಳಾಮದೋ ನಿಂತೋಯ್ತು!
ನಾಡಕತ್ತಿಯ ಬೆಲೆಯೊ ವೊಂದಕತ್ತಾಗೋಯ್ತು!
ಇಂತವರ ಷೇವೆ ಇವರಿಂದ ನಮಗೇನೆ ಷೇವೆ!
ನರಸಿಂಹ! ನನ್ನನಿಂತೋರಿಂದ ಕಾಪಾಡು! ಕಾಪಾಡು!
ಕಂಡು ಕಂಡೂ ನನ್ನ ಕೈಬಿಟ್ಟೆ- ನನ ಪಾಡು ನಾಯಿಪಾಡು!
ಜಯಾ ಜಯಾ ಜಯತು ಜಯತು!"

ಒಬ್ಬ ನರಸಿಂಹನನು ನರರು ನಾಲ್ವರು ಕಂಡು
ಪಡೆದುಕೊಂಡರು ನಾಲ್ಕು ವಿಧದ ಫಲವ;
ಒಂದೆ ಕನ್ನಡಿಯೊಳಗೆ ಸ್ವಸ್ವರೂಪವ ಕಂಡು
ತಮತಮಗೆ ತಾಳಿದರು ನಲವು ಹಲವ.

◆ ನರಕದಲ್ಲಿ ನಾನು ◆

"ನರಕ" ಎಂಬುದು ಒಂದು definite ನೌನು. ಭೂಮಿಯವರಿಗೆ ಇದರ ವಿಷಯ ಹೇಳಹೊರಟರೆ-ಅದು ತಿಪಟೂರಿಗೆ ತೆಂಗಿನಕಾಯಿ ತೆಗೆದು ಕೊಂಡು ಹೋದಹಾಗೆ, ತುಬಟೂರಿಗೆ ಕುರಿಗಳನ್ನು ಕರೆದುಕೊಂಡು ಹೋದ ಹಾಗೆ ತಲೆಹರಟೆಯೆನ್ನಿಸೀತು, ಅಧಿಕಪ್ರಸಂಗವಾದೀತು. ಅದರ ಗೋಜು, ಗೊಡವೆ ನನಗೆ ಬೇಡ.

ಇನ್ನೂ "ನಾನು"–ಕೆಲವರು ಇದನ್ನು ಪ್ರೊ-ನೌನ್ ಎನ್ನುವರಾದರೂ ನನ್ನ ದೃಷ್ಟಿಯಲ್ಲಿ ಇದು ನೌನೇ; Indeterminate, first person singular-First person ಎಂದರೆ ಉತ್ತಮ ಪುರುಷ; ಏಕೆಂದರೆ-ಶಿವೋऽಹಂ, ಅಹಂ ಬ್ರಹ್ಮಾಸ್ಮಿ, ತತ್ತ್ವಮಸಿ ಮೊದಲಾದ ಮಹಾವಾಕ್ಯಗಳಲ್ಲಿ ಉದ್ದಿಷ್ಟನಾಗಿರುವ "ನಾನು"ವೇ ಶಿವ, ಬ್ರಹ್ಮ, 'ಅದು'ಆದ ಪುರುಷೋತ್ತಮ. Singular ಏಕೆಂದರೆ, ಅದು "ಏಕಮೇವ, ಅದ್ವಿತೀಯ" ಎನ್ನಿಸಿ ಆತ್ಮೋಪಮವಾದದ್ದು. ಭಗವಂತನಂತೆಯೇ "ನಾನು" ಆದರೂ "ಅನಿರ್ದೇಶ್ಯವಪುಃ"

ಇದನ್ನು ಸರ್ವನಾಮವೆಂದರೂ ತಪ್ಪಾಗದು. ಏಕೆಂದರೆ ಭಗವಂತನ ವಿಶ್ವರೂಪವನ್ನು ಕಂಡ ಅರ್ಜುನನು ಕೀರ್ತನೆ ಮಾಡಿದ ಹಾಗೆ (ಗೀತಾ: ೧೧,೪೦):–

ನಮಃ ಪುರಸ್ತಾದಥ ಪೃಷ್ಠತಸ್ತೇ
ನಮೋಽಸ್ತು ತೇ ಸರ್ವತ ಏವ ಸರ್ವ |
ಅನಂತವೀರ್ಯಾಮಿತ ವಿಕ್ರಮಸ್ತ್ವಂ
ಸರ್ವಂ ಸಮಾಪ್ನೋಷಿ ತತೋಽಸಿ ಸರ್ವಃ ||

"ನಾನು" ಎನ್ನುವುದು "ಅವನು" ಎಂಬುದರ ಒಂದು ಕಿಡಿ; A chip of the old block! ಆದ್ದರಿಂದ ಅದು "ಸರ್ವ" ಆದರೆ, ಅದರ ಮರಿಯಾದ "ನಾನು" ಕೂಡ "ಸರ್ವ"ನೇ! ಸರ್ವ ನಾಮವಾದವನೇ! ಏಕೆಂದರೆ ನಾನು ಯಾರನ್ನು ತ್ರಿಕರಣಪೂರ್ವಕ ವಾಗಿ ಸರ್ವ್ ಮಾಡುತ್ತೇನೆಯೊ ಆತ ತಾನೇ ಸರ್ವವೂ ಆಗಿದ್ದಾನೆ. "ಸರ್ವಸ್ಯ ಆಹಂ ಹೃದಿ ಸನ್ನಿವಿಷ್ಟಃ" ಮೊದಲಾದ ಶ್ರುತಿವಚನ ಗಳೂ ಇದನ್ನೇ ಪುಷ್ಟೀಕರಿಸುತ್ತವೆ.

ಇಂಥ "ನಾನು" ನರಕಕ್ಕೆ ಹೋಗಿ ಬರುವುದರಲ್ಲಿ ಏನೂ ಆಶ್ಚರ್ಯವಿಲ್ಲ. ನರಕವೊಂದೇ ಏಕೆ, ನಾನು ನಾರದನಂತೆ ತ್ರಿಲೋಕ ಸಂಚಾರಿ. ಅತಲ, ವಿತಲ, ಸುತಲ, ರಸಾತಲ ಮೊದಲಾದ ಚತುರ್ದಶಭುವನಗಳಿಗೂ ನಾನು ಮನೋವೇಗದಿಂದ ಹೋಗಿ, ವಾಯುವೇಗದಿಂದ ಹಿಂತಿರುಗಿ ಬರಬಲ್ಲೆ. ಈಷತ್ ಪ್ರಾಗ್ಭಾರವೆಂಬ ಅಪರನಾಮಧೇಯವುಳ್ಳ ಸಿದ್ಧಶಿಲಾಮುಕ್ತಿಕ್ಷೇತ್ರ ವನ್ನು ಅದೆಷ್ಟು ಬಾರಿ ಪ್ರದಕ್ಷಿಣವಾಗಿ ಬಳಸಿಬಂದಿರುವೆನೋ, ನನಗೇ ಲೆಕ್ಕವಿಲ್ಲ. ಇನ್ನು ಅಮಿತಾಭಬುದ್ಧನ ಸುಖಾವತೀವ್ಯೂಹ- ಅಲ್ಲಿ ನನಗೆ ತೆರೆದ ಬಾಗಿಲು. ನಾನು Paradise regained ಎಂದು ಹೇಳಬೇಕಾದ್ದೇ ಇಲ್ಲ; ಏಕೆಂದರೆ, ನನಗೆ ಎಂದೂ Paradise lost ಎನ್ನಿಸಿಯೇ ಇಲ್ಲ.

ನಮ್ಮಲ್ಲಿ ಕೆಲವರು ನರಕಕ್ಕೆ ಹೋಗಿದ್ದಾರೆ; ಎಂದರೆ, ನರಕಕ್ಕೆ ಹೋಗಿ ಅಲ್ಲಿಯೇ ಇದ್ದುಬಿಟ್ಟಿದ್ದಾರೆ; ಅಲ್ಲಿಂದ ಹೊರಗೆ ಬರುವ ತ್ರಾಣವಿಲ್ಲದೆ, ಅಲ್ಲೇ ತಳವೂರಿದವರಾಗಿದ್ದಾರೆ; ನಾರಕಿಗಳಾದರೂ "ದಯಧ್ವಂ" ಎಂಬ ಪ್ರಜಾಪತಿಯ ಅನುಶಾಸನೆಯನ್ನು ಮನ್ನಿಸಿ, ಕರುಣೆಯಿಂದ ಅವರನ್ನು ಅಲ್ಲಿಯೇ ಇರಗೊಟ್ಟಿದ್ದಾರೆ.

ಈಚೆಗೆ ನಮ್ಮವರೊಬ್ಬರು ನರಕಕ್ಕೆ ಹೋಗಿದ್ದರು. ಅವರು ಅಲ್ಲಿಗೆ ಹೋದ ಮೂರು ಗಂಟೆಯೊಳಗಾಗಿ ನರಕದ ನ್ಯಾಯ ನೀತಿ ರಕ್ಷಕರು ಅವರನ್ನು ಹಿಡಿದುತರಿಸಿ—"ಅಪ್ಪಾ, ನೀನು ಬಂದಲಾಗಾಯಿತು ನಮ್ಮ ಹುಡುಗರು ಏನೇನೋ ದುರ್ವಿದ್ಯೆಗಳನ್ನು ಕಲಿಯುತ್ತಿದ್ದಾರೆ. ಇದು ಹೀಗೇ ಮುಂದುವರಿದರೆ, ನರಕವೆಂಬ ಹೆಸರಿಗೆ ಮಸಿ ಬಳಿದುಹೋಗುತ್ತದೆ. ನೀನು ಇಲ್ಲಿರಲು ಸರ್ವಥಾ ನಾಲಾಯಕು. ಒಳ್ಳೆಯ ಮಾತಿನಲ್ಲಿ, ಇನ್ನೂ ಮೂರು ನಿಮಿಷಗಳೊಳಗಾಗಿ ನೀನೇ ಇಲ್ಲಿಂದ ನಿಕಲಾಯಿಸಿದರೆ, ಸರಿ. ಇಲ್ಲದೆ ಹೋದರೆ, ನಿನ್ನ ಕೈಗಳನ್ನು ಮರಿದು, ಕಾಲಿಗೆ ಕೊಟ್ಟೇವು!" ಎಂದು ಹೆದರಿಸುತ್ತಿದ್ದ ಹಾಗೆಯೇ, ಮೂರು ನಿಮಿಷದ ಅವಧಿ ಮುಗಿಯುವ ಮುಂಚೆಯೇ, ಅರ್ಧ ಚಂದ್ರಪ್ರಯೋಗಮಾಡಿ ಅವರನ್ನು ಕತ್ತು ಹಿಡಿದು ನರಕದಿಂದ ಹೊರಕ್ಕೆ ನೂಕಿ, ದಿಡ್ಡಿಬಾಗಿಲುಗಳನ್ನು ಹಾಕಿಕೊಂಡರು.

ಇನ್ನೂ ಕೆಲವರಿದ್ದಾರೆ: ಅಕ್ಕಿಯ ಮೇಲೆ ಆಸೆ, ನೆಂಟರ ಮೇಲೆ ಪ್ರೀತಿ. ನರಕಕ್ಕೆ ಖುದ್ದಾಗಿ ಹೋಗಲು ಹೆದರಿಕೆ, ಅದಕ್ಕೋಸ್ಕರವಾಗಿ ತಾವು ಇದ್ದಲ್ಲಿಯೇ ಒಂದು ಕೃತಕವಾದ ನರಕವನ್ನು ನಿರ್ಮಾಣಮಾಡಿಕೊಂಡು, ಸರದಿಯಲ್ಲಿ ಸಮಾರಾಧನೆ,

ಗುಂಪಿನಲ್ಲಿ ಗೋವಿಂದ ಎಂಬುದಕ್ಕೆ ಉದಾಹರಣೆಗಳಾಗುತ್ತಾರೆ.

ನರಕವೆಂದರೆ ನನಗೆ ನಡುಮನೆ, ಜಗಲಿ ಇದ್ದಹಾಗೆ;ಅಡುಗೆ ಮನೆ, ಬಚ್ಚಲುಮನೆ ಇದ್ದ ಹಾಗೆ. ಯಮಣ್ಣನಿಗೂ ನನಗೂ "ಬಲ್ ಬಲೆ ದೋಸ್ತಿ". ನನ್ನ "ಬ್ರಮ್ಮ ನಿಂಗೆ ಜೋಡಿಸ್ತೀನಿ" ಹಾಗೂ "ಯಿಸ್ನು ಪಡಚ" ಪದ್ಯಗಳೆಂದರೆ ನಂ ಯಮಣ್ಣನಿಗೆ ಪ್ರಾಣ.

ಆದರೂ ನಾನು ನರಕಕ್ಕೆ ಹೋಗಲು ಇಷ್ಟಪಡುವುದಿಲ್ಲ. ಏಕೆಂದರೆ—ಭೂಮಿಯಲ್ಲಿ ನನಗೆ ಆಪ್ತರಾದವರು, ಇಷ್ಟ ರಾದವರು, ಹಿತವರಾದವರು ಯಾರೂ ನರಕದಲ್ಲಿ ಇಲ್ಲ. ಆದ್ದರಿಂದ ಆ ನರಕದಲ್ಲಿ ನನಗೆ ಸುಖವಿಲ್ಲ.

ನರಕದ ವಿಷಯ ನೆಗೆದುಬಿತ್ತು! ನಾನು ಒಂದು ಸಲ ವೈಕುಂಠಕ್ಕೆ ಹೋಗಿದ್ದೆ. ಆ ಕತೆ ಕೇಳಿ.

ಅವೊತ್ತು ಶಿವರಾತ್ರಿ. ಪಾರ್ವತೀ ಪರಮೇಶ್ವರರನ್ನ ದರ್ಶನ ಮಾಡಿ ಕೊಂಡು ವೈಕುಂಠಕ್ಕೆ ಹೋಗೋಣ ಅಂತ ಮೊದಲು ಕೈಲಾಸಕ್ಕೆ ಹೋದೆ. ಅವರು ಆಗತಾನೆ ಪೂಜೆ ಮುಗಿಸಿಕೊಂಡು ವೈಕುಂಠಕ್ಕೆ ಹೊರಟಿದ್ದರು. "ನೀನೂ ಬಾ. ಅಲ್ಲಿಗೇ ಹೋಗೋಣ" ಅಂದರು. ನಂದಿಯ ಮೂಗುದಾರ ಹಿಡುಕೊಂಡು ನಾನೂ ಹೋದೆ.

ಅಲ್ಲಿ ಬಾಗಿಲು ಕಾಯೋ ಜಯವಿಜಯರು ತೂಕಡಿಸುತಾ ಕಣ್ಣು ಮುಚ್ಚಿದ್ದರು. ಹಜಾರದೊಳಕ್ಕೆ ಹೋದಾಗ, ಅಲ್ಲಿ ನಮ್ಮ ಗರುಡಪ್ಪ "ಅಯ್ಯಾವರನ್ನು ನೋಡೋಕೆ ಬಂದಿರಾ? ಹೋಗಿ,

ಅಡುಗೆ ಮನೇಲಿದ್ದಾರೆ!'' ಎಂದು, ಕುಚೋದ್ಯವಾಗಿ ನಕ್ಕ.

ಅಡುಗೆ ಮನೆಗೆ ಹೋಗಿ ನೋಡಿದರೆ-ಉರೀದೇ ಇರೋ ಒಲೇನ ಲಕ್ಷ್ಮಿ ಊದುತಿದ್ದಾಳೆ! ಅವಳ ಊದೋಕೊಳವೇನ ನಾರಾಯಣ ಹಿಡುಕೊಂಡು ಕೂತಿದ್ದಾನೆ!

ಪಾರ್ವತೀಪರಮೇಶ್ವರರು ಅದನ್ನ ನೋಡಿ, ತಡೆಯಲಾರದೆ ನಕ್ಕುಬಿಟ್ಟರು.

``ಇದೇನು, ಲಕ್ಷ್ಮಿ? ಅಡುಗೆಮನೇಲಿ ನೀನು?'' ಅಂದಳು. ಪಾರ್ವತಿ.

``ಅಯ್ಯೋ ಪಾಪ! ಇಂಥಾ ದರಿದ್ರ ಒಲೇಲಿ ಹೊಗೆ. ನಂ ಸರಸ್ವತಿ ಅದು ಹ್ಯಾಗೆ ಅಡಿಗೆ ಮಾಡಿ ನಿಭಾಯಿಸುತ್ತಿದ್ದಳೋ ನಾಬೇರೆ ಕಾಣೆ!'' ಅಂದಳು, ಲಕ್ಷ್ಮಿ.

``ಅಂದಹಾಗೆ, ಸೊಸೆಯೆಲ್ಲಿ? ಕಾಣಿಸೊಲ್ಲ'' ಅಂದ, ಪರಮೇಶ್ವರ.

``ಅದೇಪ್ಪಾ, ಪಾಪ, ಅಪರೂಪಕ್ಕೆ ಅವಳೂ ಆಸೆಪಟ್ಟಳು. ಮಹಾರಾಯತಿಯಾಗಿ ಹೋಗಿ ಬಾಮ್ಮ. ಬಂದಮೇಲೆ ನಂಗೂ ಸ್ವಲ್ಪಹೇಳು, ಅಂತ ನಾನೆ ಕಳಿಸಿದೆ'' ಅಂದಳು, ಲಕ್ಷ್ಮಿ.

``ಎಲ್ಲಿಗೆ ಹೋದಳು? ಎಲ್ಲಿಗೆ ಕಳಿಸಿದೆ?'' ಎಂದು ಕೇಳಿದಳು, ಪಾರ್ವತಿ.

``ಅಯ್ಯೋ! ಅದೇ ಕಣೆ! ಆ ರಾಜರತ್ನಂ ತಾನು ಬರೆದಿರೋ ರತ್ನನ ಪದಗಳು, ನಾಗನ ಪದಗಳು ಓದುತಾನಂತೆ. ಚೆನ್ನಾಗಿ

ಓದುತಾನೆ. ಅತ್ತೆ. ನೀವೂ ಬನ್ನಿ, ಕೇಳಿಕೊಂಡು ಬರೋಣ, ಅಂತ ನನ್ನೂ ಕರೆದಳು. ಆದರೆ ಇವರನ್ನು ಬಿಟ್ಟು ಹೇಗೆ ನಾನು ಒಬ್ಬಳೇ ಹೋಗಲಿ, ಹೇಳು" ಎಂದಳು, ಲಕ್ಷ್ಮಿ.

"ಹೇಗೆ ಅಂದರೆ? ಈವಾಗ ನಾನು ನಮ್ಮ ಪಾರ್ವತಿ ಹ್ಯಾಗೆ ತಾಳ ಹಾಕಿದರೆ ಹಾಗೆ ಕುಣಿಯೋಲ್ವಾ! ಹಾಗೇ ಕಿವಿ ಹಿಡಿದು ಎಳೆದುಕೊಂಡು ಹೋದರಾಯಿತು. ಏನಯ್ಯಾ ಹರಿಯಪ್ಪಾ! ನಿನಗೇನಯ್ಯಾ ಹೋಗೋದಕ್ಕೆ ಗುನಗು?" ಅಂತ ಪರಮೇಶ್ವರ ನಾರಾಣನನ್ನ ಚುಡಾಯಿಸಿದ.

ನಾರಾಯಣ ಏನಾದರೂ ಹೇಳುವ ಮೊದಲೇ ನಾರಾಯಣಿ- "ನಾನು ಹೇಳುತೇನೆ. ಅವರು ಯಾಕೆ ಬರೋಕೆ ಒಪ್ಪೊಲ್ಲ ಅಂತ. ಯಿಸ್ನು ಪಡಚ ಅನ್ನೋ ಪದ್ಯದಲ್ಲಿ ಇವರಿಗೆ ಪದವಿ ಇದ್ದರೂ ಬುದ್ಧಿ ಇಲ್ಲ ಅಂತ ಲೇವಡಿ ಮಾಡಿರೋದನ್ನ ಕೇಳಿದಲಾಗಾಯಿತು. ಆ ರಾಜರತ್ನಂ ಅನ್ನ ಕಂಡರೆ ಇವರಿಗೆ ಯಾಕೋ ಅಸಮಾಧಾನ" ಎಂದಳು.

ಆಗ ಹರಿ ಹರ ಇಬ್ಬರೂ ಹತ್ತಿರ ಬಂದು ನನ್ನನ್ನ ನೋಡಿದರು. "ಭೂಮಿಗೆ ಹೋದ ಮೇಲೆ ನೀನು ಇದನ್ನ ಬರೀತೀಯ ಅಂತ ನಮಗೆಗೊತ್ತು" ಎಂದರು.

"ತಥಾಸ್ತು" ಅಂದಳು, ಆಗ ತಾನೆ ಒಳಕ್ಕೆ ಬಂದ ಸರಸ್ವತಿ.

ಆಗ ನನ್ನೆದುರಿಗೆ ಪರಮಾದ್ಭುತವಾದ ಹರಿಹರ ರೂಪ ಕಾಣಿಸಿಕೊಂಡಿತು. ಶ್ರೀಮನ್ನಾರಾಯಣನು ತನ್ನ ಕೊರಳಿನಲ್ಲಿದ್ದ ತುಳಸೀದಂಡೆಯ ನಿರ್ಮಾಲ್ಯವನ್ನು ತೆಗೆದು ನನಗೆ ಅನುಗ್ರಹಿಸಿ

ದನು. ಭಗವಂತನಾದ ಶಂಕರನು ತಾನೇ ತನ್ನ ದಕ್ಷಿಣ ಹಸ್ತದಿಂದ ವಿಭೂತಿಯನ್ನು ಸೃಜಿಸಿ ನನ್ನ ಹಣೆಯಲ್ಲಿ ತಿಲಕವನ್ನು ತಿದ್ದಿದನು.

"ನಿನಗೆ ನಾನೇನು ಕೊಡಲಿ, ಮಗು?" ಎಂದಳು. ಪಾರ್ವತಿ.

"ಜ್ಞಾನವೈರಾಗ್ಯಸಿದ್ಧ್ಯರ್ಥಂ ಭಿಕ್ಷಾಂ ದೇಹಿ" ಎಂದೆ.

"ನಾನೇನು ಕೊಡಲಿ ಮಗು?" ಎಂದಳು, ಸರಸ್ವತಿ.

"ತ್ವಾಮಹಂ ಪ್ರಾರ್ಥನೆಯೇ ನಿತ್ಯಂ, ವಿದ್ಯಾದಾನಂ ಚ ದೇಹಿ ಮೇ' ಎಂದೆ

"ನಾನು? ಏನು ಕೊಡಲಿ, ಮಗು?" ಎಂದಳು, ಲಕ್ಷ್ಮೀದೇವಿ.

"ತಾವು ಕೊಟ್ಟದ್ದು ನನಗೆ ಪರಮಭಾಗ್ಯ" ಎಂದೆ.

"ಶತಂ ಜೀವ ಶರದೋ ವರ್ಧಮಾನಃ" ಎಂದಳು, ಲಕ್ಷ್ಮೀ ದೇವಿ.

ಆ ಸಮಯಕ್ಕೆ ಸರಿಯಾಗಿ ಬ್ರಹ್ಮದೇವರು ಅಲ್ಲಿಗೆ ಬಂದರು. "ತಥಾಸ್ತು"ಎಂದರು.

"ಶತಮಾನಂ ಭವತಿ ಶತಾಯುಃ ಪುರುಷ ಶತೇಂದ್ರಿಯಃ ಆಯುಷ್ಯೇವೇಂದ್ರಿಯೇ ಪ್ರತಿತಿಷ್ಠತಿ"—ಎನ್ನುತ್ತಾ ತಮ್ಮ ಕಮಂಡಲದಲ್ಲಿದ್ದ ಉದಕವನ್ನ ನನ್ನ ತಲೆಯ ಮೇಲೆ ಸಂಪ್ರೋಕ್ಷಿಸಿ ದರು.

“ನಿರ್ಭಯಾಗ್ರಫಿ”ಯ ಮೂಲಮಂತ್ರ

ಅಂಜಿಕಿನ್ನ್ಯಾತಕಯ್ಯ | ಸಜ್ಜನರಿಗೆ | ಅಂಜಿಕಿನ್ನ್ಯಾತಕಯ್ಯ || ಪ ||
ಸಂಜೀವರಾಯರ ಸ್ಮರಣೆ ಮಾಡಿದ ಮೇಲೆ || ಅ.ಪ. ||

ಕನಸಿಲಿ ಮನಸಿಲಿ ಕಳವಳವಾದರೆ |
ಹನುಮನ ನೆನೆದರೆ ಹಾರಿ ಹೋಹುದು ಪಾಪ || ೧ ||

ರೋಮ ರೋಮಕೆ ಕೋಟಿ ಲಿಂಗವುದುರಿಸಿದ
ಭೀಮನ ನೆನೆದರೆ ಬಿಟ್ಟು ಹೋಹುದು ಪಾಪ || ೨ ||

ಪುರಂದರ ವಿಠಲನ ಪೂಜೆಯ ಮಾಡುವ
ಗುರು ಮಧ್ವರಾಯರ ಸ್ಮರಣ ಮಾಡಿದ ಮೇಲೆ || ೩ ||

* * *

ದೇವರನ್ನು ಒಪ್ಪಿದವನಿಗೆ ದಿಗಿಲಿಲ್ಲ;
ಗುರುವನ್ನು ನೆನೆದವಗೆ ಗಾಬರಿಯಿಲ್ಲ;
ಬೇವಾರ್ಸಿಯಲ್ಲದವನಿಗೆ ಭಯವಿಲ್ಲ.

“ಯೋಗಕ್ಷೇಮಂ ವಹಾಮ್ಯಹಂ” ಎನ್ನುತ್ತಾನೆ, ಭಗವಂತ :
“ನಿರ್ಭರೋ ನಿರ್ಭಯೋಽಸ್ಮಿ” ಎನ್ನುತ್ತಾನೆ, ಭಕ್ತ.

ದೇವರಿಲ್ಲದ ಗುಡಿಯು
ಹಾಳುಬಿದ್ದಂಗಡಿಯು;
ಪ್ರೇಮವಿಲ್ಲದ ಭಕ್ತಿ ನರಿಯ ಯುಕ್ತಿ—ಎನ್ನುತ್ತಾರೆ ಹರಿದಾಸರು.

Where the mind's without fear,
And the head held high...
Who is afraid of the Big Bad Wolf?

ಜಿ. ಪಿ. ರಾಜರತ್ನಂ ಅಂತರ್ದರ್ಶನ - 3

ಹಾಸ್ಯದ ಬಡಿಗೆ

ಮೊದಲನೇ ಮುದ್ರಣ :
31-12-1974, ಮಧ್ಯರಾತ್ರಿ

4Ring out the Old, Ring in the New;
Wring out the Old, Wring in the New.

ಇದು
ಜಿ. ಪಿ. ರಾಜರತ್ನಂ ಅವರ
ನಿರ್ಭಯಾಗ್ರಫಿ
ಮೂರನೇ ಕಂತು

ಒಳಗಿನ ವಿವರ

ಹಾಸ್ಯದ ಬಡಿಗೆ

ಪ್ರಿಯ ಚಂದ್ರಕೀರ್ತಿ,

'ಮುಟ್ಟಿದ್ದಕ್ಕೆ ಮೂರು ಸಲ' ಎಂದು ಹೇಳುವುದುಂಟು. 'ಮೂರಕ್ಕೆ ಮುಕ್ತಾಯ' ಎಂದೂ ಹೇಳುವುದೂ ಉಂಟು. ಯಾವುದೂ ಅತಿ ಆಗಬಾರದು.

ಕೇಳೋವ್ರಿನ್ನಾ ಕೇಳ್ಬೇಕೊಂತ
ಕುಂತ್ಕೊಂಡಿದ್ದಂಗೇನೆ-
ಯೋಳೋದ್ನೆಷ್ಟೋ ಅಷ್ಟ್ರಲ್ಲೇಳಿ
ಮನೇಗೋಗೋಣ್ನ ಮೇನೆ!

ಆದ್ದರಿಂದ ಇಲ್ಲಿಗೆ-ಫ಼ುಲ್ಸ್ ಸ್ಟಾಪ್!

'ಚಕ್ರವರ್ತಿ ವಜ್ರ' ಆದ ಮೇಲೆ 'ಕೊರವಂಜಿಯ ದಾರಿಯಲ್ಲಿ' ಆದ ಮೇಲೆ ಇದು 'ಹಾಸ್ಯದ ಬಡಿಗೆ'.

ಬಡಿಯುವುದಕ್ಕೆ ಯಾವುಯಾವುದನ್ನು ಬಳಸುತ್ತೇವೆಯೋ ಅದೆಲ್ಲ 'ಬಡಿಗೆ'. ಬಡಿಗೆ ಎಂದರೆ—೧. a stick, a staff, a cudgel; ೨.a, hammer, a mallet; ೩. ಬಡಗಿ ಎಂದೂ ಅರ್ಥ (ಕಿಟ್ಟೆಲ್.) ನನ್ನ ನಿರ್ಭಯಾಗ್ರಫಿ'ಯ ಮೂರು 'ಕಂತು'ಗಳಲ್ಲಿಯೂ ಹಾಸ್ಯದ ಬಡಿಗೆಯನ್ನು ಬಲ್ಲವರು ಮೆಚ್ಚಿಕೊಳ್ಳುವಂತೆ ಬೀಸಿದ್ದೇನೆ. ಎದುರಿಗೆ ನಿಂತ'ತರಿ'ಯನ್ನು 'ಹತ್ತರಿ' ಹೊಡೆದು, 'ನುಣ್ಣಗೆ' ಮಾಡಲು ಪ್ರಯತ್ನಿಸಿದ್ದೇನೆ, ಜಾತಿತಕ್ಷಕನಂತೆ.

೧. 'ಮೂರ್ಖಸ್ಯ ಹಾಸ್ಯೌಷಧಂ'

ಕೋಲನ್ನೋ ದೊಣ್ಣೆಯನ್ನೋ ದಡಿಯನ್ನೋ ಪ್ರಯೋಗಿಸಿದಾಗ–ನಿರುಪಯುಕ್ತವಾದ ನಿರ್ಜೀವಿಗಳು (ಕೆಟ್ಟ ಗಡಿಗೆ ಮಡಿಕೆಗಳಂಥವು) ಪುಡಿಯಾಗುತ್ತವೆ; ಪಕ್ಷಿಗಳೂ ಪ್ರಾಣಿಗಳೂ ಮನುಷ್ಯರೂ ಕೆಲವು ಸಂದರ್ಭಗಳಲ್ಲಿ ತಮ್ಮನ್ನು ತಾವು ತಿದ್ದಿಕೊಳ್ಳುವುದುಂಟು. ಸುತ್ತಿಗೆಗಳನ್ನು ಪ್ರಯೋಗಿಸುವುದು ನಿರ್ಜೀವಿಗಳ ಮೇಲೆ ಮಾತ್ರ. ಕಬ್ಬಿಣದ ಹ್ಯಾಮರ್ ಆಗಲಿ, ಮರದ ಮ್ಯಾಲೆಟ್ ಆಗಲಿ, ಇದರ ಏಟಿಗೆ ಈಡಾದ ವಸ್ತು ತನ್ನ ಅಸಮತೆಗಳನ್ನು ಕಳೆದುಕೊಂಡು, ಉಪಯುಕ್ತವಾದ ರೂಪವನ್ನು ತಾಳುತ್ತದೆ. ಇಷ್ಟೆಲ್ಲ ಪರಿವರ್ತನೆ ಆಗಬೇಕಾದರೆ, ಬಡಿಗೆಯನ್ನು ಬೀಸಲೇಬೇಕಾಗುತ್ತದೆ.

ಸುಪ್ಪತ್ತಿಗೆಯಾಗಿರಬೇಕಾದ ಹಾಸ್ಯ ಕೆಲವು ವೇಳೆ ಸುತ್ತಿಗೆಯಾಗಬೇಕಾಗುತ್ತದೆ. ಇಲ್ಲಿ ಹಾಗಾಗಿದೆ.

ನಮಗೆ ಬೇಕಾದವರಿಗೆ ಏನಾದರೂ ಕಾಯಿಲೆ ಬಂದರೆ, ಅವರಿಗೆ ಬೇಗ ಬೇಗ ಗುಣವಾಗಲೆಂಬ ಪ್ರೀತಿಪೂರ್ವಕವಾದ ಸದುದ್ದೇಶದಿಂದಲೇ ಆಲೋಪತಿ, ಹೋಮಿಯೋಪತಿ, ಆಯುರ್ವೇದ, ಯುನಾನಿ, ನಾಟಿ ಮೊದಲಾದ ಸುಪ್ರಸಿದ್ಧ-ಅಪ್ರಸಿದ್ಧ-ಕುಪ್ರಸಿದ್ಧ ಪದ್ಧತಿಯ ಔಷಧಗಳನ್ನೆಲ್ಲ ಪ್ರಯೋಗಿಸುವುದಿಲ್ಲವೇ ಅದರ ಹಾಗೆ-ನಾನಾದರೂ ಈ ಮೂರು ಪುಸ್ತಿಕೆಗಳಲ್ಲಿ ನನಗೆ ತಿಳಿದಿರುವ ಹಾಸ್ಯಾರೋಗ್ಯವೈದ್ಯಜ್ಞಾನದ ಔಷಧಿಗಳನ್ನೆಲ್ಲ ಪ್ರಯೋಗಿಸಿದ್ದೇನೆ. ಭಸ್ಮ, ಚೂರ್ಣ, ಲೇಹ್ಯ, ಗುಳಿಗೆ, ಆಸವ, ಅರಿಷ್ಟ, ಮಾತ್ರೆ, ಕುಪ್ಪಿ, ಚುಚ್ಚು ಮದ್ದು, bad-blood-letting,

ಚಿಟಿಕೆ, ಬರೆ, ವಿರೇಚಕ ಇತ್ಯಾದಿ, ರೋಗಿಗೆ ಸಾಕುಸಾಕೆನಿಸುವಷ್ಟು ಪ್ರಿಸ್‌ಕ್ರೈಬ್ ಮಾಡಿದ್ದೇನೆ. ಚಿಪ್ಪುದಪ್ಪವಾಗಿ ಯಾವುದೂ ಮೈಗೆ ಅಂಟದೆಹೋದರೆ-ನಾನು ಏನೂ ಮಾಡುವಂತಿಲ್ಲ. ವೈದ್ಯೋ ನಾರಾಯಣೋ ಹರಿಃ!

೨. 'ಕಂತು' ಆದ ಮೇಲೆ 'ಕಂತು'

'ಕಂತು' ಎಂಬುದು ಅನೇಕಾರ್ಥಗಳನ್ನು ಉಳ್ಳಪದ. ಆದ್ದರಿಂದ ಇದನ್ನು ಬಳಸಿದ್ದೇನೆ.

1) 'ಕಂತು' ಎಂದರೆ 'ಸೂರ್ಯನು ಪಶ್ಚಿಮದಲ್ಲಿ ಇಳಿಯುವ ಹಾಗೆ ಇಳಿ' ಎಂದರ್ಥ. ನಲವತ್ತನ್ನು ದಾಟಿದವರ ನಡಗೆಯೆಲ್ಲ ಇಷ್ಟೇ ತಾನೆ. ಮತ್ತೆ, ೬೬ ಅನ್ನು ಮುಗಿಸುತ್ತಿರುವ ನಾನು ಕಂತದಿರುವುದು ಹೇಗೆ? ಆದರೂ ಮುಳುಗಿಹೋಗುತ್ತಿರುವ ಸೂರ್ಯನು ಕೂಡ ದಿವಾಭೀತರಾದ ಉಲೂಕಗಳಿಗೆ ತಾಪವನ್ನು ಮುಟ್ಟಿಸಿ, ಭಯವನ್ನು ಉಂಟುಮಾಡುವುದಿಲ್ಲವೇ? ಹಾಗೆಯೆ, ಅದಕ್ಕೇ, ಇವು ನನ್ನ 'ನಿರ್ಭಯಾಗ್ರಫಿ'ಯ 'ಕಂತು'.

2) 'ಕಂತು' ಎಂಬುದಕ್ಕೆ ತುಳುವಿನಲ್ಲಿ 'to pierce'(ತಿವಿ, ಚುಚ್ಚು, ನಾಟು) ಎಂದೂ ಅರ್ಥವಿದೆ (ಕಿಟ್ಟೆಲ್). ಈ 'ಕಂತು' ಗಳಲ್ಲಿ ಹಾಗೆ ತಿವಿವ, ಚುಚ್ಚುವ, ನಾಟುವ ಹಾಸ್ಯಾಸ್ತ್ರಗಳು ಯಥೇಷ್ಟವಾಗಿ ಇವೆ.

3) 'ಕಂತು' ಎಂಬುದು ಸೌಂದರ್ಯದ ಅಧಿದೇವತೆಯಾದ ಕಾಮನಿಗೆ ಹೆಸರು. ಈ ಪುಸ್ತಿಕೆಗಳೊಳಗಿರುವ ಪ್ರಹರಣಾಯುಧ ಗಳೆಲ್ಲವೂ ಸಾಹಿತ್ಯದ ಸೌಂದರ್ಯವನ್ನು ಮೆಯ್ಯಾಗಿ ಹೊಂದಿರು

ವುದರಿಂದ ಇವು 'ಕಂತು'.

4) 'ಕಂತು' ಎಂದರೆgranary, ಎಂದರೆ ಕಣಜ. ಈ ಪುಸ್ತಿಕೆಗಳಲ್ಲಿ ಸೂಕ್ತಿ, ಸುಭಾಷಿತ, ಗಾದೆ, ಕತೆ, ಅನ್ಯಾಪದೇಶಗಳು ಸಮೃದ್ಧಿಯಾಗಿ ಇರುವುದರಿಂದ ಇವೂ ಕಣಜಗಳೇ.

5) ಹೇಳಬೇಕಾದ್ದನ್ನು ಒಂದು ನೂರು ಪುಟಗಳಲ್ಲಿ ಒಂದು ಉಂಡೆಯಾಗಿ ಕೊಟ್ಟುಬಿಡದೆ, ಮೂರು ಅಂಶಗಳಲ್ಲಿ, ತಿಂಗಳಿಗೊಂದರಂತೆ ಕೊಟ್ಟ ಕಾರಣದಿಂದ ಇವು ಒಂದೊಂದೂ ಒಂದು ಅಂಶ, instalment, ಕಂತು. ಒಟ್ಟಾಗಿ ಕೊಟ್ಟರೆ, 'ಬೀರ್ ಇಳಿಯದ ಗಂಟಲೊಳ್ ಬ್ರೆಡ್ಡಂ ತುರುಕಿದಂತೆ' ಎಲ್ಲಿ ಉಸಿರು ಸಿಕ್ಕಿಕೊಂಡು ಏನು ಅನಾಹುತವಾಗಿಬಿಡುವುದೋ ಎಂಬ ಭೂತದಯಪರವಾದ ಬುದ್ಧಿಯಿಂದ ಹೀಗೆ ತುತ್ತು ಹಾಕಲಾಗಿದೆ.

6) ಸಂಸ್ಕೃತದಲ್ಲಿ ಚೆಂಡನ್ನು 'ಕಂತುಕ'(ಕಂದುಕ) ಎಂದು ಕರೆಯುತ್ತಾರೆ. ಸ್ವಾರ್ಥಸೂಚಕವಾದ 'ಕ' ಪ್ರತ್ಯಯವನ್ನು ತೆಗೆದುಬಿಟ್ಟರೆ ಉಳಿಯುವ 'ಕಂತು' ವಿಗೂ ಚೆಂಡು ಎಂದೇ ಅರ್ಥವಾಗುತ್ತದೆ. ಇಂತಹ ಅನೇಕ ತರಹೆಯ ಚೆಂಡುಗಳನ್ನು (ಉದಾ: Foot-ball, Volley-ball, Hockey-ball, Cricket-ball, Tennis-ball. Cannon-ball ಇತ್ಯಾದಿಯಾದ ಎಷ್ಟೋ soft and hard balls ಅನ್ನು) ಇಲ್ಲಿ ಸರ್ವ್ ಮಾಡಿರುವ ಕಾರಣದಿಂದಲೂ ಇವು 'ಕಂತು'.

೩. 'ಕೋಪಗರ್ಭಸ್ಮಿತ'

"ನೀವು ಯಾರನ್ನು ಗುರಿ ಮಾಡಿಕೊಂಡು ಈ ಛೀಬಾಣ,

ಘೂಬಾಣ, ಥೂಬಾಣಗಳನ್ನು ಎಸೀತಿದೀರೋ ಅವರಿಗೆ-ಇದನ್ನೆಲ್ಲಾ ಓದಿದರೆ ಕೋಪಬರೊಲ್ವಾ? ಅವರ ಮನಸ್ಸಿಗೆ ನೋವಾಗೊಲ್ವಾ?" ಅಂತ ಈ ಕಂತುಗಳನ್ನು ಓದಿದವರು ಒಬ್ಬಿಬ್ಬರು ಕೇಳಿದ್ದಾರೆ. ಅವರಿಗೆ ನನ್ನ ಉತ್ತರ ಇಷ್ಟೆ:-

"ಕೋಪ ಬರುತ್ತೋ ಇಲ್ಲವೋ, ನೋವಾಗುತ್ತೋ ಇಲ್ಲವೋ ನಾ ಕಾಣೆ. ಆದರೆ, ನನ್ನ ಹಾಸ್ಯೇಂದ್ರಿಯ ಪಟುವಾಗಿರುವ ಹಾಗೆ ಅವರದೂ ಪಟುವಾಗಿದ್ದರೆ, ಅವರಿಗೆ ಕೋಪಬರಬಾರದು, ನೋವು ಆಗಬಾರದು. ಹಾಗೇನಾದರೂ ಆದರೆ, ಹಾಸ್ಯ ಅವರ ಹಿಡಿತದಲ್ಲಿ ಇಲ್ಲ ಎಂದ ಹಾಗಾಯಿತು. ಹಾಸ್ಯ ನಿಜವಾಗಿಯೂ ಅವರಿಗೆ 'ರಕ್ತಗತ'ವಾಗಿದ್ದರೆ—'ಎಲಾ! ಮುದುಕನಾಗಿ ಹಲ್ಲಿಲ್ಲದೆ ಹೋದರೂ ಹ್ಯಾಗೆ ಕಚ್ಚಾನೋ ಹಾಳಾದೋನು!'—ಅಂತ ಮುಟ್ಟಿ ನೋಡ್ಕೊಂಡು ಮೆಚ್ಕೋಬೇಕು. ಅದು ಗಂಡಸ್ತನ! ಸೈರಣೆ ಕಳಕೊಂಡು ಗಾಡ್ರೆಜ್‌ನಲ್ಲಿರೋದನ್ನ ಕೈಗೆತ್ತಿಕೋಬಾರ್ದು; ಅದು ಬಾಯ ಹತ್ತಿರ ಬರಲೇಬಾರ್ದು. ಅಷ್ಟೇ ಅಲ್ಲ... ನಲವತ್ತು ವರ್ಷಗಳಿಂದ ನನ್ನ 'ಪಾಂಡಿತ್ಯ'ವನ್ನ ಮೆಚ್ಚಿಕೊಂಡಿರೋವರಿಗೆ, ಈಗಲೂ ಮೆಚ್ಚಿಕೋತೀನಿ ಅಂತ ಹೇಳೋವರಿಗೆ, ಈ ಮೂರು ಕಂತುಗಳಲ್ಲಿ ತುಂಬಿ ತುಳುಕುತಿರೋ ನನ್ನ ಪಾಂಡಿತ್ಯಾನ ಮೆಚ್ಚಿಕೊಳ್ಳೋಕೆ ಏನೇನೂ ಕಷ್ಟ ಆಗಬಾರದು.

ಒಂದು ರೀತಿಯ ನಗು ಇದೆ: ಅದರ ಗರ್ಭದಲ್ಲಿರುವುದು ಕೋಪ; ಅದನ್ನು ಸುತ್ತಿಕೊಂಡು ಅದರ ಮೇಲಿರುವುದು ಮಂದವಾದ 'ಸ್ಮಿತ'ದ ಲೇಪ. ಇದನ್ನು ಪಂಪ 'ಕೋಪಗರ್ಭಸ್ಮಿತ' ಅಂತ ಕರೆದಿದ್ದಾನೆ. ನನ್ನ ನಗು ಈ ವರ್ಗಕ್ಕೆ ಸೇರಿದ್ದು.

ಕೋಪ ತನ್ನಿಂದ ತಾನೆ ಕೆಟ್ಟದ್ದಲ್ಲ. ಯಾವುದನ್ನು 'ಅರಿಷಡ್ವರ್ಗ' ಎನ್ನುತ್ತೇವೋ ಅವು ಧರ್ಮಕ್ಕೆ ವಿರೋಧವಾಗದೆ ಹೋದರೆ, ಅವೇ 'ಮಿತ್ರಷಡ್ವರ್ಗ'ವೆನ್ನಿಸುತ್ತವೆ. 'ಧರ್ಮಾ ವಿರುದ್ಧೋ ಭೂತೇಷು ಕಾಮೋಽಸ್ಮಿ' ಎಂಬ ಭಗವದ್ವಚನವನ್ನು ಅನುಸರಿಸಿ 'ಧರ್ಮಾವಿರುದ್ಧೋ ಭೂತೇಷು ಕ್ರೋಧೋಽಸ್ಮಿ' ಎಂದೂ ಹೇಳಬಹುದು.

ನಾವು ಯಾವುದನ್ನು 'ತಲೆಗೆಲ್ಲಾ ಒಂದೇ ಮಂತ್ರ' ಮಾಡಿ ಕೊಂಡು 'ಕೋಪ' ಎನ್ನುತ್ತೇವೆಯೋ ಅದಕ್ಕೆ ಸಮೀಪಬಂಧು ಗಳಾದ, ಆದರೂ ವಿಶಿಷ್ಟವಾದ ಅರ್ಥವನ್ನುಳ್ಳ ಶಬ್ದಗಳು ಇವೆ. ಉದಾಹರಣೆಗೆ-ಸಂಸ್ಕೃತದ ಕ್ರೋಧ, ರೋಷ, ಆಗ್ರಹ; ಕನ್ನಡದ ಮುನಿಸು, ಕೆರಳು, ಸಿಟ್ಟು, ರೇಗು; ಇಂಗ್ಲಿಷಿನ anger, rage, wrath, fury, ire, indignation ಇತ್ಯಾದಿ.

ಈ ಕಂತುಗಳ ಹಾಸ್ಯದೊಳಗೆ ಅಡಗಿರುವ 'ಕೋಪ' ಎಂಬುದು indignation i.e., anger excited by supposed meanness, injustice, wickedness or misconduct. ನಾವು ಯಾವ ಸರಸ್ವತಿಯನ್ನು 'ಸರ್ವಶುಕ್ಲಾ' ಎಂದು ಪ್ರೀತಿ ಗೌರವಗಳಿಂದ ಭಾವಿಸುತ್ತೇವೋ ಆ ತಾಯಿಯ ಮೂರ್ತಿಯನ್ನು ಕೆಡಿಸಲು ಯಾರಾದರೂ ಉದ್ಯೋಗಿಸಿದರೆ-ಅದನ್ನು ಕಂಡು ಉಂಟಾಗುವ ಕೋಪ Righteous indignation (Divine wrath ಇದ್ದ ಹಾಗೆ.) ಆ ಕೋಪವು constructive ಆಗಬೇಕು ಎಂಬ ಉದ್ದೇಶದಿಂದ ಅದನ್ನು humourನ ಜೊತೆಯಲ್ಲಿ blend ಮಾಡಿದ್ದೇನೆ. 'ಪಾತುಂ ತಿಕ್ತಮಿವೌಷಧಂ

ಮಧುಯುತಂ ಹೃದ್ಯಂ ಕಥಂ ಸ್ಯಾದಿತಿ' ಎಂದ ಹಾಗೆ ಈ ಕಂತುಗಳೊಳಗಿನ ಬರವಣಿಗೆ ಹೃದ್ಯವಾಗಿದೆಯೆಂದು ಸಹೃದಯರು ಆಶ್ವಾಸನೆ ಕೊಟ್ಟಿದ್ದಾರೆ. ಅಂಥವರು ಮೆಚ್ಚಿಕೊಂಡಿರುವುದು, ನನಗೆ ಅಷ್ಟು ಸಾಕು.

'ನಿಮಗೆ ಯಾರ ಮೇಲೋ ಮುನಿಸು ಬಂದ ಹಾಗಿದೆ' ಎಂದು ಒಬ್ಬರು ಬರೆದಿದಾರೆ. 'ಬಂದಹಾಗಿದೆ' ಅಲ್ಲ;'ಬಂದಿದೆ'. ಆದರೆ ಈ ಮುನಿಸು ಎಂಥದು? ಇದು ಏಕೆ? ಬಸವಣ್ಣನವರ ಈ ವಚನಗಳನ್ನು ಕೇಳಿ:

"ತಂದೆ ಮಕ್ಕಳಿಗೆ ಬುದ್ಧಿಯ ಹೇಳುವಲ್ಲಿ ತಪ್ಪಿಂಗೆ ಮುನಿವನಲ್ಲದೆ ಪ್ರಾಣಕ್ಕೆ ಮುನಿಯ. ಲಿಂಗವಂತನು ಲಿಂಗವಂತರಿಗೆ ಬುದ್ಧಿಯ ಹೇಳುವಲ್ಲಿ, ಅವರವರಗುಣಕ್ಕೆ ಮುನಿವನಲ್ಲದೆ ಲಾಂಛನಕ್ಕೆ ಮುನಿಯ".

ಯಾರ ಮೇಲೆ ನಾನು ಮುನಿದಿದ್ದೇನೆಯೋ ಅವರು ಎತ್ತರ, ಗಾತ್ರ, ಮೂಳೆ, ಚಕ್ಕಳ, ಗಡ್ಡ, ಹೊಂನು, ಹೆಂಣು, ಮಂಣು, ಬೆರಳು, ನಾಲಗೆ, ಬುದ್ಧಿ ಮುಂತಾದವುಗಳಲ್ಲಿ ನನಗಿಂತ ತುಂಬ ದೊಡ್ಡವರೆಂದು ಬೇಷರತ್ತಾಗಿ ನಾನು ಒಪ್ಪಿಕೊಂಡರೂ, ಒಂದು ವಿಷಯದಲ್ಲಿ ಮಟ್ಟಿಗೆ ಅವರು ನನಗೆ ಎಂದೆಂದಿಗೂ 'ಚಿರಂಜೀವಿ'ಯೇ! ಏಕೆಂದರೆ, 'ಬಂಡವಾಳವಿಲ್ಲದ ಬಡಾಯಿ'ನ ನಾಯಕನಾದ ಅಹೋಬ್ಳುವಿಗೆ ಕ್ಲಾರ್ಕಾದ ಬಾಳುವಿನ ಹಾಗೆ ಇವರು 'ಹುಟ್ಟಿದ್ದೇ ಲೇಟು!' ಆದ್ದರಿಂದ ಇವರಿಗೆ ನಾನು ಎಂದೆಂದೂ ಲೇಸನ್ನು ಬಯಸುವವನೇ. ಅವರಿಗೂ ನನಗೂ ಸಮಾನವಾದ 'ಲಿಂಗ' ಯಾವುದೆಂದರೆ-ನಮ್ಮಿಬ್ಬರನ್ನೂ ಕಾಪಾಡು

ತ್ತಿರುವ ಕನ್ನಡ. ನಮ್ಮಿಬ್ಬರಿಗೂ ಸಮಾನವಾದ ಲಾಂಛನ: ನಮ್ಮಿಬ್ಬರನ್ನೂ ಬದುಕಿಸುತ್ತಿರುವ ಹಾಸ್ಯ. ಇಂತಹ ಜೀವನದಿ ಯೊಳಕ್ಕೆ ನಮ್ಮ ಕಾರ್ಖಾನೆಗಳಿಂದ Pollutants ಅನ್ನು discharge ಮಾಡುವುದು ಬೇಡ. 'ಇದು ಸಲ್ಲದು' ಎಂದು protest ಮಾಡುವುದಕ್ಕಾಗಿ ಈ ಮೂರು ಕಂತುಗಳನ್ನು ರಚಿಸಿ ದ್ದಾಯಿತು, ಪ್ರಕಟಿಸಿದ್ದಾಯಿತು. ಇನ್ನು ಇದು ಇಲ್ಲಿಗೆ ಸಾಕು.

೪. ಧರ್ಮರಾಜನ ದಕ್ಷಿಣಭುಜಸ್ತಂಭ

ಪಂಪಭಾರತದಲ್ಲಿ ಈಯೊಂದು ಪದ್ಯ ಬರುತ್ತೆ. ಸಂದರ್ಭ ಏನೆಂದರೆ—ಪಾಂಡವರು ಹನ್ನೆರಡು ವರ್ಷ ವನವಾಸವನ್ನೂ ಒಂದು ವರ್ಷ ಅಜ್ಞಾತವಾಸವನ್ನೂ ಮುಗಿಸಿ, ಹದಿಮೂರು ವರ್ಷ ಕೌರವರು ಕೊಟ್ಟ ಕಿರುಕುಳಗಳನ್ನು ಸಹಿಸಿ, ತಮ್ಮ ರಾಜ್ಯ ತಮಗೆ ಬರಬೇಕೆಂದು ಕೇಳುತ್ತಿದ್ದಾರೆ. ಆದರೆ ದುರ್ಯೋಧನ ಕೊಡುತ್ತಿಲ್ಲ. ಆಗ, ಕೃಷ್ಣ ಸಂಧಾನಕ್ಕೆ ಹೊರಟ ಸಂದರ್ಭದಲ್ಲಿ, ಧರ್ಮರಾಜ ಹೀಗೆ ಹೇಳುತ್ತಾನೆ:

ಅವನೀನಾಥನ ಗೆಯ್ದ ಪೊಲ್ಲಮೆಗಂ(ಕುರುರಾಜನು ಮಾಡಿದ ದುಷ್ಟ ತನಕ್ಕೂ) ಎನ್ನ ಒಳ್ಪಿಂಗಂ (ನನ್ನ ಒಳ್ಳೆಯತನಕ್ಕೂ) ಇಂ ಸಕ್ಕಿಯಾಗು (ಇನ್ನು ನೀನು ಸಾಕ್ಷಿಯಾಗು.) ಅವನ್ (ಆ ದುರ್ಯೋಧನನು) ಈವಅಂತುಟಂ(ಕೊಡುವ ಅಷ್ಟನ್ನೂ) ಈಯದ ಅಂತುಟಂ (ಕೊಡದ ಅಷ್ಟನ್ನೂ) ಬಲ್ಲಂತು(ನೀನು ತಿಳಿದ ಹಾಗೆ) ಕಾಲ್‌ಕುತ್ತಿ(ಕಾಲಿನಿಂದ ಕರೆದು, ಎಂದರೆ ಹೆಚ್ಚು ಶ್ರಮಪಡದೆ) ನೋಡು. ಅವನೀಭಾಗದೊಳ್ (ಕುರುಭೂಮಿಯಲ್ಲಿ) ಎನ್ನ ಭಾಗಮಂ ಅದಂ(ನನ್ನ ಭಾಗವಾದದ್ದನ್ನು) ತಾನ್ ಈಯದೆ

ಇರ್ದಾಗಳ್ (ಅವನು ತಾನಾಗಿಯೇ ಕೊಡದೆ ಇದ್ದಾಗ)- ಆ ದುರ್ಯೋಧನನನ್ನು ಯುದ್ಧದಲ್ಲಿ ಕೊಲಲ್ (ಕೊಲ್ಲುವುದಕ್ಕೆ)-

ಎನ್ನ ಅವನೀ ರಕ್ಷಣ ದಕ್ಷ(ನನ್ನ ಭೂಮಿಯನ್ನು ರಕ್ಷಿಸಿ ಕೊಳ್ಳುವುದಕ್ಕೆ ಸಮರ್ಥವಾದ) ದಕ್ಷಿಣ ಭುಜಸ್ತಂಭಂ(ಕಂಬದ ಹಾಗಿರುವ ನನ್ನ ಬಲದೋಳು) ಸಾಲದೇ (ಸಾಕಾಗುವುದಿಲ್ಲವೇ!)

'ಎನ್ನವನೀರಕ್ಷಣದಕ್ಷ ದಕ್ಷಿಣಭುಜಸ್ತಂಭಂ' ಎಂಬ ಈ ಪದಪುಂಜ ನನಗೆ ತುಂಬ ಪ್ರಿಯವಾದದ್ದು. ಆದರೆ, ನನ್ನ ದಕ್ಷಿಣ ಭುಜಸ್ತಂಭದಲ್ಲಿ ನಾನು ಹಿಡಿದೆತ್ತಿರುವುದು ಕತ್ತಿಯನ್ನಲ್ಲ; ನನ್ನದೆ ಯಲ್ಲಿರುವುದನ್ನು ಖಚಿತವಾಗಿ ಹೊರಗೆಡಹುವ ಸಾಮರ್ಥ್ಯವುಳ್ಳ ಲೇಖನಿಯನ್ನು! ನಾನು ಮಾಡುತ್ತಿರುವುದು ನನ್ನ 'ಅವನೀರಕ್ಷಣ'! ಕನ್ನಡ ಸಾಹಿತ್ಯದ ಕ್ಷೇತ್ರ ನನ್ನ 'ಅವನೀ'! ಅದು ಮಲಿನವಾಗದಂತೆ, ಅದು ನಿರ್ಮಲವಾಗಿರುವಂತೆ ನೋಡಿಕೊಳ್ಳುವುದಕ್ಕಾಗಿ ನಾನು ಹಿಡಿದಿರುವ ನನ್ನ ಪೆನ್ನೇ ನಾನು ಪ್ರಯೋಗಿಸಿರುವ ಪರಕೆ. (ಈ 'ನಿರ್ಭಯಾಗ್ರಫಿ'ಯ ಮೊದಲನೇ ಕಂತಾದ 'ಚಕ್ರವರ್ತಿ ವಜ್ರ'ಕ್ಕೆ ನಾಂದಿಯಂತಿರುವ 'ರಾಜರತ್ನಂ ಪರಕೆ'ಯನ್ನು ನೆನಪು ಮಾಡಿಕೊಳ್ಳಿ.)

ಎರಡೂವರೆ ವರ್ಷಗಳ ಹಿಂದೆ, 'ಇದಕ್ಕೆ ನೀವು ಏನಾದರೂ ಉತ್ತರ ಕೊಡಬೇಕು' ಎಂದು ನೀವು ಬಂದಾಗ. 'Get thee behind me, Satan!' ಎಂದು ನಾನು ಅಂದದ್ದು ನಿಮಗೆ ಜ್ಞಾಪಕ ಇರಬಹುದು. ಆದರೆ, ಹೀಗೆ ನೀವು ನನಗೆ ಮೂಗುದಾರ ಹಾಕಿ ಎಳೆದು ನನ್ನ ಬಾಯಿಬಿಡಿಸುತ್ತೀರೆಂದು ನಾನು ಎಣಿಸಿರಲಿಲ್ಲ. ಆದರೆ, ಈಗ ಇದುವರೆಗೂ ನಾನು ಬರೆದು, ನೀವು ಹಣ ಸುರಿದು,

ಪ್ರಕಟವಾಗಿರುವ ಮೂರು ಪುಸ್ತಿಕೆಗಳನ್ನು ಮತ್ತೊಮ್ಮೆ ಓದಿದಾಗ-ಮಹಾಕವಿಯಾದವನು 'ತನ್ನ ಕಾವ್ಯಕೆ ತಾನೆ ಮಣಿಯುವಂತೆ' ಎನ್ನುವುದು ನನಗೆ ಅರ್ಥವಾಗುತ್ತಿದೆ.

ಸ್ವಯಂ ಕವಿಯೂ ಕಲಿಯೂ ಆಗಿದ್ದ ನಮ್ಮ ನಾಡೋಜನಾದ ಪಂಪನು ತನ್ನ ಬಾಹುಬಲಿಯ ಮುಖದಿಂದ—'ಆರ ಅಳವುಮಂ ಈ ಧರೆ ಅರಿಯಲೊಡಂ ತೂಗಲ್ ಧರೆಗೆ ತುಲಾದಂಡಮಲ್ತೆ ಮದ್ಭುಜದಂಡಂ...ಸಂಗರನಿಕಷದೊಳ್ ಎಮ್ಮ ಅಂದಮಂ ನೀನೆ ಕಾಣ್ಬೈ!' ಮುಂತಾಗಿ ಹೇಳಿದ್ದಾನೆ. ಆತನ ಗರುಡಿಯಲ್ಲಿ ತಯಾರಾದ ನಾನು ಈ ಮೂರು ಪುಸ್ತಕಗಳಲ್ಲಿಯೂ ವಿಧವಿಧವಾದ barbed-wireನ ಬಾಣಗಳನ್ನು ಪುಂಖಾನು ಪುಂಖವಾಗಿ ಪ್ರಯೋಗಿಸಿದ್ದೇನೆ. ಇವು ಯಾರಿಗೆ ಎಲ್ಲಿ ಎಷ್ಟು ಕಂತು(ನಾಟು)ತ್ತವೆ ಎಂಬುದನ್ನು ಓದುಗರಿಗೇ ಬಿಡುತ್ತೇನೆ.

೫. 'ನಾಲ್ಕಕ್ಕೆ ನೆಮ್ಮದಿ'

'ಮೂರಕ್ಕೆ ಮುಕ್ತಾಯ' ಎಂದರೂ 'ನಾಲ್ಕಕ್ಕೇ ನೆಮ್ಮದಿ'. ಆದ್ದರಿಂದ ಹೇಳಬೇಕಾಗಿರುವ ಇನ್ನೂ ಕೆಲವು ವಿಷಯಗಳು ಮುಂದಿನ ನಾಲ್ಕನೇ ಪುಸ್ತಕಕ್ಕೆ ಮೀಸಲು. ಅದು ನನ್ನ 'ನಿರ್ಭಯಾಗ್ರಫಿ'ಯ ತುರೀಯ (ತುರಿಗೆ ಸಂಬಂಧಪಟ್ಟ) ಪುಸ್ತಿಕೆ. ಅದರ ಹೆಸರು "ಕಿರುಹಾಸ್ಯದ ಕೊಸರು".

ನನ್ನ ಈ ಹೊಸ ಕೃತಿ ರೂಪುಗೊಳ್ಳುವುದಕ್ಕೆ ನಿಮಿತ್ತಕಾರಣರಾಗಿ, ನನ್ನನ್ನು 'ನಿದ್ದೆಗಳೆದೆದ್ದ ಸಿಂಹ'ವನ್ನಾಗಿ ಮಾಡಿದ

'ಭಿನ್ನವತ್ತಳೆ'ಯ ಕರ್ತೃಗಳಿಗೂ-

ಇದು ಪ್ರಕಟವಾಗುವುದಕ್ಕೆ ಅನಿಮಿತ್ತಕಾರಣರಾದ ನಿಮಗೂ ನಿಮ್ಮ ಜೊತೆಯ ಮಿತ್ರರಿಗೂ ನನ್ನ ಹೃತ್‌ಪೂರ್ವಕವಾದ ಕೃತಜ್ಞತೆಗಳನ್ನು ಒಪ್ಪಿಸಿ—

'ಪುರುಷ ಸರಸ್ವತಿಯ ಪುನರುತ್ಥಾನ'ವಾದ ನನ್ನ 'ನಿರ್ಭಯಾಗ್ರಫಿ'ಯ ಮೂರು ಕಂತುಗಳನ್ನು ನಮ್ಮ ಕನ್ನಡ ಹಾಸ್ಯದೇವಿಯ ಪಾದಾರವಿಂದಗಳಲ್ಲಿ ಸಮರ್ಪಿಸುತ್ತಿದ್ದೇನೆ.

ಮುಗಿಸುವುದಕ್ಕೆ ಮುಂಚೆ, ನಯಸೇನ ಹೇಳಿರುವ ಈಯೊಂದು ಮಾತನ್ನು ಕೇಳಿಬಿಡಿ:—

ಕಲಿತನದಿಂದಂ ಲೋಗರ್
ಪುಲಿಯಂ ಪಿಡಿದೊಡಮದೇಂ ಬಿಡೆಂಬರ್! ತಾಮೊಂ-
ದಿಲಿಯಂ ಪಿಡಿದೊಡಮದೆ ಪೇರ್-
ಬುಲಿಯೆಂಬರ್ ದುರ್ಜನರ್ಗೆ ತಾನಿದು ಸಹಜಂ!

ಅನ್ವಯ ಸ್ಪಷ್ಟವಾಗಿದೆ, ಅರ್ಥ ಮಾಡಿಕೊಳ್ಳಿ.

—ಜಿ.ಪಿ. ರಾಜರತ್ನಂ

‘ಶಾಮಂಣ’ನ ಪತ್ರ

My dear Raಜಂಣ,

ನಿನ್ನ ಯಾರು ಏನು ‘ಚಕ್ರವರ್ತಿ’ ಅಂತ ಕರೆದರೂ, ನೀನು ನನಗೆ ಅವ್ವೊತ್ತಿನ ‘ರಾಜ’ನೇ.

ನಿನಗೆ ಜ್ಞಾಪಕವಿಲ್ದಿದ್ರೂನೂವೆ ನಾನು ಮರ್ತೇನೇ?... ಅಲ್ಲಾ—ನಾವಿಬ್ರೂ ಹುಟ್ಟಿದ್ದು ಒಂದೇ ದಿನ! ಒಂದೇ ನಕ್ಷತ್ರ! ಒಂದೇ ಲಗ್ನ!... ಎದುರು ಬದುರು ಮನೇಲಿ ಲವಕುಶರ ಹಾಗೆ ಹುಟ್ಟಿದಿವಿ! ಶೈಶವ... ಬಾಲ್ಯ... ಅಶ್ವಿನೀಕುಮಾರರ ಹಾಗೆ ಕಳೆದಿವಿ...ಸ್ಕೂಲಿಗೆ ಸೇರಿದ್ದೊಂದೇ ದಿನ! ಒಂದೇ ಕ್ಲಾಸು! ಒಂದೇ ಬೆಂಚ್ನಲ್ಲಿ ಕೂತ್ಕೊಂಬೋದು!... ಠೋಕ್ರು ತಿನ್ನಿ.. ಗೋತಾ ಹೊಡೀಲಿ ಪರೀಕ್ಷೇಲಿ... ಚಕ್ಕರ್ ಕೊಡಲಿ ಕ್ಲಾಸ್ಗೆ.. ಇಬ್ರೂ ಜೊತೇಲೇ!... ಪರೀಕ್ಷೇಲಿ ಹತ್ಹತ್ತರ್ಲೇ ಕೂತ್ಕೊಳ್ಳೋದು... ಕಾಪೀಯೆಂಬೋ ಬಾಬ್ತೇ ಇಲ್ಲ... ಯಾಕೆ ಅಂದರೆ ಇಬ್ಬರ್ಗೂ ಅನ್ಸರ್ಸೇ ಗೊತ್ತಿಲ್ಲ....

ಇಂಥಾ Noble Sentiment of friendship ಅನ್ನೋದನ್ನ whole school prove ಮಾಡಿದ್ದು ಜ್ಞಾಪಕ ಇದೆಯಾ? ಆ ಕನ್ನಡ ಮುನ್ಷಿಗಳನ್ನ ಸ್ವಲ್ಪ ಲೇವಡಿ ಎಬ್ಸಿದ್ದಕ್ಕೆ ಆ ಪಾಷಾಣ ಹೃದಯಿ... ಕ್ರೂರಾತ್ಮ.... ಕಠಿಣಮನಸ್ಕ...

ಬಾಲವ್ಯೆರಿ... ಹೆಡ್ಮಾಸ್ಟ್ರು ನಮ್ಮಿಬ್ಬರನ್ನೂ... ಈ ಕೈಯಲ್ಲೊಬ್ಬನ್ನ ಆ ಕೈಯಲ್ಲೊಬ್ಬನ್ನ ಹಿಡಕೊಂಡು... ಶ್ರೀಮದ್ರಾಮಾಯಣದಲ್ಲಿ ರಾಮಲಕ್ಷ್ಮಣರನ್ನು ಎಳಕೊಂಡು ಹೋಗ್ತಾನೆ ನೋಡು... ಅರಣ್ಯಕ್ಕೆ ವಿಶ್ವಾಮಿತ್ರ.... ಹಾಗೆಳಕೊಂಡು ಹೋಗಿ.... ರೂಮ್ಗೆ... ಒಂದೇ ಬೆತ್ತದಿಂದ... bond of loveಊ.... ಚಡಾಯ್ಸಿ, ಸಿಪ್ಪೆ ಸುಲಿದು, ಹುಗ್ಗಿ ಇಟ್ಟು, ಡಿಸ್‌ಮಿಸ್ ಮಾಡಿ, ಉಗ್ದು ಕಳಿಸ್ದಾಗ... ಜ್ಞಾಪ್ಕ ಇದೆಯಾ. ರಾಜಾ!...Whole School ನೋಡ್ತಾ ಇದೆ! Sun Shiningoo! Sublime Sightಊ! ಒಬ್ಬರ ಹೆಗಲ ಮೇಲೊಬ್ಬರು ಕೈ ಹಾಕ್ಕೊಂಡು... ಕೃಷ್ಣ ಕುಚೇಲರ ಹಾಗೆ... ಆ ಗೇಟ್ ಬಿಟ್ಟು ಹೊರಗೆ ಬಂದ್ವಲ್ಲಯ್ಯಾ! ಅದನ್ನ ನೀನು ಮರೆತರೂ ನಾನು ಮರೆತೇನೇ?

ಆದ್ದರಿಂದ ನನ್ **ರತ್ನಾ!** ನಿನ್ನ ಯಾರು ಬೇಕಾದರೂ '**ವಜ್ರ**' ಅಂತ ಕರೀಲಿ. ನೀನು ನನಗೆ ಎಂದೆಂದಿಗೂ '**ರತ್ನಾ**'ನೇ!

ಅಲ್ಲಾ, ನೀನು deer, ಜಿಂಕೆ, ಹಸು ಸಾಧುವಾದ ಪ್ರಾಣಿ ಅಂಥಾವನು ಅಂತ ಅಂದ್ಕೋಂಡಿದ್ದೆ ಈಗ ನೋಡಿದ್ರೆ. ಈಗ ನೋಡಿದ್ರೆ, ಹೇಸರಗತ್ತೆ ಒದ್ದ ಹಾಗೆ ಒದೀತಿದೀಯಲ್ಲಯ್ಯ! ಇದೇನು ನೀನು ಬೀಸುತಾ ಇರೋದು? Battering ramಓ? ಅಥವಾ Sledge hammerಓ? ಇದಕ್ಕೆ ಸಿಕ್ಕಿದವನು ಸತ್ತ!-figuratively, of course.

My dear Champ.

ನೀನು ಕಳಿಸಿದ ಎರಡು ಪುಸ್ತಕ-**ಚಕ್ರವರ್ತಿ** ವಜ್ರ, **ಕೊರವಂಜಿಯ ದಾರಿಯಲ್ಲಿ**-ಪೋಸ್ಟ್‌ಮನ್ ತಂದುಕೊಟ್ಟಾಗ—

'The come-back of Cassius Clay *alias* Muhamad Ali' ಅನ್ನೋ article ಓದುತಾ ಇದ್ದೆ. ಇದೇನಿದು? ಪುರುಷ ಸರಸ್ವತಿ ಆದ ಮೇಲೆ ನೀನು ರಿಟೈರ್ ಅಂದುಕೊಂಡಿದ್ದೆ. ಆದರೆ ಈಗ ನೋಡಿದರೆ—You have come-back! ಈ sweepಉ, ಈ swingಉ, ಈ punchಉ... it's only a ರಾಜರತ್ನಂ... I mean a ಚಕ್ರವರ್ತಿ ವಜ್ರ that can deliver! It is a terrific knock-out! I would'nt like to be in his shoes!

I am wondering what would be the reaction of the chimp. ಬಹುಶಃ 'ರಕ್ಷ ರಕ್ಷ ಮಾಂ ಮುಖ್ಯಪ್ರಾಣ' ಅಂತ ತನ್ನ ಕುಲದೇವರಿಗೆ ಮೊರೆ ಇಡುತ್ತಿರಬಹುದು. ಆದರೆ ಮುಖ್ಯಪ್ರಾಣ ಬಂದು ನಿನ್ನ ಏನೂ ಮಾಡೋಕಾಗೊಲ್ಲ. ಯಾಕೆ ಅಂದರೆ, ಆ ಹನುಮಂತನ ಹಾಗೇನೇ ನೀನೂನೂ ಮೂರು ಹೊತ್ತೂ 'ದಾಸೋಽಹಂ ಕೋಸಲೇಂದ್ರಸ್ಯ' ಅಂತ ಜಪಾ ಮಾಡುತಿರುತೀಯ. ಬಹುಶಃ, ಅರ್ಜುನನ ಬಾವುಟದಲ್ಲಿ ಬಂದು ಕೂತುಬಿಟ್ಟ ಹಾಗೆ ನಿನ್ನ ಬಾವುಟದಲ್ಲಿ ಬಂದು ಕೂತುಬಿಡುತಾನೋ ಏನೋ! ಆವಾಗ, ನಿನ್ನ ಎದುರು ಹಾಕ್ಕೊಂಡವರಿಗೆ ಶ್ರೀರಾಮರಕ್ಷೆ!

ಅಂತೂ, ಒಂದು ರೌಂಡ್ ಆಯಿತು, ಎರಡನೇ ರೌಂಡೂ ಆಯಿತು. ನೀನು ಬರೀ ಗುಂಡ್ಲು ಪಂಡಿತ ಅಲ್ಲ, ನೀನು ಗುಂಡೂ ಪಂಡಿತ ಕಣಯ್ಯ. ನಂ ಪೋಲೀ ಕಿಟ್ಟಿ ಹೇಳಿದ ಹಾಗೆ–'ಇದು ಲಡತ್ತು! ಹೀಗಿರಬೇಕು ಉಂಡೆಗಳ ಬಟವಾಡೆ!'

ಬತ್ತಳಿಕೇಲಿ ಇನ್ನೂ ಏನೇನು ಇಟ್ಟಿದೀಯ? More power

to your elbow! May your shadow never grow less!

ನನಗೂ ನಿನಗೂ ಇರೋ ಸ್ನೇಹಾನ ಹೇಳೋಕೆ ನನಗೆ ಮಾತು ಬರೊಲ್ಲ. ಅದಕ್ಕೋಸ್ಕರ ಕೈಲಾಸಂ ಇಂದ ಕದ್ದುಬಿಟ್ಟು ಬರೆದಿದೇನೆ. ಕೈಲಾಸಂ ಹೆಸರು ಹೇಳದೆಹೋದರೂ ಇದು ಅವರ ಖಜಾನೆಯಿಂದ ಲಪಟಾಯಿಸಿದ್ದು ಅಂತ ಲೋಕಕ್ಕೇ ಗೊತ್ತು. ನಾವು ಉಸಿರಾಡೋ ಗಾಳೀಗೆ ಕೃತಜ್ಞತೆ ಹೇಳುತೇವಾ? ಹೇಳಬೇಕಾ? ಕೈಲಾಸಮ್ನೂ ಹೀಗೇ: ಗಾಳೀ ಹಾಗೆ. 'ವಾಯುಃ ಸರ್ವತ್ರಗೋ ಮಹಾನ್!'

ಅಂತೂ, ಎರಡು ರೂಪಾಯಿ ಕೊಟ್ಟು, ನಿನ್ನ ಎರಡು ಪುಸ್ತಕ ಕೊಂಡು ಕೊಂಡದ್ದಕ್ಕೆ, ಒಳ್ಳೇ ring-side seat ಸಿಕ್ಕಿದ ಹಾಗಾಯ್ತು, ಬಿಡು.

ಮುಂದಿನ ಮೂರನೇ ರೌಂಡ್ ಯಾವಾಗ? ತಣ್ಣೀರೆರಚಿ, ಗಾಳಿ ಹಾಕಿ, ಬ್ರಾಂದಿ ಕುಡಿಸಿ, ಸಕಲ ಶೈತ್ಯೋಪಚಾರ ಎಲ್ಲಾ ಮಾಡಿ ಎಬ್ಬಿಸಿದ ಮೇಲೆ-ಮಡಗು!

ನಡೆಯಲಿ : ಭೀಮದುರ್ಯೋಧನೀಯಂ!

ವಿಜಯೀಭವ, ಮಗು, ವಿಜಯೀಭವ!

ಅಂದ ಹಾಗೆ, ನೀನೂ ಒಂದು ರೀತೀಲಿ clayನೇ! ಶುದ್ಧ ಜೇಡಿ ಮಂಣು!

ನಿನ್ನವನೇ

ಶಾಮಂಣ

ಅದಕ್ಕೆ 'Raಜಂಣ'ನ ಉತ್ತರ

My dear ಶಾಮಣ್ಣ,

೧) ನಿನಗೆಲ್ಲಿ ಬಂತೋ ಈ ಸೊನ್ನೆಯ ಸಾಂಕ್ರಾಮಿಕ? ಅಸ್ಥಾನದಲ್ಲಿ ಬಂದ ಅನುಸ್ವಾರವು ಮೂಗಿನಲ್ಲಿ ಬಿಟ್ಟ ಅಪಾನ ವಾಯುವಿನಂತೆ—ಅಸಹ್ಯಾತ್ ಅಸಹ್ಯಾತಿತರಂ! ಅದು ಅಚ್ಚಿನಲ್ಲಿ ಕಾಣಿಸಿಕೊಂಡಾಗಲಂತೂ 'ಕಂಣಿಗೆ ಸಂಣ ಮಂಣು' ಬಿದ್ದಂತೆ ಕಿರಿಕಿರಿಯಾಗುತ್ತದೆ. ಹಂಣು, ಹೆಂಣು, ಹೊಂನು— ಇಂಥ ಅಪಸ್ಮಾರಗಳನ್ನು ಬಿಟ್ಟುಬಿಡು. ನಾಯಿಗ್ ಹಾಕಿದ್ ನಿನ್ ಜನ್ಮದ್ ಉಚ್ಛಿಷ್ಟಾನ್ ನರೀಗ್ ಹಾಕಾ!

೨) ಕೈಲಾಸಂ ಇಂದ ಕದ್ದು ಬರೆದದ್ದಕ್ಕಾಗಿ ನೀನೇನೂ apologise ಮಾಡಬೇಕಾಗಿಲ್ಲ. ಅದನ್ನ acknowledgeಊ ಮಾಡಬೇಕಾದ್ದಿಲ್ಲ. 'Jokes are Nobody's property' ಅಂತ 'ಹಯವದನ' (Horse's mouth)ದಿಂದಲೇ ಆಣಿಮುತ್ತು ಸುರಿದಿಲ್ಲವೇ—ಗೋಪುಚ್ಛದ ಕಡೆಯಿಂದ ಗಂಜಳ ಬಂದಂತೆ, ಧಾರಾಕಾರವಾಗಿ! ಆದ್ದರಿಂದ even you are welcome to beg, borrow or steal without indicating the source. ಏಕೆಂದರೆ, 'ಎಂಥ ತಿಮ್ಮನಿಗಾದರೂ ಒಬ್ಬಳು ಅಮ್ಮ

ಇರಬೇಕು ಅನ್ನೋದು ಲೋಕಕ್ಕೆಲ್ಲ ಗೊತ್ತು.

೩) ಇದು 'ಭೀಮದುರ್ಯೋಧನೀಯ' ಅಲ್ಲ. ಶಾಮಣ್ಣ. ಏಕೆಂದರೆ below the belt ಹೊಡೆಯೋದಕ್ಕೆ ನಾನು ಭೀಮಸೇನ ಅಲ್ಲ! ಊರು ಭಂಗವಾಗುವುದಕ್ಕೆ ನಾನು ದುರ್ಯೋಧನನೂ ಅಲ್ಲ! ನಾನು ನಾನೇ: **'ಚಕ್ರವರ್ತಿ ವಜ್ರ!'** ಬೇಕಾದರೆ ಇದನ್ನು 'ಮಧ್ಯಮವ್ಯಾಯೋಗ' ಎನ್ನು. ಏಕೆಂದರೆ, ಈ ಅಪ್ಪ ಯಾರು ಅಂತ ಆ ಮಗನಿಗೆ ಗೊತ್ತಿಲ್ಲವಾದರೂ ಆ ಮಗ ಯಾರು ಅನ್ನುವುದು ಈ ಅಪ್ಪನಿಗೆ ಗೊತ್ತು.

ಇತಿ-ರಾಜಣ್ಣ

◆ The Hammer of Thor ◆

'ಇದೇನಯ್ಯಾ ಹೀಗೆ ಬಡಿಗೆ ಎತ್ತಿ ಬಡೀತಿದ್ದೀಯಾ?"

'ಅಲ್ಲವೇ ಮತ್ತೆ! ಬಡಿಗೆ ಬೀಳದೆ ಹೋದರೆ, ಕಡಗ ಆಗೋದು ಹ್ಯಾಗೆ? ಗಾದೆ ಗೊತ್ತಿದೆ ತಾನೆ?'

'ಆದರೂ, ಗುಬ್ಬಿ ಮೇಲೆ ಬ್ರಹ್ಮಾಸ್ತ್ರ ಅಂದ ಹಾಗೆ-ಇಷ್ಟು ಇಕ್ಕೋದು ಅನ್ಯಾಯಾಯ್ಯ!'

'ಅದು ಗುಬ್ಬಿ, ಇದು ಬ್ರಹ್ಮಾಸ್ತ್ರ ಅನ್ನೋದು ನಿನಗೆ ಅರ್ಥವಾದರೆ, ನಾನು ಬರೆದದ್ದು ಸಾರ್ಥಕವಾಯಿತು'.

'ಆದರೆ, ಗುಬ್ಬೀಗೆ ಇದೆಲ್ಲಾ ಅರ್ಥವಾಗುತ್ತಾ? ಇಷ್ಟೊಂದು allusions ತಂದು ತುಂಬಿಬಿಟ್ಟಿದೀಯ!'

'ಈ allusions ಎಲ್ಲಾ ಅರ್ಥವಾಗುತ್ತೆ ಅಂಥ ನನಗೇನೂ illusions ಇಲ್ಲ. ಇದೆಲ್ಲಾ ಗುಬ್ಬಿಗೆ follow ಮಾಡೋಕೆ ಆಗದೆಹೋದರೂ, ನಾನು ಹೇಳುತಾ ಇದ್ದ ಹಾಗೇನೇ ಇದನ್ನ ಬಾಯಿಗೆ ಹಾಕ್ಕೊಂಡು ಚಪ್ಪರಿಸೋ ಗಿಡಗಗಳೂ ಇದ್ದಾರೆ ಅನ್ನೋದನ್ನ ಮರೀಬೇಡ!'

'ಆದರೂ This is like breaking the butter-fly on the wheel!'

'ನೀನು ಇಂಗ್ಲಿಷ್ ಸಾಹಿತ್ಯ ಓದಿದ್ದು ಸಾರ್ಥಕವಾಯ್ತು

ಬಿಡು. ಇದು Butter-fly ಅಲ್ಲಾಯ್ಯ, ಇದು Gutter-fly! Butter-fly ಆದರೆ, ಅದರ ರೆಕ್ಕೆ ಕತ್ತರಿಸೋವನು ಮನುಷ್ಯ ಅಲ್ಲ; ಅವನು ದೈತ್ಯ! ದೈತ್ಯ ರಂಡೀಗಂಡ! Gutter-flyಗನಕ spray ಮಾಡದೆ ವಿಧೀನೇ ಇಲ್ಲ'.

'Spray ಅಂದರೆ?'

'Spary ಅಂದರೆ ತುಂತುರು, ತುಷಾರ, ಶೀಕರ, ಸೀಮೆಯೆಣ್ಣೇಲಿ D.D.T, ಜೊತೆಗೆ Gamaxine! Plus Flit!'

'ಆದರೂ ಒಂದು ಸೊಳ್ಳೇನ ಹೊಡೆಯೋಕೆ ಇಷ್ಟು ದೊಡ್ಡ ಸುತ್ತಿಗೆ ಆಗಬೇಕಾ?'

'ಅದು ಅವರವರ ಅಳತೆ ಮೇಲೆ ಹೋಗುತ್ತೆ. ಅಂದರೆ, ಅದರ ಮೈಯಳತೆ, ನನ್ನ ಕೈಯಳತೆ. ಹಂದಿಗಾತ್ರದ ಸೊಳ್ಳೆ ಆದರೆ? ಆನೆಗಾತ್ರದ ಸೊಳ್ಳೆ ಆದರೆ? ಘೇಂಡಾಮೃಗದಂತಹ ಸೊಳ್ಳೆ ಆದರೆ? ಸಣ್ಣ ಸುತ್ತಿಗೆ ಸಾಕಾಗುತ್ತಾ? ನಾನು ಸಾಮಾನ್ಯವಾಗಿ ಕೈ ಚಾಚೊಲ್ಲ. ಚಾಚಿದರೆ, ನನ್ನ ಕೈಗೆ ಸಣ್ಣದು ಸಿಕ್ಕೊಲ್ಲ. ಈಗ ನಾನು ಎತ್ತಿಕೊಂಡಿರೋದು. ಅಂಥಿಂಥ ಸುತ್ತಿಗೆ ಅಲ್ಲ. ಇದು The Hammer of Thor!'

'ಏನಿದು, ಥಾರ್? ಮರುಭೂಮೀನಾ?'

'ಏನಿದು ಅಲ್ಲ. ಯಾರಿದು ಅಂತ ಕೇಳು. ಥಾರ್ ಅನ್ನೋವನು ಸ್ಕಾಂಡಿನೇವಿಯಾದ ಒಬ್ಬ ದೇವತೆ. ಈತನ ಆಯುಧ ಸುತ್ತಿಗೆ. ಇದಕ್ಕೆ ಗುರಿ ಆದವರು—ಠಾರ್!'

'ಸುತ್ತಿಗೇನಾ? ಎಂಥ ವಿಚಿತ್ರವಾದ ಆಯುಧವಯ್ಯಾ!'

'ವಿಚಿತ್ರವೇನು ಬಂತು? ನಮ್ಮ ಬಲರಾಮನಿಗೆ ನೇಗಿಲು, ಒನಕೆ ಇವೇ ಆಯುಧ ಅಲ್ಲವಾ? ಎಡಗೈಯಿಂದ ನೇಗಿಲನ್ನ ಬೀಸಿ, ಎದುರಾಳಿಯನ್ನ ಹತ್ತಿರ ಎಳಕೊಳ್ಳೋವನಂತೆ! ಬಲಗೈಯಿಂದ ಒನಕೇನ ಮೇಲೆತ್ತಿ, ತಲೇ ಮೇಲೆ ಎರಡು ಮಡಗೋವನಂತೆ! ಹಾಗೇನೇ, ಥಾರ್ ಸುತ್ತಿಗೇಂದ ಒಂದು ಬಿಟ್ಟ ಅಂದರೆ, ಅದರ ಅಡಿಗೆ ಸಿಕ್ಕಿದವನು ಅಲ್ಲೇ ಅಪ್ಪಚ್ಚಿ!'

'ಓ, ಅದೇ ನಮ್ಮ ಒನಕೆ ಕಂಡಿ ಓಬವ್ವ....!'

'ಹ್ಞಾ! ಜ್ಞಾಪಕ ಬಂತಾ? ಕೃಷ್ಣನ ಕೈಲಿ ಶಂಖ, ಚಕ್ರ; ಶಿವನ ಕೈಲಿ ಡಮರು, ಶೂಲ; ಗಣಪತಿ ಕೈಲಿ ಪಾಶ, ಅಂಕುಶ; ಕುಮಾರಸ್ವಾಮಿಯ ಕೈಲಿ ವೇಲಾಯುಧ; ದುರ್ಗಾದೇವಿಯಂತೂ ದಶಪ್ರಹರಣಧಾರಿಣಿ! ವಿಷ್ಣು ಸಹಸ್ರನಾಮ ಹೇಳುವಾಗ... ಓಂ ಸರ್ವಪ್ರಹರಣಾಯುಧಾಯ ನಮಃ... ಎನ್ನುವುದಿಲ್ಲವೇ! ದೇವರಿಲ್ಲ ಅನ್ನುವವರಿಗೆ ಇರೋದು ಒಂದೇ ಆಯುಧ:

ಅವರ ಗಾಡ್ರೆಜ್‌ನಲ್ಲಿ ಅವರು ತುಂಬಿಕೊಂಡ ಅವರದೇ ಸ್ವಂತ ಮಲ, ಮೂತ್ರ! ದೇವರನ್ನು ನಂಬಿದವರಿಗಾದರೋ— ಅವರು ನಂಬಿರುವ ದೇವರುಗಳ ಅಸ್ತ್ರ ಶಸ್ತ್ರ ಆಯುಧಗಳೆಲ್ಲವೂ ಅಕ್ಷಯವಾಗಿ ಕೈಗೆ ಒದಗುತ್ತವೆ....'

'ಅದೇನೇ, ಆವೊತ್ತು ಒಂದು ಕತೆ ಹೇಳಿದೆಯಲ್ಲಾ... ಒಂದು ಹಂದಿ ಒಂದು ಹುಲೀನ ಸೋಲಿಸಿ ಓಡಿಸಿಬಿಡುತು, ಅಂತ....'

'ಅದರ ಹಾಗೇನೇ ಥಾರಿನ ಸುತ್ತಿಗೆ ಕೂಡ. ನಮ್ಮ ವಾರಗಳಲ್ಲಿ ಒಂದನ್ನ Thursday ಅಂತಾರೆ, ಗೊತ್ತಾ?... ಅದು

ಮೂಲತಃ Thor's Day; ಥಾರ್ ಎಂಬ ದೇವತೆಗೆ ಮೀಸಲಾದ ದಿವಸ! ಆ Thor's Dayನ ನಾವು ಈಗ Thursday ಅನ್ನತೇವಲ್ಲಾ, ಅದೇ ನಮ್ಮ ಗುರುವಾರ! ನಮ್ಮ ಗುರುವಿನ ಆರಾಧನೆಗೆ ಮೀಸಲಾದ ದಿನ!'

'ಅದಕ್ಕೂ ಹೀಗೆ ನೀನು ಒಂದು ಬಡಪಾಯೀನ ಹಿಡಿದು ಬಡೀತಾ ಇರೋದಕ್ಕೂ ಏನಯ್ಯಾ ಸಂಬಂಧ?'

'ಇದು Some ಬಂಧ ಅಲ್ಲ; ಸಮ್ಯಕ್‌ಬಂಧ! ಬಾಯಿಗೆ ಬೀಗ! ಹಾಸ್ಯ ಅನ್ನೋದು ಕೆಸರಿನಲ್ಲಿ ಹುಟ್ಟೋ ಕಮಲ. ಕೆಸರೇ ಕಮಲವಲ್ಲ, ಹೊಲಸೇ ಹಾಸ್ಯವಲ್ಲ, ಅನ್ನೋದನ್ನ ಮರೀಬಾರದು ನಾವು ಯಾರೂ-ಹೇಳಿ ನಗಿಸೋವರೂ, ಕೇಳಿ ನಗೋವರೂ ಇಬ್ಬರೂ. ಇದನ್ನ ಮರೀದೇ ಇರೋವರ್ಗೂ ಹಾಸ್ಯ ಅನ್ನೋದು ಸುಪ್ಪತ್ತಿಗೆ ಇದ್ದ ಹಾಗೆ ಸುಖವಾಗಿ ಹಿತವಾಗಿ ಇರುತ್ತದೆ. ಇದು ಮರೆತುಹೋಯ್ತು ಅಂದರೆ, ಸುಪ್ಪತ್ತಿಗೆ ಆಗಬೇಕಾಗಿದ್ದದ್ದು ಸುತ್ತಿಗೆ ಆಗಿಹೋಗುತ್ತದೆ'.

'ಈಗ ನಿನ್ನ ಕೈಲಿ ಹಾಸ್ಯ ಹಾಗಾಗಿದೆ ಅನ್ನು. ಅರ್ಥ ವಾಯಿತು. ಇಂಥದು ನಮಗೆ ಸ್ವಲ್ಪ ಹೊಸದಲ್ಲಾ?'

'ಏನಾದರೂ ಆಗಲಿ. ನೀನು ಪಕ್ಕಾ ಕನ್ನಡಿಗ. ಕಪ್ಪೆ ಅರಭಟ್ಟನ ಹಾಗೆ: ಸಾಧುಗೆ ಸಾಧು, ಮಾಧುರ್ಯಂಗೆ ಮಾಧುರ್ಯನ್, ಬಾಧಿಪ್ಪ ಕಲಿಗೆ ಕಲಿಯುಗ ವಿಪರೀತನ್—ನೀನು.

> ಕಟ್ಟಿದ ಸಿಂಘಮನ್ ಕೆಟ್ಟೊದೇನೆಮಗೆಂದು
> ಬಿಟ್ಟವೋಲ್ ಕಲಿಗೆ ವಿಪರೀತಂಗಹಿತರ್ಕಳ್
> ಕೆಟ್ಟರ್ ಮೇಣ್ ಸತ್ತರವಿಚಾರಂ!'

◆ ಹಾಸ್ಯದ ಹೊರೈZON ◆

'ಅಬ್ಧಿಃ ಲಂಘಿತಮೇವ ವಾನರಭಟೈಃ!' ಕಿಷ್ಕಿಂಧೆಯಿಂದ ಎಂದೂ ಹೊರಗೆ ಹೋಗದಿದ್ದ ವಾಯುಪುತ್ರನ ವಾನರರು ಕಣ್ಣು ಮುಚ್ಚಿ ತೆರೆಯುವುದರೊಳಗಾಗಿ ಸಮುದ್ರದ ಈ ದಡದಿಂದ ಆ ದಡಕ್ಕೆ ದಾರಿ, ಸಮುದ್ರೋಲ್ಲಂಘನ ಮಾಡಿದೆವೆಂದು ಹಲ್ಲು ಕಿರಿದುವು. 'ಕಿಂ ತು ಅಸ್ಯ ಗಂಭೀರತಾಂ ಜಾನಾತಿ?' ಆದರೆ ಅವುಗಳಲ್ಲಿ ಒಂದಕ್ಕಾದರೂ ಸಮುದ್ರದ ಆಳ ಎಷ್ಟೆಂಬುದು ಇಷ್ಟಾದರೂ ಗೊತ್ತಾಯಿತಾ?

ಮತ್ತೆ ಯಾರಿಗೆ ಗೊತ್ತಾಯಿತು ಸಮುದ್ರದ ಆಳ? 'ಆಪಾತಾಳ ನಿಮಗ್ನ ಪೀವರತನುಃ ಜಾನಾತಿ ಮಂಥಾಚಲಃ!' ಸಮುದ್ರದ ಅಡಿಯ ನೆಲದವರೆಗೂ ಮುಳುಗುವಂಥ ಮಹಾಗಾತ್ರವನ್ನುಳ್ಳ ಮಂದರಪರ್ವತಕ್ಕೆ ಗೊತ್ತಾಯಿತು. ಹಾಗೆ ಆಳಕ್ಕೆ ಮುಳುಗಿದ ಅದು ಸಂಚಾರಮಾಡತೊಡಗಿದಾಗ, ಆ ಅಳದಿಂದ ಕಾಮಧೇನು, ಕಲ್ಪವೃಕ್ಷ, ಚಿಂತಾಮಣಿಗಳು ಮೆಯ್ದೋರಿಬಂದುವು.

ರಷ್ಯ ಬಹುದೊಡ್ಡ ದೇಶ. ಭೌಗೋಲಿಕವಾಗಿ ಮಾತ್ರವಲ್ಲ, ಸಾಂಸ್ಕೃತಿಕವಾಗಿಯೂ ದೊಡ್ಡ ದೇಶ. ಅದರ ಆತ್ಮವನ್ನು ದೊಡ್ಡದಾಗಿ ಮಾಡುವುದಕ್ಕೆ ಯಾರಾರು ತಮ್ಮ ಉಸಿರನ್ನು ಸವೆಸಿದರೋ ಅವರಲ್ಲಿ ಒಬ್ಬೊಬ್ಬರನ್ನು ತಿಳಿಯುವುದಕ್ಕೆ ವರ್ಷಗಳಾದರೂ ಸಾಲದಿರುವಾಗ, ಒಂದು ಪಕ್ಷದಲ್ಲಿ ಅದನ್ನು

ಅಂಗೈಯ ನೆಲ್ಲಿಕಾಯಿ ಮಾಡಿಕೊಂಡಿದ್ದೇವೆ ಎನ್ನುವುದಕ್ಕೆ ಇದೇನು-ಮಂತ್ರ ತಂತ್ರ ಸ್ವರ ಲೋಪ ವಿಧಿ ವಿಪರ್ಯಾಸಗಳ ಪ್ರಾಯಶ್ಚಿತ್ತದಿಂದ ಪೂರೈಸುವ ಪಿತೃಪಕ್ಷವಾಗಿಹೋಯಿತೇನು?

ಏರೋಪ್ಲೇನಿನಲ್ಲಿ ಕೂತು ಮೇಲೆ ಏರಿದರೆ ಹೊರೈಸನ್ ಹೆದರಿಕೊಂಡು ದೂರ ಓಡುತ್ತದೆ. ಜನಗಳ ಹೃದಯದ ಹೊರೈಸನ್ನನ್ನ ನಾವು ಮುಟ್ಟ ಬೇಕಾದರೆ, ಅವರ ಹಾಸ್ಯದ ಪದ್ಧತಿ ನಮಗೆ ಹತ್ತಿರವಾಗಬೇಕು. ಇಂಗ್ಲೆಂಡಿಗೆ ಪಂಚ್ ಇದ್ದ ಹಾಗೆ ರಷ್ಯಕ್ಕೆ ಕ್ರಾಕೊಡಿಲ್. ಇಂಗ್ಲೆಂಡಿಗೆ ಹೋಗದೆ, ರಷ್ಯಕ್ಕೂ ಹೋಗದೆ, ಅವರ ಪಂಚ್‌ಇಂದಲೂ ಇವರ ಕ್ರಾಕೊಡಿಲ್ ಇಂದಲೂ ಇಲ್ಲಿಯೇ ಕಲಿಯಬೇಕಾದ್ದು ಬೇಕಾದ ಹಾಗೆ ಇದೆ.

Cat o' Nine Tails

ಪ್ರಿಯ ಚಂದ್ರಕೀರ್ತಿ,

So, The Cat is out of the bag!

And what a Cat!

Certainly, this calls for a Cat o' nine tails (Which, according to The Concise Oxford Dictionary, is a ropewhip with nine knotted lashes formerly used for flogging sailors and soldiers!)

But, I will not weild it, for it is only a poor pussy cat!

"Pussy Cat, Pussy Cat,

Where'd you been?"

"I'd been to Russia

To look at the Scene!"

"Pussy Cat, Pussy Cat,

What did you there?"

"I frightend a mouse

And plucked out a hair!"

ಇಷ್ಟೇನಾ? Volga ನೋಡಲಿಲ್ಲ! Vodka ಕುಡೀಲಿಲ್ಲ! ಹ್ವಾದ ಪುಟ್ಟ! ಬಂದ ಪುಟ್ಟ!

ಎಲೆ ಬೆಕ್ಕೆ! ರೂಪಿನಿಂದಲೆ
ಹುಲಿಜಾತಿಗೆ ಸೇರ್ದೆನೆಂದು ಗರ್ವಿಸಬೇಡಾ;
ಬಲುಮೆಯು ನಿನ್ನಲ್ಲಿಹುದೇನ್?
ಇಲಿಗಳ ಹಿಡಿವುದರೊಳಾಯ್ತು ನಿನ್ನಯ ಶೌರ್ಯಂ!

◆ Pint by Pint ◆

'ಇದ್ಯಾಕ್ ಇವಯ್ಯ ಯಿಂಗ್ ನಂಗ್ ಅಟ್ಕಯಿಸ್ಕಂತೌನೆ?' ಅಂತ ನನಗೆ ಬಹಳ ದಿವಸದಿಂದ ಅರ್ಥ ಆಗಿರಲಿಲ್ಲ. ಈಗ, ಅಹೋಬ್ಳು ತನ್ನ ಮಗ ಮುದ್ಮಣಿಯ ಬಗ್ಗೆ ಹೇಳಿದ ಹಾಗೆ— 'ಗೊಗ್ಗಯ್ಯ ಬಾಯಿಬಿಟ್ಟಿದೆ'.

'ಜಿ.ಪಿ. ರಾಜರತ್ನಂ ವಿರುದ್ಧ ಪತ್ರಿಕೆಗಳಲ್ಲಿ ಇತ್ತೀಚೆಗೆ ಬರೆಯುತ್ತಿದ್ದೀರಲ್ಲಾ. ಇದಕ್ಕೇನು ಕಾರಣ?' ಎಂದು ಯಾರೋ ಕೇಳಿದಾಗ—

Thus spake Sir Oracle:—

"ನಾನು ಸಾಹಿತಿಯಾಗುವುದಕ್ಕಿಂತ ಎಷ್ಟೋ ಮುಂಚೆ, ಎಂದರೆ 1940ರ ದಶಕದಲ್ಲಿ ರಾಜರತ್ನಂ ಅವರ ಕೃತಿಗಳನ್ನು, ಮುಖ್ಯವಾಗಿ ಅವರ 'ರತ್ನನ ಪದ'ಗಳನ್ನು ಓದಿ, ಮೆಚ್ಚಿಕೊಂಡಿದ್ದೆ. (Perhaps he now regrets having written them.) But I felt he should have made a mention of Omer Khayyam as an influence and ಅನಕೃ agreed with me. ಈ ಬಗ್ಗೆ ಪ್ರಕಟವಾಗಲಿರುವ ನನ್ನ 'ಭಯಾಗ್ರಫಿ'ಯಲ್ಲಿ ಬರೆದಿದ್ದೇನೆ. ಅಲ್ಲದೆ ಅವರ ಪಾಂಡಿತ್ಯವನ್ನ ಈಗಲೂ ಮೆಚ್ಚಿ ಕೊಳ್ಳುತ್ತೇನೆ. But when he took up to produce literature on Sai Baba only with a view to make

money, I strongly felt that he was a commercial devotee. Hence my attacks".

ಇದಕ್ಕೆ Point by point ಉತ್ತರ ಬರೆದರೆ, ಪ್ರಾಣೀಗೆ ಅರ್ಥವಾಗುತದೋ ಇಲ್ಲವೋ. ಆದ್ದರಿಂದ ಅವರಿಗೆ ಅಭ್ಯಾಸ ವಾಗಿರುವಂತೆ, pint by pint ಉತ್ತರ ಸುರೀತೇನೆ.

ಉಮರ್ ಖಯಾಮನ ಇನ್‌ಫ್ಲುಯೆನ್ಸನ್ನ ಇಷ್ಟು ಲೇಟಾಗಿ ಕಂಡು ಕೊಂಡವರು, ಇದರ ಮೇಲೆ ಒಂದು ತೀಸಿಸ್ ಬರೆದು, ತಾವೂ ಒಂದು ಡಾಕ್ಟರೇಟ್ ಯಾಕೆ ಹೊಡಕೋಬಾರದು?

ಗುಟುಕು ನೀರು

೧. 'ಸಾಹಿತಿ' ಮತ್ತು 'ಸಾಯಿತಿ'

'ವಿದ್ವಾನೇವ ವಿಜಾನಾತಿ ವಿದ್ವಜ್ಜನಪರಿಶ್ರಮಂ'. ಗರಡಿ ಮಾಡಿದವರಿಗೆ ಗೊತ್ತು ಗರಡೀವರು ಹಾಕೋ ಪಟ್ಟು.

'ಹೆಸರು ಕುಬೇರಪ್ಪ! ಮೈಯೆಲ್ಲಾ ಸಾಲ!
ಅನ್ನದಾನಪ್ಪನಿಗೆ ಗಂಜಿಗೆ ಗತಿಯಿಲ್ಲ!
ಮೃತ್ಯುಂಜಯಪ್ಪ ಮಸಾಣಕ್ಕೆ ಹೋಗಿ ಮೂರು ದಿನ ಆತು!
ದಿರಿಸಿನಿಂದ ಶೂರ್ಪಣಖಾ!

ಒಳಗಿರೋದು ತಕರಟಾಲ್ ತಮ್ಮೋ!' ಅಂದ ಹಾಗೆ—

A blob of ತೊಪ್ಪೆ smells as bad by any other name as... etc... etc...,

'ಹಿತ' ಯಾವುದು? 'ಸಹಿತ' ಯಾವುದು? ಅನ್ನೋದನ್ನ ತಿಳಿದು ಜವಾಬ್ದಾರಿಯಿಂದ ಬರೆಯೋವನು 'ಸಾಹಿತಿ'. ಇದಕ್ಕೆ 'ವಿಪರೀತ' ಆದವನು 'ಸಾಯಿತಿ'. ಇದು ಅದರ 'ಅಪಭ್ರಂಶ'; ತಪ್ಪಲೆಚಿನ್ನ, ಕಾಗೆಬಂಗಾರ, ಗ್ರಾಮಸಿಂಹ ಅಂದ ಹಾಗೆ.

೨. 'ಆಗು' ಮತ್ತು 'ಆಗಿಹೋಗು'

'ಆಗು' ಎಂಬುದಕ್ಕೆ ಎಲ್ಲರೂ ಆಸೆಪಡಬೇಕಾದ್ದೇ. 'ಆಗಿ ಹೋಗು' ಎನ್ನುವ ಘಟ್ಟಕ್ಕೆ ಬಂದವರು 'ಹೋದ' ಹಾಗೇನೇ!

ನಮ್ಮ ಹಿರಿಯರು ಒಂದು ಕತೆ ಹೇಳಿದಾರೆ: ಶ್ರವಣಬೆಳ್ಗೊಳದಲ್ಲಿ ೫೭ ಅಡಿಯ ಗೋಮಟೇಶ್ವರ ವಿಗ್ರಹ ಇದೆಯಲ್ಲಾ-ಇದು ಕೋಟ್ಯಂತರ ವರ್ಷಗಳ ಹಿಂದೆ ಒಂದು ನೊರಜುಗಲ್ಲಿನ ಎತ್ತರ ಇತ್ತಂತೆ. ಅದು ಕೊಂಚಕೊಂಚವಾಗಿ. ತನಗೇ ಗೊತ್ತಿಲ್ಲದ ಹಾಗೆ, ಬೆಳೆದೂ ಬೆಳೆದೂ ಬೆಳೆದೂ, ಎಷ್ಟೋ ಕೋಟ್ಯಂತರ ವರ್ಷಗಳಾದ ಮೇಲೆ, ಈಗಿರೋ ಹಾಗೆ, ೫೭ ಅಡಿ ಎತ್ತರದ ವಿಗ್ರಹ ಆಯಿತಂತೆ. ಆಗ ಒಂದು ಸಲ ಅದು ತನ್ನ ಎತ್ತರವನ್ನ ತಾನೇ ನೋಡಿಕೊಂಡು-

'ಆಃ! ನಾನು ಎಷ್ಟು ಎತ್ತರ ಬೆಳೆದುಬಿಟ್ಟಿದೀನಿ!' ಅಂದುಕೊಂಡಿತಂತೆ. ಅಂದಿನಿಂದ ಅದು ಬೆಳೆಯೋದು ನಿಂತುಹೋಯಿತಂತೆ!

ಆಗಬೇಕು, ಬೆಳೆಯಬೇಕು ಅನ್ನುವ ಆಸೆ ಉಳ್ಳವರು 'ನಾನಿನ್ನೂ ಸಾಕಷ್ಟು ಆಗಿಲ್ಲ' ಅನ್ನುವುದನ್ನು ಒಪ್ಪಿಕೋಬೇಕು. 'ನನಗಿಂತ ಬೆಳೆದವರು ಇದ್ದರು' ಅನ್ನೋ ಗೌರವಾನ ಬೆಳಸಿಕೋಬೇಕು. 'ಅಂಥವರು ಈಗಲೂ ನಮ್ಮ ಕಣ್ಣಮುಂದೆ ಇದ್ದಾರೆ, ಅನ್ನುವ ಪರಿಜ್ಞಾನ ಇರಬೇಕು. ಇದರ ಜೊತೆಗೆ—

ಆಚಾರ್ಯಾತ್ ಪಾದಮಾದತ್ತೇ
ಶಿಷ್ಯಃ ಪಾದಂ ಸ್ವಮೇಧಯಾ
ಪಾದಂ ಸಬ್ರಹ್ಮಚಾರಿಭ್ಯಃ
ಪಾದಂ ಕಾಲೇಣ ಪಚ್ಯತೇ

[ಗುರುಗಳಿಂದ ಕಲಿಯುವುದು ಕಾಲುಭಾಗ; ಶಿಷ್ಯನು ತನ್ನ ಸ್ವಂತ ಬುದ್ಧಿಯಿಂದ ಕಲಿಯುವುದು ಕಾಲುಭಾಗ; ಇನ್ನೂ ಕಾಲು ಭಾಗ ಜೊತೆಯ ಬ್ರಹ್ಮಚಾರಿಗಳಿಂದ ಕಲಿಯುವುದು; ಉಳಿದ

ಕಾಲುಭಾಗವನ್ನು ಕಾಲ ಪಕ್ವಮಾಡುತ್ತದೆ.] ಎಂಬುದು ಗೊತ್ತಿರಬೇಕು.

'ಈ ಒಂದು ಶ್ಲೋಕದ ಭಾವವಿಸ್ತರಣಕ್ಕೆ ಒಂದು ಉಪನ್ಯಾಸವನ್ನೇ ವಿನಿಯೋಗಿಸಬಹುದು ಇಂಥ ಉಕ್ತಿ ಮುಕ್ತಾಫಲಗಳು ನಮ್ಮ ಸುಭಾಷಿತ ಗ್ರಂಥಗಳಲ್ಲಿ ಸೂರೆಯಾಗಿವೆ. ಇವುಗಳನ್ನು ಮನನಮಾಡಿ ಜೀವನಕ್ರಮದಲ್ಲಿ ಮಾರ್ಗದರ್ಶನ ಪಡೆದರೆ ಧರ್ಮಾರ್ಥ ಕಾಮಗಳೆಂಬ ಪುರುಷಾರ್ಥ ತ್ರಯವನ್ನೂ ಸಾಧಿಸಿಕೊಳ್ಳಬಹುದು' ಎಂದು ಶ್ರೀಮಾನ್ ತೀ.ನಂ.ಶ್ರೀ ಅವರು ತಮ್ಮ 'ಸಮಾಲೋಕನ'ದಲ್ಲಿ (ಪುಟ ೧೩೭) ಹೇಳಿದಾರೆ.

ಸಾಹಿತಿ ಆಗುವವರಿಗೆ ಇದು ಬೆಳೆಯಲು ನೇರವಾದ ದಾರಿ.

೩. 'ಓದಿ, ಮೆಚ್ಚಿಕೊಂಡು...'

ಬುಭುಕ್ಷಿತೈಃ ವ್ಯಾಕರಣಂ ನ ಭುಜ್ಯತೇ
ಪಿಪಾಸಿತೈಃ ಕಾವ್ಯರಸೋನ ಪೀಯತೇ
ನ ಚ್ಛಂದಸಾ ಕೇನಚಿದುದ್ಧೃತಂ ಕುಲಂ
ಹಿರಣ್ಯಮೇವಾರ್ಜಯ ನಿಷ್ಫಲಾಃ ಕಲಾಃ

(ಹೊಟ್ಟೆ ಹಸಿದವರು ವ್ಯಾಕಾರಣವನ್ನು ತಿನ್ನುವುದಿಲ್ಲ; ಬಾಯಾರಿದವರು ಕಾವ್ಯರಸವನ್ನು ಕುಡಿಯುವುದಿಲ್ಲ; ಛಂದಸ್ಸಿನಿಂದ ಯಾರ ಕುಲ ಉದ್ಧಾರವಾಗುತ್ತದೆ? ಆದ್ದರಿಂದ ಹಣವೊಂದನ್ನೇ ಸಂಪಾದಿಸು; ಕಲೆಗಳಿಗೆ ಫಲವಿಲ್ಲ!)

'ಓದಿ, ಮೆಚ್ಚಿಕೊಂಡು...' ಬರೆದವನಿಗೆ ಬಂದದ್ದೇನು? ಗಾಣಿಗಿತ್ತಿ 'ಅಯ್ಯೋ ಪಾಪ!' ಎಂದರೆ, ನೆತ್ತಿ ತಣ್ಣಗಾಯಿತೇನು? ಅದರ ಬದಲು 'ಓದಿ, ಮೆಚ್ಚಿ, ಕೊಂಡು...' ಎಂಬ ಈ ಕ್ರಮದಲ್ಲಿ

ಕ್ರಿಯೆ ನಡೆದರೆ, ಬರೆದವನು 'ಸಪ್ತಾಕ್ಷರೀಮಂತ್ರ'ವನ್ನು ಜಪಿಸದೆ, ಅನನ್ಯಪರತಂತ್ರನಾಗಿ ಜೀವಿಸಬಹುದು. ಅಲ್ಲಿಂದ ಮುಂದೆ, 'ಕೊಂಡು, ಓದಿ, ಮೆಚ್ಚಿ...' ಎನ್ನುವ ಘಟ್ಟವನ್ನು ವಾಚಕ ಮುಟ್ಟಿದಾಗ, ಬರೆದವನ ಹೊಟ್ಟೆ ತುಂಬುವುದು ಮಾತ್ರವಲ್ಲ, ಅವನ ಹೃದಯವೂ ತುಂಬುತ್ತದೆ.'ಕೊಂಡು, ಓದಿ, ಮೆಚ್ಚುವುದು' ಎರಡು ದೃಷ್ಟಿಯಿಂದಲೂ ಸುಕ್ರಮ:'ಓದಿ, ಮೆಚ್ಚಿ, ಕೊಳ್ಳುವುದು' ತಪ್ಪೇನಲ್ಲ, ಅದು ವಿವೇಕಪೂರಿತವಾದ ಸಕ್ರಮ: ಆದರೆ'ಓದಿ, ಮೆಚ್ಚಿಕೊಂಡು' ಎನ್ನುವುದು ಎರಡೇ ಕಾಲುಗಳಿರುವ ಮುಕ್ಕಾಲು ಮಣೆಯ ಮೇಲೆ ಕೂತಹಾಗೆ—ಮಣೆಗೂ ಅಪಾಯ, ಕೂತವರಿಗೂ ಅಪಾಯ

ಕನ್ನಡದಲ್ಲಿ ಓದುವವರ ಸಂಖ್ಯೆ ಬೆಳೆದು, ಅದಕ್ಕೆ ಕಾಲು ಬಂದ ಹಾಗಾಗಿದೆ; ಇನ್ನೂ ಕೊಳ್ಳುವವರ ಸಂಖ್ಯೆ ಬೆಳೆದು, ಅದಕ್ಕೆ ಕೈ ಬರಬೇಕಾಗಿದೆ. ಆ ಕಾಲ ಬೇಗ ಬೇಗ ಬರಲಿ.

೪. 'ರತ್ನನ ಪದ' ಮತ್ತು 'Regrets'

ಹಿಂದಿನ ಪುಸ್ತಕವಾದ 'ಕೊರವಂಜಿಯ ದಾರಿಯಲ್ಲಿ' ('ಚಾರಚಕ್ಷು', ಪುಟ ೭೯) ಹೇಳಿರುವ ಹಾಗೆ, ಇವರ collection of data ಪರವಾ ಇಲ್ಲ; inference ಮಟ್ಟೆ hopelessly inadequate. ಇವರಿಗೆ addition ಗೊತ್ತಿರಬಹುದು, subtractionಊ ಗೊತ್ತಿರಬಹುದು; deduction ಮಾತ್ರ, ಪಾಪ, ಏನೇನೂ ಗೊತ್ತಿಲ್ಲ.

ಹತ್ತು ವರ್ಷ, ನಮ್ಮ ರಾಜರತ್ನಂ, ವಿಚಾರರಶ್ಮಿ ಈ

ಪುಸ್ತಕಗಳಲ್ಲಿ ನಾನು ರತ್ನನ ಪದಗಳನ್ನು ಕುರಿತು ಬರೆದಿರುವುದನ್ನು ಓದಿರುವವರು ಯಾರೂ ಹೀಗೆ ಹೇಳಲಾರರು. ಇಲ್ಲವೇ ಇವರು ಅವುಗಳನ್ನು ಓದಿಲ್ಲ; ಅಥವಾ ಓದಿದ್ದರೂ ಅವು ಇವರಿಗೆ ಅರ್ಥವಾಗಿಲ್ಲ; ಅಥವಾ ಇನ್ನೇನಾದರೂ ಕಾರಣವಿರಬಹುದು.

ಆದರೂ 'ಇದನ್ನು ನಾನು ಯಾಕೆ ಬರೆದೆನಪ್ಪಾ!' ಎಂದು ಒಂದೆರಡು ಕಡೆ ನಾನು ಹೇಳಿದ್ದುಂಟು. ಸನ್ನಿವೇಶ ಹಾಗಿತ್ತು. ಅಂಥ ಮಾತನ್ನು ನನ್ನಿಂದ ಆಡಿಸಿದವರು ನನ್ನ 'ರತ್ನನ ಪದಗಳ ಪ್ರೇಮಿಗಳು'.

ಎಲ್ಲಿಯಾದರೂ ಭಾಷಣಕ್ಕೆ ಕರೆಯೋವರು. ನಾನೂ ಯಾವುದಾದರೂ ಗಂಭೀರವಾದ ವಿಷಯವನ್ನು ಕುರಿತು ಮಾತನಾಡುವೆ. ಒಂದು ಒಂದೂವರೆ ಗಂಟೆ ನಾನು ಆಡಿದ ಮಾತನ್ನೆಲ್ಲ ಕೇಳಿಯಾದ ಕಡೆಗೆ—'ಬ್ರಹ್ಮ ನಿನ್ಗೆ ಜೋಡಿಸ್ತೀನಿ' ಪದ್ಯ ಓದಬೇಕೆಂದು ಚೀಟಿ ಬರೋದು. ಆಗ ನಾನು'ಅಪ್ಪಾ, ಇದುವರೆಗೂ ನಾನು ಮಾತನಾಡಿದ atmosphereಗೂ ಇದಕ್ಕೂ ಹೊಂದಿಕೆ ಆಗೋಲ್ಲ ಇನ್ನೊಂದು ದಿನ ರತ್ನನ ಪದಗಳನ್ನೇ ವಾಚನ ಇಟ್ಟುಕೊಳ್ಳಿ. ಬೇಕಾದ್ದು ಓದತೇನೆ. ಇವೊತ್ತು ಬೇಡಿ' ಅಂತ ಕೇಳಿಕೊಳ್ಳೋವೆ. ಅವರು ಬಿಡಲೊಲ್ಲರು, ಬಲವಂತ ಮಾಡೋರು. 'ಅಮರ್ದಂ ತಣಿಯುಂಡು ಗೋಮುತ್ರದಿಂದೆ ಬಾಯ್ಮುಸಿದವೋಲ್' (ತೃಪ್ತಿಯಾಗುವವರೆಗೂ ಅಮೃತವನ್ನು ಉಂಡು, ಅದಾದಮೇಲೆ ಗೋಮೂತ್ರದಿಂದ ಬಾಯಿ ಒರೆಸಿಕೊಂಡ ಹಾಗೆ) ಅಂತ ಪಂಪನ ಪದ್ಯ ಹೇಳಿ, 'ಇವೊತ್ತು ಬೇಡಿ' ಅನ್ನೋವೆ. ಆದರೂ ಬಿಡಲೊಲ್ಲರು. ಅಂಥ ರಸಮೈತ್ರಿ ಇಲ್ಲದ

ಸಂದರ್ಭಗಳಲ್ಲಿ 'ನಾನು ಯಾಕಾದರೂ ಈ ಪದ್ಯ ಬರೆದೆನೋ ಅನ್ನಿಸಿಬಿಡುತ್ತಪ್ಪ!' ಎಂದು ಬೇಸರದಿಂದ ಅಂದದ್ದುಂಟು.

ಈ ಬೇಸರವನ್ನ ಅರ್ಥಮಾಡಿಕೊಂಡು, ತನಿಯಾಗಿ 'ರತ್ನನ ಪದಗಳು' ವಾಚನಾನ ತೊಂಬತ್ತು ನಿಮಿಷ ಆನಂದವಾಗಿ ಕೇಳಿದವರೂ ಉಂಟು; ನಾನು ಅವೊತ್ತೇ 'ಬ್ರಹ್ಮಾ ನಿನ್ಗೆ ಜೋಡಿಸ್ತೀನಿ' ಹೇಳದೆ ಹೋದ್ದಕ್ಕೆ ನನಗಿಂತ ಹೆಚ್ಚಾಗಿ ನನ್ನ ಮೇಲೆ ಬೇಸರಮಾಡಿಕೊಂಡು, ಮಾತಿಗೆ ಮಾತು ಬೆಳೆಸಿದವರೂ ಉಂಟು. ಅವರ ತೃಪ್ತಿಗಾಗಿ ನಾನು ರಸಭಂಗಮಾಡಲು ಒಪ್ಪದ್ದಕ್ಕಾಗಿ ಕೆಲವರು'ಜಂಬ' ಅಂತ ಹಿಂದೆ ಆಡಿಕೊಂಡದ್ದೂ ಉಂಟು.

ಮೊನ್ನೆ ನವೆಂಬರಿನಲ್ಲಿ ರಾಜ್ಯೋತ್ಸವ ಆದಾಗ ಒಂದು ಕಡೆ ಭಾಷಣಕ್ಕೆ ಕರೆದಿದ್ದರು. ಯಥಾಪ್ರಕಾರ-ಕನ್ನಡ, ನಾಡು, ನುಡಿ, ಸಾಹಿತ್ಯ, ಜನ, ಗುರಿ, ಕರ್ತವ್ಯ ಎಂದೆಲ್ಲಾ ಆ ಸಂದರ್ಭಕ್ಕೆ ತಕ್ಕಂತೆ ಏನೇನು ಹೇಳಬೇಕಾದ್ದು ಉಂಟೋ ಅದನ್ನೆಲ್ಲಾ ವಿಸ್ತಾರವಾಗಿ ಹೇಳಿ ಗಂಟಲು ಒಣಗಿಸಿಕೊಂಡೆ. ಮಾತು ಮುಗಿಸಿ ಕುಳಿತುಕೊಳ್ಳು ತ್ತಿದ್ದ ಹಾಗೇ ಚೀಟಿ ಬಂದುವು. ಅವುಗಳ ಸಾರಾಂಶ: ರತ್ನನ ಪದ ಓದಿ. 'ಕನ್ನಡ ಪದಗೊಳು' ಯಾರೋ ಮೊದಲೇ ಅಕಾರವಿಕಾರ ವಾಗಿ ಹೇಳಿ ಮುಗಿಸಿದ್ದರು. ಇನ್ನೂ ಯಾವುದೂ ರಾಜ್ಯೋತ್ಸವದ ಭಾಷಣಕ್ಕೆ ಹೊಂದತಕ್ಕದ್ದಲ್ಲ. ಅವರಿಗೆ ಹೇಗೆ ಹೇಳುವುದು? ಒಂದು ಕತೆ ಹೇಳಿದೆ. ಏನೆಂದರೆ—

"ಈ ಮಂಟಪಕ್ಕೆ ಬರುವ ಮೊದಲು, ನಿಮ್ಮ ಪಾಳ್ಯ ದಲ್ಲಿರುವ ಅಂಜನೇಯ ಸ್ವಾಮಿಯ ದರ್ಶನ ಮಾಡಿಕೊಂಡು ಬಂದೆ. ದೇವರ ತೀರ್ಥ ತೆಗೆದುಕೊಂಡಮೇಲೆ ಅರ್ಚಕರು

ಸೊಗಸಾದ ಬಿಸಿಬಿಸಿ ಸಕ್ಕರೆ ಪೊಂಗಲನ್ನು ಬೆಳ್ಳಿಯ ತಟ್ಟೆಯಲ್ಲಿಟ್ಟು ಕೊಟ್ಟರು... ಸೊಗಸಾದ ಸಿಹಿ ಇನ್ನಷ್ಟು ಸೊಗಸಾಗಬೇಕಾದರೆ ಅದರ ಜೊತೆಗೆ ಖಾರ ಇರಬೇಕಲ್ಲವೆ? ನನಗೆ ಖಾರಗಳಲೆಲ್ಲ ಪರಮ ಪ್ರಿಯವಾದದ್ದು ಅಂದರೆ—ಪಕೋಡ! ಹಾಗೆಂದ ಮಾತ್ರಕ್ಕೆ ಅಂಜನೇಯನ ದೇವಾಲಯದಲ್ಲಿ ಪಕೋಡ ಎಲ್ಲಿಂದ ಬರಬೇಕು? ಒಂದು ವೇಳೆ, ನಾಲಗೆಯ ಚಪಲವನ್ನು ತಡೆದುಕೊಳ್ಳಲಾರದೆ, ಹೋಟೆಲಿನಿಂದ ಎರಡು ಪ್ಲೇಟ್ ಪಕೋಡ ತರಿಸಿಕೊಂಡು, ಅರ್ಚಕರು ಕೊಟ್ಟ ಸಕ್ಕರೆಪೊಂಗಲಿನ ಜೊತೆಗೆ ನಾನು ತಿನ್ನುವುದನ್ನು ನೀವು ಯಾರಾದರೂ ನೋಡಿದ್ದರೆ, ನೀವೇ ಏನು ಹೇಳುತ್ತಿದ್ದಿರಿ?'

ನಾನು ಹೀಗೆಂದೆನೋ ಇಲ್ಲವೋ, ಎಲ್ಲರೂ ಗೊಳ್ಳೆಂದು ನಗತೊಡಗಿದರು; 'ರತ್ನನ ಪದ'ಗಳನ್ನು ಕೇಳಿದವರು ಕೂಡ.

'ಈಗ ಹೇಳಿ: ರತ್ನನ ಪದ ಇವೊತ್ತೇ ಆಗಬೇಕಾ? ಅಥವಾ ಇನ್ನೊಂದು ದಿವಸ ಆಗಬಹುದಾ?' ಎಂದೆ.

ನಮ್ಮ ಜನ (ನೃಪತುಂಗ ಹೇಳಿದ ಹಾಗೆ) 'ಚದುರರ್ ನಿಜದಿಂ'. ಬಲವಂತ ಮಾಡಲಿಲ್ಲ;ಇನ್ನೊಂದು ದಿವಸ ಕರೆದು, ಒಂದೂವರೆ ಗಂಟೆ ಓದಿಸಿ ಕೇಳಿದರು. ಅಷ್ಟೇ ಅಲ್ಲ; ಕೆಲವು ಪ್ರತಿ 'ರತ್ನನ ಪದ'ಗಳನ್ನು ಕೊಂಡರು. ಅಷ್ಟೇ ಅಲ್ಲ; ಕರೆದವರೊಬ್ಬರ ಮನೆಯಲ್ಲಿ ಬಿಸಿಬಿಸಿ ಸಕ್ಕರೆಪೊಂಗಲು, ಬಿಸಿಬಿಸಿ ಪಕೋಡ ಬೆಳ್ಳಿಯ ತಟ್ಟೆಯಲ್ಲಿ ಇಟ್ಟು ಕೊಟ್ಟು ತಿನ್ನಿಸಿದರು.

೫. ಉಮರ್ ಖಯ್ಯಾಂ ಮತ್ತು ರಾಜರತ್ನಂ

'ಕಳ್ಳತನ ಎಷ್ಟು ದಿನ ಅಂತ ಮುಚ್ಚಿಟ್ಟುಕೊಳ್ಳೋದಕ್ಕೆ ಆಗುತ್ತೇರೀ? ನಾನೂ ನನ್ನ ಆಯುಷ್ಯಾನೆಲ್ಲ ಪೋಲೀಸಿನಲ್ಲಿ

ಕಳೆದೋನು!'

'ಏನ್ ನೀನು ಹೇಳುತ್ತಾ ಇರೋದು?'

'ಅಲ್ಲಾ ಮತ್ತೆ! ಉಮರ್ ಖಯ್ಯಾಮನಿಂದ ಕದ್ದುಬಿಟ್ಟು ರತ್ನನ ಪದಗಳು ಅಂತ ಹೇಳಿಬಿಟ್ಟರೆ, ಯಾರಿಗೂ ಗೊತ್ತಾಗೊಲ್ಲ ಅಂತಾನಾ? ಹೆಚ್ಚಿಗೆ ಮಾತಾಡಿದರೆ, ಹಾಥ್‌ಬೇಡಿ ಹಾಕಿಸಿಬಿಟ್ಟೇನು, ಹಾಥ್‌ಬೇಡಿ!'

'ಉಮರ್ ಖಯ್ಯಾಂಗೂ ರಾಜರತ್ನಂಗೂ ಯಾವ ಸಂಬಂಧ ವಯ್ಯಾ? ಇಮಾಂ ಸಾಬರಿಗೂ ಗೋಕುಲಾಷ್ಟಮಿಗೂ ಗಂಟು ಹಾಕಿದ ಹಾಗೆ!'

'ಇಮಾಂ ಸಾಬರಿಗೂ ಗೋಕುಲಾಷ್ಟಮಿಗೂ ಯಾಕೆ ಸಂಬಂಧವಿಲ್ಲ? ತುರುಕರಿಲ್ಲದ ಊರು ನರಕಭಾಜನವಯ್ಯ ಅಂತ ದಾಸರಾಯರು ಹೇಳಿಲ್ಲವಾ? ಅಂದ ಮೇಲೆ ನರಕಾಸುರನನ್ನ ಸಂಹಾರಮಾಡಿದ ಕೃಷ್ಣನ ಊರು ಸ್ವರ್ಗ ಸಮಾನ ಅಲ್ಲವಾ? ಅಂದಮೇಲೆ ಅಲ್ಲಿ ತುರುಕರು ಇದ್ದಿರಲೇಬೇಕು ಅಲ್ಲವಾ? ಅಂದಮೇಲೆ ಕೃಷ್ಣನ ಗೋಕುಲಕ್ಕೂ ಇಮಾಂ ಸಾಬರಿಗೂ ಸಂಬಂಧ ಇಲ್ಲವಾ? ಅಷ್ಟಮಿ ಎಲ್ಲರಿಗೂ ಒಂದೇ ಅಲ್ಲವಾ?...'

'ಪಂಡಿತಪುತ್ರ! ದಾಸರಾಯರು ಹೇಳಿದ ತುರು, ಕರು...'

'ನಂಗೂ ಗೊತ್ತಯ್ಯ. ಶ್ಲೇಷೆ ಅಂತ ಇಟ್ಟುಕೊ...'

'ಶ್ಲೇಷ್ಮ ಅಂತ ಇಟ್ಟುಕೊ...''

ಅದ್ಭುತವೂ ರೋಮಹರ್ಷಣವೂ ಆದ ಈ ಸಂವಾದವನ್ನು ಕೇಳಿ, ಪರಲೋಕದಲ್ಲಿದ್ದ ಉಮರನಿಗೂ ನಗು ಬಂತು,

ಇಹಲೋಕದಲ್ಲಿದ್ದ ರಾಜರತ್ನಂಗೂ ನಗು ಬಂತು.

೬. ಸತ್ತವರಿಗೆ ಪಾದಪೂಜೆ

'...and ಅನಕೃ agreed with me.'

'ಓತಿಕೇತನಿಗೆ ಬೇಲಿ ಸಾಕ್ಷಿ' ಅಂತ ಗಾದೆ. ಓತಿಕೇತ ಇದೆ; ಬೇಲಿ ಸತ್ತು, ಸುಟ್ಟು, ಬೂದಿಯಾಗಿಹೋಯಿತು. ಇನ್ನೂ ಯಾರಿಗೆ ಯಾರು ಸಾಕ್ಷಿ?

ಸತ್ತವರ ಬಾಯಲ್ಲಿ ಅಕ್ಕಿಯ ಕಾಳು ಹಾಕುವುದು ನಮ್ಮಲ್ಲಿ ಸಂಪ್ರದಾಯ. ಆದರೆ, ಸತ್ತು ಸುಟ್ಟು ಬೂದಿಯಾಗಿ ಹೋದವರ ಬಾಯಲ್ಲಿ ಸುಳ್ಳು ಹಾಕುವುದು—ಇದು ಯಾವ ಸ್ನೇಹಿತರು ಮಾಡುವ ಕೆಲಸ?

ಇದು ಸತ್ತವರಿಗೆ ಹೊಸ ಪೀಳಿಗೆ ಮಾಡುವ 'ಪಾದಪೂಜೆ'.

೭. 'ನ ಹಿ ವಂಧ್ಯಾ ವಿಜಾನಾತಿ...'

'ರತ್ನ'ಕ್ಕೂ 'ವಜ್ರ'ಕ್ಕೂ ಇರುವ ವ್ಯತ್ಯಾಸವನ್ನು ತಿಳಿಯದವರು ಎರಡಕ್ಕೂ ಬೆಲೆಯನ್ನು ಕಟ್ಟಲಾರರು. ಅದರಂತೆಯೇ 'ಪಂಡಿತ'ನಲ್ಲದ ನನ್ನ ಪಾಂಡಿತ್ಯವನ್ನು ಮೆಚ್ಚಿಕೊಳ್ಳುವ 'ಅಪಂಡಿತ'ನ ತಕ್ಕಡಿಗೆ ತುಲಾದಂಡವೇ ಐಬು! ಏಕೆಂದರೆ—'ವಿದ್ವಾನೇವ ವಿಜಾನಾತಿ ವಿದ್ವಜ್ಜನ ಪರಿಶ್ರಮಂ!ನ ಹಿ ವಂಧ್ಯಾ ವಿಜಾನಾತಿ ಗುರ್ವಿಣೀಂ ಪ್ರಸವವೇದನಾಂ!' ಕನ್ನಡ ಕವಿ ಹೇಳಿದ ಹಾಗೆ'ಹೆತ್ತರಿಯದ ಬಂಜೆ ಸೂಲಗಿತ್ತಿಯೆ ಜಗದಿ?'

ಇಷ್ಟಕ್ಕೂ ನಾನು 'ಪಂಡಿತ'ನಲ್ಲ, ಹಾಗೆಂದು ಎಲ್ಲೂ ಹೇಳಿಕೊಂಡಿಲ್ಲ. ನಾನು 'ಪಂಡಿತ' ವಂಶದಲ್ಲಿ ಹುಟ್ಟಿದವನಾದರೂ

‘ಪಂಡಿತಪುತ್ರ’ನೆಂಬ ಪರಿಹಾಸ್ಯಕ್ಕೆ ಈಡಾಗದ ಹಾಗೆ ಪಂಡಿತರ ‘ಪರಿಚಾರಿಕೆ’ ಮಾಡಿಕೊಂಡು, ಇತರರ ಪಾಂಡಿತ್ಯದ ಫಲಗಳನ್ನು ಬೇಕಾದವರಿಗೆ ಬಡಿಸುತ್ತಿದ್ದೇನೆ. ಇದು ಏನೂ ಸಣ್ಣ ಕೆಲಸವಲ್ಲ. ನಾನು “ಸಾಹಿತ್ಯ ಪರಿಚಾರಕ”ನೆಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತೇನೆ. ನನ್ನಂಥವರು ಇನ್ನೂ ಅಷ್ಟು ಜನ ಪರಿಚಾರಿಕೆಗೆ ಒದಗುತ್ತಿಲ್ಲವಲ್ಲಾ ಎಂದು ವಿಷಾದದಿಂದ ಹೇಳುತ್ತಿದ್ದೇನೆ.

೮. ಶ್ರೀ ಸತ್ಯ ಸಾಯಿ ಸಾಹಿತ್ಯ

ಪರಿಚಾರಿಕೆಗೆ ನಿಂತವನು ಯಾವ ಯಾವ ಕಾಲಕ್ಕೆ ಏನೇನು ಬಡಿಸಬೇಕೋ ಅದನ್ನು ನಿಷ್ಪಕ್ಷಪಾತವಾಗಿ ಬಡಿಸಲು ಸಿದ್ಧನಾಗಿರಬೇಕು. ಕೃಷ್ಣನಿಗೆ, ಜಿನನಿಗೆ, ಬುದ್ಧನಿಗೆ, ರಾಮಕೃಷ್ಣ ವಿವೇಕಾನಂದರಿಗೆ, ಗಾಂಧಿಯವರಿಗೆ ಪರಿಚರ್ಯೆ ಮಾಡಿದವನು, ಸಂಸ್ಕೃತದ ಕನ್ನಡದ ಕವಿಗಳಿಗೆ ಪರಿಚಾರಿಕೆ ಮಾಡಿದವನು, ಈಗ ಭಗವಾನ್ ಶ್ರೀ ಸತ್ಯ ಸಾಯಿ ಬಾಬಾ ಅವರ ಸಾಹಿತ್ಯವನ್ನು ಪ್ರಚಾರ ಮಾಡುವುದರಲ್ಲಿ ಏನು ದೋಷ? ‘ಹಣ ಮಾಡುವ ಒಂದೇ ಗುರಿಯಿಂದ ಇದನ್ನು ಕೈಗೆತ್ತಿಕೊಂಡಿದ್ದಾನೆ’ ಎನ್ನುವ ಮಹಾನುಭಾವರು ನಾನು ಮಾಡುತ್ತಿರುವುದರಲ್ಲಿ ಒಂದಂಶವನ್ನು ತಾವು ಎತ್ತಿಕೊಂಡು ಮಾಡಲಿ. ಆಗ, ಬಿಸಿ ಎಲ್ಲಿ ಮುಟ್ಟುತ್ತದೆ, ಎಷ್ಟು ಮುಟ್ಟುತ್ತದೆ, ಹೇಗೆ ಮುಟ್ಟುತ್ತದೆ, ಎಂಬುದು ಸ್ವಾನುಭವಕ್ಕೆ ಬರುತ್ತದೆ. ಅನುಭವವಿಲ್ಲದೆ ಇಂಥವರು ಆಡುವ ಮಾತುಗಳನ್ನು ಕೇಳಿದಾಗ ನನಗೆ ಬಸವಣ್ಣನವರ ಈ ಮಾತು ನೆನಪಾಗುತ್ತದೆ:

“ಕೋಣನ ಹೇರಿಂಗೆ ಕುನ್ನಿ ಬುಸುಗುಡುತ್ತ ಬಾಲವ ಬಡಿವಂತೆ—ತಾವು ನಂಬರು, ನಂಬುವರನು ನಂಬಲೀಯರು;

ತಾವು ಮಾಡರು, ಮಾಡುವವರನು ಮಾಡಲೀಯರು. ಮಾಡುವ ಭಕ್ತರ ಕಂಡು ಸೈರಿಸಾಲಾರದವರ ಕೂಗಿಡೆ ನರಕದಲಿಕ್ಕುವ ಕೂಡಲಸಂಗಮದೇವ".

ಅಸೂಯೆಯ ಮಗು-ಅಸುಖ. ನರಕ ಬೇರೆಯಿಲ್ಲ; ಅಸುಖ ನರಕದ ಲಕ್ಷಣ. ಎಲ್ಲ ನರಳಾಟಗಳಿಗೂ ಇದೇ ಮೂಲ.

೯. 'Commercial Devotee'

ನಲವತ್ತು ವರ್ಷಗಳಿಂದ ನನ್ನ ಕೃತಿಗಳನ್ನು 'ಮೆಚ್ಚಿ' ಕೊಂಡಿದ್ದವರಿಗೆ ಇದು ಈಗ ಗೊತ್ತಾಯಿತಾ? ಅಯ್ಯೋ, ಟ್ಯೂಬ್‌ಲೈಟೇ! ಇಷ್ಟು ವರ್ಷಬೇಕಾಯಿತಾ ಹೊತ್ತಿಕೊಳ್ಳು ವುದಕ್ಕೆ? ಅಸೂಯೆಯ ಅಂತಃಸತ್ವವೇ ಹಾಗೆ-ಬೆಂಕಿಯಾಗಿ ಬೆಳಕಾಗುವುದಕ್ಕೆ ಮುಂಚೆ ಮನೆಯ ತುಂಬ ಹೊಗೆಯೋ ಹೊಗೆ!

ಧರ್ಮ ಅರ್ಥ ಕಾಮಗಳೆಂಬ ಮೂರು ಪುರುಷಾರ್ಥಗಳಲ್ಲಿ ಧರ್ಮಕ್ಕೆ ಅಂಟಿಕೊಂಡ ಅರ್ಥವೂ ಧರ್ಮಕ್ಕೆ ಅಂಟಿಕೊಂಡ ಕಾಮವೂ ಧರ್ಮದಂತೆಯೇ ಪವಿತ್ರವಾದವು. ಪವಿತ್ರ ಎಂದೊಡನೆ ಮೂಗು ಮುರಿಯಬೇಕಾದ್ದಿಲ್ಲ. 'ಪವಿ' ಎಂದರೆ ಸಿಡಿಲು ತಲೆಯ ಮೇಲೆ ಬಿದ್ದಾಗಲೂ ಯಾವುದು ನಮ್ಮನ್ನು 'ತ್ರ' ಎಂದರೆ ಕಾಪಾಡುತ್ತದೋ ಅದು 'ಪವಿತ್ರ'. ಧರ್ಮ ಅಂಥದು. ಆದ್ದ ರಿಂದಲೇ 'ಧರ್ಮೋ ರಕ್ಷತಿ ರಕ್ಷಿತಃ' ಎನ್ನುವುದು. ಶ್ರೀ ಸಾಯಿ ಬಾಬಾ ಅವರ ಹತ್ತಿರ ಬಂದ ಮೇಲೆ ನಾನು ಇದನ್ನು ಕಲಿಯಲಿಲ್ಲ: 'ನಮ್ಮ ಅರ್ಥಗಳೂ ಕಾಮಗಳೂ ಧರ್ಮವನ್ನು ಅವಲಂಬಿಸಿರ ಬೇಕು' ಎನ್ನುವ ಸತ್ಯವನ್ನು ನಾನು ನಂಬಿರುವುದರಿಂದ ಸ್ವಾಮಿಯ

ಸೇವೆ ನನಗೆ ಲಭಿಸಿತು ಎಂದು ನಾನು ತಿಳಿದಿದ್ದೇನೆ.

'ಬ್ಲಡ್ಡೂ ದುಡ್ಡೂ ಎರಡೂ ಸೆರ್‌ಕ್ಯುಲೇಟ್ ಆಗುತಿರ ಬೇಕು' ಎಂದು ಶ್ರೀ ಸಾಯಿ ಹೇಳಿಕೊಟ್ಟಿದ್ದಾರೆ;'ಕೆರೆಯ ನೀರನು ಕೆರೆಗೆ ಚೆಲ್ಲಿ ವರವ ಪಡೆದವರಂತೆ ಕಾಣಿರೋ' ಎಂದು ನಮ್ಮ ಹರಿದಾಸರು ಹೇಳಿಕೊಟ್ಟಿದ್ದಾರೆ. ಇವರ ಉಪದೇಶಗಳನ್ನು ನಾನು ಅನುಸರಿಸುತ್ತಿರುವುದರಲ್ಲಿ ಅಡಗಿದೆ-ನನ್ನ ಸಾಹಿತ್ಯ ಪರಿಚಾರಿಕೆಯ ಗುಟ್ಟು!

ಸಮ್ಯಕ್ ಸಾಹಿತಿಯಾಗಬಯಸುವವನು ಸರಸ್ವತಿಯ ಬುದ್ಧಿಯನ್ನೂ ಲಕ್ಷ್ಮಿಯ ಕಾಲುಗಳನ್ನೂ ಪಾರ್ವತಿಯ ಹೃದಯವನ್ನೂ ತಾನು ಸಂಪಾದಿಸಿಕೊಳ್ಳಬೇಕು. ಆಗ ತ್ರಿಮೂರ್ತಿಗಳೂ ಆತನ ಯೋಗಕ್ಷೇಮವನ್ನು ತಾವು ವಹಿಸಿಕೊಳ್ಳುತ್ತಾರೆ.

೧೦. 'ಕರುಬರುದ್ದೂರಿಂದೆ ಕಾಡೊಳ್ಳಿತು'

ಲಕ್ಷ್ಮೀಶ ಕವಿ ಚಂದ್ರಹಾಸನ ಕತೆಯನ್ನು ಹೇಳುವಾಗ ಈ ಮಾತು ಹೇಳುತ್ತಾನೆ. ದುಷ್ಟಬುದ್ಧಿಯ ಅಸೂಯೆಗೆ ಗುರಿಯಾಗಿ, ಚಂದ್ರಹಾಸನು ಕಾಡಿನಲ್ಲಿ ಬೆರಳು ಕಳಕೊಂಡು ಏಕಾಕಿಯಾಗಿ ಕೊರಗುತ್ತಿರುವಾಗ—

ನವಿಲುಗಳು ಗರಿಗೆದರಿ, ಬಿಸಿಲಿಗೆ ಅಡ್ಡವಾಗಿ ಕೊಡೆ ಹಿಡಿದು ನಿಂತುವು; ಹಂಸಗಳು ತಮ್ಮ ರೆಕ್ಕೆಗಳನ್ನೇ ಬೀಸಣಿಗೆ ಮಾಡಿಕೊಂಡು ಬೀಸಿದುವು; ಸಾರಸ ಪಕ್ಷಿಗಳು ತಮ್ಮ ರೆಕ್ಕೆಗಳನ್ನು ನೀರಿನಲ್ಲಿ ನೆನಸಿಕೊಂಡು ಬಂದು, ಅವನ ಮೈಯ ಮೇಲೆ ತಂಪಾದ ನೀರಿನ ತುಂತುರುಗಳನ್ನು ಚಿಮುಕಿಸಿದುವು; ಗಿಳಿಗಳು ಆ ಬಾಲಕನ

ದುಃಖಕ್ಕೆ ತಾವೂ ಮರುಗಿ ಮೃದುವಾದ ಮಾತುಗಳಿಂದ ಉಪಚಾರ ಹೇಳಿದುವು. ಹೀಗೆ—

'ಹೊಟ್ಟೆಕಿಚ್ಚು ಪಡುವವರು ಇರುವ ಊರಿಗಿಂತ ಕಾಡು ವಾಸಿ' ಎನ್ನಿಸುವ ಹಾಗೆ, ಎಲ್ಲ ಪ್ರಾಣಿಗಳೂ ಅಳುವ ಆ ಬಾಲಕನ ಸುತ್ತ ಇದ್ದು ಅವನನ್ನು ಸಂತೈಸಿದುವು.

* * *

'ಕರುಬರು ಇದ್ದ ಊರಿಂದೆ' ಎನ್ನುವುದಕ್ಕೆ ನನ್ನದೊಂದು ಪಾಠಾಂತರ ಉಂಟು. 'ಕುರುಬರು ಇದ್ದ ಊರಿಂದೆ' ಎಂದು ಈ ಮಾತನ್ನು ಓದಿಕೊಳ್ಳಬಹುದು. ಈ ಮಾತಿಗೆ ಅವಕಾಶ ಕೊಟ್ಟ ಪ್ರಕರಣ ಹೀಗಿದೆ:-

ಒಂದು ಕಾಡಿನಲ್ಲಿ ಒಂದು ತೋಳ ಇತ್ತು. ಆ ಕಾಡಿನ ಪಕ್ಕದಲ್ಲಿ ಒಂದು ಊರು. ಅಲ್ಲಿ ಒಬ್ಬ ಕುರುಬ; ನೂರಾರು ಕುರಿಗಳನ್ನು ಸಾಕಿಕೊಂಡು ಸುಖವಾಗಿದ್ದ.

ಒಂದು ಸಲ ತೋಳ ಆ ಕುರಿಗಳನ್ನು ನೋಡಿತು. ಕುರಿಗಳನ್ನು ತಿನ್ನಬೇಕೆಂದು ಆಸೆಯಾಯಿತು. ಈ 'ಕುರುಬನಿಗೆ ಇಷ್ಟು ಕುರಿಗಳು ಏಕೆ?' ಎಂದು ಅದಕ್ಕೆ ಅಸೂಯೆಯಾಯಿತು. ಈ ಆಸೆ ಅಸೂಯೆಗಳ ಮಬ್ಬಿನಲ್ಲಿ ಅದಕ್ಕೆ 'ಕುರಿಗಳನ್ನು ಕಾಯುವ ಕುರುಬನೊಬ್ಬನಿದ್ದಾನೆ' ಎಂಬುದು ಕಾಣಿಸಲಿಲ್ಲ. 'ಬಡಿಗಂಡ ನಿಲ್ಲ. ಪಾಲನೆ ಕಂಡಂ' ಎಂದು ಪಂಪ ದುರ್ಯೋಧನರ ಬಗ್ಗೆ ಹೇಳಿದ ಹಾಗೆ ನಮ್ಮ ತೋಳಕ್ಕೂ ಆಯಿತು.

ಒಂದು ದಿನ ಇದ್ದಕ್ಕಿದಂತೆ ಅದು ಬಂದು ಕುರಿಯೊಂದರ

ಮೇಲೆ ಎರಗಿತು. ಮೈಯೆಲ್ಲ ಕಣ್ಣಾಗಿದ್ದ ಕುರುಬನ ದೊಣ್ಣೆ ತೋಳನ ಬೆನ್ನ ಮೇಲೆ ಎರಗಿತು. ತೋಳ ಕುಯ್ಯೋ ಮರ್ರೋ ಎಂದು ಕೂಗಿಕೊಳ್ಳುತ್ತ, ಬಂದ ದಾರಿಗೆ ಸುಂಕವಿಲ್ಲವೆಂದು ಕೊಂಡು ತನ್ನ ಹಳೆಯ ಕಾಡಿಗೆ ಓಡಿತು. ಓಡುವಾಗ 'ಕುರುಬರು ಇದ್ದ ಊರಿಂದೆ ಕಾಡು ಒಳ್ಳಿತು' ಎಂದು ಕೊಂಡಿತು.

ಸಾಹಿತ್ಯದ ಹುಲ್ಲುಗಾವಲಿನಲ್ಲಿ ನಿರಾತಂಕವಾಗಿ ತಮ್ಮ ಪಾಡಿಗೆ ತಾವು ಇದ್ದ ಕುರಿಗಳ ಮೇಲೆ ಕಾಡಿನ ತೋಳಗಳು ಎರಗಿದರೆ, ಕುರಿಗಳನ್ನು ನೋಡಿಕೊಳ್ಳುವ Good Shepherd ಒಬ್ಬ ಇದ್ದಾನೆ ಎಂಬುದನ್ನು ತೋಳಗಳು ಮರೆಯದಿದ್ದರೆ, ಅವುಗಳಿಗೆ ವಾಸಿ

* * *

'ಕಿರುಬರು ಇದ್ದ ಊರಿಂದೆ' ಎಂದು ಇನ್ನೊಂದು ಪಾಠಾಂತರ. ಅದರ ಕಥೆ ಹೀಗೆ:—

ಒಂದಾನೊಂದು ಕಿರುಬ ಒಂದು ಸಲ ದಾರಿತಪ್ಪಿ ಒಂದು ಊರಿಗೆ ಬಂತು. ಕುರಿಯನ್ನೋ ದನವನ್ನೋ ಲಪಟಾಯಿಸ ಬೇಕೆಂದು ರಾತ್ರಿ ಕತ್ತಲೆಯಲ್ಲಿ ಅದು ಹೊರಟಾಗ, ತನ್ನ ಹಾಗೆಯೇ ಅದೇ ಕೆಲಸಕ್ಕಾಗಿಯೇ ಅದೇ ಹೊತ್ತಿನಲ್ಲಿ ಅಲ್ಲಿಗೆ ಬಂದಿದ್ದ ಮನುಷ್ಯರೂಪಿನ ಕಿರುಬರನ್ನು ಕಂಡು 'ಮನುಷ್ಯ ರೂಪೇಣ ಮೃಗಾಃ ಚರಂತಿ!' ಎಂದು ಆಶ್ಚರ್ಯಪಡುತ್ತಾ, ಅವರ ಜೊತೆಯಲ್ಲಿ compete ಮಾಡಲಾರದೆ—'ಕಿರುಬ(ನಂತಹವ)ರು ಇದ್ದ ಊರಿಂದೆ ಕಾಡು ಒಳ್ಳಿತು' ಎಂದು ಬಾಲ ಮುದುರಿಕೊಂಡು. ಓಡಿಹೋಯಿತು.

ಈ ಕಿರುಬ ಎಷ್ಟೋ ವಾಸಿ. ಇದಕ್ಕಿಂತ ನಾಚಿಕೆ ಕೆಟ್ಟ ಪ್ರಾಣಿಯೆಂದರೆ—ಕತ್ತೆಕಿರುಬ! ಇದೊಂದು ಬೆರಕೆ! ಪ್ರಾಣಿಗಳೆಲ್ಲೆಲ್ಲ ಇದರಂಥ scavenger ಇನ್ನೊಂದಿಲ್ಲ! ಇಂಗ್ಲಿಷಿನಲ್ಲಿ ಇದನ್ನು hyena ಎನ್ನುತ್ತಾರೆ. This is a carnivorous quadruped allied to the dog tribe. ಅಂದರೇನು? ಕತ್ತೆ, ಕಿರುಬಗಳ ಗುಣದೊಂದಿಗೆ ನಾಯಿಗುಣವೂ ಕೂಡಿದೆ ಎಂದ ಹಾಗಾಯಿತು! ಇದು ಬಾಯಿಬಿಟ್ಟರೆ—its howl is compared to fiendish laughter.

ಕರುಬರಿದ್ದೂರಿಂದೆ ಕಾಡು ಹೇಗೆ ಒಳ್ಳಿತೋ ಹಾಗೆಯೇ (ಕತ್ತೆ) ಕಿರುಬರಿದ್ದೂರಿಂದಲೂ ಕಾಡು ಒಳ್ಳಿತು.

* * *

'ಅಸೂಯಾ' ಎಂಬುದು ಮೇಲೆ ನೋಡಿದರೆ 'ಮಳ್ಳಿ', ಕೈ ಹಾಕಿದರೆ 'ನಳ್ಳಿ',; 'ಹೃದಯ ಕತ್ತರಿ, ತುದಿನಾಲಗೆ ಬೆಲ್ಲಂಬೋ' ಗುರುಮಘಾತಕರ ಹಾಗೆ. ಹೊದಿಕೆಯನ್ನು ನೋಡಿದರೆ— 'ಇದರಿಂದ ಯಾವುದೂ(ನ ಸೂಯತೇ) ಹುಟ್ಟಿಬರುವುದಿಲ್ಲ' ಎಂಬ ಹಾಗೆ ತೋರಿಬಂದರೂ, ಒಳಹೊಕ್ಕು ನೋಡಿದರೆ ಇದು 'ಅನ್ಯೋನ್ಯ ವೈರ ಜನನೀ'. ಈ ವೈರವೆಂಬುದಾದರೂ ಏನು? 'Hate is only another name for fear' ಎಂದಿದ್ದಾಳೆ, ಏಕಲವ್ಯನ ತಾಯಿ. ಹೀಗೆ-ಅಸೂಯಾ, ವೈರ, ಭಯ ಇವು ಮೂರೂ ಒಂದೇ ಶೂಲದ ಮೂರು ಅಲಗುಗಳು. ಈ ಶೂಲವನ್ನು ಹಿಡಿದುಕೊಂಡವನು ಶಿವನಲ್ಲ, ಶವ!

◆ ಹಾಸ್ಯದ Who is Who ◆

"ಕ್ಷೋಣೀಕೋಣಶತಾಂಶಪಾಲನಕಲಾದುರ್ವಾರಗರ್ವಾನಲಕ್ಷುಭ್ಯತ್ ಕ್ಷುದ್ರನರೇಂದ್ರ ಚಾಟುರಚನಾಧನ್ಯಾನ್ ನ ಮನ್ಯಾಮಹೇ" ಎಂದು ಒಂದು ಪ್ರಾಚೀನವಾಕ್ಯ ವಿಜೃಂಭಣೆ ಇದೆ. ಇದನ್ನು ನಾವು ಪ್ರಕೃತಕ್ಕೆ ಹೀಗೆ ಅರ್ಥಮಾಡಿಕೊಳ್ಳಬಹುದು:—

ಹಾಸ್ಯವು ಹುಲುಸಾಗಿ ಬೆಳೆಯುವ ಈ (ಕ್ಷೋಣೀ) ಭೂಮಂಡಲದಲ್ಲಿ ಒಂದು(ಕೋಣ)ಮೂಲೆ;ಆ ಕೋಣದ (ಶತಾಂಶ) ನೂರರಲ್ಲಿ ಒಂದು ಪಾಲು; ಆ ಶತಾಂಶವನ್ನು (ಪಾಲನ ಕಲಾ) ಕಾಪಾಡಿಕೊಳ್ಳುವ ಜಾಣತನವಷ್ಟರಿಂದಲೇ (ದುರ್ವಾರ) ಅಡಗಿಸುವುದಕ್ಕೆ ಕಷ್ಟವಾದ (ಗರ್ವಾನಲ) ಗರ್ವವೆಂಬ ಬೆಂಕಿಯಿಂದ (ಕ್ಷುಭ್ಯತ್) ಬುದ್ಧಿಯ ಸ್ತಿಮಿತತೆಯನ್ನು ಕಳೆದುಕೊಂಡಿರುವ (ಕ್ಷುದ್ರ ನರೇಂದ್ರ) ಜುಜುಬಿ ಹಾಸ್ಯರಾಜರುಗಳನ್ನೂ, ಅಂತಹ ರಾಜರುಗಳನ್ನು ಕುರಿತು (ಚಾಟು ರಚನಾಧನ್ಯಾನ್) ಚಮತ್ಕಾರವಾದ ಮಾತುಗಳನ್ನು ಆಡಿ 'ಕೃತಾರ್ಥರಾದೆವು' ಎಂದು ಕೊಳ್ಳುವ ಹೊಗಳುಭಟರನ್ನೂ(ನ ಮನ್ಯಾಮಹೇ) ಮನ್ನಣೆಗೆ ಪಾತ್ರರೆಂದು ನಾನು ಗಣಿಸುವುದಿಲ್ಲ.

ಹಾಸ್ಯಕ್ಕೋಸ್ಕರವಾಗಿಯೇ ಹುಟ್ಟಿ ಬಂದವರಿದ್ದಾರೆ; ಅಭ್ಯಾಸ ಮಾಡಿ ಹಾಸ್ಯವನ್ನು ಕಟ್ಟಿಕೊಂಡವರಿದ್ದಾರೆ; ಆಗೊಮ್ಮೆ ಈಗೊಮ್ಮೆ ಹಾಸ್ಯವನ್ನು ಕರೆದು ಕೂರಿಸಿಕೊಳ್ಳುವವರಿದ್ದಾರೆ;

ಕರೆದರೂ ಬಾರದ ಹಾಸ್ಯಕ್ಕಾಗಿ ಬಾಯಿಬಿಟ್ಟು ತಿಣುಕುವವರಿದ್ದಾರೆ. ಲೋಕವೆಂದ ಮೇಲೆ ಎಲ್ಲ ಬಗೆಗಳಿಗೂ ಅವಕಾಶ ಉಂಟು. ಕಡೆಗೆ ಕಾಲದ ಒರೆಗಲ್ಲಿನಲ್ಲಿ ಉಳಿಯುವುದು ಗಟ್ಟಿ ಮಾತ್ರ. ತಾನಾಗಿ ಹೋಗುವುದನ್ನು ನಾವಾಗಿ ತಳ್ಳುವುದು ಏಕೆ? ಅಂಥ ಸಂದರ್ಭ ಒದಗಿದರೆ, ಇದ್ದೇ ಇದೆ-ಹಸ್ತಾರ್ಧಚಂದ್ರಪ್ರಯೋಗ!

ಕೆಲವರಿಗೆ ಸೆಕ್ಸೂ ಸಕ್ಸೆಸ್ಸೂ ಷರಾಬು ಇದ್ದ ಹಾಗೆ: ಒಂದು ಹನಿ ಹೆಚ್ಚಾಗಿ ಹೋದರೆ ತಲೆ ತಿರುಗಲು ಮೊದಲಾಗುತ್ತದೆ. ಇದು ಸಾಹಿತ್ಯದಲ್ಲಿ ಆದರಂತೂ-'ಬ್ರಹ್ಮನಿಗೆ ಅಪ್ಪ ನಾನೇ! ಸರಸ್ವತಿ ನನ್ನ ಸೊಸೆ!' ಅಂದು ಕೊಂಡುಬಿಡುತಾರೆ.

೧. ಸಬ್ಬವಕಾರ (ನಗೆಗಾರ)

ಸುಮಾರು ೭೫ ವರ್ಷಗಳ ಹಿಂದೆ, ನಮ್ಮ ಮುದ್ದಣ ತನ್ನ ಮನೋರಮೆಯೊಡನೆ ಪರಿಹಾಸಕ್ಕೆ ತೊಡಗಿದರೆ, 'ನೀನೇನು ಕಬ್ಬಿಗನೊ? ಸಬ್ಬವಕಾರನೊ?' ಎಂದು ಆಕೆ ಛೀಗುಟ್ಟಿದಳು. ಕನ್ನಡ ಸಾಹಿತ್ಯದಲ್ಲಿ ಹಾಸ್ಯಕ್ಕೆ ಇದ್ದ ಸ್ಥಾನವನ್ನು ನಂದಳಿಕೆಯವರು ಹೀಗೆ ವಿಡಂಬನೆ ಮಾಡಿದ್ದಾರೆ.

ಎಂದರೆ, ಅವರಿಗೆ ಹಿಂದಿನವರು ಯಾರೂ ಕನ್ನಡದಲ್ಲಿ ಹಾಸ್ಯಕ್ಕೆ ಕೈ ಹಾಕಲಿಲ್ಲವೆಂದಲ್ಲ. ಈಗಿನ ಕಾಲದಲ್ಲಿ ಊಟ ಮಾಡುವಾಗ 'ಶಾಸ್ತ್ರಕ್ಕೆ' ತುಪ್ಪ ಬಡಿಸುವ ಹಾಗೆ, ಹಾಸ್ಯದ ಉದ್ಧರಣೆಯನ್ನು ತಲೆಕೆಳಗಾಗಿ ಹಿಡಿದು ಬಡಿಸಿಕೊಂಡು ಹೋಗುತ್ತಿದ್ದರು. (ವಿವರಗಳು ಬೇಕಾದರೆ ನನ್ನ 'ನಕ್ಕಳಾ ತಾಯಿ' ಮತ್ತು 'ನಮ್ಮ ನಗೆಗಾರರು' ಪುಸ್ತಕಗಳನ್ನು ನೋಡಿ.)

ನಂದಳಿಕೆಯವರ ಅನಂತರ ಆರಂಭವಾಯಿತು ಹಾಸ್ಯದ ಸೂರೆ. ಈಗಂತೂ ಅದರ ಸಮೃದ್ಧಿ ಬಹುಮುಖವಾದದ್ದಾಗಿದೆ. ನಗೆಗಾರರಿಗೆಂದೇ ವಿಶಿಷ್ಟವಾದ ಸ್ಥಾನ ಮಾನ ಮಾರ್ರ್ಯಾದೆ ಮನ್ನಣೆಗಳನ್ನು ಸಮಾಜ ಸಂತೋಷದಿಂದ ನೀಡುತ್ತಿದೆ.

೨. "ನಗೆನಂದನ" ಮತ್ತು "ಸುಹಾಸ"

ಕಳೆದ ಮುಕ್ಕಾಲು ಶತಮಾನದ ಅವಧಿಯಲ್ಲಿ ಕನ್ನಡ ಎಂತೆಂತಹ ಹಾಸ್ಯದ ಹೂಗಳನ್ನು ಬಿಟ್ಟಿದೆ ಎಂಬುದಕ್ಕೆ ಸಾಕ್ಷಿಯಾಗಿ ಸುಮಾರು ಐದು ವರ್ಷಗಳ ಹಿಂದೆ 'ನಗೆನಂದನ'ವೆಂಬ ೧೦೦೦ ಪುಟಗಳ ಹಾಸ್ಯಸಂಕಲನ ಪ್ರಕಟವಾಯಿತು. ೧೫೦ ಹಾಸ್ಯಲೇಖನಗಳನ್ನು ಒಳಗೊಂಡಿರುವ ಈ ಸಂಪುಟವನ್ನು ಬಿಡುಗಡೆ ಮಾಡುವ ದಿವಸ, ಹಿರಿಯ ಹಾಸ್ಯಲೇಖಕರಾದ ಡಾಕ್ಟರ್ ಎಂ. ಶಿವರಾಂ ಅವರನ್ನು ಬೆಂಗಳೂರಿನ ಪುರಭವನದಲ್ಲಿ ಸನ್ಮಾನಿಸಿದರು.

ಅದಾದ ಮೇಲೆ, ಇದೇ ಡಿಸೆಂಬರ್ ೨೧ರಂದು ಮತ್ತೊಬ್ಬರು ಹಿರಿಯ ಹಾಸ್ಯಸಾಹಿತಿಗಳಾದ ಶ್ರೀ ನಾ. ಕಸ್ತೂರಿ ಅವರಿಗೂ, ಹಾಸ್ಯಶಾಸ್ತ್ರವನ್ನು ಕುರಿತು ಬೃಹತ್ ಪ್ರಮಾಣಗ್ರಂಥವನ್ನು ರಚಿಸಿರುವ ಡಾಕ್ಟರ್ ಎಂ.ಎಸ್. ಸುಂಕಾಪುರ ಅವರಿಗೂ ಹೀಗೇ ಪುರಭವನದಲ್ಲಿ ಸಾರ್ವಜನಿಕ ಸನ್ಮಾನ ನಡೆಯಿತು. ಅಂದು "ಸುಹಾಸ"ವೆಂಬ ಇನ್ನೊಂದು ನಗೆಬರಹಗಳ ಸಂಪುಟ ಪ್ರಕಟವಾಯಿತು.

"ಸುಹಾಸ"ವು 'ನಗೆನಂದನ'ಕ್ಕಿಂತ ಪ್ರಮಾಣದಲ್ಲಿ ದೊಡ್ಡದು. ೧೧೨೦ ಪುಟಗಳಿರುವ ಈ ಗ್ರಂಥದಲ್ಲಿ ೨೧೭ ಹಾಸ್ಯದ

ಖಂಡಗಳಿವೆ. "ನಗೆನಂದನ"ದಲ್ಲಿ ಹೊಸಕಾಲದ ಹಾಸ್ಯಗದ್ಯ ಮಾತ್ರ ಇತ್ತು. "ಸುಹಾಸ"ದಲ್ಲಾದರೋ ಹೊಸಕಾಲದ ಹಾಸ್ಯಗದ್ಯಗಳ ಜೊತೆಗೆ ಹಾಸ್ಯಪದ್ಯಗಳನ್ನೂ ಹಾಸ್ಯದೃಶ್ಯಗಳನ್ನೂ ಕೂಡಿಸಿದ್ದಾರೆ. ಪ್ರಾಚೀನಕಾಲದ ಕವಿಗಳಿಂದ ಪ್ರಾತಿನಿಧಿಕವಾಗಿ ಕೆಲವು ಚಾಟುಗಳನ್ನು ಕೊಟ್ಟಿದ್ದಾರೆ.

ಒಂದು ರೀತಿಯಲ್ಲಿ ಈ ಎರಡು ಸಂಪುಟಗಳನ್ನೂ "ಹಾಸ್ಯದಲ್ಲಿ Who is Who" ಎಂದು ಪರಿಗಣಿಸಬಹುದು. ಇದರಲ್ಲಿ ಯಾವುದು ಹೂ, ಯಾವುದು ಹೂವಲ್ಲ; ಯಾವುದು ಎಂಥ ಹೂ; ದೇವರಿಗೆ ಯಾವುದು? ಮುಡಿಗೆ ಯಾವುದು? ಮೂಗಿಗೆ ಯಾವುದು? ಮೇಜಿಗೆ ಯಾವುದು? ಬಾಡುವ ಹೂ ಯಾವುದು? ದೂಳನ್ನು ಆಕರ್ಷಿಸುವ ಕಾಗದದ ಹೂ ಯಾವುದು? ಎಂದೆಂದೂ ಬಾಡದ ನಿತ್ಯಹಾಸ್ಯದ ಹೂ ಯಾವುದು? ಇತ್ಯಾದಿ ವಿಷಯಗಳನ್ನು ಪರಿಶೀಲಿಸುವುದಕ್ಕೂ ಇದು ಆಧಾರವಾಗಬಲ್ಲುದು. ಈ ಆಧಾರದ ಮೇಲೆ Who is What? ಎಂಬುದನ್ನೂ ಕಂಡುಕೊಳ್ಳಬಹುದು.

ಈ ಎರಡು ಪುಸ್ತಕಗಳೂ "ಧಡೂತಿ" ಪುಸ್ತಕಗಳು. ಬೆನ್ನಡಿಯಾಗಿ ಮಲಗಿ, ಇವುಗಳನ್ನು ಹೊಟ್ಟೆಯ ಮೇಲೆ ಇಟ್ಟುಕೊಂಡು, ಹತ್ತು ಸಲ Breathing Exercises ಮಾಡಿದರೆ, ಎಂತಹ ಬೊಜ್ಜಾದರೂ ಕರಗಿ ಹೋಗುತ್ತದೆ. ಅದರ ಜೊತೆಯಲ್ಲಿ, ಇಲ್ಲಿನ ಎರಡು ಸಾವಿರ ಪುಟಗಳುದ್ದದ ಹೊಳೆಯನ್ನು ಗಮನಕ್ಕೆ ತಂದುಕೊಂಡರೆ, "ಅರರೇ ಎನ್ನಯ ಸಮಾನರಾರು? ಧರಣಿಯೊಳಾರಿಹರು?' ಎಂಬ ತಲೆಯ ಕೊಬ್ಬೂ ಕರಗಿ ಹೋಗುತ್ತದೆ. ಹಾಸ್ಯ

ಆಹ್ಲಾದಕ್ಕೂ ಆಗುತ್ತದೆ, ಅವುಷಧಕ್ಕೂ ಆಗುತ್ತದೆ.

ಕಾವ್ಯದಲ್ಲಿ "ರಸಗಳು ಎಂಟೋ, ಒಂಬತ್ತೋ? ಶಾಂತ ಒಂದು ರಸವೆ?" ಎಂದು ವಾದ ಮಾಡುವವರಾಗಲಿ, "ಕರುಣವೊಂದೇ ರಸ! ಶೃಂಗಾರವೊಂದೇ ರಸ! ವೀರವೊಂದೇ ರಸ! ಹಾಸ್ಯವೊಂದೇ ರಸ!" ಎಂದು ತಮ್ಮ ಮೂಗಿನ ನೇರ ಕೂಗುವವರಾಗಲಿ, ಅದೇ ಉಸಿರಿನಲ್ಲಿಯೇ ಕೆಲವನ್ನು ಪ್ರಧಾನರಸವೆಂದೂ ಇನ್ನೂ ಕೆಲವನ್ನು ಅವಕ್ಕೆ ಪೋಷಕರಸವೆಂದೂ ಹೇಳುತ್ತಾರೆ. ಈ ಸಂದರ್ಭದಲ್ಲಿ ಹಾಸ್ಯವನ್ನು ಶೃಂಗಾರದ ಊಳಿಗಕ್ಕೆ ಹಾಕಿದ್ದಾರೆ ಲಾಕ್ಷಣಿಕರು, ಎಂಬುದನ್ನು ಮರೆಯಬಾರದು.

ಆದರೆ ಹಾಸ್ಯವನ್ನು ಅಷ್ಟು ಸುಲಭವಾಗಿ ಕಟ್ಟಿಹಾಕುವಂತಿಲ್ಲ. ಅದು ಯಾವ ರಸದ ಜೊತೆಗೆ ಬೇಕಾದರೂ ಹೊಂದಿಕೊಂಡು ಹೋಗಬಲ್ಲುದು. It is a good Mixer ಇದನ್ನು ಸಮರ್ಥಿಸುವುದಕ್ಕೆ ಬೇಕಾದ ಲಕ್ಷ್ಯಗಳನ್ನು "ನಗೆನಂದನ"ದಲ್ಲೂ "ಸುಹಾಸ"ದಲ್ಲೂ ಸ್ಥಾಲೀಪುಲಾಕನ್ಯಾಯದಿಂದ ಕಾಣಬಹುದು.

ಅಭಿವಜ್ರ ವಜ್ರಕಥಾ

ಕೃತವಿದ್ಯರ್ ಸಮಚಿತ್ತರಾಗಿ ಪದೆಪಿಂದಾರಯ್ಯೆ
ಕರ್ಣಾಟ ಸಂಸ್ಕೃತ ಕಾವ್ಯಂಗಳೊಳ್
ಅರ್ಥದಿಂ ರಚನೆಯಿಂ ನೇರ್ಪಟ್ಟು
ವಿದ್ವಚ್ಚಮತ್ಕೃತಿಯಪ್ಪಂತಿರೆ

ರಾಜರತ್ನವಿಬುಧಂ ಪೇಳ್ದಂದದಿಂದಾದ್ಯರಚೈತನಂ
ಪೇಳ್ದಭಿವಜ್ರ ವಜ್ರಕಥೆಯಂ ಸೈಪಿಂಗಡರ್ಪಾಗನೇ!

ಮಹಾಕವಿ ಪುರುಷಸರಸ್ವತಿ ಪ್ರಣೀತವೂ

"ಚಕ್ರವರ್ತಿ ವಜ್ರ"ನೆಂಬ ಮಹಾಕ್ಷುದ್ರಕಾವ್ಯಾಂತರ್ಗತವೂ

ಆದ

ಭೀಮ ವಜ್ರ ಸಂವಾದವು

(ವಿನೂತನ ಶತಕಾರ್ಧದ ೪೩-೪೪ನೇ ಪದ್ಯಗಳು)

ತ್ರಾಹಿ ಕರುಣಾಕರನೆ ಸರ್ವ-
ದ್ರೋಹವೆನ್ನದು ನಿಮ್ಮನರಿಯದೆ
ಮೋಹ ಮಾಯಾಡಂಬರಕೆ ಮರುಳಾದೆನಿನ್ನೆಬರ |
ಊಹೆಗೇಡಿಗನವಗುಣದ ಸಂ-
ದೋಹವನು ನೀ ಮರೆದು ಕರುಣಿಸ-
ಬೇಹುದೆನುತಾ ಭೀಮ ವಜ್ರನ ಕಾಲಿಗೆರಗಿದನು ||

ಮನದೊಳಗೆ ನಸುನಗುತಲೀ ಮೂ-
ರ್ಖನ ಗುಣಂಗಳನೇನ ಮಾಡುವೆ-
ನೆನುತ ವಜ್ರನು ಸರ್ವಜೀವದಯಾಪ್ರದಾಯಕನು |
ತನುಜ ಸಾಕೇಳೇಳು ಖಾತಿಯ
ನೆನಹು ನಮ್ಮೊಳಗಿಲ್ಲವೆನುತಲಿ
ವಿನಯದಿಂದೆತ್ತಿದನು ಭೀಮನ ತಗ್ಗಿಸಿದ ತಲೆಯ ||

ಓಂ ಶಾಂತಿಃ ಶಾಂತಿಃ ಶಾಂತಿಃ

ಜಿ. ಪಿ. ರಾಜರತ್ನಂ ಅಂತರ್ದರ್ಶನ - 4

'ವಜ್ರ'ವಾದ 'ರತ್ನ'

ಇದು

ಜಿ. ಪಿ. ರಾಜರತ್ನಂ ಅವರ

ನಿರ್ಭಯಾಗ್ರಫಿ

ನಾಲ್ಕನೇ ಕಂತು

"ಅಯ್ದಕ್ಕೆ ಆಖೈರು"

ಪೂಜ್ಯ ಶ್ರೀ ರಾಜರತ್ನಂ ಅವರು ನಮ್ಮ ಬಲವಂತವನ್ನು ತಡೆಯಲಾರದೆ, ತಮ್ಮ 'ನಿರ್ಭಯಾಗ್ರಫಿ'ಯನ್ನು ಪ್ರಕಟಿಸಲು ಒಪ್ಪಿದರು. ಅದರ ಮೂರು ಕಂತು ಬರುವ ವರೆಗೆ '**ಮೂರಕ್ಕೆ ಮುಕ್ತಾಯ**' ಎನ್ನುತ್ತಿದ್ದವರು ಅನಂತರ '**ನಾಲ್ಕಕ್ಕೆ ನೆಮ್ಮದಿ**' ಎಂದು ಹೇಳಿ, ನಾಲ್ಕನೆಯ ಕಂತು ಪ್ರಕಟವಾಗುತ್ತಿದ್ದಂತೆಯೇ '**ಅಯ್ದಕ್ಕೆ ಆಖೈರು**' ಎನ್ನುತ್ತಿದ್ದಾರೆ.

ಐದನೇ ಕಂತನ್ನು ನಾವು ಕಾತರದಿಂದ ಎದುರು ನೋಡುತ್ತಿದ್ದೇವೆ.

ಚಂದ್ರಕೀರ್ತಿ
ಶ್ರೀ ರಾಜರತ್ನಂ ಬಳಗದ ಪರವಾಗಿ

ಪುಸ್ತಕದ ಒಳಗೆ

◆ 'ವಜ್ರ'ವಾದ 'ರತ್ನ' ◆

ಗಡ್ಡ ಬೆಳಸದೆ ಹೋದರೂ, ಗಂಡಸು ಎಂದರೆ ನೀವೇ ಕಾಣ್ರಿ!

ಅದು ಯಾಕಪ್ಪಾ ಹಾಗೆ ಹೇಳುತ್ತೀರಿ?

ಅಲ್ಲವೇ ಮತ್ತೆ? ಅದು ಯಾವ ಕೆಟ್ಟಗಳಿಗೇಲಿ ಅವರು ನಿಮ್ಮನ್ನ 'ಚಕ್ರವರ್ತಿ ವಜ್ರ' ಅಂತ ಕುಚೋದ್ಯ ಮಾಡಿದರೋ...

ಛೆ! ಛೆ! 'ಕೆಟ್ಟಗಳಿಗೆ' ಅನ್ನಬೇಡಿ. ಅದು ಬಹಳ ಒಳ್ಳೇ 'ಶುಭಗಳಿಗೆ'. ಹಾಗಲ್ಲದೆ ಹೋಗಿದ್ದಿದ್ದರೆ, ನಾನು ನನ್ನ ನಿರ್ಭಯಾಗ್ರಫಿ ಬರೆಯೋಕೆ ಸಾಧ್ಯವಾಗುತಿತ್ತಾ? ಹೇಳಿ.

ನೀವು ಹೇಳೋದೂ ಸರೀನೇ. ಅಂದ ಹಾಗೆ, ನಿಮ್ಮನ್ನ ಕುಚೋದ್ಯ ಮಾಡಿದವರ ಹೆಸರೇ ಹೇಳಲಿಲ್ಲವಲ್ಲಾ?

ಹೆಸರನ್ನು ಬಾಯಿ ಬಿಟ್ಟು ಹೇಳಬೇಕಾ? ಮುಖನೋಡಿದರೆ ಗೊತ್ತಾಗೋದಿಲ್ವೇ, ಹೆಸರು ಹನುಮಂತರಾಯ ಅಂತ? ವಾಚ್ಯ ವಾಗಿ ಯಾವುದು ಹೇಳಿದರೂ ಅದು ಅವಾಚ್ಯ ಅನ್ನಿಸಿ ಕೊಂಡು ಬಿಡುತ್ತೆ. ಆದ್ದರಿಂದ, ನನ್ನ ನಿರ್ಭಯಾಗ್ರಫಿಯ ಉದ್ದಕ್ಕೂ, ಪ್ರತಿಯೊಂದು ಕಂತಿನಲ್ಲೂ, ಆ ಕುಚೋದ್ಯಗಾರ ಆದಿಮೂರ್ತಿ ಯಾರು ಅನ್ನೋದನ್ನ ಸೂಚ್ಯವಾಗಿ ಹೇಳಿಕೊಂಡು ಹೋಗಿದ್ದೇನೆ.

ಆದರೂ, ಅವರ ಹೆಸರು ಹೇಳಿದರೆ ಏನು ನಷ್ಟ ?

ನಷ್ಟವೂ ಇಲ್ಲ, ಲಾಭವೂ ಇಲ್ಲ, ಅಂದ ಮೇಲೆ, ಯಾಕೆ ಅವರ ಹೆಸರು ಹೇಳಬೇಕು, ನಾನು? ಅವರ ಹೆಸರು ಹೇಳೋ ಜನ ಬೇರೆ ಹುಟ್ಟಿದಾರೆ, ಅದಕ್ಕೋಸ್ಕರಾನೇ. ನಿಮಗೆ ಅವರ ಹೆಸರು ಅಷ್ಟು ಬೇಕಾದರೆ, 'ಬೇಶ್ರೀ ಬೀಮಂಣ' ಅಂತ ಇಟ್ಕೊಳ್ಳಿ.

ಬೀಮಂಣನೊ? ಭೀಮಣ್ಣನೊ?

ಭೀಮಣ್ಣ ಅಲ್ಲ, ಬೀಮಂಣ. ಅದೇ ಅವರಿಗೆ ಪ್ರಿಯವಾದ ಅಕ್ಷರ ಸಂಯೋಜನೆ. ಒಬ್ಬರು ಇನ್ನೊಬ್ಬರ ಹೆಸರನ್ನ ಕೆಡಿಸೋಕೆ ಹೋಗಬಾರದು.

ಅದೂ ಅಲ್ಲದೆ ಮಹಾಪ್ರಾಣಕ್ಕೂ ಇವರಿಗೂ ಹರಿದಾರಿ ದೂರ.

ಮತ್ತೆ ಏನೋ 'ಬೇಶ್ರೀ' ಅಂದಿರಲ್ಲಾ? ಅದು ಏನು?

'ಬೇ' ಎಂದರೆ ಸಂಸ್ಕೃತದ 'ವಿನಾ', Without. ಬೇ ಅನ್ನೋದು ಅರಬ್ಬೀ ಪದ; ಶ್ರೀ ಅನ್ನೋದು ಸಂಸ್ಕೃತ. ಇವೆರಡೂ ಬೆರಕೆ ಆದಾಗ—(ನಮ್ಮ ಮೈಸೂರಿನ ಖಾಸ ಬಂಗಲೇಲಿ Lion ಮತ್ತು Tiger ಎರಡನ್ನೂ ಬೆರಕೆ ಮಾಡಿ, Liger ಅನ್ನುವ ವಿಶ್ವಾಮಿತ್ರಸೃಷ್ಟಿಯನ್ನು ತಯಾರು ಮಾಡಿದ ಹಾಗೆ)—'ಬೇಶ್ರೀ' ಹುಟ್ಟಿಕೊಂಡದ್ದು. ಕನ್ನಡದ ಒಂದಕ್ಷರ, ಇಂಗ್ಲಿಷಿನ ಮೂರಕ್ಷರ ಬೆರಕೆ ಮಾಡಿಕೊಂಡಿಲ್ಲವೆ ಒಬ್ಬರು? ಅದರ ಹಾಗೇ ಇದೂ ಬೆರಕೆ.

ಇದರ ಅರ್ಥ?

ಅಂಗೈಯ ಹುಣ್ಣಿಗೆ ಕನ್ನಡಿ ಯಾಕೆ, ದೇವರೂ? 'ಬೇಶ್ರೀ'

ಎಂದರೆ 'ವಿನಾಶ್ರೀ'ಎಂದರೆ 'ಶ್ರೀ' ಇಲ್ಲದವನು ಅಂತ. ಉದಾಹರಣೆಗೆ: 'ಬೇ—ಹುಷಾರ್' (ಮೈಮೇಲೆ ಎಚ್ಚರವಿಲ್ಲದವನು): ಬೇ-ನಾಮಿ (ಹೆಸರಿಲ್ಲದವನು): ಬೇ—ವಕೂಫ್ (ವಿವೇಕವಿಲ್ಲದವನು); ಬೇ-ಷರ್ಮ್ (ನಾಚಿಕೆಯಿಲ್ಲದವನು); ಬೇ-ವಾರಸ್ (ಹೇಳೋವರು ಕೇಳೋವರು ಇಲ್ಲದ ತಬ್ಬಲಿ) ಬೇ-ಜವಾಬ್ದಾರಿ ಇತ್ಯಾದಿಯಾಗಿ ಅನೇಕ ಬೇ ಬೇಗಳು ಇದ್ದ ಹಾಗೆ ಇದೂ ಒಂದು 'ಬೇಶ್ರೀ'.

ಒಂದು 'ಬೇ'ಗೆ ಎಷ್ಟೆಲ್ಲಾ ಉದಾಹರಣೆ ಹೇಳಿದಿರಿ, ಸಾರ್!

ಹೌದಪ್ಪಾ, ಇಲ್ಲದೆ ಹೋದರೆ ಬೇಗೆ ಉಂಟಾಗೋದು ಹೇಗೆ? ಅಂದ ಹಾಗೆ, ನಾನೂ ಒಂದು 'ಬೇ'; ಗೊತ್ತಾ?

ನೀವು ಎಂಥ 'ಬೇ', ಸಾರ್?

ನಾನು 'ಬೇ-ಫಿಕರ್'. ಅಂದರೆ, ಭಯ ಇಲ್ಲದವನು, ಅಂತ; ಅದಕ್ಕೇ ನಾನು ನನ್ನ 'ನಿರ್ಭಯಾಗ್ರಫಿ' ಬರೀತಿರೋದು.

ಪಾಪೋಹಂ ಪಾಪಕರ್ಮಾಹಂ
ಪಾಪಾತ್ಮಾ ಪಾಪಸಂಭವಃ
ಪಾಹಿ ಮಾಂ ಕೃಪಯಾ ದೇವ
ಶರಣಾಗತವತ್ಸಲ

ಅಂತ ಹೇಳುವವರನ್ನು ಲೇವಡಿ ಮಾಡೋದು ಸುಲಭ. ಆದರೆ—

ಭೀತೋಹಂ ಭೀಮಕರ್ಮಾಹಂ
ಭೀತಾತ್ಮಾ ಭಯಸಂಭವಃ

ಅಂತ ತಾನು ಮಾತ್ರ ತನ್ನೊಳಗೊಳಗೇ ಜಪ ಮಾಡುತಾ, ತನ್ನ ಭಯದ ಗ್ರಾಫನ್ನ ಮೇಲುಮೇಲಕ್ಕೆ ತಳ್ಳಿಕೊಂಡು ಹೋಗೋದು?

ಇದಕ್ಕಿಂತ ಪರಿಶೋಚನೀಯವಾದ ಫಜೀತಿ ಇನ್ನೊಂದಿಲ್ಲ. ಇದು ಹಾಸ್ಯ ಅಲ್ಲ, ಇದು ಹಾಸ್ಯಾಸ್ಪದ.

ಅದೂ ನಿಜಾನೇ. ಪಾಪ ಮಾಡಿದ ತನ್ನ ಕಾಪಾಡೋಕೆ ಒಬ್ಬ ದೇವರು ಇದಾನೆ ಅಂತ ಆ ಪಾಪಿ ನಂಬಿಕೊಂಡು, ಅಷ್ಟರಮಟ್ಟಿಗೆ ಅವನು ನೆಮ್ಮದಿಯಾಗಿರುತ್ತಾನೆ. ಆದರೆ, Witch on the broomstick ಅಂತಾರಲ್ಲಾ ಅದರ ಹಾಗೆ, ಭಯದ ಬೆನ್ನ ಮೇಲೆ ಹತ್ತಿಕೊಂಡವರು, He who rides a tiger ಅಂದ ಹಾಗೆ, ಅದರ ಮೇಲೆ ಕೂರೋ ಹಾಗಿಲ್ಲ, ಅದರ ಬೆನ್ನು ಬಿಟ್ಟು ಇಳಿಯೋಹಾಗಿಲ್ಲ.

ಸರಿಯಾಗಿ ಹೇಳಿದಿರಿ. ಮೊನ್ನೆ ಯಾರ ಹತ್ತಿರಲೋ ಅವರು ಹೇಳಿದರಂತೆ: I have made my bed and I must lie on it, till I die on it. I have built a public image of me for the past so many years and I have to maintain it, come what may.

'ಪ್ರಾಣವಾದರೂ ಬಿಟ್ಟೇನು, ಪ್ರಾಸಮಾತ್ರ ಬಿಡೊಲ್ಲ' ಅಂತ ನಮ್ಮ ಹಿಂದಿನ ಕೆಲವು ಕವಿಗಳು ಕಪಿಮುಷ್ಟಿ ಹಿಡಿದ ಹಾಗೆ. ಅಲ್ಲಾ?

ಕ್ಕರೆಕ್ಟ್! ಭಗವಂತ ಹೇಗೆ 'ಭಯಕೃತ್' ಹೌದೋ ಹಾಗೇ ಅವನು 'ಭಯನಾಶನ'ನೂ ಹೌದು ಅನ್ನೋದು ಇವರಿಗೆ ತಿಳೀದು. ಅಥವಾ ತಿಳಿದಿದ್ದರೂ, ಅದನ್ನ ತೋರಿಸಿಕೊಳ್ಳೋಕೆ ಭಯವೋ ಏನೋ! ಇದನ್ನೆಲ್ಲಾ ಗಮನದಲ್ಲಿಟ್ಟುಕೊಂಡೇ ನಾನು ಅವರನ್ನ

‘ಬೇ-ಶ್ರೀ’ ಅಂತ ಕರೆದದ್ದು.

ನೀವು ಹೇಳಿದ್ದು ಸ್ಪಷ್ಟವಾಗಲಿಲ್ಲ, ಸಾರ್.

ಬಿಡಿಸಿ ಹೇಳೋಣ, ಅದಕ್ಕೇನು? ನಾವು ಇಲ್ಲಿ ಯಾರ ವಿಷಯ ಮಾತನಾಡುತ ಇದೇವೋ ಅವರು ‘ದೇವರಿಲ್ಲ’ ಎಂಬುದನ್ನೇ ಒಂದು ಕೈಯಲ್ಲಿ ಗಂಟೆಯಾಗಿ ಹಿಡಿದುಕೊಂಡು, ಅದನ್ನೇ ಇನ್ನೊಂದು ಕೈಯಲ್ಲಿ ಮಂಗಳಾರತಿ ತಟ್ಟೆಯಾಗಿ ಎತ್ತಿಕೊಂಡು, ಅಭಾವಕ್ಕೆ ಆರಾಧನೆ ಮಾಡುತ್ತಿದ್ದಾರೆ. ಇವರು ಯಾವುದನ್ನು ‘ಇಲ್ಲಾ’ ಎಂದು ಕರೆಯುತ್ತಾರೋ ಅದನ್ನೇ ಬೇರೆ ಕೆಲವರು ‘ಅಲ್ಲಾ’ ಎಂದೂ ಕರೆಯುತ್ತಾರೆ. ಅದನ್ನೇ ನಾವು ವೈಷ್ಣವರೂ ಶ್ರೀವೈಷ್ಣವರೂ ‘ಸಹಸ್ರನಾಮ’ಗಳಿಂದ ಕರೆಯುತ್ತೇವೆ. ಅವುಗಳಲ್ಲಿ ‘ಶ್ರೀನಾಥ’ ಎಂಬುದೂ ಒಂದು. ಈ ‘ಶ್ರೀನಾಥ’ನೇ ಇಲ್ಲ ಎಂದು ಇವರು ಪಟ್ಟು ಹಿಡಿದಿರುವಾಗ, ಇವರ ಪಾಲಿಗೆ ‘ಶ್ರೀ’ ಎಲ್ಲಿಂದ ಬರಬೇಕು? ಶ್ರೀ ಎಂದರೆ ಬರೀ ದುಡ್ಡು ಕಾಸು, ಮನೆ ಹೊಲ ಅಷ್ಟೇ ಅಲ್ಲ. ಅಮರದಲ್ಲಿ ಹೇಳುವ ಹಾಗೆ, ಶ್ರೀ ಎಂದರೆ ಮಂಗಳದೇವತೆ. ಯಾವಾಗ ಶ್ರೀನಾಥನನ್ನು ನಾವು ಒಲ್ಲದೆ ಹೋದೆವೋ ಅದರ ಪರಿಣಾಮವಾಗಿ ಶ್ರೀ ನಮ್ಮನ್ನು ಒಲ್ಲದೆ ಹೋದಳೋ, ಆಗ ನಾವು ‘ಬೇಶ್ರೀ’ ಆದೆವು, ವಿನಾಶ್ರೀ ಆದೆವು, Without ಶ್ರೀ ಆದೆವು; ಎಂದರೆ ಅಮಂಗಳದ ಮುದ್ದೆ ಆದೆವು. ಅಲ್ಲಾ?

ನಿಮ್ಮ ತರ್ಕ ತಾರೀಪು ಮಾಡಬೇಕಾದ್ದು, ಸರ್!

ಆದ್ದರಿಂದ, ನಮ್ಮನ್ನ ‘ಶ್ರೀಮಾನ್, ಶ್ರೀಯುತ’ ಅಂತ

ಯಾರಾದರೂ ಕರೆದರೆ ಅದು ಹೇಗೆ ಗೌರವಸೂಚಕವೋ ಹಾಗೇ ಇವರನ್ನೂ 'ಬೇಶ್ರೀ' ಅಂತ ಕರೆದರೆ, ಅದು ಕರೆದವರಿಗೂ ಗೌರವ, ಕರೆಸಿಕೊಂಡವರಿಗೂ ಮರ್ಯಾದೆ.

'ಎಂದರೋ ಮಹಾನುಭಾವುಲು' ಎಂದು ತ್ಯಾಗರಾಜರು ಹೇಳಿದ್ದು ಸತ್ಯ, ಸಾರ್. ಈ ಮಹಾನುಭಾವರು ಅಂದು ಸಮರ್ಪಿಸಿದ ಭಿನ್ನವತ್ತಳೆಯಿಂದಲೇ ಅಲ್ಲವೇ ಇದುವರೆಗೂ ಬರೀ 'ರಾಜರತ್ನಂ' ಆಗಿದ್ದ ನೀವು ಈಗ 'ಚಕ್ರವರ್ತಿ ವಜ್ರ' ಆಗಿರೋದು?

ಇದರ ಹಿಂದಿನ ರಹಸ್ಯ ನಿಮಗೆ ಗೊತ್ತಿಲ್ಲ. ಹೇಳುತ್ತೇನೆ. ಕೇಳಿ.

* * *

೧೯೩೯ರಲ್ಲಿ ನನ್ನ **'ಹತ್ತು ವರುಷ'** ಎಂಬ ಮಹಾಹರಟೆ ಪ್ರಕಟವಾದಾಗ, ಹಿರಿಯರಾದ ಶ್ರೀ ದ. ರಾ. ಬೇಂದ್ರೆಯವರು ಅದಕ್ಕೆ ಒಂದು 'ಪೀಠಿಕೆ' ಬರೆದರು. ಆ ಪೀಠಿಕೆಯ ಕೊನೆಯಲ್ಲಿ-

'ಈ ರತ್ನ ಇನ್ನು ಮುಂದೂ ವಜ್ರವಾಗಿ ಹೊಳೆದು, ಒಳ್ಳೆಯ ಕೆಲಸಕ್ಕೆ ಅಡ್ಡಬರುವ ಸಲ್ಲದ ಗುಡ್ಡಗಳ ರೆಕ್ಕೆಗಳನ್ನು ಕತ್ತರಿಸಲಿ; ಬೆಳಕಿಗೆ ತಡೆಹಾಕುವ ಮೋಡಗಳಲ್ಲಿ ಸಿಡಿಲಾಗೆರಗಲಿ; ಇಂದ್ರನ ವಜ್ರದಂತೆ ವೃತ್ರಸಂತತಿ ಸಂಹರಣಕುಶಲವಾಗಿ ಬಾಳಲಿ. ಈ ಕಲಿಕಾಲಕ್ಕೆ ಅದು ಬೇಕು. ರಾಜರತ್ನಂ ಅವರ ಧೀರೋದ್ಧತವಾದ ತೇಜಸ್ವಿ ತರುಣಚಾರಿತ್ರ್ಯವು ತರುಣರೆಲ್ಲರಿಗೂ ರಂಜಕವಾಗುವುದಲ್ಲದೆ, ಕುಚೋದ್ಯವು ವಿನೋದವೆಂದು ತಿಳಿಯುವ ಹಲಕೆಲವು

ಅಧಿಕಾರಿಭ್ರುವರಿಗೆ ಅಂಜನವಾದೀತೆಂದು ನಾನೆಣಿಸುತ್ತೇನೆ'

—ಎಂದು ಹರಸಿದರು, ಹಾರೈಸಿದರು.

'ಈ ರತ್ನವು ವಜ್ರವಾಗಲಿ' ಎಂದು ಮೂವತ್ತಾರು ವರ್ಷಗಳ ಹಿಂದೆ ಅವರು ಮಾಡಿದ ಹರಕೆಯು ಸುಮಾರು ಮೂರು ವರ್ಷಗಳ ಹಿಂದೆ ನನ್ನನ್ನು **'ಚಕ್ರವರ್ತಿ ವಜ್ರ'** ಎಂದು ಮತ್ತೊಬ್ಬರು ಮಹಾಶಯರು ಕುಚೋದ್ಯಮಾಡಿದಾಗ ಸಫಲವಾಯಿತು. ಹಿಂದೆ 'ರತ್ನ'ನಿಂದ 'ಹತ್ತು ವರ್ಷ' ರಚನೆಯಾದ ಹಾಗೆ ಈಗ ಈ 'ವಜ್ರ'ನಿಂದ **'ನಿರ್ಭಯಾಗ್ರಫಿ'** ರಚನೆಯಾಗಿದೆ.

ದೇವರಲ್ಲಿ ನಂಬಿಕೆಯುಳ್ಳವರು'ರತ್ನವು ವಜ್ರವಾಗಲಿ' ಎಂದು ಹರಸಿದರು. ದೇವರನ್ನು ನಂಬದವರು 'ಇದು ಹರಕೆಯಲ್ಲ, ವರ' ಎಂಬುದನ್ನು ತೋರಿಸಿಕೊಟ್ಟರು. ತಮಗೇ ಗೊತ್ತಿಲ್ಲದ ಹಾಗೆ ದೈವದ ಸಂಕಲ್ಪ ಸೂತ್ರಗಳಲ್ಲಿ ಸಿಕ್ಕಿಹಾಕಿ ಕೊಂಡು, ಅದರ ನಿಗೂಢವಾದ ಚಟುವಟಿಕೆಗಳಿಗೆ ನಿದರ್ಶನ ವಾದರು. **ಜೋಕ್ ಎಂದರೆ ಇದು!**

ಈ ಪ್ರಕರಣದಲ್ಲಿ ನನಗೆ ಅಭಿಜ್ಞಾನ ಶಾಕುಂತಲದ ನಾಲ್ಕನೇ ಅಂಕ ಜ್ಞಾಪಕಕ್ಕೆ ಬರುತ್ತದೆ: ಶಕುಂತಲೆಯು ಗಂಡನ ಮನೆಗೆ ಹೊರಟಾಗ ಕಣ್ವರು ಆಕೆಯನ್ನು ಆಶೀರ್ವದಿಸುತ್ತಾರೆ. ಆಗ ಅದನ್ನು ಕೇಳಿದ ಗೌತಮಿ 'ಭಗವನ್, ಇದು ವರ, ಬರಿಯ ಆಶೀರ್ವಾದವಲ್ಲ?' ಎನ್ನುತ್ತಾಳೆ.

ಅಂಬಿಕಾತನಯದತ್ತರು ನನ್ನನ್ನು ಕುರಿತು ಅಂದು ಆಡಿದ ಮಾತಾದರೂ- ಬರಿಯ 'ಹರಕೆಯಲ್ಲ, ವರ'ವಾಗಿ ಪರಿಣಮಿಸಿತು.

ದೈವೀ ವಿಚಿತ್ರಾ ಗತಿಃ |

"ಅಡಿಯೇನ್ ರಾಮಾನುಜದಾಸನ್"

ಪ್ರಿಯ ಚಂದ್ರಕೀರ್ತಿ,

ಸುಮಾರು ಅರುವತ್ತು ವರ್ಷಗಳಿಗೂ ಮೇಲ್ಪಟ್ಟು 'ರಾಜರತ್ನಂ' ಎಂಬ ಹೆಸರಿನಿಂದ ಬಳಕೆಯಾಗಿದ್ದ ನಾನು ಜೂನ್ ೧೧, ೧೯೭೨ರಿಂದ 'ಚಕ್ರವರ್ತಿ ವಜ್ರ'ನಾಗಿ ರಾರಾಜಿಸುತ್ತಿದ್ದೇನೆ ಎಂಬುದು ಮೂರುವರೆ ವರ್ಷಗಳಷ್ಟು ಹಳೆಯದಾದ ತಂಗಳುಕತೆ. ಹೆಸರನ್ನು ಬದಲಾಯಿಸುವುದಕ್ಕೆ ಏನು ಶುಲ್ಕತೆರಬೇಕೋ ಅದರ ಅಗತ್ಯವೇ ಇಲ್ಲದಂತೆ, ಮಿತ್ರರಾದ ಬೇಶ್ರೀ ಬೀಮಂಣನವರು ಈ ಹೊಸ ಹೆಸರನ್ನು ಮಹೋಪಕಾರಕ್ಕಾಗಿ ನಾನು ಸದರಿ ಮಹನೀಯ ರಿಗೆ ಯಾವಜ್ಜೀವವೂ ಕೃತಜ್ಞನಾಗಿರಬೇಕು. ಈಗಂತೂ ಆಗಿದ್ದೇನೆ.

ಆದರೆ, ವಯಸ್ಸಿನ ಪರಿಣಾಮವೋ, ಅಥವಾ ವೃದ್ಧಾಪ್ಯದ ಪ್ರತಿ ಫಲವೋ ಕಾಣೆ; ಇವರಿಗೆ ನನ್ನ ಹೆಸರು 'ರಾಜರತ್ನಂ' ಎಂಬುದು ಮರೆತು ಹೋಗಿದೆ, ತಾವೇ ನನಗೆ ತೊಡಿಸಿದ 'ಚಕ್ರವರ್ತಿ ವಜ್ರ'ವನ್ನು ಮರೆತಿದ್ದಾರೆ. ಈಚೆಗೆ ನನ್ನನ್ನು 'ರಾಮಾನುಜ'ನೆಂದು ಸಂಬೋಧಿಸತೊಡಗಿದ್ದಾರೆ. ಪಾಪ, ಇಷ್ಟು ಬೇಗ ಸೆನಿಲಿಟಿ ಬರಬಾರದಾಗಿತ್ತು.

ನಾನು ಶ್ರೀವೈಷ್ಣವ, ನಿಜ; ಶ್ರೀವೈಷ್ಣವರಲ್ಲಿ ಅನೇಕರು 'ರಾಮಾನುಜ'ಎಂದು ಹೆಸರು ಇಟ್ಟುಕೊಳ್ಳುವುದೂ ನಿಜ. ಆದರೆ,

ಹಾಗೆ ಹೆಸರಿಟ್ಟುಕೊಳ್ಳಲಿ ಇಟ್ಟುಕೊಳ್ಳದಿರಲಿ; ಶ್ರೀವೈಷ್ಣವರೆಲ್ಲರೂ 'ರಾಮಾನುಜ'ರಲ್ಲ; ಶ್ರೀವೈಷ್ಣವರೆಲ್ಲರೂ **'ಅಡಿಯೇನ್ ರಾಮಾನುಜದಾಸನ್'**. ಇದು, ಪಾಪ, ಇವರಿಗೆ ಗೊತ್ತಿಲ್ಲ. ತನ್ನ ದ್ವೈತದಲ್ಲಿಯೇ ನಂಬಿಕೆಯಿಲ್ಲದಾತನಿಗೆ ಇನ್ನೊಬ್ಬರ ಅದ್ವೈತ ವಾಗಲಿ ವಿಶಿಷ್ಟಾದ್ವೈತವಾಗಲಿ ಹೇಗೆ ಅರ್ಥವಾಗಬೇಕು?

ಅಥವಾ, ಇದು 'ಮುದ್ರಾರಾಕ್ಷಸ'ನ ದಂಡನೀತಿಯೊ? ಇದು ವಿಶಾಖ ದತ್ತನ ಮುದ್ರಾರಾಕ್ಷಸ ಅಲ್ಲ; ನಮ್ಮ ಕೈಲಾಸಂ ಅವರ 'ಪೋಲಿಕಿಟ್ಟಿ'ಗೆ ಆಲ್ಜೀಬ್ರ ಹೇಳಿಕೊಡುತಿದ್ದನಲ್ಲಾ—ಆ ಆಚಾರಿ! ತನ್ನ ಮುದ್ರೆಯ ಹಾಗೇನೆ ಕಿಟ್ಟೀಗೆ ಗುಂಡಗೆ ನಂಬರ್ ಕೊಡುತಿ ದ್ದನಲ್ಲ ಆತ! ಇವರ ಗರಿಡೀಲಿ ಸಾಮುಕಲಿತು ಬಂದಿರೋವನು ನಾನು! ನಮ್ಮ ಕಿಟ್ಟಿ ಹೇಳೋ ಹಾಗೆ 'ಎಂಥೆಂಥ ಶುಕ್ರಾಚಾರಿ ಗಳಿಗೋ ಹೆದರಲಿಲ್ವಂತೆ; ಈಗ (ಅವರೇ ಹೇಳಿಕೊಳ್ಳೋ ಹಾಗೆ) 'ಬೀರ್ ಕುಡಿದು, ಚಿಕನ್ ತಿನ್ನೋ' ಈ ಬಕರಾಚಾರೀಗೆ ಹೆದರುತೇನಾ ನಾನು!

ಹಾಸ್ಯದ ಬೆಳೆ, ಚಂದ್ರಕೀರ್ತಿ, ಹುಲುಸಾಗಿರಬೇಕು, ನಿಜ. ಆದರೆ ಅದು ಹೊಲಸು ಆಗಬಾರದು. ಹಾಸ್ಯ ಆಗಲಿ, ಯಾವುದೇ ಆಗಲಿ, ಹೇಳಿದ್ದೆಲ್ಲ 'ಹಲಸು' ಆಗಬೇಕು; ಬರೆದದ್ದೆಲ್ಲ ಬಂಗಾರ ಆಗಬೇಕು.

'ನನ್ನ ನಿರ್ಭಯಾಗ್ರಫಿ'ಯ ಮೂರನೇ ಕಂತು ಪ್ರಕಟವಾಗಿ ಇಂದಿಗೆ ಹನ್ನೊಂದು ತಿಂಗಳಾಯಿತು. ನಾಲ್ಕನೆಯದನ್ನು ಪ್ರಕಟಿಸು ವುದೇ ಬೇಡವೇ ಎಂದು ಮನಸ್ಸು ಉಯ್ಯಾಲೆಯಾಡುತ್ತಿದ್ದಾಗ— ಇದುವರೆಗೂ ಮುದುರಿಕೊಂಡಿದ್ದ ಬಾಲ ಮತ್ತೆ ಡೊಂಕಾಗಿ

ಬಿದಿರಿಕೊಂಡದ್ದು ಕಂಡುಬಂತು. ಅದು ಈ ನಾಲ್ಕನೇ ಕಂತಿನ ಪ್ರಕಟಣೆಗೆ ಪ್ರೇರಣೆಯಾಯಿತು.

ಚಂದ್ರಕೀರ್ತಿ, ಯಾವ ಮನುಷ್ಯನು ಏನು ಮಾಡಿದರೂ, ಎಂಥ ಕೆಲಸ ಮಾಡಿದರೂ, ಅದರಿಂದ ಅವನ ಮಾನಸಿಕವಾದ ಜೀವನ ವ್ಯಕ್ತವಾಗುತ್ತದೆ. ಎಂದರೆ ಪ್ರತಿಯೊಬ್ಬನ ಬರವಣಿಗೆಯೂ ಅವನವನ 'ಬಯಾಗ್ರಫಿ'ಯ ಒಂದು ಸಣ್ಣ ತುಣುಕು. ಅಶಿಕ್ಷಿತ ವಾದ ಉಚ್ಚಾರ ಆಚಾರ ವಿಚಾರ ಪ್ರಚಾರಗಳಿಂದ ಆತನ 'ಬಯಾಗ್ರಫಿ'ಯ ಆದ್ಯಕ್ಷರದ ಹೊಕ್ಕಳು ಸೀಳಿಹೋಗಿ, ಒಳಗಿನ ಕರುಳು ಹೊರಗೆ ಚೆಲ್ಲಿದರೂ ಏನೂ ಬಾಧಕವಿಲ್ಲ. ಆದರೆ ಕಂಡವರನ್ನು ಅವಹೇಳನ ಮಾಡುವ 'ಬಯ್ಯೋ-ಗ್ರಫಿ'ಆಗಬಾರದು. ಅದು ಆದಾಗ ಹಾಸ್ಯ 'ಹೊಲಸು' ಆಗುತ್ತದೆ.

ನನ್ನ **'ನಿರ್ಭಯಾಗ್ರಫಿ'**ಯ ಮೊದಲಿನ ಮೂರು ಕಂತು ಗಳಲ್ಲಿ ನನಗೆ ಗೊತ್ತಿರುವ ಹಾಸ್ಯದ ಪಟ್ಟುಗಳನ್ನೆಲ್ಲ ಪ್ರಯೋಗಿಸಿ ದ್ದೇನೆ. ಈ ಪಟ್ಟುಗಳಿಗೆ ಅನುರೂಪವಾದ ಪಟ್ಟುಗಳು ಏನಾದರೂ ಇವರಿಂದ ಪ್ರಯೋಗವಾಗುತ್ತದೋ ಎಂದು ನಿರೀಕ್ಷಿಸಿದ್ದೇನೆ ಅದರ ಬದಲು ಬೈಗುಳ ಮಳೆಯ ಜಡಿ ಜೋರಾಗಿದೆ. ಆದ್ದರಿಂದ ನಾನು (ಮೊದಲನೇ ಕಂತಿನ ಪುಟ ೨೧) 'ಹಂದಿಗೆ ಸೋತ ಹುಲಿ'ಯಂತೆ ಈ ವಿವಾದಭೂಮಿಯಿಂದ ಹಿಂದೆಗೆಯುತ್ತಿದ್ದೇನೆ.

'ದಿನಾ ಸಾಯೋವರಿಗೆ ಅಳೋವರು ಯಾರು?' ಅಂತ ಗಾದೆ ಇದ್ದ ಹಾಗೆ, ಇನ್ನು ಎಷ್ಟು ಹೇಳಿದರೂ ಅಷ್ಟೇ. ಆದ್ದರಿಂದ ಇತ್ಯಲಂ.

"ಚೋರ ನಿಂದಿಸಿ ಶಶಿಯ ಬೈದೆಡೆ,
ಕ್ಷೀರವನು ಕ್ಷಯರೋಗಿ ಹಳಿದರೆ,
ವಾರಣಾಸಿಯ ಹೆಳವ ನಿಂದಿಸಿ ನಕ್ಕರೇನಹುದು?"

ಎಂದ ನಮ್ಮ ನಾರಣಪ್ಪನ ಮಾತನ್ನು ಜ್ಞಾಪಿಸಿಕೊಂಡು, ಈ ಕಂತನ್ನು ಇಲ್ಲಿಗೆ ನಿಲ್ಲಿಸುತ್ತೇನೆ.

ರತ್ನನ ಪದಗಳಲ್ಲಿ ನಾನು ಹೇಳಿದ ಹಾಗೆ—

ಅರ್ತ ಮಾಡ್ಕಂಡ್ ಇಂಗಲ್ ಇಂಗೆ
ಅನ್ನೋರ್ ಮಾತು ಗಂಗೆ!
ಅರ್ತ್ ಆಗ್ದಿದ್ರು ಸಿಕ್ಕಂಗ್ ಅನ್ನಾದ್
ಚಂದ್ರನ್ ಮುಕ್ ಉಗದಂಗೆ !

—ರಾಜರತ್ನಂ

◆ ನನ್ನ ವೃತ್ತಿಸ್ವಾರಸ್ಯ ◆

'ಎಲ್ಲರೂ ಮಾಡುವುದು—ಹೊಟ್ಟೆಗಾಗಿ, ಗೇಣು ಬಟ್ಟೆಗಾಗಿ, ತುತ್ತುರೊಟ್ಟಿಗಾಗಿ. ಇದರಲ್ಲಿ ತಪ್ಪೇನೂ ಇಲ್ಲ. ತನ್ನ, ತನ್ನವರ ಹೊಟ್ಟೆ ಬಟ್ಟೆಗಳಿಗಾಗಿ ಯಾವ ಅನಿಂದಿತವಾದ ಕಾರ್ಯವನ್ನು ಮಾಡುತ್ತಾನೋ ಅದು ಅವನ ವೃತ್ತಿಯೆನ್ನಿಸಿಕೊಳ್ಳುತ್ತದೆ. ಆದರೆ, ಹೊಟ್ಟೆಬಟ್ಟೆಗಳಷ್ಟೇ ಮನುಷ್ಯನ ಪರಮಗುರಿಯಾಗಲಿ ಚರಮಗುರಿಯಾಗಲಿ ಅಲ್ಲ. ಅವನವನ ವೃತ್ತಿಯಲ್ಲಿ ಅವನಿಗೆ 'ರಸ' ಕಂಡುಬಂದಾಗಲೇ ಅವನ ಬದುಕಿನಲ್ಲಿ ಸ್ವಾರಸ್ಯ ತುಂಬಿ ಬರುವುದು. ಈ ರಸ ಪ್ರಾಪ್ತಿಯಾಗಬೇಕಾದರೆ, ಅವರವರ ಪ್ರವೃತ್ತಿಗಳಿಗೆ ಹೊಂದಿಕೊಳ್ಳುವ ವೃತ್ತಿ ಒದಗಿಬರಬೇಕು.

ಉದಾಹರಣೆಗೆ—ಬದುಕಿನಲ್ಲಿ ನನಗೆ ಅವಲಂಬನವಾಗಿ ಒದಗಿಬಂದ ವೃತ್ತಿ: ವಿದ್ಯಾರ್ಥಿಗಳಿಗೆ ಪಾಠ ಹೇಳುವುದು. ಇದು ನನಗೆ ವಂಶಪಾರಂಪರ್ಯವಾಗಿ ಬಂದ ಪ್ರವೃತ್ತಿಯೂ ಆಗಿದ್ದರಿಂದ ನನಗೆ ಈ ವೃತ್ತಿಯಲ್ಲಿ ಯಾವಾಗಲೂ ಸ್ವಾರಸ್ಯ ಕಡಮೆಯಾದದ್ದೇ ಇಲ್ಲ.

ನನ್ನ ಪೂರ್ವಿಕರು ಪ್ರವೃತ್ತಿಯಿಂದಲೂ ವೃತ್ತಿಯಿಂದಲೂ ವೈದಿಕರು, ಸದಾ ಅಧ್ಯಯನದಲ್ಲೂ ಅಧ್ಯಾಪನದಲ್ಲೂ ನಿರತರಾಗಿ ರಮಿಸುತ್ತಿದ್ದವರು ಎಂದು ಕೇಳಿದ್ದೆ. ನಾನು ಹುಟ್ಟಿ ಬೆಳೆಯುವ ಕಾಲಕ್ಕೆ ನನ್ನ ದೊಡ್ಡಪ್ಪ, ನನ್ನ ತಂದೆ, ನನ್ನ ಅಣ್ಣ ಮೂವರೂ

ಮಿಡ್ಲ್‌ಸ್ಕೂಲ್ ಮೇಷ್ಟರು. 'ಧೂಮೇನ ಅವ್ರಿಯತೇ ವಹ್ನಿಃ, ಉಲ್ಬೇನ ಆವೃತೋ ಗರ್ಭಃ' ಎನ್ನುವ ಹಾಗೆ ಮೇಷ್ಟರ ಕೆಲಸಕ್ಕೂ ಬಡತನಕ್ಕೂ ಲಾಗಾಯಿತಿಂದ ಗಂಟು. ಇಷ್ಟಾದರೂ 'ಅಯ್ಯೋ, ಈ ಮೇಷ್ಟರ ಕೆಲಸಕ್ಕೆ ನಾನು ಯಾಕೆ ಬಂದೆ!' ಎಂದು ಒಂದು ದಿವಸವಾದರೂ ಅವರ ಬಾಯಲ್ಲಿ ಒಂದು ಮಾತು ಬಂದದ್ದನ್ನು ನಾನು ಕೇಳಲಿಲ್ಲ.

'ಮಾನವಾಗಿ ತಾನು ಬದುಕಿ, ಹೀನ ಬಡತನವೇನೆ ಇರಲಿ, ಸ್ವಾರಸ್ವಾರ್ಥನೆಯಿಂದ ಬದುಕಬೇಕು' ಎಂಬ ಈ ಗೃಹಾವರಣ ದಲ್ಲಿ ಬೆಳೆದ ನನಗಾದರೂ—'ನನ್ನ ಹಿರಿಯರ ಹಾಗೆಯೇ ನಾನೂ ಮೇಷ್ಟರು ಆಗಬೇಕು.

ಸಾಧ್ಯವಾದರೆ, ಅವರಿಗಿಂತ ಒಂದು ಮೆಟ್ಟಿಲಾದರೂ ಮೇಲಾಗಬೇಕು. ಅವರು ಮೂವರು ಡಿಗ್ರಿ ಪಡೆದವರಲ್ಲ. ನಾನು ಡಿಗ್ರಿ ಪಡೆಯಬೇಕು. ಅವರು ಮಿಡ್ಲ್‌ಸ್ಕೂಲ್ ಮೇಷ್ಟರಾದರು. ನಾನು ಕಡೇಪಕ್ಷ ಹೈಸ್ಕೂಲ್ ಮೇಷ್ಟರಾದರೂ ಆಗಬೇಕು. ಇದಿಷ್ಟೇ ನನ್ನ ಆ್ಯಂಬಿಷನ್(ambition) ಆಗಿತ್ತು.

ದೇವರ ಕೃಪೆಯಿಂದ ಹಿರಿಯರ ಹರಕೆಯಿಂದ, ಮನೆಯವರು ಒದಗಿಸಿದ ಅನುಕೂಲಗಳಿಂದ ಡಿಗ್ರಿ ಪಡೆದದ್ದಾಯಿತು. ಎಂ.ಎ. ಅನ್ನಿಸಿಕೊಂಡದ್ದೂ ಆಯಿತು.

ಆದರೆ, ಡಿಗ್ರಿ ದೊರಕಿದಷ್ಟು ಸುಲಭವಾಗಿ ನನಗೆ ಮೇಷ್ಟರ ಕೆಲಸ ದೊರಕಲಿಲ್ಲ. ಡಿಗ್ರಿ ಪಡೆದು ಏಳು ವರ್ಷಗಳಾದ ಮೇಲೆ, ಅಲೆದು ಅಲೆದು ಅತ್ತಿಯ ಕಾಯಾಗಿ, ಮೇಷ್ಟರಾಗುವ ಆಸೆ ಇಂಗಿಹೋಗುತ್ತಿರುವಾಗ, ನಾನು ಬಯಸಿದ್ದ ಮಿಡಲ್‌ಸ್ಕೂಲಿ

ನಲ್ಲಾಗಲಿ ಹೈಸ್ಕೂಲಿನಲ್ಲಾಗಲಿ ಮೇಷ್ಟರಾಗುವ ಬದಲು-ಮೈಸೂರು ವಿಶ್ವವಿದ್ಯಾನಿಲಯದ ಒಂದು ಇಂಟರ್‌ಮೀಡಿಯಟ್ ಕಾಲೇಜಿನಲ್ಲಿ ನನಗೆ ಮೇಷ್ಟ್ರು ಕೆಲಸ ದೊರಕಿತು.

ನಾನು ಹುಡುಕಿಕೊಂಡು ಹೋದಾಗ ನನ್ನ ಕೈಗೆ ಎಟುಕದೆ ಓಡಿಹೋದ ಮೇಷ್ಟ್ರು ಕೆಲಸ, ಏಳು ವರ್ಷ ನನ್ನೊಡನೆ ಕಣ್ಣು ಮುಚ್ಚಾಲೆ ಆಡಿ ಕೊನೆಗೆ ನನ್ನನ್ನು ಬೆನ್ನಟ್ಟಿ ಬಂದು, ಹಿಡಿದು ಕೊಂಡುಬಿಟ್ಟಿತು.

ಇದು ಹೇಗಾಯಿತು ಎನ್ನುವುದೇ ಒಂದು ಸ್ವಾರಸ್ಯವಾದ ಕತೆ.

ಶ್ರೀ ಎನ್. ಎಸ್. ಸುಬ್ಬರಾಯರು

1930ರಲ್ಲಿ ನಾನು ಕನ್ನಡ ಎಂ.ಎ.ಗೆ ಸೇರುವ ವೇಳೆಗೆ ಕೆಲವು ಪದ್ಯಗಳನ್ನೂ ಕತೆಗಳನ್ನೂ ಕಿರುರೂಪಕಗಳನ್ನೂ ಬರೆದು, ಆ ಕಾಲದ ಹಿರಿಯ ಸಾಹಿತ್ಯರಸಿಕರ ಪ್ರೀತಿಗೆ ಪಾತ್ರನಾಗಿದ್ದೆ. 31ರಲ್ಲಿ ನಾನು ಎಂ.ಎ. ಡಿಗ್ರಿ ತೆಗೆದುಕೊಂಡ ತರುಣದಲ್ಲಿಯೇ ನನ್ನ ಕೃತಿಗಳು ಪುಸ್ತಕರೂಪವಾಗಿಯೂ ಹೊರಬಂದವು. 'ನನ್ನನ್ನು ಪ್ರೀತಿಸುವವರು ಇಷ್ಟು ಜನ ಇರುವಾಗ, ನಾನೂ ಇಷ್ಟೊಂದು ಬರೆದಿರುವಾಗ, ನನಗೆ ಒಂದು ಮೇಷ್ಟರ ಕೆಲಸವನ್ನು ಯಾರಾದರೂ ಕೊಡಿಸಿಯಾರು' ಎಂದು ತುಂಬಾ ನನಗೆ ಭರವಸೆಯಿತ್ತು.

ಆ ಕಾಲಕ್ಕೆ ಶ್ರೀಮಾನ್ ಎನ್. ಎಸ್. ಸುಬ್ಬರಾಯರು ಮೈಸೂರು ಸಂಸ್ಥಾನದ ಡಿ.ಪಿ.ಐ; ಎಂದರೆ ಎಲ್ಲಾ ಶಾಲೆಗಳೂ ಇವರ ಕೈಯೊಳಗೇ. ಇವರು ಆಗಾಗ್ಗೆ ನನ್ನನ್ನು ಕರೆಸಿಕೊಂಡು ನನ್ನ

ರತ್ನನ ಪದಗಳನ್ನು ಓದಿಸಿ, ಪುಷ್ಕಳವಾಗಿ ತಿಂಡಿ ತೀರ್ಥಗಳನ್ನು ತುಂಬಿ ಕಳಿಸುತ್ತಿದ್ದರು. ನನ್ನ ಮೇಲೆ ಅವರ ಪ್ರೀತಿ ಎಷ್ಟಿದೆ ಎಂಬುದು ಖಚಿತವಾದ ಮೇಲೆ ಒಂದು ದಿನ ನಾನು ಅವರನ್ನು ಕೇಳಿದೆ: 'ಸಾರ್, ಯಾವುದಾದರೂ ಹೈಸ್ಕೂಲಲ್ಲಿ ನನಗೂ ಒಂದು ಮೇಷ್ಟರ ಕೆಲಸ ಕೊಡಿಸೋಕಾಗುತ್ತಾ?' ಅಂತ.

ಅದಕ್ಕೆ ಅವರು ಹೇಳಿದರು—'ಅದಕ್ಕೇನು ಕೊಡಿಸಬಹುದು. ಆದರೆ ಹೈಸ್ಕೂಲಲ್ಲಿ 40 ರೂಪಾಯಿಗಿಂತ ಹೆಚ್ಚಿಗೆ ಸಂಬಳ ಎತ್ತಿಕೋತ ಯಾರೂ ಕೊಡೋಕ್ಕಾಗೊಲ್ಲ. ಅದೂ ಅಲ್ಲದೆ, ವಾರಕ್ಕೆ ೨೫ ಪೀರಿಯಡ್ ಪಾಠ, ನೋಟ್ಸ್ ಆಫ್‌ಲೆಸನ್ಸ್, ಕಾಂಪೊಸಿಷನ್ ಕರೆಕ್ಷನ್; ಇದೆಲ್ಲಾ ಮಾಡೋ ಮಧ್ಯೆ ನಿನ್ನ ಕ್ರಿಯೇಟಿವ್ ರೈಟಿಂಗ್ ಮೂಲೆಗೆ ಬಿದ್ದುಹೋಗುತ್ತೆ. ಸ್ವಲ್ಪ ಹೇಗೋ ಹಲ್ಲು ಕಚ್ಚಿಕೊಂಡಿದ್ದರೆ, ನಿನ್ನಂಥವನಿಗೆ ಯೂನಿವರ್ಸಿಟಿಲಿ ಮೇಷ್ಟರ ಕೆಲಸ ಸಿಕ್ಕೋದು ಏನೂ ಕಷ್ಟವಾಗಬಾರದು' ಅಂದರು.

ಆಹೊತ್ತು ಅವರು ಆಡಿದ ಮಾತಿನ ಫಲವೋ ಎನ್ನುವ ಹಾಗೆ. ನಾಲ್ಕು ವರ್ಷ ಕಳೆದ ಮೇಲೆ, ಅದೇ ಸುಬ್ಬರಾಯರೇ ಮೈಸೂರು ವಿಶ್ವವಿದ್ಯಾನಿಲಯದ ವೈಸ್ ಛಾನ್ಸಲರ್ ಆದರು. ಆ ಕಾಲದಲ್ಲಿ ಅದೇ ವಿಶ್ವವಿದ್ಯಾನಿಲಯದಲ್ಲಿ ನನಗೂ 'ಪಂಡಿತ'ನೆಂಬ ಅಭಿಧಾನದ ಮರೆಯಲ್ಲಿ ಒಂದು ಮೇಷ್ಟರ ಕೆಲಸ ದೊರಕಿತು.

ಆದರೆ ಈ ಪ್ರಸಂಗದೊಳಗಿನ ಸ್ವಾರಸ್ಯವೇನೆಂದರೆ—'ನೀನು ಹೈಸ್ಕೂಲ್ ಮೇಷ್ಟರಾದರೆ ನಿನಗೆ 40ಕ್ಕಿಂತ ಹೆಚ್ಚಿಗೆ ಸಂಬಳ ಕೊಡುವುದಕ್ಕಾಗುವುದಿಲ್ಲವಲ್ಲಾ ಎಂದು ವಿಷಾದಿಸಿದ್ದ ಡಿ.ಪಿ.ಐ.

ಸುಬ್ಬರಾಯರು ಈಗ ವಿ. ಸಿ. ಆಗಿರುವಾಗ 40ಕ್ಕಿಂತ ಹೆಚ್ಚಿಗೆ ಕೊಡುವುದಾಗಲಿಲ್ಲ. ಕಾರಣ: ನನಗೆ ದೊರಕಿದ ಹುದ್ದೆಯ ಸಂಬಳ ಅಷ್ಟೇ ಇತ್ತು.

ಪ್ರೊಫೆಸರ್ ವೆಂಕಣ್ಣಯ್ಯನವರು

ಸಂಬಳ ಎಷ್ಟಾದರೇನಂತೆ. ಅಂತೂ ಮೇಷ್ಟರಾದೆನೋ! ಅವಸರ ಪಟ್ಟು ಹೈಸ್ಕೂಲ್ ಮೇಷ್ಟರು ಆಗುವುದರ ಬದಲು, ನಿಧಾನವಾಗಿಯಾದರು ಕಾಲೇಜಿನಲ್ಲಿ 'ಪಂಡಿತ'ನಾದದ್ದು ನನ್ನ ಪುಣ್ಯ!

ಕೆಲಸಕ್ಕೆ ರಿಪೋರ್ಟ್ ಮಾಡಿಕೊಳ್ಳುವುದಕ್ಕೆ ಹಿಂದಿನ ದಿವಸ ನಮ್ಮ ಕನ್ನಡ ಇಲಾಖೆಯ ಮುಖ್ಯಸ್ಥರಾದ ಪ್ರೊಫೆಸರ್ ವೆಂಕಣ್ಣಯ್ಯನವರನ್ನು ಕಂಡೆ. ಕುಶಲಪ್ರಶ್ನೆಗಳಾದ ಮೇಲೆ ಅವರು ಹೇಳಿದರು: 'ನಾಳೆ ನಿನಗೆ ಒಂದೇ ಪೀರಿಯಡ್ ಕೆಲಸ ಹಾಕಿದೀನಿ. 11ರಿಂದ 12 ನನ್ನ ಕ್ಲಾಸು. ಅದನ್ನು ನೀನೇ ತೆಕೊ. ಸ್ವಪ್ನವಾಸವ ದತ್ತಾ ಪಾಠ ಹೇಳಬೇಕು. ಅದನ್ನು ನೀನು ಓದಿದೀಯ ತಾನೆ?'

ನಾನು ಸ್ವಪ್ನವಾಸವದತ್ತ ಓದಿರಲಿಲ್ಲ. ಪ್ರತಿಮಾ ನಾಟಕ ಓದಿದ್ದೆ. ಹತ್ತು ವರುಷದ ಹಿಂದೆ ಸೆಂಟ್ರಲ್ ಕಾಲೇಜಿನಲ್ಲಿ ವೆಂಕಣಯ್ಯನವರು ಅದನ್ನ ನಮಗೆ ಪಾಠ ಹೇಳಿದ್ದರು. ಅದರ ಮುಂದಿನ ವರ್ಷ, ಅವರ ಸ್ಥಾನಕ್ಕೆ ಬಂದ ಶ್ರೀ ಎಂ. ಆರ್. ಕೃಷ್ಣಶಾಸ್ತ್ರಿಗಳು ಅದನ್ನೇ ರಿವೈಸ್ ಮಾಡಿದ್ದರು.

ಇದನ್ನ ವೆಂಕಣ್ಣಯ್ಯನವರಿಗೆ ಹೇಳಿದೆ. ಕೇಳಿ ಮೃದುವಾಗಿ ನಕ್ಕರು. ಸ್ವಪ್ನವಾಸವದತ್ತದ ಕತೆ ಹೇಳಿದರು. ಪ್ರತಿಜ್ಞಾಯೌ

ಗಂಧರಾಯಣದ ಕಥೆ ಹೇಳಿದರು. 'ಇಲ್ಲಿಯವರೆಗೆ ನಾನು ಪಾಠ ಮಾಡಿದೀನಿ' ಎಂದು ಮೊದಲಿನ ಕೆಲವು ಪುಟಗಳನ್ನು ವಿವರಿಸಿದರು. ಮಾರನೆಯ ದಿನ ನಾನು ಏನು ಮಾಡಬೇಕೋ ಅದನ್ನು ಓದಿ, ಅರ್ಥ ಹೇಳಿ, ನನಗೆ ಪಾಠ ಹೇಳಿದರು. 'ಏನೂ ಹೆದರಿಕೋಬೇಡ. ಈಗ ಹೇಳಿದ್ದನ್ನೆಲ್ಲಾ ಮನೇಲಿ ಚೆನ್ನಾಗಿ ನೋಡಿಕೊ. ನಾಳೆ ಕ್ಲಾಸಿಗೆ ಹೋಗೋಕೆ ಮುಂಚೆ ನನ್ನ ರೂಮಿಗೆ ಬಾ. ನಾನೇ ನಿನ್ನ ಕರಕೊಂಡು ಹೋಗಿ ಕ್ಲಾಸ್‌ಗೆ ಇಂಟ್ರಡ್ಯೂಸ್ ಮಾಡ್ತೀನಿ' ಅಂದರು. ಪಾಠ ಹೇಳುವುದಕ್ಕೆ ಮುಂಚೆ ತಾವು ಇಟ್ಟು ಕೊಂಡಿದ್ದ ಸ್ವಪ್ನವಾಸವದತ್ತದ ಪ್ರತಿಯನ್ನು ನನ್ನ ಕೈಯಲ್ಲಿಟ್ಟು' 'ಇದನ್ನ ನೀನೇ ಇಟ್ಟುಕೋ' ಅಂದರು.

ಮಾರನೇ ಬೆಳಿಗ್ಗೆ ಅವರ ರೂಮಿಗೆ ಹೋದೆ. ನನ್ನನ್ನು ಜೊತೆಯಲ್ಲಿ ಕರೆದುಕೊಂಡು ಕ್ಲಾಸಿಗೆ ಹೊರಟರು. ನಮ್ಮಿಬ್ಬರನ್ನೂ ಒಟ್ಟಿಗೆ ನೋಡಿದವರು The long and short of it ಎನ್ನಬಹುದಾಗಿತ್ತು. ಅವರ ಎತ್ತರ, ನನ್ನ ಗಿಡ್ಡ ಹಾಗಿತ್ತು.

ತರಗತಿಯಲ್ಲಿ ಒಂದು ವೇದಿಕೆ; ಅದರ ಮೇಲೆ ಒಂದು ಮೇಜು, ಕುರ್ಚಿ. ವೆಂಕಣ್ಣಯ್ಯನವರ ಆಜ್ಞೆಯಂತೆ ವೇದಿಕೆಯ ಮೇಲೇರಿದೆ. ಅವರ ಅಪ್ಪಣೆಯಂತೆ ಕುರ್ಚಿಯಲ್ಲಿ ಕುಳಿತೆ. ವೆಂಕಣ್ಣಯ್ಯನವರು ವೇದಿಕೆಯ ಕೆಳಗೆ ನೆಲದ ಮೇಲೆ ನಿಂತಿದ್ದರು. ನೆಲದ ಮೇಲೆ ನಿಂತಿದ್ದ ವೆಂಕಣ್ಣಯ್ಯನವರ ಜರಿರುಮಾಲು ಯಾವ ಎತ್ತರದಲ್ಲಿತ್ತೋ ಅದೇ ಎತ್ತರದಲ್ಲಿ ವೇದಿಕೆಯ ಮೇಲಿನ ಕುರ್ಚಿಯಲ್ಲಿ ಕುಳಿತಿದ್ದ ನನ್ನ ಕ್ರಾಪುತಲೆಯೂ ಇತ್ತು-ಎಂಬುದು ಯಾರಿಗಾದರೂ ಸ್ಪಷ್ಟವಾಗಿ ಕಾಣುವಂತಿತ್ತು.

ವೆಂಕಣ್ಣಯ್ಯನವರು ನನ್ನನ್ನು ತರಗತಿಗೆ ಇಂಟ್ರೊಡ್ಯೂಸ್ ಮಾಡಿದರು. ನನ್ನ ಗಂಡುಗೊಡಲಿ, ತುತ್ತೂರಿ, ಯೆಂಡ್ಕುಡ್ಕ ರತ್ನ ಗಳನ್ನು ಕುರಿತು ಎರಡೆರಡು ಮಾತನ್ನಾಡಿದರು. 'ಈ ವರ್ಷ ಇಂಟರ್‌ಮೀಡಿಯೆಟ್‌ನವರು ನೀವು ಪಠ್ಯವಾಗಿ ಓದಬೇಕಾಗಿರುವ ಚೀನಾದೇಶದ ಬೌದ್ಧ ಯಾತ್ರಿಕರನ್ನು ಬರೆದವರು ಇವರೇ. ನಾನು ಮಾಡುತ್ತಿದ್ದ ಸ್ವಪ್ನವಾಸವದತ್ತವನ್ನು ಇವರು ಮಾಡುತ್ತಾರೆ'. ಎಂದು ಹೇಳಿ ತರಗತಿಯಲ್ಲಿ ನನ್ನನ್ನು ಬಿಟ್ಟು ಹೋದರು.

ಚೆನ್ನಾಗಿ ಬರೆದದ್ದನ್ನು ಚೆನ್ನಾಗಿ ಓದಿತೋರಿಸುವುದು ನನಗೆ ಚಿಕ್ಕಂದಿನಿಂದಲೂ ರೂಢಿ. ಮೈಸೂರಿನಲ್ಲಿ ವರದಾಚಾರ್ಯರ ಕಂಪನಿಯ ನಾಟಕಗಳನ್ನು ನೋಡಿ, ಅನುಕರಿಸಿ, ಆಡಿ ಬೆಳೆದವನು ನಾನು. ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲೂ ಮೈಸೂರಿನ ಮಹಾರಾಜಾ ಕಾಲೇಜಿನಲ್ಲೂ ಆಡುತ್ತಿದ್ದ ನಾಟಕಗಳಲ್ಲಿ ಪಾತ್ರ ವಹಿಸಿ ಅಭ್ಯಾಸವಾಗಿತ್ತು. ಜೊತೆಗೆ ಕಾವ್ಯವಾಚನ ಸ್ಪರ್ಧೆಗಳಿಗಂತೂ ಮೊದಲಿಲ್ಲ, ಕೊನೆಯಿಲ್ಲ. ಈ ರೀತಿಯಾಗಿ ತಯಾರಾಗಿದ್ದ ನನಗೆ, ಹಿಂದಿನ ದಿವಸ ವೆಂಕಣ್ಣಯ್ಯನವರು ಹೇಳಿಕೊಟ್ಟಿದ್ದ ಪಟ್ಟು ವರಿಸೆಗಳೂ ಸೇರಿಕೊಂಡು, ಪಂಪ ಹೇಳಿದ ಹಾಗೆ 'ಬಲ್ಲಿತ್ತರ ಕೋಡು ಕೂರಿತ್ತು'

ಗಿಳಿಯನ್ನು 'ಪಂಡಿತವಕ್ಕಿ' ಎನ್ನುತ್ತಾರೆ. ಅವುಗಳಲ್ಲಿ 'ಅರಗಿಳಿ' ಎಂಬುದು ಒಂದು ಉತ್ತಮಜಾತಿ. ಆ ದಿನ ನಾನೂ ಒಂದು ಅರಗಿಳಿಯಾಗಿ, ಗುರುಮುಖದಿಂದ ಏನೇನು ಪಾಠಗಳನ್ನು ಹಿಂದಿನ ದಿವಸ ಹೇಳಿಸಿಕೊಂಡಿದ್ದನೋ ಅದನ್ನು ಚಾಚು ತಪ್ಪಿಲ್ಲದ ಹಾಗೆ, ಇದು ನನ್ನ ಸ್ವಂತ ಮಾತೇ ಎಂದು ಭ್ರಮೆ ಬರುವ ಹಾಗೆ

ಒಂದು ಗಂಟೆ ಪಾಠ ಹೇಳಿದೆ.

ಗಂಟೆಯಾದ ಮೇಲೆ ಬೆಲ್ ಹೊಡೆಯಿತು. 'ಸ್ವಪ್ನ' ಮುಗಿಯಿತು. 'ಇದು ಕಾಲೇಜಿನ ಗಂಟೆಯಲ್ಲ. ಇದು ನನ್ನ ಜಯಭೇರಿ!' ಎಂದುಕೊಂಡೆ. ಏಕೆಂದರೆ ನಾನು 'ಮೇಷ್ಟರು ' ಎಂಬುದನ್ನು ಆ ಮೊದಲನೇ ತರಗತಿಯ ವಿದ್ಯಾರ್ಥಿಗಳು ತಮ್ಮ ವರ್ತನೆಯಿಂದ ಒಪ್ಪಿಕೊಂಡಿದ್ದರು.

ವೃತ್ತಿಯಲ್ಲದ ಪ್ರವೃತ್ತಿ

ಇದು ಆಗಿ ಸುಮಾರು 37 ವರ್ಷ ಆಗಿದೆ. ನಾನು ಮೇಷ್ಟರ ಕೆಲಸದಿಂದ 'ನಿವೃತ್ತ'ನಾಗಿ 12 ವರ್ಷ ಆಗಿರುವುದಾದರೂ ನಾನು ಇನ್ನೂ ಅದರಲ್ಲೇ 'ಪ್ರವೃತ್ತ'ನಾಗಿದ್ದೇನೆ. ಆದರೆ ಈಗ ಮೇಷ್ಟರ ಕೆಲಸ ನನಗೆ 'ವೃತ್ತಿ'ಯಲ್ಲ; ನನ್ನ ಹೊಟ್ಟೆಗಾಗಿ, ಬಟ್ಟೆಗಾಗಿ ನಾನು ಅದನ್ನು ಆಶ್ರಯಿಸಿಲ್ಲ. ಕೇವಲ 'ಖುಷಿ'ಗಾಗಿ ಮೇಷ್ಟರ ಕೆಲಸ ಮಾಡುತ್ತಿದ್ದೇನೆ. ಏಕೆಂದರೆ-ನಾನು 'ಸ್ವಾರಸ್ಯ' ಕಂಡಿರುವುದು ಇದರಲ್ಲಿಯೇ.

'ತವ ಅಮೃತಸ್ಯಂದಿನಿ ಪಾದಪಂಕಜೇ ನಿವೇಶಿತಾತ್ಮಾ ಕಥಂ ಅನ್ಯದಿಚ್ಛತಿ?'(ಭಗವಂತನೇ, ಅಮೃತವನ್ನು ಸ್ರವಿಸುತ್ತಿರುವ ನಿನ್ನ ಪಾದಕಮಲಗಳಲ್ಲಿ ಬಂದು ಮನೆಮಾಡಿಕೊಂಡಿರುವವನು ಬೇರೆ ಯಾವುದಕ್ಕಾದರೂ ಏಕೆ ಆಸೆ ಪಡುತ್ತಾನೆ?) ಎಂದು ನನ್ನ ಸಂಪ್ರದಾಯದ ಆಚಾರ್ಯರು ಹಾಡಿದ್ದಾರೆ. ನನ್ನ ಪ್ರವೃತ್ತಿ ಯಾದರೂ ಅವರ ಸಂಪ್ರದಾಯದಿಂದ ಪರಿಷ್ಕೃತವಾದದ್ದು.

ನನ್ನ ಪಾಲಿಗೆ ಹಲವು ಸ್ವಾರಸ್ಯಗಳನ್ನು ಒದಗಿಸಿಕೊಟ್ಟಿರುವ

ಮೇಷ್ಟರ ಕೆಲಸವು ಆರಂಭದಲ್ಲಿ 'ವೃತ್ತಿ'ಯಾಗಿ ತೊಡಗಿತಾದರೂ ಈಗ ಅದು—ಪಂಪನ ಮಾತಿನಲ್ಲಿ ಹೇಳುವುದಾದರೆ—ನನಗೆ 'ಸಂಸಾರಸಾರಸರ್ವಸ್ವಫಲಂ!' ಆಗಿ ನನ್ನ ಬದುಕನ್ನು ಸಾರ್ಥಕಗೊಳಿಸುತ್ತಿದೆ.

'ಪ್ರಜಾವಾಣಿ' ಪತ್ರಿಕೆಯ 'ದೀಪಾವಳಿ ಸಂಚಿಕೆ'ಯಲ್ಲಿ
ಇದು ಮೊದಲು ಪ್ರಕಟವಾಯಿತು.

◆ ಶ್ರೀ ರಾಜರತ್ನಂ ಅವರ "ಅಂತರ್ದರ್ಶನ" ◆

ರಾಜರತ್ನಂ ಅವರೆ, ನಾನು ಒಬ್ಬ ವರದಿಗಾರ. ದೀಪಾವಳಿ ವಿಶೇಷಾಂಕಕ್ಕಾಗಿ ನಿಮ್ಮನ್ನ ಒಂದೆರಡು ಪ್ರಶ್ನೆ ಕೇಳಬಹುದಾ?

ಕೇಳ್ರಿ, ಅದಕ್ಕೇನು. ಆದರೆ— ೧. ಇನ್ನೊಬ್ಬರ ವಿಷಯವಾಗಿ ನನ್ನ ಅಭಿಪ್ರಾಯ ಏನು ಅಂತ ಕೇಳಬೇಡಿ; ೨. ಲೋಕಾಭಿರಾಮದ ಪ್ರಶ್ನೆಗಳಲ್ಲಿ ಹೊತ್ತು ಕಳೀಬೇಡಿ; ೩. ಆದಷ್ಟು ಮಟ್ಟಿಗೆ ನನ್ನ ವೈಯುಕ್ತಿಕ ವಿಷಯಗಳು ಪತ್ರಿಕೆಗಳಲ್ಲಿ ಬರೋದು ಬೇಡ.

ಮತ್ತೆ. ಅದು ಬಿಟ್ಟು ಇನ್ನೇನು ಕೇಳಬೇಕ್ರಿ?

ಯಾಕಪ್ಪಾ? ನೀವು ನನ್ನ ಹತ್ತಿರ ಯಾಕೆ ಬಂದಿದೀರಿ? ನಾನು ಒಂದು ನಾಲ್ಕಾರು ಪುಸ್ತಕ ಬರೆದಿದೀನಿ, ನೀವು ಅದನ್ನು ಓದಿದೀರಿ. ಅಷ್ಟಲ್ಲದೆ, ನನಗೇನು ಅಧಿಕಾರಾನಾ? ಅಂತಸ್ತಾ? ನನ್ನ ಬರವಣಿಗೇನ ಕುರಿತು ಬೇಕಾದ್ದು ಕೇಳಿ, ಹೇಳುತ್ತೇನೆ.

ಅದೂ ಭಲೋನೇ ಆತು. ಅದಕ್ಕೆ ಮೊದಲು ಒಂದೇ ಒಂದು ಪ್ರಶ್ನೆ. ಬರೇ ಕುತೂಹಲಕ್ಕೆ ಕೇಳುತಿದೀನಿ. ಕೇಳಬಹುದೋ?

ನೀವು ಕೇಳೋದಕ್ಕೆ ನನ್ನದೇನೂ ಅಭ್ಯಂತರವಿಲ್ಲ. ಉತ್ತರ ಕೊಡಬಹುದಾದರೆ, ಹೇಳುತ್ತೇನೆ.

ಮೊನ್ನೆ ಡಿವಿಜಿ ತೀರಿಕೊಂಡಾಗ ಪತ್ರಿಕೆಯವರು ನಿಮ್ಮನ್ನ ಸಂದೇಶ ಕೇಳಿದರಂತೆ. ಅದಕ್ಕೆ ನೀವು 'ನಾನು ಮನೆಯ ಮಗ.

ನಾನು ಈ ಹೊತ್ತಿನಲ್ಲಿ ಏನು ಹೇಳಲಿ?' ಅಂದಿರಂತೆ. ಅದು ಯಾಕೆ ಹಾಗೆ ಹೇಳಿದಿರಿ?

ಅದಾ? ಗುಂಡಪ್ಪನವರು ತಮ್ಮ ತಮ್ಮನನ್ನು, ತಮ್ಮ ಮಗನನ್ನು ಯಾವ ಪ್ರೀತಿ ವಿಶ್ವಾಸಗಳಿಂದ ಕಾಣುತಾ ಇದ್ದರೋ ನನ್ನನ್ನೂ ಅದೇ ಪ್ರೀತಿ ವಿಶ್ವಾಸಗಳಿಂದ ಕಾಣುತಾ ಇದ್ದರು. ಅದಕ್ಕೇ ಹಾಗೆ ಹೇಳಿದೆ.

ನಿಮಗೂ ಗುಂಡಪ್ಪನವರಿಗೂ ಎಷ್ಟು ವರುಷಗಳ ಪರಿಚಯ?

ಸುಮಾರು 40-50 ವರ್ಷಗಳಿಂದ ಅವರ ವಾತ್ಸಲ್ಯದಲ್ಲಿ ನಾನು ಬೆಳೆದಿದೇನೆ?'

ಅಂದರೆ, ನಿಮ್ಮ ಮೇಲೆ ಅವರ ಪ್ರಭಾವ ತುಂಬ ಆಗಿದೆ, ಅನ್ನಬಹುದಾ?

ಧಾರಾಳವಾಗಿ ಅನ್ನಬಹುದು. ಅವರೊಬ್ಬರೇ ಅಲ್ಲ, ಅವರಂಥ ದೊಡ್ಡವರು ಇನ್ನೂ ಹತ್ತಾರು ಜನರ ಪ್ರಭಾವ ದಿಂದಲೂ ನಾನು ಪುಷ್ಟಿ ಪಡೆದಿದ್ದೇನೆ.

ಅಂಥವರು ಯಾರು ಅಂತ ಕೇಳಬಹುದಾ?

ಅಗತ್ಯವಾಗಿ ಕೇಳಬೇಕು. ಕಾಲೇಜಿನಲ್ಲಿ ನನಗೆ ಗುರು ಗಳಾಗಿದ್ದ ಟಿ. ಎಸ್. ವೆಂಕಣ್ಣಯ್ಯನವರು, ಎ. ಆರ್. ಕೃಷ್ಣಶಾಸ್ತ್ರಿ ಗಳು. ಬಿ. ಎಂ. ಶ್ರೀಕಂಠಯ್ಯ, ಇವರು ಮೊದಲು. ಆ ಮೇಲೆ ಕಾಲೇಜಿನಿಂದ ಹೊರಗೆ ಬಂದ ಮೇಲೆ—ನಿಮ್ಮ ಕಡೆ ಆಲೂರ ವೆಂಕಟರಾಯರು, ಘಟ್ಟದ ಕೆಳಗೆ ಗೋವಿಂದ ಪೈ ಅವರು, ನಮ್ಮ

ಕಡೆಯಂತೂ ವಿ.ಸೀ,ಮಾಸ್ತಿ, ಡಿ ವಿ ಜಿ, ಕೈಲಾಸಂ... ಸುಮ್ಮನೆ ಹೆಸರು ಪಟ್ಟಿಮಾಡಿ ಏನು ಪ್ರಯೋಜನ? ನನ್ನ ಗುರುಗಳ ಗೊಂಚಲು ಬಹು ದೊಡ್ಡ ಗೊಂಚಲು.

ಇಷ್ಟು ಜನಗಳ ಆಶ್ರಯ, ನೆರಳು ದೊರಕಬೇಕಾದರೆ ನೀವು ಪುಣ್ಯಮಾಡಿದ್ದಿರಿ, ಅನಿಸುತ್ತೆ.

ನನಗೂ ಹಾಗೇ ಅನ್ನಿಸುತ್ತೆ. ಆದರೆ ನೀವು ಆಶ್ರಯ, ನೆರಳು ಅಂದಿರಲ್ಲಾ... ಅದರಲ್ಲಿ ಆಶ್ರಯ ಅನ್ನೋದು ಸರಿ; ನೆರಳು ಅನ್ನೋದು ತಪ್ಪು.

ಯಾಕೆ?

'ಬೀಳಿಸದಿರೆಲೊ ನೆನ್ನ ನೆರಳನಿತರರ ಮೇಲೆ' ಅಂತ ಡಿ ವಿ ಜಿ ಕಗ್ಗದಲ್ಲಿ ಬರೆದಿದಾರೆ. ನಾನು ಈಗ ಹೇಳಿದವರಲ್ಲಿ ಯಾರೂ ನನ್ನ ಮೇಲೆ ತಮ್ಮ ನೆರಳನ್ನು ಬೀಳಿಸಲಿಲ್ಲ. ನಾನು ಅವರ ಬೆಳಕಿನಲ್ಲಿ ಬೆಳೆದವನು. ಆದ್ದರಿಂದಲೇ ನನ್ನ ಬರವಣಿಗೇಲಿ ನೀವು ಬಣ್ಣಬಣ್ಣದ ಬೆಳಕುಗಳನ್ನ ಕಾಣಬಹುದು.

ನೀವು ಇದುವರೆಗೆ ಎಷ್ಟು ಪುಸ್ತಕ ಬರೆದಿದೀರಿ?

ಇದು ಪ್ರಯೋಜನವಿಲ್ಲದ ಪ್ರಶ್ನೆ, ದೊಡ್ಡಗಾತ್ರದ ಪುಸ್ತಕ ಆಗಿದ್ದರೆ, ಸಂಖ್ಯೆ ಕಡಮೆಯಾಗುತ್ತಿತ್ತು; ಇನ್ನೂ ಸಣ್ಣ ಗಾತ್ರ ಆಗಿದ್ದರೆ ಸಂಖ್ಯೆ ಇನ್ನೂ ಹೆಚ್ಚಾಗುತ್ತಿತ್ತು.

ನೀವೂ ಸುಮಾರು 50 ವರ್ಷಕ್ಕೆ ಮೇಲ್ಪಟ್ಟು ಬರೀತಿದೀರಿ. ಮೊದಲನೇ ಹತ್ತು ವರ್ಷದ ಕತೇನ ಬರೆದುಕೊಟ್ಟ ಹಾಗೆ ಮುಂದಿನದು ಯಾಕೆ ಇನ್ನೂ ಬರೀಲಿಲ್ಲ?

ಅದು ಬರೆದಾಗ, ನನ್ನ ಬರವಣಿಗೆ ಇಲ್ಲಿಗೆ ನಿಂತು ಹೋಯ್ತು ಅನ್ನಿಸ್ತು. ಅಲ್ಲಿಗೆ ಅದರ ಕತೆ ಬರೆದೆ. ಆಮೇಲೆ ನೋಡಿದರೆ, ಅದು ಇನ್ನೂ ನಡೀತಾನೇ ಇದೆ. ಇದು ಒಂದು ಕಾರಣ. ಎರಡನೇ ಕಾರಣ ಏನೆಂದರೆ-'ಹತ್ತುವರ್ಷ' ಅನ್ನೋ ಆ ಪುಸ್ತಕಾನ ಆರು ವರ್ಷಗಳ ಹಿಂದೆ ನಾನೇ ಪ್ರಕಟಮಾಡಿದೆ ಅದರ ಪ್ರತಿಗಳು ನಿಧಾನವಾಗಿ ಮಾರಾಟವಾಗುತಿವೆ. ಅದಕ್ಕೆ ಹಾಕಿರೋ ಹಣ ಬೇಗ ಹಿಂದಿರುಗಿ ಬಂದರೆ, ಅದರ ಮುಂದಿನ ಭಾಗಾನ ಬರೆದು ಅಚ್ಚು ಮಾಡಿಸುತ್ತೇನೆ.

ನಿಮ್ಮ ಪುಸ್ತಕಗಳನ್ನೆಲ್ಲ ನೀವೇ ಪ್ರಕಟಿಸುತ್ತೀರಿ ಅಂತ ಕೇಳಿದೇನೆ. ಒಟ್ಟಿನಲ್ಲಿ ಪುಸ್ತಕಗಳ ಮಾರಾಟ ಹೇಗಿದೆ?

ಎಲ್ಲಾ ಅಷ್ಟೆ. ಎಂಟಾಣೆ ಪುಸ್ತಕ ಆಗಲಿ, ಎಂಟು ರೂಪಾಯಿ ಪುಸ್ತಕ ಆಗಲಿ, ವರ್ಷಕ್ಕೆ ಒಂದು ನೂರು ನೂರೈವತ್ತಕ್ಕಿಂತ ಹೆಚ್ಚಿಗೆ ಮಾರಾಟವಾಗೋದಿಲ್ಲ.

ಮತ್ತೆ ಮಾರಾಟವಾಗೋದು ಅಷ್ಟು ನಿಧಾನವಾದರೆ, ವರ್ಷವರ್ಷವೂ ಹೊಸ ಪುಸ್ತಕ ಪ್ರಕಟಿಸುತಾ ಇದೀರಲ್ಲಾ, ಅದು ಹೇಗೆ ಸಾಧ್ಯವಾಗುತಾ ಇದೆ?

ಅದು ಹೇಗೆ ಅಂದರೆ: ನನ್ನ ಹತ್ತಿರ ನೂರಾರು ಬೇರೆ ಬೇರೆ ಪುಸ್ತಕ ಇದೆ. ನಾನು ಎಲ್ಲೆಲ್ಲಿ ಭಾಷಣ ಮಾಡೋಕೆ ಹೋಗುತ್ತೇನೋ ಅಲ್ಲಿಗೆ ಪ್ರತಿಯೊಂದು ಪುಸ್ತಕಾನೂ ಹತ್ತು ಹತ್ತು ಹೊತ್ತುಕೊಂಡು ಹೋಗುತ್ತೇನೆ. ಅಲ್ಲಿ ಪ್ರದರ್ಶನ ಮಾಡುತೇನೆ. ಅಲ್ಲೊಂದೆರಡು ಇಲ್ಲೊಂದೆರಡು ಯಾರಾದರೂ ಕೊಂಡುಕೋತಾರೆ. ಇಂಥಾದ್ದು ಒಂದು ಹತ್ತು ಹದಿನೈದು ಕಡೆ

ನಡೆದರೆ, ಮುಂದಿನ ಪುಸ್ತಕ ಪ್ರಕಟಿಸೋಕೆ ಕರ್ಚು ಒದಗುತ್ತೆ.

ನೀವೇ ಬರೆದು, ನೀವೇ ಪ್ರಕಟಿಸಿ, ನೀವೇ ಮಾರಿದ್ದರಿಂದ ನಿಮಗೆ ಸಾಕಷ್ಟು ಲಾಭ ಬರುತ್ತಾ ?

ಹಣ ಸಾಕಷ್ಟು ಬರುತ್ತಾ ಅಂತ ನೀವು ಕೇಳೋದಾದರೆ, ಅದಕ್ಕೆ ಉತ್ತರ 'ಇಲ್ಲ'. ಆದರೆ, ನಾನು ಯಾವ ಉದ್ದೇಶದಿಂದ ಈ ಕೆಲಸಮಾಡುತಿದ್ದೇನೆಯೋ ಆ ದೃಷ್ಟಿಯಿಂದ ನೋಡಿದರೆ, ನಾನು ತುಂಬ ಲಾಭ ಪಡೆದಿದ್ದೇನೆ.

ಅದು ಯಾವುದು ನಿಮ್ಮ ಉದ್ದೇಶ?

ಚಾಮರಸನ ಪ್ರಭುಲಿಂಗ ಲೀಲೆ ಓದಿದೀರಾ? ಅಲ್ಲಿ ಗೊಗ್ಗಯ್ಯ ಅನ್ನೋ ಗುರು ಅಲ್ಲಮಪ್ರಭುದೇವರನ್ನು ಕುರಿತು 'ದೀನ ಮನದವನಂತೆ ಕಂಡ ನಿಧಾನವನು ತಾನೊಬ್ಬನುಂಬನೆ ದಾನಿ? ನೀ ಕಂಡ ಶಿವಪಥವ ಮಾನವರಿಗುರುಹು' ಅನ್ನುತ್ತಾರೆ, ನೆನಪಾಗುತ್ತಾ? ನಾನು ಆ ಸಂಪ್ರದಾಯಕ್ಕೆ ಸೇರಿದವನು. 'ಕಾಗೆ ಒಂದಗುಳ ಕಂಡಡೆ ಕರೆಯದೆ ತನ್ನ ಕುಲವೆಲ್ಲವ? ಕೋಳಿ ಒಂದು ಕುಟುಕ ಕಂಡಡೆ ಕರೆಯದೆ ತನ್ನ ಬಳಗವ?' ಅಂತ ಬಸವಣ್ಣನವರು ಹೇಳಿದರು ನೋಡಿ, ಆ ಮಂಗಳಕರವಾದ ದಾರಿ ನನ್ನದು. ನನ್ನ ಆನಂದವನ್ನ, ನನ್ನ ತಿಳಿವಳಿಕೇನ, ನನ್ನ ಅನುಭವವನ್ನ ಇತರರ ಜೊತೆಗೆ ಹಂಚಿಕೋಬೇಕು ಅನ್ನೋದು ನನ್ನ ಉದ್ದೇಶ.

ಆದರೂ ರತ್ನನ ಪದಗಳು ಬರೆದ ಕವಿ ನೀವು...

ಅಪ್ಪಾ, ರತ್ನನ ಪದಗಳನ್ನ ನಾನು ಬರೆದೆ ಅನ್ನಬೇಡಿ. ಅದು ಆ ಕಾಲಕ್ಕೆ ನನ್ನಿಂದ ಆಯ್ತು ಅನ್ನಿ ಒಪ್ಪಿಕೋತೇನೆ. ಅಂಥದನ್ನ

ಮತ್ತೆ ಬರೆಯೋಕೆ ನನಗೇ ಆಗಿಲ್ಲ.

ಆದರೂ ನಾಗನ ಪದಗಳು ಬರೆದಿರಲ್ಲ?

ಅದೂ ಅಷ್ಟೆ. ನಾನು ಬರೆದೆ ಅನ್ನಿಸೋಲ್ಲ. ಅದು ಕೂಡ ನನ್ನಿಂದಾಯಿತು. ಆ ಅದರ ಕತೇನ ಇನ್ನೂ ಯಾವಾಗಲಾದರೂ ಹೇಳುತ್ತೇನೆ. ಆದರೆ ನಾಗನ ಪದಗಳು ರತ್ನನ ಪದಗಳಿಗಿಂತ ಬೇರೆ ಅನ್ನೋದನ್ನು ನೀವು ಗಮನಿಸಬೇಕು.

ಅದೇ ನಿಮ್ಮ ಪುರುಷ ಸರಸ್ವತಿ ಬೇರೆ ಆದ ಹಾಗೆ. ಅಲ್ವಾ?

ಹಾಗಂತ ಇಟ್ಟುಕೊಳ್ಳಿ.

ರತ್ನನ ಪದಗಳು ಆದ ಮೇಲೆ ನಾಗನ ಪದಗಳು ಬರೆದಿರಲ್ವಾ; ಅದರ ಹಾಗೇನೇ. ಪುರುಷ ಸರಸ್ವತಿ ಆದ ಮೇಲೆ ತಿರುಗಿ ಯಾವ ವಿಡಂಬನೇನೂ ಬರೀಲಿಲ್ವಲ್ಲಾ, ಅದು ಯಾಕೆ?

ಬರೆದಿದ್ದೀನಪ್ಪಾ. ಆದರೆ ಅದು ಅನೇಕರಿಗೆ ಗೊತ್ತಿಲ್ಲ.

ಅಂದರೆ, ಅದು ಇನ್ನೂ ಪುಸ್ತಕವಾಗಿ ಪ್ರಕಟವಾಗಿಲ್ವಾ?

ಹೋದ ವರ್ಷ ಆಯಿತು ಮೂರು ಕಂತುಗಳಲ್ಲಿ.

ಪುಸ್ತಕದ ಹೆಸರು?

'ನಿರ್ಭಯಾಗ್ರಫಿ' ಅಂತ. ಚಕ್ರವರ್ತಿ ವಜ್ರ, ಕೊರವಂಜಿಯ ದಾರಿಯಲ್ಲಿ, ಮತ್ತು ಹಾಸ್ಯದ ಬಡಿಗೆ ಅಂತ ಆ ಮೂರು ಕಂತುಗಳ ಹೆಸರು.

ಒಟ್ಟಿಗೆ ಒಂದೇ ಪುಸ್ತಕ ಮಾಡಬಹುದಾಗಿತಲ್ಲ?

ಮಾಡಬಹುದಾಗಿತ್ತು. ಆದರೆ, ಒಟ್ಟಿಗೆ ಮೂರು ರೂಪಾಯಿ

ಕೊಟ್ಟು ಪುಸ್ತಕ ಕೊಂಡುಕೊಳ್ಳೋರು ನಮ್ಮಲ್ಲಿ ಕಡಮೆ. ಒಂದೊಂದು ರೂಪಾಯಿನ ಮೂರು ಪುಸ್ತಕ ಅಂದರೆ, ಅಷ್ಟೋ ಇಷ್ಟೋ ಮಾರಬಹುದು.

ನಿಮ್ಮ ಪುಸ್ತಕ ನೀವೇ ಮಾರುತೀರಿ, ಅಂತ ಕೇಳಿದ್ದೆ. ಹಾಗಾದರೆ ಅದು ನಿಜಾನಾ? ಕೇಳಿದ್ದು ತಪ್ಪಾದರೆ, ಕ್ಷಮಿಸಬೇಕು.

ಅಯ್ಯೋ, ಇದು ಕೇಳೋಕೆ ನೀವು ಯಾಕೆ ಇಷ್ಟು ಸಂಕೋಚ ಪಟ್ಟುಕೋತೀರಿ? ಮಾರೋವನು ನನಗೇ ಸಂಕೋಚ ಇಲ್ಲದೇ ಇರೋವಾಗ?

ಅಂದರೆ, ಇದರಲ್ಲೇ ತುಂಬ ವೇಳೆ ಹಾಳಾಗಿಹೋಗುತ್ತೆ, ಅಲ್ಲವೆ?

ನೀವು ಹೇಳೋದು ಸರಿ. ವೇಳೇನೂ ವ್ಯರ್ಥ ಜೊತೆಗೆ ನನಗೂ ಸುಸ್ತು. ಆದರೆ, ಮಾರಾಟ ಮಾಡದೇ ಹೋದರೆ, ಮುಂದಿನ ಪುಸ್ತಕ ಅಚ್ಚುಮಾಡಿಸೋಕೆ ದುಡ್ಡು? ಆದ್ದರಿಂದ 'ಧೂಮೇನ ಆವ್ರಿಯತೇ ವಹ್ನಿಃ' ಅಂದ ಹಾಗೆ, ಇದನ್ನ ಸಹಿಸಿಕೋಬೇಕು.

ಅಂದರೆ, ಈ ವೃತ್ತಿಯಲ್ಲಿ ಏನೂ ಲಾಭ ಇಲ್ಲ, ಅನ್ನಿ.

ಹಾಗೆ ಇಲ್ಲ ಅನ್ನೋಕಾಗೊಲ್ಲ. ಸಾಕಷ್ಟು ಲಾಭ ಇಲ್ಲ ಅಂದರೆ, ಅದು ಸರಿ. ಕನ್ನಡದಲ್ಲಿ ಪುಸ್ತಕ ಬರೆದು ಹೆಂಡತಿ ಮಕ್ಕಳನ್ನ ಸಾಕುತೇನೆ ಅಂದರೆ, ಅದು ಸಾಧ್ಯವಿಲ್ಲ, ಈಗಿರೋ ಪರಿಸ್ಥಿತೀಲಿ.

ಅಂದರೆ, ಬರವಣಿಗೆ ನಿಮಗೆ ವೃತ್ತಿ ಅಲ್ಲ, ಹಾಗಾದರೆ?

ಖಂಡಿತ ಅಲ್ಲ. ಇದು ನನಗೆ ಹಾಬಿ, ಹವ್ಯಾಸ, ಮೇಷ್ಟರ ಕೆಲಸ ನನ್ನ ವೃತ್ತಿಯಾಗಿತ್ತು. ಅದು ತಿಂಗಳು ತಿಂಗಳಿಗೂ ಕೊಡುತಾ ಇದ್ದ ಸಂಬಳದಿಂದ ನನ್ನ ಸಂಸಾರ ನಿರ್ವಹಣೆ ಆಗುತಿತ್ತು. ಪುಸ್ತಕದಲ್ಲಿ ಬಂದ ಪುಡಿಕಾಸು ಪುಸ್ತಕಕ್ಕೇ ಹೋಗುತಿತ್ತು—'ಕೆರೆಯ ನೀರನು ಕೆರೆಗೆ ಚೆಲ್ಲಿ, ವರವ ಪಡೆದವರಂತೆ ಕಾಣಿರೊ' ಅಂದ ಹಾಗೆ.

ನಿಮ್ಮ ಪುಸ್ತಕಗಳಲ್ಲಿ ನಿಮಗೆ ಅತ್ಯಂತ ಪ್ರಿಯವಾದ ಪುಸ್ತಕ ಯಾವುದು?

ಇಂಥದನ್ನೇ ನಾನು ಕೇಳಬೇಡಿ ಅಂದದ್ದು. ಪಡೆದ ಮಕ್ಕಳೆಲ್ಲ ತಾಯಿಗೆ ಪ್ರಿಯ. ಅದರಲ್ಲೂ ಆ ಮಗೂನ ದಕ್ಕಿಸಿ ಕೊಳ್ಳೋಕೆ ಅವಳು ಹೆಚ್ಚು ಕಷ್ಟ ಪಟ್ಟಿದ್ದರೆ, ಆ ಕಾರಣದಿಂದ ಅದು ಅವಳಿಗೆ ಹೆಚ್ಚು ಪ್ರಿಯವಾಗುತದೆ. ಅದರ ಹಾಗೇನೇ, ನನ್ನ ಪುಸ್ತಕಗಳಲ್ಲಿ ಅತ್ಯಂತ ಪ್ರಿಯವಾದದ್ದು ಯಾವುದು ಅಂತ ತಿಳಿಯ ಹೇಳಬೇಕಾದರೆ, ಅದು ಯಾಕೆ ಅಷ್ಟು ಪ್ರಿಯ: ಅನ್ನೋದನ್ನೂ ಹೇಳಬೇಕಲ್ಲವಾ? ಅದು ದೀಪಾವಳಿ ಸಂಚಿಕೆಯ ಅಳತೆಗೆ ಮೀರಿದ್ದು. ಆಮೇಲೆ?

ನಿಮ್ಮ ಪುಸ್ತಕಗಳಲ್ಲಿ ಅತ್ಯಂತ ಹೆಚ್ಚು ಸಂಖ್ಯೆಯಲ್ಲಿ ಕರ್ಚಾಗಿರೋ ಪುಸ್ತಕ ಯಾವುದು?

ಇದು ಸಾರ್ಥಕವಾದ ಪ್ರಶ್ನೆ. ಇದುವರೆಗೆ ನನ್ನ 'ರತ್ನನ ಪದಗಳು' ಕರ್ಚಾಗಿರೋ ಅಷ್ಟು ಇನ್ನಾವುದೂ ಕರ್ಚಾಗಿಲ್ಲ.

ಇದುವರೆಗೆ ಎಷ್ಟು ಸಾವಿರ ಪ್ರತಿ ಕರ್ಚಾಗಿರಬಹುದು?

ರತ್ನನ ಪದಗಳು ಮೊದಲನೇ ಮುದ್ರಣ ೧೯೩೪ರಲ್ಲಿ ೧೦೦೦ ಪ್ರತಿ: ಎರಡನೇ ಮುದ್ರಣ ೧೯೪೫, ೧೫೦೦ ಪ್ರತಿ: ಮೂರನೇ ಮುದ್ರಣ ೨೦೦೦ ಪ್ರತಿ, ೧೯೬೩; ನಾಲ್ಕನೇ ಮುದ್ರಣ ೧೯೬೬, ೩೦೦೦ ಪ್ರತಿ; ಐದನೇ ಮುದ್ರಣ ೧೯೭೨ರಲ್ಲಿ, ೪೦೦೦ ಪ್ರತಿ. ಅಂದರೇನಾಯಿತು? ೧೯೩೪ ರಿಂದ ೧೯೭೨ರವರೆಗೆ ಅಂದರೆ ೩೮ ವರ್ಷಗಳಲ್ಲಿ ೭೫೦೦ ಪ್ರತಿ ರತ್ನನ ಪದ ಮಾರಾಟವಾಗಿದೆ. ಅಂದರೆ ವರ್ಷಕ್ಕೆ ಸುಮಾರು ೨೦೦ ಪ್ರತಿ. ಸಾಕಾ?...

ಅಪ್ಪಾ, ಇಲ್ಲಿಗೆ ಸಾಕು. ದೀಪಾವಳಿಯ ಸಂಚಿಕೆಯಲ್ಲಿ ನಾನೊಬ್ಬನೇ ತ್ರಿವಿಕ್ರಮನ ಹಾಗೆ ಪುಟ ಆಕ್ರಮಿಸಿಕೋಬಾರದು. ಮಿಕ್ಕವರಿಗೂ ಕೊಂಚ ಜಾಗ ಇರಲಿ. ನಮಸ್ತೇ

ಶ್ರೀ ಜಿ.ಪಿ. ರಾಜರತ್ನಂ ಅವರೊಡನೆ ಕೆಲವು ಮಾತು

ನಮಸ್ಕಾರ, ರಾಜರತ್ನಂ ಅವರೇ! ನಾನೊಬ್ಬ ವರದಿಗಾರ. ನಿಮ್ಮ ಸಂದರ್ಶನಕೊಸ್ಕರ ಬಂದಿದೇನೆ.

ನಿಮಗೆ ಯಾವ ರಾಜರತ್ನಂ ಜೊತೆ ಸಂದರ್ಶನ ಬೇಕು?

ಜಿ.ಪಿ. ರಾಜರತ್ನಂ ಜೊತೆ. ರಾಜರತ್ನಂ ನೀವೇ ತಾನೆ?

ಹೌದು, ನಾನೇ ರಾಜರತ್ನಂ. ಆದರೆ ನಿಮಗೆ ಬೇಕಾಗಿರೋದು ಯಾವ ರಾಜರತ್ನಂ? ಓದಿ ಬರೆಯುವ ರಾಜರತ್ನಮ್ಮ? ಭಾಷಣ ಮಾಡುವ ರಾಜರತ್ನಮ್ಮ? ತನ್ನ ಪುಸ್ತಕಾನ ತಾನೇ ಪ್ರಕಟ ಮಾಡುವ ರಾಜರತ್ನಮ್ಮ? ಅಥವಾ ತಾನು ಪ್ರಕಟಿಸಿದ್ದನ್ನ ತಾನೇ ಮಾರಾಟ ಮಾಡೋ ರಾಜರತ್ನಮ್ಮ? ಯಾವ ರಾಜರತ್ನಂ ಬೇಕು?

ನಮಗೆ ಎಲ್ಲಾ ರಾಜರತ್ನಮ್ಮೂ ಬೇಕು.

ಈಗ ನೀವು ಈ ಸಂದರ್ಶನ ಅಂತ ಬಂದಿರೋದು, ಏನು ದೀಪಾವಳಿ ಸಂಚಿಕೇಗಾ?

ಹೌದು.

ಹೌಗಾದರೆ, ಎಲ್ಲಾ ರಾಜರತ್ನಮ್ಮೂ ಬೇಕು ಅನ್ನೋದಾದರೆ, ನಿಮ್ಮ ದೀಪಾವಳಿ ಸಂಚಿಕೆ ಸಾಕಾಗೊಲ್ಲ. ಆದ್ದರಿಂದ ಯಾವ ರಾಜರತ್ನಮ್ಮನ್ನ ಏನು ಕೇಳಬೇಕೋ ಅದನ್ನ ಆರಿಸಿಕೊಂಡು ಕೇಳಿ. ಸಂದರ್ಶನ ಅನ್ನೋದು ಬಹಳ ದೊಡ್ಡ

ಮಾತು. ಅದು ಬೇಡ, ಕೊಂಚ ಹೊತ್ತು ಕೂತು ಮಾತನಾಡೋಣ.

ಅದೂ ಸರೀನೇ. ನಾನು ನಿಮ್ಮ ಪುಸ್ತಕ ಒಂದೂ ಬಿಡದ ಹಾಗೆ ಓದಿದೀನಿ. ಅದನ್ನ ಬಿಟ್ಟುಬಿಡೋಣ ಉಳಿದ ರಾಜರತ್ನಂ ಬಗ್ಗೆ ಮಾತನಾಡೋಣ. ಆಗಬಹುದಾ?

ಸ್ವಲ್ಪತಾಳಿ. ನಾನು ಬರೆದಿರೋದೆಲ್ಲಾ ಓದಿದೀನಿ ಅಂದಿರಲ್ಲ. ನೀವು ಇತ್ತೀಚೆಗೆ ಓದಿರೋ ನನ್ನ ಪುಸ್ತಕ ಯಾವುದು ಹೇಳಿ. ನಿಮ್ಮನ್ನ ಪರೀಕ್ಷೆ ಮಾಡುತಾ ಇಲ್ಲ. ನೀವು ಓದಿದೀರಿ ಅಂದರೆ ನನಗೆ ಸಂತೋಷವಾಗುತ್ತೆ, ಅದಕ್ಕೆ ಕೇಳಿದೆ.

ನಾನು ಈಚೆಗೆ ಓದಿರೋದು—ನೀವು ಪ್ರಕಟಿಸಿರುವ **ಶ್ರೀ ಸತ್ಯಸಾಯಿ ಬಾಬಾ** ಅವರ ಕೆಲವು **ಧರ್ಮಲಿಪಿಗಳು** ಮತ್ತು ಅದಕ್ಕೆ ನೀವು ಬರೆದಿರುವ ವ್ಯಾಖ್ಯಾನ. ಆಮೇಲೆ ನಿಮ್ಮ **'ನಾಮಸ್ಮರಣ'** ನನಗೆ ತುಂಬ ಹಿಡಿಸಿತು.

ಸಾಕು. ಅಪ್-ಟು-ಡೇಟ್ ಆಗಿದ್ದೀರಿ. ಬರೀ ನನ್ನ ಹೆಸರು ಕೇಳಿರೋದಷ್ಟೇ ಅಲ್ಲ, ನನ್ನ ಪುಸ್ತಕಗಳನ್ನೂ ಓದಿದೀರಿ. ಸಂತೋಷ.

ಬರೀ ಓದಿರೋದಲ್ಲ. ಕೊಂಡುಕೊಂಡು ಓದಿದೀನಿ. ಭಗವಾನ್ ಮಹಾವೀರಸ್ವಾಮಿಯವರ ೨೫೦೦ನೇ ಪರಿನಿರ್ವಾಣ ಮಹೋತ್ಸವಕ್ಕಾಗಿ ನೀವು ಬರೆದು ಪ್ರಕಟಿಸಿರುವ ಹತ್ತು ಪುಸ್ತಕಾನೂ ಕೊಂಡುಕೊಂಡಿದೀನಿ. ಅದರಲ್ಲೂ ನಿಮ್ಮ **'ಜೈನರ ಕತೆಗಳು'** ಅನ್ನೋ ಪುಸ್ತಕ ನಮ್ಮ ಮನೇಲಿ ಎಲ್ಲರಿಗೂ ಇಷ್ಟ ಆಯ್ತು.

ನನ್ನ **'ನಿರ್ಭಯಾಗ್ರಫಿ'** ಅನ್ನೋ ಪುಸ್ತಕ ಕೊಂಡು ಕೊಂಡಿದೀರಾ?

ಕೊಂಡುಕೊಂಡಿದೇನೆ. ಓದಿದೇನೆ. ಈ ದೊಣ್ಣೆವರಿಸೆ ನೀವು ಎಲ್ಲಿ ಕಲಿತಿರಿ ಅಂತ ಆಶ್ಚರ್ಯಪಟ್ಟಿದ್ದೇನೆ.

ಅಪ್ಪಾ, ನನ್ನ **ನಿರ್ಭಯಾಗ್ರಫಿ** ಓದಿದೀರಿ ಅಂದಮೇಲೆ, ನೀವು ಸಾಕ್ಷಾತ್ ನನ್ನವರೇ ಆದಿರಿ. ಇನ್ನೂ ನೀವು ಏನು ಪ್ರಶ್ನೆ ಕೇಳಬೇಕಾದರೂ ಕೇಳಬಹುದು.

ನಿಮ್ಮ ಪುಸ್ತಕಗಳ ವಿಷಯ ತಿಳಿದುಕೊಳ್ಳೋಣ ಅನ್ನಿಸುತ್ತೆ. ಅದಕ್ಕೆ ಮುಂಚೆ, ಭಾಷಣ ಮಾಡೋ ರಾಜರತ್ನಂ ಅನ್ನ ಕುರಿತು ಒಂದು ಪ್ರಶ್ನೆ ಕೇಳಬಹುದಾ?

ಸಂಕೋಚವಿಲ್ಲದೆ ಕೇಳಿ.

ಭಾಷಣ ಮಾಡೋದಕ್ಕೆ ನೀವು ದುಡ್ಡು ಕೇಳುತೀರಂತೆ. ಹೌದಾ? ಹಾಗಂತ ಯಾರೋ ಎಲ್ಲೋ ಬರೆದಿದ್ದರು.

ಕೊಡೋವರು ಒಬ್ಬರಿದ್ದರೆ ನಾನೂ ಕೇಳಿಯೇನು. ಆದರೆ, ಕನ್ನಡದಲ್ಲಿ ಪುಸ್ತಕ ಕೊಳ್ಳೋಕೇ ದುಡ್ಡುಕೊಡೋವರು ವಿರಳ ಆಗಿರುವಾಗ, ಇನ್ನೂ ದುಡ್ಡುಕೊಟ್ಟು ಭಾಷಣ ಕೇಳುತಾರಾ ಯಾರಾದರೂ?

ಮತ್ತೆ, ಈ ಒಡಕುಮಾತು ಹೇಗೆ ಹುಟ್ಟಿತು?

ಪರಮಾತ್ಮನಿಗೆ ಗೊತ್ತು. ಆದರೆ ಇಷ್ಟುಮಟ್ಟಿಗೆ ನಿಜ. 'ಭಾಷಣ ಮಾಡು' ಅಂತ ಯಾರಾದರೂ ಬಂದು ಕೇಳಿದರೆ— 'ಅಪ್ಪಾ, ನಾನು ಹೇಳೋದನ್ನೆಲ್ಲಾ ನಾನೇ ಬರೆದು, ನಾನೇ ಪ್ರಕಟಿಸಿ

ಇಟ್ಟುಕೊಂಡಿದ್ದೇನೆ. ಅವುಗಳಲ್ಲಿ ಕೆಲವಾದರೂ ಪುಸ್ತಕಗಳನ್ನ ಕೊಂಡುಕೊಳ್ಳಿ. ಒಂದು ಹತ್ತು ಕಡೆ ಹೀಗೆ ಇಷ್ಟು ಕೊಂಡು ಕೊಂಡರೆ, ಮುಂದಿನ ಪುಸ್ತಕ ಪ್ರಕಟವಾಗಲು ಅನುಕೂಲವಾಗುತ್ತದೆ' ಅಂತ ನಾನು ಹೇಳುವುದುಂಟು. ನಾನು ಹೇಳುವುದೂ ಒಂದು ರೀತಿಯಲ್ಲಿ ಯುಕ್ತವೆಂದು ಕೆಲವರು ಒಪ್ಪುತ್ತಾರೆ, ತಮ್ಮ ಕೈಲಾದಷ್ಟು ಕೊಂಡುಕೊಳ್ಳುತ್ತಾರೆ. ಕೆಲವರಿಗೆ ನನ್ನ ಮಾತು ಇಷ್ಟವಾಗುವುದಿಲ್ಲ. ಬಾಯಿಗೆ ಬಂದಂತೆ ಏನೇನೋ ಹೇಳುತ್ತಾರೆ. ಇಂಥ ಸಣ್ಣಮಾತು ಆಡುವುದರಿಂದ ಅವರಿಗೆ ಸಂತೋಷವಾಗುವುದಾದರೆ ನನ್ನದೇನೂ ಅಭ್ಯಂತರವಿಲ್ಲ.

ಮೊದಲಿಂದಲೂ ನಿಮ್ಮ ಪುಸ್ತಕಗಳನ್ನೂ ನೀವೇ ಪ್ರಕಟ ಮಾಡುತ್ತಿದ್ದೀರಾ?

ಇಲ್ಲ. ಬೇರೆ ಬೇರೆ ಪ್ರಕಾಶಕರು ನನ್ನ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ನನ್ನ **'ಹತ್ತು ವರ್ಷ'**ದ ಎರಡನೇ ಮುದ್ರಣದ ಪರಿಶಿಷ್ಟದಲ್ಲಿ ನನ್ನ ಪ್ರಕಾಶಕರ ಪಟ್ಟಿ ಕೊಟ್ಟಿದೇನೆ. ಆ ಪ್ರಕಾಶನ ಸಂಸ್ಥೆಗಳು ಈಗ ಯಾವುವೂ ಇಲ್ಲ. ಇದ್ದಷ್ಟು ಕಾಲ ಅವು ಸೊಗಸಾದ ಕೆಲಸ ಮಾಡಿದುವು.

ನೀವು ಇನ್ನಾರಿಗಾದರೂ ಯಾಕೆ ಕೊಡಬಾರದು?

ಕೊಡಬಾರದು ಅಂತ ಏನಿಲ್ಲ. ಅವರಿಗೆ ಬೇಕಾದ್ದನ್ನ ಬರೆದು ಕೊಡೋಕೆ ನನಗಿಷ್ಟವಿಲ್ಲ. ನಾನು ಬರೆದು ಕೊಟ್ಟದ್ದನ್ನ ಪ್ರಕಟಿಸುವುದಕ್ಕೆ ಅವರಿಗೆ ಇಷ್ಟವಿಲ್ಲ. ಪುಸ್ತಕ ಪ್ರಕಟನ ಅನ್ನೋದು ಹಣಕಾಸಿನ ವ್ಯವಹಾರ. ಹಾಕಿದ ಹಣ ಹಿಂದಿರುಗಿ ಬರೋದು ತಡವಾದರೆ, ಪ್ರಕಾಶನ ಸಂಸ್ಥೆ ದಿವಾಳಿ ಎದ್ದುಹೋಗುತ್ತೆ.

ಆದ್ದರಿಂದ ಪುಸ್ತಕದ ದಂಧೆ ಮಾಡೋವರು ಬಹಳ ಹುಷಾರಾಗಿರಬೇಕು. ಭಾವಪರವಶರಾದರೆ ಸರ್ವನಾಶ.

ಅಂದರೆ, ನೀವು ಬರೆದದ್ದನ್ನ ನೀವೇ ಪ್ರಕಟಮಾಡೋದು ತ್ರಾಸ ಅನ್ನಿಸೋಲ್ವಾ?

ಅನ್ನಿಸೋದು ಮಾತ್ರವಲ್ಲ, ತ್ರಾಸ ಆಗುತ್ತೆ. 'ಕೈ ಕೆಸರಾದರೆ ಬಾಯಿ ಮೊಸರು' ಅಂತ ಕೇಳಿದೀರಲ್ಲಾ ಅದರ ಹಾಗೇನೆ, ತ್ರಾಸ ಆದದ್ದರಿಂದಲೇ ಕೊನೆಗೆ ತೃಪ್ತಿಯೂ ಆಗುತ್ತೆ. ಮಂಕುತಿಮ್ಮನ ಕಗ್ಗದಿಂದ ಒಂದೆರಡು ಪದ್ಯ ಹೇಳುತ್ತೇನೆ, ಕೇಳಿ.

ನಿನ್ನ ಹೆಣವನು ನೀನೆ ಹೊತ್ತು ಸಾಗಿಸಬೇಕೊ;
ಅಣ್ಣ ಬಾ ತಮ್ಮ ಬಾ ಎಂದಳುವುದೇಕೋ?
ತನ್ನ ಶಿಲುಬೆಯ ತಾನೆ ಹೊತ್ತನಲ ಗುರು ಯೇಸು?
ನಿನ್ನ ಕರ್ಮದ ಹೊರೆಯ ಬಿಡದೆ ನೀನೆ ಹೊರು.
ಹೆಗಲ ಹೊರೆ ಹುಟ್ಟಿದವರ್ಗೆಲ್ಲಮಿರುತಲಿರೆ
ನಿನ್ನ ರಗಳೆಗಾರಿಗೆ ಬಿಡುವೊ—ಮಂಕುತಿಮ್ಮ.

ಆದ್ದರಿಂದ ನನ್ನ ಪ್ರಕಟಣೆ ನಾನೇ ವಹಿಸಿಕೋತೇನೆ ಅರ್ಥವಾಯಿತಾ?

ಆಯ್ತು ಅಂತ ಅಂದುಕೊಂಡಿದೇನೆ.

ನೀನು ಬರಿ ಅಂತ ನನಗೆ ಯಾರೂ ಒತ್ತಾಯ ಮಾಡೊಲ್ಲ. ಬರೆಯದೆ ಬಿಟ್ಟರೆ ಜುಲ್ಮಾನೆ ಹಾಕೊಲ್ಲ. ಬರೆದದ್ದನ್ನ ಪ್ರಕಟ ಮಾಡದೆ ಹೋದರೆ ನನ್ನ ಯಾರೂ ಜೈಲಿಗೆ ಹಾಕೊಲ್ಲ. ಆದರೆ, ಇದನ್ನ ಮಾಡದೆ ಹೋದರೆ ನನಗೆ ಉಸಿರು ಕಟ್ಟಿದ ಹಾಗೆ ಆಗುತ್ತೆ. ಬರೆದದ್ದು ಪ್ರಕಟವಾದಾಗ ಮಾತ್ರ ನನಗೆ ಹಾಯಿ.

ಪ್ರಕಟಣೆಗೆ ನೀವು ದುಡ್ಡು ಹೇಗೆ ಹೊಂದಿಸುತ್ತೀರಿ?

ಅನೇಕರು ಇದೇ ಕೇಳುತ್ತಾರೆ. ಹೇಗೆ ಹೊಂದಿಸುತೇನೆ ಅಂದರೆ—ಹಿಂದೆ ನನ್ನ ಪುಸ್ತಕಗಳನ್ನು ಪ್ರಕಟಮಾಡಿದ ಮಿತ್ರರು ನನಗೆ ಏನು ಸಂಭಾವನೆ ಕೊಡುತ್ತಿದ್ದರೋ ಅದನ್ನ ಭಂಡವಾಳ ಮಾಡಿಕೊಂಡು ನಾನೇ ಸ್ವಂತವಾಗಿ ಕೆಲವು ಪುಸ್ತಕ ಪ್ರಕಟಮಾಡಿದೆ. ಹಾಗೆ ಮಾಡಿದ್ದನ್ನ ಮಾರಾಟ ಮಾಡಿ, ಅದರಿಂದ ಬಂದದ್ದನ್ನು ಉಪಯೋಗಿಸಿ, ಇನ್ನೊಂದು ಪುಸ್ತಕಮಾಡು...ಹೀಗೆ ನನ್ನದು ಪುಸ್ತಕದ ಪರಿಚಲನೆಯ ವ್ಯವಹಾರವಾಗಿಬಿಟ್ಟಿದೆ.

ನಿಮ್ಮ ಪುಸ್ತಕ ಸರಾಸರಿ ವರ್ಷಕ್ಕೆ ಎಷ್ಟು ಮಾರಾಟವಾಗ ಬಹುದು?

ವರ್ಷಕ್ಕೆ ಸುಮಾರು 100-150 ಪುಸ್ತಕ ಕರ್ಚಾಗುತ್ತೆ ಸಣ್ಣದಾದರೂ ಅಷ್ಟೆ ದೊಡ್ಡದಾದರೂ ಅಷ್ಟೆ.

ಅದಲ್ಲಾ ನಾನು ಕೇಳಿದ್ದು. ನಿಮಗೆ ಈ ಲೇಖನವ್ಯವಸಾಯ ದಿಂದ ಎಷ್ಟು ವರಮಾನ ಬರುತ್ತೆ, ಅಂತ ನಾನು ಕೇಳಿದ್ದು.

ವರಮಾನ ಏನೂ ಇಲ್ಲ ಅಂತ ಇಟ್ಟುಕೊಳ್ಳಿ. ಯಾಕೆಂದರೆ, ವರ್ಷದಲ್ಲಿ ಎಷ್ಟು ಮಾರಾಟ ಆಗುತ್ತೋ ಅದಕ್ಕೂ ಮುಂದಿನ ವರ್ಷ ಎಷ್ಟು ಪ್ರಕಟವಾಗುತ್ತೋ ಅದಕ್ಕೂ ಅಲ್ಲಿಗಲ್ಲಿಗೆ ಸರಿ ಹೋಗುತ್ತೆ.

ಅಷ್ಟಾದರೆ ಸಾಕು ಅನ್ನಿಸುತ್ತಾ ನಿಮಗೆ?

ಬೇಕಾದಷ್ಟು ಆಯಿತು. ಬರೆಯೋದು ನನಗೆ 'ವೃತ್ತಿ' ಅಲ್ಲ. ಇದು ನನಗೆ ಆರೋಗ್ಯಕರವಾದ 'ಹವ್ಯಾಸ' ಹೊಟ್ಟೆಪಾಡಿಗೋಸ್ಕರ

ನಾನು ಹಿಡಿದ ವೃತ್ತಿ—ಮೇಷ್ಟರ ಕೆಲಸ. ಆರಂಭ ಮಾಡಿದಾಗ ಗಂಜಿ ಕೊಡ್ತು; ಕೊನೆಕೊನೇಗೆ ಅನ್ನ, ಸಾರು, ಮಜ್ಜಿಗೆ ಕೊಡ್ತು. ಆ ವೃತ್ತಿಯಲ್ಲಿ ನನಗೆ ಸಹಜವಾಗಿ 'ಪ್ರವೃತ್ತಿ'ಇದ್ದದ್ದರಿಂದ ಬಾಯಿಗೆ ಬಿದ್ದ ಅನ್ನ ಅಮೃತವಾಯಿತು. ತಿಂದ ಅನ್ನ ಅರಗೋದಕ್ಕೋಸ್ಕರ ಓದೋದು, ಬರೆಯೋದು, ಭಾಷಣ ಮಾಡೋದು ಬೆಳೆಯಿತು. ಈಗ ಅದು ನನ್ನ ಉಸಿರಿನ ಉಸಿರು ಆಗಿದೆ. ಅಂದ ಮೇಲೆ, ಅದರಿಂದ ಲಾಭ ಬರುತ್ತಾ, ನಷ್ಟ ಆಗುತ್ತಾ ಅಂತ ತಕ್ಕಡಿ ಹಿಡಿದು. ತೂಗಿನೋಡೋದು ಸಣ್ಣತನ. ಅಲ್ವಾ?

ನೀವು ಹೇಳೋದು ಸರಿ. ಆದರೂ...

ಆದರೂ, ನನಗೆ ಏನು ಬೇಕೋ ಅದನ್ನ ಮಾಡಿ ಸಂತೋಷ ಪಡೋಕೆ ದೇವರು ಅನುಕೂಲ ಇಷ್ಟಮಟ್ಟಿಗಾದರೂ ಒದಗಿಸುತ್ತಾ ಇರುವಾಗ, ದಾನವಾಗಿ ಬಂದ ಹಸುವಿನ ಹಲ್ಲು ಎಣಿಸಿ ನೋಡೋದು ಕೃತಘ್ನತೆ ಅಂತ ನನಗೆ ಅನ್ನಿಸುತ್ತೆ.

ನಿಮ್ಮ ಮನೋಧರ್ಮ ನನಗೆ ಅರ್ಥವಾಯಿತು. ಆದರೂ ಇಲ್ಲಿರೋವರೆಗೂ ನಮ್ಮ ಜೀವನಾಧಾರಕ್ಕೆ ಏನಾದರೂ ದುಡಿಯಲೇಬೇಕಲ್ಲವೇ?

ದುಡೀಬಾರದು ಅಂತ ಯಾರು ಹೇಳುತಾರೆ? ಕುರ್ವನ್ನೇವೇಹ ಕರ್ಮಾಣಿ ಜಿಜೀವಿಷೇತ್ ಶತಗಂ ಸಮಾಃ!' ೫೫ರ ವರೆಗೂ ಮೇಷ್ಟರಾಗಿ ದುಡಿದು, ನನಗೆ ವಿಶ್ರಾಂತಿವೇತನ ಬರುತಾ ಇದೆ. ವಾರವಾರವೂ 'ಸುಧಾ'ದಲ್ಲಿ ಬರೆಯೋದಕ್ಕೆ ಒಂದಿಷ್ಟು ಕೊಡುತಾರೆ. ಆಗಿಯೋದಕ್ಕೆ ಹಲ್ಲಿಲ್ಲದವನಿಗೆ, ತಿಂದಷ್ಟನ್ನ

ಅರಗಿಸಿಕೊಳ್ಳೋ ಶಕ್ತಿ ಕಡಮೆ ಆದವನಿಗೆ ಇನ್ನೆಷ್ಟು ಬೇಕು? ಎಷ್ಟು ಸಂಪಾದನೆ ಮಾಡಿದರೂ ತಿನ್ನೋದು ಒಂದು ಹಿಡಿ ಅನ್ನ ಅಷ್ಟೇ ಅಲ್ಲವೆ?

ನೀವು ಈ ವೈರಾಗ್ಯಾನ ಸಾಯಿ ಬಾಬಾ ಹತ್ತಿರ ಹೋದ ಮೇಲೆ ಕಲಿತುಕೊಂಡಿರಾ? ಅಥವಾ ಅದಕ್ಕೂ ಮೊದಲಿಂದ ನೀವು ಹೀಗೇ ಇದ್ದಿರಾ?

ನಾನು ಬಾಬಾ ಹತ್ತಿರ ಹೋದ ಮೇಲೆ ವೈರಾಗ್ಯ ಕಲಿತು ಕೊಳ್ಳಲಿಲ್ಲ. ವೈರಾಗ್ಯದ ಮೊಳಕೆ ನನ್ನಲ್ಲಿ ಮೊದಲೇ ಇದ್ದದ್ದರಿಂದ ಬಾಬಾ ಅವರ ಸನ್ನಿಧಿಯ ಲಾಭ ನನಗೆ ದೊರಕಿತು. ಅವರ ಆಶ್ರಯದಲ್ಲಿ ಅದು ಈಗ ವೃದ್ಧಿಯಾಗುತ್ತಿದೆ. ಪರವನ್ನು ಬಿಡದ ಹಾಗೆ ಇಹದಲ್ಲಿ ನೆಮ್ಮದಿಯಿಂದ ಬದುಕುವುದು ಹೇಗೆ ಎಂಬುದನ್ನು ಸ್ವಾಮಿ ಬೋಧಿಸುತ್ತಿದ್ದಾರೆ. ಅವರ ಬೋಧೆ ನನ್ನ ಮನಸ್ಸನ್ನು ಹಿಡಿದಿದೆ, ನನ್ನ ಹೃದಯವನ್ನು ಹಿಡಿದಿದೆ. ಆದ್ದರಿಂದಲೇ ನನ್ನ ಇತ್ತೀಚಿನ ಬರವಣಿಗೆಗಳಲ್ಲಿ ಈ ಭಾವನೆ ಹಾಸಾಗಿ ಹೊಕ್ಕಾಗಿ ನೆಯ್ದುಕೊಂಡಿದೆ.

ನೀವು ಈಚೀಚೆಗೆ ಮಾತುಮಾತಿಗೂ ದೇವರು, ದೇವರು ಎನ್ನುತ್ತೀರಿ. ದೇವರು ಇದ್ದಾನೆ ಎಂದು ಪ್ರಾಮಾಣಿಕವಾಗಿ ನಂಬುತ್ತೀರಾ?

ದೇವರ ವಿಷಯವನ್ನು ನಾನು ಈಚೀಚಿಗೆ ಆಡುತ್ತಿಲ್ಲ. ೧೯೩೦ರಷ್ಟು ಹಿಂದೆಯೇ ನಾನು ಇದನ್ನು ಕುರಿತು ಬರೆದಿದ್ದೇನೆ. ನನ್ನ 'ರತ್ನನ ಪದಗಳು' ನೋಡಿ. ದೇವರು ಇದ್ದಾನೆ ಎಂಬ ಆ

ನಂಬಿಕೆ ಈಚಿನ ೪೦ ವರ್ಷಗಳಲ್ಲಿ ದೃಢವಾಗಿದೆ. ನಾನು ಓದಿರುವ ಸಮ್ಯಕ್‌ಸಾಹಿತ್ಯ, ನನಗೆ ಲಭಿಸಿರುವ ಸತ್‌ಸಂಗ, ನನಗೆ ಆಗಿರುವ ಸದನುಭವ—ಇವೆಲ್ಲವೂ ದೇವರ ಅಸ್ತಿತ್ವವನ್ನು ನನಗೆ ಸಾರಿ ತೋರಿವೆ. ಇಲ್ಲಿಗೆ, ದೇವರನ್ನು ಸ್ಮರಿಸಿ, ಈ ಸಂದರ್ಶನವನ್ನು ಮುಗಿಸೋಣವಾ?

"ಆಗಬಹುದು. ತುಂಬ ಉಪಕಾರ ಆಯಿತು. ನಮಸ್ಕಾರ'.

(ಹುಬ್ಬಳ್ಳಿಯಿಂದ ಹೊರಡುವ 'ವಿಶಾಲ ಕರ್ನಾಟಕ'ದ 'ದೀಪಾವಳಿ ವಿಶೇಷಾಂಕ'ದಲ್ಲಿ ಇದು ಕೆಲವು ಬದಲಾವಣೆಗಳೊಂದಿಗೆ ಪ್ರಕಟವಾಯಿತು. ಇದು ಅವರ ಪೂರ್ಣಪಾಠ.)

◆ ಡಿ.ವಿ.ಜಿ. ಅವರ ಅಗ್ರಪ್ರಜ್ಞೆ ◆

ಒಂದು ಸಲ ಕೈಲಾಸಂ—'ಗುಡ್ ಓಲ್ಡ್ ಗಾಡ್ ವಿಲ್ಲಿಂಗ್ ಹೇಗಿದ್ದಾರೆ, ಜಿ.ಪಿ.?' ಎಂದು ಕೇಳಿದರು.

ಅವರು ಕೇಳಿದ್ದು ಅರ್ಥವಾಗದೆ, 'ಯಾರು, ಸರ್?' ಎಂದೆ.

'ಇನ್ ಯಾರು? ಗಾಡ್ ವಿಲ್ಲಿಂಗ್ ಗುಂಡಪ್ಪ! ಡಿವಿಜಿ!' ಎಂದರು ಕೈಲಾಸಂ

'ಚೆನ್ನಾಗಿದ್ದಾರೆ' ಎಂದೆ. ಆದರೆ, ಕೈಲಾಸಂ ಹೇಳಿದ 'ಗಾಡ್ ವಿಲ್ಲಿಂಗ್' ಬಾಬ್ತು ಅರ್ಥವಾಗಲಿಲ್ಲ.

ಇನ್ನೊಂದೆರಡು ಸಲ ಅವರು ಹೀಗೇ ಹೇಳಿದಾಗ, ಧೈರ್ಯ ಮಾಡಿ ಅವರನ್ನು ಕೇಳಿಯೇಬಿಟ್ಟೆ: 'ಗಾಡ್ ವಿಲ್ಲಿಂಗ್ ಗುಂಡಪ್ಪ ಅಂತೀರಲ್ಲಾ, ಅದು ಯಾಕೆ?' ಅಂತ.

'ಅಯ್ಯೋ! ನೀನು ಡಿಕ್ಷ್‌ನರೀನೇ ನೋಡೋಲ್ವೆ, ಮಗು? ಮನೇಲಿ ಹೋಗಿ ನೋಡು, ಡಿ.ವಿ. ಅಂದರೆ ಏನು ಅಂತ'.

ಮನೆಗೆ ಬಂದು ನೋಡಿದೆ. "ಡಿ.ವಿ. ಎಂದರೆ Deo Volente, ಎಂದರೆ God willing" ಎಂದು ಡಿಕ್ಷ್‌ನರಿ ಹೇಳಿತು.

ಡಿ.ವಿ.ಜಿ. ಅವರ ಮಾತುಗಳನ್ನೂ ಬರಹಗಳನ್ನೂ ಜ್ಞಾಪಿಸಿ ಕೊಂಡೆ. ಕೈಲಾಸಂ ಹೇಳಿದ್ದು ಅರ್ಥವಾಯಿತು. ಗುಂಡಪ್ಪನವರ

ಇನಿಷಿಯಲ್ಸ್ ಎಷ್ಟು ಉಚಿತ, ಎಷ್ಟು ಭಾವಪೂರ್ಣ ಎಂಬುದರ ಅರಿವಾಯಿತು.

ದೇವರೆಲ್ಲಿ ?

ಮುಖತಃ ಗುಂಡಪ್ಪನವರ ಪರಿಚಯವಾಗುವುದಕ್ಕೆ ೫-೬ ವರ್ಷ ಮೊದಲೇ ನನಗೆ ಅವರ ಕೃತಿಗಳ ಪರಿಚಯವಾಯಿತು. 'ವಸಂತ ಕುಸುಮಾಂಜಲಿ'ಯೊಳಗಿನ ಕವನಕ್ಕೆ ನಾನು ಆಗ ಮಾರುಹೋದೆ.

ಆ ಪದ್ಯ ಹೀಗಿದೆ:—

ಮೀನೊಂದು ವಾರಿಧಿಯೊ-
ಳಾನಂದದಿಂದಿರುತ
ತಾನೊಂದು ದಿನಮೆಂದಿತಚ್ಚರಿಯೊಳು|
ನಾನಂಬುಧಿಯ ವರ್ತ-
ಮಾನವನು ಕೇಳಿರ್ಪೆ-
ನಾ ನೀರರಾಶಿಯನು ಕಾಣ್ಬುದೆಂತು||

ಖಗಮೊಂದದೊಂದು ದಿನ
ಗಗನದೊಳ್ ಪಾರುತಲಿ
ಮಿಗೆ ಸಂತಸಂದಳೆದು ಪೇಳ್ದುದಿಂತು|
ಜಗದಿ ಮಾರುತನೆ ಜೀ-
ವಿಗಳ ಬದುಕಿಪನೆಂದು
ಬಗೆದಿರ್ಪರವರನಾಂ ಕಾಣ್ಬುದೆಂತು||

ನರನುಮಂತೆಯೆ ಸತತ-
ಮಿರುತಲಾ ಪರಮನೊಳೆ
ಪರಮಾತ್ಮನಿರ್ಪೆಡೆಯ ತಿಳಿಯದಿಹನು|

ಪರಿಕಿಸಿದೊಡಾ ಪರಾ-
ತ್ಪರನೆತ್ತಲೆತ್ತಲುಂ
ಮೆರೆಯುತಿಹನೆನಿತೆನಿತೊ ರೂಪಗಳೊಳು||

ಇದರ 'ಮೂಲ. ವಿಸ್ಮೃತ' ಎಂದು ಡಿ. ವಿ. ಜಿ. ಒಪ್ಪಿಕೊಂಡಿರುವರಾದರೂ, ಇದರೊಳಗಿನ ಸತ್ಯವು ಅವರ ಚಿತ್ತದಿಂದ ಎಂದೂ ಮರೆಯಾಗಿ ಹೋಗಲಿಲ್ಲ. ನಿವೇದನ, ಅಂತಃಪುರಗೀತೆ, ಶ್ರೀರಾಮ ಪರೀಕ್ಷಣಂ ಮೊದಲಾದ ಪದ್ಯಬಂಧಗಳಲ್ಲಾಗಲಿ ಬಾಳಿಗೊಂದು ನಂಬಿಕೆ, ಸಂಸ್ಕೃತಿ ಮೊದಲಾದ ಗದ್ಯಪ್ರಬಂಧಗಳಲ್ಲಾಗಲಿ 'ದೇವರು ಇದ್ದಾನೆ' ಎಂಬ ಈ ಪ್ರಜ್ಞೆ ನವನವೋನ್ಮೇಷಶಾಲಿನಿಯಾಗಿ 'ಕಾವೇರಿ ಕಾವ್ಯಾಶ್ರಯೆ'ಯಾದ ಹಾಗೆ, ಇವರ ಮನೋವಾಕ್ಕಾಯ ಕರ್ಮಗಳಿಗೆಲ್ಲ ಆದಿಪ್ರಜ್ಞೆಯಾಗಿರುವುದು ಕಂಡು ಬರುತ್ತದೆ.

ಕನ್ನಡದ ಭಾಗ್ಯ

ಮೂರು ವರ್ಷಗಳ ಹಿಂದೆ ಡಿವಿಜಿ ದೇಹದ ಸ್ವಾಸ್ಥ್ಯ ತಪ್ಪಿ ಮಾರ್ಥಾಸ್ ಆಸ್ಪತ್ರೆಯಲ್ಲಿದ್ದರು. ಅವರ ಸ್ಥಿತಿ ಈಗಲೋ ಆಗಲೋ ಎನ್ನುವಂತಿತ್ತು. ಕನ್ನಡದ ಭಾಗ್ಯದಿಂದ ಚೇತರಿಸಿಕೊಂಡರು. ಆ ಕಾಲದಲ್ಲಿ ಶ್ರೀ ವೇದಾಂತ ದೇಶಿಕರ ತಿರುನಕ್ಷತ್ರ ಬಂತು. ಆ ವೇಳೆಗೆ ದೇಶಿಕರ 'ವೈರಾಗ್ಯ ಪಂಚಕ'ನನ್ನಿಂದ ಅನುವಾದವಾಗಿ ಪ್ರಕಟವಾಗುವುದಿತ್ತು. ಅದರಲ್ಲಿ ಡಿವಿಜಿ ಅವರು ಸುಮಾರು ೪೦ ವರ್ಷಗಳ ಹಿಂದೆ ಕನ್ನಡಿಸಿದ್ದ ದೇಶಿಕರ 'ಅಭೀತಿಸ್ತವ'ದ ಪದ್ಯಗಳನ್ನೂ ಸೇರಿಸಿಕೊಂಡಿದ್ದೆ. 'ಈ ಸಂಗತಿಯನ್ನು ತಿಳಿಸಿದರೆ ಅವರಿಗೆ ಸಂತೋಷವಾಗುತ್ತದೆ' ಎಂದುಕೊಂಡು

ಆಸ್ಪತ್ರೆಗೆ ಹೋದೆ.

ನಾನು ಅಲ್ಲಿಗೆ ಹೋದ ವೇಳೆಯಲ್ಲಿ ಡಿ.ವಿ.ಜಿ. ಅವರ ಮಕ್ಕಳಾದ ಶ್ರೀ ಸ್ವಾಮಿ ತಂದೆ ಬರೆಯಿಸುತ್ತಿದ್ದ ಏನನ್ನೋ ಬರೆದುಕೊಳ್ಳುತ್ತಿದ್ದರು. ನನ್ನ ಮುಖ ಕಂಡೊಡನೆ ನಾನು ಬಂದಿರುವುದನ್ನು ತಂದೆಗೆ ತಿಳಿಸಿದರು. ಡಿ.ವಿ.ಜಿ. ಬರಸುತ್ತಿದ್ದುದನ್ನು ನಿಲ್ಲಿಸಿ ಒಳಕ್ಕೆ ಬರಮಾಡಿಕೊಂಡರು. ಸ್ವಾಮಿ, ಸ್ವಲ್ಪ ವಿಶ್ರಾಂತಿ ದೊರಕಿತೆಂದು ಹೊರಗೆ ಹೋದರು.

ಡಿವಿಜಿ ಅವರ ಕೈಯನ್ನು ಹಿಡಿದುಕೊಂಡು ಕುಳಿತೆ. ತಾವು ಅನಾರೋಗ್ಯದಿಂದ ಮೃತ್ಯುಶಯ್ಯೆಯಲ್ಲಿ ಮಲಗಿದ್ದರೂ, ಮಾತು ನಾಲಿಗೆಗೆ ಸ್ಪಷ್ಟವಾಗಿ ಬಾರದಿದ್ದರೂ, ನನ್ನ ಯೋಗಕ್ಷೇಮವನ್ನು ವಿಚಾರಿಸಿದರು. ದೂರದ ಊರಿನಲ್ಲಿರುವ ನನ್ನ ಮಗನ ಕ್ಷೇಮಸಮಾಚಾರಗಳನ್ನು ಕೇಳಿದರು.

ಅವರನ್ನು ವೃಥಾ ಆಯಾಸಕ್ಕೆ ಗುರಿಮಾಡಬಾರದೆಂದು ನಾನು ಮೆಲ್ಲಗೆ 'ಸಾರ್, ಇವೊತ್ತು ವೇದಾಂತ ದೇಶಿಕರ...' ಎಂದು ಹೇಳುತ್ತಿರುವಾಗಲೇ ಗುಂಡಪ್ಪನವರು 'ದೇಶಿಕರು! ಮಹಾನುಭಾವರು!' ಎಂದು ತೊದಲಿದರು. ಅವರ ಕಣ್ಣುಗಳಿಂದ ಕಣ್ಣೀರು ಧಾರಾಕಾರವಾಗಿ ಪ್ರವಹಿಸಿತು. ಕೊಂಚ ಹೊತ್ತಾದ ಮೇಲೆ, 'ಮರುನ್ಮರೀಚಿಚಂದ್ರಮರ್' ಎಂದು ಅಭೀತಿಸ್ತವದ ವೃತ್ತಗಳನ್ನು ಜ್ಞಾಪಿಸಿಕೊಂಡರು. 'ಮನೆಗೆ ಹೋದಮೇಲೆ ವಿದ್ಯಾರಣ್ಯ ಸ್ವಾಮಿಗಳ ಜೀವನ ಚರಿತ್ರೆಯನ್ನು ಮುಗಿಸಬೇಕು' ಎಂದರು.

ದೇಹ ಇಂತಹ ಅವಸ್ಥೆಯಲ್ಲಿ ಬಂಧನಕ್ಕೆ ಒಳಗಾಗಿದ್ದರೂ,

ಅವರ ಚಿತ್ತ ಯಾವ ಮೇಲುಮಟ್ಟದಲ್ಲಿ ವಿಹರಿಸುತ್ತಿತ್ತು ಎಂಬುದು ಅವರ ದೈವೀ ಪ್ರಜ್ಞೆಗೆ ಸಾಕ್ಷಿಯಾಗಿತ್ತು ಜೊತೆಯಲ್ಲಿಯೇ 'ಹೀಗೆ ಮಾತಾಡಿ ಆಯಾಸವಾದರೆ ಏನಪ್ಪಾ ಗತಿ?' ಎಂದು ಆತಂಕವೂ ಆಯಿತು. ಅಷ್ಟು ಹೊತ್ತಿಗೆ ಸ್ವಾಮಿಯವರ ಮುಖ ಕಾಣಿಸಿತು. ತಂದೆಯನ್ನು ಮಗನ ವಶಕ್ಕೆ ಒಪ್ಪಿಸಿ ನಾನು ಜಾರಿಕೊಂಡೆ.

ದೇವರು ಇದ್ದಾನೆಯೇ?

ಅವರು ಏನು ಬರಸುತ್ತಿದ್ದರು ಎಂಬುದನ್ನು ಕುರಿತು ನನಗೆ ಕುತೂಹಲವಿದ್ದರೂ ಆಗ ನಾನು ಕೇಳಲಿಲ್ಲ. ಅನಂತರ, ಅವರು ಬರಸುತ್ತಿದ್ದುದು ಪುಸ್ತಕ ರೂಪದಲ್ಲಿ ಪ್ರಕಟವಾದ ಮೇಲೆ ಗೊತ್ತಾಯಿತು. ಅವರು ಬರಸುತ್ತಿದ್ದುದು ದೇವರನ್ನು ಕುರಿತು ಒಂದು ವಿಚಾರಲಹರಿ. ದೇವರು ಇದ್ದಾನೆಯೇ? ದೇವರು ಎಂಬ ವಸ್ತು ನಿಜವಾಗಿ ಉಂಟೆ? ದೇವರು ಎಂದರೆ ಏನು? ಅದರಿಂದ ನಮಗೆ ಆಗಬೇಕಾದ್ದೇನು? ಈ ಜಗತ್ತು ಏಕೆ ಸೃಷ್ಟಿಯಾಯಿತು ? ಇದರ ವ್ಯವಸ್ಥೆಯ ತತ್ತ್ವವೇನು? ನಾನಾ ಮತಧರ್ಮಗಳ ಮೂಲತತ್ವವೇನು? ಇವೇ ಮೊದಲಾದ ಗಹನವಾದ ಪ್ರಶ್ನೆಗಳಿಗೆ ಎಲ್ಲರಿಗೂ ಅರ್ಥವಾಗುವ ಹಾಗೆ ಸಮಾಧಾನ ಹೇಳಲು ಇಲ್ಲಿ ಯತ್ನಿಸಿದ್ದಾರೆ. ತತ್ವಗಳನ್ನು ಕುರಿತು ವಿಚಾರಪರವಾದ ಇಲ್ಲಿನ ವಾದವನ್ನು ಸ್ಥಿರಪಡಿಸುವ ಆರ್ಷವಚನಗಳನ್ನು ಎತ್ತಿ ಹೇಳಿ, ಕೊನೆಗೆ ಸಿದ್ಧಾಂತವನ್ನು ಮಂಡಿಸಿದ್ದಾರೆ.

ಈ ಪ್ರಬಂಧವು ೩೨ ಪುಟಗಳ ಗಾತ್ರದಿಂದ 'ಕಿರು' ಎಂಬ ವರ್ಗಕ್ಕೆ ಸೇರಬಹುದಾದರೂ ಇರುವ ಸ್ವಲ್ಪಾವಕಾಶದಲ್ಲಿ ಎಷ್ಟು

ವಿಷಯಗಳನ್ನು ಅಡಗಿಸಿದ್ದಾರೆಂಬುದನ್ನು ಗಮನಿಸಿದರೆ ಆಶ್ಚರ್ಯ ವಾಗುತ್ತದೆ. ಪಂಪನು 'ಹಿತಮಿತ ವಚನ' ಎಂದು ಯಾವುದನ್ನು ಕರೆದನೋ ಆ ಮಹದ್ವರ್ಗಕ್ಕೆ ಸೇರುತ್ತದೆ, ಈ **'ದೇವರು'** ಎಂಬ ಪುಸ್ತಕ.

ಭೀಷ್ಮರು ಶರಶಯನದಿಂದ ಪಾಂಡವರಿಗೆ ಧರ್ಮವನ್ನು ಕುರಿತು ಅನುಶಾಸನ ಮಾಡಿದರು. ಭಗವಂತನಾದ ಬುದ್ಧನು ತಾನು ಪರಿನಿರ್ವಾಣವನ್ನು ಪಡೆಯುವ ಸ್ವಲ್ಪ ಸಮಯ ಮುಂಚೆ ಕಡೆಯ ಶ್ರಾವಕನಾದ ಸುಭದ್ರನ ಸಂದೇಹಗಳಿಗೆ ಸಮಾಧಾನ ಹೇಳಿದರು. ಈಗ, ನಮಗೆ ಹತ್ತಿರದವರಾದ ಡಿ.ವಿ.ಜಿ. ಅವರಿಂದ 'ದೇವರು' ಎಂಬ ವಿಚಾರಲಹರಿ ನಮಗೆ ಲಭಿಸಿತು.

ಮೂರುವರ್ಷಗಳ ಹಿಂದೆ ಆಸ್ಪತ್ರೆಯಿಂದ ಮನೆಗೆ ಬಂದ ಮೇಲೆ ಗುಂಡಪ್ಪನವರ ಆರೋಗ್ಯ ಮೊದಲಿನಂತೆ ಆಗಲೇ ಇಲ್ಲ. ದೇಹದ ಶಕ್ತಿಗಳು ವಯೋಧರ್ಮದಿಂದ ಕುಂದುತ್ತಹೋದರೂ ಅವರ ಉಲ್ಲಾಸ ಉತ್ಸಾಹಗಳಿಗೂ ಪ್ರಖರವಾದ ಜ್ಞಾಪಕಶಕ್ತಿ ಮೇಧಾಶಕ್ತಿಗಳೂ ಬಹುಮಟ್ಟಿಗೆ ಎಂದಿನಂತೆಯೇ ಇದ್ದುವು.

ಡಿವಿಜಿಯವರು ಕಾಲವಾಗುವುದಕ್ಕೆ ಕೆಲವು ತಿಂಗಳು ಮೊದಲು, 'ದೇವರು ಇದ್ದಾನೆ' ಎಂಬುದಕ್ಕೆ ಇನ್ನೊಂದು ಕೊನೇ ಸಾಕ್ಷಿಯನ್ನು ಪ್ರತಿಸ್ಥಾಪಿಸುವ ಹಾಗೆ **'ಋತ, ಸತ್ಯ, ಧರ್ಮ'** ಇವುಗಳ ಅನ್ಯೋನ್ಯ ಸಂಬಂಧಗಳನ್ನು ಸ್ಪಷ್ಟಪಡಿಸುವ ಒಂದು ಪುಸ್ತಕವನ್ನು ಕೊಟ್ಟರು. ಇದು ಡಿವಿಜಿ ಅವರ ಚರಮಕೃತಿ.

'ದೇವರು ಎಂಬ ಮಹಾಚೈತನ್ಯದಲ್ಲಿರುವ ಮೂಲ ನಂಬಿಕೆಯೇ ಋತ. ಋತದಿಂದ ಸತ್ಯದ ವಿವೇಚನೆ. ಸತ್ಯದ

ಅನುಕರಣೆಯಿಂದ ಹೊರಡುವ ಕ್ರಿಯೆಯೇ ಧರ್ಮ. ಆತ್ಮೋದ್ಧಾರಕ್ಕೂ ಜಗತ್ತಿನ ಹಿತಸಾಧನೆಗೂ ಸಾಧಕವಾದ ವರ್ತನೆಯೇ ಧರ್ಮ'.

ಡಿವಿಜಿ ಅವರ 'ದೇವರು' ಪುಸ್ತಕವನ್ನು ಓದಿದವರು ಈ ಕೃತಿಯನ್ನೂ ಅಗತ್ಯವಾಗಿ ಓದಬೇಕಾದ್ದು. ಹೆಚ್ಚು ವಿವರಗಳನ್ನು ನೋಡಬೇಕೆನ್ನುವವರು ಅವರ **'ಶ್ರೀಮದ್ಭಗ ವದ್ಗೀತಾ ತಾತ್ಪರ್ಯ'** ಮೊದಲಾದ ಗ್ರಂಥಗಳನ್ನು ನೋಡಬಹುದು.

ಶ್ರೀಮಾನ್ ಡಿವಿಜಿ ಅವರು ದೇವರನ್ನು ಕುರಿತು ತಮ್ಮ ಶ್ರದ್ಧಾ ವಿಶ್ವಾಸಗಳಿಂದಲೂ ಜ್ಞಾನವೈರಾಗ್ಯಗಳಿಂದಲೂ 'ದಿವಿಜ'' ವರ್ಗಕ್ಕೆ ಸೇರಿದವರು. ತಾವು ಮಾಡಿ ತೋರಿಸಿರುವ ಘನವಾದ ಕೃತಿಗಳ ಬಾಹುಳ್ಯದಿಂದ **"ದಿತಿಜ"**(Titan) ವರ್ಗಕ್ಕೆ ಸೇರಿದವರು.

"ದೇವರು ಇದ್ದಾನೆ" ಎಂಬುದು ಡಿವಿಜಿ ಅವರಿಗೆ ಆದಿಪ್ರಜ್ಞೆ, ಮೂಲ ಪ್ರಜ್ಞೆ ಮಾತ್ರವಲ್ಲ; ಅಗ್ರಪ್ರಜ್ಞೆ ಅಷ್ಟೇ ಅಲ್ಲ; ಅದು ಅವರಿಗೆ ಆಮೂಲಾಗ್ರವಾದ ಅಂತ್ಯಪ್ರಜ್ಞೆಯೂ ಆಗಿತ್ತು.

ಶ್ರೀ ಸತ್ಯಸಾಯಿ ಪವಾಡ

ಸುಮಾರು ೨೫ ವರ್ಷಗಳ ಕಾಲ ಒಂದೇ ಸಮನಾಗಿ 'ವಿದೂಷಕ'ನ ಪಾತ್ರವನ್ನು ಸರ್ವಸಮರ್ಪಕವಾಗಿ ನಿರ್ವಹಿಸುತ್ತಿದ್ದವರು ಅನಂತರ ಸುಮಾರು ೨೦ ವರ್ಷಗಳಿಗೆ ಮೇಲ್ಪಟ್ಟು, ವೈರಾಗ್ಯಪೂರ್ಣವಾದ 'ವಿದ್ಯಾರಣ್ಯ'ರ ಪಾತ್ರವನ್ನು ಅಷ್ಟೇ ಸಮರ್ಪಕವಾಗಿ ನಿರ್ವಹಿಸುತ್ತಿದ್ದಾರೆ ಎಂದರೆ— ಇದೂ ಒಂದು ಪವಾಡವೇ ಅಲ್ಲವೆ?

ಸ್ವಾಮಿಯೇ ಹೇಳುವ ಹಾಗೆ, ಅವರ ಪವಾಡಗಳೂ ಯಾವುವೂ 'ಪ್ರದರ್ಶನಕ್ಕಾಗಿ ಅಲ್ಲ; ಅವು ಎಲ್ಲವೂ 'ನಿದರ್ಶನ' ಕ್ಕಾಗಿ. ತಮ್ಮ ಹತ್ತಿರ ಬಂದವರನ್ನು ಸ್ವಾಮಿ ಹೇಗೆTransform ಮಾಡುತ್ತಾರೆ ಎಂಬುದಕ್ಕೆ ಶ್ರೀಮಾನ್ ನಾ. ಕಸ್ತೂರಿ ಒಂದು ಜೀವಂತ ಉದಾಹರಣೆ.

ಕಸ್ತೂರಿಯವರು ತಾವು ಬರೆದ ಕಾದಂಬರಿಗಳಲ್ಲೂ ನಾಟಕಗಳಲ್ಲೂ ಹರಟೆಗಳಲ್ಲೂ ಅಣಕವಾಡುಗಳಲ್ಲೂ ಅದೆಷ್ಟು ಕುಹಕ, ಕುಚೋದ್ಯ ಕುಯುಕ್ತಿ, ವ್ಯಂಗ್ಯ, ವಿಡಂಬನೆ, ಮೂದಲೆ, ಅಪಹಾಸ್ಯ, ಲೇವಡಿಗಳನ್ನು ಪ್ರಯೋಗಿಸಿದ್ದರು ಎಂಬುದನ್ನು ಓದಿ ತಿಳಿದವರು ಈಗಿನ ಕಸ್ತೂರಿಯನ್ನು ಕಂಡರೆ, ಅವರ ಮಾತು ಕೇಳಿದರೆ, 'ಇವರು ಅವರೇ ಹೌದೆ? ಎಂದು ಆಶ್ಚರ್ಯಪಡುವ ಹಾಗಾಗುತ್ತದೆ.

ನಾಗಚಂದ್ರ ಕವಿ ಒಂದು ಕಡೆ'ತಣ್ಪಂ ಹುತಾಶನಂ ಮಂತ್ರ ಶಕ್ತಿಯಿಂ ತಾಳ್ದುವವೋಲ್' ಎಂದು ಉಪಮಾನ ಕೊಡುತ್ತಾನೆ. ಕಸ್ತೂರಿ ಅವರಾದರೂ ಬಾಬಾ ಅವರ ಸನ್ನಿಧಿಯಲ್ಲಿ, ಅವರ ಸಾಮೀಪ್ಯದಿಂದ 'ನ ಅಲ್ಪೇ ಸುಖ ಮಸ್ತಿ' ಎಂಬುದನ್ನು ಕಂಡು ಕೊಂಡು ಸಂಪೂರ್ಣವಾಗಿ ಬದಲಾಗಿಹೋಗಿದ್ದಾರೆ. ಶ್ರೀ ಸತ್ಯ ಸಾಯಿಯೆಂಬ ಪ್ರಶಾಂತಿಸಾಗರದಲ್ಲಿ ಒಂದು ತುಂತುರಾಗಿ ಸೇರಿ ಹೋಗಿದ್ದಾರೆ!

"ಹಜಾಂ" ಬುದ್ಧಿ

"ಸರ್ವಶುಕ್ಲಾ" ಆದ ಸರಸ್ವತಿಯನ್ನು ಸಾತ್ವಿಕವಾಗಿ ಉಪಾಸನೆ ಮಾಡುವವರು ಕೂಡ ಒಮ್ಮೊಮ್ಮೆ ಎಡವಿಬೀಳುತ್ತಾರೆ. ಎಂದ ಮೇಲೆ, ಪರಮಾತ್ಮನನ್ನು ಪೆಗ್ಗಿನ ರೂಪದಲ್ಲಿ ಆವಾಹನೆ ಮಾಡಿಕೊಂಡು ಆವೇಶ ಹೊಂದುವವರ ಮುಖದಿಂದ ಯಾವ ಮಾತು ಬಂದರೂ ಆಶ್ಚರ್ಯಪಡಬೇಕಾದ್ದಿಲ್ಲ.

ಇಂಗ್ಲಿಷಿನಲ್ಲೂ ಸಂಸ್ಕೃತದಲ್ಲೂ ಘನಪಂಡಿತರಾದ ಆಧುನಿಕ ವಿದ್ವಾಂಸ ವಿಮರ್ಶಕರೊಬ್ಬರು ಕಾಳಿದಾಸನ ಅಭಿಜ್ಞಾನ ಶಾಕುಂತಲಕ್ಕೆ ವಿಸ್ತಾರವಾದ ವ್ಯಾಖ್ಯಾನವನ್ನು ಬರೆದಿದ್ದಾರೆ. ಅದರ ಆರನೇ ಆವೃತ್ತಿಯ ೪೦೦ನೇ ಪುಟದಲ್ಲಿ ಗಮನಾರ್ಹವಾದ ಒಂದು 'ವಿಮರ್ಶೆ' ಇದೆ.

ಪ್ರಕರಣ ಏನೆಂದರೆ: ನಾಲ್ಕನೇ ಅಂಕದಲ್ಲಿ ಕಣ್ವರು ಶಕುಂತಲೆಯನು ಸಂತೈಸುತ್ತಾ—'ಮಮ ವಿರಹಜಾಂ ನನ ತ್ವಂ ವತ್ಸೇ ಶುಚಂ ಗಣಯಿಷ್ಯಸಿ' ಎನ್ನುತ್ತಾರೆ. ಇದನ್ನು ಕುರಿತು ಆ ವಿಮರ್ಶಕರು ಹೇಳುತ್ತಾರೆ:—

"In ಮಮ ವಿರಹಜಾಂ a sensitive critic will detect a poetical defect called ಅಶ್ಲೀಲತ್ವಮ್ or vulgarity for the last two syllables of ವಿರಹಜಾಮ್

signify a barber.

‘ವಿರ-ಹಜಾಂ’ ಎಂದು ಓದಿಕೊಂಡವರಿಗೆ ‘ಹಜಾಂ’ ಪ್ರತ್ಯಕ್ಷವಾದ ಹಾಗೆ, ‘ವಿರಹ-ಜಾಮ್’ ಎಂದು ಓದಿಕೊಂಡವರಿಗೆ ‘Jam’ ಕೇಳಿ ಜೊಲ್ಲು ಸುರಿಯತೊಡಗಿದರೆ- ಕಾಳಿದಾಸನ ತಲೆಯ ಮೇಲೆ ಗೂಬೆ ಕೂರಿಸುವುದು ಯಾವ ನ್ಯಾಯ?

ಇಷ್ಟೆಲ್ಲ ಹೇಳುವುದರ ತಾತ್ಪರ್ಯವೇನೆಂದರೆ—

‘Poetry is not my dish’ ಎಂದು ಒಪ್ಪಿ ಕೊಳ್ಳುವ ಬೇಶ್ರೀ ಬೀಮಂಣನಂಥವರು ಕವನಗಳ ವಿಮರ್ಶೆಗೆ ಕೈಹಾಕ ಬಾರದು; ಕೈ ಹಾಕಿ, ಅವಲಕ್ಷಣ ಎನ್ನಿಸಿಕೋಬಾರದು.

ವಜ್ರದ ವರಿಸೆ

ಅತ್ತಸಾ ವ ಕತಂ ಪಾಪಂ
ಅತ್ತಜಂ ಅತ್ತಸಂಭವಂ
ಅಭಿಮಂಥತಿ ದುಮ್ಮೇಧಂ
ವಜಿರಂ ವಸ್ಮಮಯಂ ಮಣಿಂ

ತನ್ನಿಂದ ಆದ ಪಾಪ. ತನ್ನಲ್ಲಿ ಹುಟ್ಟಿದ್ದು,
ತನ್ನೊಳಗೆ ಚೆನ್ನಾಗಿ ಬೆಳೆದದ್ದು—
(ಪಾಪಿಯಾದ ಆ) ದುರ್ಬುದ್ಧಿಯನ್ನು
ಅರೆದುಹಾಕಿಬಿಡುತ್ತದೆ!
ಕಲ್ಲಿನಿಂದಾದ ಮಣಿಯನ್ನು ವಜ್ರವು
ಹೇಗೆ ಅರೆದುಹಾಕಿಬಿಡುತ್ತದೋ ಹಾಗೆ!

ಇದಕ್ಕೆ ಉದಾಹರಣೆ

"ನನ್ನ ನಿರ್ಭಯಾಗ್ರಫಿ"

೧ನೇ ಕಂತು	:	ಚಕ್ರವರ್ತಿ ವಜ್ರ
೨ನೇ ಕಂತು	:	ಕೊರವಂಜಿಯ ದಾರಿಯಲ್ಲಿ
೩ನೇ ಕಂತು	:	ಹಾಸ್ಯದ ಬಡಿಗೆ
೪ನೇ ಕಂತು	:	'ವಜ್ರ'ವಾದ 'ರತ್ನ'
೫ನೇ ಕಂತು	:	ಅನಕೃ ಮತ್ತು ನಾನು

ಜಿ. ಪಿ. ರಾಜರತ್ನಂ ಅಂತರ್ದರ್ಶನ - 5

ಅನಕೃ ಮತ್ತು ನಾನು

ಇದು

ಜಿ. ಪಿ. ರಾಜರತ್ನಂ ಅವರ

ನಿರ್ಭಯಾಗ್ರಫಿ

ಐದನೇ ಕಂತು

ಸಂಪಾದಕನ ಸಂತೋಷ

ಯಾವುದೋ ವಿಷಾದಕರವಾದ ಅಲ್ಪನಿಮಿತ್ತದಿಂದ ಶ್ರೀ ರಾಜರತ್ನಂ ಅವರ ನಿರ್ಭಯಾಗ್ರಫಿಯ ಕಂತುಗಳು ಕಾಣೆಸಿಕೊಂಡುವು. ಈ ಕಂತುಗಳ ಒಳಗಿನ ಹೊಸ ಹಾಸ್ಯದ ವೈಖರಿಯಿಂದ ನಮಗೆ ಸಂತೋಷವಾಯಿತಾದರೂ, ಈ ಪುಸ್ತಿಕೆಗಳ ಮಾರಾಟದಿಂದ ಬರುವ ಮೊತ್ತವು ಡಾಕ್ಟರ್ ಅ. ನ. ಕೃಷ್ಣರಾಯರ ಸ್ಮಾರಕ ನಿಧಿಗೆ ಸಲ್ಲುವುದೆಂಬುದನ್ನು ತಿಳಿಸಲು ಇನ್ನಷ್ಟು ಸಂತೋಷಪಡುತ್ತೇನೆ.

ಚಂದ್ರಕೀರ್ತಿ

ಶ್ರೀ ರಾಜರತ್ನಂ ಬಳಗದ ಪರವಾಗಿ

ಪುಸ್ತಕದ ಒಳಗೆ

ಡಾಕ್ಟರ್ ಅ.ನ.ಕೃ. ಅವರ ನೆನಪಿಗಾಗಿ ಒಂದು ಸಣ್ಣ ಸ್ಮಾರಕ

ಡಾಕ್ಟರ್ ಅ. ನ. ಕೃಷ್ಣರಾಯರು ಕನ್ನಡಕ್ಕಾಗಿ ಮಾಡಿದ ಬಗೆಬಗೆಯಾದ ಸೇವೆ ಅಪೂರ್ವವಾದದ್ದು. ಅವರು ಎಷ್ಟು ಒಳ್ಳೆಯ ಬರಹಗಾರರಾಗಿದ್ದರೋ ಅಷ್ಟೇ ಒಳ್ಳೆಯ ಮಾತುಗಾರರೂ ಆಗಿದ್ದರು. ಇಂಗ್ಲಿಷಿನಲ್ಲಾಗಲಿ, ಕನ್ನಡದಲ್ಲಾಗಲಿ ಅವರು ಮಾಡುತ್ತಿದ್ದ ಭಾಷಣಗಳನ್ನು ಕೇಳಿದವರು ಯಾರೂ ಅವರ ವಾಗ್ಮಿತೆಯನ್ನು ಮರೆಯಲಾರರು.

ಉತ್ತಮ ವಾಗ್ಮಿಯಾಗಿದ್ದ ಅನಕೃ ಅವರನ್ನು ಸ್ಮರಿಸಿಕೊಳ್ಳುವುದಕ್ಕಾಗಿ ಒಂದು ಸಣ್ಣ ಸ್ಮಾರಕವನ್ನು ಏರ್ಪಡಿಸಬೇಕೆಂದು ಯೋಚನೆ ಬಂದಾಗ, ಆ ಸ್ಮಾರಕವನ್ನು ನಡಸಿಕೊಂಡು ಹೋಗುವ ಹೊಣೆಯನ್ನು ಬೆಂಗಳೂರಿನ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಗೆ ಒಪ್ಪಿಸಬೇಕೆಂದು ತೋರಿತು. ಡಾಕ್ಟರ್ ಡಿವಿಜಿ ಅವರು ನನ್ನ ಸೂಚನೆಯನ್ನು ಒಪ್ಪಿಕೊಂಡರು.

ಅನಕೃ ಅವರಿಗೆ ಸಾರ್ವಜನಿಕ ವಿಚಾರಗಳಲ್ಲಿ ಆಸಕ್ತಿಯಿತ್ತು. ಅವರಿಗೆ ಡಿವಿಜಿ ಅವರಲ್ಲಿ ಗೌರವವಿತ್ತು. ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯ ಬಗ್ಗೆ ಆದರವಿತ್ತು. ನಾಡಿನ ಯುವಕರು ಚೆನ್ನಾಗಿ ಬೆಳೆಯಬೇಕೆಂಬ ಹಂಬಲವಿತ್ತು. ಆದ್ದರಿಂದ, ಅವರ ಹೆಸರಿನ ಸ್ಮಾರಕವನ್ನು ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯಲ್ಲಿ ಏರ್ಪಡಿಸುವುದು ಸೂಕ್ತವೆಂದು ತೋರಿತು.

ಸಾರ್ವಜನಿಕ ವಿಚಾರಗಳನ್ನು ಕುರಿತು, ಕಾಲೇಜ್ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗಾಗಿ ವರ್ಷಕ್ಕೊಮ್ಮೆ ಭಾಷಣ ಸ್ಪರ್ಧೆಯನ್ನು ಏರ್ಪಡಿಸುವುದು; ಉತ್ತಮರಾದ ವಾಗ್ಮಿಗಳಿಗೆ "ಅನಕೃ ಪಾರಿ **ತೋಷಿಕ**"ಗಳನ್ನು ಕೊಡುವುದು; ಇದಕ್ಕಾಗಿ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯಲ್ಲಿ ಒಂದು ದತ್ತಿಯನ್ನು ಸ್ಥಾಪಿಸು ವುದು—ಇದು ಒಂದು ಸಣ್ಣ ಯೋಜನೆ.

ಇದಕ್ಕಾಗಿ ಈಗಾಗಲೇ ಐದು ನೂರು ರೂಪಾಯಿಗಳನ್ನು ಸಂಗ್ರಹಿಸಿ ಗೋಖಲೆ ಸಂಸ್ಥೆಗೆ ಕೊಟ್ಟಾಗಿದೆ. ಈ ವರ್ಷದೊಳಗಾಗಿ ಇನ್ನೊಂದು 500 ರೂಪಾಯಿಗಳನ್ನಾದರೂ ಸೇರಿಸಿ, ಪುದುವಟ್ಟನ್ನು ಒಂದು ಸಾವಿರಕ್ಕೆ ತರಬೇಕೆಂದು ನಮ್ಮ ಆಸೆ. ಇದನ್ನು ಇನ್ನೂ ವೃದ್ಧಿಪಡಿಸುವುದಕ್ಕೆ ಮಾಡಿಕೊಂಡಿರುವ ಯೋಜನೆಯನ್ನು ಮುಂದಿನ ವರ್ಷ ತಿಳಿಸಲಾಗುವುದು.

ಸದ್ಯಃ ನಮಗೆ ಬೇಕಾಗಿರುವ 500 ರೂಪಾಯಿಗಳಿಗಾಗಿ, ನನ್ನದೊಂದು ಸಣ್ಣ ಪ್ರಾರ್ಥನೆ. ಏನೆಂದರೆ—

ನಾಲ್ಕೂವರೆ ವರ್ಷಗಳ ಹಿಂದೆ ಅನಕೃ ತೀರಿಕೊಂಡಾಗ ನಾನು ಹನ್ನೆರಡು ತಿಂಗಳು ಹನ್ನೆರಡು ಅನಕೃ ಸ್ಮಾರಕೋಪನ್ಯಾಸಗಳನ್ನು ಮಾಡಿ, ಹನ್ನೆರಡು ಅನಕೃ ಸ್ಮಾರಕ ಪುಸ್ತಿಕೆಗಳನ್ನು ಪ್ರಕಟಿಸಿ, ಅದರ ಕೆಲವು ಪ್ರತಿಗಳು ಇನ್ನೂ ಉಳಿದಿವೆ. ಅನಕೃ ಅವರಲ್ಲಿಯೂ ನನ್ನಲ್ಲಿಯೂ ವಿಶ್ವಾಸವುಳ್ಳವರು ಒಂದು ನೂರು ಮಿತ್ರರು ತಲಾ 5 ರೂ. ಗಳಷ್ಟು ಆ ಪುಸ್ತಕಗಳನ್ನು ಕೊಂಡುಕೊಂಡರೆ, ನಮಗೆ ಬೇಕಾದ 500 ರೂ. ಬೇಗ ಕೈಗೂಡುತ್ತದೆ.

ಸ್ನೇಹಿತರು ಈ ಕಾರ್ಯದಲ್ಲಿ ದಯಮಾಡಿ ಸಹಕರಿಸಬೇಕೆಂದು

ಕೇಳಿಕೊಳ್ಳುತ್ತೇನೆ.

1. ಸತ್ತರೂ ಸಾಯದ ಕೈಲಾಸಂ
2. ಗುಂಡೂಪಂಡಿತನ ಕನಸು
3. ಚಕ್ರವರ್ತಿವಜ್ರ
4. ಕೊರವಂಜಿಯ ದಾರಿಯಲ್ಲಿ
5. ಹಾಸ್ಯದ ಬಡಿಗೆ
6. ಭ್ರಮರನ ರೆಕ್ಕೆ

ಒಟ್ಟು ಬೆಲೆ 5 ರೂಪಾಯಿ

ಅಥವಾ

ಡಾಕ್ಟರ್ ಅನಕೃ ಅವರ ನೆನಪಿಗಾಗಿ ಪ್ರಕಟವಾದ

"ಸ್ನೇಹದ ದೀಪ"

ಎಂಬ ಸಂಯುಕ್ತ ಸಂಪುಟ ಬೆಲೆ 10 ರೂಪಾಯಿ

ಅರಿಕೆ

'ಸಮಶೀಲವ್ಯಸನೇಷು ಸಖ್ಯಃ'. ಶ್ರೀ ಅ. ನ. ಕೃಷ್ಣರಾಯರಿಗೂ ನನಗೂ ಸ್ನೇಹ ಪ್ರಾರಂಭವಾದ ಕಾಲಕ್ಕೆ ಅವರು ನನಗಿಂತ ಆರು ತಿಂಗಳು ದೊಡ್ಡವರು. ಅಲ್ಲದೆ, ಕನ್ನಡದ ಕಾರ್ಯಕ್ಷೇತ್ರದಲ್ಲಿ ಅವರು ನನಗಿಂತ ಮೂರು ನಾಲ್ಕು ವರ್ಷ ಹಳಬರು. ಜೊತೆಗೆ, ಒಳ್ಳೆಯ ಇಂಗ್ಲಿಷ್, ಕನ್ನಡ ಪುಸ್ತಕಗಳನ್ನು ಓದುವ, ನಮಗೆ ತಿಳಿದದ್ದನ್ನು ಕನ್ನಡದಲ್ಲಿ ಬರೆಯುವ, ಹಾಗೂ ಅದನ್ನು ಕುರಿತು ಮಾತನಾಡುವ ಸಮಾನಶೀಲ ಸಮಾನವ್ಯಸನ ಕಾರಣವಾಗಿ ನಮ್ಮ ಸ್ನೇಹ ಬೆಳೆಯಿತು. ಇಬ್ಬರಿಗೂ ಮದುವೆಗಳಾದ ಮೇಲೆ, ಸಂಸಾರ ನಿರ್ವಹಣೆಯ ಭಾರ ಹೊತ್ತಮೇಲೆ, ಸಾಹಿತ್ಯದಲ್ಲಿನ ರುಚಿಗಳು ಬೇರೆ ಬೇರೆಯಾಗಿ, ಒಂದೇ ಬೆಂಗಳೂರಿನಲ್ಲಿದ್ದರೂ ನಾವು ಒಟ್ಟಿಗೆ ಸೇರುತ್ತಿದ್ದುದು ವಿರಳವಾಗಿತ್ತು. ಬರುಬರುತ್ತ ಅವರ ಸ್ನೇಹಿತವರ್ಗ ಬೇರೆಬೇರೆ ಕಾರಣಗಳಿಂದ ಬೇರೆ ಬೇರೆ ವಿಧವಾಗಿ ಬೆಳೆಯುತ್ತಿದ್ದರೂ, ನಮ್ಮ ಹಳೆಯ ಸ್ನೇಹವನ್ನು ಅವರು ಮರೆಯಲಿಲ್ಲ, ಅದನ್ನು ಬಾಡಿಸಲಿಲ್ಲ. ನಮ್ಮ ಸ್ನೇಹದ ಆಂತರ್ಯ ಭದ್ರವಾಗಿದ್ದುದರಿಂದಲೇ ಅವರ ಕಾಲಾನಂತರ ತಿಂಗಳಿಗೊಂದರಂತೆ ಸ್ಮಾರಕ ಉಪನ್ಯಾಸಗಳನ್ನು ಅವರ ಹೆಸರಿನಲ್ಲಿ ನಡೆಸಬೇಕೆಂದೂ, ತಿಂಗಳಿಗೊಂದರಂತೆ ಅವರ ಹೆಸರಿನಲ್ಲಿ ಒಂದು ಸ್ಮಾರಕ ಪುಸ್ತಿಕೆಯನ್ನು ಪ್ರಕಟಿಸಬೇಕೆಂದೂ ನನಗೆ ಎನ್ನಿಸಿತು. ನಮ್ಮ

ಸ್ನೇಹದ ಪುಣ್ಯದಿಂದಲೂ ಇತರ ಮಿತ್ರರ ಒತ್ತಾಸೆಯಿಂದಲೂ ಭಗವಂತನ ಅನುಗ್ರಹದಿಂದಲೂ ನಾನು ಸಂಕಲ್ಪಿಸಿದ್ದ ಉತ್ತರ ಕ್ರಿಯೆ ಮುಗಿದಿದೆ. ಇದರ ಉದ್ದೇಶವಾದರೂ ಇಷ್ಟರಲ್ಲೆ ಈಡೇರುತ್ತದೆ. ಎಂಬುದರಲ್ಲಿನನಗೆ ಸಂಶಯವಿಲ್ಲ.

ಸ್ಮಾರಕೋಪನ್ಯಾಸಗಳನ್ನು ನಡೆಸುವುದು ಕಷ್ಟವಾಗಲಿಲ್ಲ. ಗಾಂಧೀ ಸಾಹಿತ್ಯ ಸಂಘದ ಆಶ್ರಯದಿಂದ ಕಾಸು ಕರ್ಚಿಲ್ಲದೆ ಅವು ನಡೆದುವು. ಸ್ಮಾರಕ ಪುಸ್ತಿಕೆಗಳ ಪ್ರಕಟಣವಾದರೋ—ಅಷ್ಟು ಸುಗಮವಾಗಿ ನಡೆಯಲಿಲ್ಲ. 'ಸತ್ತವರಿಗೆ ಪಾದಪೂಜೆ' ಎಂಬ ಮೊದಲನೇ ಪುಸ್ತಿಕೆ ಭರದಿಂದ ಮಾರಾಟವಾಯಿತು. ಬಿಡಿಬಿಡಿ ಯಾಗಿ ಮಾರಾಟಮಾಡಲು ನಾನು ಓಡಿಯಾಡಿದ್ದರಿಂದ. ಎಂಟಾಣೆಯ ಪುಸ್ತಿಕೆಗಾಗಿ ಎಷ್ಟು ಓಡಿಯಾಡಲಿ? ಮುಂದಿನ ಪುಸ್ತಿಕೆಗಳ ಮಾರಾಟ ಕುಂಟಿತು. ಆರು ಪುಸ್ತಿಕೆಗಳನ್ನು ಮುಗಿಸುವ ವೇಳೆಗೆ ತಿರುಗಿ ತಿರುಗಿ ಸುಸ್ತಾಯಿತು, ಹಣ ಸಾಲದಾಯಿತು. ಆರಕ್ಕೆ ಮುಕ್ತಾಯ ಮಾಡಿಬಿಡುವೆನೆಂದು ಸಾರ್ವಜನಿಕವಾಗಿ ಹೇಳಿದ್ದೂ ಆಯಿತು.

ಆದರೆ, ಹಾಗೆ ಹೇಳಿದ ರಾತ್ರಿ—

> **'ಅರೆಯಲಿ ಬಿಡುವೆಯ ತೊಡಗಿದ ಕಾರ್ಯವ?**
> **ಪರಿಪೂರ್ಣ ಮಾಡೋ!'**

ಎಂದು ಯಾರೋ ಕನಸಿನಲ್ಲಿ ಹೇಳಿದ ಹಾಗಾಯಿತು. ಎಚ್ಚರ ವಾದಾಗ, ಅದು 'ಶ್ರೀನಿವಾಸ'ರ ಒಂದಾನೊಂದು ಹಾಡಿನ ಪಲ್ಲವಿ ಎಂಬುದು ನೆನಪಾಯಿತು. ಎದ್ದವನೆ, ಅದರ ಮೂಲವನ್ನು ಓದಿದೆ. ಅದರ ಜೊತೆಯಲ್ಲಿಯೇ—

ಎಂಬ ‘ಶ್ರೀನಿವಾಸ’ರ ಇನ್ನೊಂದು ಹಾಡನ್ನೂ ಓದಿಕೊಂಡೆ. ಅದರ ಫಲವಾಗಿ, ‘ಉಳಿದ ಆರು ಅನಕೃ ಸ್ಮಾರಕ ಪುಸ್ತಿಕೆಗಳನ್ನೂ ಮಾಡಿ ಮುಗಿಸಬೇಕು. ದೇವರಿದ್ದಾನೆ. ಎಂಬ ಸಂಕಲ್ಪ ಮರುಕೊಳಿಸಿತು. ಅದನ್ನು ಪುಷ್ಟೀಕರಿಸುವ ಹಾಗೆ, ಮಾರನೆಯ ದಿನ ಇಬ್ಬರು ಕ್ರಿಶ್ಚಿಯನ್ ಸಿಸ್ಟರ್ಸ್ ಬಂದು, Don't Quit ಎಂಬ ಪದ್ಯದ ಪ್ರತಿಯೊಂದನ್ನು ನನ್ನ ಕೈಯಲ್ಲಿರಿಸಿ ಹೋದರು. ಆರಕ್ಕೆ ನಿಂತು ಹೋಗುತ್ತಿದ್ದ ಸ್ಮಾರಕ ಪುಸ್ತಿಕೆಗಳನ್ನು, ಮೊದಲು ಸಂಕಲ್ಪಿಸಿದಂತೆ ಹನ್ನೆರಡು ಪೂರ್ತಿಯಾಗಲು ಸ್ಫೂರ್ತಿಕೊಟ್ಟ ಆ ಮೂರು ಪದ್ಯಗಳನ್ನು ಮುಂದಿನ ಪುಟಗಳಲ್ಲಿ(೨೪೧-೩೪೫) ಅಚ್ಚುಮಾಡಿದ್ದೇನೆ.

* * *

ಅ. ನ. ಕೃಷ್ಣರಾಯರ ನೆನಪಿಗಾಗಿ ತಿಂಗಳಿಗೊಂದರಂತೆ, ಹನ್ನೆರಡು ಸ್ಮಾರಕ ಪುಸ್ತಿಕೆ ಪ್ರಕಟವಾದುವು. ಆ ಹನ್ನೆರಡನ್ನೂ ಒಟ್ಟಿಗೆ ಸೇರಿಸಿ ‘ಸ್ನೇಹದ ದೀಪ’ ಎಂಬ ಸಂಯುಕ್ತಸಂಪುಟ ಪ್ರಕಟವಾಯಿತು. ಈ ಪುಸ್ತಕಗಳ ಮಾರಾಟದಿಂದ ಬಂದ ಹಣವನ್ನು ಕೃಷ್ಣರಾಯರ ಹೆಸರಿನಲ್ಲಿ ಬೆಂಗಳೂರಿನ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಗೆ ಒಂದು ಪುದುವಟ್ಟಾಗಿ ಒಪ್ಪಿಸಬೇಕೆಂದು ಹಾಗೆ ಮಾಡಿ ಆಗಿದೆ.

◆ ಸತ್ತವರಿಗೆ ಪಾದಪೂಜೆ ◆

ನಿಂದಂತು ನೀತಿನಿಪುಣಾ ಯದಿ ವಾ ಸ್ತುವಂತು
ಲಕ್ಷ್ಮೀಃ ಸಮಾವಿಶತು ಗಚ್ಛತು ವಾ ಯಥೇಷ್ಟಮ್
ಅದ್ಯೈವ ವಾ ಮರಣಮಸ್ತು ಯುಗಾಂತರೇ ವಾ
ನ್ಯಾಯ್ಯಾತ್ಪಥಃ ಪ್ರವಿಚಲಂತಿ ಪದಂ ನ ಧೀರಾಃ

ನೀತಿಗಳಲ್ಲಿ ನಿಪುಣರಾದವರು ನಿಂದಿಸಲಿ, ಅಥವಾ ಸ್ತುತಿಸಲಿ; ಲಕ್ಷ್ಮಿಯು ಯಥೇಷ್ಟವಾಗಿ ಬಂದು ಸೇರಲಿ, ಅಥವಾ ಹೋಗಲಿ; ಇಂದೇ ಮರಣವಾಗಲಿ, ಅಥವಾ ಯುಗಗಳಾದ ಮೇಲಾಗಲಿ; ಧೀರರಾದವರು, ತಾವು ಯಾವುದನ್ನು ನ್ಯಾಯದ ಮಾರ್ಗ ಎಂದು ನಂಬಿ ನಡೆಯುತ್ತಾರೆಯೋ ಆ ಮಾರ್ಗದಿಂದ ಒಂದು ಹೆಜ್ಜೆಯಾದರೂ ಆಚೆಗೆ ಕದಲುವುದಿಲ್ಲ.

ಶ್ರೀ ಅ. ನ. ಕೃಷ್ಣರಾಯರು(ಫಲಾಫಲಗಳು ಏನೇ ಬಂದರೂ) ತಮ್ಮ ನಂಬಿಕೆಗೆ ಅನುಸಾರವಾಗಿ ನಡೆದು ಬದುಕನ್ನು ಮುಗಿಸಿದ ಧೀರರು. ಇಂಥವರನ್ನು ಕಂಡರೆ ನನಗೆ ತುಂಬ ಮೆಚ್ಚಿಕೆ.

ನನಗೆ ಪ್ರಿಯವಾದ ಪುಸ್ತಕಗಳಲ್ಲಿ Carlye ಲೇಖಕನ Heroes and Hero-Worship ಒಂದು. ನಮಗೆ ಆಪ್ತರಾಗುವ ಹೀರೋಗಳಿಗಾಗಿ ನಾವು ಯಾವುದೋ ದೇಶಕ್ಕೆ ಯಾವುದೋ ಕಾಲಕ್ಕೆ ಪ್ರಯಾಣ ಮಾಡಬೇಕಾದ್ದಿಲ್ಲ. ಇಲ್ಲಿಯೇ ಈಗಲೇ ನಮ್ಮ ಸುತ್ತುಮುತ್ತಿನಲ್ಲಿಯೇ ನಮಗೆ ಹೀರೋಗಳಾಗುವ

ಯೋಗ್ಯತೆಯುಳ್ಳವರು ದೊರಕುತ್ತಾರೆ. ಮಹಾಭಾರತದ ಯಾದವ ಕೃಷ್ಣ ನಮಗೆ ಹೇಗೆ ಹೀರೋ ಆಗಬಲ್ಲನೋ, ಕೈಲಾಸಂ ಅವರ 'ಪೋಲಿ ಕಿಟ್ಟಿ' ನಮಗೆ ಹೇಗೆ ಹೀರೋ ಆಗಬಲ್ಲನೋ, ಹಾಗೆಯೇ ಅ. ನ. ಕೃಷ್ಣರಾಯರೂ ಆಗಬಲ್ಲರು. ಆಗಬಲ್ಲರೇನು, ಆಗಿಯೇ ಇದ್ದಾರೆ. ಇದನ್ನು ಒಪ್ಪಿಕೊಳ್ಳುವುದಕ್ಕೆ ಏನೂ ಸಂಕೋಚ ಪಡಬೇಕಾದ್ದಿಲ್ಲ.

ಭೂಗರ್ಭದಲ್ಲಿ ಕಲ್ಲುಮಣ್ಣುಗಳೊಡನೆ ಸೇರೆಯಾಗಿ ಚಿನ್ನ ಸಿಕ್ಕುತ್ತದೆ. ಸೆರೆಯಿಂದ ಬಿಡುಗಡೆಯಾದ ಚಿನ್ನದಲ್ಲಿ ಬೆಳ್ಳಿ, ತಾಮ್ರ, ಕಬ್ಬಿಣ ಮೊದಲಾದ ಅವಲೋಹಗಳು ಬೆರೆತಿರುವುದುಂಟು. ಚೊಕ್ಕಚಿನ್ನ ಬೇಕೆನ್ನುವವರು ಆ ಅವಲೋಹಗಳನ್ನು ಕಳೆದುಹಾಕುತ್ತಾರೆ. 'ತಪ್ಪು ಎಲ್ಲರಲ್ಲಿಯೂ ಇದೆ. ತಪ್ಪಿಲ್ಲದ ಪ್ರಾಣಿ ಆ ಪರಮಾತ್ಮ ಒಬ್ಬನೇ' ಎಂದು ಕೈಲಾಸಂ ಅವರ 'ವೈದ್ಯನ ವ್ಯಾಧಿ'ಯಲ್ಲಿ ಒಂದು ಪಾತ್ರ ಜ್ಞಾಪಿಸಿಕೊಡುತ್ತದೆ. ನನ್ನ ಓರೆಕೋರೆಗಳನ್ನು ನಮ್ಮ ಭಿನ್ನಾಭಿಪ್ರಾಯಗಳನ್ನೂ ಕೃಷ್ಣರಾಯರು ದೊಡ್ಡದು ಮಾಡಲಿಲ್ಲ; ಅವರಲ್ಲಿದ್ದ ಅನೇಕ ಗುಣಾಂಶಗಳನ್ನು ನಾನು ಗ್ರಹಿಸಿಕೊಂಡೆ. ಹಾಗಾಗಿ ಅವರಿಗೂ ನನಗೂ ಮೈತ್ರಿ ಬೆಳೆಯಿತಲ್ಲದೆ, ಕೊನೆಯವರೆಗೂ ಅದು ಕಡಮೆಯಾಗಲಿಲ್ಲ.

> ಕನ್ನಡವನ್ನು ಒಂದು CAUSEಆಗಿ
> 　　ಕಟ್ಟಿಕೊಂಡು ಬದುಕಿದವರುಂಟು;
> ಕಾಸಿಗೋಸ್ಕರವಾಗಿ ಕನ್ನಡವನ್ನು
> 　　ಕಟ್ಟಿಕೊಂಡು ಬದುಕಿದವರುಂಟು.

ಇವರಲ್ಲಿ ಅ. ನ. ಕೃಷ್ಣರಾಯರು ಮೊದಲಿನ ವರ್ಗಕ್ಕೆ

ಸೇರಿದವರು. ಅವರಿಗೂ ನನಗೂ ತೀರದ ಮೈತ್ರಿಗೆ ಈ ಸಮಾನ ಧರ್ಮವೇ ಕಾರಣ.

ಶ್ರೀ ಅವರ 'ಅಶ್ವತ್ಥಾಮನ್' ನಾಟಕದಲ್ಲಿ ಭಾರ್ಗವಿಯ ಮುಖದಿಂದ ಈ ಮಹಾವಾಕ್ಯಗಳು ಬರುತ್ತವೆ:

"ಪೆರವೇಡ ಒಲ್ಮೆ ಮತ್ತೊಲ್ಮೆಯನ್?
ತಕ್ಕನ್ ನಲಿವನ್ ಒರ್ಕಡೆ ಪಡೆದು ಮರೆದಪನೆ?
ಮರೆಯಲ್ಕೆ ತಕ್ಕನ್ ಎಂತಪ್ಪನ್?"

(ಪ್ರೀತಿ ಪ್ರತಿಯಾಗಿ ಪ್ರೀತಿಯನ್ನು ಪಡೆಯಬೇಡವೆ? ಯೋಗ್ಯನಾದವನು ಪ್ರೀತಿಯನ್ನು ಒಂದು ಕಡೆ ಪಡೆದು, ಅದನ್ನು ಮರೆಯುತ್ತಾನೆಯೇ? ಅದನ್ನು ಅವನು ಮರೆತುಬಿಟ್ಟರೆ, ಅವನು ಯೋಗ್ಯ ಹೇಗೆ ಆಗುತ್ತಾನೆ?)

ಈ ಮಾತುಗಳನ್ನು ನೆನಪಿನಲ್ಲಿರಿಸಿಕೊಂಡು ನಾನು ಕೃಷ್ಣರಾಯರ ಪ್ರೀತಿಯ ಋಣವನ್ನು ನನಗೆ ತೋಚಿದ ರೀತಿಯಲ್ಲಿ ಸಲ್ಲಿಸಲು ಪ್ರಯತ್ನಿಸುತ್ತಿದ್ದೇನೆ.

◆ ಅನ್ಯೋನ್ಯವೈರಜನನೀ ವಿಜಹಾತ್ವಸೂಯಾ ◆

'ಅನ್ಯೋನ್ಯವಾದ ವೈರ ಹುಟ್ಟುವುದಕ್ಕೆ ಕಾರಣವಾದ ಅಸೂಯೆಯನ್ನು ಜನ ನಿಶ್ಶೇಷವಾಗಿ ತೊರೆದುಬಿಡಲಿ' ಎಂದು ಶ್ರೀ ವೇದಾಂತದೇಶಿಕರು ಸುಮಾರು ಏಳುನೂರು ವರ್ಷಗಳ ಹಿಂದೆ ಶ್ರೀರಂಗನಾಥ ದೇವರಲ್ಲಿ ಪ್ರಾರ್ಥಿಸಿದರು. ನನ್ನದಾದರೂ ಅದೇ ನಿತ್ಯ ಪ್ರಾರ್ಥನೆ.

ಸನ್ಮಿತ್ರರಾದ ಅ.ನ.ಕೃಷ್ಣರಾಯರು೮-೭-೭೧ ಗುರುವಾರ ರಾತ್ರಿ ತೀರಿಕೊಂಡರು. ಶನಿವಾರ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ನಡೆದ ಸಂತಾಪ ಸೂಚಕ ಸಭೆಯಲ್ಲಿ ಎಂಟು ನಿಮಿಷಗಳ ಭಾಷಣವನ್ನು ಬರೆದು ತಂದು ಓದಿದೆ. ೧೧-೭-೭೧ರ ಭಾನುವಾರ ಮಲ್ಲೇಶ್ವರದ ಗಾಂಧೀಸಾಹಿತ್ಯ ಸಂಘದ ಆಶ್ರಯದಲ್ಲಿ ೬೦ ನಿಮಿಷಗಳು ಕೃಷ್ಣರಾಯರನ್ನುಕುರಿತು ಮಾತನಾಡಿದೆ. ನಾನು ಮಾತನಾಡಿದ್ದು 'ಸತ್ತವರಿಗೆ ಪಾದಪೂಜೆ' ಪುಸ್ತಕದಲ್ಲಿಸಂಗ್ರಹವಾಗಿ ಇದೆ. ಕೃಷ್ಣರಾಯರ 'ಕೈಲಾಸಂ' ಎರಡನೆಯ ಆವೃತ್ತಿ ಪ್ರಕಟವಾದಾಗ, ೧೧-೧೨-೭೧ ರಾಜಾಜಿನಗರದ ಕುಮಾರವ್ಯಾಸ ಮಂಟಪದಲ್ಲಿ ಅದನ್ನು ಬಿಡುಗಡೆ ಮಾಡುತ್ತ, ಪುನಃ ಅ ನ ಕೃ ವಿಷಯ ಮಾತನಾಡಿದೆ. (ವಿವರಗಳಿಗೆ 'ಸತ್ತರೂ ಸಾಯದ ಕೈಲಾಸಂ' ನೋಡಿ.)

ಹೀಗೆ ಹೇಳಿದ್ದನ್ನೇ ನಾನು ಹೇಳಿಯಾಗಿ, ಈ ಸ್ಮಾರಕ

ಪುಸ್ತಿಕೆಗಳು ಒಂದು ಎಂಟು ಹತ್ತು ಪ್ರಕಟವಾಗಿರುವಾಗ ಮತ್ತೊಬ್ಬರು ಯಾರೋ ಯಥಾ ಪ್ರಕಾರ ಅ ನ ಕೃ ಅವರನ್ನು ಕುರಿತು ಮಾತನಾಡಲು ನನ್ನನ್ನು ಕರೆದರು. ಅವರಿಗೆ ನಾನು ಹೇಳಿದೆ:'ಅಪ್ಪಾ, ಹೇಳುವುದನ್ನೆಲ್ಲ ಹೇಳಿಯಾಗಿದೆ. ನಾನು ಈಗ ಕೃಷ್ಣರಾಯರ ನೆನಪಿಗಾಗಿ ಈ ಕಾರ್ಯ ಮಾಡುತ್ತಿದ್ದೇನೆ. ಇದರಲ್ಲಿ ಒಂದು ನೂರು ರೂಪಾಯಿ ಪುಸ್ತಕ ಕೊಂಡುಕೊಳ್ಳಿ. ಇದನ್ನು ಪ್ರಚಾರಮಾಡಿ, ಮಾರಿ, ನಿಮ್ಮ ನೂರನ್ನು ಹಿಂದಕ್ಕೆ ಪಡಕೊಳ್ಳಿ. ಸಭಾಭವನಕ್ಕೆ ಬಾಡಿಗೆ ಕೊಡುತ್ತೀರಿ, ಆಹ್ವಾನಪತ್ರಿಕೆ ಪ್ರಿಂಟ್ ಮಾಡಿಸಲು ಕರ್ಚುಮಾಡುತ್ತೀರಿ, ಓಡಿಯಾಡಲು ಟ್ಯಾಕ್ಸಿಗೆ ತೆರುತ್ತೀರಿ, ಹಾರಗಳಿಗೆ ವೆಚ್ಚಮಾಡುತ್ತೀರಿ, ಕರ್ಚಿನ ಜೊತೆಗೆ ಇನ್ನೂ ನೂರು ಹೊಂದಿಸಿಕೊಳ್ಳಿ. ಈ ಪುಸ್ತಿಕೆಗಳನ್ನು ಮಾರಲು ನನ್ನ ಪರವಾಗಿ ನೀವೂ ಶ್ರಮವಹಿಸಿ, ನೀವು ಕೊಡುವ ನೂರನ್ನು ಹಿಂದಕ್ಕೆ ಪಡಕೊಳ್ಳಿ' ಎಂದೆ. ಅವರು ತಿರುಗಿ ಬರಲಿಲ್ಲ. ನಾನಿಲ್ಲದಿದ್ದರೆ ಸಭೆ ನಡೆಯುವುದಿಲ್ಲವೆ?

ನಡೆಯಿತು. ಪತ್ರಿಕೆಗಳಲ್ಲಿ ಫೋಟೊ ಸಮೇತ ವರದಿಗಳು ಬಂದುವು.

ಇದಾದ ಸ್ವಲ್ಪ ಕಾಲದ ಮೇಲೆ ಬೆಂಗಳೂರಿನ ಎರಡು ಪತ್ರಿಕೆಗಳಲ್ಲೂ ಹುಬ್ಬಳ್ಳಿಯ ಒಂದು ಪತ್ರಿಕೆಯಲ್ಲೂ ನನ್ನ ಮೇಲೆ ಅಪಪ್ರಚಾರವಾಗಿ ಮಾಡಿದ ಟೀಕೆ ಬಂದುವು. ಸ್ನೇಹಿತರು ತೋರಿಸಿದರು. 'ಕೃಷ್ಣರಾಯರನ್ನು ಕುರಿತು ಮಾತನಾಡಲು ನಾನು ೨೦೦ ರೂಪಾಯಿ ಶುಲ್ಕ ಕೇಳಿದೆನಂತೆ! ಈಗ ನನ್ನ ನಿಜವಾದ ಬಣ್ಣ ಬದಲಾಯಿತಂತೆ!' ಟೀಕೆ ಮಾಡಿದ ಮೂವರು ಸ್ವತಂತ್ರವಾಗಿ ಈ

ತೀರ್ಮಾನಕ್ಕೆ ಬಂದರೋ, ಅಥವಾ ಸಾಮೂಹಿಕವಾಗಿ ಮಾತನಾಡಿ ಕೊಂಡು ಈ ತೀರ್ಮಾನಕ್ಕೆ ಬಂದರೋ, ಅದರ ಒಳಗುಟ್ಟು ಏನಾದರೂ ಇರಲಿ; ಇಂಥ ಸುಳ್ಳುಸುದ್ದಿಯನ್ನು ನಂಬಿದ್ದರಿಂದ, ಅದನ್ನು ಪತ್ರಿಕೆಗಳಲ್ಲಿ ಹರಡಿದ್ದರಿಂದ ಅವರಿಗೆ ಸಂತೋಷವಾಗುವು ದಾದರೆ, ನನ್ನದೇನೂ ಅಡ್ಡಿಯಿಲ್ಲ. ಈ ಮಾತನ್ನು ನಿಜವೆಂದು ನಂಬುವವರು ನನ್ನನ್ನು ತಿಳಿದಿಲ್ಲ; ನನ್ನನ್ನು ತಿಳಿದಿರುವವರು ಇಂಥ ಆರೋಪಗಳನ್ನು ನಂಬುವುದಿಲ್ಲ.

ಈ ಸುಳ್ಳು ಸುದ್ದಿಯನ್ನು ಬರೆದವರಾದರೂ ನನಗೆ ಪರಿಚಿತ ರಾದವರೇ. ಬರೆಯುವ ಮೊದಲು, ಕಾಗದದ ಮೂಲಕವಾಗಲಿ, ಎದುರಿಗೆ ಕಂಡಾಗಲಿ, ನನ್ನನ್ನೇ ಕೇಳಬಹುದಾಗಿತ್ತಲ್ಲ? ಆದರೆ ಈ ಹೊತ್ತಿನ ಕೆಲವು ಪತ್ರಿಕೆಗಳಲ್ಲಿ ದುಡುಕಿ ಬರೆದುಬಿಡುವ ದುರಭ್ಯಾಸ ಬಂದುಬಿಟ್ಟಿದೆ. ಇದನ್ನು ಹೆಜ್ಜೆಹೆಜ್ಜೆಗೂ ಪ್ರತಿಭಟಿಸಿ ನಿರಾಕರಿಸುತ್ತ ಹೋಗುವುದು ವೇಳೆಯ ವ್ಯರ್ಥ. ಸಕಾಲದಲ್ಲಿ ಸತ್ಯ ವನ್ನು ಸ್ಪಷ್ಟಪಡಿಸುವ ಸಮಯ ಒದಗುವವರೆಗೂ 'ಅನ್ಯೋನ್ಯ ವೈರಜನನೀ ವಿಜಹಾತ್ವಸೂಯಾ' ಎಂದು ಪ್ರಾರ್ಥಿಸುತ್ತ, ಅತಿವಾಕ್ಯ ಗಳನ್ನು ಸಹಿಸಿಕೊಳ್ಳುವುದರಿಂದ ಜೀವಕ್ಕೆ ನೆಮ್ಮದಿ.

ಈಗಲೂ ಮತ್ತೆ ಅದನ್ನೇ ಹೇಳುತ್ತೇನೆ:' ಈ ಸ್ಮಾರಕ ಪುಸ್ತಿಕೆಗಳಲ್ಲಿ ಒಂದು ನೂರು ರೂಪಾಯಿನಷ್ಟು ಪುಸ್ತಕ ಕೊಂಡು ಕೊಳ್ಳಿ. ಎಲ್ಲಿಗೆ ಬೇಕಾದರೂ ಕರೆಯಿರಿ, ಗಂಟೆಗಟ್ಟಲೆ ನನಗೆ ತಿಳಿದದ್ದನ್ನು ಮಾತನಾಡುತ್ತೇನೆ. ಈ ನೂರು ರೂಪಾಯಿಗಳನ್ನು ಕೃಷ್ಣರಾಯರ ಸ್ಮಾರಕನಿಧಿಗೆ ಸೇರಿಸಿ ಅದನ್ನು ಬೆಳಸೋಣ'.

◆ ಕಣ್ಣೀರಿನ ತರ್ಪಣ ◆

ಇಂದವನ್, ನಾಳೆ ನಾನ್; ಏನ್ ಬಾಳೊ ಆಳ ಬಾಳ್!
ಬೀಸುವ ಬಯಲ್‌ಗಾಳಿ! ಪರಿದಡಂಗುವ ನೆಳಲ್!

ನಮ್ಮಲ್ಲಿ ಒಂದೊಂದು ಸಾವು ಸಂಭವಿಸಿದಾಗಲೂ ನನಗೆ ಈ ಪಂಕ್ತಿಗಳು (ಶ್ರೀ ಅವರ ಅಶ್ವತ್ಥಾಮನ್ ನಾಟಕದ ಸಾಲುಗಳು) ನೆನಪಿಗೆ ಬರುತ್ತವೆ. ಮೊನ್ನೆ ರಾತ್ರಿಯವರೆಗೂ ನಮ್ಮ ಅ. ನ. ಕೃಷ್ಣರಾಯರು ಇದ್ದರು. ಅವರ ಆಯುಸ್ಸು ಮುಗಿದು, ಅವರನ್ನು ಈ ನಾಡಿಗೆ ಕಳುಹಿಸಿದ ದೈವ 'ಬಾ' ಎಂದು ಕರೆದಾಗ, ಎದುರಾಡದೆ ಅಲ್ಲಿಗೆ ಹಿಂದಿರುಗಿಹೋದರು—ಪುನರಾಗಮನಾಯಚ (ಪುನಃ ಇಲ್ಲಿಗೆ ಬರುವುದಕ್ಕೋಸ್ಕರವಾಗಿ.)

ಇಪ್ಪತ್ತೈದು ವರ್ಷಗಳ ಹಿಂದೆ ಶ್ರೀ ಟಿ. ಪಿ. ಕೈಲಾಸಂ ತೀರಿಕೊಂಡಾಗ ಶ್ರೀ ಗೋವಿಂದ ಪೈ ನನಗೆ ಹೀಗೆ ಬರೆದರು: May God rest his soul in peace and prepare it for a yet greater reincarnation. He was undoubtedly one of the few Genuine Geniuses of modern Kannada on whose literature he has made a lasting impression. His was an original mind, an orginal way of thinking and an original way of looking at things. When and where again shall we find a like of him?

ಈ ಪ್ರಶಸ್ತಿಯೊಳಗಿನ ಪ್ರತಿಯೊಂದು ಪದವನ್ನೂ ನಮ್ಮ ಕೃಷ್ಣರಾಯರಿಗೂ ಸಾರ್ಥಕವಾಗಿ ಅನ್ವಯಿಸಬಹುದು. When and where again shall we find a like of him? May God rest his soul in peace and prepare it for a yet greater reincarnation!

'ಸಂತಾಪ'ವೆಂಬುದು 'ಸಮ್ಯಕ್ ತಾಪ'ವಾದರೆ, ಅದು ಸಾರ್ವಜನಿಕವಾದ ಪ್ರದರ್ಶನಕ್ಕೆ ಒಳಪಡುವುದಿಲ್ಲ. ಆದರೆ, ಅದು ಆಂಗ್ಲೋ—ಸಂಸ್ಕೃತವಾದ 'Someತಾಪ' ವಾದಾಗ, ಸಂತಾಪ ಸೂಚಕ ಸಭೆಗಳನ್ನು ನಡಸುವುದು ಶಿಷ್ಟಾಚಾರದ ಒಂದು ಅಂಗವಾಗಿ ಪರಿಗಣಿಸಲ್ಪಡುತ್ತದೆ.

ಈ ಪ್ರಕಾರವಾಗಿ ಏರ್ಪಾಟಾದ ಇಂದಿನ ಸಭೆಯಲ್ಲಿ ಒಂದು ಅಂಶವನ್ನು ತಮ್ಮ ಗಮನಕ್ಕೆ ತರಲು ಬಯಸುತ್ತೇನೆ. ನೆನ್ನೆಯಿಂದ, ನಮ್ಮ ನಾಡಿನ ಪತ್ರಿಕೆಗಳಲ್ಲಿ, ಕೃಷ್ಣರಾಯರ ಮರಣದ ಆಸ್ಫೋಟ ದಿಂದ ಉಕ್ಕಿ ಪ್ರವಹಿಸುತ್ತಿರುವ ಶೋಕದ ಮಹಾಪೂರವನ್ನು ನೋಡಿದ್ದೀರಿ. ಅದರ ಮಧ್ಯೆ ಮಹಾದ್ವೀಪದಂತೆ ಮೇಲೆದ್ದು ನಿಂತಿರುವ ಒಂದು ವಾಕ್ಯಖಂಡವನ್ನು 'ಕನ್ನಡ ಪ್ರಭ' ಪತ್ರಿಕೆಯಿಂದ ಉದ್ಧರಿಸಿ ಕೊಡುತ್ತೇನೆ. ಅವಧರಿಸಬೇಕು.

"ವಿದೇಶದಲ್ಲಿ, ಬೇಡ-ನಮ್ಮ ನೆರೆನಾಡಾದ ಆಂಧ್ರ ದಲ್ಲಿಯೋ ತಮಿಳುನಾಡಿನಲ್ಲಿಯೋ ಅನಕ್ಕೃ ಜನ್ಮವೆತ್ತಿ ಈ ಪ್ರಮಾಣದಲ್ಲಿ ನುಡಿಸೇವೆ ಮಾಡಿದ್ದಿದ್ದರೆ, ಅವರ ತುಲಾಭಾರವೇ ನಡೆಯುತ್ತಿದ್ದಿತು. ಅವರು ಸಿರಿವಂತಿಕೆಯ ಮುಗಿಲು ಮುಟ್ಟು ತ್ತಿದ್ದರು. ಆದರೆ, ಕನ್ನಡ ನಾಡಿನಲ್ಲಿ ಜನ್ಮವೆತ್ತಿ, ಸಾಹಿತ್ಯ ದೀಕ್ಷೆ

ಕೈಕೊಂಡ ಅವರು 'ಬೇಕು'ಗಳ ಬಾಧೆಯಿಂದ ವಿಮುಕ್ತಿಯನ್ನು ಕಾಣಲೇ ಇಲ್ಲ. 'ನಾನು ಸಾಹಿತಿಯಾಗುವ ಬದಲು ಪ್ರಕಾಶಕ ನಾಗಿದ್ದಿದ್ದರೆ ಶ್ರೀಮಂತನಾಗಬಹುದಿತ್ತು' ಎಂದು ಅವರು ಒಮ್ಮೆ ನೊಂದು ನುಡಿದರು, ಅವರ ಕಾದಂಬರಿಗಳನ್ನು ಪ್ರಕಾಶಿಸಿದವರು ಸ್ಥಿತಿವಂತರಾದರು. ಆದರೆ ತಮ್ಮ ಜೀವನದ ಸಂಧ್ಯಾಕಾಲ ದಲ್ಲಿಯೂ ಉದರಂಭರಣೆಗಾಗಿ ಬರೆಯುತ್ತಲೇ ಇದ್ದರು, ರಾಯರು. ಅವರ ಲೇಖನಿಯಿಂದ ಹೊರಬಂದ ಸಾರಹೀನ ಕೃತಿಗಳ ಬಗ್ಗೆ ಒಮ್ಮೆ ಪ್ರಯತ್ನಿಸಿದಾಗ ಅವರು ಹೇಳಿದರು:'ಈಗೀಗ ನಾನು ಎರಡು ಗ್ರಂಥಮಾಲೆ ಮಾಡಿಕೊಂಡಿದೇನೆ—R.P. ಗ್ರಂಥಮಾಲೆ, H,P.ಗ್ರಂಥಮಾಲೆ ಅಂತ. R.P. ಗ್ರಂಥಮಾಲೆ ಎಂದರೆ ಋಣ ಪರಿಹಾರ ಗ್ರಂಥ ಮಾಲೆ—ಪ್ರಕಾಶಕರ ಹತ್ತಿರ ಈಸ್ಕೊಂಡಿರೋ ಸಾಲ ತೀರಿಸೋದಕ್ಕೆ ಬರೆಯೋದು ಇದು. ಇನ್ನೂH.P. ಗ್ರಂಥ ಮಾಲೆ ಎಂದರೆ ಹೊಟ್ಟೆಪಾಡಿನ ಗ್ರಂಥಮಾಲೆ ಅಂತ'. ಒಬ್ಬ ಸಾಹಿತ್ಯ ತಪಸ್ವಿ ಈ ಮಾತುಗಳನ್ನಾಡಿರಬೇಕಾದರೆ, ಅವರಿಗೆ ಆಗಿದ್ದ ಭ್ರಮನಿರಸನ ಯಾವ ಬೃಹತ್‌ಪ್ರಮಾಣದ್ದಾಗಿರಬೇಕು ಎಂಬುದು ಊಹಾತೀತವೇನಲ್ಲ".

'ಕನ್ನಡ ಪ್ರಭ'ದಲ್ಲಿ ಈ ಮಾತುಗಳನ್ನು ಬರೆದವರ ಪರಿಚಯ ನನಗೆ ಇದ್ದಹಾಗಿಲ್ಲ. ಆದರೂ ಅವರು ಹೇಳಿರುವ ಪ್ರತಿ ಯೊಂದು ಮಾತನ್ನೂ ನಾನು ಬೇಷರತ್ತಾಗಿ ಅನುಮೋದಿಸುತ್ತೇನೆ.

ಕೃಷ್ಣರಾಯರು ಬದುಕಿದ್ದಾಗ ಅವರನ್ನು ಈ **'R. P.**ಮತ್ತು **H.P.** ಗ್ರಂಥಮಾಲೆಗಳ ಸಂಚಾಲಕರಾಗಲು ಬಿಟ್ಟ ನಾವು, ಅವರ ಪರೋಕ್ಷದಲ್ಲಿ ಅವರಿಗಾಗಿ ಕಣ್ಣೀರು ಸುರಿಸುವುದು ಹೇಗೆ

ಸಮಂಜಸವೋ ನನಗೆ ಅರ್ಥವಾಗುವುದಿಲ್ಲ. ಆದರೆ ಈಗಲಾದರೂ, ನಮ್ಮ ಉಪೇಕ್ಷೆಯಿಂದ ನಮಗೆ ಪಶ್ಚಾತ್‌ತಾಪ ವಾಗಿರುವುದಾದರೆ, ಆ ತಾಪವು 'ಸಮ್ಯಕ್ ತಾಪ'ವಾಗಿರುವ ಪಕ್ಷದಲ್ಲಿ, ಕೃಷ್ಣರಾಯರ ಆತ್ಮಕ್ಕೆ ಶಾಂತಿಯನ್ನು ಉಂಟುಮಾಡಲು ಒಂದು ಪರಿಹಾರೋಪಾಯವಿದೆ. ಅದು ಏನೆಂದರೆ-ಕೃಷ್ಣರಾಯರಿಗೆ ಆದ ಹಾಗೆಯೇ R.P. ಮತ್ತು H.P. ಕೃತಿ ರಚನೆ ಅನಿವಾರ್ಯ ವಾಗುತ್ತಿರುವ ಇತರ ಸಾಹಿತಿಗಳಿಗೆ-ಸಾಯದೆ ಇನ್ನೂ ಉಸಿರಾಡು ತ್ತಿರುವವರಿಗೆ—ನಾಡಿನ ಮಹಾಜನರು ಒಂದು ಮಾರ್ಯದೆಯ ಮಾರ್ಗವನ್ನು ಮಾಡಿಕೊಟ್ಟರೆ, ನಮ್ಮ ಬಸವಣ್ಣನವರು ಹೇಳಿದ ಹಾಗೆ—'ಜಂಗಮಕ್ಕೆ ಎರೆದರೆ ಸ್ಥಾವರ ನೆನೆಯಿತ್ತು!' ಕೃಷ್ಣರಾಯರ ಆತ್ಮಕ್ಕೆ ಶಾಂತಿ ದೊರಕಬೇಕಾದರೆ ಇದು ಒಂದೇ ದಾರಿ: **ಕನ್ನಡ ಸಾಹಿತಿ ತಾನು ಬರೆಯುವ ಸಾಹಿತ್ಯದಿಂದ ತಾನು ಬದುಕುವ ಹಾಗಾಗಬೇಕು, ಇನ್ನೊಬ್ಬರ ಹಂಗಿಗೆ ಒಳಗಾಗದೆ**

ಕೃಷ್ಣರಾಯರ ಸಾಹಿತ್ಯದೃಷ್ಟಿ ಎಷ್ಟು ವಿಸ್ತಾರವಾಗಿತ್ತು, ತಾವು ಬಲ್ಲಿರಿ. ಅವರ ವಾಗ್ವಿಲಾಸ ಅಷ್ಟೇ ವಿಸ್ತಾರವಾಗಿತ್ತು ಎಂಬುದನ್ನೂ ಬಲ್ಲಿರಿ. ಅವರ ಪತ್ರವ್ಯವಹಾರವೂ ಅಷ್ಟೇ ವಿಪುಲವಾಗಿತ್ತು ಎಂಬುದು ಅನೇಕರಿಗೆ ಗೊತ್ತಿಲ್ಲ. ಶ್ರೀ ಗೋವಿಂದ ಪೈ ಅವರು ನೇರಳೆಬಣ್ಣದ ಶಾಯಿಯಲ್ಲಿ ಬರೆದ ಪತ್ರಗಳು ಎಷ್ಟು ನಯನ ಮನೋಹರವೋ ಅ.ನ. ಕೃಷ್ಣರಾಯರು ಹಚ್ಚ ಹಸಿರು ಬಣ್ಣದ ಶಾಯಿಯಲ್ಲಿ ಬರೆಯುತ್ತಿದ್ದ ಪತ್ರಗಳೂ ಅಷ್ಟೇ ನಯನ ಮನೋಹರವಾದವು. ನಮ್ಮ ಕೃಷ್ಣರಾಯರ ನೆನಪನ್ನು ಬಾಡುವುದಕ್ಕೆ ಬಿಡದೆ, ಹಸಿರಾಗಿ ಉಳಿಸಿಕೊಳ್ಳಬೇಕು ಎಂಬ

ಇರಾದೆಯಿರುವವರು ಅವರ ಪತ್ರಗಳನ್ನು ಸಂಗ್ರಹಿಸುವ, ಅವುಗಳನ್ನು ಸಂಪಾದಿಸಿ ಪ್ರಕಟಿಸುವ ಕರ್ತವ್ಯವನ್ನು ವಹಿಸಿಕೊಳ್ಳಬೇಕು—ಎಂದು ಕೇಳಿಕೊಳ್ಳುತ್ತೇನೆ. ಸರಿಯಾಗಿ ಪ್ರಯತ್ನಮಾಡಿದರೆ ಸಾವಿರಾರು ಪತ್ರಗಳು ದೊರಕಿಯಾವು.

ಕೃಷ್ಣರಾಯರಿಗೂ ನನಗೂ ಬೆಳೆದು ಬಂದ ಸ್ನೇಹ ೧೯೨೮ರಿಂದ ಆರಂಭವಾದದ್ದು, ಆರೆಂಟು ನಿಮಿಷಗಳ ಅವಕಾಶದಲ್ಲಿ ಆಡಿ ಮುಗಿಸಲು ಆಗದ್ದು. ನಾಳೆ ಭಾನುವಾರ, ೧೧-೭-೭೧, ಮಲ್ಲೇಶ್ವರದ ಗಾಂಧೀ ಸಾಹಿತ್ಯ ಸಂಘದಲ್ಲಿ ಕೃಷ್ಣರಾಯರನ್ನು ಕುರಿತು ನಾನು ಮಾತನಾಡುವ ಒಂದು ಕಾರ್ಯಕ್ರಮವಿದೆ—ಸಂಜೆ ೬-೩೦ಕ್ಕೆ. ಕೃಷ್ಣರಾಯರ ಉತ್ತರಾಧಿಕಾರಿಗಳಾಗಿ ನಾವು ಮಾಡಬೇಕಾಗಿರುವ ಕೆಲವು ಕರ್ತವ್ಯಗಳನ್ನು ಅಲ್ಲಿ ಪ್ರಸ್ತಾಪಿಸುತ್ತಿದ್ದೇನೆ. ಇಲ್ಲಿ ಬಂದಿರುವವರು- ಅದರಲ್ಲಿಯೂ ಸಣ್ಣ ವಯಸ್ಸಿನವರು- ದಯಮಾಡಿ ಅಲ್ಲಿಗೂ ಬರಬೇಕೆಂದು ಕೋರುತ್ತೇನೆ.

ಶ್ರೀ ಅವರ ಅಶ್ವತ್ಥಾಮನ್ ನಾಟಕದಲ್ಲಿ ಕೃಷ್ಣ ಹೇಳಿದ ಮಾತುಗಳಿಂದ ನನ್ನ ಭಾಷಣವನ್ನು ಮೊದಲುಮಾಡಿದೆ. ಈಗ, ಅವರದೇ ಗದಾಯುದ್ಧ ನಾಟಕದಲ್ಲಿ ಅಶ್ವತ್ಥಾಮ ಹೇಳಿದ ಮಾತುಗಳನ್ನು ನಮ್ಮ ಕೃಷ್ಣರಾಯರಿಗೆ ಅನ್ವಯಿಸಿ—

> "ನೊಂದ ಜೀವಂ ತಣ್ಣಗಾಯ್ತು.
> ಮಹಾನುಭಾವ, ನಿನಗೆ ಸುಗತಿಯಕ್ಕೆ."

ಎಂದು ಮುಗಿಸುತ್ತೇನೆ.

[ಇದು ೧೦-೭-೭೧ ಶನಿವಾರ ಸಂಜೆ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ನಡೆದ ಸಂತಾಪಸೂಚಕಸಭೆಗಾಗಿ ಬರೆದು ತಂದು ಓದಿದ್ದು.]

ಕೃಷ್ಣರಾಯರನ್ನು ಕುರಿತು ರಾಜರತ್ನಂ

ಶ್ರೀ ಕೃಷ್ಣರಾಯರನ್ನು ನಾನು ಮೊದಲು ಕಂಡದ್ದು ೧೯೨೮ರಲ್ಲಿ. ಆಗ ಬೆಂಗಳೂರಿನ ಸೆಂಟ್ರಲ್ ಕಾಲೇಜ್ ಕರ್ಣಾಟಕ ಸಂಘವು ಹೊಸಗನ್ನಡ ಕವಿತೆಗಳನ್ನು ಹೇಗೆ ಓದುವುದು ಎಂದು ಕಲಿಸುವುದಕ್ಕೆ ತರಗತಿಗಳನ್ನು ನಡೆಸುತ್ತಿತ್ತು. ಶ್ರೀ ವಿ. ಸೀತಾರಾಮಯ್ಯನವರು ಅಲ್ಲಿ ಪಾಠ ಹೇಳಿಕೊಡುತ್ತಿದ್ದರು.

ಒಂದು ಸಲ ಆ ತರಗತಿಗೆ ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರು ಬಂದರು. ಅಲ್ಲಿಗೆ ಬಂದಿದ್ದ—ಸುಮಾರು ನನ್ನ ವಯಸ್ಸಿನ ಯುವಕನೊಬ್ಬನ ಬೆನ್ನ ಮೇಲೆ ಕೈ ಹಾಕಿ, 'ಏನು ಕೃಷ್ಣರಾವ್, ಚೆನ್ನಾಗಿದ್ದೀರಾ? ಮೊನ್ನೆ ರಂಗಭೂಮಿಯಲ್ಲಿ ನಿಮ್ಮ ಲೇಖನ ನೋಡಿದೆ. ಚೆನ್ನಾಗಿ ಬರೆದಿದ್ದೀರಿ' ಎಂದು ಬಾಯಿತುಂಬ ಮೆಚ್ಚಿಕೆಯಾಡಿದರು.

ಆ ವೇಳೆಗೆ ನಾನು ಎ. ಡಿ. ಎ. (ಅಮೆಚ್ಯೂರ್ ಡ್ರಮಾಟಿಕ್ ಅಸೋಸಿಯೇಷನ್) ಪ್ರಕಟಿಸುತ್ತಿದ್ದ "ರಂಗಭೂಮಿ"ಯನ್ನು ಓದಲು ತೊಡಗಿದ್ದೆ. ಅಲ್ಲಿ ಕೃಷ್ಣರಾಯರ ಲೇಖನಗಳ ಆರಂಭದಲ್ಲಿ ಪ್ರಕಟಿಸುತ್ತಿದ್ದ ಭಾವಚಿತ್ರದಲ್ಲಿ ಅವರನ್ನು ನೋಡಿದ್ದೆ. ಈಗ ಪ್ರತ್ಯಕ್ಷನಾಗಿ ಕಂಡೆ. ಅಂದಿನಿಂದ ನನಗೆ ಅವರ ಮುಖಪರಿಚಯ.

ಅವರಿಗೆ ನನ್ನ ಪರಿಚಯವಾದ್ದು ಅಲ್ಲಿಂದ ಎರಡು

ವರ್ಷಗಳಾದ ಮೇಲೆ. ೧೯೩೦ರ ವೇಳೆಗೆ ನನ್ನ ರಚನೆಗಳು ಕೆಲವು ಕನ್ನಡದ ಪ್ರಮುಖ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದುವು. ಆ ವೇಳೆಗೆ ಕೃಷ್ಣರಾಯರು 'ಕಥಾಂಜಲಿ' ಮಾಸಪತ್ರಿಕೆಯ ಸಂಪಾದಕರಾಗಿದ್ದರು. ಆ ಕಾಲದ ಹೊಸ ಲೇಖಕರಲ್ಲಿ ಅನೇಕರಿಗೆ ಕಾಗದ ಹಾಕಿದ್ದರು. ನನಗೂ ಬರೆದರು. ನಾನು ಬರೆದು ಕಳುಹಿಸಿದ್ದನ್ನು ಪ್ರಕಟಿಸಿ, ನನಗೆ ಉತ್ತೇಜನ ಕೊಟ್ಟರು.

ಪರಸ್ಪರ ಪತ್ರದೌತ್ಯದ ಮೂಲಕ ಬೆಳೆದ ಬಾಂಧವ್ಯ ಗಾಢವಾದ ಸ್ನೇಹದಲ್ಲಿ ಪರ್ಯವಸಾನವಾಯಿತು. ಕೃಷ್ಣರಾಯರು ತುಂಬ ಸ್ನೇಹಪರರು.

೧೯೩೧ರಲ್ಲಿ ನಾನು ಎಂ.ಎ. ಮುಗಿಸಿಕೊಂಡು ಮೈಸೂರಿನಿಂದ ಬೆಂಗಳೂರಿಗೆ ಬಂದೆ, ಆಗ ಬಳೇಪೇಟೆಯಲ್ಲಿದ್ದ ವಿ. ಜಿ. ಟಿ. ಜನರಲ್ ಏಜನ್ಸಿ ಕೃಷ್ಣರಾಯರ ಸಂಕೇತಸ್ಥಾನವಾಗಿತ್ತು. ಅಲ್ಲೇ ಅದರ ಎದುರಿಗೆ ಅವರ ಅಣ್ಣಂದಿರಾದ ಲಾಯರ ಆಫೀಸು. ಅಲ್ಲಿ ನನ್ನ ಬಿಡಾರ. ಅದರ ಎದುರಿಗೆ ನನ್ನ ಪುಸ್ತಕಗಳನ್ನು ಪ್ರಕಟಿಸುತ್ತಿದ್ದ ರಾಮಮೋಹನ ಕಂಪನಿ. ಆ ಒಂದು ಎರಡು ಮೂರು ವರ್ಷ ಅದೆಷ್ಟು ಸಲ ಕೃಷ್ಣರಾಯರ ಮನೆಯಲ್ಲಿ ಸ್ನಾನ ಮಾಡಿದ್ದೇನೋ ಅದೆಷ್ಟು ಸಲ ಅವರ ಮನೆಯಲ್ಲಿ ನನ್ನ ತಿಂಡಿ, ತೀರ್ಥ, ಊಟ ನಡೆದಿದೆಯೊ! ಅದೆಷ್ಟು ರಾತ್ರಿ ಅವರ ಪುಸ್ತಕಗಳ, ಪತ್ರಿಕೆಗಳ ಜೊತೆಯಲ್ಲಿ ಅಲ್ಲೇ ಮಲಗಿದ್ದೇನೋ!

ಕೃಷ್ಣರಾಯರ ಉಟೋಪಚಾರಗಳ ಆತ್ಮೀಯವಾದ ಆತಿಥ್ಯವನ್ನು ನನ್ನಂತೆ ಆ ಕಾಲಕ್ಕೆ ಪಡೆದವರು ಆದೆಷ್ಟು ಮಂದಿಯೋ! 'ಅತಿಥಿದೇವೋಭವ ' ಎಂಬ ಆರ್ಯವಚನ ಅವರ ಮನೆಯಲ್ಲಿ

ಆಚರಣೆಯಲ್ಲಿತ್ತು. 'ಅನ್ನಪೂರ್ಣ' ಎಂಬುದು ಅವರ ಮನೆಗೆ ಅನ್ವರ್ಥವಾದ ಹೆಸರಾಗಿತ್ತು.

ಆ ವರುಷಗಳಲ್ಲಿ ಕೃಷ್ಣರಾಯರಿಂದ ನನಗೆ ಹೊಟ್ಟೆಗೆ ಗ್ರಾಸ ಸಿಕ್ಕುತ್ತಿದ್ದುದು ಮಾತ್ರವಲ್ಲ, ಬುದ್ಧಿಗೆ ಬೇಕಾದ ಗ್ರಾಸವೂ ದೊರಕುತ್ತಿತ್ತು. ನಾನು ಹೆಸರು ಕೂಡ ಕೇಳದೇ ಇದ್ದ ಪುಸ್ತಕಗಳನ್ನು ಕೃಷ್ಣರಾಯರು ಕೊಂಡುಕೊಂಡು ಓದಿರುತ್ತಿದ್ದರು, ಅದರ ಬಗ್ಗೆ ಮಾತನಾಡುತ್ತಿದ್ದರು, ಅದನ್ನು ನನಗೆ ಓದುವುದಕ್ಕೆ ಕೊಡುತ್ತಿದ್ದರು. ಆ ಕಾಲದಲ್ಲಿ ನಮ್ಮ ಸಮವಯಸ್ಸಿನ ಲೇಖಕರಲ್ಲಿ ಕೃಷ್ಣರಾಯರಂತೆ ಪುಸ್ತಕಗಳನ್ನು ಕೊಂಡುಕೊಳ್ಳುತ್ತಿದ್ದ ಇನ್ನೊಬ್ಬರನ್ನು ಕಾಣೆ. ಅವರು ತರಿಸಿ ಶೇಖರಿಸುತ್ತಿದ್ದಷ್ಟು ಕನ್ನಡ ಪತ್ರಿಕೆಗಳನ್ನು ಯಾರು ತರಿಸಿ ಇಟ್ಟುಕೊಳ್ಳುತ್ತಿದ್ದರೋ ನಾನು ಕಾಣೆ. ಪುಸ್ತಕಗಳ ಮೇಲಿನ ಈ ಪ್ರೀತಿ ನಮಗಿಬ್ಬರಿಗೂ ಸಮಾನ ಧರ್ಮವಾಗಿ ನಾವು ಹೆಚ್ಚು ಹತ್ತಿರಬಂದೆವು. ಹಾರ್ದಿಕವಾದ ಈ ಹತ್ತಿರ ಇಂದಿಗೂ ಹಾಗೇ ಉಳಿದುಬಂದಿದೆ. ನಲವತ್ತು ವರ್ಷಗಳ ಹಿಂದೆ ಅವರು ನನ್ನಲ್ಲಿ ತೋರಿದ ಪ್ರೀತಿ ವಿಶ್ವಾಸಗಳು ಇಂದಿಗೂ ಭದ್ರವಾಗಿವೆ. ಅವರ ವಿಷಯದಲ್ಲಿ ನನಗಿರುವ ಆದರ ಗೌರವಗಳು ಇಂದಿಗೂ ಏನೂ ಕಡಮೆಯಾಗಿಲ್ಲ.

೧೯೩೪ರ ವೇಳೆಗೆ ನಮ್ಮ ನಮ್ಮ ಕಾರ್ಯಕ್ಷೇತ್ರಗಳು ಬೇರೆಯಾಗಿ, ಅದರ ಬಾಹುಳ್ಯ ಭಾರವಾಗಿ, ಒಟ್ಟಿಗೆ ಸೇರುವುದು ಕಡಮೆಯಾಯಿತು. ಆದರೂ ಆಗಾಗ ಅವರ ಮನೆಯಲ್ಲಿ ಸೇರುತ್ತಿದ್ದ ಆರ್ಟ್ಸ್ ಕ್ಲಬ್‌ನಲ್ಲಿ ನಡೆಯುತ್ತಿದ್ದ ಕೃತಿವಾಚನಗಳ ನೆಪದಲ್ಲಿ ಬೆಂಗಳೂರಿನ ಪ್ರಮುಖ ಲೇಖಕರೆಲ್ಲರೂ ಆಗಾಗ್ಗೆ

ಒಂದುಗೂಡುವುದು ಸಾಧ್ಯವಾಗುತ್ತಿತ್ತು.

ಆ ಕಾಲದಲ್ಲಿ ಕೃಷ್ಣರಾಯರು ನಾಟಕಗಳನ್ನು ತಾವು ಬರೆಯುತ್ತಿದ್ದುದು ಮಾತ್ರವಲ್ಲ, ಇತರರು ಬರೆದ ನಾಟಕಗಳಲ್ಲಿ ತಾವೂ ಪಾತ್ರವಹಿಸುತ್ತಿದ್ದರು. ನನಗೂ ಕೊಂಚ ನಾಟಕವಾಡುವ ಖಯಾಲಿ ಇತ್ತು. ಹಾಗಾಗಿ ಸಹಾಯಾರ್ಥವಾಗಿ ನಾಟಕಗಳನ್ನು ಆಡುವ ನೆಪದಿಂದ ಎಷ್ಟೋ ಊರುಗಳನ್ನು ಒಟ್ಟಿಗೆ ಸುತ್ತಿದ್ದೇವೆ.

ಕೃಷ್ಣರಾಯರ ಆಸಕ್ತಿಗಳ ವ್ಯಾಪ್ತಿ ನನ್ನದಕ್ಕಿಂತ ವಿಶಾಲ ವಾದದ್ದು.

ಅವರಿಗೆ ಸಾಹಿತ್ಯ ಗೊತ್ತು, ಸಂಗೀತ-ಚಿತ್ರ-ಶಿಲ್ಪ ಗೊತ್ತು. ಅವುಗಳನ್ನು ಕುರಿತು ಕನ್ನಡದಲ್ಲೂ ಇಂಗ್ಲಿಷಿನಲ್ಲೂ ಭಾಷಣ ಮಾಡಿದ್ದಾರೆ. ರವಿವರ್ಮನನ್ನು ಕುರಿತು ಒಂದು ಪುಸ್ತಕವನ್ನು ಬರೆದರು. ಮಹಾಜನಗಳ ಪ್ರೋತ್ಸಾಹ—ಎಂದರೆ ಬಾಯಿಮಾತಿನ ಬರಿಯ ಪ್ರಶಂಸೆಯಲ್ಲ, ಪುಸ್ತಕಗಳನ್ನು ಕೊಂಡು ಓದುವುದರ ಮೂಲಕವಾದ ಪ್ರೋತ್ಸಾಹ-ದೊರಕಿದ್ದಿದ್ದರೆ, ಅಂತಹದು, ಅದನ್ನೂ ಮೀರಿಸಿದ್ದು, ಕನಸಾಗಿಯೇ ನಿಂತುಹೋದದ್ದು ಒಂದು : ಸೂಫಿಧರ್ಮದ ಮೇಲೆ ಅವರು ಬರೆಯಬೇಕಾಗಿದ್ದ ಗ್ರಂಥ! ಕನ್ನಡಿಗರಿಗೆ ಲಭ್ಯವಿಲ್ಲ!

ಕನ್ನಡದಲ್ಲಿ ಸ್ವಂತ ಕೃತಿಗಳು ಸೃಷ್ಟಿಯಾಗುವುದರ ಜೊತೆಗೆ ವಿಶ್ವಸಾಹಿತ್ಯದ ಉತ್ತಮಾಂಶವನ್ನೂ ಕನ್ನಡಕ್ಕೆ ತರಬೇಕೆಂಬುದು ಕೃಷ್ಣರಾಯರಿಗೆ ಇದ್ದ ಒಂದು ಹಂಬಲ. ಕಾಮನ ಬಿಲ್ಲಿನ ಎರಡು ಭಾಗಗಳು ಮತ್ತು ಗಾರ್ಕಿಯ ಮೇಲಿನ ಸಂಕಲನ ಗ್ರಂಥ—ಇದಕ್ಕಿಂತ ಮುಂದೆ ಆ ಹಂಬಲ ಹೋಗಲಿಲ್ಲ. ಒಂದು ಸಲ,

ಎರಡು ಸಲ ಕೈ ಸುಟ್ಟುಕೊಳ್ಳಬಹುದು; ಆದರೆ ಅದಕ್ಕೂ ಒಂದು ಮಿತಿಯಿಲ್ಲವೆ?

ಕೃಷ್ಣರಾಯರಿಗೆ ಸ್ನೇಹಗುಣ ಸಮೃದ್ಧವಾಗಿದೆ. ಮಿತ್ರರನ್ನು ಸಂಪಾದಿಸುವ ಶಕ್ತಿ ಇದೆ. ಇದನ್ನು ಉಪಯೋಗಿಸಿಕೊಂಡು ಅವರು ಕಥಾಂಜಲಿ, ಕನ್ನಡ ನುಡಿ, ವಿಶ್ವವಾಣಿ ಪತ್ರಿಕೆಗಳ ಸಂಪಾದಕ ರಾಗಿ—ಒಂದೆರಡು ವರ್ಷಗಳು ಮಾತ್ರವೇ ಆದರೂ—ಮಾಡಿದ ಕೆಲಸ ಮರೆಯಲಾಗದ ಕೆಲಸ. ಅದರಂತೆಯೇ ಈಚೆಗೆ ಭಾರತೀಯ ಸಂಸ್ಕೃತಿಯನ್ನೂ ಭಾರತೀಯ ಕಲೆಗಳನ್ನೂ ಕುರಿತು ಅವರು ಸಂಪಾದನೆ ಮಾಡಿದ ಗ್ರಂಥಗಳು ಅವರ ಪಾಂಡಿತ್ಯಕ್ಕೂ ಸದಭಿರುಚಿಗೂ ಸಾಕ್ಷಿಯಾಗಿವೆ. ಇವುಗಳನ್ನು ಕಂಡೇ ಮೈಸೂರು ವಿಶ್ವವಿದ್ಯಾನಿಲಯವು ಅವರಿಗೆ ಡಾಕ್ಟರೇಟ್ ಪ್ರಶಸ್ತಿಯನ್ನು ಪ್ರದಾನಮಾಡಿದ್ದು.

ಕೃಷ್ಣರಾಯರಲ್ಲಿ ನನಗೆ ತುಂಬ ಅಪ್ಯಾಯಮಾನವಾಗಿ ಕಂಡ ಗುಣ ಎಂದರೆ: ಪೋಲಿ ಕಿಟ್ಟಿ ಹೇಳಿದ ಹಾಗೆ-'ಯಾರಿಗೂ ಸರ್ ಜುಕಾಯಿಸದೆ ಇರುವ ಗುಣ'. ಒಬ್ಬರಿಗೂ ತಲೆ ತಗ್ಗಿಸಿದವರಲ್ಲ. ತಮ್ಮ ಮನಸ್ಸನ್ನು ತಾವು ಚೆನ್ನಾಗಿ ತಿಳಿದವರು; ಇತರರು ಅದನ್ನು ಒಪ್ಪಲಿ, ಬಿಡಲಿ, ತಮ್ಮ ಅಂತಸ್ಸಾಕ್ಷಿಗೆ ಅನುಸಾರವಾಗಿ ನಡೆಯು ವವರು. ಹಾಗೆ ನಡೆದು, ಅದೆಷ್ಟು ಸಲ ಮೂರನೆಯವರ ನಿಷ್ಠುರಕ್ಕೆ ಗುರಿಯಾಗಿದ್ದಾರೊ! ಆದರೂ ತಾವು ಸರಿಯೆಂದು ನಂಬಿ ಕಂಡ ನಿಜದ ನೇರವನ್ನು ಬಿಟ್ಟವರಲ್ಲ. ಈ ಗಂಡುಗುಣ ಕೃಷ್ಣರಾಯರ ಪ್ರಭಾವ ಲಕ್ಷಣ. ಈ ನಲವತ್ತು ವರ್ಷಗಳ ಕಾಲದಲ್ಲಿ ಅವರು ಎದುರಿಸಬೇಕಾಗಿ ಬಂದಿರುವ ವಿರೋಧಗಳಿಗೆ ಬೇರಾರಾದರೂ

ಸಿಕ್ಕಿದ್ದರೆ, ಪುಡಿಪುಡಿಯಾಗಿ ಹೋಗುತ್ತಿದ್ದರು. ಹಾಗಾಗಿ, ಕೃಷ್ಣ ರಾಯರ ಕೆಲವು ಮುಖಗಳನ್ನು ಸಹಿಸದೆ ಆಡಿಕೊಳ್ಳುವವರು ಕೂಡ ಈ ಧೀರಮುಖಗಳನ್ನು ನಿಸ್ಸಂಕೋಚವಾಗಿ ಮೆಚ್ಚಿಕೊಳ್ಳುತ್ತಾರೆ.

ಕೃಷ್ಣರಾಯರು ಬೆಲೆಯುಳ್ಳ ಅನುಭವವನ್ನು ಬೇಕಾದ ಹಾಗೆ ಸಂಪಾದಿಸಿ ಕೊಂಡಿದ್ದಾರೆ; ತಮ್ಮ ಸ್ವಂತ ಜೀವನದ ಮೂಲಕ, ಹಾಗೂ ಅತ್ಯುತ್ತಮ ಗ್ರಂಥಗಳ ವ್ಯಾಸಂಗದಿಂದ. ತಮ್ಮ ಅನುಭವ ವನ್ನು ತಮ್ಮ ಜನಕ್ಕೆ ತಿಳಿಸಬೇಕೆಂಬ ತೀವ್ರಾಸಕ್ತಿ ಅವರಿಗುಂಟು. ಆದರೆ ನಮ್ಮ ನಾಡಿನಲ್ಲಿ ಅಂತಹ ಹವ್ಯಾಸಗಳನ್ನು ಸಮರ್ಪಕವಾಗಿ ಪೂರೈಸಿಕೊಳ್ಳಲು ಅವಕಾಶಗಳು ಕಡಮೆ. ಆದರೂ ಇದ್ದದ್ದ ರಲ್ಲಿಯೇ ಅವಕಾಶಮಾಡಿಕೊಂಡು ಕೃಷ್ಣರಾಯರು ತಮ್ಮ ಕಾದಂಬರಿಗಳ ಮೂಲಕ ಕನ್ನಡ ವಾಚಕರಿಗೆ ಯಥೇಚ್ಛವಾಗಿ ಸಂತೋಷವನ್ನು ಕೊಡುತ್ತಿದ್ದಾರೆ. ಆ ತಂತ್ರದ ವ್ಯಾಜದಿಂದ ಜನರ ವಿಚಾರಪ್ರಚೋದನೆಯನ್ನೂ ಮಾಡುತ್ತಿದ್ದಾರೆ.

ಉತ್ತಮ ಬರಹಗಾರರೂ ಉತ್ತಮ ವಾಗ್ಮಿಗಳೂ ಆದ ಕೃಷ್ಣರಾಯರು ಇತರ ಬರಹಗಾರರ ಬಗ್ಗೆಯೂ ಇತರ ವಾಗ್ಮಿಗಳ ಬಗ್ಗೆಯೂ ನಿರ್ಮತ್ಸರರು. ಗುಣ ಕಂಡು ಬಂದ ಕಡೆ ಅದನ್ನು ಮೆಚ್ಚಿಕೊಳ್ಳುವರು. ಇದರಲ್ಲಿ ಏನೂ ಸಣ್ಣ ತನವಿಲ್ಲ. ಹಿರಿಯ ರಲ್ಲಿ ಗೌರವ, ಜೊತೆಯವರಲ್ಲಿ ಪ್ರೀತಿ ವಿಶ್ವಾಸ, ಕಿರಿಯರಲ್ಲಿ ವಾತ್ಸಲ್ಯ- ಇವು ಕೃಷ್ಣರಾಯರ ಸಹಜಗುಣಗಳು.

ಕನ್ನಡನಾಡಿನ ಸರ್ವತೋಮುಖವಾದ ಅಭಿವೃದ್ಧಿಯ ಬಗ್ಗೆ ಅವರಿಗೆ ಪಾರವಿಲ್ಲದ ಕಳಕಳಿ. ಅದನ್ನು ತಮ್ಮ ಕೈಲಾದಷ್ಟು ಮಟ್ಟಿಗೆ ಸಾಧಿಸುವುದಕ್ಕಾಗಿ ಅವರು ಬೇಕಾದ ಹಾಗೆ ಬರೆದಿದ್ದಾರೆ,

ಬೇಕಾದ ಹಾಗೆ ಭಾಷಣ ಮಾಡಿದ್ದಾರೆ, ಕರ್ಣಾಟಕದ ಮೂಲೆ ಮೂಲೆಗಳಲ್ಲಿ ತಿರುಗಿ ಬಂದಿದ್ದಾರೆ, ಜನರನ್ನು ಜಾಗೃತಿಗೊಳಿಸಿದ್ದಾರೆ, ಜನಬಲವನ್ನು ಸಂಪಾದಿಸಿಕೊಂಡಿದ್ದಾರೆ.

ಹುಟ್ಟುಸೇನಾನಿಗೆ ಬೇಕಾದ ಹಲವು ಗುಣಗಳು ಕೃಷ್ಣರಾಯರಲ್ಲಿ ಇವೆ. ಅವರಿಗೆ ಹೊಂದಿಕೊಳ್ಳುವ ಸೈನಿಕರು ದೊರಕಬೇಕಷ್ಟೆ. ದೊರಕಿಯೂ ಇದ್ದಾರೆ ಕೆಲವರು. ಅಂಥವರ ಸಂಖ್ಯೆ ಇನ್ನೂ ಹೆಚ್ಚಲಿ, ಕೃಷ್ಣರಾಯರು ಕೈಕೊಂಡಿರುವ ಕೆಲಸ ನೆರವೇರಿ, ಅವರು ಕೃತಾರ್ಥರಾಗಲಿ.

[ಗೋವಾ ಕನ್ನಡ ಸಂಘದ ಪರವಾಗಿ ಶ್ರೀ ಶಾ. ಮಂ. ಕೃಷ್ಣರಾಯರು ಸಂಪಾದಿಸಿ ಪ್ರಕಟಿಸಿರುವ 'ರಸಚೇತನ' ಎಂಬ ಅ. ನ. ಕೃಷ್ಣರಾಯರ ಜೀವನ ಸಾಹಿತ್ಯ ದರ್ಶನಗಳನ್ನೊಳಗೊಂಡ ಗ್ರಂಥಕ್ಕಾಗಿ ಬರೆದದ್ದು.]

◆ ರಾಜರತ್ನಂ ಅನ್ನು ಕುರಿತು ಕೃಷ್ಣರಾಯರು ◆

ಯೆಂಡ ಯೆಡ್ತಿ ಕನ್ನಡ ಪದಗೊಳ್
ಅಂದ್ರೆ ರತ್ನಂಗ್ ಪ್ರಾಣ!

* * *

ಕನ್ನಡ ಪದಗೊಳ್ ಆಡೋದ್ನೆಲ್ಲ
ನಿಲ್ಲೀಸ್ ಬುಡಬೇಕ್ ರತ್ನ!'
ಅಂತ್‌ಔನ್ ಅಂದ್ರೆ-ದೇವ್ರ್ ಆದ್ರ್ ಏನು?
ಮಾಡ್ತೀನ್ ಔನ್ಗೆ ಖತ್ನ!

ಆಗ್ನೆ ಮಾಡೋ ಐಗೋಳ್ ಎಲ್ಲಾ
ದೇವ್ರೆ ಆಗ್ಲಿ-ಎಲ್ಲಾ!
ಕನ್ನಡ್ ಸುದ್ದೀಗ್ ಏನ್ರ ಬಂದ್ರೆ
ಮಾನಾ ಉಳಿಸಾಕಿಲ್ಲ!

ನರಕಕ್ ಇಳ್ಸಿ ನಾಲ್ಗೆ ಸೀಳ್ಸಿ
ಬಾಯ್ ಒಲಿಸಾಕಿದ್ರೂನೆ-
ಮೂಗ್ನಲ್ ಕನ್ನಡ ಪದವಾಡ್ತೀನಿ!
ನನ್ ಮನಸನ್ ನೀ ಕಾಣೆ!

ಯೆಂಡ ಓಗ್ಲಿ! ಯೆಡ್ತಿ ಓಗ್ಲಿ!
ಎಲ್ಲಾ ಕೊಚ್ಕೊಂಡ್ ಓಗ್ಲಿ!
ಪರ್ಪಂಚ್ ಇರೋತನಕ ಮುಂದೆ
ಕನ್ನಡ ಪದಗೊಳ್ ನುಗ್ಲಿ!

ಈ ಪದ್ಯ ಬರೆದಾಗ–ಸುಮಾರು ಎರಡು ದಶಕಗಳ ಹಿಂದೆ ಜಿ. ಪಿ.

ರಾಜರತ್ನಂ ವಿದ್ಯಾರ್ಥಿ ದೆಶೆಯಲ್ಲಿದ್ದರು. ಕನ್ನಡ ಅದೇ ಕಣ್ಣು ಬಿಡುತ್ತಿತ್ತು. ಬರೆಯುವ ಹಂಬಲ ಬಹಳ ಜನಗಳಲ್ಲಿ ಹುಟ್ಟಿತು. ಆ ಕಾಲದಲ್ಲಿ ರಾಜರತ್ನಂ ರೂಢಿ ಭಾಷೆಯಲ್ಲಿ ಕೆಲವು ಪದ್ಯಗಳನ್ನು ಬರೆದು ಹದಿನಾರು ಇಪ್ಪತ್ತು ಪುಟದ ಒಂದು ಸಣ್ಣ ಪುಸ್ತಕ ಪ್ರಕಟಿಸಿದರು. ಅದೇ ಕಾಲಕ್ರಮೇಣ ಬೆಳೆದು ತರುವಾಯ ಸುಪುಷ್ಟವಾದ 'ರತ್ನನ ಪದಗಳು' ಸಂಗ್ರಹವಾಯಿತು.

ಜನಪದ ಭಾಷೆಯನ್ನು ಕಾದಂಬರಿಗೆ ಎಂ. ಎಸ್. ಪುಟ್ಟಣ್ಣನವರೂ ನಾಟಕಗಳಿಗೆ ಟಿ. ಪಿ. ಕೈಲಾಸಂ ಅವರೂ ಈ ಮೊದಲೇ ಉಪಯೋಗಿಸಿಕೊಂಡಿದ್ದರು. ರಾಜರತ್ನಂ ಮತ್ತು ಬೇಂದ್ರೆ ಕಾವ್ಯಕ್ಕೆ ಅದನ್ನು ಬಳಸಿಕೊಳ್ಳುವ ಮೊದಲಿಗರಾದರು.

ರತ್ನನ ಪದಗಳಿಗೆ ಕೇವಲ ಭಾಷಾದೃಷ್ಟಿಯಿಂದ ಪ್ರಾಶಸ್ತ್ಯವಿಲ್ಲ. ಕವಿಪ್ರತಿಭಾಶಾಲಿಯಾದರೆ ಭಾಷೆಯನ್ನು ಬೇಕಾದ ಹಾಗೆ ಬಳಸಿಕೊಳ್ಳಬಲ್ಲ ಎಂಬುದನ್ನು ರಾಜರತ್ನಂ ತೋರಿಸಿದರು. ಆದರೆ ಅದಕ್ಕೂ ಮುಖ್ಯವಾದದು ರತ್ನನ ಪದಗಳ ಭಾವನಾವೇಶ ಮತ್ತು ವಿಚಾರವೈಭವ.

ರಾಜರತ್ನಂ ಬಡತನದಲ್ಲಿ ಹುಟ್ಟಿ ಬೆಳೆದವರು. ವಿದ್ಯಾರ್ಜನೆಗಾಗಿ ಪಡಬಾರದ ಕಷ್ಟ ಪಟ್ಟವರು. ಅವರು ಆಗ ಅನುಭವಿಸಿದ ಸಂಸಾರಕಷ್ಟ ಅಪರಿಮಿತ. ಇಂಥ ವಾತಾವರಣದಲ್ಲಿ ಬರೆಯಲ್ಪಟ್ಟ 'ರತ್ನನ ಪದಗಳು' ಅನಾದೃಶ ಆಶಾವಾದಿತ್ವವನ್ನು ಸಾರಿದವು. ರೋಗ, ಬಡತನ, ಅಪವಾದ ಬೇಕಾದ್ದು ಬರಲಿ. ಹೃದಯದಲ್ಲಿ ಪ್ರೇಮ ಪ್ರತಿಷ್ಠೆಯಾಗಿದ್ದರೆ, ಚಿತ್ತವೃತ್ತಿ ಉನ್ನತ ಆದರ್ಶದ ಕಡೆಗೆ ಹರಿದಿದ್ದರೆ ಮನುಷ್ಯ ಅಂಜಬೇಕಾದುದಿಲ್ಲ, ಅಳುಕಬೇಕಾದುದಿಲ್ಲ

ಎಂಬ ತತ್ವವನ್ನು ಸಾರಿದುವು. ಕನ್ನಡ ನವೋದಯದ ಸಂಧಿಕಾಲ ದಲ್ಲಿ ಪ್ರಕಟವಾದ ಕೆಲವು ಅಮರಕಾವ್ಯಗಳಲ್ಲಿ 'ರತ್ನನ ಪದಗಳು' ಹಿರಿಯ ಸ್ಥಾನ ಪಡೆಯುತ್ತದೆ. ಅಮೇರಿಕೆಯ ಜನತೆಗೆ ವಾಲ್ಟ್ ವ್ಹಿಟ್‌ಮನ್, ಕಾರ್ಲ್‌ಸಾಂಡ್‌ಬರ್ಗ್ ಮತ್ತು ಕ್ಲಿಫರ್ಡ್ ಆಡೆಟ್ಸ್ ಕೊಟ್ಟ ಸಂದೇಶವನ್ನು ರಾಜರತ್ನಂ ಕನ್ನಡಿಗರಿಗಿತ್ತಿದ್ದಾರೆ.

ರಾಜರತ್ನಂ ಕನ್ನಡದ ಕಾರ್ತವೀರ್ಯಾರ್ಜುನರಾಗಿ ಕೈ ತುಂಬ, ಮೈ ತುಂಬ, ಮನದುಂಬ ಕೆಲಸಮಾಡಿದ್ದಾರೆ, ಒಂದು ಲೇಖನ ದಲ್ಲಿ ಪುಟ್ಟಪ್ಪನವರನ್ನು ರಾಜರತ್ನಂ 'ಕನ್ನಡ ದೈತ್ಯ' (Kannada Titan)ಎಂದು ಕರೆದರು. ಆ ಮಾತು ರಾಜರತ್ನಂ ಅವರಿಗೂ ಅನ್ವಯಿಸುತ್ತದೆ.

ಜನಪದ ಭಾಷೆಗೆ ಕೈಯಿಕ್ಕುವ ಮೊದಲು ರಾಜರತ್ನಂ ಶುದ್ಧಭಾಷೆಯಲ್ಲಿ ಹಲವು ಕವಿತೆಗಳನ್ನು ಬರೆದರು, ಕಥನಕವನ ಗಳನ್ನು ಬರೆದರು. ಆದರೆ ಅವುಗಳ ಬೆಳಕು 'ರತ್ನನ ಪದಗಳು' ಮಹಾಪ್ರಭೆಯಲ್ಲಿ ಅಡಗಿಹೋಯಿತು.

ರಾಜರತ್ನಂ ಸಣ್ಣ ಕಥೆಗಳನ್ನು ಬರೆದಿದ್ದಾರೆ. ಅವರ 'ಹನಿಗಳು' ಪ್ರಕಟವಾಗುವುದಕ್ಕೆ ಮೊದಲು ಪತ್ರಿಕೆಗಳಲ್ಲಿ ಕೆಲವು ಕಥೆಗಳು ಪ್ರಕಟವಾಗಿದ್ದವು. 'ಹನಿಗಳು' ಗ್ರಂಥದ ಪ್ರವೇಶದಲ್ಲಿ ಕಥೆಗಾರರು 'ಬದುಕನ್ನು ತೇಲಿಸಲು ಮಾಡಬೇಕಾಗಿರುವ ಅನಂತ ವಾದ ಕೆಲಸ ಕೋಲಾಹಲಗಳ ನಡುವೆ ಅಮೃತಸಮವಾದ ವಿರಾಮ ಗಳು ಆಗಾಗ ಸಿಗುವುದುಂಟು. ಅದುವರೆಗೆ ಮೆಚ್ಚಿಕೊಂಡಿದ್ದ ಬಗೆಗಣ್ಣು ಆಗ ತೆರೆಯುವುದುಂಟು. ಅಂತಹ ವೇಳೆಗಳಲ್ಲಿ ಸುತ್ತಿನ ಜಗತ್ತು ಮನಸ್ಸಿನ ವಿಚಿತ್ರ ದರ್ಪಣದಲ್ಲಿ ಮರುಬಿಂಬಿಸುವು

ದುಂಟು. ಎದುರಿನಲ್ಲಿ ಕಾಗದದ ಕಟ್ಟು, ಕೆಲದಲ್ಲಿ ಮಸಿಪಾತ್ರೆ, ಕೈಯಲ್ಲಿ ಲೇಖನಿಯ ಕುಂಚಿ. ಕುಂಚಿಯಿಂದ ಆಗಾಗ ಜಗುಳಿದ ಹನಿಗಳು-ಮನಸ್ಸಿನ ವಿಚಿತ್ರ ದರ್ಪಣದಲ್ಲಿಯ ಮರುಬಿಂಬಗಳ ಪಡಿಯಚ್ಚುಗಳು. ನೀಲದಿಂದ ಬೀಳುವ ಹನಿಗಳು ಯಾರ ಮನೆಯ ಮುರುಕು ಸೂರನ್ನೂ ಪ್ರದರ್ಶಿಸಬೇಕೆಂದಾಗಲಿ, ಯಾರ ಬಟ್ಟೆಯನ್ನೂ ತೋಯಿಸಬೇಕೆಂದಾಗಲಿ, ಯಾವ ಭೂಮಿಯನ್ನೂ ಫಲವತ್ತು ಮಾಡಬೇಕೆಂದಾಗಲಿ, ಇಲ್ಲಿ ಯಾವ ಹೊಳೆಯನ್ನೂ ಉಕ್ಕಿಸಲೆಂದಾಗಲಿ ಬೀಳುವುದಿಲ್ಲ. ಬೀಳುವುದು ಅವುಗಳ ಧರ್ಮ... ಹನಿಗಳನ್ನು ತಿರುಗಿಸಿ ತಿರುಗಿಸಿ ನೋಡಿದರೆ ಹುಚ್ಚಾಗಿ ಕಾಣಬಹುದು, ಪೆಚ್ಚಾಗಿ ಕಾಣಬಹುದು. ಕ್ರೂರವಾಗಿರಬಹುದು, ಅಸಾಧ್ಯವಾಗಿರಬಹುದು. ಮನಸ್ಸಿನ ವಿಚಿತ್ರ ವ್ಯಾಪಾರ ಚಕ್ರವೂ ಒಂದು ಕುಲಾಲ ಚಕ್ರವು'. ಎಂದು ಹೇಳಿದ್ದಾರೆ. ಓದುಗರಿಗೆ ಹನಿಗಳು ಹುಚ್ಚೂ ಅಲ್ಲ, ಪೆಚ್ಚೂ ಅಲ್ಲ, ಕ್ರೂರವೂ ಅಲ್ಲ; ಅಪೂರ್ವ ಕಲಾಕೃತಿಗಳಾಗಿವೆ. ಅವುಗಳ ಭಾವಸಮುಚ್ಚಯತೆ, ಪಾತ್ರ ಸೃಷ್ಟಿ ಪ್ರೌಢಿಮೆ, ಭಾವನಾವೈವಿಧ್ಯ ಬೆರಗುಗೊಳಿಸುವಂತಿದೆ. ಒಂದೊಂದು ಕಡೆ ಜೀವನದ 'ಅರುಚಿಯಾದ ಅತಿ'ಯನ್ನು ಹೇಳುವ ಹವ್ಯಾಸ ರಾಜರತ್ನಂ ಅವರಲ್ಲಿ ಕಾಣುತ್ತದೆ. ನಿಸರ್ಗ ಚಿತ್ರಗಳನ್ನು ಬರೆಯಲು ಹೊರಡುವ ಶಿಲ್ಪ ರುಚಿಸದ ಅಸಹ್ಯವಾದ ಎಷ್ಟೋ ವಿಷಯಗಳನ್ನು ಸತ್ಯಾರ್ಥ ಪ್ರಕಾಶದ ದೃಷ್ಟಿಯಿಂದ ಹೇಳುತ್ತಾನೆ. ಆದರೆ ಅದರಲ್ಲಿ ಅವನು ಎಂದಿಗೂ ಆಸಕ್ತಿ ವಹಿಸುವುದಿಲ್ಲ.

ಇದೇ ಕಾಲದಲ್ಲಿ ರಾಜರತ್ನಂ ಕೆಲವು ಸಣ್ಣ ನಾಟಕಗಳನ್ನೂ

ಬರೆದರು. ಅವರ ಸರಳಗಳೆಯ 'ಗಂಡುಗೊಡಲಿ' ಕ್ರಾಂತಿಕಾರಕ ನಾಟಕ.

ಕನ್ನಡದಲ್ಲಿ 'ಮಕ್ಕಳ ಸಾಹಿತ್ಯ' ಬೆಳೆಸಲು ರಾಜರತ್ನಂ ಅಪಾರ ಕೃಷಿಮಾಡಿದರು. ಅವರ ಚುಟುಕ-ತುತ್ತೂರಿ-ಕಡಲೆಪುರಿ ಗಳನ್ನು ಓದಿ, ಹಾಡಿ, ನಲಿಯದಿರುವ ಕನ್ನಡ ಮಗುವಿಲ್ಲ.

ಕಾಲ ಉರುಳಿದಂತೆ, ರಾಜರತ್ನಂ ಅವರ ವ್ಯಾಸಂಗ ಬೆಳೆದಂತೆ, ಕಲಾವಿದ ರಾಜರತ್ನಂ ಹಿಂದೆ ಸರಿದು ಪಂಡಿತ ರಾಜ ರತ್ನಂ ಅವರಿಗೆ ಎಡೆ ಬಿಟ್ಟುಕೊಟ್ಟರು. ಆದರೆ ಪಾಂಡಿತ್ಯಪೂರ್ಣ ಗ್ರಂಥರಚನೆಯಲ್ಲಿಯೂ ರಾಜರತ್ನಂ ಸ್ವತಂತ್ರ ಮಾರ್ಗವನ್ನು ನಿರ್ದೇಶಿಸಿಕೊಂಡರು. ಅವರ ಗ್ರಂಥಗಳು ಶುಷ್ಕ ಕನ್ನಡವಕ್ಕಿಯ ಗ್ರಂಥಗಳಾಗದೆ ರಸಸ್ಯಂದಿ ಕಾವ್ಯಗಳಾಗಿವೆ.

ಚೀನಾದೇಶದ ಬೌದ್ಧಯಾತ್ರಿಕರು ಗ್ರಂಥದಿಂದ ಆರಂಭ ವಾದ ರಾಜರತ್ನಂ ಅವರ ಬೌದ್ಧ ಸಾಹಿತ್ಯಸೇವೆ ಇಂದಿನವರೆಗೂ ಹಲವು ಎಡರು ತೊಡರುಗಳನ್ನು ಅನುಭವಿಸುತ್ತಾ ನಡೆದಿದೆ. ಇದಕ್ಕಾಗಿ ಪಾಲಿಭಾಷೆಯನ್ನು ರೂಢಿಸಿಕೊಂಡು ಮೂಲ ಪಾಲಿ ಯಿಂದಲೇ ಬುದ್ಧವಚನ ಮಧುವನ್ನು ಸಂಗ್ರಹಿಸುತ್ತಾ ಬಂದಿದ್ದಾರೆ, ಈ 'ಬುದ್ಧವಚನ'ವು 'ಪಾಲಿ' ಎಂಬ ಒಂದು ಪ್ರಾಕೃತ ಭಾಷಾ ವಿಶೇಷದಲ್ಲಿ ಬರೆಯಲ್ಪಟ್ಟಿದೆ. ಪಾಲೀ ಭಾಷೆಯಲ್ಲಿ ಪ್ರತಿಷ್ಠಿತ ವಾಗಿರುವ ಮಹಾಸಾಹಿತ್ಯ ರಾಶಿಯಲ್ಲಿ 'ಬುದ್ಧ ವಚನ'ವು ಒಂದು ಭಾಗ ಮಾತ್ರ. ಆದರೆ ಪಾಲಿ ಸಾಹಿತ್ಯದ ಸಾಲಿನಲ್ಲಿ ಪ್ರಾಚೀನತೆಯ ಅಗ್ರಸ್ಥಾನವು ಬುದ್ಧವಚನಕ್ಕೆ ಮೀಸಲಾಗಿರುವುದು. ಅಷ್ಟು ಮಾತ್ರವಲ್ಲ; ವೇದ ಮತ್ತು ಹಲವು ಹಳೆಯ ಉಪನಿಷತ್ತುಗಳನ್ನು

ವಿನಾಯಿಸಿದರೆ ಭಾರತವರ್ಷದ ಸರ್ವಸನಾತನ ಸಾಹಿತ್ಯದಲ್ಲಿ ಪ್ರಾಚೀನತೆಯ ದೃಷ್ಟಿಯಿಂದ 'ಬುದ್ಧವಚನ'ವು ಅನುತ್ತರವೆಂದು ವಿಜ್ಞರವಾದ ಸಾಲದುದಕ್ಕೆ, ಭಗವಂತನ ಅಪೂರ್ವ ವ್ಯಕ್ತಿತ್ವವನ್ನು ಕಾಣಬೇಕಾದರೆ, ಆತನ ಸದ್ಧರ್ಮದ ನಿಜಸ್ವರೂಪವನ್ನು ತಿಳಿಯ ಬೇಕಾದರೆ, ಪ್ರಾಚೀನ ಬೌದ್ಧಯುಗದ ಯಾವೊಂದು ವಿಷಯದ ಕಲ್ಪನೆಯಾಗಬೇಕಾದರೆ, "ಬುದ್ಧವಚನ"ವು ಒಂದು ವಿಶ್ವಕೋಶ" ಎಂದು 'ಮಿಲಿಂದ ಪ್ರಶ್ನೆ' ಗ್ರಂಥದ ಮುನ್ನುಡಿಯಲ್ಲಿ ಹೇಳಿದ್ದಾರೆ. ಜಾತಕ ಕಥೆಗಳು, ಪಾಲಿ ಪಜ್ಜ ಪುಷ್ಪಂಜಲಿ, ಧರ್ಮಪದ ಗ್ರಂಥ ಗಳು ಶಾಕ್ಯಸಾಹಿತ್ಯದ ತುಂಬುಕಲ್ಪನೆಯನ್ನು ಕನ್ನಡಗರಿಗೆ ಮಾಡಿ ಕೊಡುತ್ತವೆ. ಈ ಬಗೆಯ ಕೆಲಸ ಭಾರತದ ಇತರ ಪ್ರಾಂತ ಭಾಷೆ ಗಳಲ್ಲಿ ಆಗಿಲ್ಲವೆಂಬ ಸಂಗತಿ ಕನ್ನಡಿಗರಲ್ಲಿ ವಿಶೇಷ ಅಭಿಮಾನ ವನ್ನು ಉಕ್ಕಿಸುತ್ತದೆ. ರಾಜರತ್ನಂ ಸ್ವತಂತ್ರವಾಗಿ ಬರೆದಿರುವ 'ಧರ್ಮದಾನಿ ಬುದ್ಧ' ಭಗವಂತನ ದಿವ್ಯಜೀವನವನ್ನು ಕಿರು ಪ್ರಮಾಣದಲ್ಲಿ ಹಿರಿದಾಗಿ ಹೇಳುವ ಗ್ರಂಥ.

ಬೌದ್ಧ ಸಾಹಿತ್ಯಕ್ಕೆ ರಾಜರತ್ನಂ ಮಾಡಿರುವ ದುಡಿಮೆಯಷ್ಟೇ ಗಣನಾರ್ಹವಾದುದು ಜೈನಸಾಹಿತ್ಯಕ್ಕೆ ಅವರು ಮಾಡಿರುವ ದುಡಿಮೆ—ಸೇವೆ. ಮಾಹಾವೀರನ ಮಾತುಕತೆ—ಭಗವಾನ್ ಮಹಾವೀರ—ಭಗವಾನ್ ಪಾರ್ಶ್ವನಾಥ— ಶ್ರೀ ಗೋಮಟೇಶ್ವರ ಅವರ ದೃಷ್ಟಿಯ ವೈಶಾಲ್ಯವನ್ನೂ ಪಾಂಡಿತ್ಯದ ಆಳವನ್ನೂ ಸಾರುತ್ತಿವೆ.

ಪ್ರಾಚೀನ ಕನ್ನಡ ಸಾಹಿತ್ಯವನ್ನು ಗುರುವಿನ ಸಹಾಯವಿಲ್ಲದೆ ಸ್ವಯಂ ಅಭ್ಯಾಸ ಮಾಡಬೇಕೆನ್ನುವವರಿಗೆ ಕನ್ನಡದಲ್ಲಿ ಸಿಕ್ಕುವ

ನೆರವು ಬಹಳ ಸ್ವಲ್ಪ—ಏನೂ ಇಲ್ಲವೆಂದರೂ ತಪ್ಪಾಗಲಾರದು. ಮಹಾಕವಿಗಳ ಭಾಷಾಪಾಂಡಿತ್ಯ ಛಂದೋವಿನ್ಯಾಸಕ್ಕೆ ಹೆದರಿ, ಕನ್ನಡ ಕಾವ್ಯಗಳೆಂದರೆ ಕಬ್ಬಿಣದ ಕಡಲೆ ಎಂಬ ಪ್ರತೀತಿ ಬೆಳೆದು, ಬಹುಮಂದಿ ಆ ಕಡೆ ಉದಾಸೀನ ತಳೆಯುತ್ತಾರೆ. ಭಾಷೆಯ ಬಿಕ್ಕಟ್ಟನ್ನು ಸಡಿಲಿಸಿ, ಅಲ್ಲಿ ಇಲ್ಲಿ ಟೀಕೆ ಟಿಪ್ಪಣಿಗಳನ್ನು ಸೇರಿಸಿ, ಕನ್ನಡ ಕಾವ್ಯಗಳ ಆಧುನಿಕ ಆವೃತ್ತಿಗಳನ್ನು ಪ್ರಕಟಿಸಬೇಕಾದ ಅಗತ್ಯ ಬಹಳವಾಗಿತ್ತು. ಈ ರಂಗದಲ್ಲಿ ರಾಜರತ್ನಂ ಮಾಡಿರುವ ಸೇವೆ ಅನ್ಯಾದೃಷ್ಯವಾದುದು. ಪಂಪ, ರನ್ನ, ಜನ್ನ, ರತ್ನಾಕರವರ್ಣಿ ಮೊದಲಾದ ಮಹಾಕವಿಗಳ ಕೃತಿಗಳು ಸಾಮಾನ್ಯ ಓದುಗರಿಗೂ ಅಳವಡುವಂತೆ ಪಂಪಭಾರತಸಾರ—ರನ್ನನ ರಸಘಟ್ಟ—ಕಾದಂಬರೀ ಸಂಗ್ರಹ— ಯಶೋಧರ ಚರಿತ್ರೆ ಗ್ರಂಥಗಳನ್ನು ರಚಿಸಿದ್ದಾರೆ.

ಪ್ರಾಚೀನ ಕವಿಗಳ ಕೃತಿಗಳ ಬಗ್ಗೆ ರಾಜರತ್ನಂ ತೋರಿರುವ ಆದರವನ್ನೇ ಆಧುನಿಕ ಕವಿಗಳ ಬಗ್ಗೆಯೂ ತೋರುತ್ತ ಬಂದಿದ್ದಾರೆ. ಕೈಲಾಸಂ, ಸಂಸ, ಮಾಸ್ತಿ ಇವರ ಕೃತಿಪ್ರಸಾರಕ್ಕೆ ರಾಜರತ್ನಂ ಲೇಖನಿ ಅವ್ಯಾಹತವಾಗಿ ಸಾಗಿದೆ.

ರಾಜರತ್ನಂ ಅವರ ದೈಹಿಕ, ಮಾನಸಿಕ ಶಕ್ತಿಗಳೆರಡೂ ಕೊರತೆಗಾಣದ ಒರತೆಗಳು. ಕನ್ನಡ ನಾಡನ್ನು ಅನೇಕ ಸಲ ಸುತ್ತಿ ಬಂದಿದ್ದಾರೆ. ಹೋದಹೋದಲ್ಲಿ ಜನಕ್ಕೆ ಹುಚ್ಚು ಹಿಡಿಯುವಂತೆ ಉದ್ದಾಮ ಭಾಷಣಗಳನ್ನು ಮಾಡಿ ಬಂದಿದ್ದಾರೆ.

ಹಿರಿಯರ ಬಗ್ಗೆ ಗೌರವ, ಕಿರಿಯರ ಬಗ್ಗೆಆದರ, ರಾಜರತ್ನಂ ಅವರ ಹುಟ್ಟುಗುಣಗಳು. ವಿದ್ಯಾರ್ಥಿಗಳಲ್ಲಿ ಸಾಹಿತ್ಯಾಭಿರುಚಿ

ಯನ್ನುಂಟುಮಾಡಿ, ಅವರಲ್ಲಿ ಹಲವರು ಬರೆಹಗಾರರಾಗಿ ರೂಪುಗೊಳ್ಳಲು ರಾಜರತ್ನಂ ಅವಿಶ್ರಾಂತರಾಗಿ ಶ್ರಮಿಸಿದ್ದಾರೆ.

ಕನ್ನಡ ನಾಡಿನಲ್ಲಿ, ಕನ್ನಡ ನಾಡಿನ ಹೊರಗೆ ತಮ್ಮ ಪಾಂಡಿತ್ಯ, ಸೌಜನ್ಯ, ಶ್ರದ್ಧೆ. ಸಾಧನೆಗಳಿಂದ ರಾಜರತ್ನಂ ಕೀರ್ತಿ ಗಳಿಸಿದ್ದಾರೆ ಸಾಹಿತ್ಯ, ಧರ್ಮ ಎಂಬೆರಡು ಮಹಾಶ್ವಗಳನ್ನು ಹೂಡಿ ಕೊಂಡು ಸಾಗಿದೆ, ರಾಜರತ್ನಂ ಬಾಳತೇರು. ಅದು ಹೀಗೇ ನಿಷ್ಕಂಟಕವಾಗಿ ಸಾಗಲಿ ಎಂದು ಮನಃಪೂರ್ವಕವಾಗಿ ಹಾರೈಸುತ್ತೇನೆ.

[ಶ್ರೀ ಕೃಷ್ಣರಾಯರ ಸ್ನೇಹಪರತೆಗೆ ಈ ಲೇಖನ ಒಂದು ಪುಟ್ಟ ಸಾಕ್ಷಿ. ಇದನ್ನು ಅವರ `ಕನ್ನಡ ಕುಲರಸಿಕರು` ಗ್ರಂಥದಿಂದ, ಅವರ ಮಕ್ಕಳ ಅನುಮತಿ ಪಡೆದು, ಬಳಸಿಕೊಂಡಿದ್ದೇನೆ.]

◆ ಕೃಷ್ಣರಾಯರ ನೆನಪಿಗಾಗಿ ◆

'ಕೃಷ್ಣರಾಯರ ನೆನಪು ಮಾಸದೆ ಉಳಿಯಬೇಕಾದರೆ ಏನು ಮಾಡಬಹುದು?' ಎಂಬ ಬಗ್ಗೆ ಹಲವು ಸೂಚನೆಗಳು, ಸಲಹೆಗಳು ಬಂದಿವೆ. ಅವು ಯಾವುವೆಂದರೆ—

೧. ಅವರ ಮನೆಯ ಹತ್ತಿರದ ಬೀದಿಗೆ ಅವರ ಹೆಸರನ್ನು ಇಡುವುದು.

೨. ಕನ್ನಡ ಸಾಹಿತ್ಯ ಪರಿಷತ್ತಿನ ಪ್ರತಿಮಾಗೃಹದಲ್ಲಿ ಅವರ ಭಾವ ಚಿತ್ರವನ್ನು ತೂಗಹಾಕುವುದು.

೩. ಅವರ ಸ್ಮರಣೆಗಾಗಿ 'ಕನ್ನಡ ನುಡಿ'ಯ ಒಂದು ವಿಶೇಷಾಂಕ ವನ್ನು ಪ್ರಕಟಿಸುವುದು.

೪. ಅವರ ಹೆಸರಿನಲ್ಲಿ ವರ್ಷಕ್ಕೊಮ್ಮೆ ಒಂದು ಸ್ಮಾರಕೋ ಪನ್ಯಾಸವನ್ನು ನಡೆಸುವುದು.

೫. ಅವರ ಹೆಸರಿನಲ್ಲಿ ವಿದ್ಯಾರ್ಥಿವೇತನಗಳನ್ನೂ ಚಿನ್ನದ ಪದಕ ಗಳನ್ನೂ ಕೊಡುವುದು.

೬. ಅವರ ಹೆಸರಿನಲ್ಲಿ ಒಂದು ರಂಗಮಂಟಪವನ್ನೋ ಪುರ ಭವನವನ್ನೋ ನಿರ್ಮಿಸುವುದು.

ಇವೆಲ್ಲ ಮಾಮೂಲು. ಇವುಗಳಲ್ಲಿ ಮೊದಲನೆಯ ಮೂರು ಯಾರಿಗೂ ಯಾವ ಖರ್ಚೂ ಇಲ್ಲದೆ ನಡೆದುಹೋಗತಕ್ಕಂಥವು.

ಅನಂತರ ಮೂರು ಆಗಬೇಕಾದರೆ ಹಣ ಒದಗಬೇಕು. ಕನ್ನಡ ನಾಡಿನಲ್ಲಿ ಯಾವ ಕಲಾವಿದನಿಗೆ, ಯಾವ ಸಾಹಿತಿಗೆ, ಇದುವರೆಗೆ ಇಂತಹ ಸ್ಮಾರಕಗಳನ್ನು ನಡಸಿದ್ದಾರೆ ಎಂಬುದನ್ನು ಗಮನಿಸಿದ್ದರೆ, ಇವು ಎಷ್ಟು ಮಟ್ಟಿಗೆ ಕಾರ್ಯಗತವಾದಾವೋ ಎನ್ನಿಸುತ್ತದೆ ಇಷ್ಟರ ಮೇಲೂ, ಕನ್ನಡಿಗರು ಮನಸ್ಸು ಮಾಡಿದರೆ, ಯಾಕಾಗಬಾರದು? ಆಗಲಿ ಸಂತೋಷ.

ಇಷ್ಟೆಲ್ಲ ಆದ ಮೇಲೂ, 'ಮಾಮೂಲೀ ಮನುಷ್ಯ'ರಲ್ಲದ ಕೃಷ್ಣರಾಯರಿಗೆ ನಡಸಬೇಕಾದ ಒಂದೆರಡು ವಿಶಿಷ್ಟವಾದ ಸ್ಮಾರಕಗಳಿಗೂ ಅವಕಾಶವಿದೆ ಎಂದು ನನಗೆನ್ನಿಸುತ್ತದೆ. ಅದನ್ನು ಮುಂದೆ ಹೇಳುತ್ತೇನೆ.

ಸಾರ್ಥಕ ಸ್ಮಾರಕ

ಆಯುರ್ದಾನ

ಕೃಷ್ಣರಾಯರಿಗೆ ತಕ್ಕದ್ದಾದ, ಹಾಗೂ ಅರ್ಥಪೂರ್ಣವಾದ ಸ್ಮಾರಕವೆಂದರೆ—ಅವರ ಬರಹಗಳಲ್ಲಿ ಅತ್ಯುತ್ತಮವಾದವುಗಳನ್ನು ಚಾಲ್ತಿಯಲ್ಲಿ ಇರಿಸುವುದು; ಅಂದರೆ ಅವುಗಳಿಗೆ ಆಗಾಗ್ಗೆ ಆಯುರ್ದಾನ ಮಾಡುವುದು.

ಅವರ ಕಥಾಕಾದಂಬರಿಗಳಿಗೆ ಪ್ರಕಾಶಕರು ಬೇಗ ದೊರಕಿಯಾರು. ಆದರೆ ಅವರ ವಿಚಾರಸಾಹಿತ್ಯಕ್ಕೆ ಅಷ್ಟು ಜನ ಪ್ರಕಾಶಕರು ದೊರಕಲಾರರು. ಏಕೆಂದರೆ ಅವುಗಳಿಗೆ ಮಾರುಕಟ್ಟೆಯ ಯೋಗ್ಯತೆ ಕಡಮೆ. ಆದರೂ ಅಂಥವುಗಳನ್ನೂ ಪ್ರಕಟಿಸುವ ಧೀರ ಪ್ರಕಾಶಕರು ಇಲ್ಲದೆಹೋಗಿಲ್ಲ.

ಇಂತಹ ಪರಿಸ್ಥಿತಿಯಲ್ಲಿ, ಇತರರು ಪ್ರಕಾಶಿಸಲಾಗದೆ, ಅಥವಾ ಪ್ರಕಾಶಿಸಲಾರದೆ, ಅಥವಾ ಪ್ರಕಾಶಿಸಲೊಲ್ಲದೆ, ಅಥವಾ ಪ್ರಕಾಶಿಸುವ ಧೈರ್ಯ ಸಾಲದೆ 'ಅನಾಥ'ವಾದ ಅ. ನ. ಕೃ. ಕೃತಿಗಳನ್ನು ಕಾಲಕಾಲಕ್ಕೆ ಪ್ರಕಟಿಸುವ ಒಂದು ಸಂಸ್ಥೆ ಏರ್ಪಾಟಾಗಬೇಕು. ಅವರ ಮನೆಯವರು, ಮಕ್ಕಳು, ಜೊತೆಗೆ ಯಾರಾದರೂ ಆಪ್ತರು (Trust-Worthy ಆದವರು) ಸೇರಿ, ಕೃಷ್ಣರಾಯರ ಕೃತಿಗಳ ಪ್ರಕಾಶನಕ್ಕೆ ಒಂದು TRUST ರಚನೆಯಾಗಬೇಕು.

ಕೃಷ್ಣರಾಯರ ಕೃತಿಗಳ ಸಾರ್ಥಕತೆಯಲ್ಲಿ ನಂಬಿಕೆಯಿರುವವರು, 'ಶ್ರೀ ಕೃಷ್ಣಾರ್ಪಣಮಸ್ತು' ಎಂದು ತಲಾ ಒಂದು ರೂಪಾಯಿ ಕೊಟ್ಟರೂ ಸಾಕು, TRUST ಕೆಲಸಮಾಡಲು ಬೇಕಾದ ಬಂಡವಾಳ ಕ್ಷಿಪ್ರದಲ್ಲಿಯೇ ಸಿದ್ಧವಾಗಿಬಿಡುತ್ತದೆ.

ಈ ಗುಣದ ಸ್ಮಾರಕಕ್ಕೆ Top priority ದೊರಕಬೇಕು. ಇದಕ್ಕಾಗಿ ಸರಕಾರದ ಮುಖ ನೋಡಬೇಕಾದ್ದಿಲ್ಲ; ಅದರ ಕೈ ಕಾಯಬೇಕಾದ್ದಿಲ್ಲ. ಸಾರ್ವಜನಿಕರ ಸಹಕಾರದಿಂದ ಕೃಷ್ಣರಾಯರ ಕೃತಿಗಳು ಊರ್ಜಿತವಾಗಬೇಕು, ಬದುಕಿದ್ದಾಗ ಕೃಷ್ಣರಾಯರು ಯಾರ ಹಂಗಿಗೂ ಒಳಗಾದವರಲ್ಲ.

ಅ. ನ. ಕೃ. ನಾಟಕಚಕ್ರ

ಕೃಷ್ಣರಾಯರು ಹಲವಾರು ನಾಟಕಗಳನ್ನು ಬರೆದಿದ್ದಾರೆ. ಅವು ಹಿಂದೆ ರಂಗಭೂಮಿಯ ಮೇಲೆ ಹೆಸರು ಗಳಿಸಿದುವು. ಅವು ಈಗ ಅಚ್ಚಿನಲ್ಲಿ ಉಪಲಬ್ಧವಾಗಿಲ್ಲ. ಅವು ಪುನಃ ಪುಸ್ತಕರೂಪ ದಲ್ಲಿ ಹೊರಗೆ ಬರಬೇಕು.

ಅಷ್ಟೇ ಅಲ್ಲ; ಅವು ಮತ್ತೆ ರಂಗಸ್ಥಳದ ಮೇಲೆ ಕಾಣಿಸಿ ಕೊಳ್ಳಬೇಕು. ಕೃಷ್ಣರಾಯರ ಅಭಿಮಾನಿಗಳಲ್ಲಿ ಕೆಲವರಾದರೂ ಅಭಿನಯದ ಆಸೆಯುಳ್ಳವರು. ಇದ್ದಾರೆ. ಅವರು ಈ ನಾಟಕ ಗಳನ್ನು ಎತ್ತಿಕೊಂಡು, ಶ್ರದ್ಧೆಯಿಂದ ಅಭ್ಯಾಸಮಾಡಿ ಆಡಿದರೆ— ೧) ಕೃಷ್ಣರಾಯರ ನಾಟಕಗಳಿಗೆ ಜೀವದಾನ ಮಾಡಿದ ಹಾಗಾಗು ತ್ತದೆ; ೨) ಇಂದಿನವರಿಗೆ ಪರಿಚಯ ತಪ್ಪಿಹೋಗಿರುವ ಕೃಷ್ಣ ರಾಯರ ಒಂದು ರಸಮುಖದ ಪರಿಚಯವಾಗುತ್ತದೆ; ೩) ಆಡಿದ

ನಾಟಕಗಳಿಂದ ಬರುವ ಯತ್ಕಿಂಚಿತ್ ವರಮಾನ ಟ್ರಸ್ಟಿನ ಕೆಲಸ ಕಾರ್ಯಗಳಿಗೆ ನೆರವಾಗುತ್ತದೆ. ನಾಟಕ ಆಡಿದಾಗ ಅಲ್ಲವೆ ನಾಟಕ ಬರೆದದ್ದು ಸಾರ್ಥಕ?

'ಶ್ರೀ ಕೃಷ್ಣ ಕುಟಿ'

ಬಸವಣ್ಣನವರು 'ಜಂಗಮಪ್ರಾಣಿ' ಆಗಿದ್ದ ಹಾಗೆ ಕೃಷ್ಣ ರಾಯರಿಗೆ ಪುಸ್ತಕ ಪ್ರಾಣವಾಗಿತ್ತು. ಅವರು ಸ್ವತಂತ್ರವಾದ ವ್ಯಾಸಂಗದಿಂದ ವಿದ್ಯಾವಂತರಾದವರು; ಅದಕ್ಕೆ ಬೇಕಾದ ಗ್ರಂಥ ಗಳನ್ನು—ಹೊಟ್ಟೆ ಕಟ್ಟಿ, ಬಟ್ಟೆ ಕಟ್ಟಿ—ಕೊಂಡುಕೊಳ್ಳುವ ಹವ್ಯಾಸದವರು. ಕೈ ತಪ್ಪಿಹೋದ ಪುಸ್ತಕಗಳನ್ನು ಬಿಟ್ಟರೂ, ಅಳಿದುಳಿದಿರುವ ಪುಸ್ತಕಗಳೂ ಹಳೆಯ ಕಾಲದ ಪತ್ರಿಕೆಗಳೂ ಬಹಳ ಅಮೂಲ್ಯವಾದುವೆಂದು ತಿಳಿದಿದ್ದೇನೆ. ಈಗ ಅವರ ಕಾಲಾನಂತರ ಅವರ ಪುಸ್ತಕಗಳ ಸಂಗ್ರಹದ ರಕ್ಷಣೆಗೆ ಏರ್ಪಾಡಾಗಬೇಕು. ಬೆಂಗಳೂರು ವಿಶ್ವವಿದ್ಯಾಲಯದವರು ಈ ಸಂಗ್ರಹಕ್ಕೆ ಯೋಗ್ಯವಾದ ಬೆಲೆಯನ್ನು ಕೊಟ್ಟು, ಅದನ್ನು acquire ಮಾಡಿಕೊಂಡು, ಅದನ್ನು ಕೃಷ್ಣರಾಯರ ಹೆಸರಿನಲ್ಲಿ ಒಂದು Reference Library ಆಗಿ ಸಂರಕ್ಷಿಸಬಹುದು. ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ post graduate ವಿದ್ಯಾರ್ಥಿಗಳಿಗೆ ಇದೊಂದು ಅಪೂರ್ವ ನಿಧಿಯಾಗುತ್ತದೆ. ಸಾರ್ವಜನಿಕರು ಆಗ ಯಾರು ಬೇಕಾದರೂ ಕೃಷ್ಣರಾಯರ ಪುಸ್ತಕ ಭಂಡಾರವನ್ನು ಸಂದರ್ಶಿಸಬಹುದು.

ಬೆಂಗಳೂರು ವಿಶ್ವವಿದ್ಯಾಲಯದ Reference ವಿಭಾಗ

ದಲ್ಲಿ ಬಿ.ಎಂ.ಶ್ರೀಕಂಠಯ್ಯ, ಟಿ.ಎಸ್. ವೆಂಕಣ್ಣಯ್ಯ, ಎ. ಆರ್. ಕೃಷ್ಣಶಾಸ್ತ್ರೀ ಇವರುಗಳಿಗೆ ಸ್ಮಾರಕವಾಗಿ ಒಂದು 'ಶ್ರೀಗಂಧಕುಟಿ' ಇದೆ. ಇದರ ಜೊತೆಗೆ ಡಾಕ್ಟರ್ ಎ. ವೆಂಕಟಸುಬ್ಬಯ್ಯನವರ ಗ್ರಂಥಭಂಡಾರವೂ ಬಂದು ಸೇರಿದೆ. ಈಗ ಡಾಕ್ಟರ್ ಅ.ನ.ಕೃಷ್ಣ ರಾಯರದೂ ಬಂದು, 'ಶ್ರೀಕೃಷ್ಣಕುಟಿ'ಯಾಗಿ ಅಲ್ಲಿ ಸೇರಿದರೆ, ಅದು ಅತ್ಯಂತ ಸಮಂಜಸವಾಗುತ್ತದೆ. ಏಕೆಂದರೆ, ಕೃಷ್ಣರಾಯರು ಬೆಳೆದದ್ದು ಬೆಂಗಳೂರಿನಲ್ಲಿ, ಬದುಕಿದ್ದು ಬೆಂಗಳೂರಿನಲ್ಲಿ, ಅವರ ದೇಹಾವಸಾನವಾದದ್ದೂ ಬೆಂಗಳೂರಿನಲ್ಲಿ. ಬೆಂಗಳೂರು ಕೃಷ್ಣರಾಯರ ಧರ್ಮಕ್ಷೇತ್ರ, ಅವರ ಕರ್ಮಕ್ಷೇತ್ರ. ಆದ ಕಾರಣದಿಂದ ಅವರ ವೈಯುಕ್ತಿಕ ಪುಸ್ತಕ ಸಂಗ್ರಹ ಬೆಂಗಳೂರಿನಲ್ಲಿ ಇರಬೇಕಾದ್ದು ಯುಕ್ತ. ಅದು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಇದ್ದರೆ, ಹೆಚ್ಚು ಉಪಯುಕ್ತ.

ಅನಕೃ ಅವರು ಸಂಗ್ರಹಿಸಿದ್ದ 'ರಂಗಭೂಮಿ' ಮೊದಲಾದ ಪತ್ರಿಕೆಗಳಲ್ಲಿ ಉಪಲಬ್ದವಿದ್ದಷ್ಟನ್ನು ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯ 'ಶ್ರೀಗಂಧಕುಟಿ'ಯಲ್ಲಿ ಸಂರಕ್ಷಿಸಿ ಇಡಲಾಗಿದೆ.

◆ ಸ್ನೇಹವನ್ನು ಕುರಿತ ಕೆಲವು ಸುಭಾಷಿತಗಳು ◆

ಯಸ್ಯ ಮಿತ್ರೇಣ ಸಂಭಾಷಾ ಯಸ್ಯ ಮಿತ್ರೇಣ ಸಂಸ್ಥಿತಿಃ
ಯಸ್ಯ ಮಿತ್ರೇಣ ಸಂಲಾಪಃ ತತೋ ನಾಸ್ತೀಹ ಪುಣ್ಯವಾನ್

ಯಾರಿಗೆ ಮಿತ್ರನೊಡನೆ ಸಂಭಾಷಣೆಯುಂಟೋ, ಯಾರಿಗೆ ಮಿತ್ರನೊಡನೆ ಒಡನಾಟವುಂಟೋ. ಯಾರಿಗೆ ಮಿತ್ರನೊಡನೆ ಸಲ್ಲಾಪವುಂಟೋ—ಅವನಿಗಿಂತ ಪುಣ್ಯವಂತನಾದವನು ಈ ಲೋಕದಲ್ಲಿ ಇಲ್ಲ.

ಕೇನಾಮೃತಮಿದಂ ಸೃಷ್ಟಂ ಮಿತ್ರಮಿತ್ಯಕ್ಷರದ್ವಯಂ
ಆಪದಾಂ ಹಿ ಪರಿತ್ರಾಣಂ ಮನಸ್ಸಂತಾಪಭೇಷಜಮ್

ಆಪತ್ತಿನಲ್ಲಿ ಕಾಪಾಡತಕ್ಕಂಥದೂ ಮನಸ್ಸಿನ ಸಂತಾಪಗಳಿಗೆ ಔಷಧವಾಗಿರುವಂಥದೂ ಆದ'ಮಿತ್ರ' ಎಂಬ ಎರಡಕ್ಷರದ ಈ ಅಮೃತವು ಯಾರಿಂದ ಸೃಷ್ಟಿಸಲ್ಪಟ್ಟಿತು?

ಕರಾವಿವ ಶರೀರಸ್ಯ ಅಕ್ಷ್ಣೋರಿವ ಚ ಪಕ್ಷ್ಮಣೀ
ಅಪ್ರೇರಿತಹಿತಂ ಕಾರ್ಯಂ ಇದಂ ಸನ್ಮಿತ್ರಲಕ್ಷಣಂ

ಶರೀರಕ್ಕೆ ಎರಡು ಕೈಗಳು ಹೇಗೋ, ಕಣ್ಣುಗಳಿಗೆ ಎರಡು ರೆಪ್ಪೆಗಳು ಹೇಗೋ ಹಾಗೆ, ಕೃತಕವಾದ ಯಾವ ಪ್ರೇರಣೆಯೂ ಇಲ್ಲದೆ ಹಿತವನ್ನು ಮಾಡುವುದು ಸನ್ಮಿತ್ರನ ಲಕ್ಷಣ.

ಆರಂಭಗುರ್ವೀ ಕ್ಷಯಿಣೀ ಕ್ರಮೇಣ
ಲಘ್ವೀ ಪುರಾ ವೃದ್ಧಿಮುಪೈತಿ ಪಶ್ಚಾತ್

> ದಿನಸ್ಯ ಪೂರ್ವಾರ್ಧಪರಾರ್ಧ ಭಿನ್ನಾ
> ಛಾಯೇವ ಮೈತ್ರೀ ಖಲಸಜ್ಜನಾನಾಂ

ದುರ್ಜನರ ಮೈತ್ರಿಯು, ದಿವಸದ ಪೂರ್ವಾರ್ಧದಲ್ಲಿರುವ ನೆರಳಿನ ಹಾಗೆ ಪ್ರಾರಂಭದಲ್ಲಿ ದೊಡ್ಡದಾಗಿದ್ದು, ಕ್ರಮೇಣ ಕ್ಷಯಿಸಿಹೋಗುತ್ತದೆ. ಸಜ್ಜನರ ಮೈತ್ರಿಯಾದರೋ, ದಿವಸದ ಉತ್ತರಾರ್ಧದಲ್ಲಿನ ನೆರಳಿನಂತೆ ಮೊದಲು ಲಘುವಾಗಿದ್ದು, ಅನಂತರ ವೃದ್ಧಿಯನ್ನು ಹೊಂದುತ್ತದೆ.

> ಪಾಪಾನ್ನಿವಾರಯತಿ ಯೋಜಯತೇ ಹಿತಾಯ
> ಗುಹ್ಯಂ ನಿಗೂಹತಿ ಗುಣಾನ್ ಪ್ರಕಟೀಕರೋತಿ
> ಆಪದ್ಗತಂ ಚ ನ ಜಹಾತಿ ದದಾತಿ ಕಾಲೇ
> ಸನ್ಮಿತ್ರಲಕ್ಷಣಮಿದಂ ಪ್ರವದಂತಿ ಸಂತಃ

ಪಾಪ ಮಾಡದಂತೆ ತಡೆಯುತ್ತಾನೆ; ಹಿತವಾದದ್ದರಲ್ಲಿ ಸೇರಿಸುತ್ತಾನೆ; ಗುಟ್ಟನ್ನು ಗುಟ್ಟಾಗಿ ಇರಿಸುತ್ತಾನೆ; ಗುಣಗಳನ್ನು ಪ್ರಕಟಮಾಡುತ್ತಾನೆ; ಆಪತ್ತು ಆದಾಗಲೂ ತೊರೆದು ಹೋಗುವುದಿಲ್ಲ; ಸಕಾಲದಲ್ಲಿ ಸಹಾಯ ಮಾಡುತ್ತಾನೆ— ಇವು ಸನ್ಮಿತ್ರನ ಲಕ್ಷಣಗಳೆಂದು ಸತ್ಪುರುಷರು ಹೇಳುತ್ತಾರೆ.

ಹಂಬಲ

ರಾಗ : ಮೋಹನ

ಅರೆಯಲಿ ಬಿಡುವೆಯ ತೊಡಗಿದ ಕಾರ್ಯವ
ಪರಿಪೂರ್ಣ ಮಾಡೋ ಶ್ರೀಹರಿ
ಪರಿಪೂರ್ಣಮಾಡೋ

ಮುನ್ನದಿನದಿ ನಾ ಮಗುವಾಗಿರುವಂದು
ಇನ್ನೂ ಅರಿಯದಿರಲೂ ಏ-
ನನ್ನೂ ಅರಿಯದಿರಲೂ
ಚೆನ್ನ ನೀನು ಬಂದು ಎನ್ನೊಡನಾಡುತೆ
ನಿನ್ನ ಸೊಬಗ ತೋರಿದೆ ಎನ್ನ
ನಿನ್ನವಳನು ಮಾಡಿದೆ   ಅರೆಯಲಿ

ಹರೆಯವು ತಂದುದು ಅರಿವಿನ ಪ್ರೇಮದ
ಅರಿದಾದ ಬೇನೆಯನು ಹರಿ
ತರಲಿಲ್ಲ ಅದು ನಿನ್ನನು
ಮರುಳೆ ಬಾರನು ಹರಿ ಎಂಬರು ಸಖಿಯರು
ಕಿರಿಯಳು ನಾನೆಂಬರು ಆಸೆ
ಹಿರಿದು ಎಂದೆಣಿಸರು   ಅರೆಯಲಿ

ಮೌನದ ಕಣ್ಣ ವಿಲಾಸದ ಹಾಸದಿ
ನಾನು ಬರುವೆನೆಂದೇ ಹರಿ
ನೀನದ ಮರೆಯುವುದೇ
ದಾನವ ಮರೆಯದೆ ಬಾರೊ ಬಾರದಿರೆ

ಮಾನ ಉಳಿವುದೇನೋ ನಿನ್ನ
ಮಾನ ಉಳಿವುದೇನೋ ಅರೆಯಲಿ

ಎನ್ನನರಿಯದೆ ಬಂದು ಎನ್ನ ಮನುವನು ಹೊಕ್ಕು
ಎನ್ನ ನಿನ್ನವಳನು ಮಾಡಿದೇ ಹರಿ
ನಿನ್ನವಳನು ಮಾಡಿದೇ
ಚೆನ್ನಾ ಹಿಡಿದು ಅಂದು ಇಂದು ಬಿಡುವೊಡೆ
ಗನ್ನಗತಕವಾಗದೆ ಹರಿ
ಅನ್ಯಾಯವಾಗದೇ ಅರೆಯಲಿ

('ಶ್ರೀನಿವಾಸ'ರ 'ಮನವಿ'ಯಿಂದ)

DON'T QUIT

when things go wrong,
        as they sometimes will,
when the road you are trudging
        seems all uphill,
when the funds are low
        and the debts are high,
And you want to smile
        but you have to sigh,
when care is pressing you down a bit-
Rest if you must, but don't you quit.

Life is queer with its twists and turns,
As everyone of us sometimes learns,
And many a fellow turns a bout
when he might have won
        had he stuck out.
Don't give up though the pace seems
                                        slow-
You may succeed with another blow.

Often the goal is nearer than
It seems to a faint and faltering man;
Often the struggler has given up
when he might have captured

the victor's cup;
And he learned too late
when the night came down
How close he was to the golden crown.

Success is failure turned inside out-
The silver tint of the clouds of doubt.
And you never can tell
how close you are,
It may be near when it seems afar.
So stick to the fight
when you are hardest hit,
it's when things seems worst
that you mustn't quit

Don't quit but turn to God

(ANON)

ಸಂಗಾತಿ

ರಾಗ : ಮಧ್ಯಮಾವತಿ

ನೀನೆನ್ನ ಜೊತೆಯಲೇ ಎಡೆಬಿಡದೆ ನಡೆದುದನು
ನಾನಿನ್ನೆವರಮರಿಯೆನಯ್ಯ

ನಿದ್ದೆಯಲಿ ನಡೆವಂತೆ ಮೆಯ್ಮರೆದು ನಡೆದೆನೋ
ಮೊದ್ದು ತನದಲಿ ನಿನ್ನ ಅರಿಯದೋ ಮನವು
ಸದ್ದು ಮಾಡದ ನಿನ್ನ ನಯದ ನಡೆಯೋ ಮಾಯೆ
ಹೊದ್ದು ಎನ್ನನು ನಿನ್ನ ಮರೆಗೊಳಿಸಿತೋ

ಮರುಭೂಮಿಯಲಿ ನಾನು ಒರುವನಾದೆನೆ ಎಂದು
ಮರುಮರುಗಿ ಮನದಲೇ ಕರಗಿದೆನು ದೊರೆಯೆ
ಅರಿಯೆನಾ ದಾರಿಯನು ತೋರುವರು ಇಲ್ಲೆಂದೆ
ಅರಿಯೆ ನೀ ಕೈಹಿಡಿದು ನಡೆಯಿಸಿದುದ

ತಿರುಗಿ ನೋಡಲು ಮಳಲ ಮೇಲೆ ನಾ ನಡೆದಡಿಯ
ಗುರುತಿನೊಡನಿಹುದು ನಿನ್ನಡಿಯ ಗುರುತು
ಹರಿದಾರಿಗಳನ್ನು ಕಾಡಿನಲಿ ಬೇಸರಪಡದೆ
ಕರುಣಾಳು ಎನ್ನೊಡನೆ ನಡೆದೆ ನೀನು.

('ಶ್ರೀನಿವಾಸ'ರ 'ಮನವಿ'ಯಿಂದ)

“ಕಮಲೇ ಕಮಲೋತ್ಪತ್ತಿಃ”

ಪ್ರಿಯ ಚಂದ್ರಕೀರ್ತಿ,

ಕಾಳಿದಾಸನ ಸಮಸ್ಯೆ ಇದ್ದ ಹಾಗೆ ಇದೂ ಒಂದು ಸಮಸ್ಯೆ.

ಅಲ್ಲಿ, ಒಂದು ದೊಡ್ಡ ಮುಖಕಮಲದಲ್ಲಿ ಎರಡು ವಿಶಾಲ ವಾದ ನಯನ ಕಮಲಗಳನ್ನು ಆತ ಕಂಡ.

ಇಲ್ಲಿ, ನನ್ನ ‘ನಿರ್ಭಯಾಗ್ರಫಿ’ ಎಂಬ ಮಹಾಕಮಲದಲ್ಲಿ ಐದು ‘ಕಂತು’ಗಳೆಂಬ ಮರಿಕಮಲಗಳನ್ನು ಇದುವರೆಗೆ ಕಂಡಿದ್ದೀರಿ.

ಕೆಸರಿಲ್ಲದ ಕಡೆ ಕಮಲ ಹುಟ್ಟಿಕೊಳ್ಳುವುದಿಲ್ಲ. ಅದರ ಹಾಗೆಯೇ ಇಲ್ಲಿಯಾದರೂ, ಬೇಶ್ರೀ ಬೀಮಂಣನವರ ಕುಚೋದ್ಯ ವೆಂಬ ಕೆಸರು ಫಲವತ್ತಾಗಿ ಒದಗಿದ್ದರೆ, ಪುಂಖಾನುಪುಂಖವಾಗಿ ಬಂದ ಈ ಐದು ಕಂತುಗಳು ವಿಕಾಸವಾಗುತ್ತಿರಲಿಲ್ಲ; ನನ್ನ ಹಾಸ್ಯೇಂದ್ರಿಯದ ಪಟುತ್ವವನ್ನು ನಾನೇ ಕಂಡುಕೊಳ್ಳಲಾಗುತ್ತಿರ ಲಿಲ್ಲ.

ಗಯಟೆ ಕವಿ ತನ್ನ ಫೌಸ್ಟ್ ನಾಟಕದಲ್ಲಿ, ದೇವರನ್ನು ನಿರಾಕರಿಸುವ ಸೈತಾನನನ್ನು ಮೆಫಿಸ್ಟಾಫಿಲೀಸ್ ಎಂದು ಕರೆಯು ತ್ತಾನೆ. ಈ ಮೆಫಿಸ್ಟಾಫಿಲೀಸ್ ಯಾರು ಎಂದರೆ-ಅವನೇ ಹೇಳು ತ್ತಾನೆ:

'Part of that Power, not understood,
Which always wills the Bad,
and always works the Good'.

ಚೆಂಡನ್ನು ನೆಲಕ್ಕೆ ಒಗೆದರೆ, ಆ ಚೆಂಡು ಮೇಲಕ್ಕೆ ಪುಟ ನೆಗೆಯುತ್ತದೆ. ಅದರಂತೆಯೇ 'I am the spirit that denies' ಎಂಬವನಿಂದಲೇ ಆಸ್ತಿಕನ ಶ್ರದ್ಧೆ ಇನ್ನಷ್ಟು ಬಲವಾಗುತ್ತದೆ. ಆಸ್ತಿಕರಿಗೆ ಮೆಫಿಸ್ಟಾಫಿಲೀಸನು ಶತ್ರುವೇಷದ ಮಿತ್ರ.

ಒಟ್ಟಿನಲ್ಲಿ ತಾತ್ಪರ್ಯ ಏನೆಂದರೆ— ನನ್ನ 'ನಿರ್ಭಯಾಗ್ರಫಿ'ಯ ಕಂತುಗಳೆಂಬ ಕಮಲಗಳಿಗೆ ಜನ್ಮಭೂಮಿ ಯಾದ ಕುಚೋದ್ಯದ ಕೆಸರನ್ನು ಯಾರುಕಾರಿದರೋ ಅವರಿಗೆ ನನ್ನ ಕೃತಜ್ಞತೆಯ ವಂದನೆಗಳು.

ಒಂದು 'ನಿರ್ಭಯಾಗ್ರಫಿ'ಯ ಕಮಲದೊಳಗೆ ಐದು 'ಕಂತು'ಗಳೆಂಬ ಕಮಲಗಳು ತಲೆದೋರಿದ್ದು ಒಂದು ಆಶ್ಚರ್ಯ ವಾದರೆ, ಈ ಐದೂ ಕಮಲಗಳೊಳಗಿನ ಮಕರಂದವನ್ನು ಒಟ್ಟು ಗೂಡಿಸಿಕೊಂಡ ಇನ್ನೊಂದು ದೊಡ್ಡ ಕಮಲ ರೂಪುಗೊಳ್ಳು ತ್ತಿರುವುದು— ನಿಮಗೆ ಹೇಗೋ ನನಗೂ ಹಾಗೆಯೆ—ಇನ್ನೊಂದು ಆಶ್ಚರ್ಯ.

ಈ ಕಂತುಗಳ ಮಾರಾಟದಿಂದ ಬರುವ ಹಣವನ್ನು 'ಅನಕೃ ಸ್ಮಾರಕ ನಿಧಿ'ಯಾಗಿ ಬಳಸಬೇಕೆಂಬುದು ನಿಮ್ಮ ಮನಸ್ಸಿ ನಲ್ಲಾಗಲಿ, ನನ್ನ ಮನಸ್ಸಿನಲ್ಲಾಗಲಿ, ನನ್ನ ಕಮಲಗಳಿಗೆ ಕಾರಣ ವಾದ ಕೆಸರನ್ನು ಒದಗಿಸಿದವರ ಮನಸ್ಸಿನಲ್ಲಾಗಲಿ ಇರಲಿಲ್ಲ. ಆದರೆ, 'ಆದದ್ದೆಲ್ಲಾ ಒಳಿತೇ ಆಯಿತು' ಎಂದು ದಾಸರು ಆಡಿದ

ಹಾಗೆ, ಈಗ ಆರಂಭವಾಗಿ ಬೆಳೆಯುತ್ತಿರುವ 'ಅನಕೃ ಸ್ಮಾರಕ ನಿಧಿ'ಯನ್ನು ಕುರಿತು ಚಿಂತಿಸಿದರೆ, ಇದರಲ್ಲಿ ಕಣ್ಣಿಗೆ ಕಾಣದ ಆ ಜಗನ್ನಾಟಕ ಸೂತ್ರಧಾರನ ಕೈವಾಡವನ್ನು ನಾನು ಒಪ್ಪಿಕೊಳ್ಳುತ್ತೇನೆ.

ನಾನು ಮಾಡಬೇಕಾಗಿರುವ, ಮಾಡುತ್ತಿರುವ ಕೆಲಸ ಹತ್ತಾರು ಇವೆ. ಅವುಗಳ ಜೊತೆಗೆ ಇದೂ ಮತ್ತೊಂದು. ಇದನ್ನು O.T. ಎಂದು ಬೇಕಾದರೆ ಕರೆಯರಿ. O.T. ಎಂದರೆ Overtime ಎಂದೂ ಆಗಬಹುದು, Operation Theatre ಎಂದೂ ಆಗಬಹುದು. ಕೆಟ್ಟು ನಾರುತ್ತಿದ್ದ ಅಂಗ ಗಳನ್ನು ಕುಯಿದು ಇಲಾಜುಮಾಡಿದ್ದೇನೆ, ಈ ಕಂತುಗಳಲ್ಲಿ.

ಶ್ರೀ ಅವರ 'ಅಶ್ವತ್ಥಾಮನ್' ನಾಟಕದಲ್ಲಿ, ಅಶ್ವತ್ಥಾಮನ ಕಳೇಬರಕ್ಕೆ ಶ್ರೀಕೃಷ್ಣನು ಗೌರವ ತೋರುವುದಕ್ಕೆ ಬಂದಾಗ, ಭೀಮಸೇನನು—

'ಸತ್ತನೊಳ್ ಇದೇನ್ ಭಕ್ತಿ? ನಿನ್ನ ಬಗೆಯನ್ ಅರಿಯೆನ್' ಎನ್ನುತ್ತಾನೆ. ಅದರಂತೆಯೇ, ಅನಕೃ ಸ್ಮಾರಕ ನಿಧಿಗೆ ನಡೆಯುತ್ತಿರುವ ಈ ಪ್ರಯತ್ನವನ್ನು ಕುರಿತು ಯಾರಾದರೂ ಭೀಮರು ಕೇಳಿದರೆ—

'ಇದೆಲ್ಲ ಭೀಮಸೇನರಿಗೆ ಅರ್ಥವಾಗುವ ವಿಷಯವಲ್ಲ' ಎಂದು ಹೇಳಿ, ಮಾತು ಮುಗಿಸುತ್ತೇನೆ.

೫-೧೨-೭೫ ಜಿ. ಪಿ. ರಾಜರತ್ನಂ

ಜಿ. ಪಿ. ರಾಜರತ್ನಂ ಅಂತರ್ದರ್ಶನ - 6

ಶಿಶುಪಾಲ ವಧ

ಇದು

ಜಿ. ಪಿ. ರಾಜರತ್ನಂ ಅವರ

ನಿರ್ಭಯಾಗ್ರಫಿ

ಆರನೇ ಕಂತು

ಸಂಪಾದಕನ ಅರಿಕೆ

"ನಿರ್ಭಯಾಗ್ರಫಿ"ಯ ಕಂತುಗಳನ್ನು ಓದಿದ ವಾಚಕರು ಶ್ರೀ ರಾಜರತ್ನಂ ಅವರಿಗೆ ಬರೆದ ಪತ್ರಗಳಲ್ಲಿ ಕೆಲವನ್ನು ಇಲ್ಲಿ ಕೊಟ್ಟಿದ್ದೇವೆ. ಜೊತೆಗೆ ರಾಜರತ್ನಂ ಅವರ ಒಂದೆರಡು ವಿವರಣಾತ್ಮಕ ಲೇಖನಗಳೂ ಇವೆ. ಇಲ್ಲಿ ಪ್ರತಿಯೊಂದಕ್ಕೂ ಉಚಿತವಾದ ನಾಮಕರಣ ಮಾಡಿದವರು—ರಾಜರತ್ನಂ

ಚಂದ್ರಕೀರ್ತಿ

ಪುಸ್ತಕೆಯೊಳಗೆ

◆ ಶಿಶುಪಾಲ ವಧ ◆

ಪ್ರಿಯ ಚಂದ್ರಕೀರ್ತಿ,

ಚಲದೊಳ್ ದುರ್ಯೋಧನಂ,
ನನ್ನಿಯೊಳ್ ಇನತನಯಂ,
ಗಂಡಿನೊಳ್ ಭೀಮಸೇನಂ,
ಬಲದೊಳ್ ಮದ್ರೇಶಂ,
ಅತ್ಯುನ್ನತಿಯೊಳ್ ಅಮರಸಿಂಧೂದ್ಭವಂ,
ಚಾಪವಿದ್ಯಾಬಲದೊಳ್ ಕುಂಭೋದ್ಭವಂ,
ಸಾಹಸದ ಮಹಿಮೆಯೊಳ್ ಫಲ್ಗುಣಂ,
ಧರ್ಮದೊಳ್ ನಿರ್ಮಲಚಿತ್ತಂ ಧರ್ಮಪುತ್ರಂ,
ಮಿಗಿಲ್!
ಇವರ್ಗಳಿನ್ ಈ ಭಾರತಂ ಲೋಕಪೂಜ್ಯಂ!

ಇದನ್ನು ನಿಮಗೆ ಪಾಠ ಮಾಡಿದಾಗ 'ಕೃಷ್ಣನ ಹೆಸರೇ ಇಲ್ಲವಲ್ಲಾ?' ಎಂದು ಕೇಳಿದ್ದಿರಿ. ಆಗ ಅದಕ್ಕೆ ಏನು ಸಮಾಧಾನ ಹೇಳಿದೆ ನೆಂಬುದು ಹಾಗಿರಲಿ.

ಯಾರು ಯಾರಿಂದ ಭಾರತವು ಲೋಕಪೂಜ್ಯವಾಯಿತೋ ಅವರ ಹೆಸರಿನ ಪಟ್ಟಿಯಲ್ಲಿ ಕೃಷ್ಣನದು ಕೈತಪ್ಪಿಸಿಕೊಂಡಿರುವ ಹಾಗೇ ಇನ್ನೂ ಎಷ್ಟೋ smaller fry ಕಾಣೆಯಾಗಿದ್ದಾರೆ.

ಅವರಲ್ಲಿ ಅಗ್ರಗಣ್ಯನಾದವನು—ಶಿಶುಪಾಲ. ಬೈಗುಳ ಪ್ರಯೋಗದಲ್ಲಿ ಈತ ಅನಭಿಷಿಕ್ತ ಚಕ್ರವರ್ತಿ. ಅಪಹಾಸ್ಯಕ್ಕೆ ಅದಿ

ಚಕ್ರೇಶ್ವರನಾದ ಈತನ ಕೊಂಕುಮಾತುಗಳಿಗೆ ಸ್ವಂತ ತಾಯಿ, ತಂದೆ, ಹೆಂಡತಿ, ಮಕ್ಕಳು, ಮೊಮ್ಮಕ್ಕಳು ಈಡಾಗಿ, ಆಡುವುದಕ್ಕಿಲ್ಲ ಅನುಭವಿಸುವುದಕ್ಕಿಲ್ಲ ಎಂಬ ಜೀವನ್ಮೃತಾವಸ್ಥೆಯನ್ನು ಅನುಭವಿಸಿದರು. But one day Shishupala over-reached himself and dislocated his shoulder.

ತನಗೆ ಯಾವುದು ಮರ್ಯಾದೆ ಎಂಬುದನ್ನು ಮರೆತು, ಅಗ್ರಪೂಜೆಗೆ ಅಡ್ಡವಾಗಿ, ಕೃಷ್ಣನನ್ನು ಬಾಯಿಗೆ ಬಂದ ಹಾಗೆ ಬಯ್ಯತೊಡಗಿದ. ಅವನ ಬೈಗುಳನ್ನು ಮಂದಸ್ಮಿತವದನನಾಗಿ ಕೇಳುತ್ತ—'ಮುನಿಯಲೆನಗಾಗ, ಬಯ್ ಬಯ್ಯೆ ಸಲಿಸುವೆಂ ನೂರುವರಂ' ಎಂದ, ಕೃಷ್ಣ.

ದೀಪದ ಶಿಖಿಗೆ ಎರಗಿದ ರೆಕ್ಕೆಹುಳುವಾದ ಶಿಶುಪಾಲ. ನೂರು ಬೈಗಳು ಮುಗಿಯಿತೋ ಇಲ್ಲವೋ-ಕೃಷ್ಣ ಅವನ ಕಡೆಗೆ ತನ್ನ ಚಕ್ರವನ್ನು ಬೀಸಿದ. ಅರ್ಘ್ಯಕ್ಕಾಗಿ ಎತ್ತಿದ ತಳಿಗೆಯನ್ನೇ ತೆಗೆದು ಇಟ್ಟನೆಂದೂ ಕೆಲವರು ಹೇಳುತ್ತಾರೆ.

ಅದರ ಪರಿಣಾಮವಾಗಿ ಶಿಶುಪಾಲನ ಕೊರಳು ಕತ್ತರಿಸಿ ಹೋಯಿತು. ಎಂದು ಕೆಲವರು ಹೇಳುತ್ತಾರೆ. ಇಲ್ಲ, ಅವನ ನಾಲಗೆ ಮಾತ್ರ ಕತ್ತರಿಸಿ ಹೋಯಿತು, ಎಂದು ಇತರರು ಹೇಳುತ್ತಾರೆ. ಒಟ್ಟಿನ ಮೇಲೆ ಶಿಶುಪಾಲನ ಸೊಲ್ಲು ಅಡಗಿಹೋಯಿತು.

ನನ್ನನ್ನು ಅಪಹಾಸ್ಯ ಮಾಡಿ ನಿಂದಿಸುವುದಕ್ಕಾಗಿಯೇ 'ಪ್ರಾಚೀನಾವೀತಿ'ಯನ್ನು ಧರಿಸಿದ್ದ ಅವರ ಎದೆಯು ಈಗ ತನ್ನ ಯಜ್ಞೋಪವೀತವನ್ನು ಕಳೆದುಕೊಂಡು ಬೋಳುಬೋಳಾಗಿದೆ. ಆದರೂ ಬಾಯಿ ಇನ್ನೂ ವಟಗುಟ್ಟುವುದು ನಿಂತಿಲ್ಲ. ಒಂದು

ಸಮಾಧಾನ ಏನೆಂದರೆ-ಮೂರು ನಾಲ್ಕು ವರ್ಷ ಹಿಂದೆ ಮಾಡುತ್ತಿದ್ದ ಆರ್ಭಟ ಈಚಿನ ವರ್ಷಗಳಲ್ಲಿ ತುಂಬ ಮೆತ್ತಗಾಗಿ ಹೋಗಿದೆ. ಇದಕ್ಕೆ ನನ್ನ ಹಾಸ್ಯದ ಬಡಿಗೆಗಳ ಪ್ರಯೋಗ ಕಾರಣವೋ, ಅಥವಾ ಅವರ ಸಹಜ ಮನೋದೈಹಿಕ ನಿತ್ರಾಣ ಕಾರಣವೋ-ಅದು ಹೇಗಾದರೂ ಇರಲಿ, ಅವರ'ಬಯ್ಯೋಗ್ರಫಿ'ಯ ಗ್ರಾಫ್ ಇಳಿಮುಖವಾಗಿರುವುದು ಅವರ ಬರವಣಿಗೆಯಲ್ಲಿ ಕಂಡುಬರುತ್ತಿದೆ. ಇದು ಅವರ ಸಾಹಿತ್ಯಕ್ಕೆ ಶುಭಸೂಚನೆ.

ಸ್ಯಮಂತಕ

ಪೂಜ್ಯ ಗುರುಗಳೆ,

"ಇಲ್ಲಪ್ಪ. ಇವರು ಎಲ್ಲೋ ಚೌತಿಚಂದ್ರನನ್ನು ನೋಡಿರಬೇಕು. ಸ್ಯಮಂತಕೋಪಾಖ್ಯಾನಾನ ಕೇಳೋದು ಮರೆತಿರಬೇಕು. ಅದಕ್ಕೇ ಇವರಿಗೆ ಇಂಥ ಅಪವಾದ ಬಂದು ಅಗತುಕೊಂಡಿರೋದು" ಅಂತ ನಮ್ಮ ಪಕ್ಕದ ಮನೆ ಜೋಯಿಸರು ಹೇಳಿದರು—

"ಕಾಲವಾದ ಅ. ನ. ಕೃ. ಅವರನ್ನು ಕುರಿತು ಮಾತನಾಡೋಕೆ ರಾಜರತ್ನಂ ಇನ್ನೂರು ರೂಪಾಯಿ ಕೇಳಿದರು" ಅನ್ನೋ ಸುಳ್ಳು ಸುದ್ದಿಯನ್ನು ಜನಗಳ ಬಾಯಿಂದ ಕೇಳಿ, ಪತ್ರಿಕೆಗಳಲ್ಲಿ ಓದಿದಾಗ.

ತ್ರೇತಾಯುಗದಲ್ಲಿ ಸೀತೆಯ ಮೇಲೆ ನಿರಾಧಾರವಾದ ಅಪವಾದವನ್ನು ಆರಂಭ ಮಾಡಿ, ಒಬ್ಬ ಅಗಸ ತನ್ನ ಬಾಯನ್ನು ಹೊಲಸು ಮಾಡಿಕೊಂಡನಂತೆ. ಅವನ ಕಲಿಯುಗ ಅವತಾರಿ ಯಾರೆಂಬುದು ಈಗ ಅವರ, ಇವರ ಬರಹಗಳಿಂದ ಬಯಲಿಗೆ ಬಂದಿದೆ.

ದ್ವಾಪರಯುಗದಲ್ಲಿ ಅಪವಾದ ಕೃಷ್ಣನನ್ನು ಕೂಡ ಬಿಡಲಿಲ್ಲ. ಅವನು ಸ್ಯಮಂತಕಮಣಿಯನ್ನು ಅಪಹಾರ ಮಾಡಿದನೆಂದು ಯಾರೋ ಗುಸುಗುಸು ಆರಂಭಮಾಡಿದರು. ಕೃಷ್ಣ ಸ್ಯಮಂತಕವೇನಾಯಿತು ಎಂದು ಹುಡುಕಿಕೊಂಡು ಹೋದ. ಕಡೆಗೇನಾಯಿತು ಎಂಬ ಕತೆ ತಮಗೆ ಗೊತ್ತು. ಸತ್ರಾಜಿತ ತಾನು

ಅಪವಾದ ಹೊರಿಸಿದ್ದು ತಪ್ಪು ಎಂದು ಒಪ್ಪಿಕೊಂಡು, ಕೃಷ್ಣನ ಕಾಲನ್ನು ತೊಳೆದು, ಅವನಿಗೆ ತನ್ನ ಮಗಳಾದ ಸತ್ಯಭಾಮೆಯನ್ನು ತಪ್ಪು ಕಾಣಿಕೆಯಾಗಿ ಒಪ್ಪಿಸಿದ.

ಸುಮಾರು ಇಪ್ಪತ್ತು ವರ್ಷಗಳ ಹಿಂದೆ, ತಾವು ಜೈನ ತೀರ್ಥಂಕರರನ್ನು ನಿಂದಿಸಿದಿರೆಂಬ ವೃಥಾ ಅಪವಾದ ಬಂದಾಗ, ತಾವು ಯಾವ ಸಾಹಿತ್ಯ ಕೃತಿ ನಿರ್ಮಾಣಗಳಿಂದ ಆ ಅಪವಾದವನ್ನು ಆಧಾರರಹಿತವಾದದ್ದೆಂದು ಪ್ರಮಾಣೀಕರಿಸಿದಿರೋ ಅದು ನನಗೆ ಇನ್ನೂ ನೆನಪಿದೆ.

ಅದರಂತೆಯೇ ಈಗಲಾದರೂ, ಈ ಇನ್ನೂರು ರೂಪಾಯಿನ ಅಪವಾದವನ್ನು ಗುಡಿಸಿಹಾಕುವುದಕ್ಕಾಗಿ ತಮ್ಮ 'ನಿರ್ಭಯಾಗ್ರಫಿ' ಎಂಬ ಈ ರಸಮಯವಾದ ಸಮ್ಮೂರ್ಜನಿಯನ್ನು ತಯಾರಿಸಲು ಎಷ್ಟು ವೇಳೆ ವ್ಯಯವಾಯಿತೋ ಎಷ್ಟು ಹಣ ಕರ್ಚಾಯಿತೋ ನಾ ಕಾಣೆ.

ಕಳೆದುಹೋದದ್ದು ಏನಾದರೂ ಇರಲಿ. ಈಗಂತೂ ನೀವು ರಾಹುವಿನ ಮುಖದಿಂದ ಹೊರಬಂದ ಚಂದ್ರನಂತಾಗಿದ್ದೀರಿ.

ವಿಷ್ಣುವಿನ ವಕ್ಷಃಸ್ಥಲದಲ್ಲಿರುವ ಕೌಸ್ತುಭದಂತೆ, ಹಾಲಾಹಲ ವನ್ನು ಕೂಡಿದ ಪರಶಿವನ ಕೊರಳಿನ ನೀಲಿಮೆಯಂತೆ, ನಿಮ್ಮ ಕೃತಿಗಳ ಮಾಲೆಯಲ್ಲಿ ನಿಮ್ಮ 'ನಿರ್ಭಯಾಗ್ರಫಿ'ಯು ಸ್ಯಮಂತ ಕಮಣಿಯಂತೆ ಇದೆ. ತಮಗೆ ನನ್ನ ಅಭಿನಂದನೆಗಳು. ಹಾಗೂ ಅಭಿವಂದನೆಗಳು.

ತಮ್ಮ ವಿಧೇಯ
ಆನಂದಮೂರ್ತಿ

◆ ಗದೆ, ಬಿಲ್ಲು ಮತ್ತು ವೀಣೆ ◆

ಮಿತ್ರರೆ,

ನಿಮ್ಮ 'ನಿರ್ಭಯಾಗ್ರಫಿ'ಯ ಕಂತುಗಳಲ್ಲಿ ನಿಮ್ಮ ನಾಲಗೆ ಆಡಿರುವುದನ್ನು ನೋಡಿದಾಗ ನನಗೆ—

"ಗದೆ ಬೀಸುವಂತಲ್ತು, ಭೀಮ, ಬಿಲ್ವೆಸನ್,
ಬಿಲ್ಲೊಂದು, ಮೇಣ್ ಬೀಣೆಯೊಂದು"

ಎಂಬ ಏಕಲವ್ಯನ ಮಾತು ನೆನಪಾಯಿತು.

ನಿಮ್ಮ ಒಂದು ನಾಲಗೆಯಲ್ಲಿ ಗದೆಯ, ಬಿಲ್ಲಿನ ಹಾಗೂ ವೀಣೆಯ ಗುಣವಿದೆ. ನಿಮ್ಮೆದುರಿಗೆ ಭೀಮಸೇನ ಪಡ್ಚ!

ಇತಿ ನಮಃ

—ಶಿವರಾಮಯ್ಯ

◆ ಹುಟ್ಟಿದ ಹಬ್ಬ ◆

ಸನ್ಮಾನ್ಯ ಶ್ರೀ ರಾಜರತ್ನಂ ಅವರ ಸನ್ನಿಧಿಯಲ್ಲಿ ಸಾಷ್ಟಾಂಗ ನಮಸ್ಕಾರಗಳು.

ನೆನ್ನೆ ಬೇಶ್ರೀ ಬೀಮಣ್ಣನವರ 60ನೇ ಬರ್ತ್‌ಡೇ ಪಾರ್ಟಿಗೆ ನೀವು ಬಂದು, ನಮ್ಮ ಮಾನ ಉಳಿಸಿದಿರಿ.

ನಿಮ್ಮನ್ನು ಈ ಸಮಾರಂಭಕ್ಕೆ ಕರೆಯಬೇಕೋ ಬೇಡವೋ ಎಂಬ ಬಗ್ಗೆ ಸುಮಾರು ಚರ್ಚೆಯೇ ಆಯಿತು. ಕೊನೆಗೆ ಒಂದು ಇನ್‌ವಿಟೇಷನ್ ತಮಗೂ ಕಳಿಸಬೇಕೆಂದೂ ತೀರ್ಮಾನವಾಯಿತು.

ತಾವು ಬರಲಾರಿರಿ ಎಂದುಕೊಂಡಿದ್ದೆವು. ಯಾಕೆಂದರೆ— 'ಅದು ಯಾವ ಮುಖ ಎತ್ತಿಕೊಂಡು ಬರತಾರ್ರೀ ಅವರು ? ಮೊನ್ನೆ ತಾನೆ ಅವರ ಮೂಗು ಕೂಯ್ದುಹಾಕಿದೀವಿ' ಎಂದು ಯಾರೋ ಅಂದಿದ್ದರು. ತಾವು ಬಂದಿದ್ದರಿಂದ ನಮಗೆ ಆದ ಆಶ್ಚರ್ಯ, ಆನಂದ ಅಷ್ಟಿಷ್ಟಲ್ಲ.

ತಾವು ಬರುವ ಮೊದಲು 'ಬಂದರೇನ್ರಿ? ಬಂದರೇನ್ರಿ?' ಎಂದು ಕೇಳುತ್ತಿರುವಾಗ ತಾವು ಬಂದು ಹಿಂದಿನ ಕುರ್ಚಿಯಲ್ಲಿ ಶ್ರೀ ಸಿಂಗ್ ಅವರೊಂದಿಗೆ ಕೂತಿರಿ.

ಇದು ತಿಳಿದಾಗ—'ಯಮಗುಂಡಿಗೆ ಕಾಣ್ರೀ' ಎಂದು ಹೇಳುತ್ತ 'ಇಲ್ಲಿ ಬಂದು ಎದುರಿಗೆ ಕೂತುಕೋ ಅಂತ ಕರೀರಿ'

ಅಂದರು. ನಾನು ಬಂದು ತಮ್ಮನ್ನು ಕರೆದಾಗ ತಾವು 'ಇಲ್ಲಿಂದಲೇ ಕಾಣಿಸುತ್ತೆ, ಕೇಳಿಸುತ್ತೆ' ಎಂದು ಅಲ್ಲಿಯೇ ಉಳಿದಿರಿ.

ಅವೊತ್ತು ಅವರ ಹುಟ್ಟುಹಬ್ಬದ ಸಭೆಯಲ್ಲಿ ತಮ್ಮ ರತ್ನನ ಪದಗಳ ಗಾಯನ ನಡೆದದ್ದು, ನಾಲ್ಕು ವರ್ಷಗಳ ಹಿಂದೆ ನ್ಯಾಷನಲ್ ಕಾಲೇಜಿನಲ್ಲಿ ತಮ್ಮ ಅರವತ್ತನೇ ವರ್ಷವರ್ಧಂತಿ ನಡೆದಾಗ ತಾವೇ ಓದಿದ ರತ್ನನ ಪದಗಳ, ನಾಗನ ಪದಗಳ ನೆನಪು ತಂದಿತು.

ತಾವೂ ಸ್ವಲ್ಪ ಹೊತ್ತು ಇದ್ದು, ಅನಂತರ ಹೊರಟು ಹೋದಿರಿ. ಅದು ಅವರ ಗಮನಕ್ಕೆ ಬಂದಾಗ—'ಹೋಯ್ತು ಬಿಡು, ಪೀಡಾ!' ಎಂದರು.

ಅವರು ಮೊದಲು ಹೀಗಿರಲಿಲ್ಲ. ಈಚೀಚೆಗೆ ಹೀಗೆ ಆಡುತ್ತಿದ್ದಾರೆ. ಅವರನ್ನು ನರಳಿಸುತ್ತಿರುವ ಅಲ್ಸರುಗಳಿಗೂ ಈ ಅಬೆರೇಷನ್ನುಗಳಿಗೂ ಏನಾದರೂ ಸಂಭಂಧವಿರಬಹುದೋ ಏನೋ!

ಅಂತೂ ಅವೊತ್ತು ನೀವು ಬಂದದ್ದು ನಮಗೆ ತುಂಬಾ ಸಂತೋಷ.

You did not let down your admirers. God bless you, sir.

With warm regards

ಚಂದ್ರಶೇಖರ

ಒಂದು ಟಿಪ್ಪಣಿ

ಇಲ್ಲಿ 'ಮೂಗು ಕುಯ್ದಿರುವುದು' ಎಂದರೆ ಆಗ ತಾನೇ 'ಪ್ರಜಾಮತ'ದಲ್ಲಿ (11-6-72) ಪ್ರಕಟವಾಗಿದ್ದ 'ಚಕ್ರವರ್ತಿ ವಜ್ರ' ಲೇಖನ.

ಇದನ್ನು ಮೊದಲು ಶ್ರೀ ರಾಜರತ್ನಂ ಅವರ ಗಮನಕ್ಕೆ ತಂದಾಗ,

'ಇನ್ನೊಬ್ಬರ ಮುಖಕ್ಕೆ ಮಸಿ ಬಳಿಯಬೇಕೆಂದು ಮಸಿಯನ್ನು ಎತ್ತಿಕೊಂಡಾಗ, ಅವರ ಮುಖಕ್ಕಿಂತ ಮೊದಲು ನಮ್ಮ ಕೈಯೇ ಮಸಿಯಾಗುತ್ತದೆ ಎಂಬುದು ಈ ಬುದ್ಧಿವಂತರಿಗೆ ಹೊಳೆಯದೆ ಹೋಯಿತಲ್ಲಾ! ಏನು ಹಾಸ್ಯ ಕಲಿತು ಏನು ಪ್ರಯೋಜನ?' ಎಂದು ರಾಜರತ್ನಂ ಅವರು ಹೇಳಿದರು.

—ಚಂದ್ರಕೀರ್ತಿ,

ಕಪಿಚೇಷ್ಟೆ

ಸರ್,

ಎಲ್ಲರನ್ನೂ ಬಿಟ್ಟು ನಿಮ್ಮ ತಂಟೆಗೆ ಯಾಕೆ ಬಂದರು ಇವರು?

"ಅವ್ಯಾಪಾರೇಷು ವ್ಯಾಪಾರಂ ಯೋ ನರಃ ಕರ್ತುಮಿಚ್ಛತಿ
ಸ ಏವ ನಿಧನಂ ಯಾತಿ ಕೀಲೋತ್ಪಾಟೀನ ವಾನರಃ"

ಕೀಲು ಕಿತ್ತ ಕೋಡಗದ ಗತಿ ಏನಾಯಿತೆಂದು ಎಳೆಯ ಮಕ್ಕಳಿಗೂ ಗೊತ್ತು. ಬಾಲ ಸಿಕ್ಕಿಹೋಯಿತೆಂದು ಕೆಲವರು ತೇಲಿಸುತ್ತಾರೆ. ಆದರೆ, ವಾಸ್ತವವಾಗಿ ನಡೆದದ್ದು ಏನೆಂದರೆ—

"ತಸ್ಯ ಮುಷ್ಕದ್ವಯಂ ಲಂಬಮಾನಂ ಕಾಷ್ಠಖಂಡದ್ವಯಾದಭ್ಯಂತರೇ ಪ್ರವಿಷ್ಟಮ್| ಅನಂತರಂ ಸ ಚ ಸಹಜ ಚಪಲತಯಾ ಮಹತಾ ಪ್ರಯತ್ನೇನ ತಂ ಕೀಲಕಮಾಕೃಷ್ಟವಾನ್| ಆಕೃಷ್ಟೇ ಚ ಕೀಲಕೇ ಚೂರ್ಣಿತಾಂಡದ್ವಯಃ ಪಂಚತ್ವ ಗತಃ||"

"ಕಪಿಗೆ ಚಪಲತೆ ಸಹಜಂ'. 'ಮಾಡಿದ್ದುಣ್ಣೋ ಮಹಾರಾಯ'. ನಿಮ್ಮ ಗೋಜಿಗೆ ಬರಬಾರದಾಗಿತ್ತು. ಅನುಭವಿಸಲಿ, ಬಿಡಿ.

ರಾಮಶರ್ಮ

ಟಿಪ್ಪಣಿ:—ಮುಷ್ಕದ್ವಯ=ಅಂಡದ್ವಯ=ಎರಡು ಬೀಜ.

◆ ರನ್ನನ ಗರುಡಿ ◆

ಸರ್,

ತಮ್ಮ 'ನಿರ್ಭಯಾಗ್ರಫಿ'ಯ ಮೂರನೇ'ಕಂತು' ಆದ 'ಹಾಸ್ಯದ ಬಡಿಗೆ'ಯಲ್ಲಿ ಬೇಶ್ರೀ ಅವರಿಗೆ 'Pint by pint ' ಆಗಿ 'ಗುಟುಕು ನೀರು' ಕುಡಿಸಿರುವುದನ್ನು ಮೇಲಿಂದ ಮೇಲೆ ಓದಿದೆ. ಆಗ—

"ಇದು ಲಾಕ್ಷಾಗೇಹದಾಹಕ್ಕೆ...........

"ಇದು ವಿಷವಂ ವಿಷಾನ್ನಕ್ಕೆ..........

"ಇದು ಆ ನಾಡ ಜೂದಿಂಗೆ............

"ಇದು ಪಾಂಚಾಲೀ ಪ್ರಪಂಚಕ್ಕೆ.........

"ಇದು ಕೃತಕಸಭಾಳೋಕನ ಭ್ರಾಂತಿಗೆ... ....

"ಎಂದು ಓವದೆ ಪೊಯ್ದಂ—

"ಕಾಲ್ಗಳಂ, ತೋಳ್ಗಳಂ, ಅಗಲುರಮಂ, ಕೆನ್ನೆಯಂ,

ನೆತ್ತಿಯಂ, ಕೋಪದಿನ್

"ಅಯ್ದುಂ ದುರ್ನಯಕ್ಕೆ ಐದಡೆಯಂ

"ಉರುಗದಾದಂಡದಿಂ ಭೀಮಸೇನಂ"

ಎಂದು 'ಗದಾಯುದ್ಧ'ದಲ್ಲಿ ನೀವು ಪಾಠ ಮಾಡಿದ್ದ ಪದ್ಯ ಜ್ಞಾಪಕ ಬಂತು.

ಒಂದೇ ವ್ಯತ್ಯಾಸ ಏನೆಂದರೆ: ಅಲ್ಲಿ ಭೀಮ ದುರ್ಯೋಧನನನ್ನು ಬಡಿದ; ಇಲ್ಲಿ ನೀವು ಭೀಮನನ್ನು ಚೆಚ್ಚುತ್ತಾ ಇದ್ದೀರಿ.

ಎಷ್ಟೇ ಆದರೂ ನೀವು ಆ ಹಳೇ ರನ್ನನ ಗರುಡೀಲಿ ವರಿಸೆ ಕಲಿತವರಲ್ಲವೆ!

—ನಾಗರಾಜ

ರಾಜರತ್ನಂ=ಸೆಕ್ಯುಲರ್ ಧರ್ಮ

ಪೂಜ್ಯರೆ,

ತಾವು ಬರೆದಿರುವ 'ನಿರ್ಭಯಾಗ್ರಫಿ'ಯ ಮೂರು ಪುಸ್ತಿಕೆಗಳನ್ನು ಓದಿದೆ. ಅವುಗಳಲ್ಲಿ ತಾವು ಚಂದ್ರಕೀರ್ತಿ ಅವರಿಗೆ ನೀಡಿರುವ ಸಮಾಧಾನದ ಮಾತುಗಳು ಕ್ಷಮಾಮೂರ್ತಿ ಧರ್ಮರಾಜನ ಗುಣಗಳನ್ನು ನೆನಪಿಗೆ ತರುತ್ತವೆ.

'ಚಕ್ರವರ್ತಿ ವಜ್ರ' ಲೇಖನವು ಪ್ರಜಾಮತ ಪತ್ರಿಕೆಯಲ್ಲಿ ಪ್ರಕಟವಾದಾಗ, ನಾನು ನನ್ನ ಸ್ನೇಹಿತರೊಬ್ಬರನ್ನು ಕರೆದುಕೊಂಡು ತಮ್ಮ ಮನೆಗೆ ಬಂದಿದ್ದೆ. ಅವರು ಈ ಪತ್ರಿಕೆಯಲ್ಲಿ ಲೇಖನ ಬರೆದಿದ್ದವರ ವಿರುದ್ಧ ಒಂದು ಪ್ರತಿಭಟನೆಯನ್ನು ಬರೆದು ತಂದಿದ್ದರು. ತಾವು ಆ ಪ್ರತಿಭಟನೆಯನ್ನು ಓದಿ, ಅದನ್ನು ಪ್ರಕಟನೆಗೆ ಕಳುಹಿಸಬಾರದೆಂದೂ ಆ ವಿಷಯವನ್ನು ಅಷ್ಟಕ್ಕೇ ಬಿಟ್ಟುಬಿಡಬೇಕೆಂದೂ ಹೇಳಿ, ಕ್ಷಮೆಯನ್ನು ತೋರಿಸಿದಿರಿ. ಆಗ ನನ್ನ ಮಿತ್ರರು ಸುಮ್ಮನಾದರು. ಇದು ತಮ್ಮ ನೆನಪಿನಲ್ಲಿದೆಯೆಂದು ನಂಬಿದ್ದೇನೆ.

ಪ್ರಜಾಮತದಲ್ಲಿ ತಮ್ಮ ವಿರುದ್ಧ ಬರೆದ ಆ ಮಾನ್ಯ ಲೇಖಕರು ತಮ್ಮ ಮೇಲೆ ಹದಿನೆಂಟು ಆರೋಪಣೆಗಳನ್ನು ಹೊರೆಸಿದ್ದಾರೆ; ಜೊತೆಗೆ ಅವರು ಆಗಾಗ ತಮ್ಮನ್ನು ಕುರಿತು ಹಲವು ರೀತಿಯಲ್ಲಿ ಏನಾದರೂ ಹೇಳುತ್ತಲೇ ಇರುತ್ತಾರೆಂದು

ಕೇಳಿದ್ದೇನೆ. ಅದು ಅವರ ಚಾಳಿ.

ಡಾ|| ಜಿ. ಎಸ್. ಶಿವರುದ್ರಪ್ಪನವರು ಸುಮಾರು ಒಂಬತ್ತು ವರ್ಷಗಳ ಹಿಂದೆ ಒಂದು ಸಭೆಯಲ್ಲಿ ಕೈಲಾಸಂ ಅವರ ಬಗ್ಗೆ ಮಾತನಾಡುವಾಗ 'ನಾವೆಲ್ಲರೂ ಶ್ರೀಯುತ ನಾ. ಕಸ್ತೂರಿ ಅವರನ್ನು ಮರೆತುಬಿಟ್ಟಿದ್ದೇವೆ' ಎಂದು ಹೇಳಿದರು.

ಹಾಸ್ಯಕ್ಷೇತ್ರದಿಂದ ಧಾರ್ಮಿಕ ಕ್ಷೇತ್ರಕ್ಕೆ ಹೋದವರನ್ನು 'ಮಾಜಿ ಹಾಸ್ಯ ಸಾಹಿತಿ' ಎಂದೂ, ಮೈಸೂರು ಮಲ್ಲಿಗೆ ಮೊದಲಾದ ಪ್ರೇಮಕವನಗಳನ್ನು ಬರೆದು, ವಯಸ್ಸಾದಂತೆಲ್ಲಾ ಕ್ರಮೇಣ ಆ ಕ್ಷೇತ್ರದಿಂದ ಮೇಲಕ್ಕೇರುತ್ತಾ ಗಂಭೀರವಾದ ಕೃತಿಗಳನ್ನು ರಚನೆ ಮಾಡುವವರನ್ನು 'ಮಾಜಿಪ್ರೇಮಗೀತೆಗಳ ಕವಿ'ಯೆಂದೂ ಕರೆದರೆ, ಅದು ಅಸಂಬದ್ಧ ಪ್ರಲಾಪವಾಗುತ್ತದೆ; ಹಾಗೆ ಕರೆದವರಿಗೆ ಸಾಹಿತ್ಯ ಪ್ರಜ್ಞೆ ಸಾಲದು ಎನಿಸುತ್ತದೆ.

1952ರಲ್ಲಿ ನಮ್ಮ ದೇಶದ ನಾಯಕರು ಪಾರ್ಲಿಮೆಂಟಿನಲ್ಲಿ 'ರಾಷ್ಟ್ರಧರ್ಮ'ದ ಬಗ್ಗೆ ಚರ್ಚೆಮಾಡಿ, ಅನಂತರ ನಮ್ಮ ರಾಷ್ಟ್ರವನ್ನು Secular State ಎಂದು ಘೋಷಿಸಿದರು. ಇದರ ಅರ್ಥ: 'ನಮ್ಮ ದೇಶದಲ್ಲಿ ಪರಂಪರಾನು ಗತವಾಗಿ ಬಂದಿರುವ ಎಲ್ಲ ಧರ್ಮಗಳೂ ಒಂದೇ. ಅವುಗಳಿಗೆ ಎಲ್ಲರೂ ಸಮಾನ ಗೌರವವನ್ನು ಕೊಡಬೇಕು' ಎಂದು ನಮ್ಮ ರಾಷ್ಟ್ರನಾಯಕರು ಸರ್ವಮತ ಸಹಿಷ್ಣುತೆಯನ್ನು ಪ್ರಚಾರ ಮಾಡುತ್ತಿದ್ದಾರೆ.

ಇದಕ್ಕೂ ಹಿಂದೆ, ಕನ್ನಡ ಸಾಹಿತ್ಯ ಪ್ರಪಂಚದಲ್ಲಿ, ನಲವತ್ತೈದು ವರ್ಷಗಳಿಂದ Secular ಧರ್ಮದ ಬಗ್ಗೆ ತಾವು ಕೆಲಸ

ಮಾಡುತ್ತಿದ್ದೀರಿ ಎಂಬುದಕ್ಕೆ ತಮ್ಮ ಬರವಣಿಗೆಗಳೇ ಸಾಕ್ಷಿ. ಅವುಗಳನ್ನು ಓದಿರುವ ತಮ್ಮ ವಿದ್ಯಾರ್ಥಿಗಳಾದ ನಾವೇ ಸಾಕ್ಷಿ. ಕನ್ನಡ ನಾಡಿನಲ್ಲಿ ಎಲ್ಲ ಧರ್ಮಗಳೂ ಸ್ಥಾಪನೆಗೊಂಡಿವೆ. ಆ ಎಲ್ಲ ಧರ್ಮಗಳ ಪ್ರಭಾವದಿಂದ ಕನ್ನಡಿಗರು ಶಾಂತ ಸ್ವಭಾವದವರಾಗಿದ್ದಾರೆ. ಈ ಎಲ್ಲ ಧರ್ಮಗಳನ್ನೂ ತನ್ನದನ್ನಾಗಿ ಮಾಡಿಕೊಂಡು ಸಮನ್ವಯದ ವೈಶಿಷ್ಟ್ಯದಿಂದ ಮೇಲೆದ್ದು ನಿಂತಿರುವ ನಮ್ಮ ಗಂಡುಮೆಟ್ಟಿನ ಈ ಕನ್ನಡ ನೆಲ ಒಬ್ಬ ವ್ಯಕ್ತಿಯಾಗಿ ಬಂದು ನಿಂತರೆ, ಅದಕ್ಕೆ 'ಜಿ.ಪಿ. ರಾಜರತ್ನಂ' ಎಂದು ಹೆಸರಿಡಬಹುದು.

ಧರ್ಮವನ್ನು ಬೋಧಿಸುವ ಇತರ ಮಾರ್ಗಗಳಂತೆ ಶ್ರೀಸತ್ಯ ಸಾಯಿಬಾಬಾ ಅವರದಾದರೂ ಮಾನ್ಯವಾದದ್ದೇ. ಇದು ಪ್ರತಿಯೊಬ್ಬ ಸಾಂಸ್ಕೃತಿಕ ಇತಿಹಾಸದ ವಿದ್ಯಾರ್ಥಿಯೂ ಒಪ್ಪಬೇಕಾದ ಸಂಗತಿ. ಧರ್ಮವನ್ನು ಬೋಧಿಸುವ ಎಲ್ಲ ಮಾರ್ಗಗಳ ಸಾಮರಸ್ಯಕ್ಕೆ ಸಹಿಷ್ಣುತೆಯೇ ಆಧಾರವೆಂದು ನಂಬಿ, ಎಲ್ಲ ಧರ್ಮಗಳಲ್ಲಿಯೂ ಸಮನ್ವಯವನ್ನು ಕಾಣುತ್ತ, ಧಾರ್ಮಿಕ ಕ್ಷೇತ್ರದಲ್ಲಿ ನಿರಂತರವಾಗಿ ಸೇವೆ ಸಲ್ಲಿಸುತ್ತಿರುವ ತಾವು ಸತ್ಯಸಾಯಿ ಮಾರ್ಗದ ಬಗ್ಗೆ ಆಸಕ್ತಿಯಾನ್ನಾಗಲಿ. ಅಕ್ಕರೆಯನ್ನಾಗಲಿ ತೋರಿಸದೆ ಹೋಗದ್ದಿದ್ದರೆ, ಅದು ಒಂದು ರೀತಿಯ ಕರ್ತವ್ಯಲೋಪವಾಗುತ್ತಿತ್ತು.

ಸರ್,

ತಾವು ಒಂದು ದೊಡ್ಡ ಆಲದ ಮರ ಇದ್ದ ಹಾಗೆ. ಈ ಮರದ ಎತ್ತರ, ಗಾತ್ರ, ವಿಸ್ತಾರ, ವ್ಯಾಪ್ತಿ ಅತಿಶಯವಾದುದು. ಎಳೆಯ ಮಕ್ಕಳು. ಬಾಲಕ ಬಾಲಕಿಯರು, ಯುವಕ ಯುವತಿಯರು, ಹಾಗೆಯೇ ವಯೋವೃದ್ಧರು ಕೂಡ ನಿಮ್ಮ ಮರದ

ನೆರಳಿನ ತಂಪನ್ನು ಆಶ್ರಯಿಸುತ್ತಾರೆ. ಬಿಸಿಲಿನ ಬೇಗೆಯಿಂದ ತಪ್ತರಾಗಿ ಆಲದ ನೆರಳಿನಲ್ಲಿ ಹಾಯಾಗಿ ವಿಶ್ರಮಿಸಿಕೊಂಡು ಮೆಲುಕುಹಾಕುವ ಮುಗ್ಧ ಹಸುಗಳಂತೆ ಮುಗ್ಧಹೃದಯರಾದ ಹಸುಳೆಗಳು ತಮ್ಮ ಜ್ಞಾನವೆಂಬ ಆಲದ ಮರದ ಆಶ್ರಯದಲ್ಲಿ ಜಿನ, ಬುದ್ಧ, ಕ್ರಿಸ್ತ, ಪೈಗಂಬರ್ ಮೊದಲಾದ ಮಹಾಮಹಿಮರ ಕತೆಗಳನ್ನು ಕೇಳಿ, ಸೆಕ್ಯುಲ್ಯಾರಿಸಂನ ಅನುಸಾರವಾಗಿ ಅವರ ಮನೋ ವಿಕಾಸವಾಗುವುದು ನಮ್ಮ ನಾಡಿನ ಭಾಗ್ಯ. ಇವರೇ ನಮ್ಮ ದೇಶದ ಸೆಕ್ಯುಲ್ಯಾರಿಸಂನ ಪ್ರತಿನಿಧಿಗಳು. ನಮ್ಮ ದೇಶದಲ್ಲಿ ಸಾಹಿತ್ಯದ ಮೂಲಕ ಸೆಕ್ಯುಲ್ಯಾರಿಸಂ ಬಗ್ಗೆ ಜಾಗೃತಿಯನ್ನುಂಟು ಮಾಡುತ್ತಿರು ವುದು ಇಲ್ಲಿನವರೆಗೆ ಕನ್ನಡದಲ್ಲಿ ಮಾತ್ರ, ಅದೂ ತಮ್ಮೊಬ್ಬರ ಸತತ ಪ್ರಯತ್ನದಿಂದ ಎಂದು ನನ್ನ ಭಾವನೆ.

ತಮ್ಮ ಆದರ್ಶಗಳನ್ನು ಎತ್ತಿಕೊಂಡು ಅನೇಕ ಮಂದಿ ತಮ್ಮ ವಿದ್ಯಾರ್ಥಿಗಳೂ ವಿದ್ಯಾರ್ಥಿನಿಯರೂ—ಅವರು ಯಾವ ಹುದ್ದೆ ಯಲ್ಲಿಯೇ ಇರಲಿ— ಸದ್ದುಗದ್ದಲಗಳಿಲ್ಲದೆ ಕನ್ನಡಭಾಷಾ ಸೇವೆಯನ್ನು ಮಾಡುತ್ತಿದ್ದಾರೆ. ಅನೇಕ ವೇಳೆ ಉನ್ನತಮಟ್ಟದ ಅಧಿಕಾರಿಗಳು ಹಾಗೂ ಅವರ ಅಧೀನ ಉದ್ಯೋಗಿಗಳು ಆಫೀಸಿನ ಆವರಣಗಳಲ್ಲಿ ಕಲೆತಾಗ, ಮಾತಿನ ಮಧ್ಯೆ ತಾವು ಪರಸ್ಪರ ಶ್ರೀ ಜಿ. ಪಿ.ರಾಜರತ್ನಂ ಅವರ ವಿದ್ಯಾರ್ಥಿಗಳೆಂದು ಹೇಳಿಕೊಂಡಾಗ—ಆಗ ಅಲ್ಲಿ ಉಂಟಾಗುವ ಸಂತಸದ ಸನ್ನಿವೇಶವು ನೋಡಿದವರಿಗೆ ಪುಳಕವನ್ನುಂಟು ಮಾಡುತ್ತದೆ. ಅಂಥ ಸಂದರ್ಭಗಳಲ್ಲಿ, ಸರ್ಕಾರದ ಹಿಡಿತದಿಂದ ಹಠಾತ್ತನೆ ನಿಂತುಹೋಗಿದ್ದ ಹಲವು ಕನ್ನಡ ಕೆಲಸಗಳು 'ಜಿ.ಪಿ.ರಾಜರತ್ನಂ' ಎಂಬ ಹೆಸರಿನ ಪ್ರಭಾವದಿಂದ ಸುಗಮವಾಗಿ

ಹೇಗೆ ಮುಂದುವರಿದಿವೆ ಎಂಬುದನ್ನು ಹೇಳಿದರೆ, ಕೇಳಿದವರಿಗೆ ಆಶ್ಚರ್ಯವಾಗಬಹುದು.

ತಾವು ಮಾಡುತ್ತಿರುವ ಸೇವೆಯು ಕನ್ನಡನಾಡಿನ ಅನೇಕ ಯುವಕ ಯುವತಿಯರ ಹೃದಯ ಮಂದಿರಗಳಲ್ಲಿ ನಂದಾದೀಪ ದಂತೆ ನಿರಂತರವಾಗಿ ಬೆಳಗುತ್ತಿದೆ, ಬೆಳಗುತ್ತಿರುತ್ತದೆ. ಯಾರು ಅಗ್ಗದ ಕೀರ್ತಿಗಾಗಿ ಆಸೆಪಟ್ಟು ತಮ್ಮ ವಿರುದ್ಧವಾಗಿ ಎಂತಹ ಅಪಪ್ರಚಾರದ ಬಿರುಗಾಳಿಯನ್ನೆಬ್ಬಿಸಿದರೂ, ಅಲುಗದೆ ಸ್ಥಿರವಾಗಿ, ಗಂಭೀರವಾಗಿ ಬೇರೂರಿ ನಿಂತಿರುತ್ತದೆ. ತಮ್ಮ ಕೃತಿಗಳು ಶಾಶ್ವತ ವಾಗಿ ಸಿರಿಕನ್ನಡಾಂಬೆಯ ಕಂಠಹಾರದಲ್ಲಿ ಶೋಭಿಸುವ ರತ್ನಗಳಾಗಿ ಉಳಿಯುತ್ತವೆ.

ಇತಿ ನಮಸ್ಕಾರಗಳು

ಚಿರಂಜೀವಿ

◆ ಅಶ್ವತ್ಥಾಮನ ಚಾವಟಿ ◆

ಪೂಜ್ಯ ಗುರುಗಳೇ,

ತಮ್ಮ 'ನಿರ್ಭಯಾಗ್ರಫಿ'ಯ ಮೂರನೆಯ'ಕಂತು' ಆದ 'ಹಾಸ್ಯದ ಬಡಿಗೆ'ಯನ್ನು ಓದಿದಾಗ, ತಾವು ತರಗತಿಯಲ್ಲಿ ನಮಗೆ ಪಾಠ ಹೇಳಿದ 'ಅಶ್ವತ್ಥಾಮನ್' ನಾಟಕದ ಈ ಸಾಲುಗಳು ನೆನಪಾದುವು:

"ಎನ್ನ ಗುಡಾರದಾ ಕಂಬಕ್ಕೆ ಬಿಗಿದು...

"ಈ ಚಮ್ಮಟಿಗೆ ಸುಲಿದು, ಬೆನ್ ಪಸುರ್ಗಟ್ಟೆ....

"ಆಡಿಪೆನ್, ಆಡಿಪೆನ್,

"ನೀರ್ ಕೇಳೆ, ಪೊಯ್‌ಪೊಯ್ದು, ಪಾಡಿಪೆನ್".

ನನಗಾದರೂ ಅಲ್ಲಿನ ರುದ್ರನ ಹಾಗೆ—'ಬೇಡ, ಹಿಂಸಿಸ ಬೇಡ, ಆ ಬಡವು ಗೋಪನನ್' ಎಂದು ಹೇಳೋಣವೆನ್ನಿಸುತ್ತೆ But then —

"ನಿನ್ನಿಚ್ಛೆಗೆನ್ನಿಚ್ಛೆಯೇನ್? ನಲಿ, ಪೊಯ್ದು ನಲಿ.

ನಿನ್ನ ಕಯ್ ತಡೆವರ್ ಆರ್ ಇರ್ಪರ್? ಪೋಗು, ನಲಿ" ಎಂದೂ ಹೇಳೋಣವೆನ್ನಿಸುತ್ತದೆ.

More power to your elbow,

ನಿಮ್ಮ—**'ಅಂಗಾರಕ'.**

◆ ಶಿಶುಪಾಲ ಪ್ರಸಂಗ ◆

ಪೂಜ್ಯ ಶ್ರೀ ರಾಜರತ್ನಂ ಅವರಲ್ಲಿ ಬಿನ್ನಹಗಳು

ತುಸು ದೀರ್ಘವಾಗಿರುವ ಈ ಪತ್ರವನ್ನು ತಮ್ಮ ಮಾನಸ ಸನ್ನಿಧಿಗೆ ಸಲ್ಲಿಸುವ ಮುನ್ನ ನಾನು ಅಗತ್ಯ ಕ್ಷಮೆ ಕೇಳಿಕೊಳ್ಳಬೇಕಾಗಿದೆ. ಅದು ತಮ್ಮ ಸಮಯವನ್ನು, ವಿಚಾರವನ್ನು ಕಿಂಚಿತ್ ನನಗಾಗಿ ಮೀಸಲು ಇರಿಸಬೇಕು ಎಂಬ ನನ್ನ ಕೇಳಿಕೆಗಾಗಿ. ಹಾಗೇ ತಾವು ನಂಬಿರುವ 'ಸಾಯಿಸಮಯ'ದ (ಸಮಯ ಎಂದರೆ ಸಿದ್ಧಾಂತ ಎಂಬ ಅರ್ಥವೂ ಉಂಟಷ್ಟೆ.) ಜೀವಭಾಗವನ್ನು ತಿರುಳನ್ನು ನನಗೂ ತಿಳಿಸಬೇಕು ಎಂಬ ನನ್ನ ಬಲವಂತಕ್ಕಾಗಿ. ಬಲವಂತ ಎಂದರೆ. ಬೇರೇನೂ ಅಲ್ಲ. ಕರು ತುಂಬುಕೆಚ್ಚಲನ್ನು ಗುದ್ದಿ ಹಾಲು ಹೀರಿದ ಹಾಗೆ. ಹಸುವಾದರೋ "ನ ಕೇವಲಾನಾಂ ಪಯಸಾಂ ಪ್ರಸೂತಿಂ ಅವೇಹಿ ಮಾಂ ಕಾಮದುಘಾಂ ಪ್ರಸನ್ನಾಂ" ಎಂಬ ದಿವ್ಯಧೇನು ಆದ್ದರಿಂದ ಕೊಂಚ ಬಲವಂತ.

ಹಿರಿಯರೆ,

ನನ್ನ ಪರಿಚಯ ನಿಮಗೆ ಇಲ್ಲ. ನಿಮ್ಮ ಪರಿಚಯವಾದರೋ ನನಗೆ ಧಾರಾಳ. ಅದು ನಿಮ್ಮ ಸಾಹಿತ್ಯದ ಮೂಲಕ, ಯಶಸ್ಸಿನ ಮೂಲಕ. ಅದನ್ನು ಶ್ರಾವಣ ಪ್ರತ್ಯಕ್ಷವೆಂದು ಕರೆಯಬಹುದು. ಬಹುಶಃ ಕನ್ನಡದ ಬಹುಜನಕ್ಕೆ ಈ ಶ್ರಾವಣವೇ ಹೊಸ ಚಿಗುರಿನ,

ಹೊಸ ಹೂಗಳನ್ನು ಹೊತ್ತ ವಸಂತ. ಸಾಹಿತ್ಯ ನಿಮ್ಮನ್ನು ಬಹು ಜನಕ್ಕೆ ಆಪ್ತರನ್ನಾಗಿ ಮಾಡಿತು, ನಿಮಗರಿವಿಲ್ಲದೇನೇ. ನಮ್ಮಲ್ಲಿ 'ಆಪ್ತವಾಕ್ಯ ಪ್ರಮಾಣ' ಎನ್ನುವುದು ಉಂಟಷ್ಟೆ. ಅದು ಬಲವತ್ತರ ವಾದ ಪ್ರಮಾಣವೇ. ಶಾಸ್ತ್ರವನ್ನು ಆಪ್ತವಾಕ್ಯ ಎನ್ನುವುದು. ಆದ್ದರಿಂದ ಅದು ಪ್ರಮಾಣ. ಸಾಹಿತ್ಯವೂ ಆಪ್ತವಾಕ್ಯವೇ ಅಲ್ಲವೇ? ಹಾಗೆ ನೋಡಿದರೆ ಶಾಸ್ತ್ರಕ್ಕಿಂತ ಸಾಹಿತ್ಯವನ್ನೇ ಆಪ್ತವಾಕ್ಯ ಎಂದರೆ ಹೆಚ್ಚು ಸರಿ ಎನಿಸುತ್ತದೆ ನನಗೆ. ಹಾಗೆ ಆಪ್ತರಾದ ತಮ್ಮಲ್ಲಿ ನನ್ನ ಜಿಜ್ಞಾಸೆಯನ್ನು ಬಿನ್ನವಿಸುತ್ತಿದೇನೆ. ನಿಮ್ಮ ಸಾಹಿತ್ಯವನ್ನು ಓದಿ ಕೇಳಿ ತಿಳಿದ ನಾನು ಆ ಸಂಬಂಧವನ್ನು ನೆನೆದು ದಿಲೀಪನ ಮಾತುಗಳಲ್ಲಿ ಈ ನಿವೇದನ ಮಾಡುತ್ತಿದ್ದೇನೆ. 'ನಾರ್ಹಸಿ ತ್ವಂ ಸಂಬಂಧಿನೋ ಮೇ ಪ್ರಣಯಂ ವಿಹಂತುಂ'

ಪೂಜ್ಯರೇ,

ಈಚೆಗೆ ಎರಡು, ಎರಡೂವರೆ ವರ್ಷಗಳ ಹಿಂದೆ ವಾರಪತ್ರಿಕೆ ಯೊಂದರಲ್ಲಿ ತಮ್ಮನ್ನು ಕುರಿತಾದ ಟೀಕೆಯೊಂದನ್ನು ಓದಿದೆ. ಬರೆದವರು ಹಾಸ್ಯ ಲೇಖಕರೆಂದು ಹೆಸರು ಗಳಿಸಿದವರು. ಆ ಲೇಖನವಾದರೋ ಆ ಹೆಸರಿಗೆ ತಕ್ಕುದಾಗಿರಲಿಲ್ಲ. ಶ್ರೀ ಸಾಯಿ ಬಾಬಾ ಬಗ್ಗೆ ಅದನ್ನು ಬರೆದ ಟೀಕಾಚಾರ್ಯನಿಗೆ ಒಳ್ಳೆಯ ಅಭಿಪ್ರಾಯ ಇರದಿರಬಹುದು. ಇತರರಿಗೂ ಹಾಗೆಯೇ ಇರ ಬೇಕೆಂದುಕೊಳ್ಳುವುದು ದುರಾಗ್ರಹವಾಗುತ್ತದೆ. ಭಿನ್ನಮತ, ಅನ್ಯಮತ, ವಿರೋಧ ಮತಗಳಿದ್ದೂ ಸಹಜೀವನ ಸಾಧ್ಯ ಎನ್ನುವ democratic ಮನೋಧರ್ಮವನ್ನೇ ಧಿಕ್ಕರಿಸುವುದು ಮಾನಸಿಕ ಆರೋಗ್ಯದ ಲಕ್ಷಣ ಅಲ್ಲ. ವೈಚಾರಿಕತೆಯ ಲಕ್ಷಣ ಖಂಡಿತ

ಅಲ್ಲ. ಕಾರಂತರನ್ನು ನೋಡಿ. ಕಲೆಯ ಕ್ಷೇತ್ರದಲ್ಲಾಗಲೀ ರಾಜಕೀಯ ಧಾರ್ಮಿಕ ಕ್ಷೇತ್ರದಲ್ಲಾಗಲಿ ಸ್ವಾನುಭವವೇ ಪರಮ ಪ್ರಮಾಣವಾದ ಸ್ವತಂತ್ರ ಬುದ್ಧಿವೈಭವದ ಆ ಮಹಾನುಭಾವ ಒಂದೆಡೆ ಹೀಗೆಂದರು:'ನನ್ನನ್ನು ಕುರುಡು ಒಪ್ಪಿಕೊಳ್ಳುವ ಹಿಂಬಾಲಕರಿಗಿಂತ ನನ್ನೊಡನೆ ಭಿನ್ನಮತವನ್ನು ಪ್ರಕಟಿಸುವ ಬುದ್ಧಿಜೀವಿ ನನಗೆ ಪ್ರಿಯ'. ಇದು ಲಿಬರಲ್ ಮನೋಧರ್ಮ. ಚಿಂತಕರು democracy ಎಂದರೆ ಜೀವನವನ್ನು ಹಂಚಿಕೊಳ್ಳು ವುದೇ, ಹೀಗೆ ಹಂಚಿಕೊಳ್ಳುವುದರಿಂದ ಬದುಕಿಗೆ ಹೊಸ ದಿಗಂತ ಗಳನ್ನು, ವ್ಯೋಮ ಆಯಾಮಗಳನ್ನು ಪಡೆದುಕೊಳ್ಳುವುವು ಎಂದರು. ಇನ್ನೂ ಒಂದು ಹೆಜ್ಜೆ ಮುಂದುಹೋಗಿ, 'ಪ್ರಜಾ ಪ್ರಭುತ್ವ ಎಂದರೆ ಬದುಕನ್ನು ಶತ್ರುವಿನೊಡನೆ ಹಂಚಿಕೊಳ್ಳು ವುದು—ಅದೂ ದುರ್ಬಲವಾದ ಶತ್ರುವಿನೊಡನೆ ' ಎಂದು ಲಕ್ಷಿಸಿದರು. ಬಹುಶಃ ವ್ಯಕ್ತಿಗೆ ಸಾಧ್ಯವಾಗಬಹುದಾದ ಅತ್ಯಂತ ಶ್ರೇಷ್ಠಸ್ಥಿತಿ ಇದು, ಸಾಮಾಜಿಕವಾಗಿ. ಅಂಥ ಚಿಂತನೆಯ ದಟ್ಟ ದಾರಿದ್ರ್ಯ ಆ ಲೇಖನದಲ್ಲಿ ಕಾಣುತ್ತಿತ್ತು. ಅಲ್ಲದೆ ಕೇವಲ ಸಾಹಿತ್ಯಕವಾಗಿ ಆ ಲೇಖನವನ್ನು ನೋಡಿ. Trash ಎಂಬ ಒಂದು ಶಬ್ದವಲ್ಲದೆ ಬೇರೇನೂ ಅದರ ಬಗ್ಗೆ ಹೇಳಲಾಗುವುದಿಲ್ಲ. Satire ಎನ್ನುವುದು ಎಂಥ ಕಲೆ ಅನ್ನುವುದು ಶಾ ಓದಿದರೆ ತಿಳಿದೀತು, ಕೈಲಾಸಂ ಓದಿದರೆ ತಿಳಿದೀತು. ಆ ಲೇಖನ ಓದಿದರಂತೂ satire ಎಂಬ ಮಾತಿನ ಕಲೆ retire ಆಗಿರುವುದು ಖಂಡಿತ ತಿಳಿದೀತು. ಇನ್ನು ತಾರ್ಕಿಕತೆಯಾದರೂ ಉಂಟೆ? ಎಂದರೆ ನೋಡಿ. ಪ್ರತಿ ಪ್ಯಾರಾದಲ್ಲೂ ಏನೇನೋ ಗುಣವರ್ಣನೆಮಾಡಿ ಕೊನೆಗೆ

'ಏಕೆಂದರೆ—ನಾನು ಚಕ್ರವರ್ತಿ ವಜ್ರ' ಎಂದು ಬರಕೊಂಡಿದ್ದಾರೆ. ಈ ತರ್ಕಬದ್ಧತೆಗೆ ರಸೆಲ್ಲರೂ ಬಾಯಿ ಮುಚ್ಚಬೇಕು.

ಆ ಲೇಖನವನ್ನು ಓದಿ ನನಗೆ ಶಿಶುಪಾಲನ ಪ್ರಸಂಗ ನೆನಪಾಯಿತು, ಭಾರತದಲ್ಲಿ ಬೈಗುಳವೀರ ಒಬ್ಬ ಇದ್ದರೆ ಅದು ಶಿಶುಪಾಲ. ಅವನು ಮನುಷ್ಯನಿಗೆ ಅಗತ್ಯ ಇರಬೇಕಾದ ಮೂರನ್ನೂ ಬಿಟ್ಟವನು. ಮರ್ಯಾದೆ (ಮಿತಿ) ಇರುವುದು ಶಿಶುಪಾಲನಿಗಲ್ಲ; ಕೃಷ್ಣನಿಗೆ. ಅಗ್ರಪೂಜೆಗೆ ಒಪ್ಪಿ ಕೂತು, ಎಳೆನಗೆ ತುಳುಕಿಸುತ್ತ ಯಾರನ್ನೂ ಲೆಕ್ಕಿಸದ ಮತ್ತು ಎಲ್ಲರನ್ನೂ ಲೆಕ್ಕಿಸುವ ಯಾದವಶಿರೋಮಣಿ ಬೆರಳು ಮಡಿಚುತ್ತ ಲೆಕ್ಕಿಸುತ್ತಿದ್ದನಂತೆ, ನೂರರವರೆಗೆ. ವಿಶ್ವವನ್ನೇ ಅಂತರ್ಬಹಿಶ್ಚ ವ್ಯಾಪಿಸಿ ಮತ್ತೂ ಹತ್ತಂಗುಲ ಆಚೆ ನಿಂತ ಪರಾತ್ಪರ ತತ್ವವಾದರೂ ತಾನು ವ್ಯಾವಹಾರಿಕವಾಗಿ ಒಂದು ಮಿತಿಯನ್ನು, ಮಾರ್ಯಾದೆಯನ್ನು ಒಪ್ಪಿಕೊಳ್ಳುತ್ತದೆ. ಈ ಶಿಶುಪಾಲನ ಬೊಗಳೆಗೆ ಮಿತಿಯೇ ಇಲ್ಲವೇ ಎಂಬಂತೆ ಕಾಣುತ್ತದೆ. ಕಾಣುತ್ತದೆಯೇನೋ ಸರಿ. ಆದರೆ ಕೃಷ್ಣನ ಮಿತಿ, ಕೃಷ್ಣನ ಲೆಕ್ಕ, ಶಿಶುಪಾಲನ ಲೆಕ್ಕವೇ ಅಲ್ಲವೆ? ಕೃಷ್ಣನು ಇಟ್ಟುಕೊಂಡ ಮಿತಿ ಶಿಶುಪಾಲನಿಗೆ ಕಟ್ಟಿದ ಮಿತಿ, ಅವನ ಜೀವನದ ಪರಿಮಿತಿಯೇ ಅಲ್ಲವೇ?

ಮಾನ್ಯರೇ,

ನನಗೆ ಅನಿಸಿದ್ದನ್ನು ವಂಚನೆ ಇಲ್ಲದೆ, ಪ್ರಪಂಚನೆಯೂ ಇಲ್ಲದೆ ನಿಮ್ಮೆದುರು ತೆರೆದಿದ್ದೇನೆ. ನಿಮ್ಮ ಕುರಿತಾಗಿರುವ ಅಭಿಮಾನ, ಗೌರವಗಳೇ ಅದಕ್ಕೆ ಕಾರಣ.

—ಲಕ್ಷ್ಮೀಶ (ದಕ್ಷಿಣ ಕನ್ನಡ)

◆ ಭಯಾಗ್ರಫಿ Versus ನಿರ್ಭಯಾಗ್ರಫಿ ◆

೧೯೭೨ರಲ್ಲಿ ಬೆಳಗಾವಿಗೆ ಶ್ರೀ ಬೀಚಿಯವರು ಬಂದಿದ್ದರಷ್ಟೆ. ಅವರಿಗೆ ಅಲ್ಲಿ ಸನ್ಮಾನ ಸಮಾರಂಭ ಏರ್ಪಡಿಸಿ 'ತಿಂಮಾಯಣ' ಎಂಬ ಗೌರವ ಗ್ರಂಥ ಸಮರ್ಪಿಸಲಾಗಿತ್ತು. ಬೆಳಗಾವಿಯ ಕರ್ನಾಟಕ ಸಂಘದ ಪರವಾಗಿ ಅವರ ಸನ್ಮಾನಾರ್ಥ ಔತಣಕೂಟ ವನ್ನು ಏರ್ಪಡಿಸಿದ ಸಂದರ್ಭದಲ್ಲಿ ಅನೌಪಚಾರಿಕವಾಗಿ ಮಾತ ನಾಡುತ್ತಾ ಶ್ರೀ ಬೀಚಿಯವರು ಶ್ರೀ ಜಿ. ಪಿ. ರಾಜರತ್ನಂರ ಬಗೆಗೆ "ದಿವಂಗತ ಅ. ನ. ಕೃಷ್ಣರಾಯರ ಸ್ಮರಣಾರ್ಥ ವ್ಯಾಖ್ಯಾನ ಮಾಲೆಯ ಕಾರ್ಯಕ್ರಮಕ್ಕೆ ಉಪನ್ಯಾಸ ಕೊಡಲು ರಾಜರತ್ನಂರನ್ನು ಕರೆದರೆ ಎರಡು ನೂರು ರೂಪಾಯಿ ಸಂಭಾವನೆ ಕೇಳಿದರು ಇ.ಇ." ಎಂದು ಆರೋಪಿಸಿದ್ದರು. ಈ ಆರೋಪಣೆಯ ಉಲ್ಲೇಖ ತಿಂಮಾಯಣದಲ್ಲಿ ಶ್ರೀ ತೊರಗಲ್ಲರ ಲೇಖನದಲ್ಲಿಯೂ ಇದೆ.

ಶ್ರೀ ರಾಜರತ್ನಂರವರ ಬರವಣಿಗೆ, ವಾಣಿಗಳಿಂದ ಮೋಹಿತ ರಾದ ಅಸಂಖ್ಯಾತ ಕನ್ನಡಿಗರಲ್ಲಿ ಒಬ್ಬನಾದ ನನಗೆ ಈ ವಿಷಯ ವನ್ನು ಕೇಳಿದಾಗ ಸಖೇದ ವಿಸ್ಮಯವಾಗಿತ್ತು. 'ಯಾವತ್ತಿಗೂ ಉದಾತ್ತ ವಿಚಾರಗಳನ್ನು, ಉನ್ನತ ವಿಷಯಗಳನ್ನು ಪ್ರತಿಪಾದಿಸುವ ನಮ್ಮ ರಾಜರತ್ನಂ ಹೀಗಂದರೇ?' ಎಂದು ಮನಸ್ಸು ನೊಂದಿತ್ತು. ಇದಾದ ಕೆಲವು ತಿಂಗಳುಗಳ ನಂತರ "ತುಷಾರ" ಮಾಸಪತ್ರಿಕೆ ಯಲ್ಲಿ ಶ್ರೀ ಬೀಚಿ.ಯವರ ಸಂದರ್ಶನ ಒಂದು ಪ್ರಕಟವಾಯ್ತು.

ಶ್ರೀ ಬೀಚಿಯವರು ಅದರಲ್ಲಿ ಶ್ರೀ ದ. ರಾ. ಬೇಂದ್ರೆಯವರ ಗಂಗಾವತರಣದಲ್ಲಿ ಜಗನ್ನಾಥ ಕವಿಯ ಪ್ರಭಾವವಿದೆ. ರಾಜ ರತ್ನಂರ ರತ್ನನ ಪದಗಳ ಮೇಲೆ ಉಮರ ಖಯ್ಯಾಂನ ಛಾಪು ಇದೆ. ಇವರುಗಳು ಋಣನಿರ್ದೇಶ ಮಾಡದ್ದು ಅಪ್ರಾಮಾಣಿಕತೆ— ಎಂಬರ್ಥದಲ್ಲಿಯೂ ಮತ್ತು ಶ್ರೀ ಬೇಂದ್ರೆಯವರ ಅರವಿಂದ ಪ್ರೇಮ, ಮಾತಾಜಿಭಕ್ತಿ ಮತ್ತು ಶ್ರೀ ರಾಜರತ್ನಂರ ಸತ್ಯಸಾಯಿ ಬಾಬಾ ವಿಷಯಕ್ಕೆ ಆದರವನ್ನು ಲೇವಡಿಸಿದ್ದು ಇತ್ತು.

ನನಗೆ ಶ್ರೀ ಬೀಚಿಯವರು ಮಾಡಿದ ಈ ಟೀಕೆ ಸರಿ ಕಾಣಲಿಲ್ಲ. ಮರು ತಿಂಗಳದ ತುಷಾರ ಸಂಚಿಕೆಯಲ್ಲಿ ಈ ಬಗ್ಗೆ ನನ್ನ ಪತ್ರ ಪ್ರಕಟವಾಯ್ತು.

ತಮ್ಮ ಸ್ವಂತ ಬರವಣಿಗೆಯ ಬಗ್ಗೆ ಶ್ರೀ ಬೀಚಿಯವರನ್ನು ಸಂದರ್ಶಕರು "ನಿಮ್ಮ ಹಾಸ್ಯ ಲೇಖನಗಳನ್ನು ಓದಿದಾಗ ಈ ಜೋಕುಗಳನ್ನು ಇಂಗ್ಲೀಷಿನಲ್ಲಿ ಈ ಮೊದಲು ಓದಿದ ಹಾಗೆ ಅನಿಸುತ್ತದಲ್ಲ" ಎಂದು ಕೇಳಿದ್ದಕ್ಕೆ ಶ್ರೀ ಬೀಚಿಯವರು—

"Jokes are nobody's property" ಎಂದು ಉತ್ತರಿಸಿದ್ದರು.

ಶ್ರೀ ಬೇಂದ್ರೆಯವರ ಗಂಗಾವತರಣದಲ್ಲಿ ಜಗನ್ನಾಥ ಕವಿಯ ಛವಿಯನ್ನು, ಶ್ರೀ ರಾಜರತ್ನಂರ ರತ್ನನ ಪದಗಳಲ್ಲಿ ಉಮರನ ಹದವನ್ನು ಶಂಕಿಸುವ ಶ್ರೀ ಬೀಚಿಯವರಿಗೆ ತಮ್ಮ ಬರವಣಿಗೆಯ ಪ್ರಶ್ನೆ ಬಂದಾಗ "Jokes are nobody 's property " ಎಂಬ ಮಾತು, ಹಾಗೇ ಪತ್ನಿಯ ಧಾರ್ಮಿಕ ಶ್ರದ್ಧೆಗಳನ್ನು ಸಹಿಷ್ಣುತೆ

ಯಿಂದ ಕಾಣುವ ಬೀಚಿಯವರು ಬೇಂದ್ರೆ ಮತ್ತು ರಾಜರತ್ನಂರ ಧಾರ್ಮಿಕ ನಂಬಿಕೆಗಳನ್ನು ಲೇವಡಿಸುವ ವಿಧಾನ double standard ಅಲ್ಲವೆ ಎಂದು ನನ್ನ ಈ ಪತ್ರದಲ್ಲಿ ಕೇಳಿದ್ದೆ. 'ತುಷಾರ'ದಲ್ಲಿ ಮುಂದೆ ಈ ಬಗ್ಗೆ ಯಾವ ಪ್ರತಿಕ್ರಿಯೆಯೂ ಬರಲಿಲ್ಲ.

'ತಿಂಮಾಯಣ'ದಲ್ಲಿ ಬೀಚಿಯವರ ಭಯಾಗ್ರಫಿಯ ಟ್ರೇಲರ್ ಮೂಡಿದ್ದು, ನಂತರ ಪ್ರಜಾಮತದಲ್ಲಿ ಭಯಾಗ್ರಫಿ ಪ್ರಕಟವಾಯಿತು. ಭಯಾಗ್ರಫಿಯಲ್ಲಿ ಶ್ರೀ ರಾಜರತ್ನಂ ಬಗೆಗೆ ಮತ್ತೆ ಅದೇ ಮೇಲೆ ಬರೆದ ಆಪಾದನೆಗಳು, ಜೊತೆಗೆ "ಚಕ್ರವರ್ತಿ ವಜ್ರ" ಎಂಬ 'ದೀಡಿ' ಪದವಿಯನ್ನು ಉಲ್ಲೇಖಿಸಲಾಗಿದೆ. ಸತ್ಯಸಾಯಿ ಬಾಬಾರವರ ಸಂಪರ್ಕದಿಂದ 'ರಾಜ' ಈಗ 'ಚಕ್ರವರ್ತಿ'ಯಾಗಿ, ಮತ್ತು 'ರತ್ನ' 'ವಜ್ರ'ವಾಗಿ ಬೆಳೆದಿದೆ ಎಂಬ 'ದೀಡಿ' ಮಾತು!

ಈ ಅಪಾದನೆ, ಆರೋಪಣೆಯ ಬಗ್ಗೆ ಸ್ವತಃ ಶ್ರೀ ರಾಜರತ್ನಂ ರವರ ಪ್ರತಿಕ್ರಿಯೆ ಏನು ಎಂಬುದು ಯಾವ ಪತ್ರಿಕೆಗಳಲ್ಲೂ ತಿಳಿದು ಬಂದಿರಲಿಲ್ಲ. ಶ್ರೀ ರಾಜರತ್ನಂರ ಬರವಣಿಗೆಯಿಂದ, ವ್ಯಾಖ್ಯಾನ ಗಳಿಂದ ಅಸಂಖ್ಯಾತ ಕನ್ನಡಿಗರ ಮನದಲ್ಲಿ ಒಂದು ಪೂಜ್ಯಸ್ಥಾನ, ಗೌರವಸ್ಥಾನ, ಅವರಿಗಾಗಿ ಇದೆ. ಶ್ರೀ ಬೀಚಿಯವರ ಈ ಟೀಕೆ ಗಳಿಂದ ಶ್ರೀ ರಾಜರತ್ನಂರ ಈ ಗೌರವಸ್ಥಾನಕ್ಕೆ ಊನ ಬರುವುದು ಸಹಜಿಕವಷ್ಟೆ. ಶ್ರೀ ರಾಜರತ್ನಂ ಈ ಆಪಾದನೆ, ಆರೋಪಣೆಗಳ ಬಗ್ಗೆ ಪ್ರತಿಕ್ರಿಯೆ ವ್ಯಕ್ತಪಡಿಸದೇ ಸುಮ್ಮನುಳಿದರೆ ಅಸಂಖ್ಯಾತ ಕನ್ನಡಿಗರು ತಮ್ಮ ಮನಸ್ಸಿನಲ್ಲಿ ಮೂಡಿಸಿಟ್ಟುಕೊಂಡಿರುವ ರಾಜ ರತ್ನಂರ ಪ್ರತಿಮೆ ತಪ್ಪು ಎಂದಾಗುತ್ತದಲ್ಲ. ಅದಕ್ಕಾಗಿ ಅವರನ್ನೇ

ಪ್ರತ್ಯಕ್ಷವಾಗಿ ಕಂಡು ಕೇಳಬೇಕೆಂದು ಮೊನ್ನೆ ಅವರಲ್ಲಿಗೆ ಹೋಗಿದ್ದೆ. ನೇರವಾಗಿ ಇದೇ ವಿಷಯವನ್ನೇ ಪ್ರಸ್ತಾಪಿಸಿದೆ. ಶ್ರೀ ಬೀಚಿಯವರು ನಿಮ್ಮ ಬಗ್ಗೆ ಈ ಬಗೆಯ ಅಪಾದನೆ ಮಾಡ್ತಾ ಇರುವಾಗ ನಿಮ್ಮ ಪ್ರತಿಕ್ರಿಯೆ ಯಾವುದೇ ಪತ್ರಿಕೆಯಲ್ಲಿ ಬಂದ ಹಾಗೆ ಇಲ್ಲ. ಇದರರ್ಥ ಅವರು ಮಾಡಿದ ಆಪಾದನೆ ಸರಿಯೇ ಹೇಗೆ?'' ಎಂದು ಕೇಳಿದೆ.

ಅವರು ನಸುನಕ್ಕರು. 'ತುಷಾರ'ದಲ್ಲಿ ಬಂದ ಶ್ರೀ ಬೀಚಿ ಯವರ ಸಂದರ್ಶನದ ತದನಂತರ ಪ್ರತಿಕ್ರಿಯೆಯಾಗಿ ಪ್ರಕಟವಾದ ನನ್ನ ಪತ್ರವನ್ನು ಅವರು ಓದಿದ್ದಾಗಿ ನೆನಸಿಕೊಂಡರು. ಶ್ರೀ ಬೀಚಿ ಯವರ ಭಯಾಗ್ರಫಿಯಲ್ಲಿಯ ಟೀಕೆಗಳ ಬಗ್ಗೆ ತಾವು ಪತ್ರಿಕೆಗಳಲ್ಲಿ ಉತ್ತರ ನೀಡಿಲ್ಲ; ಇದರರ್ಥ ಉತ್ತರ ಕೊಡಲಾಗದಂಥ ವರ್ತನೆ ತಮ್ಮಿಂದ ಆಗಿದೆ ಎಂಬುದಲ್ಲ ಎಂದು ಚುಟುಕಾಗಿ ಹೇಳಿ, ದುಡುದುಡನೆ ಒಳಗೆ ಹೋದರು. ಕ್ಷಣದಲ್ಲಿ ಮರಳಿ ಬಂದು ನನ್ನ ಕೈಗೆ ಐದು ಕಿರುಹೊತ್ತಿಗೆಗಳನ್ನು ಕೊಟ್ಟರು. ನಾನು ಕುತೂಹಲ ದಿಂದ ನೋಡಿದೆ. 'ಜಿ.ಪಿ. ರಾಜರತ್ನಂರವರ ನಿರ್ಭಯಾಗ್ರಫಿ' ಎಂಬ ಮಾಲಿಕೆಯಲ್ಲಿ ೧) ಚಕ್ರವರ್ತಿ ವಜ್ರ ೨) ಕೊರವಂಜಿಯ ದಾರಿಯಲ್ಲಿ ೩) ಹಾಸ್ಯದ ಬಡಿಗೆ, ೪) 'ವಜ್ರ'ನಾದ 'ರತ್ನ' ಮತ್ತು ೫) ಅ.ನ.ಕೃ. ಮತ್ತು ನಾನು ಎಂಬ ಕಿರು ಹೊತ್ತಿಗೆಗಳನ್ನು 'ಶ್ರೀ ರಾಜರತ್ನಂ ಬಳಗ, ಮೈಸೂರು-ಬೆಂಗಳೂರು-ದಕ್ಷಿಣ ಕನ್ನಡ' ಇವರು ಪ್ರಕಟಿಸಿದ್ದಾರೆ. ಈ ಹೊತ್ತಿಗೆಗಳನ್ನು ಓದಿದಾಗ ರಾಜರತ್ನಂರ ನಿಜ ಅಂತರ್ದರ್ಶನವಾದುದೇ ಅಲ್ಲದೆ ಕನ್ನಡಿಗರ ಮನದಲ್ಲಿ ರಾಜರತ್ನಂ ಯಾವದೊಂದು ಪವಿತ್ರಮೂರ್ತಿ, ಪ್ರತಿಮೆ

ಅವರ ಬರವಣಿಗೆ, ಭಾಷಣಗಳಿಂದಾಗಿ ನಿರ್ಮಿಸವಾಗಿದೆಯೋ ಅದು ಅಕಳಂಕವಾಗಿ, ಅಖಂಡವಾಗಿ ಉಳಿದುಕೊಂಡಿದೆಯಲ್ಲದೆ ಇನ್ನಷ್ಟು ಪ್ರಕಾಶಮಾನವಾಗಿ ಬೆಳೆಯುತ್ತದೆ. ಅನಕೃರ ಸ್ಮಾರಕ ವ್ಯಾಖ್ಯಾನ ಮಾಲೆಗೆ ಭಾಷಣ ಕೊಡಲು ಕರೆದರೆ ಸಂಭಾವನೆಯ ಕರಾರು ಹಾಕಿ 'ಹಾತ್ಮೆ ಪೈಸಾ ಕಿವಿ ಮೇ ಭಾಷಣ' ಎಂಬ ವ್ಯಾಪಾರಿಯ ಧೋರಣೆಯ ಆರೋಪಣೆ ಬುಡವಿಲ್ಲದ್ದು ಎಂಬುದು ಗೋಚರ ವಾಗುವುದಲ್ಲದೆ ಶ್ರೀ ಜಿ.ಪಿ. ರಾಜರತ್ನಂರವರು ಅನಕೃರವರ ನಿಧನಾನಂತರ ಅವರ ಸ್ಮರಣೆಗಾಗಿ ಮಾಡಿದ, ಮಾಡುತ್ತಿರುವ ವಿಧಾಯಕ ಕಾರ್ಯಗಳಿಗಾಗಿ ಕೃತಘ್ನರಾದಂತಾಗುತ್ತದೆ. ನಿರ್ಭಯಾಗ್ರಫಿಯಲ್ಲಿ ಶ್ರೀ ರಾಜರತ್ನಂರವರು ಶ್ರೀ ಬೀಚಿಯವರ ಆಪಾದನೆಗಳನ್ನು ಸಮೂಲವಾಗಿ ಹೊಡೆದುಹಾಕಿದ್ದಾರೆ. ಆದರೆ ಪ್ರತಿಕ್ರಿಯೆಯನ್ನು ತೋರುವಾಗ ಒಂದೆಡೆಯೂ ತಮ್ಮ ಮಟ್ಟ ದಿಂದ ಕೆಳಗಿಳಿದಿಲ್ಲ. ಮಾರ್ಮಿಕ ಉತ್ತರಗಳಿಂದ, ವಿನೋದ ಪದಗಳಿಂದ, ಸುಭಾಷಿತಗಳಿಂದ, ನೀತಿಕಥೆಗಳಿಂದ, ಅನ್ಯಾಪದೇಶ ಗಳಿಂದ ಮನಮುಟ್ಟುವಂತೆ ನೀಡಿದ ಈ ಪ್ರತಿಕ್ರಿಯೆ ಅತ್ಯಂತ ವಾಚನೀಯವಾಗಿದೆ. ನನಗಂತೂ ನಿರ್ಭಯಾಗ್ರಫಿಯನ್ನು ಓದಿದ ಮೇಲೆ ನಾನು ನಂಬಿದ ದೇವರು ದೇವರೇ ಎಂಬುದು ಖಚಿತ ವಾಯಿತು. ಎಳ್ಳಷ್ಟೂ ಕೋಪದ ನುಡಿಗಳಿಲ್ಲದ ಈ ಬರವಣಿಗೆ ಯನ್ನು ಕಂಡಾಗ ಮಹಾತ್ಮ ಗಾಂಧಿಯವರ "If you are right you need not lose your temper and if you are wrong you cannot afford to lose your temper " ಉಕ್ತಿ ನೆನಪಾಯಿತು.

ಅನಂತ ಕಲ್ಲೋಳ

ಟಿಪ್ಪಣಿ

ಈ ಲೇಖನವು ಬೆಳಗಾವಿಯ 'ನಾಡೋಜ' ವಾರಪತ್ರಿಕೆಯಲ್ಲಿ (೨೦-೩-೭೬) ಪ್ರಕಟವಾಗಿದೆ ಇಲ್ಲಿನ 'ದೀಡಿ' ಎಂಬುದಕ್ಕೆ ಕೊಂಕು ಎಂದು ಅರ್ಥ. ಕೊಂಕು ಮಾತು, ವಕ್ರೋಕ್ತಿ ಎಂಬವಕ್ಕೆ ಶಿಷ್ಟತೆ, ಗಾಂಭೀರ್ಯ ಇದೆ. 'ದೀಡಿ' ಎಂಬುದು ತುಸು ಗ್ರಾಮ್ಯ. ಮಾಡಬಾರದವರು ವ್ಯಂಗ್ಯವಾಗಿ ಮಾತನಾಡಿದರೆ, ಆಗ 'ದೀಡಿ' ಮಾತು ಆಡಿದ ಎನ್ನುತ್ತಾರೆ.

◆ ಅಸಂಪ್ರೇಕ್ಷ್ಯಕಾರಿತ್ವ ◆

ಪ್ರಿಯ ಶ್ರೀ ಚಂದ್ರಕೀರ್ತಿ,

"ಅಸಂಪ್ರೇಕ್ಷ್ಯಕಾರಿತ್ವ" ಎಂಬುದು ವಿಷ್ಣುಶರ್ಮನು ಹೇಳಿರುವ 'ಪಂಚತಂತ್ರ'ದೊಳಗಿನ ಒಂದು ತಂತ್ರ. 'ಕಾರಿ' ಎಂದರೆ ಮಾಡುವವನು. 'ಪ್ರೇಕ್ಷ್ಯಕಾರಿ' ಎಂದರೆ, ನೋಡಿ ಮಾಡುವವನು. 'ಸಂಪ್ರೇಕ್ಷ್ಯಕಾರಿ' ಎಂದರೆ 'ಚೆನ್ನಾಗಿ ನೋಡಿ, ಮಾಡುವವನು'. 'ಅ-ಸಂಪ್ರೇಕ್ಷ್ಯಕಾರಿ' ಎಂದರೆ 'ಚೆನ್ನಾಗಿ ನೋಡದೆ, ಪೂರ್ವಾಪರಗಳನ್ನು ವಿಚಾರ ಮಾಡದೆ, ಮಾತಾಡುವವನು ಅಥವಾ ಕೆಲಸ ಮಾಡುವವನು. 'ಎತ್ತು ಈಯಿತು' ಎಂದರೆ 'ಕೊಟ್ಟಿಗೇಲಿ ಕಟ್ಟು' ಎನ್ನುವವರು ಅಸಂಪ್ರೇಕ್ಷ್ಯಕಾರಿಗಳು.

ಯಾವಳೋ ತಾಯಿ, ತೊಟ್ಟಿಲಲ್ಲಿ ಮಲಗಿದ್ದ ತನ್ನ ಮಗುವಿನ ರಕ್ಷಣೆಗಾಗಿ, ತಾನು ಮನೆಯಲ್ಲಿ ಸಾಕಿದ್ದ ಮುಂಗುಸಿಯನ್ನು ಬಿಟ್ಟು, ನೀರು ತರಲು ಹೋದಳಂತೆ. ಅವಳು ಇಲ್ಲದಿದ್ದಾಗ ಮನೆಯೊಳಗೆ ಒಂದು ಹಾವು ಬಂತಂತೆ. ಅದನ್ನು ಮುಂಗುಸಿ ಕೊಂದು ಮಗುವನ್ನು ಕಾಪಾಡಿತಂತೆ. ಮನೆಗೆ ಹಿಂದಿರುಗಿದ ತಾಯಿ, ರಕ್ತದಿಂದ ಕೆಂಪಾದ ಮುಂಗುಸಿಯ ಬಾಯನ್ನು ನೋಡಿದ ಕೂಡಲೆ ' ಈ ಮುಂಗುಸಿ ನನ್ನ ಮಗುವನ್ನು ಕಡಿದುಬಿಟ್ಟಿದೆ' ಎಂದುಕೊಂಡು ಕೈಲಿದ್ದ ಕೊಡದಿಂದ ಮುಂಗುಸಿಯನ್ನು ಕೊಂದುಬಿಟ್ಟಳಂತೆ, ಆಮೇಲೆ ಒಳಗೆ ಬಂದು

ನೋಡಿದರೆ—ತೊಟ್ಟಿಲ ಹೊರಗೆ ಹಾವು ಸತ್ತುಬಿದ್ದಿದೆ, ತೊಟ್ಟಿಲೊಳಗೆ ಮಗು ಕೇಕೆ ಹಾಕಿ ನಗುತ್ತಿದೆ!. ಆಗ, 'ಅಯ್ಯೋ, ದುಡುಕಿ ನಿರಪರಾಧಿಯಾದ ಮುಂಗುಸಿಯನ್ನು ಕೊಂದುಬಿಟ್ಟೆನಲ್ಲಾ!' ಎಂದು ಗೋಳಾಡಿದಳಂತೆ.

ಯಾರು ಇಷ್ಟು ವರ್ಷಗಳಿಂದ ನನ್ನ ನಡೆ-ನುಡಿಗಳನ್ನು ಬಲ್ಲವರು ಎಂದು ಕೊಂಡಿದ್ದೇನೋ ಅಂತಹ ಮೂವರು ಮಿತ್ರರು ಈಗ 'ಅಸಂಪ್ರೇಕ್ಷ್ಯಕಾರಿತ್ವ'ಕ್ಕೆ ಉದಾಹರಣೆಗಳಾಗಿದ್ದಾರೆ. ನನ್ನ 'ಯೋಗ್ಯತೆ'ಯ ಬಗ್ಗೆ ex-parte ತೀರ್ಮಾನ ಕೊಟ್ಟುಬಿಟ್ಟಿದ್ದಾರೆ. ತಪ್ಪು ಅವರದಲ್ಲ; ಅವರನ್ನು ತಪ್ಪಿನ ಹಳ್ಳಕ್ಕೆ ದೂಡಿದ ಬೇಶ್ರೀ ಬೀಮಣ್ಣನವರದು. 'ನಂಬಿಕೆಟ್ಟವರಿಲ್ಲವೋ ರಂಗಯ್ಯನ' ಎಂದರು, ದಾಸರು. 'ನಂಬಿ ಕೆಟ್ಟವರಿರುವರೋ ಬೀಮಣ್ಣನ' ಎನ್ನುತ್ತೇನೆ, ನಾನು.

೧

೧೧-೬-೭೨ರ 'ಪ್ರಜಾಮತ'ದಲ್ಲಿ "ಪರಮಾತ್ಮ ಕೈಬಿಟ್ಟ— ನಾ ಸತ್ತೆನೇ?" ಎಂಬ 'ಅಪಹಾಸ್ಯ ಲೇಖನ'ದಲ್ಲಿ ನನ್ನನ್ನು ಕುರಿತು ಬೇಶ್ರೀ ಮಾಡಿರುವ ಮಿಥ್ಯಾರೋಪಗಳಲ್ಲಿ ಒಂದಕ್ಕೆ ೨೩-೭-೭೨ರ 'ಪ್ರಪಂಚ'ದಲ್ಲಿ 'ಪಾಪು' ಅವರು ಒಂದು 'ಭಾಷ್ಯ' ಬರೆದಿದ್ದಾರೆ.

"ರಾಜರತ್ನಂ ತಮ್ಮ ನಿಜರೂಪ ತೋರಿಸಿಕೊಟ್ಟರು"

—ಎಂಬುದು ಈ ಭಾಷ್ಯಕ್ಕೆ ಅವರು ಕೊಟ್ಟಿರುವ ಶಿರೋನಾಮೆ. ಇದರಲ್ಲಿ ಒಂದು ಸಂತೋಷದ ಸಂಗತಿ ಏನೆಂದರೆ- ಬೇಶ್ರೀ ಮಾಡಿದ ಹಾಗೆ 'ಚಕ್ರವರ್ತಿ ವಜ್ರ' ಎಂಬ ಮರೆಯ

ಹೆಸರಿನಲ್ಲಿ ನನಗೆ ಮೂತಿ ತಿವಿದಿಲ್ಲ; ನನ್ನ ನಿಜವಾದ ಹೆಸರನ್ನೇ ಎತ್ತಿ, ಜೊತೆಗೆ ನನ್ನ ಫೋಟೋವನ್ನೂ ಪ್ರಕಟಿಸಿ, ನನ್ನ ಮುಖಕ್ಕೆ ಮಂಗಳಾರತಿ ಎತ್ತಿದ್ದಾರೆ.

ಅವರು ನನ್ನನ್ನು ಕುರಿತು ಬರೆದಿರುವುದರ ಪೂರ್ಣಪಾಠ ಹೀಗಿದೆ:-

"ಸಾರ್ವಜನಿಕ ಜೀವನದ ಮೌಲ್ಯಗಳು ಬಿದ್ದು ಹೋಗಿರುವುದಕ್ಕೆ ವ್ಯಕ್ತಿಗತ ಜೀವನದಲ್ಲಿಯ ಬೆಲೆಗಳ ಮೌಲ್ಯವಿಚ್ಛೇದನೆ ಆಗಿರುವುದೇ ಕಾರಣ ವಾಗಿದೆ. 'ನಾನು ಹೇಗೆ ನಡೆದರೇನು ಏನು ಮಾಡಿದ ರೇನು ನನ್ನ ಬರಹಗಳನ್ನಷ್ಟೇ ನೋಡಿರಿ' ಎನ್ನುವ ಸಾಹಿತಿಯ ಸ್ವೈರಸಮರ್ಥನೆಗೆ ಬೇರೆ ದೇಶಗಳಲ್ಲಿ ಅರ್ಥ ಇದ್ದೀತು. ಆದರೆ ನಮ್ಮ ದೇಶದ ಮೌಲ್ಯ ಮಾಪನ ಪದ್ಧತಿಯಲ್ಲಿ ಅದಕ್ಕೆ ಅವಕಾಶವಿಲ್ಲ. ಋಷಿ ಅಲ್ಲದವನು ಕಾವ್ಯ ರಚಿಸಲಾರ ಎನ್ನುವ ಭಾವನೆ ಬೆಳೆದು ಬಂದಿರುವ ದೇಶ ಇದು.

"ಈ ಹಿನ್ನೆಲೆಯಲ್ಲಿ ಸಾಹಿತಿ ರಾಜರತ್ನಂ ಅವರನ್ನು ನೋಡಿದರೆ, ಅವರು ನಮ್ಮ ಭಾವನೆಯ ಉತ್ತುಂಗ ಶಿಖರದಿಂದ ಧೊಪ್ಪನೆ ಜಾರಿ ಕೆಳಗೆ ಬಿದ್ದಂತೆ ನಮಗೆ ಭಾಸವಾಗುತ್ತದೆ. ಮಿಲಿಂದ ಪ್ರಶ್ನೆ, ಜಾತಕದ ಕಥೆಗಳು, ಹನಿಗಳು ಹಾಗೂ ಹೆಂಡಗುಡುಕ ರತ್ನ ಮುಂತಾದ ಕೃತಿಗಳನ್ನು ಬರೆದು ಖ್ಯಾತರಾದ ರಾಜರತ್ನಂರು ತಮ್ಮ ಕೃತಿಗಳಂತೆಯೇ ಉದಾತ್ತವ್ಯಕ್ತಿ

ಎಂದುಕೊಂಡ ನಮಗೆ ಅವರ ನೈಜ ಸ್ವರೂಪವನ್ನು ನೋಡಿದಾಗ ನಿರಾಸೆ ಆಗುವುದು ಸ್ವಾಭಾವಿಕ. ಸಾಹಿತಿಯು ತಾನು ಬದುಕಿರುವ ಜೀವನ ಒಂದು, ಜನರಿಗೆ ತೋರಿಸುವ ಜೀವನ ಇನ್ನೊಂದು ಎನ್ನುವ ದ್ವೈತವು ಮುಗ್ಧಮನಸ್ಸಿನ ಜನರಿಗೆ ಹೆಚ್ಚು ಅಘಾತವನ್ನು ಉಂಟು ಮಾಡುತ್ತದೆ.

"ಇತ್ತೀಚೆಗೆ ಬೆಂಗಳೂರಿನಲ್ಲಿ ಒಂದು ಪ್ರಸಂಗ ನಡೆಯಿತು. ಅ. ನ. ಕೃ. ಅವರ ಒಂದು ಪುಸ್ತಕದ ಬಿಡುಗಡೆಯ ಸಮಾರಂಭ ಅದು. ರಾಜರತ್ನಂ ಅವರು, ಗತಿಸಿದ ಆ ಪ್ರಾತಃಸ್ಮರಣೀಯ ಸಾಹಿತಿಯನ್ನು ಕುರಿತು ಮಾತನಾಡಿದರೆ ಒಳ್ಳೆಯದೆನ್ನುವ ಭಾವನೆ ಕೆಲವರಿಗೆ. ಮಾತನಾಡಲು ಅವರನ್ನು ಕೇಳಿ ಎನ್ನುವ ಸಲಹೆ ಬಂದಿತು. ಸರಿ, ರಾಜರತ್ನಂರವರಿಗೆ ಕರೆ ಹೋಯಿತು. ಸಾಮಾನ್ಯವಾಗಿ ಇಂಥ ಸಂದರ್ಭದಲ್ಲಿ, ತನ್ನನ್ನು ಭಾಗವಹಿಸಲು ಕೇಳಿದರಲ್ಲ ಎನ್ನುವುದೇ ಸಾಮಾನ್ಯವಾಗಿ ಎಲ್ಲರಲ್ಲಿಯೂ ಬರುವ ಮನೋಭಾವನೆ. ಒಬ್ಬ ಸಾಹಿತಿಗೆ, ಅವನ ಪಶ್ಚಾತ್ತದಲ್ಲಿ, ಇನ್ನೊಬ್ಬ ಸಾಹಿತಿಯು ಸಲ್ಲಿಸಬಹುದಾದ ಒಂದು ಚಿಕ್ಕ ಸೇವೆ ಇದು.

"ಸಮಾರಂಭದಲ್ಲಿ ಭಾಗವಹಿಸಬೇಕೆಂದು ಕೇಳುವುದೇ ತಡ, ರಾಜರತ್ನಂರು ಒಪ್ಪಿಕೊಂಡು ಬಿಡುವರೆಂದು ಅವರನ್ನು ಕೇಳಲು ಹೋದ ಸ್ನೇಹಿತರ ತರ್ಕ. ಆದರೆ,

ರಾಜರತ್ನಂ ಹೇಳಿದ ಮಾತು ಕೇಳಿ, ಅವರಿಗೆ ಸಿಡಿಲು ಹೊಡೆದ ಅನುಭವವಾಯಿತು. ಒಬ್ಬ ವ್ಯಕ್ತಿಯ ಬಗೆಗೆ ಬಹುದೊಡ್ಡ ಭಾವನೆ ಮಾಡಿಕೊಂಡಿರುವಾಗ, ಆ ವ್ಯಕ್ತಿ ಚಿಲ್ಲರೆ ಎನ್ನುವುದಕ್ಕಿಂತಲೂ ಕಡೆಯಾಗಿ ನಡೆದುಕೊಂಡರೆ ಯಾರಿಗಾದರೂ ತಲೆಯ ಮೇಲೆ ಹೊಡೆದಂತೆ ಆಗುವುದು ಸ್ವಾಭಾವಿಕ.

''ಸಭೆಯಲ್ಲಿ ಮಾತನಾಡಲು ತಮಗೆ ಇನ್ನೂರು ರೂಪಾಯಿ ಕೊಟ್ಟರೆ ತಾವು ಬರುವುದಾಗಿ ರಾಜರತ್ನಂ ಹೇಳಿದ ಮಾತು ಕೇಳಿದ ಮೇಲೆ, ಅವರ ಬಗೆಗೆ ಹೆಚ್ಚು ಮಮತೆ ಇರುವವರಿಗೆ ಕೂಡ ಯಾವ ಭಾವನೆ ಆಗಬೇಡ? ರಾಜರತ್ನಂರಲ್ಲಿ ಮನುಷ್ಯತ್ವದ ಲವವೇಶ ವಾದರೂ ಇದೆಯೆನ್ನುವ ಬಗೆಗೆ ಸಂದೇಹ ಉಂಟಾಗು ತ್ತದೆ.

''ಗತಿಸಿದ ಸಾಹಿತಿಯ ಪುಸ್ತಕವೊಂದರ ಬಿಡುಗಡೆಯ ಸಮಾರಂಭದಲ್ಲಿ ಯಾರು ಯಾರಿಗೆ ಹಣ ಕೊಡ ಬೇಕು? ಬೇಡುವ ಬಾಯಿ, ಕಿಂಚಿತ್ತಾದರೂ ಔಚಿತ್ಯ ಅರಿಯಬಾರದೇ? ಹಿಂದೊಮ್ಮೆ ಇದೇ ರಾಜರತ್ನಂ, ಅ.ನ.ಕೃ. ಬಗೆಗೆ ದುಃಖ ಸೂಚಿಸುತ್ತ ಈ ರೀತಿ ಹೇಳಿದ್ದರು: ನಾನು ಮೈಸೂರಿನಿಂದ ಎಂ.ಎ. ಮುಗಿಸಿ ಕೊಂಡು, ಉದರಭರಣಕ್ಕಾಗಿ ಬೆಂಗಳೂರಿಗೆ ಬೇವಾರ್ಸಿಯಾಗಿ ಬಂದ ಸಮಯದಲ್ಲಿ ಅ.ನ.ಕೃ. ಅವರು ಕಡುಬಡವನಿಗೆ ನಿಧಿ ದೊರಕಿದಂತೆ ದೊರಕಿ,

ತಮ್ಮ ಮನೆಗೆ ಕರೆದುಕೊಂಡು ಹೋಗಿ ತಮ್ಮ ಕೋಣೆಯಲ್ಲಿಯೇ ಕೆಲವು ದಿನಗಳ ಕಾಲ ಆಶ್ರಯ ಕೊಟ್ಟರು.

"ಅಂಥ ಅ.ನ.ಕೃರನ್ನು ಕುರಿತ ಸಭೆಯಲ್ಲಿ ಮಾತನಾಡುವುದಕ್ಕೆ ರಾಜರತ್ನಂ ಎರಡು ನೂರು ರೂಪಾಯಿ ಕೇಳಿ, ತಮ್ಮ ಬೆಲೆ ಎಷ್ಟೆಂಬುದನ್ನು ತೋರಿಸಿ ಕೊಟ್ಟರು. ಅದೇ ಸಂದರ್ಭದಲ್ಲಿ ತಮ್ಮ ಮನುಷ್ಯತ್ವದ ಬೆಲೆ ಸಂಪೂರ್ಣ ಸೊನ್ನೆ ಎಂಬುದನ್ನೂ ಕೂಡ ಸ್ಮರಣೆಗೆಟ್ಟು ತೋರಿಸಿಕೊಂಡರು. ಅವರು ಬಹುಶಃ ಇದೇ ರೀತಿ ಇದ್ದರೇನೋ—ಅವರ ಬಗೆಗೆ ನಮ್ಮ ಕಲ್ಪನೆಯೇ ತಪ್ಪಾಗಿರಬೇಕು. ಮುಖದಂತೆ ಮನುಷ್ಯರಿರುವುದಿಲ್ಲ ಎಂಬುದನ್ನು ರಾಜರತ್ನಂ ಸಹ ಸಿದ್ಧಮಾಡಿ ತೋರಿಸಿದರು".

ಮೇಲಿನ ಈ ಎರಡೂ ನಿರಾಧಾರವಾದ ಆರೋಪಗಳು ಪ್ರಕಟವಾಗುವ ವೇಳೆಗೆ, ಅ. ನ. ಕೃ. ಕಾಲವಾದ ೮-೭-೭೧ ರಿಂದ ೨೩-೭-೭೨ ರವರೆಗೆ ಅ. ನ. ಕೃ. ಅವರನ್ನು ಕುರಿತು ನಾನು ಎಲ್ಲೆಲ್ಲಿ ಮಾತನಾಡಿದೆ, ನಾನು ಮಾಡಿದ ಸ್ಮಾರಕೋಪನ್ಯಾಸಗಳು ಯಾವುವು, ನಾನು ಪ್ರಕಟಿಸಿದ 'ಅ. ನ. ಕೃ. ಸ್ಮಾರಕ ಪುಸ್ತಿಕೆಗಳು' ಯಾವುವು— ಎಂಬುದು ಬೆಂಗಳೂರಿನಲ್ಲೂ ಅಲ್ಲಿಂದ ಹೊರಗೂ ಅನೇಕರಿಗೆ ಗೊತ್ತು. ನನ್ನ 'ನಿರ್ಭಯಾಗ್ರಫಿ'ಯ ಐದನೇ ಕಂತಾದ 'ಅ. ನ. ಕೃ. ಮತ್ತು ನಾನು' ಎಂಬ ಪುಸ್ತಿಕೆಯಲ್ಲಿ ಇದನ್ನು ವಿವರವಾಗಿ ತಿಳಿಸಿದ್ದೇನೆ.

೨

'ನಮ್ಮನ್ನು ಯಾರು ಎಲ್ಲಿ ಬೇಕಾದರೂ ಒದೆಯಬಹುದು. ನಾವು ಮಾತ್ರ ಒದೆಸಿಕೊಂಡು ತಾಳ್ಮೆಯಿಂದ ಸುಮ್ಮನಿರಬೇಕು' ಎಂಬ ಷಂಡ ವೇದಾಂತ ನನಗೆ ಅರ್ಥವಾಗುವುದಿಲ್ಲ. ಬೇಶ್ರೀ ಅವರ ಬಾಯಿಗೆ ಬ್ರೇಕ್ ಹಾಕುವುದಕ್ಕಾಗಿ ನಾನು ಪ್ರಯೋಗಿಸಿದ ನನ್ನ 'ನಿರ್ಭಯಾಗ್ರಫಿ'ಯ ಕಂತುಗಳಿಂದ ಅವರು ಇನ್ನಷ್ಟು ಭಯಗ್ರಸ್ತರಾಗಿ ಮೊರೆಯಿಟ್ಟಾಗ—

ಶ್ರೀಮಾನ್ ಶಂ.ಬಾ. ಜೋಶಿ ಅವರು ಜನವರಿ ೭೭ರಲ್ಲಿ ಪ್ರಕಟವಾದ "ತಿಂಮದರ್ಶನ"ದಲ್ಲಿ (ಪುಟ ೧೪) ಹೀಗೆ ಬರೆಯುತ್ತಾರೆ:

> 'ಮಸೆ ಮಸೆ ಕೊಡಲಿ ಮಸೆ' ಎಂಬ ವೀರಕ್ಷಾತ್ರ ತೇಜ ಪ್ರಚೋದ ಅದ್ಭುತಶೈಲಿಯ ಶ್ರೀ ರಾಜರತ್ನಂ ಬಳಿಕ ಅಹಿಂಸೆಯ, ಜೈನ,-ಬೌದ್ಧ ಪಂಥೇಯ ತತ್ತ್ವಜ್ಞಾನ ಸ್ವೀಕರಿಸಿ ಇದರ ಪ್ರಚಾರದಲ್ಲಿ ತಮ್ಮ ಶಕ್ತಿಯನ್ನು ವೆಚ್ಚಮಾಡುತ್ತಿದ್ದಾರೆ. ಸತ್ಯಸಾಯಿಗೆ ಶರಣು ಹೋದದ್ದು ಆಯ್ತು. ಶ್ರೀ ಬೀಚಿ ತಮ್ಮ 'ಭಯಾಗ್ರಫಿ'ಯ ಮೂಲಕ ಶ್ರೀ ರಾಜರತ್ನಂರನ್ನು ಕೆರಳಿಸಿದರು. ಏನೇ ಬರಲಿ, ೨೫—೩೦ ವರ್ಷಗಳಿಂದ ಅಖಂಡವಾಗಿ ಅಹಿಂಸಾತ್ಮಕ ಜೀವನದ ಹಿರಿಮೆಯನ್ನು ಬೋಧಿಸಲು ಮಕ್ಕಳ ಕಥೆ ಬರೆಯುತ್ತಿರುವ 'ರಾಜರತ್ನಂ' ಕೋಪಾಟೋಪದಿಂದ

ಸಾಹಿತ್ಯ ಖಡ್ಗಧಾರಿಗಳಾಗಿ 'ಹಿಂಸಾತ್ಮಕ' 'ಕ್ರೂರ' ಭಾಷೆಯಿಂದ ತಮ್ಮ ನಾಲಗೆ ಅಪವಿತ್ರಗೊಳಿಸಿದರಲ್ಲ ಎಂಬ ವಿಷಾದ ನನಗೆ. ಜೈನ—ಬೌದ್ಧ ಪಂಥದಲ್ಲಿ ಹೇಳಿರುವ ಪ್ರಾಯಶ್ಚಿತ್ತವನ್ನು ಇವರು ಸ್ವೀಕರಿಸಿರ ಬಹುದು. ಮರಳಿ ಪರಿಶುದ್ಧವಾಗುವ ಹಂಚಿಕೆ ನಮ್ಮ ಧರ್ಮಪಂಥಗಳಲ್ಲಿ ಉಂಟೇ ಉಂಟು".

೩

ಅದೇ 'ತಿಂಮದರ್ಶನ'ದ ಪುಟ ೧೯-೨೦ರಲ್ಲಿ ಶ್ರೀ ಗೌರೀಶ ಕಾಯ್ಕಿಣಿ ಅವರು ಹೀಗೆ ಬರೆದಿದ್ದಾರೆ:

"ಅ. ನ. ಕೃ. ಬೀಚಿಯವರ ಅಂತರಂಗದ ಮಿತ್ರರಲ್ಲಿ ಒಬ್ಬರು, ಅವರನ್ನು ಕುರಿತು ನಡೆದ ಶೋಕಸಭೆ ಯಲ್ಲಿ ಭಾಷಣ ಮಾಡಲು ಕರೆದರೂ ಒಬ್ಬ ಮಹಾ ಸಾಹಿತಿ ಬರಲು ಒಪ್ಪಲಿಲ್ಲ. ಭಾಷಣಕ್ಕಾಗಿ ಹಣ ಬೇರೆ ಕೇಳಿದರಂತೆ. ಆ ಸಾಹಿತಿ ಅ. ನ. ಕೃ. ಅವರಿಂದ ಅನೇಕ ರೀತಿಯಲ್ಲಿ ಉಪಕೃತರಾದವರು. ಆದರೂ ಆ ವಿರಕ್ತ ವಿದ್ವಾಂಸರು ಋಣವನ್ನು ನೆನೆಯಲಿಲ್ಲ. ಅದಕ್ಕಾಗಿ ಬೀಚಿ ಅವರಿಗೆ ಸರಿಯಾಗಿ ಛೀಮಾರಿ ಹಾಕಿದರು. ಅಂದಿನಿಂದ ಸಮಯ ಸಿಕ್ಕಾಗಲೆಲ್ಲ ಅವರ ಡಂಭಾಚಾರದ ಬೆಲೂನು ಚುಚ್ಚಿ ಒಡೆಯುತ್ತಲೇ ಬಂದಿದ್ದಾರೆ.

"ಈಚೆಗೆ ಧರ್ಮಸ್ಥಳದ ಸರ್ವಧರ್ಮ ಸಮ್ಮೇಳನಕ್ಕೆ ಬೀಚಿಯವರ ಇನ್ನೊಬ್ಬ ಮಿತ್ರ ಶ್ರೀ ಜಿ. ಪಿ. ರಾಜರತ್ನಂ ಅಧ್ಯಕ್ಷರು. ಆ ಸಂದರ್ಭದಲ್ಲಿ ಸಂದೇಶವನ್ನು ಕಳಿಸುತ್ತ 'ರತ್ನಂ' ಅವರಿಗೆ ಬರೆದ ಪತ್ರದಲ್ಲಿ, ಈ ಭೀಮಸೇನ ಆ ಧರ್ಮರಾಜನನ್ನು ಎಚ್ಚರಿಸಲು ನಗಾರಿ ಬಾರಿಸಿದ: 'ಸರ್ವಧರ್ಮ ಸಮ್ಮೇಳನದಲ್ಲಿ ಸತ್ಯಸಾಯಿ ಬಾಬಾನ ನಗಾರಿ ಬಡಿಯಬೇಡಿರಿ ಮತ್ತೆ."

* * *

ಹೀಗೆ ಬರೆದಿರುವವರು ಮೂವರೂ, ತಾವು ಕೇಳಿದ್ದನ್ನು ನಂಬಿ ಬಿಡುವ ಮೊದಲು ನನ್ನನ್ನೂ ಒಂದು ಮಾತು ಕೇಳಿದ್ದಿದ್ದರೆ? ಸ್ನೇಹದ ತಿಳಿನೀರಿನ ಮೇಲೆ ದುರ್ನಾತನ ತೈಲಬಿಂದು ಬಿದ್ದು ಹರಡಿಕೊಳ್ಳುವುದನ್ನು ತಡೆಯಬಹುದಾಗಿತ್ತೋ? ('ಅಪಾಂ ತರಂಗೇಷ್ವಿವ ತೈಲಬಿಂದುಂ'—ಕಾಳಿದಾಸನ ರಘುವಂಶ ಜ್ಞಾಪಿಸಿಕೊಳ್ಳಿ.)

ಜನಪೈಶುನ್ಯದ ಹಸಿತಂ
ಮನವಹ್ನಿವೊಲಾಗಿ ಹರಡಿ ನಿರ್ದೋಷಿಗಳಂ
ಗಣಿಸದೆ ದಹಿಪುದು ಸಕಲರನ್
ಅನುಕಂಪೆಯನುಳಿದ ವಚನಮುರಗೀರದನಂ

(ಡಿ.ವಿ. ಜಿ. ಅವರ ಶ್ರೀ ರಾಮಪರೀಕ್ಷಣಂ ಪುಟ ೬೨)

ಯಾರು ಏನು ಬೇಕಾದರೂ ಅಂದು ಆಡಿಕೊಳ್ಳಲಿ. ಅದರಿಂದ ನನಗೇನೂ ಕುಂದಿಲ್ಲ. Murder will out ಎಂದು ಹೇಳುವ ಹಾಗೆ ಎಂದಿದ್ದರೂ Truth will out. "ಸತ್ಯಮೇವ

ಜಯತೇ, ನಾನೃತಂ'.

ತರುವಾಯ—ಧರ್ಮಸ್ಥಳದ ಸಂಮೇಳನದ ಸುದ್ದಿಯನ್ನು ಅವರೇ ಎತ್ತಿದ್ದಾರೆ. ಅದನ್ನು ಕುರಿತು ನಾಳೆ ಒಂದು ಪ್ರತ್ಯೇಕ ಪತ್ರ ಬರೆಯುತ್ತೇನೆ.

ಇತಿ

ಪ್ರೀತಿ ಪೂರ್ವಕವಾಗಿ

ರಾಜರತ್ನಂ.

ಮೇಲು ಮಾತು:

ನಾನು ಧರ್ಮಸಮ್ಮೇಳನಕ್ಕೆ ಅಧ್ಯಕ್ಷನಾಗಿರಲಿಲ್ಲ, ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷನಾಗಿದ್ದೆ. ಧರ್ಮಸಮ್ಮೇಳನ ನಡೆದ ದಿವಸ ನಾನು ಕಾರ್ಕಳದಲ್ಲಿ ಕಾಲೇಜಿನ ವಿದ್ಯಾರ್ಥಿಗಳೊಡನೆ, ಮೂಲ್ಕಿಯಲ್ಲಿ ಸತ್ಯಸಾಯಿ ಸಮಿತಿಯವರೊಡನೆ ಸತ್ಸಂಗದಲ್ಲಿದ್ದೆ.

ಸಂದೇಶ ಕಳಿಸಿದ್ದು ನೇರವಾಗಿ ನನಗಲ್ಲ, ಸಮ್ಮೇಳನದ ವ್ಯವಸ್ಥಾಪಕರಿಗೆ. ಅವರು ಬರೆದದ್ದು `ನಗಾರಿ' ಅಲ್ಲ, `ಡೊಳ್ಳು'.

ಅಲ್ಲಿ ಏನಾಯಿತು? ಮುಂದಿನ ಪತ್ರ ನೋಡಿ.

—ರಾಜರತ್ನಂ.

◆ ಜಡೆಶಂಕರ ◆

“ಇಲ್ಲಿಗೂ ಬಂದೆಯಾ ಜಡೆಶಂಕರಾ?” ಎಂದ ಹಾಗೆ—

“ರಾಮೇಶ್ವರಕ್ಕೆ ಹೋದರೂ ಶನೀಶ್ವರ ಬಿಡಲಿಲ್ಲ” ಎಂದ ಹಾಗೆ—ಬೇಶ್ರೀ ಬೀಮಂಣನವರ ಕಾಟ ನನ್ನನ್ನು ಧರ್ಮಸ್ಥಳ ದಲ್ಲಿಯೂ ಬಿಡಲಿಲ್ಲ.

ಅದು ನಡೆದದ್ದು ಹೀಗೆ:—

ಶ್ರೀ ಸತ್ಯಸಾಯಿ ಬಾಬಾ ಅವರಲ್ಲಿ ನನಗಿರುವ ಪ್ರೀತಿ ವಿಶ್ವಾಸ ಗೌರವಗಳನ್ನು ಲೇವಡಿ ಮಾಡಿ ಬರೆದು ಲೇಖನ ಪ್ರಕಟವಾಗಿ ಐದಾರು ತಿಂಗಳು ಕಳೆದಿದೆ. ಬೆಳಗಾವಿಯಲ್ಲೂ ಬೆಂಗಳೂರಿನಲ್ಲೂ ನನ್ನ ಮೇಲೆ ಅಲ್ಲಸಲ್ಲದ ಆರೋಪಗಳನ್ನು ಮಾಡಿದ್ದಾರೆ. ಹೀಗಿರುವಾಗ—

ಶ್ರೀ ಕ್ಷೇತ್ರ ಧರ್ಮಸ್ಥಳದಲ್ಲಿ, ಪದ್ಧತಿಯಂತೆ ನಡೆಯುವ ದೀಪೋತ್ಸವ ಕಾಲದಲ್ಲಿ, 5-12-72ರಂದು ನಡೆದ ಸಾಹಿತ್ಯ ಸಮ್ಮೇಳನಕ್ಕೆ ನನ್ನನ್ನು ಅಧ್ಯಕ್ಷನನ್ನಾಗಿ ಕರೆದಿದ್ದಾರೆ. ನಾನು ಒಪ್ಪಿಕೊಂಡು ಹೋಗಿದ್ದೇನೆ.

ಅವೊತ್ತು ಸಂಜೆಯ ಸಭೆಯಲ್ಲಿ ವಾಡಿಕೆಯಂತೆ ಬಂದ ಸಂದೇಶಗಳನ್ನು ಓದುತ್ತಿದ್ದಾರೆ. ಬೀಮಂಣನವರದನ್ನು ಓದುವಾಗ ಓದುವವರು ಕೊಂಚ ತಡವರಿಸಿದರು. ಏನೆನ್ನೋ ದಾಟಿಕೊಂಡು

ಹೋಗುತ್ತಿದ್ದಾರೆ ಎನಿಸಿತು ಆಗ ಸುಮ್ಮನಿದ್ದೆ.

ಸಭೆಯ ಕಾರ್ಯಕಲಾಪ ಆರಂಭವಾದ ಮೇಲೆ, ಸಂದೇಶಗಳ ಫೈಲನ್ನು ಕೇಳಿ ತೆಗೆದುಕೊಂಡು ಕೈಯಾಡಿಸಿದೆ. ಬೀಮಣ್ಣನವರ ಸಂದೇಶ ಸಿಕ್ಕಿತು.

"ಶ್ರೀ ರಾಜರತ್ನಂ ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷರಾಗಿರುವುದು ಸಂತೋಷ. ಸಮ್ಮೇಳನ ಯಶಸ್ವಿಯಾಗಿ ನಡೆಯಲಿ" ಎಂಬ ಮಾಮೂಲು.

ಅನಂತರ "ರಾಜರತ್ನಂ ಸಾಯಿಬಾಬಾನ ಡೊಳ್ಳನ್ನು ಬಾರಿಸದ ಹಾಗೆ ನೋಡಿಕೊಳ್ಳಿ" ಎಂಬ ತಾಕೀತು. ಸಾಯಿಬಾಬಾಗೆ 'ಡೊಳ್ಳು' ಇಲ್ಲ ಎಂಬುದು ಈ ಬಡಪ್ರಾಣಿಗೆ ತಿಳಿಯದು. ಆಮೇಲೆ ಜ್ಞಾಪಕ ಬಂತು—

'ನಾವು ಡೋಲು ಎನ್ನುವುದಕ್ಕೆ ಇವರ ಕಡೆ ಡೊಳ್ಳು ಎನ್ನುತ್ತಾರೆ' ಎನ್ನುವುದು.

ಸಂದೇಶಗಳಲ್ಲಿ ಹೀಗೆಲ್ಲ ಬರೆಯುವುದು ಸಭ್ಯರ ಲಕ್ಷಣ ಅಲ್ಲ ಎನ್ನುವುದು ಇವರಿಗೆ ತೋಚದೆ ಹೋಯಿತಲ್ಲಾ! ಒಂದು ವೇಳೆ ಹೀಗೆ ಬರೆದರೂ ಅದನ್ನು ಸಭೆಯಲ್ಲಿ ಯಾರೂ ಓದುವುದಿಲ್ಲ ಎಂಬುದು ಈ ಬುದ್ಧಿವಂತರಿಗೆ ಗೊತ್ತಾಗಲಿಲ್ಲವೇ! ಮದ ಮಿತಿ ಮೀರಿದಾಗ ಮೋಹ ಬುದ್ಧಿಗೆ ಬುರ್ಖಾ ಹಾಕಿಬಿಡುತ್ತದೆ. ಇರಲಿ.

ಸಂದೇಶದ ಕೊನೆಯಲ್ಲಿ ಒಂದು ಸ್ವಾರಸ್ಯವಾದ 'ವಿಶೇಷ ಸೂಚನೆ' ಇತ್ತು. ಏನೆಂದರೆ—'ಈ ಸಂದೇಶವನ್ನು ಸಭೆಯಲ್ಲಿ

ತಪ್ಪದೇ ಓದಲೇಬೇಕೆಂದು ಆಗ್ರಹದ ಬೇಡಿಕೆ'.

ಈ ಬೇಡಿಕೆಯ ಹಿಂದೆ ಇದ್ದ, ಒಂದಲ್ಲ ಎರಡಲ್ಲ ಮೂರು ಒತ್ತಾಯದ ಪದಗಳನ್ನು ಓದಿಕೊಂಡಾಗ—'ಈಗ ಈ ಮನುಷ್ಯ ತಾನಾಗಿಯೇ ನನ್ನ ಕೈಗೆ ಸಿಕ್ಕಿಕೊಂಡರು' ಎನ್ನಿಸಿತು. ಅದುವರೆಗೆ ಇಲ್ಲದಿದ್ದ ಒಂದು Mischevous mood ನನ್ನನ್ನು ಆವರಿಸಿ ಕೊಂಡಿತು.

ಸಭೆಯಲ್ಲಿ ಮಾತನಾಡಬೇಕಾದವರೆಲ್ಲರೂ ಮಾತನಾಡಿ ಯಾಯಿತು. ಸಮ್ಮೇಳನಾಧ್ಯಕ್ಷರಾಗಿ ನನ್ನ ಮಾತೂ ಮುಗಿಯಿತು. ಕುಳಿತುಕೊಳ್ಳುವ ಮುಂಚೆ ಸಭಿಕರನ್ನು ಉದ್ದೇಶಿಸಿ—

"ಮುಗಿಸುವ ಮುಂಚೆ ಒಂದು ಮಾತು. ಬಂದಿರುವ ಸಂದೇಶಗಳಲ್ಲಿ ಒಂದು ಸಂದೇಶವು 'ಇದನ್ನು ಸಭೆಯಲ್ಲಿ ತಪ್ಪದೆ ಓದಲೇಬೇಕೆಂದು ಆಗ್ರಹದ ಬೇಡಿಕೆ' ಎಂದು ಕೇಳಿಕೊಂಡಿದೆ. ವ್ಯವಸ್ಥಾಪಕರು ಇದರಲ್ಲಿ ಓದದೆ ಬಿಟ್ಟಿರುವ ಒಂದು ವಾಕ್ಯ ಹೀಗಿದೆ:—'ರಾಜರತ್ನಂ ಸಾಯಿಬಾಬಾನ ಡೊಳ್ಳನ್ನು ಬಾರಿಸದ ಹಾಗೆ ನೋಡಿಕೊಳ್ಳಿ' ಎಂದು ಓದಿದೆ.

ಕಿವಿ ತೂತು ಬೀಳುವಂತಹ ಚಪ್ಪಾಳೆ ಧ್ವನಿಯಿಂದ ಸಭಾ ಮಂಟಪವು ತುಂಬಿಹೋಯಿತು. ನನ್ನ ವರ್ತನೆಯನ್ನು ಮೆಚ್ಚಿಕೊಂಡು ಚಪ್ಪಾಳೆ ತಟ್ಟಿದವರು ಕೆಲವರಾದರೆ, ಸಂದೇಶದ ತಾಕೀತನ್ನು ಮೆಚ್ಚಿಕೊಂಡವರೂ ಕೆಲವರು ಇರಬಹುದು ಎಂದು ನನಗನ್ನಿಸಿತು.

'ಜುಟ್ಟು ಸಿಕ್ಕಿರುವಾಗಲೇ ಜಗ್ಗಿಸಿಬಿಡಬೇಕು' ಎಂಬ

ಜನಪದ ವೇದವಾಕ್ಯ ನೆನಪಿಗೆ ಬಂತು. ಪಟ್ಟು ಹಾಕಿದೆ.

"ಸನ್ಮಾನ್ಯ ಸಭಿಕರೆ,

"ಈ ಸಂದೇಶ ಬಾರದೆ ಹೋಗಿದ್ದರೆ, ನಾನು ಈ ಸಭೆಯಲ್ಲಿ ಶ್ರೀ ಸತ್ಯಸಾಯಿಬಾಬಾ ಅವರ ಹೆಸರನ್ನು ಎತ್ತುವುದಕ್ಕೆ ಅವಕಾಶ ವಿರುತ್ತಿರಲಿಲ್ಲ. ಏಕೆಂದರೆ, ನಾವು ಇಲ್ಲಿ ಮಾತನಾಡುತ್ತಿರುವ ಕನ್ನಡ ಸಾಹಿತ್ಯಕ್ಕೂ ಬಾಬಾ ಅವರಿಗೂ ನೇರವಾಗಿ ಯಾವ ಸಂಬಂಧವೂ ಇಲ್ಲ. ಸಾಹಿತ್ಯದ ಹೃದಯವನ್ನು ಬಲ್ಲವರಾದ ನಾವು ರಸಕ್ಕೆ ಏನು ಪ್ರಾಧಾನ್ಯ ಕೊಡುತ್ತೇವೆ, ಧ್ವನಿಗೆ ಏನು ಪ್ರಾಮುಖ್ಯ ಕೊಡುತ್ತೇವೆ, ಅದಕ್ಕಿಂತ ಹೆಚ್ಚಿನ ಪ್ರಾಶಸ್ತ್ಯವನ್ನು ಔಚಿತ್ಯಕ್ಕೆ ಕೊಡುತ್ತೇವೆ. ಇಂದಿನ ಸಮ್ಮೇಳನದಲ್ಲಿ ಬಾಬಾ ವಿಷಯ ನಾವು ಎತ್ತಬೇಕಾಗಿರಲಿಲ್ಲ.

"ಆದರೆ, ಈ ಸಂದೇಶದಲ್ಲಿ— 'ತಪ್ಪದೆ', 'ಓದಲೇಬೇಕು' 'ಆಗ್ರಹ' ಎಂಬ ಮೂರು ಒತ್ತಾಯಗಳನ್ನು ಹಾಕಿ ಬೇಡಿಕೊಂಡಿರುವುದನ್ನು ಗಮನಿಸಿದರೆ, ಇವರನ್ನು 'ಮುಂದಕ್ಕೆ ಹೋಗಿ' ಎನ್ನುವುದಕ್ಕೆ ನನಗೆ ಮನಸ್ಸು ಬರಲಿಲ್ಲ. ಮನೆಯ ಬಾಗಿಲಿಗೆ ಯಾವನಾದರೂ ಕುಂಟ ಕಪೋತಿ ಬಂದು 'ಕವಳಾ, ತಾಯಿ' ಎಂದರೆ ನಾವು ಯಾರೂ ಅವನನ್ನು ಬರಿಗೈಯಲ್ಲಿ ಕಳಿಸುವುದಿಲ್ಲ. ಎಂದ ಮೇಲೆ, ಹಾಸ್ಯಕ್ಕೆ ಹೆಸರುವಾಸಿಯಾದ ಮಹಾ ಸಾಹಿತಿಯೊಬ್ಬರು ಹೀಗೆ ಇಲ್ಲಿ ಪತ್ರ ಮುಖದಿಂದ ಬೇಡುತ್ತಿರುವಾಗ, ಅವರನ್ನು ಬರಿಗೈಯಿಂದ ನಿರಾಶೆಗೊಳಿಸುವುದು ನಮ್ಮ ಸನಾತನ ಧರ್ಮಕ್ಕೆ ಅಪಚಾರವಾಗುತ್ತದೆ. ಆದ ಕಾರಣ, ಅವರ ಸಂದೇಶವನ್ನು ಈ ಸಭೆಯಲ್ಲಿ 'ತಪ್ಪದೆ' ಓದಿದ್ದೇನೆ."

ನನ್ನ ಮಾತುಗಳಿಂದ ಸಭೆಯ ಮೇಲೆ ಆದ ಪರಿಣಾಮದಿಂದ ಉತ್ತೇಜನಗೊಂಡು ಮುಂದುವರಿಸಿದೆ:—

"ಇಲ್ಲಿ ಇನ್ನೊಂದು ಸ್ವಾರಸ್ಯವನ್ನು ತಾವು ಗುಮನಿಸಬೇಕು. ಏನೆಂದರೆ—ಈ ಸಂಜೆ ಇಲ್ಲಿ ನಾನು ಶ್ರೀ ಸತ್ಯಸಾಯಿ ಬಾಬಾ ಅವರ ಹೆಸರನ್ನು ಹೇಳುವುದಕ್ಕೆ ಮುಂಚೆಯೇ ಮೂರು ದಿವಸಗಳ ಮೊದಲೇ ಅವರ ಹೆಸರನ್ನು ಹೇಳುವ ಈ ಸಂದೇಶವು ಇಲ್ಲಿಗೆ ಬಂದು ಕಾಯ್ದುಕೊಂಡಿತ್ತು ಎಂಬುದನ್ನು ಗಮನಿಸಿದರೆ, ಅದೃಷ್ಟವಾದ ಯಾವುದೋ ಶಕ್ತಿಯ ಕೈಯಲ್ಲಿ ಅವರೂ ನಾನೂ ಬೊಂಬೆಗಳಾಗಿ ಸಿಕ್ಕಿಹಾಕಿಕೊಂಡಿದ್ದೇವೆ ಎನ್ನಿಸುತ್ತದೆ. ಅನವಶ್ಯಕವಾಗಿದ್ದ ಈ ಸಂದೇಶ ನಿಮಿತ್ತವಾಗಿ ಅದೆಷ್ಟು ಸಲ ಬಾಬಾ ಅವರ ಹೆಸರು ನನ್ನ ಬಾಯಿಂದ ಬಂದಿತು ನೋಡಿ!" ಎಂದೆ.

ಪುನಃ ಚಪ್ಪಾಳೆಯ ಮೇಲೆ ಚಪ್ಪಾಳೆ. ಮೊದಲೇ ಕಪಿ! ಕಳ್ಳು ಕುಡಿಸಿದರೆ ಇನ್ನೂ ಹೇಗೆ ಆಗಬೇಡ!

"ಮಹನೀಯರೆ ಮತ್ತು ಮಹಿಳೆಯರೆ,

"ಇಷ್ಟರ ಮೇಲೂ ಶ್ರೀ ಸತ್ಯಸಾಯಿ ಬಾಬಾ ಅವರ ಹೆಸರನ್ನು ಇಂಥ ಸಭೆಯಲ್ಲಿ ಹೇಳಿದರೆ, ಅವರ ಡೊಳ್ಳನ್ನು ಬಾರಿಸಿದರೆ, ಏನು ತಪ್ಪು? ನಮ್ಮ ಸ್ವಾಮಿ ಏನು ಹೇಳುತ್ತಾರೆ ಎಂದರೆ—"

ಎಂದು ಮೊದಲು ಮಾಡಿಕೊಂಡು, ಒಂದು ಐದು ನಿಮಿಷ ಕಾಲ ಸಾಯಿ ಸಂದೇಶವನ್ನು ಸಂಗ್ರಹವಾಗಿ ನಿರೂಪಿಸಿ, ಮಾತು ನಿಲ್ಲಿಸಿ, ಸಭೆಯನ್ನು ಮುಗಿಸಿದೆ.

ಇದಾದ ಮೇಲೆ ಒಂದು ಐದಾರು ದಿವಸ ಪತ್ರಿಕೆಗಳಲ್ಲಿ ವಾಚಕರು ತಮ್ಮ ಅನಿಸಿಕೆಗಳನ್ನು ಬರೆದರು. ಕೆಲವರು ನನ್ನ ಪರವಾಗಿ, ಕೆಲವರು ಸಂದೇಶವನ್ನು ಕಳಿಸಿದವರ ಪರವಾಗಿ ಸಂದೇಶವನ್ನು ನಾನು ಓದಿದೆನೇ ಹೊರತು, ಸಂದೇಶ ಕಳಿಸಿದವರ ಹೆಸರನ್ನು ಹೇಳಲಿಲ್ಲ ಎಂಬುದು ಕೆಲವರ ದೃಷ್ಟಿಯಲ್ಲಿ ದೊಡ್ಡ ಅಪರಾಧವಾಯಿತು.

ನಾನು ಯಾವುದಕ್ಕೂ ಉಭ ಶುಭ ಎನ್ನಲಿಲ್ಲ. ಹೊಗೆಯಾಡುತ್ತಿದ್ದ ವಾದದ ಬೆಂಕಿಗೆ ನಾನು ಗಾಳಿ ಬೀಸಲಿಲ್ಲ. ಒಂದು ಕೈಯ ಚಪ್ಪಾಳೆ ಎಷ್ಟು ದಿನ ನಡೆದೀತು? ನಾಲ್ಕು ದಿನ ಕಳೆಯುವುದರೊಳಗಾಗಿ ಅದು ತನ್ನಷ್ಟಕ್ಕೆ ತಾನೇ ತಣ್ಣಗಾಗಿಹೋಯಿತು.

—ರಾಜರತ್ನಂ

ಔತ್ತರೇಯ ಭೌಪ್ಯ

ಪ್ರಿಯ ರಾಜರತ್ನಂ,

ನೀನು ಕಳಿಸಿದ'ಕೊರವಂಜಿಯ ದಾರಿಯಲ್ಲಿ' ಮತ್ತು 'ಹಾಸ್ಯದ ಬಡಿಗೆ' ಎಂಬೆರಡು ಪುಸ್ತಿಕೆಗಳಲ್ಲಿ ನೀನು ಅಡಕಿರುವ ಲತ್ತೆಗಳನ್ನು ಓದಿದ ಮೇಲೆ, ಅದರಿಂದ ಪ್ರೇರಿತನಾಗಿ ನಾನೂ ಒಂದು ನೆಗ್ಗಲು ಮುಳ್ಳನ್ನು ತಯಾರಿಸಿದ್ದೇನೆ. ಅದರ ಹೆಸರು "ಮಾಜಿಕಾಯಿಲೆ".

ತನ್ನ ಪಾಡಿಗೆ ತನ್ನ ಗುಡಿಯಲ್ಲಿದ್ದ ಮಾರಿಯನ್ನು ಯಾವನೋ ವಿಪರೀತಬುದ್ಧಿ ಔತಣ ಕೊಟ್ಟು ತನ್ನ ಗುಡಿಸಿಲಿಗೆ ಕರೆಸಿಕೊಂಡನಂತೆ ಹಾಗಾಯಿತು, ಬೇಶ್ರೀ ನಿನ್ನನ್ನು ಕೆಣಕಿದ್ದು.

ಈ ಸಂಬಂಧದಲ್ಲಿ ನಿನಗೆ ಬಂದಿರುವ ಕೆಲವು ಪತ್ರಗಳನ್ನು ನೀನು ಪ್ರಕಟಿಸುತ್ತಿದ್ದೀಯೆ ಎಂದು ತಿಳಿಯಿತು. ನನ್ನದನ್ನೂ ನೀನು ಅಚ್ಚಿಸುವುದಾದರೆ ಸಂತೋಷ.

"ಉತ್ತರ"ಕ್ಕೆ ಸಂಬಂಧಪಟ್ಟದ್ದು 'ಔತ್ತರೇಯ','ಭೂಪ'ರು ಮಾಡುವ ಕೆಲಸ 'ಭೌಪ್ಯ', ('ದೂತ'ನ ಕೆಲಸ 'ದೌತ್ಯ' ಎಂದ ಹಾಗೆ)— ಇದನ್ನು ನಾನು ನಿನಗೆ ಹೇಳಬೇಕಾದ್ದಿಲ್ಲ.

ಮಾಜಿಕಾಯಿಲೆ

ಪ್ರಶ್ನೆ: "ಗುರುವರೇಣ್ಯಾ! ಎರಡು ಮೂರು ದಶಕಗಳ ಹಿಂದೆ

ಕಂಡ ಕಂಡವರನ್ನೆಲ್ಲಾ ಕುಹಕದಿಂದ ಕುಚೋದ್ಯಮಾಡಿ ಲೇವಡಿಸು ತ್ತಿದ್ದ ಕೇರಳೀಯ ಕನ್ನಡಿಗರೊಬ್ಬರು ಈಗ ಒಂದು ಕಾಲು ಶತಮಾನದಿಂದ ಸತ್ಯ-ಧರ್ಮ-ಶಾಂತಿ-ಪ್ರೇಮಗಳನ್ನು ಪ್ರಚಾರ ಮಾಡುತ್ತಿರುವವರಲ್ಲಾ..... ಇವರನ್ನು 'ಮಾಜಿ ಹಾಸ್ಯಸಾಹಿತಿ' ಎಂದು ಕರೆಯಬಹುದೇ?"

ಉತ್ತರ: "ದಡ್ಡ ಶಿಖಾಮಣಿ! ನಾಕು ವರ್ಷಗಳ ಹಿಂದೆ ಅವರನ್ನು ನಾನೇ ಹಾಗೆಂದು ಕರೆದಿದ್ದೀನಲ್ಲೊ! ಮರೆತು ಬಿಟ್ಟೆಯಾ?"

"ಹಾಗಾದರೆ, ಗುರುವರಾ, ಕನ್ನಡ ಕಾವ್ಯಕನ್ನಿಕೆಗೆ ಕೋಮಲ ವಾದ ಮೈಸೂರು ಮಲ್ಲಿಗೆಯನ್ನು ಮುಡಿಸಿದವರೊಬ್ಬರು ಈಚೆಗೆ ಗಂಭೀರವಾದ, ವಿಚಾರಪರವಾದ ಕವನಗಳನ್ನು ಬರೆಯುತ್ತಿರುವ ರಲ್ಲಾ.... ಅವರನ್ನು 'ಮಾಜಿ ಪ್ರಣಯಕವಿ' ಎನ್ನಬಹುದೆ?"

"ಭೇಷಕ್ಕಾಗಿ, ಏನು ಅಭ್ಯಂತರ?"

"ಎಂದ ಮೇಲೆ, ಗುರುಗಳೆ, ಆಧುನಿಕ ಕನ್ನಡದಲ್ಲಿ ಮೇರು ಸಮಾನವಾದ ಮಹಾಕಾವ್ಯಗಳನ್ನು ಬರೆದವರೊಬ್ಬರು, ಪುನಃ ಇದುವರೆಗೂ ಅಂತಹದು ಇನ್ನೊಂದನ್ನು ಬರೆದಿಲ್ಲವಲ್ಲಾ.... ಅವರನ್ನು 'ಮಾಜಿ ಮಹಾಕವಿ' ಎಂದು ಕರೆಯಲು ಏನಾದರೂ ಅಡ್ಡಿಯುಂಟೋ?"

"ದಡ್ಡ! ಹೇಳಿ ಮಾಡಿಸಿದ ದಡ್ಡ! ಇಂಥ ದಡ್ಡ ಪ್ರಶ್ನೆಗಳನ್ನು ಕೇಳಿ ಕೇಳಿ ನನಗೆ ಕೆಟ್ಟ ಹೆಸರು ತರುತ್ತಿದ್ದೀರಿ. ಬೇರೆ ಏನಾದರೂ ಜಾಣ ಪ್ರಶ್ನೆ ಕೇಳು".

"ಗುರೂಜಿ, ನೀವು ಮೂರು ಹೊತ್ತೂ ನಮ್ಮನ್ನು 'ದಡ್ಡ, ದಡ್ಡ' ಎಂದು ಮುಖಭಂಗ ಮಾಡುತ್ತಿದ್ದರೆ, ನಾವು ಕೂಡ ನಿಮ್ಮ ಹಾಗೆ'ದೊಡ್ಡ' ಅನ್ನಿಸಿಕೊಳ್ಳುವುದು ಯಾವಾಗ?"

"ಮೂರ್ಖಾ! ಕಂಡ ಕಂಡವರನ್ನು 'ದಡ್ಡ, ದಡ್ಡ' ಎಂದು ಮೂದಲಿಸುವ ಭಂಡ ಧೈರ್ಯವನ್ನು ನೀನು ಬೆಳಸಿಕೊಂಡಾಗ, ನೀನೂ ನನ್ನಂತೆ ಅನ್ನಿಸಿಕೊಳ್ಳುತ್ತೀಯೆ".

"ಇನ್ನೂ ಒಂದೇ ಒಂದು ಪ್ರಶ್ನೆ, ಗುರ್ಜಿ!"

"ಬಸ್. 'ನೀವು ಕೇಳಿದಿರಿ, ನಾವು ಹೇಳಿದಿವಿ'. ಇನ್ನು ಇಲ್ಲಿಂದ ನಿಕಲಾಯಿಸು. ಕೊಶ್ಚನ್ ಕೇಳೋರು ಅಲ್ಲಿ ಕ್ಯೂ ನಿಂತಿದ್ದಾರೆ. ಚಲೇ ಜಾವ್!"

ಪ್ರಿಯ ರಾಜರತ್ನಂ,

ಇದು ನಿನಗೆ ರುಚಿ ಆದರೆ, ಉಪಯೋಗಿಸಿಕೊ. ಆಗದೆ ಹೋದರೆ. ಕಸದ ಬುಟ್ಟಿಗೆ ಹಾಕು.

ನಿನ್ನ ಹಳೇ ಕ್ಲಾಸ್‌ಮೇಟ್,
ಚಿದಂಬರ ದೀಕ್ಷಿತ.

◆ ನಾಟಕ ಮುಗಿಸುವ ಮುಂಚೆ ◆

ಪ್ರಿಯ ಶ್ರೀ ಚಂದ್ರಕೀರ್ತಿ,

'ಶಿಶುಪಾಲವಧ' ಎಂಬ ಕಂತಿನೊಂದಿಗೆ ನನ್ನ 'ನಿರ್ಭಯಾಗ್ರಫಿ' ಎಂಬ ಏಳು ಅಂಕಗಳ ಬೃಹನ್ನಾಟಕ ಮುಗಿಯಿತು.

ಹಿಂದಿನ ಕಾಲದಲ್ಲಿ ಗುಲೇಬಕಾವಲಿ, ರತ್ನಾವಳಿ, ಸದಾರಮೆ ಮೊದಲಾದ ಹಲವು ಅಂಕಗಳ ನಾಟಕಗಳನ್ನು ಆಡುತ್ತಿದ್ದಾಗ, ಕೊನೆಯ ಅಂಕದ ಪರದೆ ಬೀಳುವುದಕ್ಕೆ ಮೊದಲು ಸೂತ್ರಧಾರನು ಬಂದು—

"ಇನ್ನೊಂದು ಪ್ರವೇಶವಾದನಂತರ ಈ ನಾಟಕವು ಮುಗಿಯುತ್ತದೆ. ಮುಂದಿನ ನಾಟಕ ಇಂಥದು. (ಅಥವಾ ನಾವು ಇಂಥ ಮೊಕ್ಕಾಮಿಗೆ ತೆರಳುತ್ತಿದ್ದೇವೆ) ಮಹಾಜನರು ಮುಂದೆಯೂ ನಮ್ಮನ್ನು ಹೀಗೆಯೇ ಪ್ರೋತ್ಸಾಹಿಸಬೇಕು" ಎಂದು ಪ್ರಾರ್ಥಿಸುತ್ತಿದ್ದನು.

ಅವನ ಹಾಗೆಯೇ ನಾನಾದರೂ ಈಗ "ಈ ಆರನೇ ಕಂತಿನೊಂದಿಗೆ ಈ ನಾಟಕ ಮುಗಿಯುವುದಾದರೂ, ಇವುಗಳೆಲ್ಲಕ್ಕೂ ಮುನ್ನುಡಿಯ ರೂಪವಾಗಿ 'ಶನಿಕಾಟ' ಎಂಬ ಇನ್ನೊಂದು ಕಂತು ಬರುವುದಿದೆ. ಇದುವರೆಗೂ ಬಂದಿರುವ

ಕಂತುಗಳನ್ನು ಮಹಾಜನರು ಕೊಂಡುಕೊಂಡು, ಓದಿ, ತಮ್ಮ ಅಭಿಪ್ರಾಯಗಳನ್ನು ನನಗೆ ಬರೆದು, ನಾನು ಹಿಡಿದಿರುವ ದಾರಿ ಸರಿಯೆಂದು ನನಗೆ ಬೆನ್ನು ತಟ್ಟಿರುವ ಹಾಗೆ— ರಸಿಕರಾದ ವಾಚಕರ ರಕ್ಷಾಬಲ ಸದಾ ನನಗೆ ಇರಲಿ" ಎಂದು ಬೇಡಿಕೊಳ್ಳುತ್ತೇನೆ.

ಆಗದವರು ನನ್ನ ಮುಖಕ್ಕೆ ಮಸಿ ಬಳಿಯುವ ಪ್ರಯತ್ನ ಮಾಡಿದಾಗ, ಅದನ್ನು ವಿರೋಧಿಸಿ, ಅಂಟಿದ್ದ ಕೊಳೆಯನ್ನು ಕಳೆದು ಕೊಳ್ಳಲು ಬೇಕಾದ ನೀರು, ಸೋಪು, ಟವಲುಗಳನ್ನು ಒದಗಿಸಿ, ನನ್ನ ನೆರವಿಗೆ ಬಂದು ನಿಂತ—

—ನನ್ನ ಹಳೆಯ ವಿದ್ಯಾರ್ಥಿಗಳಿಗೂ ನನ್ನ ಬರವಣಿಗೆಗಳ ಮೂಲಕವಾಗಿ ನನಗೆ ಆಪ್ತರಾದ ಹಿತೈಷಿಗಳೆಲ್ಲರಿಗೂ ಇಲ್ಲಿ ನನ್ನ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ನೀವು ಈ ಪತ್ರವ್ಯವಹಾರದ ತೊಡಕಿಗೆ ನನ್ನನ್ನು ಇರುಕಿಸಿದಾಗ, ನನಗೆ ಮುಜುಗರವಾಯಿತು. ಅನಂತರ ಎದುರಿನ ಉಪಟಳ ಅತಿಯಾದಾಗ, ನಿಮಗೆ ಬರೆದ ಕಾಗದಗಳಿಂದ ನನಗೆ ಎಷ್ಟೋ ನೆಮ್ಮದಿಯಾಯಿತು. ಈಗ ಈ 'ಕಂತು'ಗಳನ್ನು ಹಾಗೇ ನೋಡಿದರೆ, ನನ್ನ ಹಾಸ್ಯೇಂದ್ರಿಯಪಟುತ್ವದ ಬಗ್ಗೆ ನನಗೆ ತೃಪ್ತಿಯುಂಟಾಗಿದೆ.

ಈ ಒಂದು ಮಹೋಪಕಾರಕ್ಕಾಗಿ ನಿಮಗೆ ನನ್ನ ವಿಶೇಷ ವಂದನೆಗಳು. ಶ್ರೀ ದೇವರು ನಿಮಗೆ ಒಳ್ಳೆಯದು ಮಾಡಲಿ.

—ರಾಜರತ್ನಂ

ಜಿ. ಪಿ. ರಾಜರತ್ನಂ ಅಂತರ್ದರ್ಶನ - 7

ಶನಿಕಾಟ

ಇದು

ಜಿ. ಪಿ. ರಾಜರತ್ನಂ ಅವರ

ನಿರ್ಭಯಾಗ್ರಫಿ

ಏಳನೇ ಕಂತು

ಪುಸ್ತಕದ ಒಳಗೆ

◆ ಸಂಪಾದಕನ ಅರಿಕೆ ◆

ಇದು ಶ್ರೀ ಜಿ.ಪಿ. ರಾಜರತ್ನಂ ಅವರ "ನಿರ್ಭಯಾಗ್ರಫಿ"ಯ ಏಳನೆಯ ಕಂತು. ಈ ಏಳು ಕಂತುಗಳಲ್ಲಿ ಅವರ ಮನೋವ್ಯಾಪಾರಗಳನ್ನೂ ಹೃದಯದ ಅಭಿರುಚಿಗಳನ್ನೂ ಕಾಣಬಹುದಾದ್ದರಿಂದ ಇವುಗಳನ್ನು ಅವರ "ಅಂತರ್‌ದರ್ಶನ" (Inner View) ಎಂದು ಕರೆದಿದ್ದೇವೆ.

ಈ "ನಿರ್ಭಯಾಗ್ರಫಿ"ಯು, ಡೇರೆಯ ಅಡಿಯಿಂದ ನುಸುಳಿ ಬಂದು, ಯಾರು ಬೇಕಾದರೂ ಕದ್ದು ನೋಡಿಕೊಂಡು ಹೋಗಬಹುದಾದ Tent ಸಿನಿಮಾ ಅಲ್ಲ. ಇದರೊಳಗಿನ ಮಾತಿನ ವರಸೆಗಳು—"ಪೂರ್ವಕಾವ್ಯ ರಚನೆಗಳಂ ತಾ ಮೊದಲೊಳ್ ಕಲ್ತುಂಗಲ್ಲದೆ" ಇತರರಿಗೆ ಬೇಗ ಅರ್ಥವಾಗುವುದು ಕೊಂಚ ಕಷ್ಟ.

ಚಂಪೂಕವಿಯೊಬ್ಬನ ಮಾತಿನಲ್ಲಿ ಹೇಳುವುದಾದರೆ—ರಾಜರತ್ನಂ ಅವರ "ನಿರ್ಭಯಾಗ್ರಫಿ"ಯು "ಪಂಡಿತರುಂ ವಿವಿಧ ಕಳಾಮಂಡಿತರುಂ ಕೇಳತಕ್ಕ ಕೃತಿ." ಕನ್ನಡದಲ್ಲಿ 'ಮಹಾಕವಿ ಪುರುಷಸರಸ್ವತಿ'ಯ ಹಾಗೆಯೇ ಇದಾದರೂ ಒಂದು ಅಪೂರ್ವವಾದ ವಿಶಿಷ್ಟ ಲಕ್ಷಣಗಳನ್ನುಳ್ಳ ಕೃತಿ.

ಬರೆದವರಿಗೆ ಏನೇನು back-ground knowledge

ಇರುತ್ತದೋ ಓದುಗರಿಗೂ ಅದು ತಿಳಿದಿದ್ದರೆ ಮಾತ್ರ ಇಬ್ಬರಿಗೂ ಸಂಪರ್ಕ ಏರ್ಪಡುತ್ತದೆ, ಬರವಣಿಗೆ ಸಾರ್ಥಕವಾಗುತ್ತದೆ.

ಇಂಥ ಸಂಪರ್ಕವನ್ನು ಪಡಕೊಂಡವರು ಕೆಲವರು 'ಕಂತು'ಗಳನ್ನು ಓದಿದಂತೆಲ್ಲಾ ನಮಗೆ (ಎಂದರೆ ಶ್ರೀ ರಾಜರತ್ನಂ ಅವರಿಗೂ ನನಗೂ) ಕಾಗದ ಬರೆದು ತಮ್ಮ ಸಂತೋಷವನ್ನು ತಿಳಿಸಿದ್ದಾರೆ. ಅವುಗಳಲ್ಲಿ ಕೆಲವನ್ನು ಆರು, ಏಳನೆಯ ಕಂತುಗಳಲ್ಲಿ ಪ್ರಕಟಿಸಿದ್ದೇವೆ. ಈ ಪ್ರಕಾರವಾದ ಉತ್ತೇಜನವನ್ನೂ ಪ್ರೋತ್ಸಾಹವನ್ನೂ ನಮಗೆ ಕೊಟ್ಟ ಮಿತ್ರರೆಲ್ಲರಿಗೂ ನಾವು ಕೃತಜ್ಞರಾಗಿದ್ದೇವೆ.

—ಚಂದ್ರಕೀರ್ತಿ

ಸಂಪಾದಕರ ಪರವಾಗಿ

ಶನಿಕಾಟ ಅಥವಾ
◆ ನನ್ನ 'ನಿರ್ಭಯಗ್ರಫಿ'ಯ ಹುಟ್ಟು ಬೆಳವಣಿಗೆ ◆

ಇದು ನನ್ನ 'ನಿರ್ಭಯಾಗ್ರಫಿ'ಯ 'ಆರೂ ಮತ್ತೊಂದನೆಯ' ಕಂತು. ನಮ್ಮ ಕಡೆ. ಆರು ಅಳತೆ ಮುಗಿದ ಮೇಲೆ ಏಳನೆಯದನ್ನು ಅಳೆಯುವಾಗ, ಅದನ್ನು 'ಏಳು' ಎನ್ನುವುದಿಲ್ಲ; 'ಆರೂ ಮತ್ತೊಂದು' ಎನ್ನುತ್ತಾರೆ, 'ಯೆಚ ಲಿ' ಎನ್ನುತ್ತಾರೆ. (ಇದು 'ಹೆಚ್ಚಲಿ' ಎನ್ನುವುದರ ಅಪಭ್ರಂಶ)

ನಾನು ಈ ಹೆಸರಿನ ಒಂದು ಪುಸ್ತಕ ಬರೆಯುವೆನೆಂದಾಗಲಿ, ಇದರೊಳಗೆ ಇಂಥ ಸರಕನ್ನು ಅಡಕುವೆನೆಂದಾಗಲಿ, ಕನಸಿನಲ್ಲಿಯೂ ಅಂದುಕೊಂಡಿರಲಿಲ್ಲ. ಆದರೆ, ಕಾಲ ಹಾಗೆ ಬಂತು, ಕಾರಣ ಹಾಗೆ ಒದಗಿತು; ಈ ಪುಸ್ತಕ ರೂಪುಗೊಂಡಿತು.

ಪಂಪಭಾರತದಲ್ಲಿ ಒಂದು ಕಡೆ(9-21)ಭೀಮನು ಹೇಳುತ್ತಾನೆ:

> ಎನ್ನಿಂದೆ ಅಜನಿಸಿ ನುಡಿಯಿಸಿದುವು
> ಅಹಿಧ್ವಜನ್ ಓವದೆ ಮುನ್ನೆ ನೆಗಳ್ದ ದುಶ್ಚರಿತಂಗಳ್.

ಅಲ್ಲಿ, ಹಾವನ್ನು ಬಾವುಟದಲ್ಲಿ ಸಂಕೇತವಾಗಿ ಉಳ್ಳವನು ಮಾಡಿದ ದುಷ್ಟ ಕಾರ್ಯಗಳಿಂದ ಭೀಮನ ಬಾಯಲ್ಲಿ ಮುಂದಿನ ಮಾತು ಅಬುದ್ಧಿಪೂರ್ವಕವಾಗಿ ಹೊರಗೆ ಬಂದುವು. ಇಲ್ಲಿ ನನಗಾದರೂ ಹಾಗೆಯೇ: ನಂಜುನಾಲಗೆಯವರೊಬ್ಬರು ನನ್ನನ್ನು ಬೈಗುಳಿಂದ ಬೆನ್ನಟ್ಟಿ ಬಾರದೆ ಹೋಗಿದ್ದರೆ, ಇಲ್ಲಿರುವ ಮಾತುಗಳು ನನ್ನಿಂದ

'ಅಜನಿಸಿ' ಬರುತ್ತಿರಲಿಲ್ಲ. ಪ್ರಹರಣಾಯುಧಗಳನ್ನು ತುಡುಕಲು ನಾನು ಕೈನೀಡಬೇಕಾದ ಪ್ರಮೇಯವೇ ಬರಲಿಲ್ಲ; ಹೊತ್ತು ಹೊತ್ತಿಗೆ ಅವು ತಾವಾಗಿಯೇ ಬಂದು ಕೈಗೆ ಆತುಕೊಂಡವು.

ಹೀಗೆ ತಯಾರಾದ ನನ್ನ 'ನಿರ್ಭಯಾಗ್ರಫಿ'ಯಲ್ಲಿ—

1. ಚಕ್ರವರ್ತಿ ವಜ್ರ.
2. ಕೊರವಂಜಿಯ ದಾರಿಯಲ್ಲಿ
3. ಹಾಸ್ಯದ ಬಡಿಗೆ
4. 'ವಜ್ರ'ವಾದ 'ರತ್ನ'
5. ಅನಕೃ ಮತ್ತು ನಾನು
6. ಶಿಶುಪಾಲ ವಧ

ಎಂಬ ಆರು 'ಕಂತು'ಗಳು ಇದುವರೆಗೆ ಪ್ರಕಟವಾಗಿವೆ. 'ಶನಿಕಾಟ' ಎಂಬ ಇದು ಏಳನೆಯದು, ಹಾಗೂ ಕಡೆಯದು.

೨

ನನ್ನ ಸಾಹಿತ್ಯ ಜೀವನದಲ್ಲಿ ೧೯೭೨ರಿಂದ ನನಗೆ 'ಶನಿಕಾಟ'. 'ನವ ಗ್ರಹಗಳಲ್ಲಿ ಒಂದು ' ಎಂದು (ಆ ವಿಚಾರಗಳಲ್ಲಿ ನಂಬಿಕೆ ಯಿರುವವರು) ಹೇಳುವ 'ಶನಿ'ಯ ಬಗ್ಗೆ ನನಗೇನೂ ತಿಳಿಯ ದಾದರೂ—'ಶನಿಕಾಟ'ವೆಂದು ಸಾಮಾನ್ಯವಾಗಿ ಯಾವುದಕ್ಕೆ ಹೇಳುತ್ತಾರೋ ಅದನ್ನು ನಾನು ಅನುಭವಿಸಿದ್ದೇನೆ, ಅನುಭವಿಸು ತ್ತಿದ್ದೇನೆ.

Skunk ಎಂಬ ಪ್ರಾಣಿ ಕಣ್ಣಿನಿಂದ ಮರೆಯಾಗಿ ಬಹಳ

ಹೊತ್ತಾದ ಮೇಲೆಯೂ ಕೂಡ ಅದರ stink ಎಂಬ (ಅದು ಬಿಟ್ಟು ಹೋದ) ದುರ್ವಾಸನೆಯು ಮೂಗಿನ ಬಳಿ ಸುಳಿದು ಕಾಟ ಕೊಡುವ ಹಾಗೆ— ನವ್ಯವಾದ ಈ ಶನಿಕಾಟವು ನನ್ನನ್ನು ಕಾಡುತ್ತಿದೆ.

೧೧-೬-೭೨ರಂದು 'ಪ್ರಜಾಮತ'ದ ಮೂಲಕ ಈ ಕಾಟ ಆರಂಭವಾಯಿತು. ನಾನು ಸಿಗರೇಟ್ ಸೇದದಿರುವುದು ತಪ್ಪು, ಹೆಂಡ ಹೀರದಿರುವುದು ತಪ್ಪು, ಹಾದರ ಮಾಡದಿರುವುದು ತಪ್ಪು, ನಾಲ್ಕಾರು ಭಾಷೆ ಕಲಿತಿರುವುದು ತಪ್ಪು, ಕಾಲೇಜಿನಲ್ಲಿ ನಾನು ಚೆನ್ನಾಗಿ ಪಾಠ ಹೇಳಿದ್ದು ತಪ್ಪು, ವರ್ಷವರ್ಷವೂ ಹೊಸ ಹೊಸ ಪುಸ್ತಕ ಬರೆಯುವುದು ತಪ್ಪು, ಹಿರಿಯ ಸಾಹಿತಿಗಳ ಪ್ರೀತ್ಯಾದರಗಳಿಗೆ ಪಾತ್ರನಾಗಿರುವುದು ತಪ್ಪು, ಶ್ರೀಸತ್ಯಸಾಯಿಬಾಬಾ ಅವರಿಗೆ ಶರಣಾಗಿರುವುದು ತಪ್ಪು— ಇತ್ಯಾದಿಯಾಗಿ, ನಾನು ಯಾವುದನ್ನು 'ಗುಣ' ವೆಂದುಕೊಂಡಿದ್ದೆನೋ ಅವೆಲ್ಲವೂ 'ದೋಷ'ಗಳೆಂದು ಪ್ರತಿಪಾದನೆ ಮಾಡಿ, ಅದುವರೆಗೆ ನನ್ನೊಂದಿಗೆ ಮಿತ್ರನಂತೆ ವರ್ತಿಸುತ್ತಿದ್ದವರು ಒಂದು ಅಪಹಾಸ್ಯದ ಲೇಖನ ಬರೆದರು. "ಮಿತ್ರನು ಮಿತ್ರನನ್ನು ಕುರಿತು ಹೀಗೆ ಪತ್ರಿಕೆಗಳಲ್ಲಿ ಲೇವಡಿ ಮಾಡಬಹುದೇ?" ಎಂದು ಹೇಳಿ ಕಳಿಸಿದಾಗ:"ಅಂವ ಎಂಥ ಮಿತ್ರ?'ಮಾಜಿ ಮಿತ್ರ'. ಅವಂಗ ಸಾಯಿಬಾಬಾನ ಕಡಿಗೆ ದೂಡಿದ ಆ 'ಮಾಜಿ ಹಾಸ್ಯ ಸಾಹಿತಿ' ಅದಾನಲ್ಲಾ, ಅವನ ಹಾಂಗ ಇವನೂ ನನಗೆ 'ಮಾಜಿ' " ಅಂತ ಉತ್ತರ ಬಂತು.

ಇದ್ದಕ್ಕಿದ್ದಂತೆ ಇವರ ಪಾಲಿಗೆ ನಾನು 'ಮಾಜಿ' ಆದೆನಲ್ಲಾ! ನಾನು ಇವರಿಗೆ ಏನು ಅಪರಾಧ ಮಾಡಿದೆ? ನನಗೆ

ಅರ್ಥವಾಗಲಿಲ್ಲ. ಈಗಲೂ ಆಗಿಲ್ಲ.

(ಹೀಗೆ ಅನಿಮಿತ್ತವಾಗಿ ನನ್ನನ್ನು ಅಪಹಾಸ್ಯ ಮಾಡಲು ಹೊರಟವರ ಹೆಸರು ಈಗ ಎಲ್ಲರಿಗೂ ಗೊತ್ತಿದೆ. ನನ್ನನ್ನು ಅವರು 'ಚಕ್ರವರ್ತಿ ವಜ್ರ' ಎಂದು ಮರೆಹೆಸರಿನಿಂದ ಕರೆದ ಹಾಗೆ ನಾನಾದರೂ ಅವರನ್ನು 'ಬೇಶ್ರೀ ಬೀಮಂಣ' ಎಂದು ಈಗೀಗ ನಿರ್ದೇಶಿಸುತ್ತಿದ್ದೇನೆ. ಕೈಲಾಸಂ ಅವರ 'ತಾವರೆಕೆರೆ'ಯ ಆದಿ ಮೂರ್ತಿ ಹೇಳಿದ ಹಾಗೆ—'ಠಕ್ಕಾನಿಕಿ ಠಿಕ್ಕಿ. ಎವ್ವರಿನಿ ಎವ್ವರು ತಿಟ್ಟೇದಿ?)

೩

ಬೇಶ್ರೀ ಅವರಿಗೆ ನನ್ನ ಮೇಲೆ ವೈಯುಕ್ತಿಕವಾಗಿ ಯಾವ ಜಿದ್ದೂ ಇಲ್ಲವಂತೆ. ಅಪರೂಪವಾಗಿ ಮದುವೆ ಮನೆಯಲ್ಲೋ ಸಿನಿಮಾ ಗೃಹದಲ್ಲೋ ಸಭಾಂಗಣದಲ್ಲೋ ಕಂಡರೆ ಸುಮುಖವಾಗಿ ನಾರ್ಮಲ್ ಆಗಿ ಮಾತನಾಡಿಸುತ್ತಾರೆ. ಅದೇ ಬರವಣಿಗೆಗೆ ಇಳಿದಾಗ, ಯಾಕೋ ಅವರ ಬಾಯಿ ಹೀಗೆ ಸೊಟ್ಟಾಗುತ್ತದೆ. ಅದು ಅವರ ತಪ್ಪಲ್ಲ. "ಪ್ರಕೃತಿಃ ತ್ವಾಂನಿಯೋಕ್ಷ್ಯತಿ" ಎಂದು ಶ್ರೀ ಕೃಷ್ಣ ಹೇಳಿದ ಹಾಗೆ, ಅವರವರ genes ಜಗ್ಗಿದ ಪ್ರಕಾರ ಪ್ರತಿಯೊಬ್ಬರೂ ಆಡಬೇಕು, ಮಾಡಬೇಕು.

ಈಗ ನಾಲ್ಕು ವರ್ಷಗಳಿಂದ ಹಾಸ್ಯವೆಂದು ಅವರು ನನ್ನನ್ನು ಕುಚೋದ್ಯಮಾಡಿ ಏನೇನೋ ಬರೆಯುತ್ತಿದ್ದಾರೆ. ಸುಮಾರು ಎರಡು ವರ್ಷಗಳಿಂದ ನಾನೂ ಅವರನ್ನು ಹಾಸ್ಯಮಾಡಿ, ಸವಾಲಿಗೆ ಜವಾಬು ಹಾಕಿದ್ದೇನೆ. ಈಗ ನಮ್ಮಿಬ್ಬರ ಹಾಸ್ಯದ ಕಾಲ್ಚೆಂಡಿನಾಟ

ವನ್ನು ನೋಡಿರುವವರಲ್ಲಿ ನನ್ನದೊಂದು ವಿಜ್ಞಾಪನೆ ಏನೆಂದರೆ —ನಾಗಚಂದ್ರ ಹೇಳಿದ ಹಾಗೆ—

> ಕೃತವಿದ್ಯರ್ (ಹಾಸ್ಯದ ಪ್ರಯೋಗ ವಿಜ್ಞಾನವನ್ನು ಬಲ್ಲವರು) ಸಮಚಿತ್ತರಾಗಿ (ಯಾವ ವಿಧವಾದ ಪಕ್ಷ ಪಾತವೂ ಇಲ್ಲದೆ) ಪದೆಪಿಂದೆ (ಪ್ರೀತಿಪೂರ್ವಕ ವಾಗಿ) ಆರಯ್ಯೆ (ಪರಿಶೀಲಿಸಿದರೆ)—

ನನ್ನ 'ನಿರ್ಭಯಾಗ್ರಫಿ'ಯ ಕಂತುಗಳು ಸಾರ್ಥವೋ ವ್ಯರ್ಥವೋ ಗೊತ್ತಾಗುತ್ತದೆ. ಅವರ ನಾಲಗೆಯನ್ನೂ ನನ್ನದನ್ನೂ ಯಾರು ಬೇಕಾದರೂ ಒರೆಹಚ್ಚಿ ನೋಡಬಹುದು. ಇದು ಗರ್ವದ ಮಾತಲ್ಲ; ಇದು ಆತ್ಮವಿಶ್ವಾಸದ ಮಾತು.

ೞ

ನನ್ನನ್ನು ಕುರಿತು ೧೯೭೨ರ ಜೂನಿನಲ್ಲಿ ಆರಂಭವಾದ ಅಪಪ್ರಚಾರವು ೧೯೭೪ರ ಅಕ್ಟೋಬರ್‌ವರೆಗೂ ಒಂದೇ ಸಮನೆ ನಡೆಯಿತು. ಇದರಿಂದ ಅಸಮಾಧಾನಗೊಂಡ ನನ್ನ ಇಷ್ಟರೂ ಮಿತ್ರರೂ ಇದನ್ನು ಪ್ರತಿಭಟಿಸಬೇಕೆಂದರು. ಅವರನ್ನು ತಡೆಯು ವುದು ನನಗೆ ಕೊಂಚ ಕಷ್ಟವೇ ಆಯಿತು. ಎದುರಾಗಿ ಬಂದವರಿಗೆ ಸಮಾಧಾನ ಹೇಳಿ ಕಳಿಸುತ್ತಿದ್ದೆ. ದೂರದಲ್ಲಿದ್ದ ಶ್ರೀ ಚಂದ್ರಕೀರ್ತಿ ಯಂಥ ಮಿತ್ರರಿಗೆ ಪತ್ರಮುಖದಿಂದ ಹೇಳಬೇಕಾದ್ದನ್ನು ಬರೆದು ತಿಳಿಸುತ್ತಿದ್ದೆ. ಆಗಲೂ ಈ ಪತ್ರಗಳು ಹೀಗೆ ಉಪಯೋಗವಾಗ ಬಹುದೆಂಬ ಕಲ್ಪನೆಯಿರಲಿಲ್ಲ.

ಆದರೆ, ದೈವಚಿತ್ತ ಬೇರೆಯಾಗಿತ್ತು.

1974 ಡಿಸೆಂಬರ್ ತಿಂಗಳಿನಲ್ಲಿ, ಪ್ರಸಿದ್ಧ ಹಾಸ್ಯ ಸಾಹಿತಿಯೊಬ್ಬರಿಗೆ ಬೆಂಗಳೂರಿನಲ್ಲಿ ಸಾರ್ವಜನಿಕ ಸನ್ಮಾನ ನಡೆಸಬೇಕೆಂದು ಏರ್ಪಾಡಾಗುತ್ತಿತ್ತು. ಆಗ ಯಾರೋ ಆ ಸಾಹಿತಿಯನ್ನು ಕಂಡರಾಗದ ಇನ್ನೊಬ್ಬ ಹಾಸ್ಯ ಸಾಹಿತಿ ಅಂದು ಕಪ್ಪು ಬಾವುಟ ಪ್ರದರ್ಶನ ಮಾಡಲು ಸನ್ನಾಹಿಸುತ್ತಿರುವ ಒಡಕು ಸುದ್ದಿಯನ್ನು ಶ್ರೀ ಚಂದ್ರಕೀರ್ತಿ ನನಗೆ ತಿಳಿಸಿದಾಗ, ನಾನು ಅವರಿಗೆ ಬರೆದೆ:-

> "ಪಂಚತಂತ್ರದಲ್ಲಿ ಮೂರು ಮೀನುಗಳ ಕತೆ ಬರುತ್ತೆ, ನೋಡಿ. ಅನಾಗತಭಯ, ಪ್ರತ್ಯುತ್ಪನ್ನಮತಿ, ಯದ್ ಭವಿಷ್ಯ ಎಂಬ ಮೂರು ಮೀನುಗಳಲ್ಲಿ ನಾನು 'ಅನಾಗತಭಯ' ಇದ್ದ ಹಾಗೆ. ಮುಂದೆ ಒದಗಬಹುದಾದ ಅರಿಷ್ಟಗಳನ್ನು ಅವು ಬೀಜರೂಪದಲ್ಲಿರುವಾಗಲೇ ಹುರಿದು ಹಾಕಿಬಿಡಬೇಕು. ಆದ್ದರಿಂದ, ನನ್ನ ಮೇಲಿನ ಅಪಪ್ರಚಾರಕ್ಕೆ ಸಮಾಧಾನವಾಗಿ ನಾನು ನಿಮಗೆ ಬರೆದ ಪತ್ರಗಳನ್ನು ನನಗೆ ಕಳಿಸಿ. ಅದನ್ನು ಉಪಯೋಗಿಸಿ, Iwill arrange a counter-blast in advance".

ಅವರು ತಾವು ಕಾಪಾಡಿದ್ದ ಕಾಗದ ಪತ್ರಗಳನ್ನು ನನಗೆ ಕಳಿಸಿದರು. ಅದರ ಜೊತೆಗೆ ಹೊಸದಾಗಿ ಇನ್ನಷ್ಟು ಮದ್ದನ್ನು ಅರೆದು—ಅಕ್ಟೋಬರ್ ೭ಳರಲ್ಲಿ 'ಚಕ್ರವರ್ತಿ ವಜ್ರ' ಪ್ರಕಟವಾಯಿತು; ನವೆಂಬರ್ ೭ಳರಲ್ಲಿ 'ಕೊರವಂಜಿಯ ದಾರಿಯಲ್ಲಿ' ಪ್ರಕಟವಾಯಿತು; ಡಿಸೆಂಬರ್ ೭ಳರಲ್ಲಿ ನಡೆಯಬೇಕಾಗಿದ್ದ ಹಾಸ್ಯ ಸಾಹಿತಿಗಳ ಸನ್ಮಾನ ಸಭೆ, ಯಾವ ರೀತಿಯಾದ ಅನಿಷ್ಟ

ಪ್ರದರ್ಶನಗಳೂ ಇಲ್ಲದೆ, ವಿಜೃಂಭಣೆಯಿಂದ ನೆರವೇರಿ ಹೋಯಿತು. ಅಂದಿನ ಸಭೆಗೆ ನಾನು ಅಧ್ಯಕ್ಷನಾಗಿ ನಿಯೋಜಿತನಾದದ್ದೂ ಒಂದು ಅನಿರೀಕ್ಷಿತ ಘಟನೆ. ಆ ಉತ್ಸವ ನಡೆದ ಸಂತೋಷದ ಜ್ಞಾಪಕಕ್ಕಾಗಿ 31-12-74ರಂದು 'ಹಾಸ್ಯದ ಬಡಿಗೆ' ಪ್ರಕಟವಾಯಿತು. ಅಲ್ಲಿಗೆ ಆ ಪ್ರಕರಣ ಮುಗಿಯಿತು, ಎಂದುಕೊಂಡಿದ್ದೆ.

ಆದರೆ, ಹಲ್ಲಿಗೆ ಬಾಲ ಕತ್ತರಿಸಿಹೋದರೂ ಅದರ ಮೋಟು ಇನ್ನೂ ಆಡುತ್ತಿರುವ ಹಾಗೆ, 1975ರ ಒಂದು ದೀಪಾವಳಿಯ ಸಂಚಿಕೆಯಲ್ಲಿ ನನ್ನನ್ನು 'ಸಾವಿನ ದವಡೆಯಲ್ಲಿರುವ ರಾಮಾನುಜ' ನೆಂದು ಅಪಹಾಸ್ಯ ಮಾಡಿ ಬೇಶ್ರೀ ಇನ್ನೊಂದು ಲೇಖನ ಬರೆದರು. ಮುಖದ ಮೇಲೆ ಸೊಳ್ಳೆಯೋ ನೊಣವೋ ಬಂದು ಕಾಟಕೊಟ್ಟರೆ, ಅದನ್ನು ಓಡಿಸುವುದಕ್ಕೆ ಕೈಯಾಡಿಸುವುದಿಲ್ಲವೇ ಅದರ ಹಾಗೆ 'ವಜ್ರ'ವಾದ 'ರತ್ನ',"ಅನಕೃ ಮತ್ತು ನಾನು", ಎಂಬ ಇನ್ನೆರಡು 'ಕಂತು'ಗಳು ಹುಟ್ಟಿಕೊಂಡುವು.

ಅಲ್ಲಿಗೆ ಅವರು "ಹೇಳಿದ್ದೇ ಹೇಳುವ ಕಿಸುಬಾಯಿದಾಸ" ಆಗಿದ್ದರು. ಅವರ ಮಿಥ್ಯಾರೋಪದ ಸಾರಾಂಶ ಇಷ್ಟಕ್ಕೆ ಇಳಿದಿತ್ತು:— 1.ಅನಕೃ ಅವರನ್ನು ಕುರಿತು ಭಾಷಣ ಮಾಡುವುದಕ್ಕೆ ಇವರು 200 ರೂಪಾಯಿ ಕೇಳಿದರು; 2. ರತ್ನನ ಪದಗಳಲ್ಲಿ ಉಮರ್ ಖಯ್ಯಾಂನ ಋಣವನ್ನು ಇವರು ಒಪ್ಪಿಕೊಂಡಿಲ್ಲ. ನಿರಾಧಾರವಾದ ಈ ಆರೋಪಗಳಿಗೆ ಮತ್ತೆ ಮತ್ತೆ ಎದುರು ಹೇಳಬೇಕಾದ ಅಗತ್ಯ ಕಾಣಲಿಲ್ಲ.

ಈ ವೇಳೆಗೆ, ಈ ಪ್ರಕರಣಕ್ಕೆ ಸಂಬಂಧಪಟ್ಟ ಹಾಗೆ

ಸುಮಾರು 200 ಕ್ಕೆ ಮೇಲ್ಪಟ್ಟು ಕಾಗದಗಳು ನನಗೆ ಬಂದಿದ್ದುವು. ಅವುಗಳಲ್ಲಿ ಕೆಲವನ್ನಾದರೂ ಪ್ರಕಟಿಸಿಬೇಕೆಂದು ನನಗೆ ಇಷ್ಟವಾಯಿತು; ಶ್ರೀ ಚಂದ್ರಕೀರ್ತಿಯೂ ಇತರ ಮಿತ್ರರೂ ಅದನ್ನು ಅನುಮೋದಿಸಿದರು. ಅದರ ಫಲವೇ—ಆರನೇ ಕಂತಾದ "ಶಿಶುಪಾಲವಧ".

ಈ ಆರು ಕಂತುಗಳಿಗೂ ಒಂದು ಮುನ್ನುಡಿಯಾಗಿ, ಇವುಗಳ ಹುಟ್ಟು ಬೆಳವಣಿಗೆಗಳನ್ನು "ಶನಿಕಾಟ" ತಿಳಿಸಿಕೊಡುತ್ತದೆ. ಇದರ ಜೊತೆಗೆ ಶ್ರೀಚಂದ್ರಕೀರ್ತಿಗೆ ನಾನು ಒಂದು ಸಂದರ್ಭದಲ್ಲಿ ಬರೆದ ಆರು ಪತ್ರಗಳ ಮಾಲೆಯೂ ಇದೆ.

"ಭೀಷಾ ಅಸ್ಮಾತ್ ವಾತಃ ಪವತೇ.. ಭೀಷಾ ಉದೇತಿ ಸೂರ್ಯಃ... ಭಯಾತ್ ಅಗ್ನಿಃ ತಪತಿ".... ಇತ್ಯಾದಿ ಶ್ರುತಿವಾಕ್ಯಗಳು ಯಾರ ಮಹಿಮೆಯನ್ನು ಕೊಂಡಾಡುತ್ತವೆಯೋ ಆ ದೇವರನ್ನು ನಂಬಿರುವುದರಿಂದ ನಾನು 'ನಿರ್ಭರೋ ನಿರ್ಭಯೋಸ್ಮಿ'. ಆ ಕಾರಣದಿಂದ ಇದು ನನ್ನ 'ನಿರ್ಭಯಾಗ್ರಫಿ'. ಇದರಲ್ಲಿ ನನ್ನ 'ತಲೆ'ಯಷ್ಟನ್ನೇ ಅಲ್ಲದೆ, ನನ್ನ ಅಂತರಂಗದ ವ್ಯಾಪಾರಗಳನ್ನೂ ಕಾಣಬಹುದಾದ್ದರಿಂದ ಇದನ್ನು ನನ್ನ 'ಅಂತರ್ದರ್ಶನ' ಎಂದೂ ಕರೆದಿದ್ದೇನೆ.

ಇಲ್ಲಿಗೆ ನನ್ನ "ನಿರ್ಭಯಾಗ್ರಫಿ" ಮುಗಿಯಿತು.

—**ಜಿ.ಪಿ. ರಾಜರತ್ನಂ**

◆ ನಮ್ಮ ಗರುಡಿಯ ಗೌರವ ◆

ಪ್ರಿಯ ವಾಚಕರೆ,

ಆ ಪರಿತೋಷಾದ್ ವಿದುಷಾಂ ನ ಸಾಧು ಮನ್ಯೇ ಪ್ರಯೋಗವಿಜ್ಞಾನಂ|
ಬಲವದಪಿ ಶಿಕ್ಷಿತಾನಾಮ್ ಆತ್ಮನ್ಯಪ್ರತ್ಯಯಂ ಚೇತಃ||

ನಾವು ಎಷ್ಟೇ ಸ್ವಾರಸ್ಯವಾಗಿ ಏನೇ ಬರೆದಿದ್ದರೂ, ಸುತ್ತಲೂ ಇರುವ ವಿದ್ವಾಂಸರು ಅದರಿಂದ ಪರಿತೋಷ ಪಡೆಯುವವರೆಗೂ ಅದನ್ನು ಸಾಧುವೆಂದು ತಿಳಿಯಲಾಗದು. ಎಷ್ಟೇ ಸಮರ್ಥವಾದ ಶಿಕ್ಷೆಯುಳ್ಳವರ ಮನಸ್ಸಾದರೂ(ಪಂಡಿತರು ಅದನ್ನು ಮೆಚ್ಚುವ ವರೆಗೂ) ತನ್ನಲ್ಲಿಯೇ ತಾನು ನಂಬಿಕೆಯನ್ನು ಹೊಂದಿರುವುದಿಲ್ಲ.

"ನಿರ್ಭಯಾಗ್ರಫಿ"ಯಲ್ಲಿ ಇದುವರೆಗೆ ಪ್ರಕಟವಾಗಿರುವ ನನ್ನ "ಹಾಸ್ಯ ಪ್ರಯೋಗ ವಿಜ್ಞಾನ"ವನ್ನು ಕುರಿತು ನಿಮ್ಮಲ್ಲಿ ಕೆಲವರು ಮೆಚ್ಚಿಕೆಯ ಕಾಗದಗಳನ್ನು ಬರೆದಿದ್ದೀರಿ. ನನ್ನ ಆತ್ಮ ವಿಶ್ವಾಸವನ್ನು ದೃಢಪಡಿಸಿದ್ದೀರಿ. ನಿಮಗೆ ನನ್ನ ವಂದನೆಗಳು.

ನಾನು ಹಾಸ್ಯವನ್ನು ಕಲಿತಿದ್ದು ಮೂರು ಗುರುಕುಲಗಳಲ್ಲಿ:

1. ಶ್ರೀ ನಾ. ಕಸ್ತೂರಿಯವರ ತಾಲೀಮಿನಲ್ಲಿ, ಹೈಸ್ಕೂಲಿನಲ್ಲಿ ಇರುವಾಗ; 2. ಶ್ರೀ ಟಿ.ಪಿ. ಕೈಲಾಸಂ ಅವರ ಗರುಡಿಯಲ್ಲಿ ಅಂಡರ್-ಗ್ರ್ಯಾಜುಯೇಟಾಗಿರುವಾಗ; ಮತ್ತು 3. ಮಹಾತಾಯಿ ಕೊರವಂಜಿಯ ವ್ಯಾಯಾಮ ಶಾಲೆಯಲ್ಲಿ, ಸ್ನಾತಕೋತ್ತರ

ವಿದ್ಯಾರ್ಥಿಯಾಗಿ. ಇವೆಲ್ಲದರ ಒಟ್ಟು ಫಲವಾಗಿ, ನನ್ನದು All-round, all-in ರೆಸ್ಲಿಂಗ್. ಹೀಗೆ ಮುಪ್ಪುರಿಗೊಂಡ ನನ್ನ ಮಲ್ಲಕಾಳಗದಲ್ಲಿ—

ಯಾವುದನ್ನು ಹಿಂದಿಯಲ್ಲಿ "ಹಲ್ಕ" ಎನ್ನುತ್ತಾರೆಯೋ

ಯಾವುದನ್ನು ಕನ್ನಡದಲ್ಲಿ "ಹಲ್ಕ" ಎನ್ನುತ್ತಾರೆಯೋ

ಅಂತಹದು ಯಾವುದೂ ಆಗದ ಹಾಗೆ ಎಚ್ಚರದಿಂದ ನೋಡಿಕೊಂಡಿದ್ದೇನೆ. ಒಂದು ವೇಳೆ ಅಂಥದೇನಾದರೂ ಆಗಿದ್ದರೆ "ಪ್ರಮಾದೊ ಧೀಮತಾಮಪಿ" ಎಂದು ದಯಮಾಡಿ ಮನ್ನಿಸಿಬಿಡಿ.

—ಜಿ.ಪಿ.ರಾಜರತ್ನಂ

◆ ಪೋಲಿ ಮತ್ತು ಮೇಷ್ಟರು ◆

ಪ್ರಿಯ ಚಂದ್ರಕೀರ್ತಿ,

ಕೆಲವು ಕಾಗದ ಹಿಂದೆ ಬೇಶ್ರೀ ಬೀಮಂಣನವರು ಒಂದಾನೊಂದು ಸಭೆಯಲ್ಲಿ ಹೀಗೆ ಹೇಳಿದರೆಂದು ವರದಿಯಾಗಿದೆ:—

> "ಬೇಂದ್ರೆಯವರ ಇಳಿದು ಬಾ ತಾಯಿಯಲ್ಲಿ ಜಗನ್ನಾಥ ದಾಸರ ಏರಿ ಬಾ ತಾಯಿ ವಾಸನೆ. ರತ್ನಂರವರ ಸಾಹಿತ್ಯದಲ್ಲಿ ಹೋಮರಕವಿಯ ದ್ರಾಕ್ಷಾರಸದ ವಾಸನೆ ಇದ್ದರೆ, ನನ್ನ ಮೂಗಿನ ತಪ್ಪೆ? ವಿಮರ್ಶಕರು ಇಂಥ ಪೋಲೀಸ್ ಕೆಲಸ ಮಾಡಬೇಕು."
>
> (ಪ್ರಜಾವಾಣಿ: 18-1-75)

ಇಂಥದನ್ನು ಇಂಗ್ಲಿಷಿನಲ್ಲಿ "Howler" ಎನ್ನುತ್ತಾರೆ; ಏಕೆಂದರೆ ಇಂಥದನ್ನು ಕೇಳಿದವರು howl with laughter. 'ಹ' ಕಾರವನ್ನು ಉಚ್ಚರಿಸಲು ಆಗದವರು ಇದನ್ನೇ 'Owler' ಎನ್ನುತ್ತಾರೆ; ಏಕೆಂದರೆ, ಇಂಥದನ್ನು ಆಡಿದವರು, ಆಡಿದ ಮೇಲೆ look owlish.

ಅದು ಹೇಗಾದರೂ ಇರಲಿ, ಅವರ ಪೋಲೀ's ಕೆಲಸ ಅವರು ಮಾಡಲಿ. ನನ್ನ ಮೇಷ್ಟರ ಕೆಲಸ ನಾನು ಮಾಡುತ್ತೇನೆ.

'ಪೋಲಿ' ಎಂದರೆ ಇನ್ನೇನೂ ಕೆಟ್ಟ ಅರ್ಥ ಇಲ್ಲ. ಪೋಲಿ ಎಂದರೆ irresponsible, ಬೇಜವಾಬ್ದಾರಿ ಮನುಷ್ಯ ಅಂತ. ಹಾಗೇ 'ಮೇಷ್ಟರು ಅಂದರೆ ತನ್ನ responsiblityಯನ್ನ. ಜವಾಬ್ದಾರಿಯನ್ನ ತಿಳಿದವನು ಅಂತ. Responsible to whom? ಮೊದಲನೇದಾಗಿ-ತನಗೆ ಸಂಬಳ ಕೊಡುವ ದಣಿಗೆ; ಎರಡನೆಯದಾಗಿ—ತನ್ನ ಹತ್ತಿರ ಕಲಿಯಲು ಬರುವ ವಿದ್ಯಾರ್ಥಿಗಳಿಗೆ.

ಮೇಲಿನ ವರದಿಯಲ್ಲಿ ಬೀಮಂಣನವರದು ಎಷ್ಟು, ವರದಿ ಮಾಡಿದವರದು ಎಷ್ಟು, ಮುದ್ರಾರಾಕ್ಷಸನದು ಎಷ್ಟು ಎಂದು ನಾವು ಪೋಲೀಸ್ ಕೆಲಸ ಮಾಡಬೇಕಾದ ಅಗತ್ಯವಿಲ್ಲ.

ಏಕೆಂದರೆ—ಈ ಮಾತುಗಳನ್ನು ಹೇಳುವುದಕ್ಕೆ ಕೆಲವು ತಿಂಗಳು ಮೊದಲು(ಅಕ್ಟೋಬರ್ 74ರ)'ತುಷಾರ'ದಲ್ಲಿ ನನ್ನ 'ರತ್ನನ ಪದ'ಗಳನ್ನು ಕುರಿತು—

> "I felt he should have made a mention of Omer Khayyam as an influence and ಅ. ನ. ಕೃ agreed with me ".

ಎಂದು ಹೇಳಿ, ಮುಂದೆ—

> "ಬೇಂದ್ರೆಯವರ ಜನಪ್ರಿಯ ಕವನ "ಗಂಗಾವತರಣ" ಜಗನ್ನಾಥ ಪಂಡಿತನ "ಗಂಗಾಲಹರಿ" ಸಂಸ್ಕೃತ ಕಾವ್ಯದಿಂದ ಅನಾಮತ್ತಾಗಿ ಎತ್ತಿಕೊಂಡದ್ದು. ಇದು ಬಹಳ ಮಂದಿಗೆ ಗೊತ್ತಿಲ್ಲ. ಜಗನ್ನಾಥ ಪಂಡಿತನ ತಾಯಿ

ಏರಿ ಬಂದರೆ ಬೇಂದ್ರೆಯವರ ತಾಯಿ ಇಳಿದು ಬರುತ್ತಾಳೆ. ಈ ಬಗ್ಗೆ ಅ.ನ.ಕೃ. ನಗುತ್ತ ಹೀಗೆಂದರು: ಅವರಿಗೆ ಡಿಫೆನ್ಸ್ ಇದೆಯಲ್ಲ: ನಾಸ್ತಿ ಚೌರ್ಯೇ ವಿದ್ವಜ್ಜನಃ"

ಇದನ್ನೇ ಮತ್ತೆ, ಮೊನ್ನೆತಾನೆ ಪ್ರಕಟವಾದ 'ನಿರ್ಭಯಾಗ್ರಫಿ' ಯಲ್ಲಿ (ಪುಟ 262-264) ಮೂರನೆಯ ಬಾರಿ ಮರುಕಳಿಸಿ ಕೊಂಡಿದ್ದಾರೆ.

"ಅ. ನ. ಕೃ. ಅವರೊಂದಿಗೆ ಕುಳಿತಿದ್ದಾಗ ಜಿ.ಪಿ. ಅವರ ರತ್ನನ ಪದಗಳ ಪ್ರಸ್ತಾಪ ಬಂತು. "It is a master work in Kannada" ಎಂದಂದು ನನ್ನ ಕಿಂತಲೂ ಹೆಚ್ಚು ಮೆಚ್ಚುಗೆ ವ್ಯಕ್ತಪಡಿಸಿ, ಹಿಂದೆಯೆ ಸೇರಿಸಿದರು:

"ಅದನ್ನ ಯಾರಾರೋ ಅಯೋಗ್ಯರು ಪರಭಾಷೆ ಯಲ್ಲೂ ಲಪಟಾಯಿಸಿಬಿಟ್ಟಿದ್ದಾರೆ ನೋಡಿ. ಗ್ರಂಥ ಋಣವನ್ನು ಒಪ್ಪಿಕೊಳ್ಳುವ ಸೌಜನ್ಯವೂ ಬೇಡವೆ, ಆ ಖದೀಮರಿಗೆ?"

"ರಾಯರ ಮುಖದಲ್ಲಿ ತುಂಟನಗೆ ಇತ್ತು. ಅವರ ಮಾತಿನ ರೀತಿಗೆ ಚಿರಪರಿಚಿತನಾಗಿದ್ದ ನನಗೆ ಅವರ ಮನದ ಇಂಗಿತ ಆ ಕೂಡಲೆ ಹೊಳೆಯಿತು. ಮಾತು ಬೆಳಸಿದೆ.

"ಅಲ್ಲಾ ಸಾರ್! ರತ್ನನ ಪದಗಳಲ್ಲಿ ಎಪಿಕ್ಯೂರಿಯನ್

ಫಿಲಾಸಫಿಯ ವಾಸನೆ ಸಾಕಷ್ಟಿದೆ. ಇಪ್ಪತ್ತನೇ ಶತಮಾನದಲ್ಲಿ ರಾಜರತ್ನಂ ಕನ್ನಡದಲ್ಲಿ ಬರೆದ 'ರತ್ನನ ಪದಗಳು' ಅನ್ನು ಪರ್ಷಿಯನ್ ಕವಿಯಾದ ಕನ್ನಡ ಬಾರದ ಓಮರ್ ಹನ್ನೊಂದನೇ ಶತಮಾನ ದಲ್ಲೇ ಹೆಂಗೆ ಕದ್ದ?"

"ರಾಯರು ಗಹಗಹಿಸಿ ನಕ್ಕು ಮಾತು ಮುಗಿಸುವ ರೀತಿಯಲ್ಲಿ ನುಡಿದರು: 'ನೀವು ಕನ್ನಡ ಸಾಹಿತ್ಯಕ್ಕೆ ಇನ್ನೂ ಹೊಸಬರು ಅದಕ್ಕೆ ನಿಮಗೆ ಆಶ್ಚರ್ಯ ವಾಗಿದೆ. ಇದು ನಮ್ಮವರಿಗೆ ಸರ್ವೇಸಾಮಾನ್ಯ' (ಪುಟ 262-263)

ಹೀಗೆ ನನಗೆ ಮಂಗಳಾರತಿ ಮಾಡಿದಮೇಲೆ, ಅದೇ ಮಂಗಳಾರತಿಯನ್ನು ಬೇಂದ್ರೆಯವರಿಗೂ ಎತ್ತುತ್ತಾರೆ (ಪುಟ 263-264) :

"ಜಗನ್ನಾಥ ಕುಳಿತಲ್ಲಿಯೆ ಗಂಗಾಲಹರಿಯನ್ನು ರಚಿಸಿ ಹಾಡುತ್ತಾನೆ—ಗಂಗೆ ಉಕ್ಕೇರಿ ಉಕ್ಕೇರಿ ಬಂದು ಆತನಿಗೆ ಶುಭ್ರ ಸ್ನಾನವನ್ನು ಮಾಡಿಸುತ್ತಾಳೆ..."

ನಾನು ಮುಂದಿನ ಮಾತನ್ನು ಆಡುವ ಮುಂಚೆಯೇ ರಾಯರು ಬಾಯಿ ಹಾಕಿ ಮುಗಿಸಿದರು.

"ಹೌದ್ರಿ. ನಿಮ್ಮ ಜಗನ್ನಾಥ ಪಂಡಿತನ ತಾಯಿ ಏರಿ ಬರುತ್ತಾಳೆ. ಆದರೆ ನಮ್ಮ ಬೇಂದ್ರೆ ಪಂಡಿತನ ತಾಯಿ ಇಳಿದು ಬರುತ್ತಾಳೆ. ಏನೀಗ ?"

"ಇದು ದೊಡ್ಡವರಲ್ಲಿ ಛಿದ್ರಾನ್ವೇಷಣದ ಪ್ರಶ್ನೆ ಅಲ್ಲ, ಸಾರ್, ಸ್ಫೂರ್ತಿಯನ್ನಿತ್ತ ಮೂಲಕವಿಯನ್ನು ಸ್ಮರಿಸುವುದು ಇಬ್ಬರಿಗೂ ಗೌರವ ಎಂಬುದಷ್ಟೇ ನನ್ನ ಅಭಿಪ್ರಾಯ".

"ಅದು ಸರಿ. ನನ್ನ ಅಭಿಪ್ರಾಯವೂ ಅದೇ, ಆದರೆ ಅವರಿಗೆ 'ಡಿಫೆನ್ಸ್' ಇದೆಯಲ್ಲಾ—ನಾಸ್ತಿ ಚೌರ್ಯೇ ವಿದ್ವಜ್ಜನಃ" ಎಂದಂದು ವ್ಯಂಗ್ಯವಾಗಿ ನಕ್ಕುಬಿಟ್ಟರು.

ಇದನ್ನು ಹಾಗೇ ಗಮನಿಸಿದರೆ—'ಒಂದೇ ಸುಳ್ಳನ್ನು ಮೂರು ಬಾರಿ ಹೇಳಿಬಿಟ್ಟರೆ ಅದು ಸತ್ಯವಾಗಿಹೋಗುತ್ತದೆ' ಎಂದು ಇವರು ತಿಳಿದಿರುವ ಹಾಗಿದೆ ಇರಲಿ.

ನನ್ನ ರತ್ನನ ಪದಗಳಲ್ಲಿ ಅವರು ಹೀಗೆ ಕೃತಿಚೌರ್ಯವನ್ನು ಕಂಡರೂ—"ನನ್ನ ಮೇಲೆ ಪ್ರಭಾವ ಬೀರಿದ ಮೂರನೆಯ ಪುಸ್ತಕ ಶ್ರೀ ಜಿ. ಪಿ. ರಾಜರತ್ನಂ ಅವರ 'ರತ್ನನ ಪದಗಳು'. ಅದನ್ನೋದಿದ ನಂತರ ನಾನು ಮಂದ್ರಮುಗ್ಧನಾದೆ. ನಾನೂ ಹೀಗೇಕೆ ಬರೆಯಬಾರದು ಎಂಬ ಚಪಲಕ್ಕೆ ಬಲಿಯಾದೆ..." ಎಂದೂ ಹೇಳುತ್ತಾರೆ.

ಇಂತಹ left-handed compliment ಅನ್ನು ಕೇಳಿದಾಗ ಕೈಲಾಸಂ ಹೇಳುತ್ತಿದ್ದರು: 'ಈ ಕೈಲಿ ಮಾಲೀನೂ ಹಾಕ್ತೀರ! ಆ ಕೈಲಿ ತಗಣೀನೂ ಬಿಡ್ತೀರ!'

ಇದಿಷ್ಟನ್ನೂ ನೋಡಿದರೆ- ಅವರ ಪೋಲೀ's ಕೆಲಸಾನ ಅವರು ಪರಿಷ್ಕಾರವಾಗಿ ಮಾಡುತಾ ಇದ್ದಾರೆ ಅಂತ ಅನ್ನಿಸೋಲ್ವೆ?

ಅಂದಮೇಲೆ, ನನ್ನ ಮೇಷ್ಟರ ಕೆಲಸ ನಾನು ಮಾಡದೆ ಹೋದರೆ, ನನ್ನ ಜವಾಬ್ದಾರಿ ನನಗೆ ಗೊತ್ತಿಲ್ಲ ಅನ್ನಿಸ್ಕೋಬೇಕಾಗುತ್ತೆ. ಆದ್ದರಿಂದ ಕರೆಸ್ಪಾಂಡೆನ್ಸ್ ಕೋರ್ಸಿನಲ್ಲಿ ಪಾಠ ಹೇಳಿದಹಾಗೆ, ಮುಂದಿನ ಮೂರು ನಾಲ್ಕು ದಿವಸ ಪತ್ರದ ಮೇಲೆ ಪತ್ರ ಬರುತ್ತೆ. Look out!

ಬೇಜಾರು ಮಾಡಿಕೋಬೇಡಿ. ಏಕೆಂದರೆ: 'ನೀವು ಕೇಳಿದಿರಿ'. You asked for it!

—**ರಾಜರತ್ನಂ**

◆ 'ಗಂಗಾಲಹರಿ' ಮತ್ತು 'ಗಂಗಾವತರಣ' ◆

ಪತ್ರ೧

ಒಂದರಿಂದ ಇನ್ನೊಂದು ಕಡೆ ತೆಗೆದುಕೊಂಡಿದೆ ಎನ್ನುವ ಮಾತು ಶಿಕ್ಷಣ ಸಾಲದ ವಿಮರ್ಶನ ಬುದ್ಧಿಯಿಂದ ಬಂದದ್ದು. ಜಗನ್ನಾಥ ಪಂಡಿತನ ಮೂಲ ಸಂಸ್ಕೃತದ ೫೨ ಪದ್ಯಗಳನ್ನು ಓದಿರುವವರು ಇಂಥ ಮಾತು ಕೇಳಿ ನಗುತ್ತಾರೆ. ಮೂಲವನ್ನು ಓದುವ ಚೈತನ್ಯವಿಲ್ಲದವರು ಅದರ ಕನ್ನಡ ಅನುವಾದವನ್ನಾದರೂ ಓದಿ, ಈ ದುರಾರೋಪದ ಸತ್ಯಾಸತ್ಯತೆಗಳನ್ನು ತಾವೇ ತೂಗಿ ತಿಳಿಯಬಹುದು.

1) ಅನೆಕಲ್ ಗೌ|| ಕನ್ನಡ ಬಾಯ್ಸ್ ಸ್ಕೂಲ್ ಹೆಡ್ಮಾಸ್ಟರ್ ಮ|| ರಾ|| ವೆಂಕಟಸುಬ್ಬಯ್ಯನವರು "ಗಂಗಾಲಹರಿ"ಯನ್ನು ಪ್ರತಿ ಪದಾರ್ಥ ಟೀಕಾತಾತ್ಪರ್ಯಗಳೊಡನೆ ಪ್ರಕಟಿಸಿರುತ್ತಾರೆ. (ವಿದ್ಯಾ ನಂದ ಗ್ರಂಥಮಾಲಾ 1916)

2) ಶ್ರೀಮಾನ್ ಮೂಗೂರು ಹನುಮಂತಾಚಾರ್ಯರು ತಮ್ಮ 'ಜಗನ್ನಾಥ ಪಂಡಿತರಾಜ' ಎಂಬ ಗ್ರಂಥದ ಕೊನೆಯಲ್ಲಿ 'ಗಂಗಾ ಲಹರಿ'ಯ ಮೂಲ ಸಂಸ್ಕೃತ ಪದ್ಯಗಳನ್ನು ಕನ್ನಡ ಭಾವಾರ್ಥ ಸಮೇತ ಕೊಟ್ಟಿರುವುದರ ಜೊತೆಗೆ 52 ವಾರ್ಧಕ ಷಟ್ಪದಿಗಳಲ್ಲಿ ಅದರ ಕನ್ನಡ ಅನುವಾದವನ್ನೂ ಮಾಡಿ ಕೊಟ್ಟಿದ್ದಾರೆ. ಇವರು

ಆನವಟ್ಟಿಯ ಕನ್ನಡ ಶಾಲೆಯಲ್ಲಿ ಮುಖ್ಯೋಪಾಧ್ಯಾಯ ರಾಗಿದ್ದರು, (1939.)

3) ಈಚೆಗೆ "ಕನ್ನಡ ನುಡಿ"ಯಲ್ಲಿ (16 ಏಪ್ರಿಲ್ 75) ಶ್ರೀಮಾನ್ ಎನ್. ಎಸ್. ಗದಗಕರ ಅವರು ಗಂಗಾಲಹರಿಯ ಪದ್ಯಗಳ ಸಾರವನ್ನು ಶ್ರೀ ಬೇಂದ್ರೆಯವರ ಮೇಘದೂತದ ಛಾಯಾಛಂದಸ್ಸಿನಲ್ಲಿ ಒದಗಿಸಿದ್ದಾರೆ. ಇದು ಮೂಲದ ಪದಶಃ ಅನುವಾದವಲ್ಲ, ಇದು ಮೂಲದ ತಿರುಳು.

ಈ ನೆಪದಲ್ಲಿಯಾದರೂ ಜನ ಗಂಗಾಲಹರಿಯನ್ನು ಮೂಲ ದಲ್ಲಿಯಾಗಲಿ ಕನ್ನಡಾನುವಾದದಲ್ಲಿಯಾಗಲಿ ಓದಿಕೊಂಡು, ಅದಕ್ಕೂ ಗಂಗಾವತರಣಕ್ಕೂ ಇದೆಯೆನ್ನಲಾಗಿರುವ ಸಂಬಂಧವನ್ನು ಪರಿಶೀಲಿಸಿದರೆ, ಇಂತಹ ವಿಮರ್ಶೆಯ ಆಭಾಸವನ್ನು ಆಡಿದ್ದೂ ಸಾರ್ಥಕವಾಗುತ್ತದೆ.

ಇನ್ನೂ ಒಂದು ವೇಳೆ "ಶ್ರೀಮದ್ರಾಮಾಯಣ"ದಲ್ಲಿಯೂ ಭಾಗವತದಲ್ಲಿಯೂ ಕಂಡುಬರುವ ಗಂಗಾವತರಣದಿಂದ ಬೇಂದ್ರೆ ಯವರು ಪ್ರಭಾವಿತರಾಗಿದ್ದಾರೆ" ಎನ್ನುವುದಾದರೆ, ಅದು ಒಪ್ಪ ಬೇಕಾದ್ದೆ. "ಗಂಗಾವತರಣ"ದ ಆರಂಭದಲ್ಲಿ ಬರುವ "ಹರನ ಜಡೆ ಯಿಂದ, ಹರಿಯ ಅಡಿಯಿಂದ, ಋಷಿಯ ತೊಡೆಯಿಂದ ನುಸುಳಿ ಬಾ" ಎಂಬ ಪಂಕ್ತಿಗಳೇ ಇದಕ್ಕೆ ಸಾಕ್ಷಿ. ಹಾಗಾದರೆ, ಈ ಋಣ ವನ್ನಾದರೂ ಒಪ್ಪಿಕೊಳ್ಳಬೇಕಾಗಿತ್ತಲ್ಲವೆ?" ಎಂದು ಜೀಮಂಣ ನವರು ಕೇಳಬಹುದು,

ಅದಕ್ಕೆ ಸಮಾಧಾನ ಹೀಗಿದೆ: "Jokes are nobody 's

property" ಅಂತ ತಾವು ಲಪಟಾಯಿಸುವುದನ್ನು ಸಮರ್ಥಿಸಿಕೊಳ್ಳುವ ಹಾಗೆ, Ramayana, Bharata and the Puranas are every body's property-in this country. ಬಹುಶಃ ಅವರಿಗೆ ಗೊತ್ತಿಲ್ಲ ಅಂತ ಕಾಣುತ್ತೆ: ಇವೆಲ್ಲಾ ಪರಂ ಕವೀನಾಂ ಆಧಾರಂ!"

ಗಮನಿಸಬೇಕಾದ ಇನ್ನೊಂದು ಸಂಗತಿ ಇದೆ. ಏನೆಂದರೆ.. ಯಾವ ಸಂಕಲನದಲ್ಲಿ ಶ್ರೀ ಬೇಂದ್ರೆಯವರ "ಗಂಗಾವತರಣ" ಪದ್ಯ ದೊರಕುತ್ತದೋ ಅಲ್ಲೇ ಅದರ ಹಿಂದಿನ ಪದ್ಯವಾಗಿ ಅವರದೇ "ಗಂಗಾಷ್ಟಕ" ಪ್ರಕಟವಾಗಿದೆ. ಇದನ್ನು ಓದಿದವರಿಗೆ "ಕವಿ ಗಂಗಾಲಹರಿಯಿಂದ ಪ್ರಭಾವಿತರಾಗಿದ್ದಾರೆ" ಎಂಬುದು ತನ್ನಿಂದ ತಾನೆ ಸ್ಪಷ್ಟವಾಗಿದೆ. ಈ ಪದ್ಯ ನೋಡಿ:—

> **"ರಾಜರಮಣಿಯರೆದೆಗೆ ಬೆಳಗಿನಲ್ಲುಳಿದಂಥ ಕಸ್ತೂರಿ ಬಿದ್ದು ಕೆಳಕೆ,**
> **ಮೈತೊಳೆದ ನೀರಿನೊಡಗಂಗೆಯಲಿ ಕೂಡಿದರೆ ಮುಕ್ತಿ ಕಸ್ತೂರಿ ಮೃಗಕೆ"**

—ಹೀಗೆ ಹಾಡಿದ ಕವಿಯ ನಂಬಿ, ನಿನ್ನಲಿ ಮಿಂದೆ; ನಾನವನ ಬಟ್ಟೆಯವನು. ನನ್ನ ತಾಯಿಗೆ ಮುಕ್ತಿ ಮಿಂದಂದೆಯಾಗಿತ್ತು; ನಾನವಳ ಹೊಟ್ಟೆಯವನು".

ಬೇಶ್ರೀ ಸಿಕ್ಕಿದಾಗ, ಅವರಿಗೆ ಇದು ಗೊತ್ತಾ ಎಂದು ಕೇಳಿರಿ.

ಇಲ್ಲಿಗೆ ಒಂದನೇ ಪಾಠ ಮುಗಿಯಿತು.

ಪತ್ರ ೨

"ಉಮರ್ ಖಯ್ಯಾಂ" ಮತ್ತು "ರತ್ನನ ಪದಗಳು"

ನಾನು ನನ್ನ "ಯೆಂಡಕುಡುಕ ರತ್ನ"ವನ್ನು ಬರೆಯುವುದಕ್ಕೆ

ಹಿಂದೆಯೇ ಆಗಿನ ಕಾಲದ ಕವಿಗಳ ಕವನಗಳನ್ನು ಓದಿದ ಹಾಗೆಯೇ ಶ್ರೀ ಡಿವಿಜಿ ಅವರ 64 ಚೌಪದಿಗಳ "ಉಮರನ ಒಸಗೆ"ಯನ್ನೂ ಓದಿದ್ದೆ. ಅದನ್ನು ಓದಿ, ನನ್ನ ಸ್ವಂತ ಪ್ರತಿಯಲ್ಲಿ—

"ಉಮ್ಮರನ ಶಾಲೆಯಲಿ ಪಾಠ ಕಲಿತು,
ಆ ಕಲ್ಪಿ ಬದುಕಿರಲಿ ಬೆರೆದು ಬಲಿತು,
ಜೀವರಥ ಸಂಚಾರ ಸೌಲಭ್ಯವೆಸಗೆ
ನೆರವಾಗಿ ನಿಲ್ಗೆ ನಿನಗೀ ಉಮರನೊಸಗೆ"

—ಎಂದು ಬರೆದುಕೊಂಡಿದ್ದೇನೆ. ಇದಿಷ್ಟರಿಂದಲೇ ರತ್ನನ ಪದಗಳು ಉಮ್ಮರ್ ಖಯ್ಯಾಮಿಗೆ ಋಣಿ ಎನ್ನುವುದು ಸಾಹಿತ್ಯ ಕರ್ಮದ ಮರ್ಮಗಳನ್ನು ಬಲ್ಲವರು ಆಡುವ ಮಾತಲ್ಲ.

ಉಮರ್ ಖಯ್ಯಾಮನ ರುಬಾಯಿಯಾತ್‌ಗಳನ್ನು ಕನ್ನಡಕ್ಕೆ ತಂದ ಶ್ರೀ ಡಿ.ವಿ.ಜಿ. ಅವರಾಗಲಿ, ಶ್ರೀ ಗೋವಿಂದ ಪೈ ಆಗಲಿ ಇಂತಹ ಮಾತು ಹೇಳಿರಲಿಲ್ಲ. (ಅ.ನ.ಕೃ. ಹೀಗೆಂದರು ಎಂದು ಬೇಶ್ರೀ ಹೇಳಿರುವ ಬಗ್ಗೆ ಮುಂದಿನ ಪತ್ರದಲ್ಲಿ ಬರೆಯುತ್ತೇನೆ.)

"ರತ್ನನ ಪದ"ಗಳನ್ನು ಕುರಿತು—

"ಕನ್ನಡದಷ್ಟೇ ಬಾಳಬಲ್ಲ ಯೆಂಡಕುಡ್ಕ ರತ್ನನನ್ನು ಕನ್ನಡದಲ್ಲಿ ಸೃಷ್ಟಿಸಿದ ರಾಜರತ್ನಂರನ್ನು ನಾನು ಕನ್ನಡ ಸಾಹಿತ್ಯದ ಬೊದಲ್ಲೈರ್ (Baudelaire) ಕವಿ ಎಂದು ಬಗೆದಿದ್ದೇನೆ. ಫ್ರೆಂಚ್ ಸಾಹಿತ್ಯದಲ್ಲಿ ಅವನ "ಕೆಡುಕಿನ ಹೂವುಗಳು" (Flowers of Evil) ಎಷ್ಟೋ ಕನ್ನಡದಲ್ಲಿ ಅಷ್ಟೇ ಸೊಗಸು ಇವರ ಯೆಂಡಕುಡ್ಕ ರತ್ನ ಮತ್ತು ರತ್ನನ ಪದಗಳು" ಎಂದು

ಶ್ರೀ ಗೋವಿಂದ ಪೈ ಹೇಳಿದ್ದಾರೆ. (ಪುರುಷ ಸರಸ್ವತಿಯ ಮುನ್ನುಡಿ, ಪು. 8–ಮೊದಲ ಮುದ್ರಣ)

Rajaratnam, the Kannada Poet ಎಂಬ ಲೇಖನದಲ್ಲಿ (Triveni, 1938, Vol. 10, Nos. 9-12) ಶ್ರೀ 'ಶ್ಯಾಮ' ಅವರು ಹೀಗೆ ಬರೆಯುತ್ತಾರೆ:—

> Ratnana Padagalu is Rajaratnam's unique contribution to Kannada Poetry and there is nothing in our literature to compare to it. It belongs to a class all by itself, known as 'familiar verse' in English and defined by Brander Mathews as 'the lyric commingled of humour and pathos, brief and brilliant and buoyant, seemingly unaffected and unpremeditated.' Though its dominant quality is social, according to Stedman it can be ' picturesque and even dramatic and rise to a high degree of humour and of sage and tender thought'. In its 'commonplace element', 'commonsense' point of view, genuinness of feeling, rich fund of human sympathy, blend of wit and humour and pathos, vernacular terseness", 'colloquial liberty', directness of style and distinctness of verse, Ratnana Padagalu resembles Lowell's Biglow Papers, the large-hearted

poems of Thomas Hood and the social verse of Oliver Wendell Holms. And likewise, Ratna has distinct paralells in sir Rogar, Bickerstaff and other fictitious characters of English periodical literature. Yet, this dialect poetry of Rajaratnam is distinct from all and does not seem to be 'derivative'.

'ನಡೆದು ಬಂದ ದಾರಿ'ಯ ಮೊದಲನೇ ಸಂಪುಟಕ್ಕೆ ಮುನ್ನುಡಿಯಾಗಿ ಶ್ರೀ ಕೆ. ಡಿ. ಕುರ್ತುಕೋಟಿಯವರು ಬರೆದಿರುವ ಇತಿಹಾಸ ಪ್ರಬಂಧದಲ್ಲಿ (ಪುಟ 72) ರತ್ನನ ಪದಗಳನ್ನು ಕುರಿತು—

" 'Houseman'ನ 'Shropshire Lad' ಅಥವಾ ಉಮರ ಖಯ್ಯಾಮನ 'ರುಬಾಯಿಯಾತ್'ಗಳಂತೆ ಈ ಕವನ ಸಂಗ್ರಹವನ್ನು ನೋಡಬೇಕಾಗಿದೆ"— ಎಂಬ ಮಾತಿದೆ.

ಪುಟ್ನಂಜಿಯ ಪದಗಳನ್ನು ಕೇಳಿದಾಗ ಶ್ರೀ ತಿ. ನಾ. ಶರ್ಮ ಅವರಿಗೆ ತೆಲುಗಿನ 'ಯೆಂಕಿಪಾಟಲು' ನೆನಪಾದುವು. ರತ್ನನ ಪದಗಳಲ್ಲಿ ಕೆಲವನ್ನು ಹಿಂದಿಗೆ 'ಶೈಲಷರಾಬೀ' ಎಂದು ಅನುವಾದ ಮಾಡಿರುವ ಶ್ರೀ ಶ್ರೀಶೈಲಂ ಅವರು ಹಿಂದೀ ಕವಿ ಬಚ್ಚನ್ ವಿರಚಿತ 'ಮಧುಶಾಲಾ'ವನ್ನು ಜ್ಞಾಪಿಸಿಕೊಳ್ಳುತ್ತಾರೆ.

ಬೇಶ್ರೀ ಅವರನ್ನು ಕಂಡಾಗ, ಇದೆಲ್ಲಾ ಅವರಿಗೆ ಗೊತ್ತೇ ಎಂದು ಕೇಳಿ. ಇವರು ಯಾರಿಗೂ ಗೋಚರವಾಗದೆ ಹೋದ

ಉಮರನ ವಾಸನೆ ಇವರಿಗೆ ಮಾತ್ರ ಗೋಚರವಾದದ್ದು ಹೊಸ ಕಾಲದ ಸಂಶೋಧನೆಯ ಹೊಸ ಅದ್ಭುತ.

"ಉಮರನಲ್ಲಿ ಕಾಣುವ Epicurean Philosobhy ರತ್ನನ ಪದಗಳಲ್ಲಿಯೂ ಇದೆ. ಆದ್ದರಿಂದ ಇದು ಅದರಿಂದ ಕದ್ದದ್ದು" ಎಂಬ ಈ ಪೋಲೀ's ವಾದವನ್ನು ಗಮನಿಸಿ. 'Epicurean ಎಂದರೆ Epicurus ಗೆ ಸಂಬಂಧಪಟ್ಟಿದ್ದು. ಎಂದರೆ ಈ ಜೀವನ ದರ್ಶನವನ್ನು ಮೊದಲು ಪ್ರತಿ ಪಾದಿಸಿದವನು ಗ್ರೀಸಿನ ಎಪಿಕ್ಯೂರಸ್ ಎಂಬ ತತ್ವಜ್ಞ. ಆ ದರ್ಶನವನ್ನು ಉಮರ ನಲ್ಲಿ ಕಾಣುವುದರಿಂದ, ಉಮರ್ ಅವನಿಂದ ಕದ್ದ ಎನ್ನುವು ದಾದರೆ, ನಾನು ಉಮರನಿಂದ ಕದ್ದದ್ದೂ ನಿಜವೆನ್ನಬಹುದು, ಆದರೆ ಈ ದರ್ಶನಕ್ಕೆ ನಾವು ಪರ್ಷಿಯಾಗೂ ಹೋಗಬೇಕಾದ್ದಿಲ್ಲ, ಗ್ರೀಸಿಗೂ ಹೋಗಬೇಕಾದ್ದಿಲ್ಲ; ನಮ್ಮ ದೇಶದ 'ಅಹನ್ಯಹನಿ' ಎಂಬುದರಲ್ಲಿ ಇದು ಯಥೇಷ್ಟವಾಗಿ ತುಂಬಿದೆ.

ನನ್ನ 'ರತ್ನನ ಪದ'ಗಳನ್ನೂ ಹದಿನಾರು ವರ್ಷಗಳ ಅನಂತರದ 'ನಾಗನ ಪದ'ಗಳನ್ನೂ ಕುರಿತು ಶ್ರೀಮಾನ್ ವಿ. ಸೀತಾರಾಮಯ್ಯನವರು ಪಟ್ಟಿರುವ ಅಭಿಪ್ರಾಯವನ್ನು ತಿಳಿಸಿ, ಈ ಪತ್ರವನ್ನು ಮುಗಿಸುತ್ತೇನೆ:-

> "Sri Rajaratnam has a core of sadness and strength in his early love songs and the drink songs are robust, human and wholesome from the beginning. the rollick of his humour is new. In this generation his kind is possibly the most

original contribution.

"A recent work of his advances in technical mastery of pictures' giving us yet another type of common life, this time with the sadness gone, but with all its self confidence and edge in tact. This picture of family life, happy and contented, full of cheer, loyalty and harmony — it has a fragrance which makes us feel grateful to the giver".

ಇವೆಲ್ಲವನ್ನೂ ಹೀಗೆ ಮತ್ತೊಮ್ಮೆ ಜ್ಞಾಪಿಸಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟ ಬೇಶ್ರೀ ಅವರಿಗೆ ನಾನು ಕೃತಜ್ಞನಾಗಿದ್ದೇನೆ

ಇಲ್ಲಿಗೆ ಎರಡನೇ ಪಾಠ ಮುಗಿಯಿತು.

ಪತ್ರ ೩

ಸತ್ಯ ಮತ್ತು ಅ. ನ. ಕೃ.

ಅ. ನ. ಕೃ. ಅವರು ಯಾವಹೊತ್ತಿಗೂ ಮುಂದೊಂದ ಮಾತು, ಹಿಂದೊಂದು ಮಾತು ಆಡಿದವರಲ್ಲ. ಏನು ಹೇಳು ದಿದ್ದರೂ ಅದನ್ನು ಸಾಫ್‌ಸೀದಾ, ಕಡ್ಡಿ ಮುರಿದ ಹಾಗೆ, ಮುಖ ಹೊಡೆದ ಹಾಗೆ ಹೇಳಿಬಿಡುವರು. ಇದು ಎಲ್ಲರಿಗೂ ಗೊತ್ತು.

ಅವರು 'ಕಥಾಂಜಲಿ'ಯನ್ನು ಆರಂಭಮಾಡಿದ ಕಾಲ ಅದರ 'ಗ್ರಂಥ ವಿಮರ್ಶೆ'ಯ ವಿಭಾಗದ ಮೇಲುಗಡೆ ರವೀಂ ನಾಥ ಠಾಕೂರರು ಹೇಳಿದ "Let us not insult truth fo

fear of offending men" ಎಂಬುದನ್ನು ತಮ್ಮ motto ಆಗಿ ಹಾಕಿಕೊಂಡರು. ಅವರು ಅದರಂತೆ ನಡೆಯತೊಡಗಿದಾಗ"Let us insult men for fear of offending truth" ಎಂದು ನಾವು ತಮಾಷೆ ಮಾಡುತ್ತಿದ್ದೆವು. ಈ "ಸತ್ಯಪ್ರೀತಿ" ವಿಪರೀತವಾದದ್ದರಿಂದ ಅವರು ಎಷ್ಟೋ ಜನರ ನಿಷ್ಠುರವನ್ನು ಅನವಶ್ಯಕವಾಗಿ ಕಟ್ಟಿಕೊಂಡರು.

ಶ್ರೀ ಅನಂತ ಕಲ್ಲೋಳ ಅವರು "ಬ್ರಹ್ಮ ಹಾಕಿದ ಗಂಟು" ಎಂದು ಒಂದು ಹರಟೆಗಳ ಪುಸ್ತಕ ಬರೆದಿದ್ದಾರೆ "ಅದರಲ್ಲಿ ಬಿಚ್ಚುಮಾತಿನ ಪೆಚ್ಚು"ಒಬ್ಬ ಕಾಣಿಸಿಕೊಳ್ಳುತ್ತಾನೆ.

> "ನಾನು ಬಿಚ್ಚುಮಾತಿನ ಅಚ್ಯುತರಾಯ. ಹುಚ್ಚು ಜನರನ್ನು ಮೆಚ್ಚಿಸಲು ಮುಚ್ಚುಮರೆ, ಸಂಕೋಚ, ದಾಕ್ಷಿಣ್ಯ, ಮುಲಾಜು ಅಥವಾ ಔಪಚಾರಿಕತೆ ಇವುಗಳಿಗೆ ಬಲಿಯಾಗಲಾರೆ. ನನಗೆ ಯಾರ ಹೆದರಿಕೆಯೂ ಇಲ್ಲ; ಅಂಜಿಕೆಯೂ ಇಲ್ಲ; ನಾಚಿಕೆಯಂತೂ ಮೊದಲೇ ಇಲ್ಲ. ಬಿಚ್ಚು ಮಾತಿನ ಕೆಚ್ಚೆದೆಯವ ನಾಚ ಬೇಕೇಕೆ?" ಎಂದು ಬಡಾಯಿ ಕೊಚ್ಚಿಕೊಂಡ ಅಚ್ಯುತ ರಾಯ.

ಅಂಥವನು ಕೂಡ ಒಂದುಸಲ, ಕೈಲಾಸಂರವರ 'ಅನುಕೂಲ ಕ್ಕೊಬ್ಬಣ್ಣ'ದಲ್ಲಿ ಖಯಾಲಿ ಕಪ್ಪಣ್ಣನಿಂದ ಧೋಂಡೂರಾಯ ಧೋಕಾ ತಿಂದಹಾಗೆ, ಭಾರಿ ಏಟು ತಿನ್ನುತ್ತಾನೆ, ಬುದ್ಧಿ ಕಲಿಯುತ್ತಾನೆ.

ಕೃಷ್ಣರಾಯರೂ ಹೀಗೆಯೇ. ಅನ್ನಿಸಿದ್ದನ್ನು ಆಡಿಬಿಡುವರು

ಆ ಗುರುವಿಗೆ ತಕ್ಕ ಶಿಷ್ಯ ನಮ್ಮ ಬೇಶ್ರೀ.

ಅ. ನ. ಕೃ. ಅವರು ತಮ್ಮ 'ಕನ್ನಡ ಕುಲರಸಿಕರು' ಗ್ರಂಥ ದಲ್ಲಿ ನನ್ನನ್ನೂ ನನ್ನ ಕೃತಿಗಳನ್ನೂ ಕುರಿತು ಒಂದು ಲೇಖನ ಬರೆದಿದ್ದಾರೆ. 'ಅನಕೃ ಮತ್ತು ನಾನು' ಎಂಬ ಪುಸ್ತಿಕೆಯಲ್ಲಿ ಇದನ್ನು ಉದ್ಧರಿಸಿದ್ದೇನೆ.

> ಅಲ್ಲಿ ನೋಡಿ. ರತ್ನನ ಪದಗಳನ್ನು ಕುರಿತು ಹೇಳುವಾಗ—"ಅಮೆರಿಕೆಯ ಜನತೆಗೆ ವಾಲ್ಟ್ ವ್ಹಿಟ್‌ಮನ್, ಕಾರ್ಲ್‌ಸಾಂಡ್‌ಬರ್ಗ್ ಮತ್ತು ಕ್ಲಿಫರ್ಡ್ ಆಡೆಟ್ಸ್ ಕೊಟ್ಟ ಸಂದೇಶವನ್ನು ರಾಜರತ್ನಂ ಕನ್ನಡಿಗರಿಗಿತ್ತಿದ್ದಾರೆ" ಎಂದು ಹೇಳಿರುವರೇ ಹೊರತು, ಇಡೀ ಲೇಖನದಲ್ಲಿ ಒಂದು ಕಡೆ ಯಾದರೂ ಉಮರ್ ಖಯ್ಯಾಮನ ಹೆಸರು ಎತ್ತಿದ್ದಿಲ್ಲ.

ಆದರೂ 'and ಅನಕೃ agreed with me' ಎಂಬ ಅಪಲಾಪ ಏಕೆ? 'ಹಾಸ್ಯದ ಬಡಿಗೆ' ಎಂಬ ಪುಸ್ತಿಕೆಯಲ್ಲಿ ನಾನು ಬರೆದಿರುವ ಹಾಗೆ (ಆರನೇ 'ಗುಟುಕು ನೀರು')—

> "ಓತಿಕೇತನಿಗೆ ಬೇಲಿ ಸಾಕ್ಷಿ " ಅಂತ ಗಾದೆ. ಓತಿಕೇತ ಇದೆ; ಬೇಲಿ ಸತ್ತು, ಸುಟ್ಟು, ಬೂದಿಯಾಗಿ ಹೋಗಿದೆ. ಇನ್ನೂ ಯಾರಿಗೆ ಯಾರು ಸಾಕ್ಷಿ?
>
> "ಸತ್ತವರ ಬಾಯಲ್ಲಿ ಅಕ್ಕಿಕಾಳು ಹಾಕುವುದು ನಮ್ಮಲ್ಲಿ ಸಂಪ್ರದಾಯ. ಆದರೆ. ಸತ್ತು ಸುಟ್ಟು

ಬೂದಿಯಾಗಿ ಹೋದವರ ಬಾಯಲ್ಲಿ ಸುಳ್ಳು ಹಾಕುವುದು—ಇದು ಯಾವ ಸ್ನೇಹಿತರು ಮಾಡುವ ಕೆಲಸ?

“ಇದು ಸತ್ತವರಿಗೆ ಮಾಡುವ‘ಪಾದಪೂಜೆ’ಯಾ?”

ಒಂದು ವೇಳೆ, ‘ಮೇಜಿನ ಮುಂದು ಕೂತ’ ಹೊತ್ತಿನಲ್ಲಿ, ಒಳಗೆ ಹೋದ ಪರಮಾತ್ಮನ ಸಂಚಾರ ಪ್ರಬಲವಾದಾಗ, ಇಂಥ ಮಾತು ಬಂದರೂ ಬರಬಹುದು. ಆದರೆ ಅದನ್ನು ಬಹಿರಂಗವಾಗಿ ಪ್ರಕಟ ಮಾಡುವುದು ‘ಪ್ರಜ್ಞೆಯಿದ್ದವರ್ ಮಾಳ್ಪ ಕೆಲಸಮೆ’ ಇದು?

ಕೈಲಾಸಂ ಅವರ ಕೃತಿಗಳನ್ನು ಅಷ್ಟು ಕಠಿಣವಾಗಿ ಬಿಚ್ಚುಮಾತಿಂದ ವಿಮರ್ಶೆ ಮಾಡಿರುವ ಅನಕೃ ಅವರಿಗೆ ನನ್ನ ರತ್ನನ ಪದಗಳಲ್ಲಿ ಉಮರನ ವಾಸನೆ ಕಂಡುಬಂದಿದ್ದರೆ, ಅವರು ಹಾಗೆಂದು ಹೇಳಲು ಹಿಂಜರಿಯುತ್ತಿರಲಿಲ್ಲ.

ಗುರು ಆಡದೆ ಇದ್ದದ್ದನ್ನು ಅವರ ಬಾಯಿಂದ ಆಡಿಸುವುದು—ಶಿಷ್ಯನಾದವನು ಮಾಡಬಾರದ ಗುರುದ್ರೋಹ.

ಇವೊತ್ತಿಗೆ ಇಷ್ಟು ಸಾಕು. ಇಲ್ಲಿಗೆ ಮೂರನೇ ಪಾಠ ಮುಗಿಯಿತು.

ಪತ್ರ೪

ಜಗನ್ನಾಥ ಪಂಡಿತ ಮತ್ತು ಲವಂಗಿ

“ಭೆಯಾಗ್ರಫಿ”ಯಲ್ಲಿ (ಪುಟ 263-64) ಈ ಶಿಷ್ಯರು ಜಗನ್ನಾಥ ಪಂಡಿತನನ್ನೂ ಲವಂಗಿಯನ್ನೂ ಕುರಿತು ಆ ಗುರುವಿಗೆ ಒಂದು “ಸುದೀರ್ಘ ಉಪನ್ಯಾಸವನ್ನೇ” ಮಾಡುತ್ತಾರೆ. ಅನಕೃ

ಅವರಿಗೆ ಈ ವಿಷಯ ಏನೇನೂ ತಿಳಿಯದು ಎಂಬಂತೆ ಮಾತನಾಡುತ್ತಾರೆ. ಅದೂ ನಿಜವೇ ಎನ್ನುವ ಹಾಗೆ ಅನಕೃ ಮಾತನಾಡದೆ ಇವರು ಹೇಳಿದ್ದನ್ನು ಕೇಳಿದ್ದು ಅವರ ಸೌಜನ್ಯವನ್ನು ತೋರುತ್ತದೆ. (ಅಥವಾ ಪರಮಾತ್ಮನ ಪ್ರಭಾವವೊ?)

ಈ ಶಿಷ್ಯರು ಆ ಗುರುವಿನ ಹತ್ತಿರ ಬರುವುದಕ್ಕೆ ಎಷ್ಟೋ ಕಾಲ ಮುಂಚೆ, ಅನಕೃ ಅವರೂ ನಾನೂ ಲವಂಗಿಯ ಪ್ರಣಯ ಕತೆಯನ್ನು ಕುರಿತು ಮಾತನಾಡಿಕೊಂಡದ್ದುಂಟು. ಆಗ ಒಮ್ಮೆ ಅನಕೃ ಅವರು—

ಇಯಂ ಸುಸ್ತನೀ ಮಸ್ತಕನ್ಯಸ್ತಕುಂಭಾ
ಕುಸುಂಭಾರುಣಂ ಚಾರುಚೇಲಂ ವಸಾನಾ
ಸಮಸ್ತಸ್ಯ ಲೋಕಸ್ಯ ಚೇತಃ ಪ್ರವೃತ್ತಿಂ
ಗೃಹೀತ್ವಾ ಘಟೇ ನ್ಯಸ್ಯ ಯಾತೀವ ಭಾತಿ

ಎಂಬ ಪದ್ಯವನ್ನು ಹೇಳಿದಾಗ, ನಾನು ಅದಕ್ಕೆ ಪೂರಕವಾಗಿ—

ಯವನೀ ನವನೀತಕೋಮಲಾಂಗೀ
ಶಯನೀಯೇ ಯದಿ ನೀಯತೇ ಕದಾಚಿತ್
ಅವನೀತಲಮೇವ ಸಾಧು ಮನ್ಯೇ
ನ ವನೀ ಮಾಘವನೀ ವಿನೋದಹೇತುಃ

ಎಂಬ ಪದ್ಯವನ್ನು ಹೇಳಿದಾಗ, ಅನಕೃ ಅವರ ಕಣ್ಣುಗಳು ಆಶ್ಚರ್ಯದಿಂದ ತುಂಬಿಹೋದದ್ದು ಇನ್ನೂ ಕಣ್ಣಿಗೆ ಕಟ್ಟಿದಂತಿದೆ. ಏಕೆಂದರೆ, ಅವರ ದೃಷ್ಟಿಯಲ್ಲಿ ಅದುವರೆಗೆ ನಾನು 'ಮಡಿ, ಗೊಡ್ಡು' ಆಗಿದ್ದೆ.

ಅದೇ ಕಾಲದಲ್ಲಿ ನಾವಿಬ್ಬರು ಮಾತನಾಡಿಕೊಂಡ

ಇನ್ನೊಂದು ಸಂಗತಿ ನೆನಪಿಗೆ ಬರುತ್ತದೆ. ಅದು ಏನೆಂದರೆ—

"ಸಿದ್ಧಾಂತಕೌಮುದೀ" ಎಂಬ ವ್ಯಾಕರಣ ಗ್ರಂಥಕ್ಕೆ ಭಟ್ಟೋಜಿದೀಕ್ಷಿತನೆಂಬವನು ಒಂದು ವ್ಯಾಖ್ಯಾನ ಬರೆದು, ಅದಕ್ಕೆ 'ಮನೋರಮಾ' ಎಂದು ಹೆಸರಿಟ್ಟನು. ಜಗನ್ನಾಥ ಪಂಡಿತನು ಈ ವ್ಯಾಖ್ಯಾನವನ್ನು ಖಂಡನ ಮಾಡಿ, ಅದನ್ನು "ಮನೋರಮಾ ಕುಚಮರ್ದನ"ವೆಂದು ಕರೆದನು. ನಾವು ಅವು ಯಾವುದನ್ನೂ ಓದಿದವರಲ್ಲವಾದರೂ, "ಕುಚಮರ್ದನ" ಶಬ್ದ ನಮಗೆ ಅಪ್ಯಾಯಮಾನವಾಗಿತ್ತು. ಕಾರಣ ಏನೆಂದರೆ— ನಮಗಿಬ್ಬರಿಗೂ ಆಗ ತಾನೇ ಮದುವೆ ಆಗಿತ್ತು!

ಇವೊತ್ತಿಗೆ ಇಷ್ಟುಸಾಕು. ಇಲ್ಲಿಗೆ ನಾಲ್ಕನೆಯ ಪಾಠ ಮುಗಿಯುತು.

ಪತ್ರ ೫

"ಹರಣ" ಮತ್ತು "ಸ್ವೀಕರಣ"

ಪೂರ್ವಾಪರಗಳನ್ನು ವಿಚಾರಿಸದೆ ಕವಿಯ 'ಆಳ್‌ಸಿರಿಗೆ ಕರುಬುವುದು' ತಕ್ಕದ್ದಲ್ಲ. ಆ ಕುರುಬಿನಿಂದ ಆತನಿಗೆ ಕೃತಿಚೌರ್ಯವನ್ನು ಆರೋಪಿಸುವುದು ಇಂದಿನದಲ್ಲ; ಅದು ಬಲು ಹಳೆಯ ಚಾಳಿ.

೧೯೨೮ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಸಂಘವು ರನ್ನ ಕವಿಯನ್ನು ಕುರಿತು ಪ್ರಶಸ್ತಿ ಗ್ರಂಥವನ್ನು ಯೋಚಿಸಿದಾಗ—"ಏನು ಮಹಾರನ್ನ? ಪಂಪಭಾರತದಿಂದಲೂ ವೇಣೀಸಂಹಾರದಿಂದಲೂ ಪ್ರಭಾವಿತನಾಗಿ, ಪಂಪನನ್ನು ಸ್ಮರಿಸಿಲ್ಲ, ಭಟ್ಟನಾರಾಯಣನನ್ನೂ

ಸ್ಮರಿಸಿಲ್ಲ. ಕಳ್ಳ!" ಎಂದು ಯಾರೋ ಪಂಡಿತಂ ಮನ್ಯರು ಅಪಡ್ಡಾಳದ ಅಪಸ್ವರವನ್ನು ಎತ್ತಿದಾಗ—

ಆ ಕಾಲಕ್ಕೆ ಇನ್ನೂ ವಿದ್ಯಾರ್ಥಿಯಾಗಿದ್ದ ಶ್ರೀಮಾನ್ ತೀ. ನಂ. ಶ್ರೀಕಂಠಯ್ಯನವರು "ಗದಾಯುದ್ಧ'ವೂ ಸ್ವೀಕರಣ ವಿಚಾರವೂ" ಎಂಬ ಘನವಾದ ಲೇಖನವನ್ನು ಬರೆದರು. (ರನ್ನ ಕವಿ ಪ್ರಶಸ್ತಿ: ಪುಟ 76-102) ಈಚೆಗೆ ಮೈಸೂರಿನ ಶಾರದಾ ಮಂದಿರದವರು ಪ್ರಕಟಿಸಿರುವ 'ಕಾವ್ಯಾನುಭವ'ದಲ್ಲಿ ಈ ಲೇಖನ ಪುನರ್ಮುದ್ರಿತವಾಗಿದೆ. ಅದನ್ನು ಓದಿ. ಸದ್ಯಕ್ಕೆ ಇಲ್ಲಿ ನಮಗೆ ಪ್ರಕೃತವಾಗಿರುವ ಕೆಲವು ಖಂಡಗಳನ್ನು ಉದ್ಧರಿಸಿ ಕೊಡುತ್ತೇನೆ:—

> 'ಕಾವ್ಯಮಿಮಾಂಸೆ' ಎಂಬ ಸಂಸ್ಕೃತ ಲಕ್ಷಣ ಗ್ರಂಥದಲ್ಲಿ ಸ್ವಾರಸ್ಯವುಳ್ಳ ಒಂದು ಸಂಸ್ಕೃತ ಶ್ಲೋಕವಿದೆ:
>
> **ಪುಂಸಃ ಕಾಲಾತಿಪಾತೇನ ಚೌರ್ಯಮನ್ಯದ್ವಿಶೀರ್ಯತಿ|**
> **ಅಪಿ ಪುತ್ರೇಷು ಪೌತ್ರೇಷು ವಾಕ್ಚೌರ್ಯಂ ನ ಶೀರ್ಯತಿ||**
>
> "ಮನುಷ್ಯನು ಮಾಡಿದ ಇತರ ಚೌರ್ಯವೆಲ್ಲ ಕೆಲವು ದಿನಗಳು ಕಳೆದ ಮೇಲೆ ಮರೆತುಹೋಗುತ್ತದೆ. ವಾಕ್ಚೌರ್ಯವು ಮಾತ್ರ ಮಕ್ಕಳು ಮೊಮ್ಮಕ್ಕಳ ಕಾಲಕ್ಕೂ ಅಳಿಸಿಹೋಗುವುದಿಲ್ಲ" ಎಂದು ಇದರ ತಾತ್ಪರ್ಯ. ಈ ಮಾತೇನೋ ನಿಜ. ಆದರೆ 'ವಾಕ್ಚೌರ್ಯ' ವೆಂದರೆ ಏನು ಎನ್ನುವುದನ್ನು ಮಾತ್ರ ನಿರ್ಧರಿಸುವುದು ಕಷ್ಟ.
>
> 'Encyclopaedia Britannica' ಎಂಬ

ಬೃಹತ್ಕೋಶದಲ್ಲಿ 'ವಾಕ್ಚೌರ್ಯ' ಅಥವಾ 'ಹರಣ'ದ (Plagiarism) ಲಕ್ಷಣವು ಹೀಗೆ ಹೇಳಿದೆ: An appropriation or copying from the work of another, in literature or art and passing off the same as original or without acknowledgement of the real authorship or source." ಇದನ್ನು ನೋಡಿದರೆ, ಬೇರೊಂದು ಕಡೆಯಿಂದ ವಿಷಯವನ್ನು ಗ್ರಹಿಸಿದ ಮಾತ್ರಕ್ಕೇ ಅದು 'ಹರಣ'ವೆನ್ನಿಸಿಕೊಳ್ಳು ವುದಿಲ್ಲವೆಂದು ತೋರುತ್ತದೆ. ಅದು ಸರಿಯಾದ ಚೌರ್ಯವಾಗಬೇಕಾದರೆ ಅಪಹರಿಸಿದ ಕವಿಯು ಅದೆಲ್ಲವೂ ತಾನೇ ಸ್ವತಂತ್ರವಾಗಿ ಬರೆದುದೆಂಬ ಭಾವನೆಯು ವಾಚಕರಿಗೆ ಹುಟ್ಟುವಂತೆ ಮಾಡಿರ ಬೇಕು.

ಸಮಗ್ರವಾದ ಗ್ರಂಥವನ್ನಾಗಲಿ ಅಥವಾ ಅದರ ಬಹು ಭಾಗವನ್ನಾಗಲಿ ಒಬ್ಬ ಕವಿಯು ಇನ್ನೊಬ್ಬನಿಂದ ಅಪಹರಿಸಿದ್ದರೆ ಆಗ ಅದು 'ಹರಣ'ವೆಂದು ಸಾರಲು ಯಾವ ಅಡ್ಡಿಯೂ ಇಲ್ಲ; ಅದನ್ನು ಎಲ್ಲರೂ ನಿಂದಿಸಿದರೆ ಯಾವ ತಪ್ಪೂ ಇಲ್ಲ. ಆದರೆ ಕೆಲವು ಭಾವಗಳನ್ನು ಹೆರರಿಂದ ಒಬ್ಬ ಕವಿಯು ಸಂಗ್ರಹಿಸಿ ದರೆ ಅದು 'ಹರಣ'ವಾಗಿಬಿಡುತ್ತದೆಯೆ? ಇಂತಹ ಸಂದರ್ಭಗಳಲ್ಲಿ ಅನೇಕ ಕವಿಗಳು ತಮ್ಮ ಸಾಲವನ್ನು

ಒಪ್ಪಿಕೊಂಡಿರುವುದಿಲ್ಲ. ಹಿಂದಿನವರಿಂದ ಅಲ್ಲೊಂದು ಇಲ್ಲೊಂದು ಸೂಚನೆಯನ್ನು ಅಂಗೀಕರಿಸುವುದು ತಮ್ಮ ಕುಲದ ಹಕ್ಕು ಎಂದು ಅವರು ತಿಳಿದಿರುತ್ತಾರೆ. ಇದೂ ಚೌರ್ಯವೆಂದು ತೀರ್ಮಾನಿಸಿಬಿಟ್ಟರೆ ಪ್ರತಿಯೊಬ್ಬ ಕವಿಯೂ ಚೋರನೇ ಆಗುತ್ತಾನಲ್ಲ! ಯಾರನ್ನು ನಿಂದಿಸುವುದು, ಯಾರನ್ನು ಬಿಡುವುದು?

ಮಹಾಕವಿಗಳ ವಿಚಾರವು ಬಂದಾಗ 'ಹರಣ', 'ಕೃತಿ ಚೌರ್ಯ' ಮೊದಲಾದ ಹೀನಪದಗಳನ್ನು ಪ್ರಯೋಗಿಸುವುದು ವಿಮರ್ಶಕನ ಧೃಷ್ಟತೆಯನ್ನು ತೋರಿಸುತ್ತದೆ. ಇಂತಹ ಸಮಯಗಳಲ್ಲಿ 'ಸ್ವೀಕರಣ (Borrowing) ಎಂಬ ಪದವನ್ನು ಅಂಗೀಕರಿಸುವುದು ಮೇಲು.

ಸಾಮಾನ್ಯರಿಗೆ ಅನ್ವಯಿಸುವ ಸೂತ್ರಗಳಿಂದ ಮಹಾಕವಿಯನ್ನು ಕಟ್ಟಲು ಸಾಧ್ಯವಿಲ್ಲ. ಪೂರ್ವಕವಿಗಳಿಂದ ಭಾವಗಳನ್ನು ಹೇರಳವಾಗಿ ತೆಗೆದುಕೊಂಡಿದ್ದರೂ ಆತನು ಅದನ್ನು ಸ್ವತಂತ್ರವಾದ ರೀತಿಯಲ್ಲಿ ಉಪಯೋಗಿಸಿ ಅವಕ್ಕೆ ತನ್ನ ಮುದ್ರೆಯನ್ನು ಒತ್ತಿರುತ್ತಾನೆ. ಅವನ ಸಾಲುಗಳನ್ನು ಪಟ್ಟಿಹಾಕಿ'ಇಗೋ, ಕಳ್ಳ' ಎಂದು ಯಾರಾದರೂ ಕೂಗಬಲ್ಲರು. ಆದರೆ ಹಾಗೆ ಕೊಂಡ ಸಾಲವನ್ನು ಓದುವವರು ತಲೆದೂಗುವ ಕಾವ್ಯವಾಗುವಂತೆ ಮಾರ್ಪಡಿಸುವ ರಹಸ್ಯವು ಮಾತ್ರ ಆ ಮಹಾಕವಿಯೊಬ್ಬನಿಗೇ ಗೊತ್ತು.

"The ledger school of criticism, which

deals only with borrowings and lendings, ingeniously traced and accurately recorded, looks foolish enough in the presence of this miracle" ಎಂದು ಬರೆದು ರಾಲಿ ಎಂಬ ವಿದ್ವಾಂಸರು ಈ ಬಗೆಯ ವಿಮರ್ಶೆಯನ್ನು ಹಾಸ್ಯ ಮಾಡಿದ್ದಾರೆ.

ಬಲ್ಲವರು ಹೇಳಿರುವ ಈ ಮಾತುಗಳನ್ನು ಕೇಳಿದ ಮೇಲೆ 'ರತ್ನ'ನಲ್ಲಿ 'ಉಮರ'ನನ್ನು ಕಾಣುವವರನ್ನು ಕುರಿತು—

"ತಿತಿಮಾಡೊರ್ಗ್ ಏನ್ ಗೊತ್ತೈತೊ
ಚೆಡ್ಡಿ ವೊಲಿಯೋ ಕೆಲ್ಸ?
ಓದ್ದೊ ಅಯ್ಗೊಳ್ ಕಟ್ಕೊಂತಾರಾ
ಸೂಳೇ ಕಾಲಿನ್ ಗೊಲ್ಸ?"

ಎಂದು ಕೇಳೋಣವೆನ್ನಿಸುತ್ತದೆ, ಅಲ್ಲಾ? ಅದಕ್ಕೆಂದೇ ನಾನು ಹಿಂದೆ ರತ್ನನ ಪದಗಳಲ್ಲಿ ಹೇಳಿದ್ದು :

ಅರ್ತ ಮಾಡ್ಕಂಡ್ ಇಂಗಲ್ ಇಂಗೆ
ಅನ್ನೋರ್ ಮಾತು ಗಂಗೆ!
ಅರ್ತ್ ಆಗದಿದ್ರು ಸಿಕ್ದಂಗ್ ಅನ್ನಾದ್
ಚಂದ್ರನ್ ಮುಕ್ಕ್ ಉಗ್ದಂಗೆ!

ತಾತ್ಪರ್ಯ; ಅಭ್ಯಾಸವಿಲ್ಲದ ಬ್ರಾಹ್ಮಣ ಹೋಮ ಮಾಡೋಕೆ ಹೋಗಬಾರ್ದು. ಹೋಗಿ, ಗಡ್ಡ ಸುಟ್ಟುಕೋಬಾರದು.

ಶ್ರೀ ತೀ. ನಂ. ಶ್ರೀ ಅವರು 'ರತ್ನನ ಪದ'ಗಳ ಬಗ್ಗೆ ಬರೆದಿರುವ ಸಮತೂಕದ ವಿಮರ್ಶೆ ಅವರ 'ಸಮಾಲೋಕನ'ದಲ್ಲಿ

ಅಚ್ಚಾಗಿದೆ. ಅದನ್ನು ನೀವು ನೋಡಿದ್ದೀರಿ

ಇಲ್ಲಿಗೆ ಐದನೇ ಪಾಠ ಮುಗಿಯಿತು.

ಪತ್ರ ೬

"ರಾಯರುಕು ತೊಟ್ಟ ಮೂಕು"

'ರತ್ನ'ನ 'ಈಚಲಯೆಂಡ'ದಲ್ಲಿ ಉಮರನ 'ದ್ರಾಕ್ಷಾರಸ'ದ ವಾಸನೆ ಕಂಡುಹಿಡಿಯಬೇಕಾದರೆ ಅದು ಎಂಥ ಅದ್ಭುತವಾದ ಮೂಗು ಆಗಿರಬೇಡಾ! ಕೈಲಾಸಂ ಅವರ 'ಬಂಡವಾಳವಿಲ್ಲದ ಬಡಾಯಿ'ಯಲ್ಲಿ ಪರಶುರಾಮ ಪಟ್ಟರ್ ಹೇಳಿದ ಹಾಗೆ— 'ರಾಯರುಕು ತೊಟ್ಟ ಮೂಕು' ಇರಬೇಕು.

ಮೂಗು ಅನ್ನೂತ್ಲೂ ಜ್ಞಾಪಕ ಬರುತ್ತೆ. Jimmy Durant ಅಂತ ಒಬ್ಬ ಅಮೆರಿಕದ ಚಲಚ್ಚಿತ್ರ ನಟ ಇದ್ದ. ಅವನ ಮೂಗೇ ಅವನಿಗೆ ಮಹಾ ಬಂಡವಾಳ. ಅದನ್ನು ಬಲಗೈಯ ಬೆರಳುಗಳಿಂದ ಹಿಂಡಿಕೊಂಡು ಎಳೆದುಕೊಂಡ ಹೊರತು ಅವನ ಬಾಯಿಂದ ಮಾತೇ ಹೊರಡುತ್ತಿರಲಿಲ್ಲ.

ಅಂದ ಹಾಗೆ. ನನ್ನ 'ನೂರು ಪುಟಾಣಿ'ಗಳಲ್ಲಿ ನಾನು ಇಂಥ ಮೂಗು ಉಳ್ಳ ಒಬ್ಬ ಅಯ್ಯನ ಮೇಲೆ ಬರೆದಿರೋ ಚಾಟು ಓದಿದೀರ?

ಮೂಗುಯ್ಯ ಸೀಂತಾಗ 'ವಜ್ರಾಯುಸ್' ಎನ್ನುವಂತಿಲ್ಲ.
ಮೂಗುಬಿಲ ಬಲುದೂರ; ಕಿವಿಗೇನು ಕೇಳುವಂತಿಲ್ಲ.
ಮುಖಕ್ಕೂ ಮೂಗಿನ ತುದಿಗೂ ಒಂದು ಮೈಲು ಅಂತರ.

(ಇದು ನನ್ನದಲ್ಲ. ಗ್ರೀಕ್ ಭಾಷೆಯ ಒಂದು ಚಾಟು ನನ್ನ ಅನುವಾದ.)

ನಾನು ನೋಡಿರುವ, ನಾನು ಓದಿರುವ ಮೂಗುಗಳಲ್ಲೆಲ್ಲ ಅನುಪಮಾನವಾದದ್ದು, ನಿರುಪಮಾನವಾದದ್ದು ಎಂದರೆ— ನಮ್ಮ 'ಸಿರ್‍ಯಾನೋ'ವಿನ ಮೂಗು!

"Edmond Rostand ಎಂಬ ಫ್ರೆಂಚ್ ನಾಟಕಕಾರ Cyrano De Bergerac ಎಂಬ ಒಂದು ನಾಟಕ ಬರೆದಿದ್ದಾನೆ. ಅವರ ನಾಯಕನಾದ ಸಿರ್‍ಯಾನೋವಿನ ಮೂಗು ಹೇಗಿತ್ತು ಎಂದರೆ

"ಇದೇನಿದು? ತಲೆಕೆಳಗಾದ ಪರ್ವತ ಶಿಖರವೊ? ಅಥವಾ ಮುಂದಿರುವ ಬಯಲಿಗೆ ಚಾಚಿಕೊಂಡಿರುವ ಭೂಶಿರವೊ?

"ಸೂರ್ಯನ ತಾಪವನ್ನು ಸಹಿಸಲಾರದೆ ಈ ಮೂಗು ಸುಂಡಿಹೋದೀತು. ಇದಕ್ಕೊಂದು ಛತ್ರಿ ಹಿಡಿಯಬೇಕು.

"ಈ ಮೂಗಿಗೆ ಏನಾದರೂ ಏಟು ಬಿದ್ದರೆ, ಇದರಿಂದ ಕೆಂಪು ಸಮುದ್ರ ಹೊರಗೆ ಬಂದೀತು!

"ಇದೇನಿದು? ಕಹಳೆಯೋ? ಕೊಂಬೋ? ತುತ್ತೂರಿಯೊ?

"ಅಲ್ಲ, ಇದು ಕೆಂಪುಬಣ್ಣದ ಮೂಲಂಗಿಯಿರಬೇಕು. ಅಥವಾ ಉದ್ದುದ್ದವಾಗಿ ಬೆಳೆದ ಗಿಡ್ಡ ಕುಂಬಳಕಾಯೋ?

"ಮೂಗಿನ ಸ್ಪರ್ಧೆಯನ್ನು ಏರ್ಪಡಿಸಿದರೆ, ಇದಕ್ಕೇ ಮೊದಲನೇ ಪ್ರಶಸ್ತಿ!

"ಹಾರುವ ಹಕ್ಕಿಗಳು ಇವನ ಮೂಗನ್ನು ಮರದ

ಕೊಂಬೆಯೆಂದು ಭ್ರಮಿಸಿ, ಅದರ ಮೇಲೆ ಇಳಿದು ವಿಶ್ರಮಿಸಿ ಕೊಳ್ಳುತ್ತವೆ.

"ಅಬ್ಬಬ್ಬಾ! ಒಂದೇ ಒಂದು ಅಂಗದಲ್ಲಿ ಇಷ್ಟು ಮೂಳೆ ಮಾಂಸ ಒಂದೇ ಕಡೆಗೆ ಶೇಖರವಾದ್ದನ್ನು ನಾವು ಎಲ್ಲೂ ಕಂಡಿಲ್ಲ!"

—ಎಂದು ಇತರರು ತನ್ನ ಮೂಗಿನ ಬಗ್ಗೆ ಏನೇನು ಹೇಳಿ ಕೊಂಡು ಅಪಹಾಸ್ಯ ಮಾಡಬಹುದೋ ಅದೆಲ್ಲವನ್ನೂ ಇವನೇ ತನ್ನ ಮೂಗಿನ ಬಗ್ಗೆ ತಾನೇ ಹೇಳಿ, ಅದರಿಂದ ಇತರರ ಬಾಯಿ ಮುಚ್ಚಿಸುತ್ತಾನೆ.

ನಾನು ಕೊಟ್ಟಿರುವ ಸಾರಂಶದಲ್ಲಿ ಬಣ್ಣವಿಲ್ಲ, ನಿಜ. ನೀವು ಆ ನಾಟಕವನ್ನೇ ಓದಬೇಕು. ಬೇಕಾದರೆ ಕಳಿಸಿಕೊಡುತ್ತೇನೆ. ಆ ನಾಟಕದ ನಾಲ್ಕನೇ ದೃಶ್ಯದಲ್ಲಿ ಸಿರ್ಯಾನೋವಿಗೂ ಅವನ ಮೂಗನ್ನೇ ಕುರಿತು ನೋಡುವವನೊಬ್ಬನಿಗೂ ಹೀಗೆ ಸಂಭಾಷಣೆ ನಡೆಯುತ್ತದೆ:

ಸಿರ್ಯಾನೊ: ಏನಯ್ಯಾ, ಹಾಗೆ ದುರುಗುಟ್ಟಿಕೊಂಡು ನೋಡುತ್ತೀಯೆ?

ಎದುರಾಳಿ: (ಬೆಚ್ಚಿ) ಯಾರು, ನಾನೆ?

ಸಿ: ಏನು, ಅಲ್ಲಿ ಕೋತಿ ಕುಣಿಯುತ್ತಿದೆಯೆ?

ಎ: ಇಲ್ಲಾರೀ. ನಾನು...

ಸಿ: ಏನು, ಆನೆಯ ಸೊಂಡಿಲಿನಂತೆ ಆಡುತ್ತಿದೆಯಾ?

ಎ: ಇಲ್ಲಾರೀ...

ಸಿ: ಅಥವಾ, ಗೂಬೆಯ ಕೊಕ್ಕಿನಂತೆ ಬಾಗಿದೆಯಾ?

ಎ: ನಾ... ನಾ...

ಸಿ: ಅಥವಾ, ಈ ಉಪ್ಪರಿಗೆಯ ಮೇಲೆ ಯಾವುದಾದರೂ ನೊಣ ನರ್ತನ ಮಾಡುತ್ತೆಯೊ? ಇಲ್ಲದೆ ಹೋದರೆ, ನನ್ನ ಮೂಗನ್ನು ಯಾಕೆ ಹಾಗೆ ನೋಡುತ್ತಿದ್ದೀಯೆ?

ಎ: ಇಲ್ಲಾರೀ. ನಾನು ನೋಡುತ್ತಿರಲಿಲ್ಲಾ ರೀ...

ಸಿ: ಅದು ಯಾಕೆ ನೀನು ನೋಡುವುದಿಲ್ಲ? ನೋಡಿದರೆ ಅಸಹ್ಯವಾಗುತ್ತಾ? ವಾಂತಿ ಬರುತ್ತಾ?

ಎ:ಬಣ್ಣ ಚೆನ್ನಾಗಿಲ್ಲವಾ? ಮತ್ತೆ ಯಾಕೆ ಮುಖ ಹಾಗೆ ವಿಕಾರಮಾಡಿಕೊಳ್ಳುತ್ತೀ?

—ಹೀಗೆ ಎದುರಾಳಿಯನ್ನು ಹೆದರಿಸಿ ಗದರಿಸಿ ಗೋಳು ಹುಯಿದುಕೊಂಡು ಅವನ ಮೂಗಿಗೆ ಒಂದು ತೆಗೆದು ಮಡಗುತ್ತಾನೆ, ನೋಡಿ! ಎದುರಾಳಿಯ ಮೂಗು ಅಪ್ಪಚ್ಚಿಯಾಗಿ ಹೋಗುತ್ತದೆ!

ಇಲ್ಲಿಗೆ ಇದು ಆರನೆಯ, ಹಾಗೂ ಕೊನೇ ಪಾಠ.

* * *

ಪ್ರಿಯ ಚಂದ್ರಕೀರ್ತಿ,

ಒಂದು ಪೋಲೀ's ಕೆಲಸದಿಂದ ಎಷ್ಟು ಮೇಷ್ಟರ ಕೆಲಸ ಆಯಿತು, ನೋಡಿದಿರಾ? ನನಗೆ ಇಂಥ ಸದವಕಾಶವನ್ನು ಒದಗಿಸಿ ಕೊಟ್ಟದ್ದಕ್ಕಾಗಿ ಬೇಶ್ರೀ ಅವರಿಗೆ ನನ್ನ ಅನಂತ ಧನ್ಯವಾದಗಳು.

ಇತಿ ಆಶೀರ್ವಾದಗಳು

ರಾಜರತ್ನಂ

◆ ತ(ರ)ಲೆ ◆

ಪ್ರಿಯ ಮಿತ್ರರೆ,

"ಇಂಗ್ಲೀಷ್ ಭಾಷೆಯಲ್ಲಿ ಹೇಳಿಕೆಯೊಂದಿದೆ. Tell me who your friends are, I will tell you what you are, (ನಿನ್ನ ಮಿತ್ರರಾರು ಎಂಬುದನ್ನು ಹೇಳು, ನೀನೇನು ಎಂಬುದನ್ನು ಹೇಳುತ್ತೇನೆ.) ಇದನ್ನು ಕೊಂಚ ಮಾರ್ಪಡಿಸಿ Tell me what books you read, I will tell you what your head is (ನೀನಾವ ಪುಸ್ತಕಗಳನ್ನು ಓದುತ್ತಿ ಎಂಬುದನ್ನು ಹೇಳು, ನಿನ್ನ ತಲೆ ಏನೆಂಬುದನ್ನು ಹೇಳುತ್ತೇನೆ) ಎಂಬ ಇನ್ನೊಂದು ಹೇಳಿಕೆ ಯೊಂದನ್ನು ಸೃಷ್ಟಿ ಮಾಡಬಹುದು". (ಭಯಾಗ್ರಫಿ: ಪುಟ 246) ಎಂದಿದ್ದಾರೆ, ಬೇಶ್ರೀ.

ಇದನ್ನು ಓದಿದಾಗ ನನಗೆ—'ಭಾಷೆ ತಲೆ ಬೋಳಿಸ್ತು! ಭಾವ ನೋಡಬಾರ್ದಾ, ಭಾವ!' ಅಂತ ಕೈಲಾಸಂ ಎಲ್ಲೋ ಹೇಳಿದರು ಅಂತ ನೀವು ಹೇಳಿದ್ದು ನೆನಪಾಯಿತು.

ಅವರು ಹೇಳಿರೋದೂ ನಿಜವೇ. The face is the index of the mind ಅನ್ನೋದು ಇರಬಹುದಾದರೂ, ಮುಖ ವಾಡ ಹಾಕಿಕೊಂಡಾಗ? ಅದಕ್ಕಿಂತ the book is a mirror for the mind ಅನ್ನುವುದು ಹೆಚ್ಚು ಯುಕ್ತವಾಗಿ ಕಾಣುತ್ತದೆ.

ನೀವೇ ಒಂದು ಕಂತಿನಲ್ಲಿ ಹೇಳಿರುವ ಹಾಗೆ, ಅವರವರು ತಿಂದದ್ದನ್ನು ತಾನೆ ಅವರವರು ತೇಗುಬಿಡಬೇಕು, ಅಥವಾ ಆ ಇನ್ನೊಂದು ಬಿಡಬೇಕು?

ಇಷ್ಟರಮಟ್ಟಿಗೆ ನಿಜ. ಬೇಶ್ರೀ ಅವರ ತ(ರ)ಲೆ ಇಲ್ಲದೆ ಹೋಗಿದ್ದರೆ, ನಿಮ್ಮ ತಲೆಯಲ್ಲಿ ಎಷ್ಟೆಲ್ಲಾ ತುಂಬಿಕೊಂಡಿದ್ದೀರಿ. ಎಂಬುದು ನಮಗೆ ತಿಳಿದು ಬರುತ್ತಿರಲಿಲ್ಲ. ಈಗ ನಿಮ್ಮಿಬ್ಬರ ಬರಹಗಳನ್ನು ನೋಡಿದರೆ, ನಿಮ್ಮಿಬ್ಬರ ತಲೆಗಳ ಒಳಗೆ ಏನಿದೆ ಎಂಬುದು ತಾನಾಗಿಯೇ ತಿಳಿಯುತ್ತದೆ.

—ಶೇಷಗಿರಿರಾವ್

ಇದು ನಿಮಗೆ ಹೊಸ form

ಶ್ರೀ ರಾಜರತ್ನಂ ಅವರಲ್ಲಿ ನಮಃ

"ನಿರ್ಭಯಾಗ್ರಫಿ" ಓದಿ ಮುಗಿಸಿದೆ. ನಿಮ್ಮ ಆರ್ಸೆನಲ್ಲಿಗೆ ಎಲ್ಲೆಲ್ಲಿಂದ ಶಸ್ತ್ರಾಸ್ತ್ರಗಳನ್ನು ಸರಬರಾಜು ಮಾಡಿಕೊಂಡಿದ್ದೀರಿ ಎಂಬುದನ್ನು ನೋಡಿದರೆ ವಿಸ್ಮಯವಾಗುತ್ತದೆ. ಇದು ನಿಮಗೆ ಹೊಸ Form.

ಕುಟುಕಿನ ಈ ಕಂತುಗಳು ಬಡಿಗೆಗಳಾಗಿ ಕನಲಿ ನಿಂತಿವೆ. ತ್ರಾಹಿ ಕರುಣಾಕರನೆ, ಎನ್ನದೆ ಬೇರೆ ಮಾರ್ಗವಿಲ್ಲ. ಮುಟ್ಟಿ ಮುಟ್ಟಿ ನೋಡಿಕೊಳ್ಳಬೇಕು, ಇದು ಭೀಮಸೇನನಿಗೆ ಆಗಬೇಕಾದ ಚಿಕಿತ್ಸೆ.

More power to your elbow; more sense to men on earth. ಚಕ್ರವರ್ತಿ ಬಳಗದವರಿಗೆ ಕೃತಜ್ಞತೆ.

The moving finger writes and having writ moves on... etc.., ನಿಮ್ಮ ಲೇಖನಿಯ ಮೊನೆ ಕರೆಕಪಿಲೆ. ಅಮೃತ ಕರೆಯಲಿ. ಆದರೆ, ಮುಳ್ಳನ್ನು ಏಕೆ ನಿರ್ಮಿಸಬೇಕಾಗಿತ್ತೊ ಸೃಷ್ಟಿಕರ್ತ? ಅದು ಅವನ ರಕ್ಷಣೋಪಾಯವಿರಬಹುದು.

ಮನೆಯಲ್ಲಿ ಲಕ್ಷ್ಮಿಯನ್ನು ಕೂಡಿ ಒಲೆಗೆ ಊದುಕೊಳವಿ ಊದುತ್ತ ಲೋಕಸಂರಕ್ಷಕನಾದ ವಿಷ್ಣು ನೆರವಾಗಿ ಬಂದದ್ದು, ಊಮಾ ಲಕ್ಷ್ಮಿ ಸಂವಾದ— ಇವು ಮೋಜಿನ ಪ್ರಸಂಗಗಳು.

ಹಂದಿ ಸೋಲಿಸಿದ ಹುಲಿಯ ಪಾಡು—ನಾಯಿಪಾಡು.

ಶಾಮಂಣ—ಗೆಳೆಯರ ಕಾಗದ ಪತ್ರವೂ ಚೆನ್ನಾಗಿದೆ.

ಓದಿದ್ದೇನಲ್ಲಾ? ಪುನರಪಿ ನಮಃ.

—ಮಲ್ಲಿಕಾರ್ಜುನಯ್ಯ

♦ Bull's Eye ♦

Respected Sir,

The other day my friend Biddu sent me the 5 instalments of your latest book "ನಿರ್ಭಯಾಗ್ರಫಿ". From him I learnt the sorry background of this vicious slander against you. Of course no one who knows you believe this muck.

I am proud of you, Sir, as an old pupil. You have encountered this in the right spirit. The way you have made mince-meat of the unwarranted accusations and allegations is simply wonderful. Everytime you have pulled the trigger of your deadly humour you have hit the bull's eye.

Of course the pain and travail are yours, but the gain no doubt is ours.

Kindly send me a complete set of these book-lets by V P P for my personal collection.

Thanking you,

Yours respectfully,

Antony Appa.

◆ ಬಾಬಾಬುಡನ್ ಬೆಕ್ಕು ◆

ಪೂಜ್ಯ ಗುರುಗಳೆ,

ಕಾಳಿಂಗನ ಹೆಡೆಗಳನ್ನು ಕೃಷ್ಣ ತುಳಿದು ನಾಟ್ಯವಾಡಿದಹಾಗೆ, ನಿಮ್ಮ ಹಾಸ್ಯದ foot-work ಅನ್ಯಾದೃಶವಾಗಿದೆ. ನಿಮ್ಮ ಎದುರಿಗೆ ಬೇಶ್ರೀ "ಬಾಬಾಬುಡನ್ ಬೆಕ್ಕು".

ಲೂಯಿ ಕೆರೋಲನ "ಆಲಿಸ್ ಇನ್ ವಂಡರ್‌ಲ್ಯಾಂಡ್" ನಲ್ಲಿ ಆ Cheshire Cat ಬರುತ್ತೆ ನೋಡಿ: ಅದು ಇಡಿಯಾಗಿ ಯಾವಾಗಲೂ ಕಾಣಿಸಿಕೊಂಡದ್ದಿಲ್ಲ; ಮೀಸೆ ಮಾತ್ರ, ಮುಖ ಮಾತ್ರ, ಬಾಲ ಮಾತ್ರ, ಹೀಗೆ ಕಂಡ ಕಂಡವಾಗಿ ಕಾಣಿಸಿಕೊಂಡರೂ, ಅದು ಮಾಯವಾಗಿ ಹೋದ ಮೇಲೂ, ಅದರ grin ಮಾತ್ರ ನಿಚ್ಚಳವಾಗಿ ಕಾಣಿಸಿಕೊಳ್ಳುತ್ತಿತ್ತಂತೆ! ಅದರಿಂದಾಗಿ, ಯಾರಾದರೂ ಮೂರು ಹೊತ್ತೂ ಹಲ್ಲು ಕಿರಿಯುತ್ತಿದ್ದರೆ, ಅವರನ್ನು ಇಂಗ್ಲಿಷಿನಲ್ಲಿ Cheshire Cat ಎಂದು ಕರೆಯುತ್ತಾರೆ. ಇದನ್ನು ಶ್ರೀ. ನಾ. ಕಸ್ತೂರಿಯವರು ತಮ್ಮ "ಪಾತಾಳದಲ್ಲಿ ಪಾಪಚ್ಚಿ"ಯಲ್ಲಿ "ಬಾಬಾ ಬುಡನ್ ಬೆಕ್ಕು" ಎಂದು ಕರೆದಿದ್ದಾರೆ.

ನಿಮ್ಮ ಸ್ವಾರಸ್ಯವಾದ "ಮಧ್ಯಮವ್ಯಾಯೋಗ"ವನ್ನು ಕ್ಲೋಸಾಗಿ ಫಾಲೊ ಮಾಡಿರುವ ನನಗೆ, ನಿಮ್ಮ ಎದುರಾಳಿಯ "performance" ನೋಡಿದಾಗ, ಚಿಕ್ಕಂದಿನಲ್ಲಿ ಬಾಯಿಪಾಠ

ಮಾಡಿದ್ದ ನಿಮ್ಮ ಒಂದು ಶಿಶುಗೀತೆ ನೆನಪಿಗೆ ಬರುತ್ತಿದೆ:

ಕಾಗೆ ಅತ್ತರದೇ ಸದ್ದು : ಕಾ! ಕಾ! ಕಾ!
ಕಾಗೆ ನಕ್ಕರದೇ ಸದ್ದು : ಕಾ! ಕಾ! ಕಾ!
ಆದರದಕೆ ಬಹಳ ಜಂಬ, ತಲೆಯೆ ನಿಲ್ಲದು!
ತನಗೆ ಮಾತು ಬಾರದೆನಲು ಕೇಳಲೊಲ್ಲದು!

ತಪ್ಪಿದ್ದರೆ ದಯಮಾಡಿ ತಿದ್ದಬೇಕು.

—**ಸುಬ್ಬುಕೃಷ್ಣ**

◆ ಮೀಸೆ ಮತ್ತು ಮಣ್ಣು ◆

ಪ್ರಿಯ ರಾಜಂಣ,

ಜೆಟ್ಟಿ "ಬಿದ್ದರೂ ಮೀಸೆ ಮಣ್ಣಾಗಲಿಲ್ಲ" ಎಂದು ತೋಳು ತೊಡೆತಟ್ಟಿಕೊಂಡನಂತೆ. ಅದರ ಹಾಗಾಯಿತು ಈಗ ಅವರಿಗೂ ನಿನಗೂ ನಡೆದ ಆ-ಸಮ ವಿಷಮವಾದ ಮಾತಿನ ಕುಸ್ತಿ.

ಬೆನ್ನು ಪೂರ್ತಿ ಭೂಮಿಗೆ ಮುತ್ತುಕೊಟ್ಟು ತಬ್ಬಿಕೊಂಡು ಬಿದ್ದಿರುವಾಗ, ನೀನು ಎದೆ ಮೇಲೆ ಕೂತು pindown ಮಾಡಿರುವಾಗ, ಮೀಸೆ ಮಣ್ಣಾಗುವುದಕ್ಕೆ ಅವಕಾಶವಾದರೂ ಎಲ್ಲಿ ಬಂತು? ಇಷ್ಟರಮೇಲೂ ನೀನು ಅವರನ್ನು ಎತ್ತಿ ಕುಕ್ಕಿದ್ದು ಮಣ್ಣಿನ ನೆಲ ಅಲ್ಲವಲ್ಲ! ಕಲ್ಲಿನ ಚಪ್ಪಡಿ ತಾನೆ!

ಹಿಂದೆ ಒಂದು ಸಲ ನೀನು 'ಪಡಿಸು' ಮತ್ತು 'ಪಡಲ್ಪಡಿಸು' ಎರಡಕ್ಕೂ ಇರುವ ವ್ಯತ್ಯಾಸವನ್ನು ಸೋದಾಹರಣವಾಗಿ ವಿವರಿಸಿದ್ದೆ. ಈಗ ಅದಕ್ಕೆ ಇನ್ನೊಂದು ದೃಷ್ಟಾಂತವನ್ನು ನೋಡಿದ್ದಾಯಿತು. ನಿನ್ನದು ಕಪಿಮುಷ್ಟಿಕಣಯ್ಯ. ನಿನ್ನ ಕೈಗೆ ಸಿಕ್ಕಿಹಾಕಿಕೊಂಡವನು ಚೇತರಿಸಿಕೊಂಡು ಮೇಲೇಳುವುದು ಕಷ್ಟ.

ಇಷ್ಟು ಸಾಕು ಅಂತ ಕಾಣುತ್ತೆ. ಬಿಟ್ಟುಬಿಡು.

ನಿನ್ನವನೇ ಆದ

—**ಶಾಮಂಣ**

◆ ಬೀರ್ ಮತ್ತು ಚಿಕನ್ ◆

ಸರ್,

ಬೀರ್ ಕುಡೀಬಾರದು; ಕುಡಿಯೋಕೆ ಷುರುಮಾಡಿದ ಮೇಲೆ ಬಾಟಲ್‌ನೂ ಬಿಡಬಾರದು.

ಚಿಕನ್ ತಿನ್ನಬಾರದು; ತಿನ್ನೋಕೆ ಷುರು ಮಾಡಿದಮೇಲೆ, ಅದರ ಮೂಳೆ ರೆಕ್ಕೆ ಪುಕ್ಕ ಎಲ್ಲಾನೂ ಕಿಲೀನ್ ಮಾಡಿಬಿಡಬೇಕು,

ಯೆಂಡಕುಡುಕರು ನೀವು. ನಿಮಗೆ ಯೇಳಿಕೊಡಬೇಕಾ?

ಕಂತಿನ ಮೇಲೆ ಕಂತು ಬಜಾಯಿಸಿ, ನಿಂತಿದ್ದೋರ್ನ ಮಲಗಿಸಿ ಬಿಟ್ಟಿದೀರಿ. ನಿಮಗೆ ವಯಸ್ಸಾಯ್ತು ಅಂದರೆ ನಂಬೋಕೇ ಆಗೊಲ್ಲ.

—ಕರಿಯಪ್ಪ

ಲಂಕಾದಹನ

"ನಿರ್ಭಯಾಗ್ರಫಿ" ಎಂಬ ಆರು ಕಂತುಗಳನ್ನು ಬರೆದು
ಷಟ್ಖಂಡಮಂಡಲೇಶ್ವರನಾದ ಅಯ್ಯಾ ಚಕ್ರವರ್ತಿ ವಜ್ರನೆ,
ವಜ್ರದ ಹರಳೊಳಡಕವಾಗಿರುವ
ದ್ರವಾಗ್ನಿ ಯಂತಾಘಾಲಗುಲ್ಫಂ—

ಪುಟಪುಟಗಳಲ್ಲೂ ತುಂಬಿ ತುಳುಕುತ್ತಿರುವುದು ಇದೇನಿದು? ಆರಂಭಿಸಿದಾಗ 'ಲಾಲಾರಸ' ಜೊಲ್ಲು ಸುರಿಸುತ್ತ ಹೊರಟದ್ದು ಈಗ 'ಲಾವಾರಸ'ದಂತೆ ಸುಡುತ್ತಿದೆಯಲ್ಲಾ!

ಆಂಜನೇಯನ ಬಾಲ ಬೆಳೆದ ಹಾಗೆ ಕಂತಿನ ಹಿಂದೆ ಕಂತು! ಇದೇನಿದು—ಲಂಕಾದಹನವೇ?

ನಡೆಯಲಿ! He has asked for it!

—ರಂಗಣ್ಣ

ವ್ಯಂಗ್ಯ ವೈಭವ

ಸರ್,

ನಿಮ್ಮ "ನಿರ್ಭಯಾಗ್ರಫಿ"ಯ ಕಂತುಗಳನ್ನು ಕೂಡಿಸಿ, ಒಂದು volume ಮಾಡುತ್ತಿದ್ದೀರೆಂದು ಕೇಳಿದೆ. ಸಂತೋಷ.

ಕೈಲಾಸಂ ಅವರು ತಮ್ಮ ಒಂದೊಂದು ಕೃತಿಗೂ ಒಂದಕ್ಕಿಂತ ಹೆಚ್ಚು ಹೆಸರು ಇಡುತ್ತಿದ್ದರು. ಅವರಂತೆಯೇ ನೀವಾದರೂ ನಿಮ್ಮ "ನಿರ್ಭಯಾಗ್ರಫಿ"ಗೆ—

"ವ್ಯಂಗ್ಯವೈಭವ"

ಎಂಬ ಇನ್ನೊಂದು ಹೆಸರಿಡಬಹುದೆಂದು ನನ್ನ ನಮ್ರವಾದ ಸೂಚನೆ ಏಕೆಂದರೆ—ಒಬ್ಬರೇ ಲೇಖಕರ ಒಂದೇ ಕೃತಿಯಲ್ಲಿ ಇಷ್ಟು ಬಗೆಯಾದ ವ್ಯಂಗ್ಯ ತುಂಬಿತುಳುಕಿದ್ದನ್ನು ನಾನು ಬೇರೆ ಎಲ್ಲಿಯೂ ನೋಡಿಲ್ಲ.

—ಫಾಲಾಕ್ಷ

ಪ್ರಕ್ಷಾಲನ

"ಕನ್ನಡದಲ್ಲಿ ಆತ್ಮಚರಿತ್ರೆಗಳೇ ಇಲ್ಲ' ಎಂಬ ಮಹಾವಾಕ್ಯದಿಂದ ಆರಂಭವಾಗುವ 'ಭಯಾಗ್ರಫಿ'ಯನ್ನು ಓದಿದೆ.

ಅನಂತರ ನಮ್ಮ ಕಾರಂತರು ಬರೆದಿರುವ "ಹುಚ್ಚು ಮನಸಿನ ಹತ್ತು ಮುಖಗಳು" ಮತ್ತೊಮ್ಮೆ ಓದಿದೆ.

ಅವಾದಮೇಲೆ, ತಮ್ಮ 'ನಿರ್ಭಯಾಗ್ರಫಿ'ಯ ಐದು ಕಂತುಗಳನ್ನು ಇನ್ನೊಂದು ಸಲ ಓದಿದೆ.

ಬಹಿರ್ದೇಶಕ್ಕೆ ಹೋಗಿ ಬಂದ ಮೇಲೆ ಕೈ ಕಾಲು ಮುಖ ತೊಳೆದು ಕೊಳ್ಳುವುದಿಲ್ಲವೇ, ಆ ಅನುಭವ ಆಯಿತು. ಮನಸ್ಸು ಹಗುರವಾಯಿತು.

—ಅನಂತರಾವ

ಜಿ. ಪಿ. ರಾಜರತ್ನಂ ಅಂತರ್ದರ್ಶನ - 8

ಸರ್ ರಾಜರತ್ನಂ

ಇದು

ಜಿ. ಪಿ. ರಾಜರತ್ನಂ ಅವರ

ನಿರ್ಭಯಾಗ್ರಫಿ

ಎಂಟನೇ ಕಂತು

ಸಂಪಾದಕನ ಅರಿಕೆ

"ಸಾಯಿ ಸಮಯ"ಕ್ಕೆ ಪೂರಕವಾಗಿ—

ಪುಟ 363ರಿಂದ ಕಾಣುವ "ಆಡಿದಂತೆ ಮಾಡುತಾರಾ?" ಎಂಬುದು ಶ್ರೀ ಸತ್ಯಸಾಯಿ ಬಾಬಾ ಚಿಕ್ಕವರಾಗಿದ್ದಾಗ ಬರೆದು ಆಡಿಸಿದ ಒಂದು ತೆಲುಗು ನಾಟಕದ ಕಥಾರೂಪ.

—ಚಂದ್ರಕೀರ್ತಿ

ಪುಸ್ತಕದ ಒಳಗೆ

◆ ಸರ್ ರಾಜರತ್ನಂ ◆

ಇದು ನ್ಯಾಯವಾಗಿ "ಸಾರ್ ರಾಜರತ್ನಂ" ಎಂದು ಇರಬೇಕು. ಮೊದಲೇ ಹಾಗೆ ಬರೆದುಬಿಟ್ಟರೆ, "ಇವನಿಗೆ ಇಷ್ಟು ಕೂಡ ಇಂಗ್ಲೀಷ್ ಗೊತ್ತಿಲ್ಲವಲ್ಲಾ!" ಎಂಬ 'ಅಪಕ್ಷಾತಿ'ಗೆ (ಇದು 'ಅಪಖ್ಯಾತಿ' ಎಂಬುದರ ಅಪಭ್ರಂಶ) ಗುರಿಯಾಗಬಹುದೆಂಬ ಭೀತಿಯಿಂದ 'ಸರ್' ಎಂದೇ ಬರೆದು ಬಿಟ್ಟಿದ್ದೇನೆ.

ಅಲ್ಲದೆ ಇನ್ನೊಂದು ಗಮನಿಸಬೇಕಾದ್ದು ಏನೆಂದರೆ— ನಾವು ಕನ್ನಡಿಗರು 'ಸಾರ್' ಎಂದು ಉಚ್ಚಾರಣೆ ಮಾಡಿದರೂ ಬರೆಯುವಾಗ 'Sir' ಎಂದು ಬರೆಯುತ್ತೇವೆಯೇ ಹೊರತು, 'Sar' ಎಂದು ಬರೆಯುವುದು ಕಡಮೆ.

> ಆದರೆ—'Sir' ಎಂಬ ಪದ ಆಧುನಿಕ ತಮಿಳಿನಲ್ಲಿ ಶಾರ್, ಶಾರು ಎಂದೆಲ್ಲ ವಿಕೃತಿ ಹೊಂದಿ ಆಧುನಿಕ ತಮಿಳು ಪ್ರಯೋಗದಲ್ಲಿ ಗೌರವಾರ್ಥವಾಗಿ ಉಪಯೋಗವಾಗುತ್ತಿದೆ. ಲೈಂಗಿಕ ಪ್ರತ್ಯೇಕತೆಯನ್ನು ಕಳೆದುಕೊಂಡಿದೆ. ಉದಾ: ಮಿಸೆಸ್ ಶಾರು. ಲೇಡಿ ಶಾರು, ಸ್ವೀಪರ್ ಶಾರು, ಮಿಸ್ಟರ್ ಶಾರು, ಜಂಟಲ್ ಮನ್ ಶಾರು, ಲೆಕ್ಚರರ್ ಶಾರು, ಪ್ಯೂನ್ ಶಾರು, ಇತ್ಯಾದಿ. (ಬಿ. ಜಿ. ಎಲ್. ಸ್ವಾಮಿ: "ಕಾಲೇಜು ತರಂಗ"-ಪುಟ 208, ಅಡಿ ಟಿಪ್ಪಣಿ.)

ನಮ್ಮಲ್ಲಿ ಇನ್ನೂ ಇಷ್ಟು ಕೆಟ್ಟಿಲ್ಲ. ಅವರು "ಕುಂಟಪ್ಪ" ಎಂದು ಬರೆಯುತ್ತಾರೆ, "ಗುಂಡಪ್ಪ" ಎಂದು ಓದುತ್ತಾರೆ. ಒಂದು ಸಲ ನಮ್ಮ ವ್ಯಾಯಮಶಾಲೆಗೆ ಬರುತ್ತಿದ್ದ ತಂಗವೇಲು— "ವಾದ್ದಿಯಾರ್ ಶೊನ್ನೆ ವಣ್ಣಂ ಲಯಿಂಗ್ ಬ್ರೀಡಿಂಗ್, ಸ್ಟ್ಯಾಂಡಿಂಗ್ ಬ್ರೀಡಿಂಗ್ ಎಲ್ಲಾ ಶೆಯ್ದು ಕೊಂಡಿರ್ಕೆಂ" ಎಂದು ಹೇಳಿದ. ಅವನ ಮನಸ್ಸಿನಲ್ಲಿದ್ದುದು Breathing, ಅವನ ನಾಲಗೆಗೆ ಬಂದದ್ದು. Breeding! ಇನ್ನೊಂದು ಸಲ ಯಾರಿಗೋ "ಪದ್ಮಶ್ರೀ" ಬಂದುದನ್ನು ಕೇಳಿ, ನಮ್ಮ ಕಣ್ಣ—"ಅಡಾ ಪಾವೀ, ಅವನಕ್ಕುಂ ವಂದುವಿಟ್ಟುದಾ ಬದ್‌ಮಾಷ್‌ರೀ!" ಅಂದೇಬಿಟ್ಟ. ಅದನ್ನ ಕೇಳಿದವರು ನಾವೆಲ್ಲಾ ಯಾಕೆ ನಕ್ಕೆವು ಎಂಬುದು ಅವನಿಗೆ ಬಹಳ ಹೊತ್ತು ಗೋತ್ತೇ ಆಗಲಿಲ್ಲ.

ನಮ್ಮ ಕನ್ನಡದಲ್ಲಿ ಹೀಗೆಲ್ಲಾ ಆಗೋಕೆ ಅವಕಾಶ ಕಡಮೆ, 'ಸರ್' ಅನ್ನೋದು 'ಸಾರ್' ಆಗಬಹುದು; ಉಕಾರಾತ್ಮಕವಾದ ಒಂದು ಕೊಂಬನ್ನು ತಗುಲಿಸಿಕೊಂಡು 'ಸಾರು' ಆಗಬಹುದು.

ಆಗಲೇಳಿ. ಬೇಳೇ ಸಾರು, ಹುರಳಿಸಾರು, ಮೆಣಸಿನಸಾರು, ಕಟ್ಟುಸಾರು, ಗೊಡ್ಡುಸಾರು ವಗ್ಯೆರೆ ಸಾರುಗಳ ಜೊತೆಗೆ ಇದೂ ಒಂದು ಕನ್ನಡ ಸಾರು ಸೇರಿಕೊಂಡರೆ ನಷ್ಟವೇನೂ ಇಲ್ಲ.

ನಾನು ಇಂಥ ಒಬ್ಬ 'ಸಾರು'. ಗೊಡ್ಡುಸಾರು ಖಂಡಿತ ಅಲ್ಲ. ಉಪ್ಪು ಖಾರ, ಮೆಣಸಿನಪುಡಿ ಹದವಾಗಿ ಸೇರಿ, ಬೇಳೆ ಚೆನ್ನಾಗಿ ಬೆಂದು, ಎಷ್ಟು ಕುದಿಯಬೇಕೋ ಅಷ್ಟೇ ಕುದಿಸಿ, ಕಡೆಗೆ ಒಗ್ಗರಣೆ ಹಾಕಿ, ಬಡಿಸಿಕೊಳ್ಳುವುದಕ್ಕೆ ಸಿದ್ಧವಾದ ಸಾರು. ಒಂದೊಂದು ಸಲ ನಮ್ಮ ತಮಿಳು ಸೋದರರು ಖಾಯಿಷ್ಪುಪಡುವ 'ತಿಳಿವುರಸಂ'

ಕೂಡ ನಾನು ಆಗುವುದುಂಟು.

ನಾಕು ವರ್ಷಗಳ ಹಿಂದೆ ನನಗೆ "ಚಕ್ರವರ್ತಿ ವಜ್ರ" ಪ್ರಶಸ್ತಿ ಬಂದ ಮೇಲೆ ನೂರಾರು ಮಿತ್ರರು ನನಗೆ ಅಭಿನಂದನೆ(ಅಭಿನಿಂದನೆ)ಗಳನ್ನು ಬರೆದಿದ್ದಾರೆ. ಅವರಲ್ಲಿ ಮುಕ್ಕಾಲು ಮೂರುವೀಸೆ ಜನ, "ಡಿಯರ್ ಸರ್, ಮೈಡಿಯರ್ ಸರ್, ಬಿಲವೆಡ್ ಸರ್. ರೆಸ್ಪೆಕ್ಟೆಡ್ ಸರ್" ಎಂದು ಮೇಲಿಂದ ಮೇಲೆ ನನಗೆ 'ಸರ್' ಸಿಕ್ಕಿಸಿದ್ದಾರೆ.

ಯಾರೋ ಒಬ್ಬ ಯಃಕಶ್ಚಿತರು ಒಂದೇ ಒಂದು ಬಾರಿ ಒಂದು ಚೊತ್ತೆ "ಚಕ್ರವರ್ತಿ ವಜ್ರ"ವನ್ನು ಎಸೆದರೆ, ಅದನ್ನೇ ಬಿಡದೆ ಭದ್ರವಾಗಿ ತಬ್ಬಿಕೊಂಡಿರುವ ನಾನು—

ನೂರಾರು ಜನ ಪ್ರೀತಿ ವಿಶ್ವಾಸಗಳಿಂದ ಅಡಿಗಡಿಗೂ ನೀಡುತ್ತಿರುವ 'ಸರ್'ಗಳ ಸರವನ್ನು ಸ್ವೀಕಾರ ಮಾಡಿದೆಹೋದರೆ, ನನಗೆ ನಾನೇ ವಂಚನೆ ಮಾಡಿಕೊಂಡ ಹಾಗಾಗುತ್ತದೆ. ಅಲ್ಲವಾ?

ಆದ ಕಾರಣದಿಂದ—ನನ್ನ "ನಿರ್ಭಯಾಗ್ರಫಿ"ಯ ಮೊದಲನೇ ಕಂತಿಗೆ "ಚಕ್ರವರ್ತಿ ವಜ್ರ" ಎಂದು ಹೆಸರು ಇಟ್ಟಹಾಗೆ, ಈ ಕೊನೆಯ ಕಂತಿಗೆ "ಸರ್ ರಾಜರತ್ನಂ" ಎಂದು ಹೆಸರಿಟ್ಟು—

ಇದನ್ನು ಹಾಸ್ಯಪ್ರಿಯರಿಗೆ ಸಮರ್ಪಿಸುತ್ತೇನೆ.

೧-೪-೧೯೭೭. ಏಪ್ರಿಲ್ ಮೂರ್ಖರ ದಿವಸ.

—ಜಿ. ಪಿ. ರಾಜರತ್ನಂ

◆ ಯುರೇಕಾ ◆

ಸರ್,

ಆರ್ಕಿಮಿಡೀಸನ ಹಾಗೆ ಈಗ ನಾನಾದರೂ "ಯುರೇಕಾ!" ಎಂದು ಕೂಗಿಕೊಳ್ಳುತ್ತಾ ಬಂದು, ಈ ಕಾಗದವನ್ನು ಬರೆಯಲು ಕೂತಿದ್ದೇನೆ.

> "ಬೇಶ್ರೀ ಬೀಮಂಣನವರು ಇದ್ದಕ್ಕಿದ್ದಂತೆ ನನ್ನ ಮೇಲೆ ಏಕೆ ಹೀಗೆ ಬಿಗಡಾಯಿಸಿಕೊಂಡರು? ನಾನು ಕಷ್ಟಪಟ್ಟು ಸಂಪಾದಿಸಿಕೊಂಡು ಬಂದಿರುವ 'ಗುಣ' ಗಳು ಅವರ ಮನಸ್ಸಿನ ಕನ್ನಡಿಯಲ್ಲಿ ಅದು ಹೇಗೆ 'ದೋಷ'ಗಳಾದುವು? ಅನಕೃ ಅವರ ಸ್ಮಾರಕಕ್ಕಾಗಿ ನಾನು ನನ್ನ ಕೈಲಾದ್ದನ್ನು ಮಾಡುತ್ತಿದ್ದರೂ, ಕಾಲವಾದ ಅವರನ್ನು ಕುರಿತು ಮಾತನಾಡುವುದಕ್ಕೆ ನಾನು 200 ರೂಪಾಯಿ ಕೇಳಿದೆನೆಂಬ ಸುಳ್ಳು ಇವರ ತಲೆಯಲ್ಲಿ ಹೇಗೆ ಸೃಷ್ಟಿಯಾಯಿತು? ನಾನು ವಿಕ್ರಮ ಅಲ್ಲದಿದ್ದರೂ ಈ ಭೀಮಭೇತಾಳ ನನ್ನ ಬೆನ್ನನ್ನು ಏಕೆ ಹತ್ತಿತ್ತು?" ಎಂದು ನೀವು ಕಳೆದ ನಾಲ್ಕು ವರ್ಷಗಳಿಂದಲೂ ತಲೆಚೆಚ್ಚಿಕೊಳ್ಳುತ್ತಿರಲಿಲ್ಲವೇ—
>
> ಅದಕ್ಕೆ ಸಮರ್ಪಕವಾದ ಉತ್ತರ ನನಗೆ ಈಗ ತಾನೆ ಸಿಕ್ಕಿದೆ.

ಬೇಶ್ರೀ ಅವರು ತಮ್ಮ 'ಭಯಾಗ್ರಫಿ'ಯ 'ಮೆಟ್ಟಿಲೇರುವ ಮುನ್ನ'—'ಮೇಜಿನ ಮುಂದು ಕೂತು'(ಪುಟ 18) ಬರೆಯುವಾಗ, ಅವರ ಒಳಗಿದ್ದದ್ದು ಹೀಗೆ ಹೊರಕ್ಕೆ ಬಂದಿದೆ:-

> "ಹಾಸ್ಯ ಸಾಹಿತಿಯಾದವನು ಸಮಾಜದ ವಿಮರ್ಶಕನಾಗಲೇ ಬೇಕು. ದೊಡ್ಡವರ ಸಣಾತನ, ಜಾಣರ ದಡ್ಡತನ, ಪದವೀಧರರ ಮೌಢ್ಯ, ಪರಿಶುದ್ಧರೆನ್ನುವವರ ಕೊಳೆ ಅವನ ಕಣ್ಣಿಗೆ ಬೀಳುತ್ತವೆ. ಇದನ್ನು ಕಂಡಾಗ ಅವನಿಗಾಗುವ ಸಂತೋಷ ಅದೆಷ್ಟು? ಹೊಲಸನ್ನು ಹುಡುಕುವುದೇ ಅವನಿಗೆ ಅಭ್ಯಾಸವಾಗುತ್ತದೆ. ಎಲ್ಲವನ್ನೂ ಸಂಶಯದ ದೃಷ್ಟಿಯಿಂದ ನೋಡುತ್ತಾನೆ. ಅಲ್ಲೇನೂ ಸಿಕ್ಕದಿದ್ದಾಗ ಅವನಿಗೆ ನಿರಾಶೆ. ಆಗ ತನ್ನ ಸಾಹಿತ್ಯಕ್ಕಾಗಿ ಅಲ್ಲಿಲ್ಲದ ದೋಷವನ್ನು ಸೃಷ್ಟಿಸಿಕೊಳ್ಳುತ್ತಾನೆ. ಸೌಂದರ್ಯ, ಸಂಪನ್ನತೆ, ಒಳಿತು ಮುಂತಾದುವಕ್ಕೆ ಅವನು ಕುರುಡ".

ಈ ಹಾಸ್ಯ ಸಾಹಿತಿ ಸಮಾಜದಲ್ಲಿ ಕಂಡುಬರುವ ಕೊಳೆಗಳನ್ನು ನೋಡಿ ನೋಡಿ ಎಷ್ಟೋ ಸಂತೋಷಪಟ್ಟು—"ಹೊಲಸನ್ನು ಹುಡುಕುವುದೇ ಅವನಿಗೆ ಅಭ್ಯಾಸವಾಗುತ್ತದೆ. ಎಲ್ಲವನ್ನೂ ಸಂಶಯದ ದೃಷ್ಟಿಯಿಂದ ನೋಡುತ್ತಾನೆ. ಅಲ್ಲೇನೂ ಸಿಕ್ಕದಿದ್ದರೆ ಅವನಿಗೆ ನಿರಾಶೆ" ಆಗುತ್ತದಂತೆ.

ಈ "ಸತ್ಯಶೋಧನೆ"ಯನ್ನು ಓದಿದರೆ 'ಅಯ್ಯೋ ಪಾಪ!' ಅನ್ನಿಸುತ್ತೆ ಅಲ್ಲಾ? ಎಂಥ ಸಂತೋಷ! ಎಂಥ ನಿರಾಶೆ!

ಮುಂದೆ ನೋಡಿ: "ಆಗ ತನ್ನ ಸಾಹಿತ್ಯಕ್ಕಾಗಿ ಅಲ್ಲಿಲ್ಲದ

ದೋಷಗಳನ್ನು ಸೃಷ್ಟಿಸಿಕೊಳ್ಳುತ್ತಾನೆ.'' ಈಗ ಅರ್ಥವಾಯಿತಲ್ಲಾ, ಸಾರ್, ಅವರು ಯಾಕೆ ನಿಮ್ಮ ಮೇಲೆ ಸುಳ್ಳು ಅಪಪ್ರಚಾರ ಮಾಡುತಾರೆ ಅನ್ನೋದು?

ಅದರ ಮುಂದೆ ನೋಡಿ: "ಸೌಂದರ್ಯ, ಸಂಪನ್ನತೆ, ಒಳಿತು ಮುಂತಾದುವಕ್ಕೆ ಅವನು ಕುರುಡ". ಅಂತಾರೆ.

'ನಗ್ನಸತ್ಯ'ವೆಂದರೆ ಇದು! ನೀವು ಹಿಂದೆ ಒಂದು ಕಾಗದದಲ್ಲಿ ಬರೆದ ಹಾಗೆ—ತಾಳೀ ಕಟ್ಟಿಸಿಕೊಂಡು ಸುಮಂಗಲಿಯರಾಗಿರುವ ಸಾತು ಪಾತುಗಳನ್ನು ಕಂಡು, ಗಂಡನ್ನ ಕಳಕೊಂಡನಾಗತ್ತೆ—"ಅದೇನು ತಾಳಿ ಕಟ್ಕೊಂಡ ಸುಖಾನೋ ನಾ ಬೇರೆ ಕಾಣೆ" ಅಂದ ಹಾಗೆ, ತಮಗಿರೋ ಸೌಂದರ್ಯ, ಸಂಪನ್ನತೆ, ಒಳಿತು ತನಗಿಲ್ಲ ಅನ್ನೋದನ್ನ ಅರಿತುಕೊಂಡು, ಅಸಹನೆಯಿಂದ ತಮ್ಮನ್ನ 'ಚಕ್ರವರ್ತಿ ವಜ್ರ' ಅಂತ ಲೇವಡಿ ಮಾಡಿದ್ದನ್ನ ನೋಡಿದರೆ—'ಅಯ್ಯೋ ಪಾಪ! ಅನ್ನಿಸುತ್ತೆ, ಅಲ್ಲವೇ?

Now that he has come out with an open confession, let us forgive him and forget it.

ಚಂದ್ರಕೀರ್ತಿ

Dear ಚಂದ್ರಕೀರ್ತಿ,

Amen. Let us forgive him and forget it. ಸುಸ್ತಾದವರನ್ನು ಸತಾಯಿಸಬಾರದು.

1-4-1977 April Fool's Day.

—ರಾಜರತ್ನಂ

ಆಡಿದಂತೆ ಮಾಡುತಾರಾ?

ಕೃಷ್ಣ ಅಂತ ಒಬ್ಬ ಒಳ್ಳೆಯ ಹುಡುಗ. ಅವನಿಗೆ —"ಮಾತೃ ದೇವೊ ಭವ, ಪಿತೃದೇವೋ ಭವ, ಆಚಾರ್ಯದೇವೋ ಭವ" ಅಂತ ಚಿಕ್ಕಂದಿನಲ್ಲೇ ಹೇಳಿಕೊಟ್ಟಿದ್ದರು. ದೊಡ್ಡವನಾದ ಮೇಲೆ ಅವನಿಗೆ ಅದರ ಅರ್ಥ ಹೇಳಿಕೊಟ್ಟಿದ್ದರು.

"ತಾಯಿಯನ್ನು ದೇವರೆಂದು ಭಾವಿಸು, ಆಕೆ ಹೇಳಿದಂತೆ ಕೇಳು. ತಂದೆಯನ್ನು ದೇವರೆಂದು ಭಾವಿಸು, ಅವರು ಹೇಳಿದಂತೆ ಕೇಳು. ಗುರುವನ್ನು ದೇವರು ಎಂದು ಭಾವಿಸು. ಅವರು ಹೇಳಿದಂತೆ ಕೇಳು" ಎಂದಿದ್ದರು.

ಕೃಷ್ಣ ಅವರು ಹೇಳಿಕೊಟ್ಟುದನ್ನು ಅರ್ಥ ಮಾಡಿಕೊಂಡು, ಅವರಿಗೆ ವಿಧೇಯನಾಗಿರಬೇಕೆಂದು ನಿಶ್ಚಯ ಮಾಡಿದ. 'ಹೇಳಿ ದಂತೆ ಕೇಳು' ಎಂದರೆ 'ಹೇಳಿದಂತೆ ಮಾಡು' ಎಂದು ಅರ್ಥ ಮಾಡಿಕೊಂಡ.

* * *

ಒಂದು ದಿನ ಕೃಷ್ಣನ ತಾಯಿ ಮನೆಯಲ್ಲಿ ಭಾಗವತ ಓದುತ್ತಿದ್ದರು. ಅದರಲ್ಲಿ 'ದಾನ ಮಾಡುವುದು ಒಳ್ಳೆಯದು' ಎಂದು ಹೇಳುವ ಕೆಲವು ಶ್ಲೋಕಗಳನ್ನು ಓದಿ, ಅಲ್ಲಿಗೆ ಬಂದಿದ್ದ ತಮ್ಮ ನೆರಹೊರೆಯುವರಿಗೆ ಅದನ್ನು ವಿವರಿಸುತ್ತಿದ್ದರು.

"ಸರಿಯಾದ ಪಾತ್ರ ನೋಡಿ ದಾನ ಮಾಡಬೇಕು. ಅಂಗ ವಿಕಲರಿಗೆ. ಬಡವರಿಗೆ, ವೃದ್ಧರಿಗೆ ದಾನಮಾಡುವುದು ಒಳ್ಳೆಯದು. ದುಡಿಯುವ ಶಕ್ತಿ ಇದ್ದವರಿಗೆ ದಾನ ಮಾಡಿದರೆ ಅದು ಸೋಮಾರಿ ಗಳಿಗೆ ಪ್ರೋತ್ಸಾಹ ಮಾಡಿದ ಹಾಗೆ" ಎಂದು ಸ್ವಾರಸ್ಯವಾಗಿ ಹೇಳಿದರು.

ಅಂದಿನ ಪ್ರವಚನ ಮುಗಿದು, ಬಂದಿದ್ದವರೆಲ್ಲ ಹೋದರು. ಆಗ ಅಲ್ಲಿಗೆ ಒಬ್ಬ ಕುರುಡ ಬಂದ. ಮುದುಕ. ನಡುಗುತಾ ಇದ್ದ. 'ಕುರುಡ! ಕವಳಾ ತಾಯಿ!' ಎಂದು ಬೇಡಿದ. ಕೃಷ್ಣನ ತಾಯಿ ಅವನನ್ನು ಗದರಿಸಿ ಅಟ್ಟಿಬಿಟ್ಟರು.

ಅಷ್ಟರಲ್ಲಿ ಅಲ್ಲಿಗೆ ಒಬ್ಬ ದಾಸಯ್ಯ ಬಂದ. ಕಡಿದರೆ ನಾಲ್ಕು ಆಳಾಗುವ ಹಾಗಿದ್ದ. ಜೋಳಿಗೆ ಅಕ್ಕಿಯ ಭಾರದಿಂದ ಜಗ್ಗುತ್ತಿತ್ತು. ದೊಡ್ಡ ಬೊಜ್ಜೆ, ದೊಡ್ಡ ಗಂಟಲು. ಅವನ ಜಾಗಟೆ ಬಾರಿಸಿದ ಕೂಡಲೆ ಕೃಷ್ಣನ ತಾಯಿ ಬಂದು ಅವನಿಗೆ ಕೈ ಮುಗಿದು ಬೊಗಸೆ ತುಂಬ ಅಕ್ಕಿ ಹಾಕಿ ಕಳಿಸಿದರು.

ಕೃಷ್ಣ ಆಗ ಮನೆಯಲ್ಲಿ ಇದ್ದ. ತಾಯಿ ಮಾಡಿದ್ದನ್ನು ನೋಡಿದ. "ಏನಮ್ಮಾ, ನೀನು ಇದುವರೆಗೂ ಭಾಗವತ ಓದಿ ಅವರಿಗೆಲ್ಲಾ ಉಪದೇಶ ಮಾಡಿದ್ದೇನು? ಈಗ ಆ ಕುರುಡ ಮುದುಕನ್ನ ಅಟ್ಟಿ, ಈ ಹೊಟ್ಟೆ ದಾಸಯ್ಯನಿಗೆ ಬೊಗಸೆ ಅಕ್ಕಿ ಕೊಟ್ಟಿದ್ದೇನು? ನೀನು ಹೇಳಿದ್ದಕ್ಕೂ ನೀನು ಮಾಡಿದ್ದಕ್ಕೂ ಏನೂ ಸಂಬಂಧವೇ ಇಲ್ಲವಲ್ಲಾ!" ಎಂದ.

ಅದಕ್ಕೆ ಅವನ ತಾಯಿ ನಕ್ಕುಬಿಟ್ಟು, "ಹೋಗೋ ಹುಚ್ಚು

ಮುರುವ! ತೆಲುಗಿನಲ್ಲಿ ಹೇಳುತಾರೆ — ಚೆಪ್ಪಿ ನಟ್ಟು ಚೇಸ್ತಾರಾ? ಅಂತ. ನಾವು ಹೇಳಿದ ಹಾಗೆಲ್ಲಾ ಮಾಡುತಾ ಹೋದರೆ ಆಯಿತು! ಹೋಗು, ಪಾಠ ಓದಿಕೊ ಹೋಗು'' ಎಂದರು.

''ತಾಯಿ ಏನು ಹೀಗೆ ಹೇಳುತಾರಲ್ಲಾ!'' ಎಂದುಕೊಂಡ, ಕೃಷ್ಣ.

* * *

ಇನ್ನೊಂದು ದಿನ ಕೃಷ್ಣನಿಗೆ ಅವನ ತಂದೆ ಹೇಳಿದರು: ''ಮಗೂ, ಚೆನ್ನಾಗಿ ಓದು. ವಿದ್ಯೆಯೇ ಮನುಷ್ಯನಿಗೆ ದೊಡ್ಡ ಸಂಪತ್ತು. ಯಾರನ್ನು ಭಿಕ್ಷೆ ಬೇಡಬೇಕಾಗಿ ಬಂದರೂ ಸರಿಯೆ, ವಿದ್ಯಾರ್ಜನೆ ಮಾಡಿಯೇ ತೀರಬೇಕು'.

ಅಷ್ಟು ಹೊತ್ತಿಗೆ ಅಲ್ಲಿಗೆ ಒಬ್ಬ ಬಡಹುಡುಗ ಬಂದ. ''ಫೀಜು ಕಟ್ಟಲು ಹಣ ಸಾಲದು. ಇವೊತ್ತು ಕಟ್ಟದಿದ್ದರೆ ಹೆಸರು ಹೊಡೆದುಹಾಕಿಬಿಡುತ್ತಾರೆ. ಒಂದು ರೂಪಾಯಿ ಸಾಲದೆ ಬಂದಿದೆ, ದಯವಿಟ್ಟು ಸಹಾಯ ಮಾಡಿ'' ಎಂದು ಗೋಗರೆದ. ತನ್ನ ಕೈಲಿದ್ದ ಹನ್ನೊಂದು ರೂಪಾಯಿ ತೋರಿಸಿದ.

ಅವನ ಸ್ಥಿತಿ ಕೇಳಿ ಕೃಷ್ಣನಿಗೆ ಅಯ್ಯೋ ಪಾಪ, ಎನ್ನಿಸಿತು. ಆದರೆ ಕೃಷ್ಣನ ತಂದೆ 'ಏನಪ್ಪಾ ಮಾಡುವುದು? ಎರಡು ದಿವಸ ಮುಂಚೆ ಬಂದಿದ್ದರೆ ಏನಾದರೂ ಕೊಡಬಹುದಾಗಿತ್ತು. ಈಗ ನನ್ನ ಕೈಲಿ ಒಂದು ಕಾಸೂ ಇಲ್ಲವಲ್ಲ!'' ಎಂದು ಖಾಲಿ ಪರ್ಸನ್ನು ಕೊಡವಿದರು. ಹುಡುಗ ಪೆಚ್ಚುಮುಖ ಹಾಕಿಕೊಂಡು ಹೋದ.

ಅವನು ಹೋದ ಸ್ವಲ್ಪ ಹೊತ್ತಿಗೆ ಕೃಷ್ಣನ ತಂದೆಯ

ಸ್ನೇಹಿತರು ಕೆಲವರು ಬಂದರು. ಅವರ ಕಚೇರಿಯ ಮೇಲಧಿಕಾರಿಗಳಿಗೆ ಒಂದು ಸತ್ಕಾರ ಕೂಟ ಏರ್ಪಾಟಾಗಿತ್ತು. ಅದಕ್ಕೆ ಪ್ರತಿಯೊಬ್ಬರೂ ಹತ್ತು ಹತ್ತು ರೂಪಾಯಿ ಚಂದಾ ಕೊಡಬೇಕಾಗಿತ್ತು.

ಕೃಷ್ಣನ ತಂದೆ ನಗುನಗುತ್ತ, "ನನ್ನದೊಂದು ಇಪ್ಪತ್ತು ರೂಪಾಯಿ ಇರಲಿ" ಎಂದು ಎರಡು ಹತ್ತು ರೂಪಾಯಿ ನೋಟುಗಳನ್ನು ಜೇಬಿನಿಂದ ತೆಗೆದುಕೊಟ್ಟರು.

"ಎಲಾ! ಆ ಬಡವಿದ್ಯಾರ್ಥಿಗೆ ಕೊಡುವುದಕ್ಕೆ ಒಂದು ರೂಪಾಯಿ ಇರಲಿಲ್ಲ. ಈಗ ಈ ಇಪ್ಪತ್ತು ಇವರಿಗೆ ಎಲ್ಲಿಂದ ಬಂತು!" ಎಂದು ಕೃಷ್ಣನಿಗೆ ಆಶ್ಚರ್ಯ.

ಸ್ನೇಹಿತರೆಲ್ಲ ಹೊರಟು ಹೋದ ಮೇಲೆ ಕೃಷ್ಣ ತನ್ನ ತಂದೆಯನ್ನು ಕೇಳಿದ: "ಭಿಕ್ಷೆ ಬೇಡಿಯಾದರೂ ವಿದ್ಯಾರ್ಜನೆ ಮಾಡಬೇಕು, ಎಂದೆ ನೀನು. ಆದರೆ ಆ ಹುಡುಗನಿಗೆ ಏನೂ ಇಲ್ಲ ಎಂದು ಅಟ್ಟಿಬಿಟ್ಟೆಯಲ್ಲ?" ಎಂದ.

ಕೃಷ್ಣನ ತಂದೆ ಅವನನ್ನು ದುರುಗುಟ್ಟಿ ನೋಡಿ, 'ಹೋಗೋ, ಅಧಿಕ ಪ್ರಸಂಗಿ! ತೆಲುಗಿನಲ್ಲಿ ಹೇಳುತಾರೆ— ಚೆಪ್ಪಿನಟ್ಟು ಚೇಸ್ತಾರಾ? ಅಂತ. ನಾವು ಹೇಳಿದ ಹಾಗೆಲ್ಲಾ ಮಾಡುತಾ ಹೋದರೆ ಆಯಿತು! ಹೋಗು, ಸ್ಕೂಲಿಗೆ ಹೋಗು!" ಅಂತ ಗದರಿದರು.

"ಅವರು ಹೇಳಿದ ಹಾಗೆ ಇವರೇ ಮಾಡುವುದಿಲ್ಲವಲ್ಲಾ! ಯಾಕೆ?" ಅಂದು ಕೊಳ್ಳುತ್ತಾ ಕೃಷ್ಣ ಸ್ಕೂಲಿಗೆ ಹೋದ.

* * *

ಅಲ್ಲಿ ಮೇಷ್ಟರು ಹೇಳುತ್ತಾ ಇದ್ದರು:"ಲ್ರೋ! ಇವೊತ್ತು ಸ್ಕೂಲಿಗೆ ಇನ್ಸ್‌ಪೆಕ್ಟರ್ ಬರುತ್ತಾರೆ. ಎಷ್ಟು ಪಾಠ ಆಗಿದೆ ಅಂತ ಅವರು ಕೇಳಿದರೆ, ಮೂವತ್ತೆರಡು ಅಂತ ಹೇಳಬೇಕು. ಇಪ್ಪತ್ತ ಮ್ಮೂರು ಆಗಿದೆ ಅಂತ ಯಾರಾದರೂ ನಿಜ ಹೇಳಿದರೆ ಚರ್ಮ ಸುಲಿದುಹಾಕಿಬಿಡತೀನಿ! ಹುಷಾರ್!" ಅಂತ ಗದರಿದರು.

ಇನ್ಸ್‌ಪೆಕ್ಟರ್ ಬಂದರು. ಪಾಠ ಎಷ್ಟಾಗಿದೆ ಅಂತ ಕೇಳಿದರು. ಮೂವತ್ತೆರಡು, ಅಂದರು ಮೇಷ್ಟರು. ಹುಡುಗರೂ ಹೆದರಿಕೊಂಡು ಮೂವತ್ತೆರಡು ಅಂತ ಸುಳ್ಳು ಹೇಳಿದರು. ಮೇಷ್ಟರು ಮೂವತ್ತ ಮೂರನೇ ಪಾಠ ಮಾಡಿದರು. ಆ ಪಾಠದ ಹೆಸರು 'ಸತ್ಯ ಹರಿಶ್ಚಂದ್ರ!'

ಶಾಲೆ ಮುಗಿದು ಸಾಯಂಕಾಲ ಮನೆಗೆ ಹೋಗುವಾಗ ಕೃಷ್ಣ ಮೇಷ್ಟರನ್ನು ಕೇಳಿದ—'ಸಾರ್, ಹರಿಶ್ಚಂದ್ರನ ಪಾಠದಲ್ಲಿ ಸತ್ಯಕ್ಕೋಸ್ಕರ ಪ್ರಾಣಾನಾದರೂ ಬಿಡೋದು ವಾಸಿ, ಅಂದಿರಿ. ಆದರೆ ಇನ್ಸ್‌ಪೆಕ್ಟರಿಗೆ ನಾವು ಸುಳ್ಳು ಹೇಳಿದ್ದು ಸರಿಯೆ ಸಾರ್?'

"ಹೋಗೋಲೋ ತಲೆಹರಟೆ! ಗುರುವಿಗೇ ತಿರುಮಂತ್ರ ಹೇಳಿಕೊಡುತಾನೆ! ತೆಲುಗಿನಲ್ಲಿ ಹೇಳುತಾರೆ- ಚೆಪ್ಪಿನಟ್ಲು ಚೇಸ್ತಾರಾ! ಅಂತ. ನಾವು ಹೇಳಿದ ಹಾಗೆಲ್ಲಾ ಮಾಡುತಾ ಹೋದರೆ ಆಯಿತು. ಹೋಗು! ಮನೆಗೆ ಹೋಗು" ಎಂದು ಮೇಷ್ಟರು ಕೃಷ್ಣನನ್ನು ಮನೆಗೆ ಓಡಿಸಿದರು.

*   *   *

ಮಾರನೆಯ ದಿವಸ ಕೃಷ್ಣ ತಾನು ಶಾಲೆಗೆ ಹೋಗುವುದಿಲ್ಲ

ವೆಂದು ಹಟ ಹಿಡಿದ. "ಅಲ್ಲಿ ಹೋಗಿ ನಾನೇನು ಹೊಸದಾಗಿ ಕಲಿಯಬೇಕು? ಹೇಳಿದಂತೆ ಮಾಡಬೇಕಾಗಿಲ್ಲ ಎಂದು ಇಲ್ಲಿ ಅಮ್ಮ ಹೇಳಿಕೊಡುತ್ತಾಳೆ. ಅದನ್ನೇ ಇಲ್ಲಿ ಅಪ್ಪನೂ ಹೇಳಿಕೊಡುತ್ತಾನೆ. ಶಾಲೆಯಲ್ಲಿ ಆ ಮೇಷ್ಟರೂ ಅದನ್ನೇ ಹೇಳಿಕೊಡುತ್ತಾರೆ. ನುಡಿದಂತೆ ನಡೆದರೆ ಅಮ್ಮ "ಹುಚ್ಚು ಮುರುವ" ಎನ್ನುತ್ತಾಳೆ. ಹೇಳಿದಂತೆ ಮಾಡಿದರೆ ಅಪ್ಪ "ಅಧಿಕ ಪ್ರಸಂಗಿ" ಎನ್ನುತ್ತಾರೆ. ಇದ್ದದ್ದನ್ನು ಇದ್ದ ಹಾಗೇ ಹೇಳಿದರೆ ಮೇಷ್ಟರು "ತಲೆಹರಟೆ ಎನ್ನುತ್ತಾರೆ. ನಾನು ಶಾಲೆಗೆ ಹೋಗಿ ಏನು ಕಲಿಯಬೇಕೋ ಅದನ್ನು ಇಲ್ಲೇ ಮನೆಯಲ್ಲೇ ಕಲಿಯುತ್ತಿದ್ದೇನಲ್ಲ!" ಎಂದ.

ಹುಡುಗ ಮುಗ್ಧನಾಗಿ ಆಡಿದ ಮಾತುಗಳನ್ನು ಅವನ ತಾಯಿ, ತಂದೆ, ಗುರು ಮೂವರೂ ಕೇಳಿದರು. ಮಗುವಿಗೆ ತಾವು ಹಾಕಿಕೊಡುತ್ತಿದ್ದ ಮೇಲು ಪಂಕ್ತಿ ಎಷ್ಟು ತಪ್ಪು ಎಂದು ಕಂಡುಕೊಂಡರು. ಅಂದಿನಿಂದ, ತಾವು ಹೇಳಿದಂತೆ ತಾವು ಮೊದಲು ಮಾಡಿ, ಅನಂತರ ಕೃಷ್ಣನಿಗೆ ಹೇಳಿ ಮಾಡಿಸುತ್ತಿದ್ದರು.

ಸಾಯಿಸಮಯ

[1975ರ ಡಿಸೆಂಬರ್ ಕೊನೆಯ ವಾರದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಶ್ರೀ ಲಕ್ಷ್ಮೀಶ ಎಂಬವರು ನಾಲ್ಕು ಫುಲ್‌ಸ್ಕೇಫ್ ಹಾಳೆಗಳ ತುಂಬ ನನಗೊಂದು ಪತ್ರ ಬರೆದರು. ಆ ಪತ್ರದ ಅಚ್ಚುಕಟ್ಟು, ಒಕ್ಕಣೆ, ಒಳಗಿನ ವಿಚಾರಗಳಿಂದ ನಾನು ಆಕರ್ಷಿತ ನಾದೆ. ಆ ಪತ್ರದ ಮೊದಲನೇ ಅರ್ಧವನ್ನು ನನ್ನ "ನಿರ್ಭಯಾ ಗ್ರಫಿ"ಯ 6ನೇ 'ಕಂತು' ಆದ "ಶಿಶುಪಾಲವಧ"ದಲ್ಲಿ (ಪುಟ 269 ರಿಂದ 272] "ಶಿಶುಪಾಲ ಪ್ರಸಂಗ"ವೆಂಬ ಹೆಸರಿನಿಂದ ಪ್ರಕಟಿಸಿ ದ್ದೇನೆ, ಅದು, (ನನ್ನನ್ನು 'ಚಕ್ರವರ್ತಿ ವಜ್ರ'ನೆಂದು ಕರೆದು ಲೇವಡಿ ಮಾಡಿ) ಬೇಶ್ರೀ ಅವರು ಬರೆದ ಬುಡವಿಲ್ಲದ ಬಖೈರಿಗೆ ಸಂಬಂಧಪಟ್ಟದ್ದು. ಅದರ ಮುಂದಿನ ಅರ್ಧದಲ್ಲಿ "ಸಾಯಿ ಸಮಯ"ವನ್ನು ಕುರಿತು ಅವರು ಕೆಲವು ಪ್ರಶ್ನೆಗಳನ್ನು ಕೇಳಿದ್ದಾರೆ. ಆ ಭಾಗವನ್ನು ಇಲ್ಲಿ ಕೆಳಗೆ ಕೊಟ್ಟಿದ್ದೇನೆ. ಅನಂತರ ನಾನು ಬಲ್ಲಂತೆ ಅದಕ್ಕೆ ಉತ್ತರಿಸಿದ್ದೇನೆ.]

ಶ್ರೀ ಲಕ್ಷ್ಮೀಶ ಅವರ ಪತ್ರ

ಮಾನ್ಯರೆ,

ನನಗೆ ಅನಿಸಿದ್ದನ್ನು ವಂಚನೆ ಇಲ್ಲದೆ, ವಿವಂಚನೆಯೂ ಇಲ್ಲದೆ ನಿಮ್ಮೆದುರು ತೆರೆದಿದ್ದೇನೆ. ನಿಮ್ಮ ಕುರಿತಾಗಿರುವ

ಅಭಿಮಾನ ಗೌರವಗಳೇ ಇದಕ್ಕೆ ಕಾರಣ. ಹಾಗೆಯೇ ನನ್ನಲ್ಲಿ ಗೂಡು ಕಟ್ಟಿಕೊಂಡಿರುವ ಒಳಸಂದೇಹಗಳನ್ನು ತಮ್ಮೆದುರು ಮಂಡಿಸುತ್ತಿದೇನೆ. ಹಾಗೆ ಮಾಡುವುದಕ್ಕೆ ದಯವಿಟ್ಟು ಒಪ್ಪಿಗೆ ಕೊಡುತ್ತೀರಾ?

ಸಂದೇಹ ಶ್ರೀ ಸಾಯಿಬಾಬಾ ಕುರಿತು, ನಾನು ಶ್ರೀ ಬಾಬಾ ಬಗ್ಗೆ ಅಷ್ಟಿಷ್ಟು ಓದಿದೆ. ಕೇಳಿದೆ. ಅವರ ಭಕ್ತರೆನ್ನುವವರನ್ನು ಕಂಡೆ. ಬಾಬಾ ಭಕ್ತರಲ್ಲಿ ಬಹಳಷ್ಟು ಜನ ಶ್ರೀಮಂತವರ್ಗ ಮಧ್ಯಮವರ್ಗಗಳವರು. ಕೆಳವರ್ಗದ ದಲಿತರಿಗೆ ಬಾಬಾ ಹೆಸರೂ ತಿಳಿದಿದೆಯೋ ಇಲ್ಲವೋ. ಬಹುಶಃ ಬಾಬಾ ಅಂಥವರ ಅಗತ್ಯ ಇರುವುದೂ ಮಧ್ಯಮವರ್ಗ, ಮೇಲುವರ್ಗಗಳವರಿಗೇ ಇರಬಹುದು. ಈ ಎರಡು ವರ್ಗಗಳೂ ಬಹುತೇಕ ಕೆಳವರ್ಗವನ್ನು ಶೋಷಿಸಿಕೊಂಡೇ ಬದುಕಿರುವಂಥವು. ವರ್ಗಮೂಲವಾದ ಈ ಅಸಮತೆ ತೊಲಗದೆ ಯಾವ ಕ್ರಾಂತಿಯೂ ಅರ್ಥಪೂರ್ಣವಾಗುವುದಿಲ್ಲ; ಮತ್ತು ಕ್ರಾಂತಿಯಿಂದಲೇ ಈ ಅಸಮತೆ ತೊಲಗುವುದೂ ಇಲ್ಲ. ಹೀಗೆ ಸಮಾನತೆಯನ್ನು ಸ್ಥಾಪಿಸಿ ತನ್ಮೂಲಕ ದಲಿತರಿಗೆ ನ್ಯಾಯವಾಗಿ ಸಲ್ಲಬೇಕಾದ ಎಲ್ಲ ಹಕ್ಕುಗಳನ್ನೂ ಅವರು ಅನುಭವಿಸುವಂಥ ಸಮಾಜವನ್ನು ನಿರ್ಮಿಸಲು ಹೋರುವುದು ಭಗವಂತನಿಗೆ ಪ್ರಿಯವಾದ ಕೆಲಸ ಅಲ್ಲವೇನು? ಆದರೆ ಮೇಲುವರ್ಗಕ್ಕೆ ಆಧ್ಯಾತ್ಮಿಕ ಮಹಾಪೋಷಕರಾಗಿರುವುದು ವರ್ಗಮೂಲವಾದ ಅಸಮತೆಯನ್ನು, ಶೋಷಕ-ಶೋಷ್ಯ ಭಾವವನ್ನೂ ಕಾದಿಟ್ಟ ಹಾಗೆಯೇ ಅಲ್ಲವೇ ? ಮೇಲುವರ್ಗಕ್ಕೆ ಮಾತ್ರ ದಕ್ಕುವ, ನಮಗೆ ದಕ್ಕದ ಸೊತ್ತು ಎಂದು ದಲಿತರಿಗೆ ಅನ್ನಿಸುವಂಥ

ಆಧ್ಯಾತ್ಮಿಕ ಪೀಠವನ್ನು ಕಟ್ಟಿಕೊಳ್ಳುವುದಕ್ಕಿಂತ ಬಾಪೂಜಿಯ ಹಾಗೆ ಸರ್ವಸುಲಭನಾಗಿ, ದೀನಾತಿದೀನರಿಗೂ ಇವನು ನಮ್ಮವನೇ; ನಮ್ಮ ಮಣ್ಣಲ್ಲೆ ಹುಟ್ಟಿದವನು; ಸೂರ್ಯನಿಗೆ ಮುಖ ಮಾಡಿರುವವನು ಅನಿಸುವ ಅನುಭಾವ ಶ್ರೇಷ್ಠವಲ್ಲವೇನು? ಶ್ರೇಷ್ಠವೋ ವರಿಷ್ಠವೋ— ಬಾಬಾ ಯಾಕೆ ಹೀಗೆ ಯೋಚಿಸಬಾರದು?

ಇನ್ನೊಂದು ಸಂದೇಹ. ಶ್ರೀ ಬಾಬಾ ಅವರೂ establishmentಗೆ ಪರವಾಗೇ ಇದ್ದಾರೆಯೇ? ನಮ್ಮ ಬಹುತೇಕ ಸಂತ-ಮಹಂತರು ಸರ್ಕಾರದ ಪರವಾಗೇ ಇರುವ ಹಾಗೆ? ಚಾರಿತ್ರ್ಯ ಏನೇನೂ ಇಲ್ಲದ ಅಧಿಕಾರಾರೂಢಪಕ್ಷದ ಮಂತ್ರಿಮಾನ್ಯರನ್ನು ಬಾಬಾ ಹರಸುತ್ತಾರೆಯೆ? ಬಾಬಾ ಆಶೀರ್ವಾದದಿಂದ ಇನ್ನೂ ಹತ್ತು ವರ್ಷ ನಾವು ಗದ್ದುಗೆಯಲ್ಲಿರುತ್ತೇವೆ ಎಂದು ಈ ಜನ ಭಾವಿಸುತ್ತಾರೆ. ಸರ್ಕಾರವನ್ನು ಪ್ರತಿಭಟಿಸಿ, ಹೋರಿ, ಆ ಕಾರಣದಿಂದ ಅಧಿಕಾರದ balance ತಪ್ಪದ ಹಾಗೆ ನೋಡುವ, ಹೊರನೋಟಕ್ಕೆ ದಂಗೆಕೋರರರಂತೆ ಕಾಣುವ ಜಯಪ್ರಕಾಶರಂಥ ವ್ಯಕ್ತಿಗಳನ್ನು, ಆಡಳಿತಪಕ್ಷ ಭಾವಿಸುವ ಹಾಗೆ ಬಾಬಾ ಕೂಡಾ ಪ್ರಜಾಪ್ರಭುತ್ವಕ್ಕೆ ಅಪಾಯ ಎಂದು ಭಾವಿಸುತ್ತಾರೆಯೆ? ಹಾಗಲ್ಲದೆ ಜೆ. ಪಿ. ಯವರದು ಧರ್ಮಯುದ್ಧ ಅನ್ನಿಸಿದರೆ ಬಾಬಾ ಯಾಕೆ ಒಂದು ಮೆಚ್ಚುನುಡಿ ಆಡಬಾರದು? ರಾಜಕಾರಣದಲ್ಲಿ ಬಾಬಾ ಯಥಾಸ್ಥಿತಿವಾದಿಗಳೆ?

ಪ್ರಿಯರೇ,

ಹೀಗೆ ಸಂದೇಹ ಸಂದೋಹಗಳು. ತಾವು ಬಾಬಾ ಅವರ ಅಂತರಂಗ ಪಾರ್ಷದ. ಆದ್ದರಿಂದ ಕಳಕಳಿಯ ಈ ಪತ್ರ ಬರೆದಿದ್ದೇನೆ. ಬಾಬಾ ಬಗ್ಗೆ ನನಗೆ ಗೌರವವಿದೆ. ಕನ್ನಡ ಸಾಹಿತ್ಯದ

ಅಲ್ಪ ಸ್ವಲ್ಪ ಪರಿಚಯ ನನಗಿದೆ. ಸಾಹಿತ್ಯ ವಿಮರ್ಶಕರು ಬೇಂದ್ರೆ ಯವರ 'ಬೆಳಗು'—'ಜೋಗಿ' ಅಂಥ ಪದ್ಯಗಳಲ್ಲಿ ಸದಾನಂದಿ ಯಾದ ಜಂಗಮತ್ವವನ್ನೂ ಅನುಭಾವವನ್ನೂ ಗುರುತಿಸುವಾಗ, ಅಡಿಗರ 'ರಾಮನವಮಿಯ ದಿವಸ'ದಲ್ಲಿ ಪ್ರವಾದಿತ್ವವನ್ನು ಅನುಮಾನಿಸುವಾಗ, ಕುವೆಂಪು ಅಂತೂ ರಸಮೂರ್ಛೆ— ಭಾವ ಸಮಾಧಿಗಳ ಅನುಭಾವಿಯೇ ಆಗಿರುವಾಗ ಬಾಬಾ ಯಾಕೆ ಅನುಭಾವಿ ಆಗಿರಬಾರದು? ಅವರ ಪವಾಡಗಳನ್ನು ಕೇಳಿದರೆ, (ನಾನು ಕಂಡಿಲ್ಲ) ಪ್ರಕೃತಿ ಅವರನ್ನು ಪೂರ್ಣ ಒಲಿದು, ಅವರನ್ನೇ ಆಯ್ಕೆ ಮಾಡಿ, ಅವರ ಮೂಲಕ ತನ್ನ ಲೀಲೆಗಳನ್ನು ತೋರುತ್ತಿರ ಬಹುದೆಂದು ಅನ್ನಿಸುತ್ತೆ. "ಯಮೇವೈಷ ವೃಣುತೇ ತೇನ ಲಭ್ಯಃ".

ಮೌನ, ಮಾತುಗಳೆರಡರಲ್ಲೂ ಅನುಭಾವ ಮಿನುಗುತ್ತದೆ. ರಮಣ ಮಹರ್ಷಿಗಳು ಮೌನವಾಗಿರುತ್ತಿದ್ದರಂತೆ. ಅರವಿಂದರು ಸಾವಿತ್ರಿಯನ್ನು ಬರೆದರು. ಬಾಬಾ ಸಂಭಾಷಣೆ ಮಾಡುತ್ತಾರೆ. "ನಿಮ್ಮ ಬೊಗಸೆ ತುಂಬ ಹೂವು, ಹಣ್ಣು, ಇನ್ನೂ ಏನೇನೋ ತಂದರೆ, ನಾನು ಕೊಡಬೇಕು ಎಂದಿರುವುದನ್ನು ಎಲ್ಲಿಡಲಿ?" ಎಂದು ಕೇಳುತ್ತಾರೆ—ಎಂಥ ಮಾತು! ಪದಗಳು ಯಾರನ್ನೂ ವಂಚಿಸುವುದಿಲ್ಲ. ರಸವತ್ಕಾವ್ಯ, ರಸೇತರವೆಂದು ಅವೆ ತಾವೆ ಪೇಳವೆ? ಎಂದು ನೀವೇ ಒಂದೆಡೆ ಬರೆದಿದ್ದೀರಿ. ನಾವು ಅಲ್ಲಮ, ಬಸವಣ್ಣ, ಅಕ್ಕಮಹಾದೇವಿಯರನ್ನು ಅನುಭಾವಿಗಳೆಂದು ಗುರುತಿಸುವುದು ಅವರ ವಚನಗಳಿಂದಲೇ ಅಲ್ಲವೇ ?

ಹೀಗೆ ಬಾಬಾ ನನಗೆ ಗೌರವಾರ್ಹರಾಗಿದಾರೆ. ಆದರೆ ತಲೆ ತುಂಬ ಸಂದೇಹಗಳು, ಪ್ರಶ್ನೆಗಳು. ಉಪನಿಷತ್ತಿನ ಒಂದು ಮಾತು

ನೆನಪಾಗುತ್ತೆ. "ಭಿದ್ಯತೇ ಹೃದಯಗ್ರಂಥಿಃ, ಛಿದ್ಯಂತೇ ಸರ್ವ ಸಂಶಯಾಃ." ಕಾಣದೆ ಸಾಕ್ಷಾತ್ಕಾರ ಮಾಡಿಕೊಳ್ಳದೆ ಸಂಶಯ ನಿರಸನವಾಗದು ಎಂದರೆ ಅಲ್ಲಿಯವರೆಗೆ ಸಂಶಯ ಇದ್ದದ್ದೇ ಎಂಬರ್ಥವಲ್ಲವೆ? ಆದ್ದರಿಂದ ಬಾಬಾರನ್ನು ಕಾಣುವ ತವಕ ಉಂಟಾಗಿದೆ. ಯೋಗ್ಯತೆ ಉಂಟೋ ಇಲ್ಲವೋ ತಿಳಿಯದು. ಅದಕ್ಕೆ ತಮ್ಮ ಮರೆಹೊಕ್ಕಿದ್ದೇನೆ. ತಮ್ಮ ಮಾರ್ಗದರ್ಶನವನ್ನು ಕೇಳಿ ಕೊಳ್ಳುತ್ತಿದ್ದೇನೆ. ನಾನು ಬಾಬಾರನ್ನು ಕಾಣಬಹುದೆ? ಕಾಣಿಸು ತ್ತೀರಾ? ನೀವು ಬಾ ಎಂದಲ್ಲಿ ಬಂದೇನು. ನಾನು ಇಷ್ಟೆಲ್ಲ ಬರೆದದ್ದು ಅಧಿಕ ಪ್ರಸಂಗವೋ ಅಪ್ರಸ್ತುತ ಪ್ರಸಂಗವೋ ಆಗಿ ಕಂಡರೆ ತಮ್ಮ ಕ್ಷಮೆ ಕೇಳಿಕೊಂಡು ಉತ್ತರ ನಿರೀಕ್ಷಿಸಿಕೊಂಡಿ ದ್ದೇನೆ. ನನ್ನ ವಿಳಾಸವಿರುವ cover ಜತೆಗಿಟ್ಟಿದ್ದೇನೆ,

ಇತಿ ವಂದನಾಪೂರ್ವಕ,

ಲಕ್ಷ್ಮೀಶ

[ಈ ಸೌಜನ್ಯದ, ಜ್ಞಾನದಾಹದ ಪತ್ರಕ್ಕೆ ಒಡನೆಯ ಉತ್ತರ ಬರೆಯಬೇಕೆಂದು ನನಗೆ ಮನಸ್ಸಾದರೂ ಆಗ ನನಗೆ ಬಿಡುವಿರಲಿಲ್ಲ. ಅಲ್ಲದೆ, ಅದೇ ಸಮಯಕ್ಕೆ ನಾನು ಆ ಪ್ರಾಂತ ಪ್ರವಾಸ ಮಾಡಬೇಕಾಗಿತ್ತು. "ಹೀಗೆ ಬರುತ್ತಿದ್ದೇನೆ. ಬಂದಾಗ ಎದುರಿಗೆ ಇದನ್ನೆಲ್ಲ ವಿಶದವಾಗಿ ಮಾತನಾಡೋಣ" ಎಂದು ಎರಡು ಪಂಕ್ತಿ ಬರೆದುಹಾಕಿದೆ. ಕಾರಣಾಂತರಗಳಿಂದ ನನ್ನ ಪ್ರವಾಸ ರದ್ದಾಯಿತು. ಅವರಿಗೂ ನನಗೂ ನೇರವಾದ ಮುಖಪರಿಚಯ ವಿಲ್ಲದಿದ್ದರೂ, ನಾನು ಬರೆದಿರುವ ಕೆಲವು ಕೃತಿಗಳಿಂದ ನಾನು ಅವರ ಸ್ನೇಹಕ್ಕೆ ಪಾತ್ರನಾಗಿದ್ದೇನೆ ಎಂಬುದು ಅವರ ಪತ್ರದಲ್ಲಿ

ಸ್ಪಷ್ಟವಾಗಿದೆ. ಹಿಂದಿನ ಕಾಲದಲ್ಲಿ ಅಗ್ನಿಸಾಕ್ಷಿಕವಾಗಿ ಸ್ನೇಹಗಳು ಏರ್ಪಡುತ್ತಿದ್ದ ಹಾಗೆ, ಅಚ್ಚುಕೂಟಗಳೂ ಅಂಚೆ ಇಲಾಖೆಯೂ ಏರ್ಪಾಟಾದ ಮೇಲೆ, ಸರಸ್ವತೀ ರೂಪವಾದ ಸೇತುವೆಯ ಮೂಲಕವಾಗಿ ಲೇಖಕನಿಗೂ ವಾಚಕನಿಗೂ ಸಂಬಂಧವುಂಟಾಗುತ್ತದೆ. ಇವುಗಳಲ್ಲಿ ಕೆಲವು ಸಮ್ಯಕ್‌ಬಂಧಗಳಾಗಿ ಪರಿಣಮಿಸುತ್ತವೆ. ಅಂಥವುಗಳಲ್ಲಿ ಶ್ರೀ ಲಕ್ಷ್ಮೀಶ ಅವರ ಸ್ನೇಹವೂ ಒಂದು ಎಂದು ಭಾವಿಸಿದ್ದೇನೆ.

ಇವರಿಗೆ ಬಂದಿರುವ ಸಂದೇಹಗಳು, ಇವರು ಕೇಳಿರುವ ಪ್ರಶ್ನೆಗಳು, ಇವರಿಗೆ ಮಾತ್ರವಲ್ಲ; ಇನ್ನೂ ಎಷ್ಟೋ ಜನರಿಗೆ ಸಾಯಿಬಾಬಾ ಒಂದು ಒಗಟೆಯಾಗಿದ್ದಾರೆ. ಆದರೆ, ಅದನ್ನು ಕುರಿತು ಇವರು ಕೇಳಿರುವ ಹಾಗೆ ಸೌಮ್ಯವಾಗಿ ಕೇಳುವವರು ವಿರಳ.

ಇವರು ಕೇಳಿರುವುದಕ್ಕೆ ನಾನು ತಿಳಿದಿರುವಷ್ಟನ್ನು ಉತ್ತರವಾಗಿ ಹೇಳಬೇಕಾದ್ದು ನನಗೆ ಕರ್ತವ್ಯ ಮಾತ್ರವಲ್ಲ, ಅದನ್ನು ಸಂತೋಷದಿಂದ ಮಾಡುತ್ತಿದ್ದೇನೆ.]

ನನ್ನ ಉತ್ತರ

ಬಾಬಾ ಅವರ ಬಗ್ಗೆ ಎಷ್ಟು ಓದಿದರೂ, ಅವರ ಬಗ್ಗೆ ಎಷ್ಟು ಕೇಳಿದರೂ, ಬಾಬಾ ಅವರನ್ನು ಯಾರು ಕಂಡಿದ್ದಾರೋ ಅವರನ್ನು ನಾವು ಎಷ್ಟು ಕಂಡರೂ ಬಾಬಾ ಅವರನ್ನು ಕಂಡಹಾಗಾಗುವುದಿಲ್ಲ. ಅವರನ್ನೇ ನೋಡಬೇಕು, ಅವರನ್ನೇ ಕೇಳಬೇಕು. ಆಗ ನಮಗೆ ಅವರು ಇಷ್ಟವಾಗುತ್ತಾರೋ ಇಲ್ಲವೋ ಎಂಬುದು ಸ್ವಯಂವೇದ್ಯ

ವಾಗುತ್ತದೆ. Direct ಆದ ಸ್ವಾನುಭವಕ್ಕೆ ಬೇರೆ ಬದಲು ಇಲ್ಲ. ಭರ್ತೃಹರಿಯ "ಸ್ವಾನುಭೂತ್ಯೈಕಮಾನಾಯ"ಎಂಬುದು ಇಲ್ಲಿಗೂ ಹೊಂದುತ್ತದೆ.

ಬಾಬಾಭಕ್ತರಲ್ಲಿ ಧನಿಕರಿದ್ದಾರೆ, ಸಾಮಾನ್ಯರಿದ್ದಾರೆ, ದೀನ ದಲಿತರೂ ಇದ್ದಾರೆ. ಇವರುಗಳಲ್ಲಿ ಮೊದಲಿನ ಎರಡು ವರ್ಗ ಗಳಿಗಿಂತ ಮೂರನೇ ವರ್ಗದವರಿಗೆ ಸ್ವಾಮಿ ಹೆಚ್ಚು ಬೇಕಾಗಿದ್ದಾರೆ ಎಂಬುದನ್ನು ಸ್ವಾಮಿಯ ಸಭೆಗಳಿಗೆ ಹೋಗಿರುವವರೆಲ್ಲ ನೋಡಿ ಬಲ್ಲರು. "ಸಮೋಹಂ ಸರ್ವಭೂತೇಷುನ ಮೇ ದ್ವೇಷ್ಯೋಸ್ತಿ ನ ಪ್ರಿಯಃ" ಎಂಬುದನ್ನು ಈ ಸಭೆಗಳಲ್ಲಿ ಸಾಕ್ಷಾತ್ತಾಗಿ ಕಂಡುಕೊಳ್ಳ ಬಹುದು.

ತೈತ್ತಿರೀಯದ "ಮಾತೃದೇವೋ ಭವ, ಪಿತೃದೇವೋ ಭವ, ಆಚಾರ್ಯ ದೇವೋ ಭವ, ಅತಿಥಿದೇವೋ ಭವ" ಜೊತೆಗೆ, ವಿವೇಕಾನಂದರು "ದರಿದ್ರ ದೇವೋ ಭವ, ಮೂರ್ಖದೇವೋ ಭವ" ಎಂದು ಸೇರಿಸಿದರು. ದೀನರು, ದಲಿತರು, ದುರ್ಬಲರು ಮೊದಲಾದ ಆರ್ತರಿಗೆ ಸ್ವಾಮಿಯ ಅನುಗ್ರಹ ದೊರಕುವಷ್ಟು ಬೇಗ ಉಳಿದವರಿಗೆ ದೊರಕುವುದಿಲ್ಲ. ಆದರೂ ಸ್ವಾಮಿ ಯಾರನ್ನೂ ಅಲಕ್ಷಿಸುವುದಿಲ್ಲ. ಮೊದಲು ಇವರು, ಅನಂತರ ಸಕಾಲದಲ್ಲಿ ಅವರೂ ಕೂಡ.

ಮನುಷ್ಯಕುಲದಲ್ಲಿ ಹರಡಿಕೊಂಡಿರುವ ಹಲವು ಬಗೆಯಾದ ಅಸಮತೆಗಳು ತೊಲಗಬೇಕೆಂದು ನಿಜ. ಆದರೆ ಹಾಗಾವುದಕ್ಕೆ 'ಕ್ರಾಂತಿ'ಯಾಗಬೇಕು ಎನ್ನುವಾಗ, ನಾವು ಸಾಮಾನ್ಯವಾಗಿ ಯಾವುದನ್ನು 'ಕ್ರಾಂತಿ' ಎನ್ನುತ್ತೇವೆಯೋ ಅದು ನಮ್ಮ ಕ್ಷೇಮ

ಸಂಪಾದನೆಗೆ 'ಉಪಾಯ'ವಾಗುವುದಕ್ಕಿಂತ 'ಅಪಾಯ'ವನ್ನು ತರುವ ಸಂಭವವೇ ಹೆಚ್ಚು. ಮಾನವಕುಲ ಒಂದೇ ಎಂಬುದನ್ನು ಸಾಧಿಸುವುದಕ್ಕೆ ಸ್ವಾಮಿ 'ಕ್ರಾಂತಿ'ಯನ್ನು ಬೋಧಿಸುತ್ತಿಲ್ಲ. 'ಪ್ರೇಮ'ವನ್ನು ಬೋಧಿಸುತ್ತಿದ್ದಾರೆ. ಪ್ರಭುಸಮ್ಮಿತದಿಂದ ಆಗದೆ ಹೋದದ್ದು. ಕಾಂತಾಸಮ್ಮಿತದಿಂದ ಕೈಗೂಡಬಹುದಲ್ಲವೆ/ ಸರಕಾರದ 'ಕೋಡು'ಗಳಿಂದ ಮನುಷ್ಯರ ಹೃದಯಗಳನ್ನು ಪರಿವರ್ತಿಸುವುದಾಗದು. ಆ ಪರಾವರ್ತನವಾಗಬೇಕಾದರೆ, ಅದು 'ಪ್ರೇಮ'ವೊಂದರಿಂದ ಮಾತ್ರ ಸಾಧ್ಯ. ಸ್ವಾಮಿಯ ಸಮೀಪಕ್ಕೆ ಬಂದವರು ಅನೇಕರು ಅವರ ಪ್ರೇಮದ ಪ್ರಭಾವಕ್ಕೆ ಒಳಗಾಗಿದ್ದಾರೆ, transform ಆಗಿದ್ದಾರೆ.

ಈ ಸ್ವಾಮಿ ಕೂಡ ಗಾಂಧೀಜಿಯಂತೆಯೇ ಸರ್ವಸುಲಭರು. 'ನಾನು ಇರುವಲ್ಲಿಗೆ ನೀವು ಬರಬೇಕಾಗಿಲ್ಲ. ನೀವು ಇರುವಲ್ಲಿಗೆ ನಾನೇ ಬರುತ್ತೇನೆ' ಎಂದು ಇವರೇ ಆರ್ತರನ್ನು ಅರಸಿಕೊಂಡು ಹೋಗಿ, ಅವರಿಗೆ ಪರಿಹಾರಗಳನ್ನು ಒದಗಿಸಿದ ನಿದರ್ಶನಗಳು ಬೇಕಾದ ಹಾಗೆ ಇವೆ.

ಈ ಸ್ವಾಮಿಯದು ಯಾವಾಗಲೂ ಕೋ-ಕೈ; ತಾ-ಕೈ ಅಲ್ಲ. ಈ ಸ್ವಾಮಿ ಯಾರಿಂದಲೂ ಲೌಕಿಕವಾದ ಯಾವುದನ್ನೂ ಕೇಳುವವರಲ್ಲ. ಅವರಾಗಿಯೇ ನೀಡಿದರೂ ಅದನ್ನು ಕೊಳ್ಳುವವರಲ್ಲ. ಇದೊಂದು ಈ ಸ್ವಾಮಿಯಲ್ಲಿ ಅನ್ಯತ್ರ ನಮಗೆ ಕಂಡುಬಾರದ ವಿಶೇಷ. ಈ ಸ್ವಾಮಿಯ ಸನ್ನಿಧಿಯಲ್ಲಿ "ಓ! ನಾವು ಇಷ್ಟು ಕೊಟ್ಟೆವು!" ಎಂದು ಉಳ್ಳವರು ಹಿಗ್ಗುವಂತಿಲ್ಲ; "ಅಯ್ಯೋ! ಕೊಡುವುದಕ್ಕೆ ನಮಗೇನೂ ಇಲ್ಲವಲ್ಲಾ!" ಎಂದು ಇಲ್ಲದವರು

ಕುಗ್ಗುವಂತಿಲ್ಲ. ಇಂತಹ ಒಂದು ಸಮತ್ವಭಾವನೆಗೆ ಸಹಕಾರಿಯಾಗಿದೆ ಶ್ರೀ ಸತ್ಯಸಾಯಿ ಗುರುವಿನ ಸಾನ್ನಿಧ್ಯ.

ಸ್ವಾಮಿ ಹೊರಗಿನ ಮುಖ ನೋಡಿ ಮಣೆ ಹಾಕುವವರಲ್ಲ; ಒಳಗಿನ ಮುಖ ನೋಡಿ, ಅಲ್ಲಿನ ಅಗತ್ಯಗಳನ್ನು ಯಥೇಚ್ಛವಾಗಿ ಈಡೇರಿಸುತ್ತಾರೆ. ಸಾವಿರಗಟ್ಟಲೆಯಾಗಿ ಸ್ವಾಮಿಯ ದರ್ಶನಕ್ಕೋಸ್ಕರ ಕಾಯ್ದುಕೊಂಡಿರುವವರಲ್ಲಿ ಎಂಥೆಂಥವರನ್ನು 'ಇಂಟರ್-ವ್ಯೂ'ಗೆ ಆರಿಸಿ ಬರಮಾಡಿಕೊಳ್ಳುತ್ತಾರೆ ಎಂಬುದನ್ನು ಗಮನಿಸಿದರೆ, ಸ್ವಾಮಿಗೆ ಯಾರು ಹೆಚ್ಚು ಬೇಕಾದವರು ಎಂಬುದಕ್ಕೆ ಅಲ್ಲೇ ಉತ್ತರ ದೊರಕುತ್ತದೆ. "ಚತುರ್ವಿಧಾ ಭಜಂತೇ ಮಾಂ... ಆರ್ತೋ ಜಿಜ್ಞಾಸುಃ ಅರ್ಥಾರ್ಥೀ ಜ್ಞಾನೀ" ಎಂದು ಶ್ರೀಕೃಷ್ಣ ಹೇಳಿದ ಹಾಗೆ ಈ ಸ್ವಾಮಿಗಾದರೂ ಆರ್ತರು ಮೊದಲು, ಉಳಿದವರು ಆಮೇಲೆ. ಆರ್ತರಿಗಾದರೂ ಅಷ್ಟೆ: ಈ ಸ್ವಾಮಿ ಮೊದಲು, ಉಳಿದದ್ದು ಆಮೇಲೆ.

ಸ್ವಾಮಿ ಇದನ್ನೆಲ್ಲಾ ಯೋಚಿಸಿಯೇ ಇದ್ದಾರೆ. ಆದ್ದರಿಂದಲೇ ತಮ್ಮ ಹದಿನಾಲ್ಕನೇ ವಯಸ್ಸಿನಲ್ಲಿ ಮನೆ ಮಠ ಬಂಧು-ಬಳಗಗಳನ್ನು ತೊರೆದು, ಲೋಕಹಿತಕ್ಕಾಗಿ ಕಾರ್ಯೋನ್ಮುಖರಾಗಿದ್ದಾರೆ. ಇವರು ಸ್ಥಾಪಿಸಿರುವ ಭಜನಮಂಡಲಿಗಳೂ ಸಾಯಿ ಸಮಿತಿಗಳೂ ಮಹಿಳಾಮಂಡಲಿಗಳೂ ಬಾಲವಿಕಾಸಗಳೂ ಸೇವಾದಳಗಳೂ ಶ್ರೀ ಸತ್ಯ ಸಾಯಿ ಕಾಲೇಜುಗಳೂ ಈ ದಿಕ್ಕಿನಲ್ಲಿ ಸದ್ದಿಲ್ಲದೆ ಗದ್ದಲವಿಲ್ಲದೆ ಕೆಲಸ ಮಾಡುತ್ತಿವೆ. ಪ್ರಶಾಂತಿ ನಿಲಯದಿಂದ ಪ್ರಕಟವಾಗುತ್ತಿರುವ "ಸನಾತನ ಸಾರಥಿ"ಯ ಸಂಪುಟಗಳನ್ನು, ಜೊತೆಗೆ ಸ್ವಾಮಿ ಅನುಗ್ರಹಿಸಿರುವ ವಿವಿಧ "ವಾಹಿನಿ"

ಗಳನ್ನು, ಅಲ್ಲದೆ ಇದುವರೆಗಿನ 9 Satya Sai speaks ಸಂಪುಟ ಗಳನ್ನು. ಇವುಗಳ ಜೊತೆಗೆ Summer showers in Brindavan ಉಪನ್ಯಾಸಮಾಲೆಯ ಮೂರು ಭಾಗಗಳನ್ನು ಪರಿಶೀಲಿಸಿದರೆ—ಸ್ವಾಮಿ ಯಾರಿಗಾಗಿ ಇದ್ದಾರೆ? ಏನು ಮಾಡು ತ್ತಿದ್ದಾರೆ? ಹೇಗೆ ಮಾಡುತ್ತಿದ್ದಾರೆ? ಎಂಬುದಕ್ಕೆ ಉತ್ತರ ದೊರಕುತ್ತದೆ.

"ಜ್ಞಾನಂ ವಿಜ್ಞಾನ ಸಹಿತಂ" ಎಂದ ಹಾಗೆ, ಪುಸ್ತಕಗಳಲ್ಲಿ ಇದನ್ನೆಲ್ಲಾ ಓದಿ ತಿಳಿದುಕೊಂಡಾದ ಮೇಲೆ ಸಾಯಿಸಂಸ್ಥೆಗಳು ಮಾಡುತ್ತಿರುವ ಕಾರ್ಯವನ್ನು ಕಣ್ಣಾರೆ ಕಂಡಾಗ, ಹೃದಯಕ್ಕೆ ಹೃದಯವೇ ಸಾಕ್ಷಿಯಾಗುತ್ತದೆ.

ಮಹಾವೀರ, ಬುದ್ಧ, ಯೇಸು, ಮಹಮ್ಮದ್, ಶಂಕರ, ರಾಮಾನುಜ, ಬಸವಣ್ಣ, ಮಧ್ವ, ಶ್ರೀರಾಮಕೃಷ್ಣ ಮೊದಲಾದ ಮಹಾಮಹಿಮರನ್ನು ಕಟ್ಟಿಕೊಂಡಿರುವ ಹಾಗೆಯೇ ಈಗ ನಾನು ಶ್ರೀ ಸತ್ಯಸಾಯಿಯನ್ನೂ ಆಶ್ರಯಿಸಿಕೊಂಡಿರುವುದು ಈ ಕಾರಣ ದಿಂದ. ಸ್ವಾಮಿಯು ಸಂಕಲ್ಪಿಸಿರುವ ಲೋಕಕಲ್ಯಾಣ ಕಾರ್ಯದಲ್ಲಿ ನನಗೂ ಒಂದು ಅಳಿಲುಸೇವೆಯ ಅವಕಾಶ ಆಗಾಗ ದೊರಕುತ್ತಿರು ವುದು ನನ್ನ ಭಾಗ್ಯವೆಂದು ಭಾವಿಸಿದ್ದೇನೆ.

* * *

ಇನ್ನೂ, Establishment ಬಗ್ಗೆ ಅವರ ನಿಲುವೇನು, ಎಂದು ಕೇಳಿದ್ದೀರಿ. ಅದಕ್ಕೆ ಉತ್ತರ—"ನನಗೆ ಗೊತ್ತಿಲ್ಲ". ಇವೊತ್ತು ಬಂದು, ನಾಳೆ ಇದ್ದು, ನಾಳಿದ್ದು ಹೋಗುವ

ಅಲ್ಪಾಯುಷ್ಯದ ಸರಕಾರಗಳ ಬಗ್ಗೆ ಅವರು ಮಾತನಾಡಿದ್ದನ್ನು ನಾನು ಕೇಳಿಲ್ಲ, ಅವರು ಬರೆದಿದ್ದರೆ ನಾನು ಓದಿಲ್ಲ. "ನ ಬುದ್ಧಿ ಭೇದಂ ಜನಯೇತ್ ಪ್ರಾಜ್ಞಃ" ಬಹಿರಂಗವಾಗಿ ಸ್ವಾಮಿ ಇದರ ಬಗ್ಗೆ ಪ್ರಸ್ತಾಪ ಮಾಡುವುದಿಲ್ಲ. ಆದರೆ, ಅನ್ಯಾಯ-ಅಕ್ರಮ-ಅನೀತಿ- ಅಧರ್ಮಗಳನ್ನು ಅವರು ವಿರೋಧಿಸುತ್ತಾರೆ. ಕಿವಿ ಇದ್ದವರು ಕೇಳುತ್ತಾರೆ; ಬುದ್ಧಿ ಇದ್ದವರು ಅರ್ಥಮಾಡಿ ಕೊಳ್ಳುತ್ತಾರೆ; ನೀತಿ ಇದ್ದವರು ಅದರಂತೆ ನಡೆದುಕೊಳ್ಳುತ್ತಾರೆ. ತಾವು ಬಂದಿರುವುದು ಸತ್ಯ - ಧರ್ಮ - ಶಾಂತಿ - ಪ್ರೇಮಗಳ establishmentಗಾಗಿ ಎಂದು ಹೇಳುತ್ತಾರೆ; (For the establishment of the kingdom of God ಎಂದು ಯೇಸು ಸ್ವಾಮಿ ಹೇಳಿದ ಹಾಗೆ.)

ಅಂದರೆ, 'ಚಾರಿತ್ರ್ಯಹೀನರಾದರೂ ಅಧಿಕಾರಾರೂಢರಾದ ಮಂತ್ರಿಮಾನ್ಯರು' ಸ್ವಾಮಿಯ ಹತ್ತಿರ ಬರಬಾರದೇನು? ಅವರೂ ಮನುಷ್ಯರೇ ಅಲ್ಲವೇ? ಸ್ವಾಮಿ ಅವರನ್ನು ಆಶೀರ್ವದಿಸು ವುದರಲ್ಲಿ ತಪ್ಪೇನು? ಸಾಯಿ ಮಾತೆಗೆ ಇವರೂ ಮಕ್ಕಳೇ. ಆದರೆ, ತಾಯಿಯ ಅನುಗ್ರಹವನ್ನೂ ಆಶೀರ್ವಾದವನ್ನೂ ಒಳಕೊಳ್ಳುವುದಕ್ಕೆ ಇವರಿಗೆ ಪಾತ್ರತ್ವ ಬೇಡವೆ? ಹಾಗೆ ಬಂದವರನ್ನು ಸ್ವಾಮಿ ಆಪ್ತರಾಗಿ ಇಂಟರ್‌ವ್ಯೂಗೆ ಕರೆದಾಗ, ಅಲ್ಲಿ ಆ ಏಕಾಂತದಲ್ಲಿ ಅವರು ಏನು ಕೇಳುತ್ತಾರೆಯೋ, ಸ್ವಾಮಿ ಅವರಿಗೆ ಏನು ಹೇಳುತ್ತಾರೆಯೋ ಅದು ಅವರಿಬ್ಬರಿಗೆ ಮಾತ್ರ ಗೊತ್ತು. ಅದರ ಬಗ್ಗೆ ನಾವು ಊಹಾಪೋಹಗಳನ್ನು ಕಲ್ಪಿಸಿ ಕೊಂಡದ್ದರಿಂದ ಏನೂ ಲಾಭವಿಲ್ಲ.

ಇದರ ಬಗ್ಗೆ ನಾನು ಹೇಳಬಹುದಾದ್ದು ಇನ್ನೂ ಏನೂ ಇಲ್ಲ.

* * *

ಮುಂದೆ, ನನ್ನನ್ನು "ಬಾಬಾ ಅವರ ಅಂತರಂಗದ ಪಾರ್ಷದ" ಎಂದು ಕರೆದಿದ್ದೀರಿ. ಈ ವರ್ಣನೆಗೆ ನಾನು ಸರ್ವಥಾ ಪಾತ್ರನಲ್ಲ. ನನ್ನ ಪೂರ್ವಿಕರಲ್ಲೊಬ್ಬನಾದ ಕವಿಚಕ್ರವರ್ತಿ ರನ್ನನು—

ನೆಗಳ್ದ ಕವಿರತ್ನ ನಂತೊಳ-
ಪುಗುವುದು ಮೊಗ್ಗಾಯ್ತ್ತ ಜಿನಮತಾಂಬೋಧಿಯುಮಂ
ಪುಗದಾಗಮಮರಿವರ ಬಗೆ-
ವುಗದೆ ಕೆಲರ್ ಕವಿಗಳಾಡಿದರ್ ತಡಿದಡಿಯೊಳ್

ಎಂದ. ನಾನು ಅವನ ಹೆಸರಿನವನೇ ಆದರೂ ಅವನಂತೆ ಆಡುವ ಕೆಚ್ಚು ನನಗಿಲ್ಲ. ಏಕೆಂದರೆ ಅವನಲ್ಲಿದ್ದ ಹುರುಳು ನನ್ನಲಿಲ್ಲ. ಶ್ರೀಮದಾಂಜನೇಯನ ಮಾತನ್ನು 'ಕಾಪಿ' ಮಾಡಿ—"ಮತ್ತಃ ಪ್ರತ್ಯವರಃ ಕಶ್ಚಿನ್ನಾಸ್ತಿ ಸಾಯೀಶ ಸನ್ನಿಧೌ" ಎಂದು ಹೇಳಿದರೆ, ಅದೂ ತಪ್ಪಾಗುತ್ತದೋ ಏನೋ! ಪಂಪ, ಪೊನ್ನ, ರನ್ನರನ್ನು ನಾವು "ಜಿನಸಮಯ ದೀಪಕರ್" ಎಂದು ಕರೆಯುತ್ತೇವೆ. ಅದನ್ನು 'ಕಾಪಿ' ಮಾಡಿ ನನ್ನನ್ನು 'ಸಾಯಿಸಮಯದೀಪಕ"ನೆಂದು ಯಾರಾದರೂ ಕರೆದರೆ, ಆ ಹೆಸರಿಗೆ ಅರ್ಹನಾಗಲು ಪ್ರಯತ್ನಿಸು ತ್ತೇನೆ.

ಇದುವರೆಗೆ ನಾನು ಬರೆದು ಪ್ರಕಟಿಸಿರುವ ಸಾಯಿಚಿಂತನ, ಸಾಯಿ ಸರಸ್ವತಿ, ಸಾಯಿ ವಚನಮಧು, ಸಾಯಿ ಸುಧಾಬಿಂದು,

ಸಾಯಿ ಸಲ್ಲಾಪ, ಕೆಲವು ಸಾಯಿ ಕತೆಗಳು, ಸಾಯಿ ಮಹಾಪರ್ವ, ಸಾಯಿ ದಾಸೋಹ ಇವೇ ಮೊದಲಾದ ಪುಸ್ತಕಗಳಲ್ಲಿ ಈ "ದೀಪನ ಕಾರ್ಯ"ವನ್ನು ಕೊಂಚ ಮಟ್ಟಿಗೆ ಮಾಡುತ್ತಿದ್ದೇನೆ.

ಯಾವ ಹೊತ್ತಿನಲ್ಲಿ ಆ "ಶಿಶುಪಾಲ"ರು ನನ್ನನ್ನು "ಚಕ್ರವರ್ತಿ ವಜ್ರ" ಎಂದು ಕರೆದು ಅಪಹಾಸ್ಯ ಮಾಡಿದರೋ ಆ ಶುಭಗಳಿಗೆಯಿಂದ ನಿಮ್ಮ ಹಾಗೆಯೇ ಇನ್ನೂ ಹತ್ತಾರು ಜನ ನನಗೆ ಕಾಗದ ಬರೆದು ಶ್ರೀ ಸತ್ಯ ಸಾಯಿ ಬಾಬಾ ಅವರನ್ನು ಕುರಿತು ಪ್ರಶ್ನೆ ಕೇಳಿದ್ದಾರೆ. ಅನೇಕ ಸಾಯಿ ಸಮಿತಿಗಳಲ್ಲಿ "ಸಾಯಿಸಮಯ"ವನ್ನು ಕುರಿತು ಮಾತನಾಡಲು ನನಗೆ ಅವಕಾಶ ಕೊಟ್ಟಿದ್ದಾರೆ.

"ಸಾಯಿ ಸಮಯ"ವೆಂಬುದು ಕಿವಿಗೆ ಹಿತವಾದ ಹೆಸರು. ಇದನ್ನು ನನ್ನ ಮುಂದಿನ ಪುಸ್ತಕಕ್ಕೆ ಇಟ್ಟುಕೊಳ್ಳುತ್ತೇನೆ. ಅದರಲ್ಲಿ ಸ್ವಾಮಿಯ ಬಗ್ಗೆ ಇತರರು ಕೇಳಿರುವ ಪ್ರಶ್ನೆಗಳಿಗೆ ಸೂಕ್ತವಾದ ಉತ್ತರಗಳನ್ನು ಕೊಡಲು ಪ್ರಯತ್ನಿಸುತ್ತೇನೆ.

* * *

ಯಾವುದನ್ನು ನಾವು "ಪವಾಡ" ಎನ್ನುತ್ತೇವೆ, ಯಾವುದನ್ನು ಇಂಗ್ಲಿಷಿನಲ್ಲಿ "miracle" ಎನ್ನುತ್ತಾರೆ, ಅದಕ್ಕೆ ಸಾಯಿ ಪರಿಭಾಷೆಯಲ್ಲಿ "ಮಹಿಮಾ" ಎಂದು ಹೆಸರು.

ಸ್ವಾಮಿಯ ಸಂಕಲ್ಪಮಾತ್ರದಿಂದ ಸೃಷ್ಟಿಯಾಗುವುದು ಎಲ್ಲವೂ ಅವರ ಮಹಿಮೆಗೆ 'ನಿದರ್ಶನ'ವೇ ಹೊರತು, ಅವು 'ಪ್ರದರ್ಶನ'ಕ್ಕಲ್ಲ. "ನಾನು ಈಗ ಇದು ಮಾಡುತ್ತೇನೆ, ನೋಡಿ" ಎಂದು ಸ್ವಾಮಿ ಯಾವುದನ್ನೂ 'ಮಾಡು'ವುದಿಲ್ಲ. ಅವರು

ಮನಸ್ಸು ಮಾಡಿದೊಡನೆ ರೆಪ್ಪೆ ಹೊಯ್ಯುವುದರೊಳಗಾಗಿ ಅದು 'ಆಗಿ' ಹೋಗುತ್ತದೆ.

ಕಳೆದ 36 ವರ್ಷಗಳಿಂದ ಇಂಥ ಪವಾಡಗಳು ಎಷ್ಟೋ ಆಗಿ ಹೋಗಿವೆ. ಅವುಗಳನ್ನು ಕಂಡವರು ಇದ್ದಾರೆ, ನಾನು ಕೆಲವನ್ನು ಕಂಡಿದ್ದೇನೆ. ಆದರೆ ಸ್ವಾಮಿಯ ದಿವ್ಯೋಪದೇಶಕ್ಕೆ ಕೊಡುವಷ್ಟು ಬೆಲೆಯನ್ನು ನಾವು ಈ ಪವಾಡಗಳಿಗೆ ಕೊಡುವುದಿಲ್ಲ. ಏಕೆಂದರೆ, ಇವುಗಳಿಗೆ ಅಷ್ಟು ಗಮನ ಕೊಡತಕ್ಕದ್ದಲ್ಲ ಎಂದು ಸ್ವಾಮಿಯೇ ಹೇಳಿದ್ದಾರೆ.

ಹಾಗಿದ್ದರೆ, ಈ ಪವಾಡಗಳ ಅಗತ್ಯವಾದರೂ ಏನು? ಎಂದು ಕೇಳಬಹುದು. ಇದು ಜನಗಳನ್ನು ಹತ್ತಿರ ಬರಮಾಡಿಕೊಳ್ಳುವುದಕ್ಕೆ ಒಂದು ಸರಸವಾದ ಉಪಾಯ. ಈ ನೆಪದಿಂದ ಹತ್ತಿರ ಬಂದವರ ಚಿತ್ತಗಳನ್ನು ಉಪದೇಶದಿಂದ ಶುದ್ಧಿಮಾಡುವುದು ಮುಂದಿನ ಹೆಜ್ಜೆ.

ಅಶ್ವಘೋಷ ತನ್ನ ಸೌಂದರನಂದದಲ್ಲಿ ವೈರಾಗ್ಯದ ಸಂದೇಶವನ್ನು ಸಾರುವಾಗ ಸುಂದರೀನಂದರ ಶೃಂಗಾರದ ಕತೆಯನ್ನು ವರ್ಣಿಸುತ್ತಾನೆ. "ಏನಯ್ಯಾ, ವಿರಕ್ತಿಯಲ್ಲಿ ಹೀಗೆ ಅನುರಕ್ತಿಯನ್ನು ಬೆರೆಸಬಹುದೆ?" ಎಂದು ಆಕ್ಷೇಪಿಸಿದವರಿಗೆ—"ಅದು ಯಾಕೆ ಶೃಂಗಾರವನ್ನು ಹೇಳುತ್ತೇನೆ. ಗೊತ್ತಾ? ಶ್ರೋತೃಣಾಂ ಗ್ರಹಣಾರ್ಥಂ ಅನ್ಯಮನಸಾಂ!" ಎನ್ನುತ್ತಾನೆ. ಅದರಂತೆಯೇ ಈ ಸ್ವಾಮಿಯಾದರೂ "ನಿಮಗೆ ಏನು ಬೇಕೋ ಅದನ್ನು ಮೊದಲು ಕೊಟ್ಟು, ಅನಂತರ ನಾನು ಏನು ಕೊಡಬೇಕೋ ಅದನ್ನೂ ನಿಮಗೆ ಕೊಡುತ್ತೇನೆ" ಎನ್ನುತ್ತಾರೆ.

ಆದ್ದರಿಂದ ಇವರ "ಪವಾಡ" is not an end in itself; is a means to The End.

"ಈ ಪವಾಡಗಳನ್ನು ಬಾಬಾ ಹೇಗೆ ಮಾಡುತ್ತಾರೆ? ಅಥವಾ ನೀವು ಹೇಳುವಂತೆ ಇವು ಅವರಿಂದ ಹೇಗೆ ಆಗುತ್ತವೆ? ಇದರ ತಂತ್ರವೇನು?" ಎಂದು ಕೆಲವರು ಕೇಳುತ್ತಾರೆ. ಅದಕ್ಕೆ ನನ್ನ ಉತ್ತರ: (ನಮ್ಮ 'ಹೊಯಿಸಳ'ರ ಮಗು ಹೇಳಿದ ಹಾಗೆ)"ನಂ-ಗೊ-ತ್ತಿ-ಲ್ಲಾ-ಪ್ಪಾ!" ನನಗೆ ಅದನ್ನು ತಿಳಿಯಬೇಕೆಂಬ ಕುತೂಹಲವೂ ಇಲ್ಲ. ಏಕೆಂದರೆ, ಬುದ್ಧನ ಪರಿಭಾಷೆಯಲ್ಲಿ ಹೇಳುವುದಾದರೆ, these are unprofitable questions. "ಇದರ ರಹಸ್ಯವನ್ನು ತಿಳಿಯಲು ಪಡುವ ಪ್ರಯತ್ನವು ವ್ಯರ್ಥ" ಎಂದು ಸ್ವಾಮಿ ಹೇಳಿಬಿಟ್ಟಿದ್ದಾರೆ.

ನಮ್ಮಲ್ಲಿ ಕೆಲವರು, ಯಾವುದಾರೂ ಅರ್ಥವಾಗದಿದ್ದರೆ, ತಲೆ ಕರೆದುಕೊಳ್ಳುತ್ತಾರೆ; ಇನ್ನೂ ಅರ್ಥವಾಗದೆ ಹೋದರೆ, ಮೈಪರಚಿಕೊಳ್ಳುತ್ತಾರೆ: ಹಾಗೂ ಗೊತ್ತಾಗದೆ ಹೋದಾಗ ಬಾಯಿ ಹೊಯ್ದುಕೊಳ್ಳುತ್ತಾರೆ.

ಅದರಲ್ಲಿ ನಂಬಿಕೆಯಿರುವವರು ಆ ಮಾರ್ಗಗಳಲ್ಲಿ ಬೇಕಾದರೆ ಮುಂದುವರಿಯಲಿ, ನನಗಾದರೋthe miracle leaves me high and dry. Miracles ಉಂಟು, but I am not interested.

*   *   *

"ಗುರೋಸ್ತು ಮೌನಂ ವ್ಯಾಖ್ಯಾನಂ, ಶಿಷ್ಯಾಸ್ತು ಛಿನ್ನ ಸಂಶಯಾ-" ಮಾತಿಗಿಂತ ಮೌನಮೇಲು; ಅಂಥ ಗುರು ಇದ್ದಾಗ, ಅಂಥ ಶಿಷ್ಯರು ಇದ್ದಾಗ. ಆದರೆ ನಮ್ಮಂಥ ಶಿಷ್ಯರಾದರೆ, ಎಂಥ ಸರ್ವಜ್ಞ ಗುರುವಾದರೂ ಮಾತನ್ನು ಆಶ್ರಯಿಸಲೇಬೇಕು. ಅದರಿಂದಲೇ ಸ್ವಾಮಿ "ಭಾಷಣ" ಮಾಡುವುದಿಲ್ಲ, "ಸಂಭಾಷಣ" ನಡಸುತ್ತಾರೆ. ತಮ್ಮ ಮನಸ್ಸಿನಲ್ಲಿರುವ ಶಂಕೆಗಳನ್ನು ಸಂದೇಹ ಗಳನ್ನೂ ಪ್ರಶ್ನೆಗಳನ್ನೂ ಹೇಗೆ ಕೇಳುವುದು ಎಂದು ತಿಳಿಯದೆ ತೊಳಲಾಡುತ್ತಿರುವವರ ಮನಸ್ಸಿಗೆ ನೆಮ್ಮದಿ ಕೊಡುವಂತಹ ಉತ್ತರಗಳನ್ನು ಅವರು ಬಾಯಿಬಿಟ್ಟು ಕೇಳದೆಯೇ ಸ್ವಾಮಿ ಅವರಿಗೆ ಕೊಟ್ಟಿರುತ್ತಾರೆ, ತಮ್ಮ ದಿವ್ಯೋಪದೇಶಗಳೆಂಬ ಸಂಭಾಷಣೆ ಗಳಲ್ಲಿ. ಇದು ಅನೇಕರಿಗೆ ಆಗಿರುವ ಅನುಭವ. ಇದು ಬುದ್ಧಿಯ ಮಟ್ಟದ್ದು..

ಇದಕ್ಕಿಂತಲೂ ಸೂಕ್ಷ್ಮವಾದ ಸಂಭಾಷಣೆ ಇನ್ನೊಂದಿದೆ, ಅದು ದೃಷ್ಟಿ ಸಂಗಮದಿಂದ. You look at me and I look at You ಎಂಬ ಆಶ್ವಾಸನದಿಂದ ಸ್ವಾಮಿಯ ಹೃದಯ ಭಕ್ತನ ಹೃದಯ ದೊಂದಿಗೆ ಪ್ರೇಮದಿಂದ ಮಾತಾಡುತ್ತದೆ. ಸ್ವಾಮಿಯ ದರ್ಶನಕ್ಕಾಗಿ ಬಂದವರಲ್ಲಿ ಬಹುಪಾಲಿನ ಜನ ಇದಿಷ್ಟರಿಂದಲೇ ಧನ್ಯರಾಗುತ್ತಾರೆ. ಇಲ್ಲಿಂದ ಆಚೆಗೆ ಪಾದಸ್ಪರ್ಶನ ಪಡೆಯುವವರಿ ದ್ದಾರೆ, ವಿಭೂತಿ ಪ್ರಸಾದ ಪಡೆಯುವವರಿದ್ದಾರೆ, ಇಂಟರ್‌ವ್ಯೂ ಪಡೆಯುವವರೂ ಇದ್ದಾರೆ. ನಿಮ್ಮ ಕಾಗದದಲ್ಲಿ ನೀವೇ ಹೇಳಿರುವ ಹಾಗೆ, ಇವೆಲ್ಲವೂ "ಯಮೇವ ಏಷ ವೃಣುತೇ ತೇನ ಲಭ್ಯಃ". ಯಾರಿಗೆ ಏನು ಕೊಡಬೇಕು, ಅದು ಸ್ವಾಮಿಗೆ ಗೊತ್ತು. ಯಾವಾಗ,

ಏಕೆ ಕೊಡಬೇಕು, ಅದೂ ಸ್ವಾಮಿಗೇ ಗೊತ್ತು.

ಸ್ವಾಮಿಯ ಮಾತು ಅನುಭವವೇದ. ಸನಾತನ ಧರ್ಮದ ಸರೋವರಗಳ ಜಲವನ್ನು ರುಚಿ ನೋಡಿರುವವರಿಗೆ ಸಾಯಿ ವಾಣಿಯೂ ಅದೇ ಹೃದಯದ ಒಂದು ಹೊಸ ಹ್ರದವಾಗಿ ಕಂಡರೆ ಆಶ್ಚರ್ಯವೇನಿಲ್ಲ. ಅನುಭಾವದ ಮಾತನ್ನು ಎಷ್ಟು ಆಡಿದರೆ ತಾನೆ ಏನು? ಅದರಂತೆ ಬದುಕಿನಲ್ಲಿ ನಡೆದಾಗ ತಾನೆ ಆಡಿದ್ದು ಸಾರ್ಥಕ!

ಸತ್ಯ ನನ್ನ ಪ್ರಚಾರ, ಧರ್ಮ ನನ್ನ ಆಚಾರ;
ಶಾಂತಿ ನನ್ನ ಸ್ವಭಾವ, ಪ್ರೇಮ ನನ್ನ ಸ್ವರೂಪ.

ಎನ್ನುತ್ತಾರೆ ಈ ಸ್ವಾಮಿ. My life is my message ಎನ್ನುತ್ತಾರೆ. "ಬನ್ನಿ, ಪರೀಕ್ಷಿಸಿ, ಅನುಭವಿಸಿ ನೋಡಿ" ಎನ್ನುತ್ತಾರೆ. ಹೀಗೆ ಬಂದು ನೋಡಿದವರಲ್ಲಿ ಒಬ್ಬರಾದ ಡಾ|| ಕೆ. ಎಂ. ಮುನ್ಷಿ (ಭಾರತೀಯ ವಿದ್ಯಾಭವನದ ಸ್ಥಾಪಕರು) I came, I saw and I was conquered ಎಂದು ಉದ್ಗರಿಸಿದರು. ಇದು ಸ್ವಾಮಿಯ ಪ್ರೇಮವಿಜಯಕ್ಕೆ ಒಂದು ಸಣ್ಣ ಉದಾಹರಣೆ.

"ರಸೋಕ್ತಂ ರಸೇತರಮೆಂದಂದಿವು ತಾವೆ ಪೇಳವೆ? ವೃಥಾ ಸಂರಂಭ ಮೇಗೆಯ್ವುದೋ?" ಎಂಬ ಮಾತು ನನಗೆ ತುಂಬಾ ಪ್ರಿಯವಾದದ್ದು, ಇದು ಕಾವ್ಯಕ್ಕೆ ಮಾತ್ರವಲ್ಲ, ಬದುಕಿನ ಯಾವ ಅಂಗಕ್ಕಾದರೂ ಇದನ್ನು ಅನ್ವಯಿಸಿ ಹೇಳಬಹುದು. ಈ ಮಾತನ್ನು ಹೇಳಿದವನು ಚೌಂಡರಸನೆಂಬ ಕನ್ನಡ ಕವಿ, ತನ್ನ "ದಶಕುಮಾರ ಚರಿತೆ"ಯಲ್ಲಿ.

ಸ್ವಾಮಿಯೇ ಜೀವಂತವಾಗಿ ಎದುರಿಗೆ ಇರುವಾಗ— ಅವರ ಪಟಗಳನ್ನು ನೋಡುವುದು, ಅವರ ವಾಣಿಯನ್ನು ಒಳಗೊಂಡ

ಪುಸ್ತಕಗಳನ್ನು ಓದುವುದು, ಅವರನ್ನು ಕಂಡುಬಂದವರ ವರದಿಗಳನ್ನು ಕೇಳುವುದು, ಇವೆಲ್ಲ second-hand ಜ್ಞಾನ. ನೇರವಾಗಿ ಅವರನ್ನು ಕಣ್ಣಾರೆ ಕಂಡು, ಕಿವಿ ಯಾರೆ ಕೇಳಿ, ಅನಂತರ— "ವಿಮೃಶ್ಯ ಏತದಶೇಷೇಣ ಯಥೇಚ್ಛಸಿ ತಥಾ ಕುರು" ಎನ್ನುವುದು ಋಜುವಾದ ರಾಜಮಾರ್ಗ. "ಸಂತಃ ಪರೀಕ್ಷ್ಯ ಅನ್ಯತರದ್ಭಜಂತೇ... ಸಂದೇಹಪದೇಷು ವಸ್ತುಷು ಪ್ರಮಾಣಮಂತಃಕರಣ ಪ್ರವೃತ್ತಯಃ" ಎಂಬ ಈ ಎರಡು ಮಹಾಕವಿವಾಕ್ಯಗಳನ್ನು ನಾವು ದಾರಿದೀಪಗಳಾಗಿ ಇಟ್ಟುಕೊಳ್ಳಬಹುದು.

ಸ್ವಾಮಿ ಭಗವದ್ಗೀತೆಯ ಎರಡು "ಅಷ್ಟಾಕ್ಷರಿ"ಗಳನ್ನು ನಮಗೆ ಪುನಃ ಪುನಃ ಜ್ಞಾಪಿಸಿಕೊಡುತ್ತಾರೆ. ಅವುಗಳಲ್ಲಿ "ಶ್ರದ್ಧಾವಾನ್‌ಲಭತೇ ಜ್ಞಾನಂ" ಎಂಬುದು ಒಂದು ; 'ಸಂಶಯಾತ್ಮಾ ವಿನಶ್ಯತಿ' ಎಂಬುದು ಇನ್ನೊಂದು.

ವಸ್ತುಸ್ಥಿತಿಯ ಅರಿವಾಗುವ ಮುಂಚೆ ಆರೋಗ್ಯಕರವಾದ ಸಂಶಯಗಳನ್ನೂ ಸಂದೇಹಗಳನ್ನೂ ಹೊಂದಿರುವುದು ತಪ್ಪಾಗುವುದಿಲ್ಲ. ಆದರೆ ಅದೇ ಒಂದು ರೂಢಿಯಾಗಿಬಿಟ್ಟು 'ಸಂಶಯಾತ್ಮ'ನಾದರೆ ಅದು ಆತ್ಮಘಾತ. ಇದನ್ನು balance ಮಾಡುವುದಕ್ಕೆ 'ಶ್ರದ್ಧೆ'ಯಿರಬೇಕು. ಗೀತೆ ಹೇಳುವ ಇದನ್ನು ನೀವೂ ಬಲ್ಲವರಾಗಿದ್ದೀರಿ. ಆದ್ದರಿಂದ ಸ್ವಂತ ಅನುಭವ ಆಗುವವರೆಗೂ ಸಂಶಯಗಳು ಕಾಡಿಯೇ ಕಾಡುತ್ತವೆ.

ಹಾಗಾದರೆ, ಸ್ವಾಮಿಯನ್ನು ಕಾಣುವುದು ಹೇಗೆ? ಎನ್ನುತ್ತೀರಿ, ಅವರನ್ನು ಕಾಣುವುದು ಸುಲಭ. ಪುಟ್ಟಪರ್ತಿಯಲ್ಲೋ ಬೃಂದಾವನದಲ್ಲೋ ಅವರು ಇರುವ ದಿನ

ತಿಳಿದುಕೊಂಡು, ಅಲ್ಲಿ ನೆರೆದಿರುವ ನೂರಾರು ದರ್ಶನಾರ್ಥಿಗಳ ಜೊತೆಯಲ್ಲಿ ನಾವೂ ಒಬ್ಬರಾಗಿ ಕುಳಿತರೆ—ಸ್ವಾಮಿ ಬರುತ್ತಾರೆ, ನಮ್ಮ ಹತ್ತಿರದಲ್ಲಿಯೂ ಬರುತ್ತಾರೆ. ಆಗ ಅವರನ್ನು ಅತಿ ಹತ್ತಿರದಲ್ಲಿ ಕಣ್ಣುತುಂಬ ಕಾಣಬಹುದು. ನಮಗೆ ಲಭ್ಯವಿದ್ದರೆ ಅವರ ಕಟಾಕ್ಷಕ್ಕೆ ನಾವು ಪಾತ್ರರಾಗಬಹುದು, ಅವರ ಮಂದಸ್ಮಿತದಲ್ಲಿ ಮುಳುಗಬಹುದು; ಇಂಟರ್‌ವ್ಯೂ ಲಭಿಸಿದರೂ ಲಭಿಸಬಹುದು.

ಜೈನರಲ್ಲಿ "ಕಾಲಲಬ್ಧಿ" ಎಂಬ ಒಂದು concept ಇದೆ. ಆ ಶುಭಗಳಿಗೆ ಒದಗುವವರೆಗೂ ನಮಗೆ ಆಗದಿರುವ ಲಾಭ, ಅದು ಒದಗಿದೊಡನೆ ಆಗಿಬಿಡುತ್ತದೆ. ಅಲ್ಲಿಯವರೆಗೂ ನಾವೇನು ಮಾಡಿದರೂ ಅದರಿಂದ ಫಲವಿಲ್ಲ.

ಅದೇ ಜೈನರಲ್ಲಿ "ಭವ್ಯ, ಆಸನ್ನ ಭವ್ಯ, ದೂರ ಭವ್ಯ, ಅಭವ್ಯ" ಎಂದು ಜೀವಗಳನ್ನು ನಾಲ್ಕಾಗಿ ವರ್ಗೀಕರಿಸುತ್ತಾರೆ. ಸತ್ಸಂಗದಲ್ಲಿಯೂ ಸತ್ಪುರುಷರಲ್ಲಿಯೂ ಆಸಕ್ತಿಯುಂಟಾಗುವುದು ಭವ್ಯತೆಯ ಗುರುತು. ಇದೇ ಜೀವಿಯನ್ನು ಕೈ ಹಿಡಿದು ಮೇಲು ಮೇಲಕ್ಕೆ ಕರೆದೊಯ್ಯುತ್ತದೆ, ಎನ್ನುತ್ತಾರೆ ಜೈನಮಹರ್ಷಿಗಳು.

ಆದ್ದರಿಂದ ನಿಮ್ಮ ಹಂಬಲವೇ ನಿಮ್ಮನ್ನು ಸಕಾಲದಲ್ಲಿ ಸ್ವಾಮಿಯ ಸನ್ನಿಧಿಗೆ ಕರೆದೊಯ್ಯುತ್ತದೆ ಎಂದು ನನಗೆನ್ನಿಸುತ್ತದೆ.

ಬಾಬಾ ಅವರನ್ನು ನೀವು ಕಾಣಿಸುತ್ತೀರಾ ಎಂದು ಕೇಳಿದ್ದೀರಿ. ಇಲ್ಲಿ ಸ್ವಾಮಿಗೂ ಅವರನ್ನು ಕಾಣಬೇಕೆಂಬವರಿಗೂ ನಡುವೆ "ಮಧ್ಯವರ್ತಿ"ಗಳು ಯಾರೂ ಇರಬೇಕಾದ ಅಗತ್ಯವಿಲ್ಲ.

ಕೊನೆಯದಾಗಿ, ಹತ್ತು ವರ್ಷ ಹಿಂದೆ ನಾನು ಬರೆದ ಒಂದು ಕವನವನ್ನು ಇಲ್ಲಿ ಉದ್ಧಾರಮಾಡಿ, ನನ್ನ ಉತ್ತರವನ್ನು ಮುಗಿಸುತ್ತೇನೆ. ಕವನದ ಹೆಸರು—

ಪುಟ್ಟಪರ್ತಿ

'ಪುಟ್ಟಪರ್ತಿ'ಗೆ ನೀವು ಬರಲೆಬೇಕೆಂದಿಲ್ಲ;
ಹೃದಯದಲ್ಲಿ ಪ್ರೇಮವಿರೆ-ಅದೆ ಪುಟ್ಟ'ಪರ್ತಿ'.
ಈ ಪರ್ತಿವಾಸನೇ ಸಕಲಭೂತನಿವಾಸ!
ಇದ ನಂಬಿ, ವರ್ಧಿಸಲಿ ನಿಮ್ಮೆಲ್ಲರರ್ತಿ! ||೧||

ಇಲ್ಲಿಗೇ, ಈ ಪುಟ್ಟಪರ್ತಿಗೇ, ಶ್ರಮಪಟ್ಟು,
ಮನೆ ಬಿಟ್ಟು, ಹಣ ಕೊಟ್ಟು ಬರುವುದನಗತ್ಯ!
ಹರಿನಾಮಜಪವೆಲ್ಲಿ, ಶಿವಶಕ್ತಿಯರದೆಲ್ಲಿ.
ಅಲ್ಲಿ ನಾ-ಪುಟ್ಟಪರ್ತಿಯ ಸಾಯಿ, ಸತ್ಯ! ||೨||

ನನ್ನೆಡೆಗೆ ನೀವೆ ಬರಬೇಕೆಂಬ ವಿಧಿಯಿಲ್ಲ.
ಮಗು ಕೂಗಿದರೆ ಹೇಗೆ ಬರುವಳೋ ತಾಯಿ
ಅದರಂತೆ-ನೆನೆದವರ ಮನದಲ್ಲಿ ಮೈದೋರಿ
ಅಭಯದಮೃತವನೀವೆ-ನಾ ಸತ್ಯಶಾಯಿ.

ಬನ್ನಿ; ಸಂತೋಷ. ಬಾರದೆ ನಿಲ್ಲಿ; ಮುನಿಸಿಲ್ಲ.
ಯಾವ ಕಾಲಕೆ ನೀವು ಬರಬೇಕೊ ಆಗ
ಕರಸಿಕೊಳ್ಳುವೆ ನಾನೆ. ಅದುತನಕ ಬರಲಾಗ-
ದೆನ್ನೆಡೆಗೆ-ನೀವೇನೆ ಹಾಕಿದರು ಲಾಗ!

ನಂಬಿ ಕೆಟ್ಟವರಿಲ್ಲ ದೈವವನು. ಧನ್ಯವಾ-
ಗಲಿ ಬಾಯಿ ತನ್ನಿಷ್ಟದೈವವನು ಕರೆದು:
ಧನ್ಯವಾಗಲಿ ಕಣ್ಣು ತದ್ರೂಪವನೆ ಕಂಡು:
ಅಮೃತವಾಗಲಿ ಆತ್ಮ ಇತರವನು ಮರೆದು.

ತಾವು ಕೇಳಿದ ಎಲ್ಲಕ್ಕೂ ಉತ್ತರ ಬರೆದಿದ್ದೇನೆ ಎಂದು ಕೊಳ್ಳಲೆ? ವಿಶ್ವಾಸ ಹೀಗೇ ಬೆಳೆಯಲಿ.

ಇತಿ

ವಿಶ್ವಾಸ ಪೂರ್ವಕವಾಗಿ

ಜಿ. ಪಿ. ರಾಜರತ್ನಂ

BABA

B-for	BEING	(ಸತ್)
A-for	AWARENESS	(ಚಿತ್)
B- for	BLISS	(ಆನಂದ)
A-for	ATMA	(ಆತ್ಮ)

BABA ಎಂದರೆ—

ಸತ್-ಚಿತ್-ಆನಂದ ಸ್ವರೂಪನಾದ ಆತ್ಮ.

◆ ಸ್ವಭಾವೋ ದುರತಿಕ್ರಮಃ ◆

ಸ್ವಭಾವೋ ದುರತಿಕ್ರಮಃ

ಆದರಣೀಯ ಶ್ರೀ ರಾಜರತ್ನಂ ಅವರಿಗೆ ಗೌರವಪೂರ್ವಕ ವಂದನೆಗಳು.

(1) ನೆನ್ನೆ "ಭಯಾಗ್ರಫಿ" ಬೃಹದ್‌ಗ್ರಂಥ ಓದಿದೆ. ನನಗನಿಸಿದಂತೆ ಅದು ತುಂಬ ಜಾಳುಜಾಳಾಗಿದೆ. ನಿಮ್ಮ "ರತ್ನನ ಪದಗಳು" ಮತ್ತು ಪೂಜ್ಯ ಬೇಂದ್ರೆಯವರ "ಗಂಗಾವತರಣ"ದ ಬಗ್ಗೆ ದಿ. ಅನಕೃ ಅವರು ಹೇಳಿದರು ಎನ್ನಲಾದ ಅಭಿಪ್ರಾಯಗಳ ಉಲ್ಲೇಖ ಅನವಶ್ಯಕವಾಗಿ ಅದರಲ್ಲಿ ಬಂದಿದೆ. ಪೂಜ್ಯ ಮಾಸ್ತಿಯವರ ಕವನಗಳ ಬಗ್ಗೆ ದಿ. ಕೈಲಾಸಂರವರು ಹೀಗೆ ಅಂದಿದ್ದರು ಎಂಬ ಕುತ್ಸಿತ ಉಲ್ಲೇಖವೂ ಅದರಲ್ಲಿದೆ. ಸತ್ತು ಹೋದವರ ಬಾಯಲ್ಲಿ ಇದ್ದವರ ಕೀರ್ತಿಗೆ ಕಳಂಕ ತರುವ ಎತ್ತುಗಡೆ ಎದ್ದು ಕಾಣುತ್ತದೆ, ಇರಲಿ, ಅವರವರ ಸ್ವಭಾವ, "ಸ್ವಭಾವೋ ದುರತಿಕ್ರಮಃ!"

ಪುಟ 393ರಲ್ಲಿ 'ಬೇಶ್ರೀ' ಅವರು ಸಾಕಷ್ಟು ದಿಗ್ಬಂಧನ ಮಾಡಿಕೊಂಡು, ಹೀಗೆ ಪ್ರಕಟಿಸಿದ್ದಾರೆ:—

"ಹಳೆಯ ಕಥೆಯೊಂದಿದೆ—ಅದನ್ನಾರೂ ಬರೆದಿಲ್ಲ.
ಪ್ರಾಯಶಃ ಆ ಕಾರಣದಿಂದಾಗಿಯೋ ಏನೋ ಶ್ರುತಿ,

ಸ್ಮೃತಿಗಳಂತೆ ಬಾಯಿಂದ ಕಿವಿಗೆ, ಕಿವಿಯಿಂದ ಬಾಯಿಗೆ ಹೋಗಿ ಹೆಚ್ಚು ಪ್ರಚಾರದಲ್ಲಿದೆ. ಇದು ನಿಜವೆಂದು ನಾನು ಸಾಧಿಸುತ್ತಿಲ್ಲ. ಆದರೆ ಸ್ವಾರಸ್ಯ ವಾಗಿದೆ ಎಂಬುದರಿಂದ ಅದನ್ನಿಲ್ಲಿ ಉದ್ಧರಿಸು ತ್ತಿದ್ದೇನೆ. ಈ ಕತೆ ಸುಳ್ಳಿದ್ದರೂ ಇದ್ದೀತು. ನಾನು ಕೇಳಿದುದು ಹಾರಿಕೆಯ ಮಾತು.

"ಒಮ್ಮೆ ಟಿ. ಪಿ. ಕೈಲಾಸಂ ಯಾರಿಗೋ ಮಾಸ್ತಿ ಅವರನ್ನು ಪರಿಚಯ ಮಾಡಿಕೊಟ್ಟರಂತೆ.

"ಇವರು ಗೊತ್ತಿಲ್ಲವೆ? ಮಾಸ್ತಿ ವೆಂಕಟೇಶ ಅಯ್ಯಂಗಾರರು ಎಂದರೆ ಇವರೇ. ಇವರ ಪರಿಚಯ ವಿಲ್ಲದವರೇ ಇಲ್ಲ. ಅದು ಹೇಗೆ ನಿಮಗಿವರ ಪರಿಚಯವಾಗಲಿಲ್ಲ? ಇವರು ತುಂಬಾ ಒಳ್ಳೆಯ ಮನುಷ್ಯರು. ಆದರೆ ಅಷ್ಟೇ ಕೆಟ್ಟ ಕವನಗಳನ್ನು ಬರೆಯುತ್ತಾರೆ".

" 'ಕೈ' ಅವರ ರೀತಿಯೇ ಹೀಗೆ."

(2) ಅಂದ ಹಾಗೆ 'ಬೇಶ್ರೀ' ಅವರು 'ಚಕ್ರವರ್ತಿ ವಜ್ರ' ನನ್ನು ಪೂರ್ತಿಯಾಗಿ ಖಂಡಿಸಿ ಇದ್ದಾರೆ ಎಂದೇನಿಲ್ಲ. ಈ ಹೊತ್ತಿಗೆಯಲ್ಲಿ (ಪುಟ277)

"ರಾಜರತ್ನಂ ಅವರ 'ಹನಿಗಳು' ಕೈಗೆ ಸಿಕ್ಕಿತು. ಓದಿ ಮೆಚ್ಚಿದೆ. ಅಂತಹವೇ ಕೆಲ ಪುಟ್ಟ ಕಥೆಗಳನ್ನು (ಸಣ್ಣ ಕತೆಗಳಕಿಂತಲೂ ಸಣ್ಣವು) ಬರೆದಿಟ್ಟಿದ್ದೆ..."

ಎಂದೂ ಬರೆದಿದ್ದಾರೆ. ಸರ್, ಇದಕ್ಕೆ ತಾವು 'ಥ್ಯಾಂಕ್ಸ್' ಹೇಳ ಬೇಕಲ್ಲವೆ?

(3) ಪುಟ 262 ರಿಂದ 264- ತಮಗೂ ಪೂಜ್ಯ ಬೇಂದ್ರೆಯವರಿಗೂ ಮುಡಿಪು. "ರತ್ನನ ಪದಗಳು" ಮತ್ತು "ಗಂಗಾವತರಣ"ಗಳ ಬಗ್ಗೆ ದಿ. ಅನಕೃ ಮತ್ತು ಬೇಶ್ರೀಯವರ ನಡುವೆ ನಡೆಯಿತು ಎನ್ನಲಾದ ಸಂವಾದ.

(4) ಪುಟ 257 ತಮಗೇ ಸಂಬಂಧಿಸಿದ್ದು ಎಂದು ನನ್ನ ಭಾವನೆ-ಅಲ್ಲಿಯ ಒಕ್ಕಣೆ ಹೀಗಿದೆ:—

> "ಈಗ ಕೆಲ ವಿದ್ವಾಂಸರಿಂದ ವಾರಪತ್ರಿಕೆಗಳಲ್ಲಿ ಮಕ್ಕಳಿಗಾಗಿ ಬರೆದ ಕಥೆಗಳು ಬರುತ್ತಿವೆ. ಧಾರ್ಮಿಕ ಅನ್ನುವ ಹೆಸರಿನಲ್ಲಿ ಬರುವ ಜಾತೀಯ ಕತೆಗಳೇ ಹೆಚ್ಚು. ಹಸು ಮಾಂಸವನ್ನು ತಿಂದಿತು ಎಂಬಂತಹ ನಂಬಲಸಾಧ್ಯವಾದ ವಾಕ್ಯಗಳು ಅವುಗಳಲ್ಲಿ. ಇವು ಕಿರಿಯವರಿಗೆ ಪ್ರಯೋಜನವಿಲ್ಲ, ಹಿರಿಯರಿಗೆ ವ್ಯರ್ಥ. ಒಟ್ಟಾಗಿ ಒಂದು ಮಾತನ್ನು ದಿಟವಾಗಿ ಹೇಳ ಬಹುದು—ಕನ್ನಡದಲ್ಲಿಮಕ್ಕಳ ಸಾಹಿತ್ಯದಲ್ಲಿ ಏನೂ ಕೆಲಸ ಆಗಿಲ್ಲ".

ವಿರಾಮವಾದಾಗ, ಇದಕ್ಕೇನಾದರೂ ಉತ್ತರ ಬರೆದರೆ ಸಂತೋಷ.

—ಅ.ಅ.ಕ

ಮೇಲಿನ ಪತ್ರಕ್ಕೆ ನನ್ನ ಉತ್ತರ

ಪ್ರಿಯ ಸ್ನೇಹಿತರೆ,

"ನಿರ್ಭಯಾಗ್ರಫಿ"ಯ 5ನೇ ಕಂತು 'ಅನಕೃ ಮತ್ತು ನಾನು' ಪ್ರಕಟವಾದದ್ದು 23-11-1975. ಅಲ್ಲಿಂದ ಇದುವರೆಗೂ ನಾನು ಬೇಶ್ರೀಯವರ ಪರ್ವತಪ್ರಸವಕ್ಕಾಗಿ ಕಾದುಕೊಂಡಿದ್ದೆ. ಈಗ ಅಲ್ಲಿಂದ ಹೊರಬಿದ್ದಿರುವ ಇಲಿಗಳಲ್ಲಿ ನಾಲ್ಕನ್ನು ಬೋನಿನಲ್ಲಿ ಹಿಡಿದು ನನ್ನ ಕಡೆ ಕಳಿಸಿದ್ದೀರಿ. ಅವುಗಳಲ್ಲಿ.—

(1) ಅವರು ಏನೇ ದಿಗ್ಬಂಧನ ಮಾಡಿಕೊಂಡು ಈ ಕಟ್ಟು ಕತೆಯನ್ನು ಹೇಳಿದರೂ ಅದು ಕೆಟ್ಟ ಕಥೆಯೇ. Thoroughly bad taste. ಇದು ಖಂಡಿತ ಕೈಲಾಸಂ ರೀತಿಯಲ್ಲ. ಕೈಲಾಸಂ ಅವರನ್ನು ಬಲ್ಲವರು ಯಾರೂ ಇದನ್ನು ನಂಬುವುದಿಲ್ಲ.

ಮಾಸ್ತಿಯವರ ಬಗ್ಗೆ ಕೈಲಾಸಂ ಅವರಿಗೆ ಎಷ್ಟು ಪ್ರೀತಿ ಗೌರವ ಇತ್ತು ಎಂಬುದನ್ನು ಕಂಡಿದ್ದ ನಮಗೆ ಇಂಥದನ್ನು ಕಲ್ಪಿಸಿಕೊಳ್ಳುವುದು ಕೂಡ ಕಷ್ಟ. ಅದರಲ್ಲೂ, ಮಾಸ್ತಿಯವರ ಎದುರಿಗೆ ಇಂಥ ಮಾತನ್ನು 'ಕೈ' ಆಡಿದರು ಎಂದು ಹೇಳುವವರಿಗೆ ಕೈಲಾಸಂ ಸ್ವಭಾವ ಗೊತ್ತಿಲ್ಲ.

ಇಂಥ ಮಾತಿನಲ್ಲಿ 'ಸ್ವಾರಸ್ಯ'ವನ್ನು ಕಾಣುವವರ ರಸಜ್ಞಾನ ನನಗೆ ಅರ್ಥವಾಗುವುದಿಲ್ಲ.

ಮಾಸ್ತಿಯವರ ಕವನಗಳನ್ನು ನಾನು ಸಭೆಗಳಲ್ಲಿ ಓದಿದ್ದೇನೆ. ಶ್ರೋತೃಗಳು ಮೆಚ್ಚಿದ್ದಾರೆ. ಓದಲು ಬಾರದವರು ಅವುಗಳನ್ನು ಸುಲಭವಾಗಿ ಕೆಡಿಸಬಹುದು.

"Poetry is not my dish" ಎಂದು ಜಗಜ್ಜಾಹೀರಾಗಿ ಹೇಳಿಕೊಳ್ಳುವವರಿಗೆ ಕವನಗಳಲ್ಲಿ ಕೈಯಾಡಿಸಲು ಅಧಿಕಾರವಿಲ್ಲ.

(2) ಅವರು ನನ್ನ 'ಹನಿಗಳು' ಒಂದನ್ನು ಮಾತ್ರ ಮೆಚ್ಚಿ ನಿಂತವರಲ್ಲ. ಪುಟ 262 ರಲ್ಲಿ ಹೀಗೆ ಬರೆಯುತ್ತಾರೆ:—

> " 'ರತ್ನನ ಪದಗಳು'. ಅದನ್ನೋದಿದ ನಂತರ ನಾನು ಮಂತ್ರ ಮುಗ್ದನಾದೆ. ನಾನೂ ಹೀಗೇಕೆ ಬರೆಯ ಬಾರದು ಎಂಬ ಚಪಲಕ್ಕೆ ಬಲಿಯಾದೆ. ಅಂತಹ ಕೆಲವನ್ನು ಬರೆದು ನನ್ನ ಒಬ್ಬಿಬ್ಬ ಮಿತ್ರರಿಗೆ ಓದಿದ್ದೂ ಉಂಟು. ಆಗಿನ್ನೂ ಪ್ರಕಟಣಾ ಸಾಮರ್ಥ್ಯ ನನಗಿರಲಿಲ್ಲ." ಅವರಿಗೆ ಅದು ಇರಲಿಲ್ಲವೋ, ನನ್ನ ಪುಣ್ಯ! ಅದು ಏನಾದರೂ ಇದ್ದು, ಅವರು ತಮ್ಮ ನಕಲಿ ರತ್ನನ ಪದಗಳನ್ನು ಪ್ರಕಟಿಸಿಬಿಟ್ಟಿದ್ದರೆ- perish the thought—"ಅಂದನಾ ತಿಂಮ" ಬಂದು "ಮಂಕುತಿಮ್ಮ" ಮೂಲೆಗೆ ಬಿದ್ದುಹೋದ ಹಾಗೆ ನನ್ನ "ರತ್ನನ ಪದಗಳು" ಕೂಡ run out ಆಗಿ ಬಿಡುತ್ತಿದ್ದುವೋ ಏನೋ! ದೇವರು ದೊಡ್ಡವನು! ಆದ್ದರಿಂದ ಇಬ್ಬರಿಗೂ "ಥ್ಯಾಂಕ್ಸ್" ಹೇಳಬೇಕಾದ್ದು. ನನ್ನ ಧರ್ಮ.

(3) ನನ್ನ "ನಿರ್ಭಯಾಗ್ರಫಿ"ಯ "ಶನಿಕಾಟ" ಎಂಬ 7ನೇ ಕಂತಿನಲ್ಲಿರುವ "ಪೋಲಿ ಮತ್ತು ಮೇಷ್ಟ್ರು" ಎಂಬ ಸ್ವಾರಸ್ಯವಾದ ಪತ್ರಮಾಲೆಯನ್ನು ನೋಡಿ:

(4) ಕೆಲವು ವರ್ಷಗಳ ಹಿಂದೆ ಇವರು ನನಗೆ "ಚಕ್ರವರ್ತಿ ವಜ್ರ" ಎಂಬ ಪ್ರಶಸ್ತಿಯನ್ನು ಸಮರ್ಪಿಸುವಾಗ ತಯಾರಿಸಿದ ಬಖೈರಿನ ಕೊನೆಯಲ್ಲಿ (ಪ್ರಜಾಮತ, 11-6-72, ಪುಟ 28)—

"ವಿ. ಸೂ. :— ಇದು ಕೇವಲ ಕಾಲ್ಪನಿಕ, ಯಾವೊಂದು ಜೀವಂತ ವ್ಯಕ್ತಿಯನ್ನೂ ಕಣ್ಮುಂದಿಟ್ಟುಕೊಂಡು ಬರೆದುದಲ್ಲ—ಎಂಬ ಸುಳ್ಳನ್ನು ಬೊಗಳಲಾರೆ."

ಎಂದು ಷರಾ ಬರೆದಿದ್ದರು. ಅವರ ಆಧಾರದಿಂದ "ಈ ಚಕ್ರವರ್ತಿ ವಜ್ರನು ಆ ರಾಜರತ್ನನೇ" ಎಂಬುದು ಎಲ್ಲರಿಗೂ ವಾಚ್ಯವಾಗಿ ಹೋಯಿತು. ಆದರಂತೆಯೇ ಈಗಲಾದರೂ, ಇದರಲ್ಲಿ ನನ್ನ ಹೆಸರಿನ ಉಲ್ಲೇಖವಿಲ್ಲದಿದ್ದರೂ ಇದು ನನ್ನನ್ನು ಉದ್ದೇಶಿಸಿದ್ದೇ.

12 ವರ್ಷಗಳಿಂದ "ಸುಧಾ" ವಾರಪತ್ರಿಕೆಯಲ್ಲಿ ವಾರ ವಾರವೂ ತಪ್ಪದೆ ಮಕ್ಕಳಿಗೆ ಕತೆ ಹೇಳುವ ಅವಕಾಶ ಒಬ್ಬನಿಗೆ ಒದಗಿದರೆ, ಅದನ್ನು ನೋಡಿ ಹೊಟ್ಟೆ ಕಿವಿಚಿಕೊಳ್ಳುವ ಹಾಗಾದರೆ, ಅವರ ಸಂಕಟ ನನಗೆ ಅರ್ಥವಾಗುತ್ತದೆ.

ಇವರೊಬ್ಬರೇ ಅಲ್ಲ. ಇನ್ನೊಬ್ಬರು ಬರೆಯುತ್ತಾರೆ:—

"ಕನ್ನಡದಲ್ಲಿ ಜಿ. ಪಿ. ರಾಜರತ್ನಂ ಮಕ್ಕಳಿಗಾಗಿ ಬರೆದ ಕೆಲವಾರು ಪದ್ಯಗಳು ಆಕರ್ಷಕವಾಗಿಯೇ ಇವೆ. ಆದರೆ ಅವರೇ ಇದುವರೆಗೆ (ಮುಖ್ಯವಾಗಿ 'ಸುಧಾ' ವಾರಪತ್ರಿಕೆಯಲ್ಲಿ ಬರುವ ಕಥೆಗಳು) ಬರೆದ ಅನೇಕ ಚಿಕ್ಕಚಿಕ್ಕ ಕಥೆಗಳು ಮಕ್ಕಳ ಮೇಲೆ ಪರಿಣಾಮ ಬೀರಲು ಸಮರ್ಥವಾಗಿಲ್ಲ. ಇದಕ್ಕೆ

ಪ್ರಮುಖ ಕಾರಣ: ಅವರ ಬಹುಪಾಲು ಕತೆಗಳು ಪರಂಪರಾಗತ ಮೌಲ್ಯಗಳಲ್ಲೇ ಮಕ್ಕಳನ್ನು ಬಿಗಿ ಹಿಡಿಯಲು ಪ್ರಯತ್ನಿಸುತ್ತವೆ. ಬಹುಪಾಲು ಪೌರಾಣಿಕ ಅಂಶಗಳನ್ನೊಳಗೊಂಡ ಅವರ ಮಕ್ಕಳ ಕಥೆಗಳು "ಹಾಡಿದ್ದೇ ಹಾಡಿದ ಕಿಸುಬಾಯ ದಾಸ" ಎನ್ನುವ ಹಾಗೆ ಆಗಿದೆ".('ಸಹ್ಯಾದ್ರಿ'-ಪುಟ 821.)

ಇಂಥ ಬೇಜವಾಬ್ದಾರಿ ಮಾತುಗಳನ್ನು ಓದಿದಾಗ ನನಗೆ "ಪುರುಷ ಸರಸ್ವತಿ"ಯ ಈ ಪದ್ಯಗಳು ನೆನಪಾಗುತ್ತವೆ:—

ಏನನಾರಾಡಿದಡೆ ನನಗೇ-
ನೂನವಿಲ್ಲ ವಿಚಾರಿಸಲು ಮತಿ-
ಹೀನರೆಲ್ಲರ ಮರುಳುಮಾತುಗಳಾರ ನಿಲಿಸುವುವು!
ಧೇನು ಕರೆಯದೆ ಹಾಲ ಹುಟ್ಟಿಯ
ಜೇನು ಕಟ್ಟದೆ ನೆಯ್ಯ ಸೊಬಗಿನ
ಸೋನೆ ಸುರಿಯದೆ ನಿಲುವುದೇನವರಿವರ ಬಿರುನುಡಿಗೆ ||

ಓದುವವರೋದುವರು ಸಹಿಸದೆ
ಸೀದು ಸಿಡಿಮಿಡಿಗೊಂಡು ನಡುವಣ
ಬೀದಿಯಲ್ಲಿ ಬೈದಿಡುವವರು ಬೈದಾಡುವರು ಬಿಡೆಲಾ|
ವೇದನಾಲ್ಕರ ಪಿರಿಯ ಬೊಮ್ಮನ
ಮೇದಿನಿಯ ಮೇಲೆತ್ತಿದವನನ-
ನಾದಿಮೂರುತಿ ಶಿವನ ನೆನೆಯುತೆ ನುಡಿದೆ ನುಡಿಯುವೆನು||

"ಸುಧಾ"ದಲ್ಲಿ ಪ್ರಕಟವಾಗುತ್ತಿರುವ ನನ್ನ ಬಾಲಸಾಹಿತ್ಯದ ಆರೋಗ್ಯವನ್ನು ಅಳೆಯುವುದಕ್ಕೆ ಆ ಪತ್ರಿಕೆಯನ್ನು ಓದುವ ಬಾಲಕ ಬಾಲಕಿಯರು—ಅವರೇ ಥರ್ಮಾಮೀಟರ್, ಅವರೇ ಬ್ಯಾರಾ

ಮೀಟರ್. ವಾರವಾರವೂ ಅವರು ನನ್ನನ್ನು 'ಚೆಕಪ್' ಮಾಡಿ. "O.K. Go ahead" ಎಂದು ಹುರಿದುಂಬಿಸುತ್ತಿದ್ದಾರೆ; ಅಷ್ಟು ಸಾಕು.

"ಹಸು ಮಾಂಸವನ್ನು ತಿಂದಿತು" ಎಂದು ನಾನು ಆಡದಿರುವ ಮಾತನ್ನು ಬೇಶ್ರೀ ನನ್ನ ಬಾಯಲ್ಲಿ ಹಾಕಿದ್ದಾರೆ. (ಹಿಂದೆ ಅನಕೃ ಅವರ ಬಾಯಲ್ಲಿ. ಕೈಲಾಸಂ ಅವರ ಬಾಯಲ್ಲಿ ಅವರು ಆಡದ್ದನ್ನು ಆಡಿಸಿದ ಹಾಗೆ) ಇದನ್ನು ಕುರಿತು ಪ್ರತ್ಯೇಕವಾದ ಒಂದು ಲೇಖನವನ್ನು ಬರೆದಿದ್ದೇನೆ. ಅದನ್ನು ಸಾವಕಾಶವಾಗಿ ನೋಡಿ. ಶಿಕ್ಷಿತವಾದ ವಿಮರ್ಶೆಗೂ ಅಶಿಕ್ಷಿತವಾದ ವಿಮರ್ಶೆಗೂ ಮಧ್ಯೆ ಇರುವ ಕಂದರ ಎಷ್ಟು ಆಳವಾದದ್ದು ಎಂಬುದು ಗೊತ್ತಾಗುತ್ತದೆ.

ಉಪರಿಷ್ಟ

"ಸ್ವಭಾವೋ ದುರತಿಕ್ರಮಃ" ಎಂದು ಹೇಳಿದಿರಲ್ಲಾ; ಅದನ್ನು ನಮ್ಮ ಕಡೆ"ಹೀನಸುಳಿ" ಎಂದು ಕರೆಯುತ್ತಾರೆ. ಇದನ್ನು ಕುರಿತು ಎರಡು ಪದ್ಯ ಬರೆದು, ಈ ಪತ್ರವನ್ನು ಮುಗಿಸುತ್ತೇನೆ.

ಹುಟ್ಟಿದವಸುಳಿ ಕಟ್ಟಿ ಚಟ್ಟವ
ಸುಟ್ಟರೂ ಛಟ್ಟಾಗದೆಂದವ-
ರಿಟ್ಟು ನುಡಿವರು ದಿಟ್ಟಮುನಿಗಳು ಕೊಟ್ಟ ಕಿವಿಗಳಿಗೆ|
ಮುಟ್ಟದೆಯೆ ರಸಘಟ್ಟಿಯನು ಬಲು
ಕೆಟ್ಟ ಕಾವ್ಯವಿದೆಂದು ಮೊಟ್ಟುವ
ಮಟ್ಟುಬುದ್ಧಿಯ ಮಟ್ಟಗೆಡಹುವ ಗಟ್ಟಿಗರು ನಾವು||

ನಾನೆ ಬಲ್ಲವನೆಲ್ಲ ನನ್ನ ಸ

ಮಾನೆ ಮಿಕ್ಕುಳಿದವರು ತೆಗೆಯೀ-
ಮಾನವರು ಕೃತಿಕಾರರೇ ಪೇಳ್ ನಾನೆ ನಾನೆಂಬ|

ಬೋನು ಸಣ್ಣದರೊಳಗೆ ಸಿಲುಕಿದ
ಬೇನೆಬೆನ್ನಿನ ಮುರಿಯಬಾಗಿದ
ಗೂನು ಜನ್ಮಾಂತರಗಳೆನಿತರ ಹೀನಸುಳಿ ತಾನೋ||

ಇದು 'ಪುರುಷಸರಸ್ವತಿ'ಯ 'ಹಾರ್ಮೋನಿಯಂ ಹರಣ'ದಿಂದ ಉದ್ಧರಿಸಿದ್ದು.

—ರಾಜರತ್ನಂ

◆ "ಹಸು ಮಾಂಸವನ್ನು ತಿಂದಿತು" ◆

1972ರಲ್ಲಿ "ಮೃಗಪಕ್ಷಿಗಳ ಕತೆಗಳು" ಎಂಬ ಒಂದು ಕಥಾಮಾಲೆ 'ಸುಧಾ'ದಲ್ಲಿ ಪ್ರಕಟವಾಯಿತು. ಅದು ಹೀಗಿತ್ತು:—

ಸಿಂಹಪಾಲು

ಒಂದಾನೊಂದು ಕಾಡಿನಲ್ಲಿ ಒಂದು ಸಿಂಹ, ಒಂದು ಹಸು, ಒಂದು ಮೇಕೆ, ಒಂದು ಕುರಿ-ಇವು ಮೂರೂ ಅದರ ಪರಿವಾರ. ಬೇಟೆಗೆ ಅವು ನಾಲ್ಕೂ ಹೋಗುತ್ತಿದ್ದುವು. ಒಂದು ಸಲ ಇವು ನಾಲ್ಕೂ ಬೇಟೆಗೆ ಹೋದಾಗ, ಸಿಂಹ ಒಂದು ಭಾರಿ ಜಿಂಕೆಯನ್ನು ಸಂಹಾರ ಮಾಡಿತು. ಅದನ್ನು ನಾಲ್ಕು ಭಾಗವಾಗಿ ವಿಂಗಡಿಸಿ ಇಟ್ಟಿತು.

"ನನ್ನ ಹೆಸರು ಸಿಂಹ ಆದುದರಿಂದ ಮೊದಲನೇ ಪಾಲು ನನಗೆ; ನಾನು ನಿಮ್ಮೆಲ್ಲರಿಗಿಂತ ಧೈರ್ಯಶಾಲಿಯಾದದ್ದರಿಂದ ಎರಡನೇ ಪಾಲು ನನ್ನದು; ನಿಮ್ಮೆಲ್ಲರಿಗಿಂತ ಬಲಶಾಲಿಯಾದ್ದರಿಂದ ಮೂರನೇ ಪಾಲು ನನಗೆ ಬರಬೇಕಾದ್ದು ನ್ಯಾಯ; ಉಳಿದಿರುವ ನಾಲ್ಕನೇ ಪಾಲನ್ನು ಯಾರಾದರೂ ಮುಟ್ಟಿಗಿಟ್ಟೀರಿ. ಹುಷಾರ್!" ಎಂದು ಗರ್ಜಿಸಿ ಸುತ್ತಲೂ ನೋಡಿತು.

ಪ್ರತಿಸಲ ಬೇಟೆಯಾಡಿದಾಗಲೂ ಸಿಂಹ ಹೀಗೇ ಮಾಡುತ್ತಿತ್ತು. ಕೆಲವು ದಿನಗಳಲ್ಲೇ ಹೊಟ್ಟೆಗಿಲ್ಲದೆ ಹಸು, ಮೇಕೆ, ಕುರಿಗಳು ಸತ್ತು ಹೋದುವು. ಸಿಂಹ ಆಗ ಅವುಗಳನ್ನು ತಿಂದು ಮುಗಿಸಿತು,

"ದೊಡ್ಡವರ ಜೊತೆಯಲ್ಲಿ ಬೇಟೆಗೆ ಸೇರದೆ, ನಮ್ಮ ನಮ್ಮ ಆಹಾರವನ್ನು ನಾವು ಸಂಪಾದಿಸಿಕೊಂಡಿದ್ದರೆ, ಇನ್ನೂ ಕೊಂಚ ಕಾಲ ನಾವು ಬದುಕಬಹುದಾಗಿತ್ತು" ಎಂದು ಹಸು, ಮೇಕೆ, ಕುರಿಗಳು ಸಾಯುವ ಕಾಲದಲ್ಲಿ ಹೇಳಿಕೊಂಡುವು. ಆದರೆ ಕಾಲ ಮಿಂಚಿತ್ತು.

ಇದು ನಾನು ಬರೆದ ಕತೆ. ಇದರಲ್ಲಿ "ಹಸು ಮಾಂಸವನ್ನು ತಿಂದಿತು" ಎಂದು ನಾನು ಬರೆಯದೆ ಇರುವಾಗ, ಆ ಮಾತನ್ನು ನನ್ನ ಬಾಯಲ್ಲಿ ಹಾಕಿ. ಹಲ್ಲು ಕಿರಿಯುವುದೇಕೆ? ಇದು ಅಚ್ಚಾದುದನ್ನು ಓದುವ ಅಚ್ಚುಕಟ್ಟಾ? ಅಥವಾ ಇದು ವಿಪರೀತ ವಿಮರ್ಶೆಯ ವಿಧಾನವೊ?

ಈ ಕತೆ ಪ್ರಕಟವಾದ ಮೇಲೆ ವಾಚಕಿಯೊಬ್ಬರು 'ಸುಧಾ ಸಮುದ್ರ ಮಥನ'ದಲ್ಲಿ ಹೀಗೆ ಅಭಿಪ್ರಾಯಪಟ್ಟರು:—

"ಜುಲೈ 2, 1972ರ 'ಸುಧಾ'ದಲ್ಲಿ ಪ್ರಕಟವಾಗಿರುವ ಶ್ರೀ ರಾಜರತ್ನಂ ಅವರ 'ಸಿಂಹಪಾಲು' (ಪುಟ 49) ಅಸಂಬದ್ಧವಾಗಿದೆ. ನಮ್ಮ ಮನೆಯಲ್ಲಿರುವ ಚಿ||ಗಳ ಪ್ರಶ್ನೆಗಳನ್ನು ಈ ಕತೆಯ ಬಗ್ಗೆ ಎದುರಿಸಿ

ಸೋತಿದ್ದೇನೆ. ಸಸ್ಯಾಹಾರಿ ಪ್ರಾಣಿಗಳೇಕೆ ಸಿಂಹದೊಂದಿಗೆ ಪಾಲು ಕೇಳಬೇಕೋ ಅರ್ಥವಾಗಲಿಲ್ಲ. ಸಿಂಹ ಕೊಟ್ಟಿದ್ದರೂ ಹಸು, ಮೇಕೆ, ಕುರಿ ಸಾಯುತ್ತಿದ್ದುವು. ಈಸೋಪನ ಕತೆಗಳಲ್ಲಿ ಕಲ್ಲು ಮರ ಮುಂತಾದವು ಮಾತಾಡುತ್ತವೆ, ನಿಜ. ಇಂತಹ ಸಣ್ಣ ಕತೆಗಳನ್ನು ಸ್ವಲ್ಪ ಸಹಜ (Realistic) ಆಗಿ ಬರೆದರೆ ನಿಜವಾಗಿಯೂ ಎಳೆಯರಿಗೂ ಕುತೂಹಲಕಾರಿಯಾಗುತ್ತದೆ" (23-7-72),

ಇದು ಒಂದು ಅಭಿಪ್ರಾಯ. ಇದಕ್ಕೆ ನಾನು ಅದೇ ದಿವಸ ಹೀಗೆ ಸಮಾಧಾನ ಬರೆದೆ:—

"ಅಸಂಬದ್ಧ"ವಲ್ಲ

1) ಕತೆ 'ಅಸಂಬದ್ಧ'ವಾಗಿಲ್ಲ. 'ಅಸಹಜ' ಎನ್ನಬಹುದು. ಮೃಗ ಪಕ್ಷಿ ಮಾತನಾಡುವುದು 'ಅಸಂಭಾವ್ಯ'ವಾದರೂ Fableಗಳಲ್ಲಿ ಅವು ಮಾತನಾಡುವುದು 'ಸಹಜ'.

2) ಈ ಕತೆಯ ಹಸು, ಮೇಕೆ, ಕುರಿಗಳು 'ಸಸ್ಯಾಹಾರಿ ಪ್ರಾಣಿಗಳು ಎಂದು ನಾನು ಬರೆದಿಲ್ಲ. ಏಕೆಂದರೆ- ಅದು ಹಾಗೆಂದು ಮೂಲಕಥೆಯಲ್ಲಿಲ್ಲ. ಕತೆಯ ಒಳದನಿಯ ಪ್ರಕಾರ ಇವು ಮೂರೂ ಸಿಂಹದಂತೆಯೇ ಮಾಂಸಾಹಾರಿಗಳು ಆಗಿರಬೇಕು. Fableಗಳಲ್ಲಿ ಪಶು ಪಕ್ಷಿಗಳು ಮಾತನಾಡುವುದು ಹೇಗೆ 'ಅಸಹಜ'

ಎನ್ನಿಸಿಕೊಳ್ಳುವುದಿಲ್ಲವೋ ಹಾಗೆಯೇ ಇಲ್ಲಿ ಈ ಪ್ರಾಣಿಗಳು ಮಾಂಸಾಹಾರಿಗಳಾದರೂ ಅದು ಅಸಹಜ ವಲ್ಲ.

3) ಈ ಕಥೆಯನ್ನು ಮೂಲದಲ್ಲಿ ಹೇಳಿದವನು— ಈಸೋಪನಂತೆಯೇ ಕ್ರಿ.ಪೂ.ಕ್ಕೆ ಸೇರಿದ ಫೇಡ್ರಸ್ ಎಂಬಾತ. ಗ್ರೀಸಿನವ. ಇಂಗ್ಲಿಷ್ ಅನುವಾದದಲ್ಲಿ ಇದು The Cow, The She-goat, The Sheep and The Lion ಎಂದೇ ಇದೆ.

4) ಶತಮಾನಗಳ ಕಾಲದಿಂದ ಸಂಪ್ರದಾಯದಲ್ಲಿ ಬಂದಿರುವ ಕತೆಯನ್ನು ನಮಗೆ ಬೇಕಾದ ಹಾಗೆ ತಿದ್ದುವುದು ನನಗೆ ಇಷ್ಟವಿಲ್ಲ. ನಮ್ಮ 'ಸಹಜ' ಬೇರೆ, ಫೇಬಲ್‌ಗಳ 'ಸಹಜ' ಬೇರೆ.

5) ಫೇಬಲ್‌ಗಳ ಉದ್ದೇಶ—ವಾಚಕರ ಕುತೂಹಲ ವನ್ನು ಕೆರಳಿಸುವುದಲ್ಲ; ಅವರಿಗೆ ನೀತಿಯನ್ನು ಬೋಧಿಸುವುದು. ಈ ಕತೆಗೆ ಸಂಬಂಧಪಟ್ಟ ನೀತಿಯ ನವನೀತ ಕೊನೆಯ ಪ್ಯಾರಾದಲ್ಲಿದೆ.

"ಸಿಂಹಪಾಲು" ಕತೆಯ ಇಂಗ್ಲಿಷ್ ಮೂಲ ಹೀಗಿದೆ:

"An alliance with the powerful is never to be relied upon: the present Fable testifies the truth of my maxim.

"A Cow, a She-Goat and a Sheep

patient under injuries, were partners in the forest with a Lion. When they had captured a Stag of vast bulk, thus spoke the Lion, after it had been divided into shares: 'Because my name is Lion, I take the first; the second you will yield to me because I am courageous: then, because I am the strongest, the third will fall to my lot; if any one touches the fourth, woe betide him'.

"Thus did unscrupulousness seize upon the whole prey for itself".

(The Fables of Phaedurs: Fable V)

(ಫೇಡ್ರಸ್ಸನ ಈ ಫೇಬ್‌ಲನ್ನು ಒಪ್ಪದವರು ಪಾಶ್ಚಾತ್ಯರಲ್ಲೇ ಇದ್ದಾರೆ. " Lessing finds some fault with this Fable on the ground of the partnership being contrary to nature; neither the cow, the goat, not the sheep feed on flesh". ಲೆಸ್ಸಿಂಗನ ಹಾಗೆಯೇ "Mr. Dodsley quarrels with the Fable of 'The Fox and the Grapes' because he conceives the author to have been guilty of an unnecessary incongruity in making an animal covet what it has really no relish for". ಈ

ಮನೋಧರ್ಮದ Dodsley "ಸಿಂಹಪಾಲು" ಕತೆಯ ಮೂಲವನ್ನು re-write ಮಾಡಿದ್ದಾನೆ, ಅಲ್ಲಿನ cow, she-goat ಮತ್ತು sheep ಇವನ ಕತೆಯಲ್ಲಿ Leopard, Lynx ಮತ್ತು Wolf ಆಗಿಹೋಗಿವೆ. ಆದರೆ ಇದು Dodsleyಯ Fable ಆಯಿತೇ ಹೊರತು ಫೇಡ್ರುಸನ Fable ಆಗಲಿಲ್ಲ.)

ಇದನ್ನೆಲ್ಲಾ ಇಷ್ಟು ವಿವರವಾಗಿ ಇಲ್ಲಿ ಬಿಡಿಸಿ ಬಿಡಿಸಿ ಹೇಳಿರುವುದಕ್ಕೆ ಕಾರಣ ಏನೆಂದರೆ—ನಾನು ಮಕ್ಕಳಿಗಾಗಿ ಬರೆಯುವಾಗಲೂ ಆದಷ್ಟು ಜಾಗರೂಕತೆಯಿಂದ ಎಚ್ಚರವಾಗಿಯೇ ಬರೆಯುತ್ತೇನೆ. ಹಾಗೂ ಏನಾದರೂ ತಿಳಿಯದೆ ತಪ್ಪಾಗಿಬಿಟ್ಟರೆ, ತಿದ್ದಿಕೊಳ್ಳುವುದಕ್ಕೆ ಸದಾ ಸಿದ್ಧನಾಗಿದ್ದೇನೆ. ಆದರೆ ಈ 'ಸಿಂಹ ಪಾಲು' ಕತೆಯಲ್ಲಿ ಮಾತ್ರ ಅಂಥ ತಪ್ಪು ಆಗಿಲ್ಲ. ತಿದ್ದಿಕೊಳ್ಳಬೇಕಾದ್ದಿಲ್ಲ.

* * *

ಒಂದು ವೇಳೆ ಹಾಗೂ ಒಂದು ತಪ್ಪಾಯಿತು ಎನ್ನೋಣ. ಅಷ್ಟಕ್ಕೇ ಬದನೆಕಾಯನ್ನು ಬ್ರಹ್ಮರಾಕ್ಷಸ ಮಾಡಬೇಕೆ? ಹಿಂದೊಮ್ಮೆ, ಕೈಲಾಸಂ ಅವರ 'ಹುತ್ತದಲ್ಲಿ ಹುತ್ತ' ಅಚ್ಚು ಮಾಡಿಸಿದಾಗ, ಕೆಲವು ತಪ್ಪು ನಿಂತು ಹೋದುದನ್ನು ಅವರ ಗಮನಕ್ಕೆ ತಂದಾಗ—'Yes, G.P. there are a few mistakes. BUT, ಪ್ರಮಾದೋ ಧೀಮತಾಮಪಿ!' ಎಂದುನಕ್ಕು ಸಮಾಧಾನ ಮಾಡಿದರು. ಎಷ್ಟಾದರೂ—

'ದೊಡ್ರಕ್ತ ದೊಡ್ರಕ್ತನೇವೇಯೋ!'ಅಲ್ಲವ್ರಾ?

—ಜಿ. ಪಿ. ರಾಜರತ್ನಂ

ಜಿ. ಪಿ. ರಾಜರತ್ನಂ ಅಂತರ್ದರ್ಶನ - 9

ಶ್ವೇತಾತಪತ್ರ

ಇದು

ಜಿ. ಪಿ. ರಾಜರತ್ನಂ ಅವರ

ನಿರ್ಭಯಾಗ್ರಫಿ

ಒಂಬತ್ತನೇ ಕಂತು

ಸಂಪಾದಕರ ಅರಿಕೆ

"My works are more the products of irritation than of inspiration" ಎಂದು ಶ್ರೀ ರಾಜರತ್ನಂ ಸುಮಾರು ನಲವತ್ತು ವರ್ಷಗಳ ಹಿಂದೆ ತಮ್ಮ 'ಹತ್ತು ವರ್ಷ'ದಲ್ಲಿ ಹೇಳಿದರು. ಅವರ ಮಟ್ಟಿಗೆ ಅವರು ಹೇಳಿದ್ದು ಇಂದಿಗೂ ಸರಿ ಎಂಬುದಕ್ಕೆ ಈಗ ಅವರಿಂದ ನಮಗೆ ಕೊಡುಗೆಯಾಗಿ ಬಂದಿರುವ 'ನಿರ್ಭಯಾಗ್ರಫಿ'ಯ ಒಂಬತ್ತು ಕಂತುಗಳು ಇನ್ನೊಂದು ನಿದರ್ಶನ.

ಈ ಪುಸ್ತಕವನ್ನು ಕಂಡಕಂಡವಾಗಿಯಾದರೂ ಅವರೊಳಗಿಂದ ಹೊರವಡಿಸುವುದಕ್ಕೆ ನಾವೂ ಅವರಿಗೆ ಸಾಕಷ್ಟು ಕಾಟಕೊಟ್ಟಿದ್ದೇವೆ. "ಶನಿಕಾಟ"ದ ಜೊತೆಗೆ ನಮ್ಮ "ಮಿನಿ ಕಾಟ"ಗಳೂ ಸೇರಿಕೊಂಡು ಈ ಪುಸ್ತಕ ಆಗಿದೆ. ಕನ್ನಡದ ಹಾಸ್ಯಸಾಹಿತ್ಯಕ್ಕೆ ಇದು ನಮ್ಮ ಕಿರುಕಾಣಿಕೆ.

—ಚಂದ್ರಕೀರ್ತಿ ಮತ್ತು ಗೆಳೆಯರು

ಈ ಕಂತಿನೊಳಗೆ

ಜಿ. ಪಿ. ರಾಜರತ್ನಂ ಅವರ ನಿರ್ಭಯಾಗ್ರಫಿ

ಇದು ಅನ್ವರ್ಥವಾಗಿಯೂ "ಅ-ಪೂರ್ವ"ವಾದ ಪುಸ್ತಕ. ಶ್ರೀರಾಜರತ್ನಂ ಅವರೇ ತಮ್ಮ ೪೮ ವರ್ಷಗಳ ಸಾಹಿತ್ಯ ಜೀವನದಲ್ಲಿ ಇದುವರೆಗೂ ಇಂತಹ ಬರವಣಿಗೆ ಬರೆದದ್ದಿಲ್ಲ. ನನ್ನ ಮಿತ್ರರೊಬ್ಬರು ಹೇಳಿದ ಹಾಗೆ: ಇದು ಬರವಣಿಗೆ" ಅಲ್ಲ; ಇದು "ಬರೆವಣಿಗೆ", ತುಂಟರಿಗೆ ಬರೆ ಹಾಕುವ ಹೊಸ ವಿಧಾನ. ಹಾಗೂ ಆಗಬಹುದು. ಅಥವಾ, ಇದುವರೆಗೆ ಪ್ರಕಟವಾಗಿರುವ ಎಂಟು 'ಕಂತು'ಗಳನ್ನೂ ಅವುಗಳಿಗೆ ಪ್ರೇರಣೆಕೊಟ್ಟು, ಲೇಖನಗಳನ್ನೂ ಗಮನವಿರಿಸಿ ಓದಿದವರೊಬ್ಬರು ಈ ಪ್ರಕರಣವನ್ನು ಕುರಿತು—

"The Octopus and the Sour-puss" ಎಂಬ ಕಿರುಕತೆಯೊಂದನ್ನು ಬರೆದು ಕಳಿಸಿದ್ದಾರೆ. ಯಾರ ಮೇಲೆಯೋ ಏಕೋ ಮನಸ್ಸು ಹುಳ್ಳಹುಳ್ಳಗಾದ ಬೆಕ್ಕಿನ ಪಿಳ್ಳೆಯೊಂದು ಕಂಡಕಂಡವರನ್ನೆಲ್ಲಾ ಪರಚುತ್ತಾ ಹೋಗಿ, ಕೊನೆಗೊಂದು Octopus ಅನ್ನು ಕೆಣಕಿದಾಗ, ಅದರ ಎಂಟು tentaclesಗಳಿಗೆ ಸೆರೆಯಾಗಿ-ಪಾಪ! ಅದರ ಅವಸ್ಥೆ ಅದರ ಶತ್ರುವಿಗೂ ಬೇಡ!

"ನಿರ್ಭಯಾಗ್ರಫಿ" plan ಮಾಡಿ ಬರೆದ ಪುಸ್ತಕ ಅಲ್ಲ. ಈ ಹೆಸರಿನ ಕಲ್ಪನೆ ಕನಸಿನಲ್ಲೂ ಬಂದದ್ದಿಲ್ಲ, ಎನ್ನುತ್ತಾರೆ ರಾಜರತ್ನಂ. ಆದರೆ "ಚಕ್ರವರ್ತಿ ವಜ್ರ"ವೆಂಬ ಕುಚೋದ್ಯದ ಕೆಸರನ್ನು ಆಗದವರು ಅವರ ಮೇಲೆ ಒಗೆದಾಗ: ಸುಮಾರು ಎರಡು

ವರ್ಷಗಳ ಕಾಲ ಬಹಿರಂಗವಾಗಿ ಅದನ್ನು ಅಲಕ್ಷಿಸುತ್ತಿದ್ದವರು, ನಾವು ಕೆಲವರು ಆಪ್ತರು ಮೇಲಿಂದ ಮೇಲೆ ಕೆದಕಿದಾಗ ನಮಗೆ ಸಮಾಧಾನಕರವಾದ ಪತ್ರಗಳನ್ನು ಅಂತರಂಗದಲ್ಲಿ ಬರೆಯುತ್ತಿದ್ದವರು ಎದುರುಕಡೆಯಿಂದ ಉಪಟಳ ಮಿತಿ ಮೀರಿದಾಗ—ಈ ಪುಸ್ತಕದ ಕಂತುಗಳು ಕೆಸರಿನಿಂದ ಹುಟ್ಟಿಬಂದ ಕಮಲಗಳಂತೆ ಮೂಡಿಬಂದುವು. ಏಳನೆಯ ಕಂತಾದ"ಶನಿಕಾಟ"ದಲ್ಲಿ ಇದಕ್ಕೆ ಸಂಬಂಧಪಟ್ಟ ವಿವರಗಳನ್ನು ಕಾಣಬಹುದು.

ತೆನಾಲಿರಾಮನು ಒಂದು ಕುದುರೆಯ ಚಿತ್ರವನ್ನು ಬರೆದನಂತಲ್ಲಾ! ಹಾಗಿದೆ ಈ ಪುಸ್ತಕದ ರಚನೆ. ಅಬದ್ಧವನ್ನು ಆಡುವ ಬಾಯನ್ನು ಮುಚ್ಚುವುದಕ್ಕೆ ಎಷ್ಟು ಬೇಕೋ ಅಷ್ಟನ್ನು ಆಯಾ ಕಾಲಕ್ಕೆ ಉತ್ತರಿಸಿದ್ದರಿಂದ ಇಲ್ಲಿ ಕೊಂಚ ಅವ್ಯವಸ್ಥೆ ಅನಿವಾರ್ಯವಾಗಿದೆ. ಅದರೂ, ಇಲ್ಲಿನ ಕಂತುಗಳಲ್ಲಿರುವ ಒಂದೊಂದು ಅಂಶವನ್ನೂ ಪ್ರತ್ಯೇಕವಾಗಿ ಓದಿಕೊಂಡರೂ, ಅದರೊಳಗೂ ಒಂದು ಸ್ವಾರಸ್ಯ ಕಂಡುಬರುತ್ತದೆಂದು ನಮಗೆ ನಂಬಿಕೆಯಿದೆ. ನಮ್ಮ ವಾಚಕರೊಬ್ಬರು ಹೇಳಿರುವ ಹಾಗೆ ಈ ಕಂತುಗಳ ತುಂಬ "ವ್ಯಂಗ್ಯ ವೈಭವ" ತುಂಬಿದೆ.

ಆಯಿತು. ಇಷ್ಟು ಹಾಸ್ಯದ ಶಸ್ತ್ರಾಸ್ತ್ರಪ್ರಯೋಗದಿಂದ ಏನು ಪ್ರಯೋಜನವಾಯಿತು? ಎಂದು ಯಾರಾದರೂ ಕೇಳಬಹುದು. ಅದಕ್ಕೆ ಉತ್ತರವಾಗಿ ಶ್ರೀ ರಾಜರತ್ನಂ ಹೇಳಿದ ಒಂದು ಜಾತಕ ಕತೆಯನ್ನು ಹೇಳುತ್ತೇವೆ.

"ಒಬ್ಬ ರಾಜನ ಸಭೆಯಲ್ಲಿ ಒಬ್ಬ ವಿದೂಷಕ ಹೊತ್ತು ಗೊತ್ತಿಲ್ಲದೆ ಬಾಯಿಗೆ ಬಂದಂತೆಲ್ಲ ಬೊಗಳುತ್ತಿದ್ದ. 'ಇವನ

ಬಾಯನ್ನು ಯಾರಾದರೂ ಮುಚ್ಚಿಸಬಾರದೆ?' ಎಂದು ದೊರೆ ಮಂತ್ರಿಯನ್ನು ಕೇಳಿದ. ಮಂತ್ರಿ ಅದಕ್ಕೆ ಒಂದು ಉಪಾಯ ಮಾಡಿದ. ಒಂದು ಉದ್ದದ ಕೊಳವೆಯನ್ನು ತೆಗೆದುಕೊಂಡ, ಒಂಧಿಷ್ಟು ಕುರಿಹಿಕ್ಕೆ ಜಮಾಯಿಸಿಕೊಂಡ. ವಿದೂಷಕ ಬಾಯಿ ತೆರೆಯುವುದೆ ತಡ, ಮಂತ್ರಿ ಅವನ ಬಾಯನ್ನು ಗುರಿಮಾಡಿ ಕೊಂಡು, ಉಃಫ್ ಎಂದು ಕೊಳವೆಯನ್ನು ಊದುತ್ತಿದ್ದ. ಅದರೊಳ ಗಿದ್ದ ಕುರಿಹಿಕ್ಕೆ ವಿದೂಷಕನ ಹೊಟ್ಟೆಗೆ ಸೇರುತ್ತಿತ್ತು. ಮೂರು ದಿವಸವಾಗುವ ವೇಳೆಗೆ ವಿದೂಷಕ ಬಾಯಿ ಬಿಡುವುದಕ್ಕೇ ಹೆದರುತ್ತಿದ್ದ."

ಅದರ ಹಾಗೆಯೇ, ರಾಜರತ್ನಂ ಅವರನ್ನು ಅಪಹಾಸ್ಯ ಮಾಡುತ್ತಿದ್ದ ಬಾಯ ಅಗಲ ಈಗ ಎಷ್ಟೋ ಕಿರಿದಾಗಿದೆ. ಪೂರ್ತಿ ಮುಚ್ಚಿಲ್ಲವಾದರೂ, ಮೂಗಿಂದ ಉಸಿರಾಡಲು ಕಷ್ಟವಾದವರು ಬಾಯಿಂದಲೂ ಆಡುವುದು ಬೇಡವೆ? ಆಡಿಕೊಳ್ಳಲಿ ಬಿಡಿ, ಎನ್ನುತ್ತಾರೆ ಶ್ರೀ ರಾಜರತ್ನಂ,

ಚಂದ್ರಕೀರ್ತಿ ಮತ್ತು ಗೆಳೆಯರು

◆ ಕಂತುಗಳಿಗೆ ಕೈಪಿಡಿ ◆

ಪ್ರತಿಯೊಂದು ಬರವಣಿಗೆಗೂ ಅದರದರ ಹಿನ್ನೆಲೆ ಇರುತ್ತದೆ. ಆ ಹಿನ್ನಲೆ ತಿಳಿದಿದ್ದರೆ, ಅದರಿಂದ ಬಂದ ಬರವಣಿಗೆಯ ಸ್ವಾರಸ್ಯ ಬೇಗ ಗೊತ್ತಾಗುತ್ತದೆ. ಆದ್ದರಿಂದ "ನಿರ್ಭಯಾಗ್ರಫಿ"ಯ ಕಂತುಗಳನ್ನು ಓದುವವರಲ್ಲಿ ಒಂದು ವಿಜ್ಞಾಪನೆ. ಏನೆಂದರೆ—

"ಶನಿಕಾಟ" ಎಂಬ ೭ನೇ ಕಂತಿನಲ್ಲಿ ಕೊಟ್ಟಿರುವ "ನನ್ನ ನಿರ್ಭಯಾಗ್ರಫಿಯ ಹುಟ್ಟು. ಬೆಳವಣಿಗೆ" ಎಂಬ ಲೇಖನವನ್ನು ಮೊದಲು ಓದಿ, ಅನಂತರ "ಚಕ್ರವರ್ತಿ ವಜ್ರ"ದಿಂದ ಮೊದಲು ಮಾಡಿಕೊಂಡು ಕಂತುಗಳನ್ನು ಓದಿ. "ನಿರ್ಭಯಾಗ್ರಫಿ"ಯನ್ನು ರಾಜರತ್ನಂ ಏಕೆ ಬರೆಯಬೇಕಾಯಿತು ಎಂಬುದರ ಗುಟ್ಟು ಅದರಲ್ಲಿದೆ.

ಇದರೊಳಗಿನ ೯ ಭಾಗಗಳನ್ನು 'ಕಂತು 'ಎಂದು ಕರೆದಿರುವುದು ಏಕೆ, ಎಂಬುದನ್ನು 'ಹಾಸ್ಯದ ಬಡಿಗೆ'ಯ ೨-೩ನೇ ಪುಟಗಳಲ್ಲಿ ವಿವರಿಸಿದ್ದಾರೆ.

೩೨೪ ಪುಟಗಳಷ್ಟು (ಮೂಲ ಕೃತಿ) ಪುಷ್ಟವಾದ ಈ ಪುಸ್ತಕಕ್ಕೆ ಆದಿಪ್ರೇರಣೆಯನ್ನು ಒದಗಿಸಿದ ಬೇಶ್ರೀ ಬೀಮುಂಣನವರ ಪರಿಚಯವು ೪ನೇ ಕಂತಿನ ಮೊದಲನೇ ಲೇಖನದಲ್ಲಿದೆ.

ಮೊದಲನೆಯ ಮೂರು ಕಂತು

"ಚಕ್ರವರ್ತಿ ವಜ್ರ"ದಲ್ಲಿ ಇರುವುದು—ಶ್ರೀ ಚಂದ್ರಕೀರ್ತಿಯವರಿಗೂ ಅವರೊಡನೆ ಕೂಡಿಕೊಂಡು ಬೆಳೆದ "ಶ್ರೀ ರಾಜರತ್ನಂ ಬಳಗ"ದ ಆಪ್ತೇಷ್ಟರಿಗೂ, ಅವರು ಕೇಳಿದ ಪ್ರಶ್ನೆಗಳಿಗೆ ಉತ್ತರವಾಗಿ ರಾಜರತ್ನಂ ಬರೆದ ಪತ್ರಗಳು. ನಾವು ಮೇಲಿಂದ ಮೇಲೆ ಅವರನ್ನು ಚುಚ್ಚದೇ ಹೋಗಿದ್ದರೆ, ಮುಂದಿನ ಕಂತುಗಳು ರೂಪುಗೊಳ್ಳುತ್ತಿರಲಿಲ್ಲ.

"ಕೊರವಂಜಿಯ ದಾರಿಯಲ್ಲಿ" ಎಂಬ ಎರಡನೇ ಕಂತಿನ ಹೂರಣ ಮೊದಲಿನದಕ್ಕಿಂತ ಹೆಚ್ಚು ವೈವಿಧ್ಯವನ್ನು ಹೊಂದಿದೆ. ಶ್ರೀ ಚಂದ್ರಕೀರ್ತಿಯವರಿಗೆ ಬರೆದ ಕೆಲವು ಪತ್ರಗಳ ಜೊತೆಗೆ ಹಾಸ್ಯದ ಸ್ವರೂಪ ಸ್ವಭಾವವನ್ನು ಕುರಿತು ಕೆಲವು ಚಾಟು ಗದ್ಯಗಳು ಕೇರಳದಿಂದ ಮೈಸೂರಿಗೆ ಬಂದು ಕನ್ನಡವನ್ನು ಕಲಿತು, ಕನ್ನಡಕ್ಕೆ ತಮ್ಮ ಹಾಸ್ಯದ ಕೊಡುಗೆಗಳನ್ನು ಹೇರಳವಾಗಿ ಕೊಟ್ಟು, ಅದಾದ ನಂತರ ಸತ್ಯವೂ ಶಿವನೂ ಸುಂದರವೂ ಆದ ಸಾಯಿ ತತ್ವವನ್ನು "ಸನಾತನ ಸಾರಥಿ"ಯ ಮೂಲಕ ಸಂಪಾದಿಸಿಕೊಡುತ್ತಿರುವ ಶ್ರೀ ನಾ. ಕಸ್ತೂರಿ ಅವರನ್ನು ಕುರಿತು ಎರಡು ಲೇಖನ: ಕೊನೆಗೆ ರಾಜರತ್ನಂ ಅವರ ಎರಡು ನಗೆಯ ಬರಹಃ ಒಂದು ಪದ್ಯದಲ್ಲಿ, ಒಂದು ಗದ್ಯದಲ್ಲಿ.

ಶ್ರೀ ಚಂದ್ರಕೀರ್ತಿಗೆ ಬರೆದ ಇನ್ನೂ ಕೆಲವು ಪತ್ರಗಳು: 'ಶಾಮಂಣ'ನಿಗೂ 'ರಾಜಂಣ'ನಿಗೂ ನಡೆದ ಪತ್ರ ವ್ಯವಹಾರ, Hammer of Thor ಒಂದೇ ಸಾಲದೆಂದು ಅದರ ಮೇಲೆ ಹೇರಿದ Cat o' Nine Tails; ಇವೆಲ್ಲಕ್ಕೂ ಮುಡಿಯ ಮಾಣಿಕವಾಗಿ,

"Pint by Pint" ಬೇಶ್ರೀ ಅವರಿಗೆ ಹತ್ತು ಸಲ ಹುಯಿದ "ಗುಟುಕು ನೀರು"—ಇವು "ಹಾಸ್ಯದ ಬಡಿಗೆ" ಎಂಬ ಮೂರನೇ ಕಂತಿನ ವಸ್ತು.

ಅನಂತರದ ಎರಡು ಕಂತು

ನಾಲ್ಕನೇ ಕಂತಿನ ಆವರಣವೇ ಬೇರೆ. ಹಿಂದಿನ ಕಂತುಗಳಲ್ಲಿರುವಷ್ಟು ವ್ಯಂಗ್ಯ ಇಲ್ಲಿಲ್ಲ. ರಾಜರತ್ನಂ ಅವರ ಮನಸ್ಸಿನಲ್ಲಿ ಏನಿದೆ, ಅವರ ಹೃದಯ ಎಂಥದು ಎಂಬುದನ್ನು ತಿಳಿಯಲು ಬಂದವರು, ಅವರನ್ನು ಕಂಡು ಮಾತಾಡಿ ಪಡೆದ Inter-view (ಅಂತರ್ದರ್ಶನ)ಗಳು ಈ ಕಂತಿನ ಮುಖ್ಯವಾದ ಭಾಗ. ರಾಜರತ್ನಂ ಅವರ ಮುಖ್ಯವೃತ್ತಿಯಾದ ಅಧ್ಯಾಪನವನ್ನು ಕುರಿತು ಕೆಲವು ಸ್ವಾರಸ್ಯಗಳು ಇಲ್ಲಿವೆ. ಡಿವಿಜಿಯವರ ಅಗ್ರಪ್ರಜ್ಞೆಯನ್ನು ರಾಜರತ್ನಂ ಅವರೂ ಅಂಗೀಕರಿಸಿದ್ದಾರೆ ಎಂಬುದು ಇಲ್ಲಿ ಗಮನಿಸಬೇಕಾದ ಒಂದು ಗಟ್ಟಿ ಅಂಶ.

ಐದನೇ ಕಂತು, ಕಾಲವಾದ ಅನಕೃ ಅವರಿಗೂ ರಾಜರತ್ನಂಗೂ ಇದ್ದ ಸ್ನೇಹವನ್ನು ಕುರಿತದ್ದು. ಅನಕೃ ಅವರ ಸ್ಮರಣಾರ್ಥವಾಗಿ ರಾಜರತ್ನಂ ಅವರು ಏನು ಮಾಡಿದ್ದಾರೆ, ಏನು ಮಾಡುತ್ತಿದ್ದಾರೆ ಎಂಬುದರ ವಿವರಗಳನ್ನು ಇಲ್ಲಿ ಕಾಣಬಹುದು.

ಮುಂದಿನ ಮೂರು ಕಂತು

'ಕಂತು'ಗಳು ಪ್ರಕಟವಾದ ಹಾಗೆಲ್ಲಾ ಅವುಗಳನ್ನು ಓದಿದವರು, ಅವುಗಳ ಹಿನ್ನೆಲೆಯನ್ನು ತಿಳಿದಿದ್ದರಿಂದ ಅರ್ಥಮಾಡಿಕೊಂಡವರು ಹಲವರು ರಾಜರತ್ನಂಗೂ ನಮಗೂ ಮೆಚ್ಚುಗೆಯ

ಪತ್ರಗಳನ್ನು ಬರೆದರು. ಅವುಗಳಲ್ಲಿ ಕೆಲವನ್ನು ಆರನೇ ಕಂತಿನಲ್ಲಿ ಕೊಟ್ಟಿದೆ. ಜೊತೆಗೆ "ನಾಡೋಜ" ಪತ್ರಿಕೆಯಲ್ಲಿ ಪ್ರಕಟವಾದ "ನಿರ್ಭಯಾಗ್ರಫಿ"ಯ ವಿಮರ್ಶೆಯೂ, ರಾಜರತ್ನಂ ಚಂದ್ರಕೀರ್ತಿಗೆ ಬರೆದ ಎರಡು ಪತ್ರಗಳೂ ಪ್ರಕಟವಾಗಿವೆ. "ಜೆಡೆಶಂಕರ"ದಲ್ಲಿ ಯಾರು ಯಾರನ್ನು ಆಡಿಸುತ್ತಾರೆ ಎಂಬುದನ್ನು ಕಾಣಬಹುದು

ಏಳನೇ "ಶನಿಕಾಟ"ದಲ್ಲಿ ಇನ್ನಷ್ಟು ವಾಚಕರ ಪತ್ರಗಳಿವೆ. ಪೋಲಿ's ಕೆಲಸ ಮಾಡಲು ಹೊರಟವರೊಬ್ಬರಿಗೆ ರಾಜರತ್ನಂ ಮೇಷ್ಟರಾಗಿ ಏನೇನು ಪಾಠ ಹೇಳಿದರು ಎಂಬುದು ಈ ಕಂತಿನ ಕೇಂದ್ರವಸ್ತು. ರಾಜರತ್ನಂ ಎಷ್ಟು ನಕ್ಕು ನಗಿಸಬಲ್ಲರೋ ಅಷ್ಟೇ ಗಂಭೀರವಾಗಿ ವಿಚಾರಯುಕ್ತವಾಗಿ "ಪ್ರತಿವಾದಿ ಭಯಂಕರ"ರೂ ಆಗಬಲ್ಲರು ಎಂಬುದನ್ನು ಇಲ್ಲಿ ಕಾಣಬಹುದು.

ಅದೇ ಮೇಷ್ಟರ ಕೆಲಸ ಎಂಟನೇ ಕಂತಿನಲ್ಲಿಯೂ ಮುಂದುವರಿದಿದೆ. "ಚಕ್ರವರ್ತಿ ವಜ್ರ" ಪ್ರಕರಣದಲ್ಲಿ ಆಸಕ್ತಿ ವಹಿಸಿದವರು ಅನೇಕರು ಶ್ರೀ ಸತ್ಯ ಸಾಯಿ ಬಾಬಾ ಅವರನ್ನು ಕುರಿತು ಕೆಲವು ಪ್ರಶ್ನೆಗಳನ್ನು ಕೇಳಿದಾಗ, ಅಂತಹದೊಂದು "ಸಂದೇಹ ಸಂದೋಹ"ಕ್ಕೆ ರಾಜರತ್ನಂ ಬರೆದ ಉತ್ತರ ಇಲ್ಲಿದೆ. ಸಾಯಿ ಮನೋಧರ್ಮವನ್ನು ಸ್ಪಷ್ಟಪಡಿಸುವ ಅವರದೇ ಒಂದು ರೂಪಕದ ಕಥೆಯನ್ನು ಇಲ್ಲಿ ಕೊಡಲಾಗಿದೆ.

ಒಂಬತ್ತನೆಯ ಕಡೇ ಕಂತು

ಹಿಂದಿನ ಎಂಟು ಕಂತುಗಳಿಗಿಂತ ತೀರ ವಿಭಿನ್ನವಾಗಿದ್ದು, ತೀರ ವಿಶಿಷ್ಟವಾದದ್ದು ಈ ಕಂತು. ಇದರೊಳಗೆ ಕಾಣಿಸಿಕೊಳ್ಳುವ

ಚಮ್ಮಾರನು "A mender of soles" ಆದರೆ, ಅವನ ಮೇಲೆ ತಮ್ಮ ಪ್ರೇಮದ ಅಮೃತ ವರ್ಷವನ್ನು ಕರೆದ ಸ್ವಾಮಿಯವರು "A Mender of Souls". ಈ ಸ್ವಾಮಿಯ ಮಹಿಮೆಯನ್ನು ಚಿತ್ರಿಸಲು ಮೀಸಲಾದದ್ದು ಈ ಕಂತು. ಇದು ಸ್ವಾಮಿಯವರಿಗೆ ನಾವು ಭಕ್ತಿಯಿಂದ ಎತ್ತಿಹಿಡಿಯುತ್ತಿರುವ ನುಡಿಮುತ್ತಿನ ಶ್ವೇತಾತಪತ್ರ.

—ರಾಜರತ್ನಂ ಬಳಗ

◆ ಮೆಟ್ಟಿಲೇರುವ ಮುನ್ನ ◆

'ನಿರ್ಭಯಾಗ್ರಫಿ'ಯ 'ಕಂತು'ಗಳ ವಿವರ

ಕಂತು	ಹೆಸರು	ಪ್ರಕಟವಾದ್ದು	ಪುಟ
1.	ಚಕ್ರವರ್ತಿ ವಜ್ರ	ನವರಾತ್ರಿ, 1974	36
2.	ಕೊರವಂಜಿಯ ದಾರಿಯಲ್ಲಿ	23-11-74	36
3.	ಹಾಸ್ಯದ ಬಡಿಗೆ	30-12-74	36
	[ಹನ್ನೊಂದು ತಿಂಗಳ ವಿರಾಮ]		
4.	'ವಜ್ರ'ವಾದ 'ರತ್ನ'	23-11-75	36
5.	ಅನಕೃ ಮತ್ತು ನಾನು	23-11-75	36
	[ಹದಿನಾಲ್ಕು ತಿಂಗಳ ವಿರಾಮ]		
6.	ಶಿಶುಪಾಲವಧ	1-2-77	36
7.	ಶನಿಕಾಟ	1-4-77	36
8.	ಸರ್ ರಾಜರತ್ನಂ	1-4-77	36
9.	ಶ್ವೇತಾತಪತ್ರ	10-4-77	36

ಒಟ್ಟು ಪುಟಗಳ ಸಂಖ್ಯೆ 324

ಇಲ್ಲಿಗೆ "ನಿರ್ಭಯಾಗ್ರಫಿ" ಮುಗಿಯಿತು

೧೦-೪-೭೭

ಶ್ವೇತಾತಪತ್ರ

'ಆತಪ' ಎಂದರೆ ಬಿಸಿಲು. ಬಿಸಿಲಿನ ತಾಪದಿಂದ ನಮ್ಮನ್ನು ಯಾವುದು (ತ್ರ) ಕಾಪಾಡುತ್ತದೋ ಅದು (ಆತಪ-ತ್ರ) ಎಂದರೆ ಛತ್ರಿ, ಕೊಡೆ, 'ಶ್ವೇತ' ಎಂದರೆ ಬಿಳುಪಾದದ್ದು. ಆದ್ದರಿಂದ "ಶ್ವೇತಾತಪತ್ರ" ಎಂದರೆ ಬಿಳಿಯ ಕೊಡೆ, ಬೆಳ್ಗೊಡೆ. ರಾಜರಿಗೂ ಚಕ್ರವರ್ತಿಗಳಿಗೂ ಲಭ್ಯವಾಗಿರುವ ವೈಭವದ ಚಿಹ್ನೆಗಳಲ್ಲಿ ಶ್ವೇತಾತಪತ್ರ ಮುಖ್ಯವಾದದ್ದು. ರಾಜರ ಛತ್ರಿಗೆ ಮೂರು ಸುತ್ತಳತೆಯಿದ್ದರೆ, ಚಕ್ರವರ್ತಿಯದಕ್ಕೆ ಒಂದು ಹತ್ತಳತೆ ಹೆಚ್ಚಿರಬಹುದು. ಹೀಗೆ ವಿಸ್ತಾರದಲ್ಲಿ ವ್ಯತ್ಯಾಸವಿರಬಹುದೇ ಹೊರತು, ಬೆಳ್ಗೊಡೆ ಇಬ್ಬರಿಗೂ ಸಮಾನ.

ಮತಿ ಕೋಶಂ
ಪದವಿದ್ಯೆ ಕಂಠಿಕೆ
ಜಸಂ ಶ್ವೇತಾತಪತ್ರಂ
ಸರಸ್ವತಿ ಮಾದೇವಿ
ಪದೋಕ್ತಿ ಭೇರಿಕಳಿತಂ ಸಿಂಹಾಸನಂ
ಸಂದಲಂಕೃತಿ ಚಂಚಚ್ಚಮರೀಜಮಾಗೆ
ಕವಿತಾಸಾಮ್ರಾಜ್ಯಮಂ ತಾಳ್ದಿದುನ್ನತಿಯಿಂದಂ
ಕವಿಚಕ್ರವರ್ತಿವೆಸರೇಂ ರನ್ನಂಗೆ ಮೆಯ್ವೆತ್ತುದೋ!
(ಅಜಿತತೀರ್ಥಕರಪುರಾಣತಿಲಕಂ.)

ನನ್ನ ಪೂರ್ವಿಕರಲ್ಲಿ ಒಬ್ಬನಾದ 'ರತ್ನ'ನ ಪದ್ಯದಿಂದ

ಒಂದು ಪಾದವನ್ನು ಸ್ವೀಕಾರಮಾಡಿ, ಅದನ್ನು ಉಚಿತವಾಗಿ ಬದಲಾಯಿಸಿ—

"ಚಕ್ರವರ್ತಿವೆಸರೀ ರತ್ನಂಗದೇನೊಪ್ಪಿರ್ದುದೋ!"

ಎಂಬ ಉದ್ಗಾರ ಎದ್ದದ್ದು ತಡ, 'ರಾಜ'ನು 'ಚಕ್ರವರ್ತಿ ಯಾದದ್ದರ ಜೊತೆಯಲ್ಲೆ 'ರತ್ನ'ನು 'ವಜ್ರ'ವಾಗುವುದು ಅನಿವಾರ್ಯವಾಯಿತು ಅದರ ಫಲವಾಗಿ, ರಾಜರಿಗೂ ಚಕ್ರವರ್ತಿ ಗಳಿಗೂ ಸಮಾನ ಲಾಂಛನವಾದ "ಶ್ವೇತಾತಪತ್ರ"ವು ipso facto ನನಗೂ ಲಭ್ಯವಾಯಿತು.

—ಚಕ್ರವರ್ತಿ ವಜ್ರ

◆ ಶ್ರೀ ಸತ್ಯಸಾಯಿ ರಕ್ಷೆ ◆

To each his suffering ! All are men
Condemn'd alike to groan!
The tender for another's pain;
The unfeeling for his own!

'ಆರ್ತ'ನೆಂದು ಹೇಳಿಕೊಳ್ಳುವುದಕ್ಕೆ ನಾನು ಏನು ಸಂಕೋಚ ಪಡಬೇಕಾದ್ದಿಲ್ಲ. ನನ್ನಂತೆಯೆ ಆರ್ತರಾದವರ ಹತ್ತಿರ ನನ್ನ ಸಂಕಟವನ್ನು ಹೇಳಿಕೊಂಡದ್ದರಿಂದ ಯಾರಿಗೂ ಫಲವಿಲ್ಲ. ಆದರೆ, 'ಆರ್ತತ್ರಾಣಪರಾಯಣ'ನೆಂದೂ 'ಪ್ರಣತಾರ್ತಿಹರ'ನೆಂದೂ ಹೆಸರಾದ ದೇವರಲ್ಲಿ ನಮ್ಮ ಆರ್ತಿಯನ್ನು ತೋಡಿಕೊಳ್ಳದೇ ಹೋದರೆ, ತಪ್ಪು ನಮ್ಮದಾಗುತ್ತದೆ. ಭಗವಂತನು ಆರ್ತರನ್ನು ಕೂಡ "ಸಂಕೃತಿ"ಗಳೆಂದು ಕರೆದಿದ್ದಾನೆ. ಭಗವಂತನಿಗೆ ಇಷ್ಟರಾದವರಲ್ಲಿ ಆರ್ತರಿಗೆ ಮೊದಲಪಂಕ್ತಿ; ಅನಂತರ ಜಿಜ್ಞಾಸುಗಳು, ಅರ್ಥಾರ್ಥಿಗಳು, ಜ್ಞಾನಿಗಳು.

ಮೊನ್ನೆ ಮೊನ್ನೆಯವರೆಗೂ ಬಚ್ಚಬರಿಯ 'ರಾಜರತ್ನ'ನಾಗಿದ್ದ ನಾನು ದಿಢೀರನೆ 'ಚಕ್ರವರ್ತಿ ವಜ್ರ' ಆದದ್ದು ಹೇಗೆ? ಈ 'ಪವಾಡ'ಯಾರಿಂದ ಆಯಿತು? ಎಂದು ನಾನೂ ಕೆದಕೀ ಬೆದಕೀ ಉತ್ತರಕ್ಕಾಗಿ ಹುಡುಕಾಡಿದ್ದೇನೆ.

'ವಜ್ರ'ವಾದ 'ರತ್ನ' ಎಂಬ 4ನೇ ಕಂತಿನಲ್ಲಿ ಇದಕ್ಕೆ ಅರ್ಧ ಉತ್ತರ ಇದೆ. ಅದು ಹಿರಿಯರಾದ ಶ್ರೀ ಬೇಂದ್ರೆಯವರ

ಆಶೀರ್ವಾದದ ಫಲ. ಆದರೆ, 'ರಾಜ'ಚಕ್ರವರ್ತಿ'ಯಾದದ್ದು?

'ರಾಜ'ನಿಗೆ ಶ್ವೇತಚ್ಛತ್ರವು ಮಹಾಪುರುಷರ ಸಂಶ್ರಯದಿಂದ ವಿಸ್ತಾರವಾದರೆ, ಅದರ ಅಡಿಯಲ್ಲಿ ಇರುವವನು 'ಚಕ್ರವರ್ತಿ' ಯಾಗಬೇಕು, ಅಲ್ಲವೆ? ಹಾಗಾಗಿ, ನಾನೂ "ಚಕ್ರವರ್ತಿ" ಆಗಿರಬಹುದು.

ಭಗವಾನ್ ಶ್ರೀ ಸತ್ಯಸಾಯಿಬಾಬಾ ಅವರ ಪ್ರೀತಿಗೆ ಪಾತ್ರನಾಗಿ ಅವರಿಂದ ಅಭಯವನ್ನೂ ಆನಂದವನ್ನೂ ಪಡೆದಿದ್ದೇನೆ. ಇದೇ ನನ್ನ ಶ್ವೇತಾತಪತ್ರದ ಒಳಗುಟ್ಟು. ಇದೇ ನನ್ನ ಸರ್ವಸಂಕಟಕ್ಕೂ ಭೇಷಜವಾದ ರಕ್ಷೆ.

—ರಾಜರತ್ನಂ

◆ ಶ್ರೀ ಸಾಯಿಸರಸ್ವತಿ ◆

ಭಗವಾನ್ ಶ್ರೀ ಸತ್ಯಸಾಯಿ ಬಾಬಾ ಗುರುವನ್ನು ನೆನೆದಾಗಲೆಲ್ಲ ನನಗೆ ಭಕ್ತಾಮರಸ್ತೋತ್ರದ ಈ ಶ್ಲೋಕ ಜ್ಞಾಪಕವಾಗುತ್ತದೆ:

ಬುದ್ಧಸ್ತ್ವಮೇವ ವಿಬುಧಾರ್ಚಿತಬುದ್ಧಿಬೋಧಾತ್
ತ್ವಂ ಶಂಕರೋಽಸಿ ಭುವನತ್ರಯಶಂಕರತ್ವಾತ್
ಧಾತಾಸಿ ಧೀರಶಿವಮಾರ್ಗವಿಧೇರ್ವಿಧಾನಾತ್
ವ್ಯಕ್ತಂ ತ್ವಮೇವ ಭಗವಾನ್ ಪುರುಷೋತ್ತಮೋಽಸಿ

(ಪಂಡಿತರು ಕೊಂಡಾಡುವ ಬುದ್ಧಿ ಬೋಧವಿರುವ ಕಾರಣದಿಂದ ನೀನೇ ಬುದ್ಧ. ಮೂರು ಲೋಕಗಳಿಗೂ ಮಂಗಳವನ್ನೂ ಉಂಟುಮಾಡುತ್ತಿರುವ ಕಾರಣದಿಂದ ನೀನು ಶಂಕರ, ಧೀರವಾದ ಶಿವಮಾರ್ಗವನ್ನು ವಿಧಿಸುವ ವಿಧಾನದಿಂದ ನೀನು ಧಾತಾ. ಹೀಗೆ ಬುದ್ಧನೂ ಶಂಕರನೂ ಬ್ರಹ್ಮನೂ ಆದನೀನು, ಭಗವಾನ್, ಪುರುಷೋತ್ತಮನು ಎಂಬುದು ವ್ಯಕ್ತವಾಗಿಯೇ ಇದೆ.)

ಸಕಲ ಸತ್ಯಸಾಯಿ ಸೇವಾಸಮಿತಿಗಳಿಗೆ ಸರ್ವಾಧ್ಯಕ್ಷರಾದ ಸನಾತನ ಸಾರಥಿ ಶ್ರೀ ಸತ್ಯ ಸಾಯಿ ಬಾಬಾ ಅವರ ಕಾರ್ಯಾಚರಣೆಗಳನ್ನು ಜ್ಞಾಪಿಸಿಕೊಂಡಾಗಲೆಲ್ಲ ನನಗೆ ಭಗವದ್ಗೀತೆಯ ಈ ಶ್ಲೋಕ ನೆನಪಾಗುತ್ತದೆ:

ಮಾಯಾಧ್ಯಕ್ಷೇಣ ಪ್ರಕೃತಿಃ ಸೂಯತೇ ಸಚರಾಚರಮ್!
ಹೇತುನಾನೇನ ಕೌಂತೇಯ ಜಗದ್ವಿಪರಿವರ್ತತೇ ||

(ಕೌಂತೇಯ, ಅಧ್ಯಕ್ಷನಾದ ನನ್ನಿಂದ ಪ್ರಕೃತಿಯು ಚರಾಚರಾತ್ಮಕವಾದ ಜಗತ್ತನ್ನು ಉತ್ಪತ್ತಿಮಾಡುತ್ತದೆ. ಈ ಕಾರಣದಿಂದ, ಈಶ್ವರನಾದ ನಾನು ಅಧ್ಯಕ್ಷನೆಂಬ ಕಾರಣದಿಂದ, ಜಗತ್ತು ಪರಿವರ್ತಿಸುತ್ತಿರುತ್ತದೆ.)

"ತಾಯುಮಾನವರ್" ಸಾಯಿಗುರು

ಸಾಯಿಪ್ರೇಮಿಗಳಾದ ನಮಗೆ ಶ್ರೀ ಸತ್ಯ ಸಾಯಿ ಬಾಬಾ ಅವರು ಸರ್ವದೇವತಾ ಸ್ವರೂಪಿಯಾದವರು.

> ಗುರುಬ್ರ್ರಹ್ಮಾ ಗುರುರ್ವಿಷ್ಣುಃ ಗುರರ್ದೇವೋ ಮಹೇಶ್ವರಃ |
> ಗುರು ಸ್ಸಾಕ್ಷಾತ್ ಪರಂಬ್ರಹ್ಮ ತಸ್ಮೈ ಶ್ರೀ ಗುರವೇ ನಮಃ ||

ಸಾಯಿಗುರು ನಮ್ಮ ಪಾಲಿಗೆ ಬ್ರಹ್ಮ, ನಮ್ಮ ಪಾಲಿಗೆ ವಿಷ್ಣು, ನಮ್ಮ ಪಾಲಿಗೆ ಮಹೇಶ್ವರ.

> ನಮಾಮಿ ಬ್ರಹ್ಮ, ನಮಾಮಿ ವಿಷ್ಣು, ನಮಾಮಿ ಮಹೇಶ್ವರಾ |
> ಸ್ಮರಾಮಿ ಬ್ರಹ್ಮ, ಸ್ಮರಾಮಿ ವಿಷ್ಣು, ಸ್ಮರಾಮಿ ಸಾಯೀಶ್ವರಾ ||

ಎಂದು ಭಜನೆ ಮಾಡುತ್ತೇವೆ. ಶ್ರೀ ಸತ್ಯ ಸಾಯಿ ನಮ್ಮ ಪಾಲಿಗೆ ಬ್ರಹ್ಮ-ವಿಷ್ಣು-ಮಹೇಶ್ವರ ಮೂವರೂ ಆದ ಸಾಕ್ಷಾತ್ ಪರಬ್ರಹ್ಮ.

ಅಷ್ಟೇ ಅಲ್ಲ, ಆ ಮೂರು ದೇವರ ಅರ್ಧಾಂಗಿಯರಾದ ಸರಸ್ವತೀ-ಲಕ್ಷ್ಮೀ ದುರ್ಗಾದೇವಿಯರೂ ಈ ನಮ್ಮ ಸಾಯಿ ಗುರುವೇ.

> ದುರ್ಗಾ ಲಕ್ಷ್ಮೀ ಸರಸ್ವತೀ—ಸಾಯಿ ಜಗನ್ಮಾತಾ |
> ಸಾಯಿ ಜಗನ್ಮಾತಾ-ಮಾಂ ಪಾಹಿ ಜಗನ್ಮಾತಾ ||

ಎಂದು ಭಜನೆ ಮಾಡುತ್ತೇವೆ.

ದೇವಿಯರು ವಿನಾ ಆದ ದೇವರುಗಳು ನಮ್ಮಲ್ಲಿಲ್ಲ. ಲಕ್ಷ್ಮೀನಾರಾಯಣರು, ಪಾರ್ವತೀ ಪರಮೇಶ್ವರರು, ಸೀತಾ ರಾಮರು, ರಾಧಾಕೃಷ್ಣರು—"ಜಗತಃ ಪಿತರೌ" ಲೋಕದ ತಾಯಿ ತಂದೆಯರು ಎಂದು ಭಾವಿಸಿದ್ದೇವೆ.

ಮೊದಲು ತಾಯಿ, ಅನಂತರ ತಂದೆ, ಇದು ನಮ್ಮ ಸಂಸ್ಕೃತಿ. ತಾಯಿ ತಂದೆ ಬೇರೆ ಎಂದು ಕಂಡರೂ, ಇಬ್ಬರೂ ಕೂಡಿ ಅವಿಭಾಜ್ಯವಾಗಿ ಒಬ್ಬರೇ. ತಾಯಿ ಬೇರೆಯಲ್ಲ, ತಂದೆ ಬೇರೆಯಲ್ಲ.

ನಮ್ಮ ದೇವರನ್ನು ಶ್ರುತಿಗಳು "ತ್ವಂ ಸ್ತ್ರೀಂ, ತ್ವಂ ಪುಮಾನ್", ನೀನು ಹೆಣ್ಣು. ನೀನು ಗಂಡು ಎಂದು ಕೊಂಡಾಡುತ್ತವೆ. ದೇವರು ಹೆಣ್ಣೂ ಹೌದು, ಗಂಡೂ ಹೌದು. ಗಂಗೆಯನ್ನು ತಲೆಯಮೇಲೆ ಇಟ್ಟುಕೊಂಡ ಪರಶಿವ ಅರ್ಧನಾರೀಶ್ವರ ಅಲ್ಲವೆ? ಲಕ್ಷ್ಮಿಯನ್ನು ಎಡೆಬಿಡದೆ ಎದೆಯಲ್ಲಿ ಧರಿಸಿದ ನಾರಾಯಣ ಎರಡು ಸಲ ಮೋಹಿನಿಯಾಗಿ ಮಾರ್ಪಡಲಿಲ್ಲವೆ? ಒಮ್ಮೆ ಅಮೃತವನ್ನು ಹಂಚುವಾಗ, ಇನ್ನೊಮ್ಮೆ ಭಸ್ಮಾಸುರನಿಗೆ ಬುದ್ಧಿ ಕಲಿಸುವಾಗ?

ನಮ್ಮ ಸಾಯಿಗುರುವಾದರೂ 'ಸ' ಎಂದರೆ ಸತ್ಯನಾರಾಯಣ, 'ಆಯಿ' ಎಂದರೆ ತಾಯಿ. ಈ ಶಿವಸಾಯಿ "ತಾಯುಂ ಆನವರ್". ತಮ್ಮನ್ನು ನಂಬಿ ಬಳಿಗೆ ಬಂದವರಿಗೆ ತಾಯಿಯೂ ಆದವರು, ತಾಯಿಯಂತೆ ಪ್ರೇಮವನ್ನು ಉಣಿಸುವವರು.

ದುರ್ಗಾ ಲಕ್ಷ್ಮೀ ಸರಸ್ವತೀ—ಸಾಯಿ ಜಗನ್ಮಾತಾ |
ಸಾಯಿ ಜಗನ್ಮಾತಾ—ಮಾಂ ಪಾಹಿ ಜಗನ್ಮಾತಾ ||

ಎಂದು ಪ್ರಾರ್ಥಿಸುವುದು ಈ ಅರ್ಥದಿಂದ, ಆದಕಾರಣ—

> ಸರ್ವಮಂಗಲಮಾಂಗಲ್ಯೇ ಶಿವೇ ಸರ್ವಾರ್ಥಸಾಧಿಕೇ |
> ಶರಣ್ಯೇ ತ್ರ್ಯಂಬಕೇ ಗೌರೀ ನಾರಾಯಣಿ ನಮೋಸ್ತುತೇ ||

ಸರ್ವಮಂಗಲಗಳಿಗೆ ಮಾಂಗಲ್ಯಸ್ವರೂಪಿಯಾಗಿ, ಭಕ್ತರ ಸರ್ವಾರ್ಥಗಳನ್ನು ಸಾಧಿಸಿಕೊಡುವ ಸಾಯಿದುರ್ಗೆಗೆ ನಮಸ್ಕಾರ.

> ಆಕಾರತ್ರಯಸಂಪನ್ನಾಂ ಅರವಿಂದನಿವಾಸಿನೀಂ |
> ಅಶೇಷಜಗದೀಶಿತ್ರೀಂ ವಂದೇ ವರದವಲ್ಲಭಾಂ ||

ಭಕ್ತರಾದ ನಮಗೆ ವರಗಳನ್ನು ದಯಪಾಲಿಸುವ ಸ್ವಾಮಿಗೆ ವಲ್ಲಭೆಯಾದ ಸಾಯಿಲಕ್ಷ್ಮಿಗೆ ನಮ್ಮ ವಂದನೆಗಳು.

> ಯಾ ಕುಂದೇಂದು ತುಷಾರಹಾರಧವಳಾ
> ಯಾ ಶುಭ್ರವಸ್ತ್ರಾನ್ವಿತಾ |
> ಯಾ ವೀಣಾ ವರದಂಡ ಮಂಡಿತಕರಾ
> ಯಾ ಶ್ವೇತಪದ್ಮಾಸನಾ ||
> ಯಾ ಬ್ರಹ್ಮಾಚ್ಯುತ ಶಂಕರಾದಿಭಿಃ
> ದೇವೈಃ ಸದಾ ಪೂಜಿತಾ |
> ಸಾಮಾಂ ಪಾತು ಸರಸ್ವತೀ ಭಗವತೀ
> ನಿಶ್ಶೇಷಜಾಡ್ಯಾಪಹಾ ||

ಶುದ್ಧನೈರ್ಮಲ್ಯವೇ ತನ್ನ ಸ್ವರೂಪವೂ ಸ್ವಭಾವವೂ ಆಗಿ, ಭಕ್ತರ ಜಡತ್ವವನ್ನೆಲ್ಲ ನಿಶ್ಶೇಷವಾಗಿ ನಾಶಮಾಡುವ ಸಾಯಿಸರಸ್ವತಿ ನಮ್ಮನ್ನು ಕಾಪಾಡಲಿ.

ಶ್ರೀ ಸಾಯಿ ಸರಸ್ವತಿ

ಭಗವಂತನು ತಾನು ಅನುಗ್ರಹಿಸಿ ತೋರಿರುವ ಹೆಣ್ಣು ರೂಪ ಗಂಡು ರೂಪಗಳಲ್ಲಿ ನನಗೆ ವೈಯುಕ್ತಿಕವಾಗಿ ಅತ್ಯಂತ ಪ್ರಿಯವಾದದ್ದು ಸರಸ್ವತಿಯ ರೂಪ. ನಾವು ಹುಡುಗರಾಗಿದ್ದಾಗ

ನಮಗೊಂದು ಸ್ತೋತ್ರ ಹೇಳಿಕೊಟ್ಟಿದ್ದರು:

ಶರದ ಚಂದ್ರನ ಕಿರಣಗಳ ಧಿ-
ಕ್ಕರಿಪ ಶುಕ್ಲಾಂಬರದ ಪದನೂ-
ಪುರದ ಕಾಂಚನದ ಕಂಕಣದ ಕಿಂಕಿಣಿಯ ಝುಂಕೃತಿಯ |
ಕೊರಳ ಹಾರದ ಕರ್ಣಪೂರದ
ಕರದ ವೀಣೆಯ ಪುಸ್ತಕದ ಶುಭ-
ಕರವದನೆ ವಾಗ್ದೇವಿ ರಕ್ಷಿಸು ನಮ್ಮನನವರತ ||

ಈ ಪದ್ಯ ಬಾಯಿಪಾಠವಾದ ಅಂದಿನಿಂದ ನನಗೆ ಸರಸ್ವತಿ ಯೆಂದರೆ ಪರಮ ಪ್ರೀತಿ. ಏಕೆಂದರೆ, ಈ ದೇವಿ 'ಬ್ರಹ್ಮಾಚ್ಯುತ ಶಂಕರಾದಿಭಿಃ ದೇವೈಃ ಸದಾಪೂಜಿತಾ', ಬ್ರಹ್ಮ ಅಚ್ಯುತ ಶಂಕರ ಮೊದಲಾದ ದೇವರುಗಳಿಂದ ಸದಾ ಪೂಜಿತಳಾದವಳು ಈ ಸ್ತೋತ್ರವನ್ನು ಹೇಳಿಕೊಂಡಾಗಲೆಲ್ಲಾ ನನ್ನ ಕಣ್ಣ ಮುಂದೆ ಬರುತ್ತಿದ್ದುದು-ರಾಜಾ ರವಿವರ್ಮ ಬರೆದು ಪ್ರಖ್ಯಾತವಾದ ಸರಸ್ವತೀ ಚಿತ್ರ. ಬೆಳೆದು ದೊಡ್ಡವನಾದ ಮೇಲೆ, ನಮ್ಮ ಆದಿಕವಿ ಪಂಪ ನನಗೆ ಹೇಳಿಕೊಟ್ಟ:

ಪರಮ ಜಿನೇಂದ್ರವಾಣಿಯೆ ಸರಸ್ವತಿ ಬೇರೆದು ಪೆಣ್ಣರೂಪಮಂ
ಧರಿಯಿಸಿ ನಿಂದುದಲ್ತದುವೆ ಭಾವಿಸಿಯೋದುವ ಕೇಳ್ವ ಪೂಜಿಪಾ |
ದರಿಸುವ ಭವ್ಯಕೋಟಿಗೆ ನಿರಂತರಸೌಖ್ಯಮನೀವುದಾನದ
ರ್ಕೆರೆದಪೆನಾ ಸರಸ್ವತಿಯೆ ಮಾಳ್ಕೆಮಗಿಲ್ಲೆಯೆ ವಾಗ್ವಿಳಾಸಮಂ ||

ಸರಸ್ವತಿ ಎಂಬುದು ಹೆಣ್ಣುರೂಪವನ್ನು ತಾಳಿದ ಯಾವುದೋ ವ್ಯಕ್ತಿಯಲ್ಲ. ಇಂದ್ರಿಯಗಳನ್ನೂ ಅರಿಷಡ್ವರ್ಗ ಗಳನ್ನೂ ಅವುಗಳಿಂದಾಗುವ ಕರ್ಮಗಳನ್ನೂ ಯಾರು ಜಯಿಸಿರು ತ್ತಾರೋ ಅಂತಹ ಪರಮಾತ್ಮರಾದ ಜಿನರುಗಳ ಮುಖದಿಂದ

ಬರುವ ವಾಣಿ - ಅದೇ ಸರಸ್ವತಿ.

ಈವಾಣಿಯನ್ನು ಯಾರು ಭಾವಿಸಿ ಓದುತ್ತಾರೋ, ಕೇಳುತ್ತಾರೋ, ಪೂಜಿಸುತ್ತಾರೋ, ಆದರಿಸುತ್ತಾರೋ, ಅಂತಹ ಭವ್ಯರ ಸಮೂಹಕ್ಕೆ ಆ ವಾಣಿ ನಿರಂತರವಾದ ಸೌಖ್ಯವನ್ನು ಅನುಗ್ರಹಿಸುತ್ತದೆ.

ಪಂಪಕವಿ ಇಂಥ ಯಾವ ಸರಸ್ವತಿಗೆ ಶರಣಾಗಿ, ವಾಗ್ವಿಲಾಸದ ವರವನ್ನು ಬೇಡಿ ಪಡೆದನೋ-ಅದೇ ಮಾದರಿಯಲ್ಲಿ ನಾನು ಇಂದು ವಾಗ್ವಿಲಾಸದ ವೈಭವಕ್ಕಾಗಿ ಶ್ರೀ ಸಾಯಿ ಸರಸ್ವತಿ ಯನ್ನು ಆಶ್ರಯಿಸಿದ್ದೇನೆ.

ನೃತ್ಯ ಸರಸ್ವತಿ

ಭಾರತ ದೇಶದಲ್ಲಿ ವೀಣಾ ಪುಸ್ತಕಪಾಣಿಯಾಗಿ ಕುಳಿತ ಸರಸ್ವತಿ ಪ್ರಸಿದ್ಧಳಾಗಿರುವ ಹಾಗೆ, ನಮ್ಮ ಕರ್ಣಾಟಕ ದೇಶದ ಶಿಲ್ಪದಲ್ಲಿ ''ನೃತ್ಯಸರಸ್ವತಿ'' ಪ್ರಸಿದ್ಧಳಾಗಿದ್ದಾಳೆ, ಶೈವ-ವೈಷ್ಣವ-ಜೈನ-ಬೌದ್ಧ ಎಂಬ ನಾಲ್ಕು ಸಮಯಗಳಿಗೂ ಏಕಪ್ರಕಾರವಾದ ಆದರ ಗೌರವಗಳನ್ನು ತೋರಿ 'ಸಕಲಸಮಯ ರಕ್ಷಾಮಣಿ'ಗಳೆಂದು ಬಿರುದಾಂತ ನಮ್ಮ ಹೊಯಿಸಳ ರಾಜರ ಕಾಲದಲ್ಲಿ ಈ ನೃತ್ಯ ಸರಸ್ವತಿಯ ಕಲ್ಪನೆ ಶಿಲೆಯಲ್ಲಿ ಮೂಡಿಬಂತು. ಅದನ್ನು ಈ ಹೊತ್ತಿಗೂ ಬೇಲೂರಿನ ಹಳೆಯಬೀಡಿನ ದೇವಾಲಯಗಳಲ್ಲಿ ಕಾಣಬಹುದು.

ನೆನ್ನೆ ಬೃಂದಾವನದಲ್ಲಿ ಶ್ರೀ ಸ್ವಾಮಿಯವರ ಸನ್ನಿಧಿಯಲ್ಲಿ ನಾನು ಇದ್ದಾಗ, ಅದೂ ಮಾತನಾಡುವ ಮಧ್ಯೆ, ಸ್ವಾಮಿಯವರು

"ನಾಳೆ ರತ್ನಮ್ಮದು ಡಾನ್ಸ್ ಇದೆ, ಅಲ್ಲಾ?" ಎಂದರು. ಕಾರ್ಯಕ್ರಮದ ಪಟ್ಟಿ ನೋಡಿದ್ದ ನನಗೆ " ಇದು ಯಾವ ರತ್ನಮ್ಮನ ಡಾನ್ಸು ನಾಳೆ?" ಎನಿಸಿತು. ಮರುಕ್ಷಣ ಅವರು ನನ್ನ ಕಡೆ ನೋಡಿ ನಕ್ಕಾಗ ನನಗೆ ಅರ್ಥವಾದ ಹಾಗಾಯಿತು. "Dance ಮಾಡಿ ನಿನಗೆ practice ಇದೆ", ಅಲ್ಲಾ?" ಎಂದು ಅವರು ನುಡಿದಾಗ, ನನಗೆ ನಮ್ಮ ನೃತ್ಯ ಸರಸ್ವತಿಯ ನೆನಪಾಯಿತು.

ನಾರಾಯಣರೂಪೀ ರಂಗನಾಥನಾಗಿ, ಪರಶಿವರೂಪೀ ನಟರಾಜನಾಗಿ, ಹರಿಹರರೂಪೀ ಸತ್ಯಸಾಯಿಯಾಗಿ, ಶಿವಶಕ್ತಿ ಸ್ವರೂಪೀ ಸೂತ್ರಧಾರನಾಗಿ, ಕುಳಿತು ನೋಡುವವರ ಎದುರಿಗೆ ನಾನು ನರ್ತನ ಮಾಡುವುದಾದರೂ ಹೇಗೆ?—ಎಂದು ಒಂದರೆಕ್ಷಣ ಭಯವಾಯಿತು, ಸಂಕೋಚವಾಯಿತು. ಮರುಕ್ಷಣದಲ್ಲಿಯೇ ನೆನಪಾಯಿತು:—"ಕುಣಿಸುವವರು ಅವರೇ ಆಗಿರುವಾಗಿ ಕುಣಿಯಲು ನನಗೆ ಏಕೆ ಭಯ? ನನಗೆ ಏಕೆ ಸಂಕೋಚ?" ಎಂದು.

ಆಗ ಕೆಲವು ತಿಂಗಳ ಹಿಂದೆ ನಾನು ಕಂಡ ಒಂದು ಕನಸು ನೆನಪಾಯಿತು.

ಆ ರಾತ್ರಿ ಮಲಗುವ ಮುಂಚೆ, ನನ್ನ ರೂಢಿಯ ಪ್ರಕಾರ, ನಾಲ್ಕು ಪುಟ ಸಾಯಿಸಾಹಿತ್ಯವನ್ನು ಓದಿ ಮಲಗಿದೆ. ಅಲ್ಲಿ ಒಂದು ಕಡೆ "ಹೊಸ ದೇವತಾ ಮಂದಿರಗಳ ನಿರ್ಮಾಣಕ್ಕಿಂತ ಶಿಥಿಲವಾಗಿ ಇರುವ ಹಳೆಯ ಮಂದಿರಗಳ ಜೀರ್ಣೋದ್ಧಾರ ಹೆಚ್ಚು ಮುಖ್ಯ" ಎಂಬುದನ್ನು ಓದಿದ್ದೆ. ಅದರ ಪರಿಣಾಮವಾಗಿಯೋ ಏನೋ—

ಕನಸಿನಲ್ಲಿ ಯಾವುದೋ ಕಾಡಿನ ಮಧ್ಯೆ ಹೋಗುತ್ತಿದ್ದೇನೆ—

ರಾತ್ರಿ, ಕಣ್ಣು ಕಾಣಿಸದ ಕತ್ತಲು, ದಿಕ್ಕುತೋಚದಿರುವಾಗ, ದೂರದಲ್ಲಿ ಯಾವುದೋ ಮಿಣುಕುದೀಪ, ಗರ್ಭಗುಡಿಯಲ್ಲಿರುವ ಹಾಗೆ ಮಸಕು ಮಸಕಾಗಿ ಕಾಣಿಸಿತು. ಆ ದಿಕ್ಕಿನಲ್ಲಿ ಹೋಗಿದ್ದೇನೆ.

ಎದುರಿಗೆ ಒಂದು ಮುರುಕುಮಂಟಪ. ಅದರ ಒಳಗಿನಿಂದ ಸ್ವಾಮಿ ಬರುತ್ತಿದ್ದಾರೆ. ಇದೇ ನಿಲುವಂಗಿ, ಇದೇ ಕೇಶಾಲಂಕಾರ. "ಒಳಗೆ ಹೋಗು. ಏನಿದೆ ನೋಡು" ಎಂದವರೇ ಮಾಯವಾದರು.

ಒಳಗೆ ಹೋದೆ. ಮಿಣುಕುದೀಪದ ಮುಸಕುಬೆಳಕು ಸುವಾಸನೆಯ ಧೂಪದ ಹೊಗೆಯ ಮಂಜು. ಎದುರಿಗೊಂದು ಕಲ್ಲಿನ ಗೋಡೆ. ಅದರ ಮೇಲೆ ಯಾವುದೋ ಎರಡು ಮೂರ್ತಿಗಳನ್ನು ಕೆತ್ತಿದ ಹಾಗಿತ್ತು. ಇನ್ನೂ ಹತ್ತಿರ ಹೋಗಿ ನೋಡಿದೆ.

ಕೃಷ್ಣ ಕುಳಿತಿದ್ದಾನೆ. ಆತನ ಎಡತೊಡೆಯ ಮೇಲೆ ರಾಧೆ ಕುಳಿತಿದ್ದಾಳೆ. ರಾಧೆ, ಕೈಯಲ್ಲಿ ಕೊಳಲು ಹಿಡಿದು, ಅದನ್ನು ತನ್ನ ತುಟಿಗೆ ಇಟ್ಟು ಉಸಿರು ತುಂಬುತ್ತಿದ್ದಾಳೆ. ಕೃಷ್ಣ, ರಾಧೆಯನ್ನು ಬಳಸಿ ತನ್ನ ಕೈಗಳನ್ನು ತಂದು, ರಾಧೆ ಹಿಡಿದ ಕೊಳಲಿನ ರಂಧ್ರಗಳನ್ನು ತನ್ನ ಬೆರಳುಗಳಿಂದ ಮುಚ್ಚುತ್ತಿದ್ದಾನೆ, ತೆರೆಯುತ್ತಿದ್ದಾನೆ, ಕೊಳಲಿನ ಗಾನ ಮಂಟಪದಲ್ಲೆಲ್ಲ ತುಂಬಿಕೊಂಡು ತುಳುಕುತ್ತಿದೆ.

ಉಸಿರು ರಾಧೆಯದು. ಅದನ್ನು ನಡಸುವಾತ ಕೃಷ್ಣ.
ಇದು ನಾನು ಕಂಡ ಅಪೂರ್ವವಾದ ಕನಸು.
ಬೆಳಗ್ಗೆ ಎದ್ದು ಆ ಕನಸನ್ನು ಜ್ಞಾಪಿಸಿಕೊಂಡಾಗ-
ಜಾನಾಮಿ ಧರ್ಮಂ ನ ಚ ಮೇ ಪ್ರವೃತ್ತಿಃ
ಜಾನಾಮ್ಯಧರ್ಮಂ ನ ಚ ಮೇ ನಿವೃತ್ತಿಃ |
ತ್ವಯಾ ಹೃಷೀಕೇಶ ಹೃದಿ ಸ್ಥಿತೇನ
ಯಥಾ ನಿಯುಕ್ತೋಽಸ್ಮಿ ತಥಾ ಕರೋಮಿ ||

ಎಂಬ ಪ್ರಾರ್ಥನೆ ನೆನಪಾಯಿತು. ಧರ್ಮ ಯಾವುದು ಎಂದು ತಿಳಿದಿದ್ದರೂ ಅದರಂತೆ ನಡೆಯುವ ಪ್ರವೃತ್ತಿಯಿಲ್ಲ. ಅಧರ್ಮ ಇದು ಎಂದು ತಿಳಿದಿದ್ದರೂ ಅದರಿಂದ ದೂರವಾಗುವ ಇಷ್ಟವಿಲ್ಲ ಇಂಥ ಇಕ್ಕಟ್ಟಿನಲ್ಲಿ "ನೀನು ಹೇಗೆ ನಡೆಯೆಂದರೆ, ನಾನು ಹಾಗೆ ನಡೆಯುತ್ತೇನೆ" ಎಂಬ ಶರಣಾಗತಿ ಒಂದು ಹೊರತು, ನನಗೆ ಬೇರೆ ಮಾರ್ಗವಿಲ್ಲ. ನನಗೆ ಈ ನಂಬಿಕೆ ದಿನದಿನಕ್ಕೂ ಬಲಿಯುತ್ತಿದೆ.

ಸಾಯಿ ಸಂಕರ್ಷಣ

ನಂಬಿದವರ ಯೋಗಕ್ಷೇಮವನ್ನು ದೇವರು ವಹಿಸಿಕೊಳ್ಳುವ ನೆಂಬುದಕ್ಕೆ ನಾನು ಇಂದು ಈ ವೇದಿಕೆಯ ಮೇಲೆ ನಿಂತಿರುವುದೇ ಸಾಕ್ಷಿ. ಇದೇ ಮಲ್ಲೇಶ್ವರದಲ್ಲಿ ಸ್ವಾಮಿಯವರು ಭಕ್ತರಿಗೆ ಮೂರು ಸಲ ಇದುವರೆಗೆ ದರ್ಶನ ಕೊಟ್ಟಿರುವರಂತೆ. ಎರಡು ಸಲ ಇದೇ ಮೈದಾನದಲ್ಲಿ ಇವರ ಭಾಷಣ ನಡೆದದ್ದು ನನಗೆ ಗೊತ್ತೇ ಆಗಲಿಲ್ಲ. ಮೂರನೆಯ ಸಲ, ಹೆಣ್ಣು ಮಕ್ಕಳ ಹೈಸ್ಕೂಲಿನ ಆವರಣದಲ್ಲಿ ನಡೆದಾಗ, ನನ್ನ ಮನೆಯವರನ್ನು ಅಲ್ಲಿಗೆ ಕರೆದು ತಂದುಬಿಟ್ಟು, ನಾನು ಮನೆಗೆ ಹೊರಟುಹೋದೆ. ಆದರೆ ಈ ಸಲ, ನಾನು ಇಲ್ಲಿಗೆ ಆಕರ್ಷಿತನಾಗಿ ಅಲ್ಲ ಭಗವಾನ್ ಶ್ರೀ ಸತ್ಯಸಾಯಿ ಅವರಿಂದ ಸಂಕರ್ಷಿತನಾಗಿ-ಬಾಬಾ ಅವರ ಸನ್ನಿಧಿಯಲ್ಲಿ ನಿಂತು, ನನ್ನ ಹೃದಯ ಪುಷ್ಪವನ್ನು ಈ ಮಾತುಗಳ ರೂಪದಲ್ಲಿ ಮಾಲೆಮಾಡಿ ಅವರಿಗೆ ಸಮರ್ಪಿಸುತ್ತಿದ್ದೇನೆ.

ಸಾಯಿ ಮಹಿಮೆ

ಶ್ರೀ ಸ್ವಾಮಿಯವರು ಅನೇಕ ಮಹಿಮೆಗಳನ್ನು ತೋರಿಸಿದ್ದಾ

ರೆಂದು ಕೇಳಿದ್ದೇನೆ. ಅದರ ಭೌತರೂಪವಾದ ಪ್ರಮಾಣಗಳನ್ನು ಕೆಲವರು ನನಗೆ ತೋರಿಸಿದ್ದಾರೆ. ಆದರೆ ನನಗೆ ಅವುಗಳಿಗಿಂತ ಹೆಚ್ಚು ಪ್ರಿಯವಾದದ್ದು ಎಂದರೆ-ಅವರ ದಿವ್ಯೋಪದೇಶಗಳ ವಚನ ಮಧುವಿನ ಮಹಾಮಹಿಮೆ.

ಇಂಥ ಮಹಾಮಹಿಮೆಯನ್ನುಳ್ಳ ಶ್ರೀ ಸತ್ಯ ಸಾಯಿ ಗುರುವಿನ ಹತ್ತಿರ ನಾನು ಕೇಳಿಕೊಳ್ಳುವುದು ಇಷ್ಟೆ:

ಮತ್‌ಪ್ರಾರ್ಥನೀಯ ಮದನುಗ್ರಹದ ಏಷ ಏವ
ತ್ವದ್‌ಭೃತ್ಯ ಭೃತ್ಯ ಪರಿಚಾರಕ ಭೃತ್ಯ ಭೃತ್ಯ
ಭೃತ್ಯಸ್ಯ ಭೃತ್ಯ ಇತಿ ಮೂಂ ಸ್ಮರ ಲೋಕನಾಥ!

ಸಾಯಿಸೇವೆಗೆ ಸಾವಿರ ದಾರಿ. ನನ್ನದು ಸಾಹಿತ್ಯದ ದಾರಿ. ಯಾರ ಪ್ರಕೃತಿಗೆ ಯಾವ ಸೇವೆ ವಿಹಿತವೋ ಅದನ್ನು ಶ್ರೀ ಸಾಯಿಸಂಕಲ್ಪ ನಡೆಸಿಕೊಡಲಿ.

ಸಾಯಿಬೋಧೆಯ ಸಾರ

"ಸ್ವಾಮಿಕಾರ್ಯವೂ ಆಯಿತು, ಸ್ವಕಾರ್ಯವೂ ಆಯಿತು" ಎಂದು ಕನ್ನಡದಲ್ಲಿ ಹೇಳುವುದುಂಟು. ಆದರೆ, ಸಾಯಿಸೇವಾ ಕಾರ್ಯದ ಅವಸರದಲ್ಲಿ ಸ್ವಾಮಿ-ಸ್ವ ಎಂಬ ಭೇದಭಾವನೆಗೆ ಅವಕಾಶ ವಿಲ್ಲ. ಏಕೆಂದರೆ, ನಾವು ನಮ್ಮವರಲ್ಲ, ನಾವು ಸ್ವಾಮಿಯ ಸ್ವತ್ತು. ಹಾಗೆಯೇ ಸ್ವಾಮಿ ನಮ್ಮ ಸ್ವತ್ತು, ಸ್ವಾಮಿ ನಮ್ಮ ಸರ್ವಸ್ವ, ನಾವು ಸ್ವಾಮಿಯ ಸರ್ವಸ್ವ. ಸ್ವಾಮಿಯವರ ಬಳಿಯಲ್ಲಿ ನಾವು ಕೇಳಿ ಕೊಳ್ಳುವುದೂ ಇಷ್ಟೇ:

ಏತತ್ ಪ್ರಾರ್ಥ್ಯಂಮಮ ಬಹುಮತಂ ಜನ್ಮಜನ್ಮಾಂತರೇಪಿ |
ತ್ವತ್ ಪಾದಾಂಭೋರುಹಯುಗಗತಾ ನಿಶ್ಚಲಾ ಭಕ್ತಿರಸ್ತು ||

ನಿಶ್ಚಲವಾದ ಭಕ್ತಿಗೆ ಮೂರು ಮುಖಗಳು:೧. ಸ್ವಾಮಿಯ ಬೋಧೆಯನ್ನು ಗಾಢವಾಗಿ ನಂಬುವುದು; ೨. ಗಾಢವಾಗಿ ನಂಬಿದ್ದನ್ನು ಸ್ಪಷ್ಟವಾಗಿ ತಿಳಿಯುವುದು; ೩. ಸ್ಪಷ್ಟವಾಗಿ ತಿಳಿದದ್ದನ್ನು ದೃಢವಾಗಿ ಆಚರಿಸುವುದು. ಈ ಮೂರರಿಂದ ನಮಗೆ ಶ್ರೇಯಸ್ಸು.

ಸತ್ಯ. ಧರ್ಮ, ಶಾಂತಿ, ಪ್ರೇಮ ಎಂಬ ನಾಲ್ಕು ತತ್ತ್ವಗಳ ಆಧಾರದ ಮೇಲೆ ನಮ್ಮ ಬದುಕು ನಿಂತಿದೆ, ಎಂಬುದು ಸ್ವಾಮಿಯ ಬೋಧನೆಯ ಸಾರ.

ಸತ್ಯ ಹಾಲು ಇದ್ದ ಹಾಗೆ. ಅದನ್ನು ಹೇಗೆ ಕಾಯಿಸಬೇಕು, ಎಷ್ಟು ಕುದಿಸಬೇಕು ಎಂಬುದು ಅದಕ್ಕೆ ಸಂಬಂಧಿಸಿದ ಧರ್ಮ. ಕುದಿಸಿದ ಮೇಲೆ ಆರಲು ಬಿಟ್ಟರೆ ಆಗುವುದು ಶಾಂತಿ. ಕುದಿದ ಹಾಲು ಶಾಂತವಾದ ಮೇಲೆ ಕೆನೆ ಕಟ್ಟುತ್ತದಲ್ಲಾ, ಅದರ ಹಾಗೆ ಪ್ರೇಮ.

ಸತ್ಯ ವಿದ್ಯುಚ್ಛಕ್ತಿ ಇದ್ದ ಹಾಗೆ, ಧರ್ಮ ಆ ಶಕ್ತಿ ಪ್ರವಹಿಸುವ ತಂತಿ ಇದ್ದ ಹಾಗೆ, ಶಾಂತಿ ತಂತಿಯ ಮೂಲಕ ವಿದ್ಯುಚ್ಛಕ್ತಿಯನ್ನು ತಂದುಕೊಂಡಬಲ್ಬ್ ಇದ್ದ ಹಾಗೆ, ಪ್ರೇಮ ಅಂಥ ಬಲ್ಬಿನಿಂದ ಬರುವ ಬೆಳಕು ಇದ್ದ ಹಾಗೆ-ಎಂದು ಸ್ವಾಮಿಗಳು ಹೇಳುವುದನ್ನು ಇಲ್ಲಿ ಜ್ಞಾಪಿಸಿಕೊಳ್ಳಬಹುದು.

"ಸತ್ಯ ನಮ್ಮ ಸ್ವಾಮಿಯ ಪ್ರಚಾರ, ಧರ್ಮ ಅವರ ಆಚಾರ, ಶಾಂತಿ ಅವರ ಸ್ವಭಾವ, ಪ್ರೇಮ ಅವರ ಸ್ವರೂಪ"—ಎಂಬ ಸೂತ್ರವನ್ನು ಪರಿಭಾವಿಸುವುದು ಶ್ರೀ ಸಾಯಿಸನ್ಮಾರ್ಗದಲ್ಲಿ ನಾವು ಇಡಬೇಕಾದ ಮೊದಲನೆಯ ಹೆಜ್ಜೆ.

ಪರಮಾತ್ಮ ಸತ್ಯ, ಜೀವಾತ್ಮ ಸತ್ಯ, ಇವೆರಡರ ಸೇರ್ಪಡೆಯೂ ಸತ್ಯ, ಈ ಸತ್ಯವನ್ನು ತಿಳಿಯುವ ದಾರಿಯೇ ಧರ್ಮ, ವೇದ, ಉಪನಿಷತ್ತು. ರಾಮಾಯಣ, ಭಾರತ, ಗೀತಾ, ಭಾಗವತ ಮೊದಲಾದವು ಈ ದಾರಿಯಲ್ಲಿ ಇರುವ ಕೈಕಂಬಗಳು. ಈ ದಾರಿಯಲ್ಲಿ ನಡೆದರೆ ನಾವು ಮುಟ್ಟುವ ಗುರಿಯೇ ಶಾಂತಿ. ಶಾಂತಿಯಿಂದ ದೊರಕುವ ಫಲವೇ ಪ್ರೇಮ. ಇದು ಸಾಯಿ ಬೋಧೆಯ ಸಾರ.

ಪರಂಪರೆಯಾಗಿ ಈ ದೇಶದಲ್ಲಿ ಮಹಾಮಹಿಮರುಗಳೆಲ್ಲರೂ ತಾವು ತಮ್ಮವರಿಗೆ ತಿಳಿಸಿಕೊಂಡುಬಂದಿರುವ ಬೋಧನೆಯ ಸಾರವೂ ಇದೇ. ಗೀತೆಯಲ್ಲಿ "ಏವಂ ಪರಂಪರಾ ಪ್ರಾಪ್ತಂ" ಎಂದು ಹೇಳಿರುವುದು ಇದನ್ನೇ.

ಕಾಲವಶದಿಂದ ಕ್ಷೀಣವಾಗಿದ್ದ ಈ ಪ್ರೇಮಯೋಗವನ್ನು ಭಗವಾನರು ಈಗ ನಮಗೆ ಪುನಃ ತಿಳಿಸಿಕೊಡುತ್ತಿದ್ದಾರೆ. ಅದನ್ನು ಕೇಳಿ, ತಿಳಿದು, ಅದರಂತೆ ನಡೆದು, ನಾವು ಊರ್ಧ್ವಮುಖರಾಗೋಣ.

ಬಾಬಾ ವಿಭೂತಿ

ಪರಮಂ ಪವಿತ್ರಂ ಬಾಬಾವಿಭೂತಿಂ
ಪರಮಂ ವಿಚಿತ್ರಂ ಲೀಲಾವಿಭೂತಿಂ |
ಪರಮಾರ್ಥ ಇಷ್ಟಾರ್ಥ ಮೋಕ್ಷಪ್ರದಾತಂ
ಬಾಬಾವಿಭೂತಿಂ ಇದ ಮಾಶ್ರಯಾಮಿ ||

೧೯೧೮ರಲ್ಲಿ ಮಹಾಸಮಾಧಿಗೆ ಸಂದ ಶಿರ್ಡಿಯ ಶ್ರೀ ಸಾಯಿಬಾಬಾ ಅವರು ನಿರಂತರವಾಗಿ ಉರಿಸುತ್ತಿದ್ದ 'ಧುನಿ'ಯಿಂದ ಉತ್ಪನ್ನವಾದ 'ಉಧಿ'ಯೂ—

ಅವರು ಮಹಾಸಮಾಧಿಯಾದ ಎಂಟು ವರ್ಷಗಳ ಬಳಿಕ ೧೯೨೬ರಲ್ಲಿ ಪುಟ್ಟಪುರ್ತಿಯಲ್ಲಿ ಜನ್ಮತಾಳಿದ ಶ್ರೀ ಸತ್ಯ ಸಾಯಿ ಬಾಬಾ ಅವರು ತಮ್ಮ ಸಂಕಲ್ಪ ಮಾತ್ರದಿಂದ ಸೃಷ್ಟಿಸಿ ಕೊಡುತ್ತಿರುವ ''ವಿಭೂತಿ''ಯೂ—

ಅವರಲ್ಲಿ ಶ್ರದ್ಧಾ ಭಕ್ತಿಗಳನ್ನು ಉಳ್ಳವರಿಗೆಲ್ಲಾ ಪರಿಚಿತವಾದದ್ದೇ. ಈ ಪ್ರಸಾದದ ಮಹಿಮೆಯನ್ನು ಅನೇಕರು ಕಂಡು ಉಂಡು ಅನುಭವಿಸಿದ್ದಾರೆ.

ಅಂಥವರಲ್ಲಿ ನಾನೂ ಒಬ್ಬ. ನನ್ನ ಒಂದು ಅನುಭವವನ್ನು ಇಲ್ಲಿ ನಿವೇದಿಸುತ್ತಿದ್ದೇನೆ.

ಸುಮಾರು ಎಂಟು ವರ್ಷಗಳ ಹಿಂದೆ: ೧೯೬೮ರ ಡಿಸೆಂಬರ್ ನನಗೆ ಅರವತ್ತು ವರ್ಷ ತುಂಬಿತ್ತು. ಆದಾದ ಒಂದು ತಿಂಗಳ

ದಿನದಲ್ಲಿ ನನ್ನ ಎಡ ಹೆಜ್ಜೆಗೆ ಮುಳ್ಳೋ ಗಾಜಿನ ಚೂರೋ ಹೊಕ್ಕು ಬಾಧೆಯುಂಟಾಯಿತು. ಸೂಜಿಯಿಂದ ಮುಳ್ಳನ್ನು ತೆಗೆಯಲು ಪ್ರಯತ್ನಮಾಡಿ ಕಾಲು ವ್ರಣವಾಯಿತು. ಒಂದೆರಡು ದಿನಗಳಲ್ಲಿ ಕೀವು ತುಂಬಿಕೊಂಡು ಪಾದ ಊದಿಕೊಂಡಿತು.

ನೋವನ್ನು ಸಹಿಸಲಾರದೆ ವೈದ್ಯರ ಹತ್ತಿರ ಹೋಗುವ ವೇಳೆಗೆ ಪರಿಸ್ಥಿತಿ ತುಂಬ ವಿಪರೀತಕ್ಕೆ ಬಂದಿತ್ತು. ವೈದ್ಯರು ಮಾಡ ಬೇಕಾದ ಪರೀಕ್ಷೆಗಳನ್ನು ಮಾಡಿಯಾದ ಮೇಲೆ, ಮೂತ್ರದಲ್ಲಿದ್ದ ಸಕ್ಕರೆಯ ದೋಷವನ್ನು ಇಳಿಸುವುದಕ್ಕಾಗಿ ತಮಗೆ ತಿಳಿದ ಔಷಧ ಗಳನ್ನೆಲ್ಲಾ ಉಪಯೋಗಿಸಿದರೂ, ಹೆಜ್ಜೆಯ ಊತ ಹೆಚ್ಚಾಗುತ್ತ ಹೋಯಿತೇ ಹೊರತು ಗುಣವೇನೂ ಕಂಡು ಬರಲಿಲ್ಲ.

ಕಾಲಿನ ಆರೋಗ್ಯ ಹೀಗೆ ದಿನೇ ದಿನೇ ಕೆಡುತ್ತಿರುವುದನ್ನು ನೋಡಿದ ನನ್ನ ವೈದ್ಯಮಿತ್ರರು—"ನೀವು ದಿನವೂ ಮನೆಯಿಂದ ಇಲ್ಲಿಗೆ ಬಂದು ವೈದ್ಯೋಪಚಾರಗಳನ್ನು ಪಡೆಯುವುದು ಆಗದ ಮಾತು. ಆದ್ದರಿಂದ ಯಾವುದಾದರೂ ನರ್ಸಿಂಗ್ ಹೋಮಿಗೆ ಸೇರಿಕೊಳ್ಳುವುದು ವಾಸಿ. ಅಲ್ಲಿಯಾದರೆ ಕಾಲಕಾಲಕ್ಕೆ ತಕ್ಕ ಚಿಕಿತ್ಸೆ ಮಾಡುವುದು ಸಾಧ್ಯವಾಗುತ್ತದೆ" ಎಂದು ಸಲಹೆ ಮಾಡಿದರು.

ಅವರ ಸಲಹೆಯಂತೆ ಮಾರನೇ ದಿವಸ ಒಂದು ನರ್ಸಿಂಗ್ ಹೋಮಿಗೆ ಸೇರಲು ಸಿದ್ಧನಾದೆ. ಹೇಗೋ ಕಷ್ಟಪಟ್ಟು ಸ್ನಾನ ಮಾಡಿ, ಬಟ್ಟೆ ಬದಲಾಯಿಸಿ, ಮನೆಯ ಮುಂದಿನ ಅಂಗಳದಲ್ಲಿ ಕುರ್ಚಿಯ ಮೇಲೆ ಸುಧಾರಿಸಿ ಕೊಳ್ಳುತ್ತಿದ್ದೆ.

ಆಗ ಅದು ಯಾವ ಗಳಿಗೆಯಲ್ಲೋ ನನಗೆ ಪ್ರಜ್ಞೆ ತಪ್ಪಿತು.

ಮುಂದೆ ಏನಾಯಿತು ಎಂಬುದು ಅನಂತರ ನನ್ನನ್ನು ನೋಡಿಕೊಂಡವರಿಂದ ತಿಳಿದುಬಂತು.

* * *

ಹೀಗೆ ನಾನು ಪ್ರಜ್ಞೆಯಿಲ್ಲದೆ ಒರಗಿದ್ದ ಹೊತ್ತಿನಲ್ಲಿ ನಾಲ್ಕು ಜನಮಿತ್ರರು ನನ್ನನ್ನು ಕಾಣಲು ಬಂದರಂತೆ. ನೋಡಿದರೆ, ನಾನು ಹೀಗೆ ಮೈಯ ಮೇಲೆ ಎಚ್ಚರವಿಲ್ಲದೆ ಬಿದ್ದಿದ್ದೇನೆ. ಕೂಡಲೇ ಅವರು, ಅವರಿಗೆ ದೇವರು ಅದೇನು ಪ್ರೇರಣೆ ಕೊಟ್ಟನೋ, ತಾವು ಬಂದಿದ್ದ ಕಾರಿನಲ್ಲಿ ಎತ್ತಿಕೊಂಡು ಹೋಗಿ, ನಮ್ಮ ಮನೆಗೆ ಸಮೀಪವಾಗಿದ್ದ ಒಂದು ಸರಕಾರಿ ಆಸ್ಪತ್ರೆಯಲ್ಲಿ ನನ್ನನ್ನು ಸೇರಿಸಲು ಪ್ರಯತ್ನಿಸಿದರಂತೆ.

ಆದರೆ ಅಲ್ಲಿನ ವೈದ್ಯರು ನನ್ನ ಆಗಿನ ಸ್ಥಿತಿಯನ್ನು ನೋಡಿ—"ಇದು ಡಯಾಬೆಟಿಕ್ ಕೋಮಾ. ಎಡಕಾಲಿನ ಬೆರಳುಗಳಿಗೆ ಗ್ಯಾಂಗ್ರೀನ್ ಬಡಿದಿದೆ. ಏನಾದರೂ ಹೆಚ್ಚು ಕಡಮೆ ಆದರೆ, 'ರಾಜರತ್ನಂ ಅನ್ನ ಇಂಥ ಆಸ್ಪತ್ರೆಯವರು ಕೊಂದುಹಾಕಿಬಿಟ್ಟರು' ಅಂತ ನಮಗೆ ವೃಥಾ ಕೆಟ್ಟ ಹೆಸರು. ಇದಕ್ಕಿಂತ ಇನ್ನೂ ಹೆಚ್ಚು ಅನುಕೂಲಗಳಿರುವ ಯಾವುದಾದರೂ ದೊಡ್ಡ ಆಸ್ಪತ್ರೆಗೆ ಕರೆದುಕೊಂಡು ಹೋಗಿ" ಎಂದು ಜವಾಬ್ದಾರಿಯನ್ನು ತಪ್ಪಿಸಿಕೊಳ್ಳಲು ನೋಡಿದರಂತೆ.

ಸರಿಯೆ, ಮನೆಯಿಂದ ದೂರದ ಆಸ್ಪತ್ರೆಯಾದರೆ, ನನ್ನನ್ನು ನೋಡಿಕೊಳ್ಳುವುದಕ್ಕೋಸ್ಕರ ದಿನವೂ ಬಂದು ಹೋಗುವವರಾರು? ಹೇಗೆ? ಆದ್ದರಿಂದ ಈ ಹತ್ತಿರದ ಆಸ್ಪತ್ರೆಯಲ್ಲೆ ಆದರೆ ಅನುಕೂಲ. ನನ್ನನ್ನು ಕರೆದುತಂದ ಮಿತ್ರರಿಗೂ ಆಸ್ಪತ್ರೆಯವರಿಗೂ

ಕೊಂಚ ಮಾತು ಬೆಳೆಯಿತಂತೆ, ಕೊನೆಗೆ ದೇವರು ಏನು ಮನಸ್ಸು ಕೊಟ್ಟನೋ, ನನ್ನನ್ನು ಆ ಸ್ಥಿತಿಯಲ್ಲೆ ಆಸ್ಪತ್ರೆಗೆ ಸೇರಿಸಿಕೊಂಡ ರಂತೆ.

ಅವರ ವೈದ್ಯನೈಪುಣ್ಯವನ್ನೆಲ್ಲ ಅವರು ನಿರ್ವಂಚನೆಯಾಗಿ ಪ್ರಯೋಗ ಮಾಡಿದರೂ, ನನಗೆ ಮೈಮೇಲೆ ಪ್ರಜ್ಞೆ ಬರಲಿಲ್ಲವಂತೆ. ಸಕ್ಕರೆ ಕಡಮೆಯಾಗಲಿಲ್ಲವಂತೆ, ಗ್ಯಾಂಗ್ರಿನ್ ಇಳಿಮುಖವಾಗಲಿಲ್ಲ ವಂತೆ. ಕೊನೆಗೆ ಬೇರೆ ಏನೂ ಉಪಾಯಕಾಣದೆ ಜೀವವನ್ನಾದರೂ ಉಳಿಸಿಕೊಳ್ಳುವುದಕ್ಕೋಸ್ಕರ ಕಾಲನ್ನು ಕತ್ತರಿಸಬೇಕೆಂದು ನಿಶ್ಚಯ ವಾಯಿತಂತೆ. ಮಂಡಿಯಿಂದ ಮೇಲೆ ಕತ್ತರಿಸಬೇಕೋ, ಮಂಡಿ ಯಿಂದ ಕೆಳಗೆ ಕತ್ತರಿಸಿದರೆ ಸಾಕೋ ಎಂಬ ಬಗ್ಗೆ ಚರ್ಚೆಯಾಗು ತ್ತಿತ್ತಂತೆ.

ನನಗಾದರೋ ಇದಾವುದರ ಪರಿವೆಯೇ ಇಲ್ಲ. ನನ್ನ ಯೋಗಕ್ಷೇಮಕ್ಕೋಸ್ಕರ ಹಿತಚಿಂತಕರಾದ ವೈದ್ಯರು ಏನೂ ಮಾಡಿದ್ದರೂ ಮಾಡಿಬಿಡಬಹುದಾಗಿತ್ತು.

ಆಸ್ಪತ್ರೆಯಲ್ಲಿ ಹೀಗೆ ನನ್ನ ಸ್ಥಿತಿ ಬದುಕು ಸಾವುಗಳ ಉಯ್ಯಾಲೆಯಲ್ಲಿ ತೂಗುತ್ತಿರುವಾಗ ನನ್ನ ಮಕ್ಕಳು ಅನನ್ಯಗತಿಕ ರಾಗಿ ಪುಟ್ಟಪರ್ತಿಯ ಶ್ರೀ ಸತ್ಯಸಾಯಿ ಬಾಬಾ ಅವರಿಗೆ ಕಾಗದ ಬರೆದು ಮೊರೆಯಿಟ್ಟರಂತೆ. "ಸ್ವಾಮೀ ನಮ್ಮ ತಂದೆಗೆ ಹೀಗಾಗಿದೆ. ನಮಗೆ ಯಾರೂ ಬೇರೆ ದಿಕ್ಕಿಲ್ಲ. ನಮ್ಮನ್ನೆಲ್ಲ ಸ್ವಾಮಿಯೇ ಕಾಪಾಡಬೇಕು" ಎಂದು ದಿನಕ್ಕೊಂದು ಕಾಗದ ಬರೆದರಂತೆ.

ಇವರ ಮೊರೆಗೆ ಅಭಯಪ್ರದಾನ ಮಾಡಿದ ಹಾಗೆ ಒಂದು

ದಿನ ರಿಜಿಸ್ಟರ್ಡ್ ಪೋಸ್ಟ್ ಮೂಲಕ "ಬಾಬಾ ವಿಭೂತಿ"ಯ ಪ್ರಸಾದ ಬಂತಂತೆ. ಮಕ್ಕಳು ಅದರಲ್ಲಿ ಒಂದು ಚಿಟಿಕೆಯನ್ನು ನನ್ನ ಬಾಯಿಗೆ ಹಾಕಿ ನೀರು ಕುಡಿಸಿ, ಹಣೆಗೂ ಅದೇ ವಿಭೂತಿಯ ರಕ್ಷೆಯನ್ನು ಇಟ್ಟರಂತೆ.

ಇದಾದ ಸ್ವಲ್ಪ ಸಮಯದಲ್ಲೇ- ನೀವು ನಂಬಿದರೆ ನಂಬಿ, ಬಿಟ್ಟರೆ ಬಿಡಿ- ನನ್ನ ಡಯಾಬೆಟಿಕ್ ಕೋಮ ಕರಗಿ, ನನಗೆ ಪ್ರಜ್ಞೆ ಮರಳಿತಂತೆ! ಗ್ಯಾಂಗ್ರೀನ್ ಎಂದು ವೈದ್ಯರು ತೀರ್ಮಾನಿಸಿದ್ದ ಬೆರಳುಗಳಲ್ಲಿ ರಕ್ತಪರಿಚಲನೆ ಕಂಡುಬಂದಿತಂತೆ! ಅದನ್ನು ಕಂಡು, ವೈದ್ಯರು "ಇದೇನೋ ಶುಭಸೂಚನೆ, ಸದ್ಯಕ್ಕೆ ಕಾಲು ಕತ್ತರಿಸುವ ಯೋಚನೆ ಬೇಡ. ಒಂದು ಮೈನರ್ ಆಪರೇಷನ್ ಮಾಡಿ ನೋಡೋಣ" ಎಂದು ಕೊಂಡರಂತೆ.

ಹೀಗೆಂದು ಅವರು ಪಾದವನ್ನು ಆಪರೇಟ್ ಮಾಡಿದಾಗ ನಾನು ಪೂರ್ತಿ ಎಚ್ಚರವಾಗಿದ್ದೆ. ಬಾಬಾ ವಿಭೂತಿಯು ನನ್ನ ಕಾಲು ಕತ್ತರಿಸಿ ಹೋಗದ ಹಾಗೆ ಅದನ್ನು ಕಾಪಾಡಿಕೊಟ್ಟಿತ್ತು.

* * *

ಆಪರೇಷನ್ ಏನೋ ಆಯಿತು. ಹೆಜ್ಜೆಯೊಳಗೆ ತುಂಬಿ ಕೊಂಡಿದ್ದ ಕಶ್ಮಲಗಳನ್ನು ತೆಗೆದದ್ದೂ ಆಯಿತು. ಶಸ್ತ್ರವೈದ್ಯರು ತಾವೇ ಪ್ರತಿದಿನವೂ ಖುದ್ದಾಗಿ ಬಂದು, ಬ್ಯಾಂಡೇಜುಗಳನ್ನು ಬಿಚ್ಚಿಸಿ, ಮಾಡಬೇಕಾದ ಇಲಾಜುಗಳನ್ನು ತಾವೇ ಮಾಡುತ್ತಿದ್ದರು. ಇತರ ವೈದ್ಯರು ಬಂದು ಕಾಲಕಾಲಕ್ಕೆ ತಪ್ಪದೇ ಮೂತ್ರ ಪರೀಕ್ಷೆ ಮಾಡಿಸಿ ಅದೆಷ್ಟು ಇನ್‌ಸುಲಿನ್ ಉಪಚಾರಗಳನ್ನು ಮಾಡಿದರೋ ಲೆಕ್ಕವಿಲ್ಲ. ಇಷ್ಟಾದರೂ ನೂರಕ್ಕಿಂತ ಕಡಮೆ ಜ್ವರ ಇಳಿಯು

ಲೊಲ್ಲದು. ಸಕ್ಕರೆಯಂತೂ ಮೂರು ನಾಲ್ಕರ ಮಧ್ಯೆ ತೂಗಾಡುತ್ತಿತ್ತು. "ಹೀಗಾದರೆ, ಗಾಯ ಮಾಯುವುದು ಯಾವಾಗ? ಆಸ್ಪತ್ರೆಯಿಂದ ಬಿಡುಗಡೆಯಾಗುವುದು ಎಂದು?" ಎಂದು ನನ್ನನ್ನು ನಾನೇ ಕೇಳಿಕೊಳ್ಳುತ್ತಿದ್ದೆ.

ಹೀಗೆ ಒಂದೆರಡು ವಾರ, ಆಡುವುದಕ್ಕಿಲ್ಲ ಅನುಭವಿಸು ವುದಕ್ಕಿಲ್ಲ ಎನ್ನುವ ಸ್ಥಿತಿಯಲ್ಲಿರುವಾಗ, ಒಂದು ದಿವಸ—

ನಮ್ಮ ಬೆಂಗಳೂರಿನ ಸಾಯಿಸಮಿತಿಗಳ ಅಧ್ಯಕ್ಷರಾಗಿದ್ದ ನನ್ನ ಮಿತ್ರರೊಬ್ಬರು ವೈಟ್‌ಫೀಲ್ಡಿಗೆ ಹೋಗಿ ಅಲ್ಲಿ ಸ್ವಾಮಿಯವರ ದರ್ಶನ ಮಾಡಿಕೊಂಡು ಬರುವಾಗ, ದೇವರು ಅವರಿಗೆ ಏನು ಪ್ರೇರಣೆ ಕೊಟ್ಟನೋ, ನನ್ನ ದುಃಸ್ಥಿತಿಯನ್ನು ಕುರಿತು ಸ್ವಾಮಿ ಯವರಲ್ಲಿ ವಿಜ್ಞಾಪಿಸಿಕೊಂಡರಂತೆ. ಆಗ ಸ್ವಾಮಿ "ನನಗೆ ಗೊತ್ತು" ಎಂದು ಹೇಳಿ, ಆಗಲೇ ಅಲ್ಲಿಯೇ ತಮ್ಮ ಸಂಕಲ್ಪದಿಂದ ವಿಭೂತಿ ಯನ್ನು ಸೃಷ್ಟಿಮಾಡಿ ಕಳಿಸಿಕೊಟ್ಟರಂತೆ. ಅದನ್ನು ನನ್ನ ಸ್ನೇಹಿತರು ಅದೇ ರಾತ್ರಿ ಒಂಬತ್ತೂವರೆ ಗಂಟೆಗೆ ತಂದು ಬಾಯಿಗೆ ಹಾಕಿ, ಇಷ್ಟು ನೀರು ಕುಡಿಸಿ, "ಸ್ವಾಮಿ ಹೇಳಿದ್ದಾರೆ. ಎಲ್ಲಾ ಒಳ್ಳೆಯದಾಗು ತ್ತದೆ. ಏನೂ ಹೆದರುವುದು ಬೇಡ" ಎಂದು ಧೈರ್ಯ ಹೇಳಿ ಹೋದರು.

ಮಾರನೆಯ ಬೆಳಗ್ಗೆ ಮಾಮೂಲಿನಂತೆ ಜ್ವರ ಎಷ್ಟಿದೆ ಎಂದು ನೋಡಿದರೆ ಜ್ವರ ಇಲ್ಲ! ಮೂತ್ರವನ್ನು ಪರೀಕ್ಷೆಮಾಡಿದರೆ ಸಕ್ಕರೆ 'ನಿಲ್'! ಇದು ಹೇಗಾಯಿತು ಎಂದು ವೈದ್ಯರುಗಳಿಗೆ ವಿಸ್ಮಯ! ಬಾಬಾ ವಿಭೂತಿಯೇ ಇದಕ್ಕೆ ಕಾರಣ ಎಂದು ನನ್ನ ಹೃದಯ ಹೇಳುತ್ತಿತ್ತು. ಆದರೆ ಅದನ್ನು ಹೀಗೆಂದು ಬಹಿರಂಗವಾಗಿ

ಹೇಳಬೇಕಾದ ಅಗತ್ಯವೇನೂ ನನಗೆ ಕಂಡುಬರಲಿಲ್ಲ. ಸುಮ್ಮ ನಿದ್ದುಬಿಟ್ಟೆ.

ಅಂದಿನಿಂದ ಕಾಲಿನ ಗಾಯ ಮಾಯವಾಗತೊಡಗಿತು. ಆಗಾಗ್ಗೆ ಆಹಾರದಲ್ಲಿ ಆದ ಬದಲಾವಣೆಗಳಿಂದ ಕೊಂಚ ಕೊಂಚ ಸಕ್ಕರೆ ಕಂಡುಬರುತ್ತಿತ್ತು. ಆದರೂ ವೈದ್ಯರುಗಳ ಪ್ರೀತಿಪೂರ್ವಕ ವಾದ ಔಷಧೋಪಚಾರಗಳಿಂದ ಅದು ತಹಬಂದಿಗೆ ಬಂದು, ಮೂರು ತಿಂಗಳು ಆಸ್ಪತ್ರೆಯ ವಾಸ ಮುಗಿದ ಮೇಲೆ ಮನೆಗೆ ಹೋಗುವಂತಾದೆ. ಮನೆಗೆ ಹೋದ ಮೇಲೂ, ನಾನು ನನ್ನ ಕಾಲೂರಿ ನಡೆಯಬೇಕಾದರೆ, ಮೂರು ತಿಂಗಳು "ಬೆಡ್ ರೆಸ್ಟ್" ಬೇಕಾಯಿತು!

ಹೀಗೆ ಬಾಬಾ ವಿಭೂತಿಯು ಎರಡು ಬಾರಿ ನನ್ನ ಪಾಲಿಗೆ "ಪವಿತ್ರ"ವಾಗಿ ಬಂದು ನನ್ನ ಕಾಲನ್ನು ಕಾಪಾಡಿಕೊಟ್ಟಿತು.

"ಪವಿತ್ರ" ಎನ್ನುವ ಪದವು ತನುತ್ರ, ಆತಪತ್ರ ಮುಂತಾದವು ಇದ್ದ ಹಾಗೆ. ತನು(ದೇಹವನ್ನು)ತ್ರ (ಕಾಪಾಡುವುದು) ತನುತ್ರ (ಕವಚ); ಆತಪ(ಬಿಸಿಲಿನಿಂದ ನಮ್ಮನ್ನು)ತ್ರ (ಕಾಪಾಡುವುದು) ಆತಪತ್ರ (ಕೊಡೆ), ಅದರ ಹಾಗೆಯೇ ಪವಿ (ಎಂದರೆ ಇಂದ್ರನ ವಜ್ರದಿಂದ, ಸಿಡಿಲಿನ ಹೊಡೆತದಿಂದ ನಮ್ಮನ್ನು) ತ್ರ(ಕಾಪಾಡು ವಂಥದು) "ಪವಿ-ತ್ರ".

ಬಾಬಾ ವಿಭೂತಿಯು ಇಂತಹ ಪವಿತ್ರವಾದ ಗುಣ ವನ್ನುಳ್ಳದ್ದು.

* * *

ಈ ವಿಭೂತಿಯ ಮಹತ್ವವನ್ನು ಕುರಿತು ಇನ್ನೂ ಒಂದೇ ಮಾತು.

ನಾನು ಡಯಾಬೆಟಿಕ್ ಕೋಮಾದಲ್ಲಿರುವಾಗ ಪುಟ್ಟಪರ್ತಿಯಿಂದ ಟಪಾಲು ಮೂಲಕ ಬಂದ ಬಾಬಾ ವಿಭೂತಿಯು ನನಗೆ ಹೇಗೆ ಪ್ರಜ್ಞೆಯನ್ನು ತಂದುಕೊಟ್ಟಿತು ಎಂಬುದನ್ನು ಹೇಳಿದೆನಷ್ಟೆ. ಹಾಗೆ ಬಂದ ಆ ವಿಭೂತಿಯ ಒಂದು ಸಣ್ಣ ಪೊಟ್ಟಣ ನಾನು ಮೂರು ತಿಂಗಳು ಆಸ್ಪತ್ರೆಯಲ್ಲಿರುವಾಗಲೂ ಅನಂತರ ಮನೆಗೆ ಬಂದಮೇಲೆ ಮೂರು ತಿಂಗಳೂ ನನ್ನ ಬನಿಯನ್ನಿನ ಜೇಬಿನಲ್ಲಿರುತ್ತಿತ್ತು.

ಆಸ್ಪತ್ರೆಯಲ್ಲಿರುವಷ್ಟು ದಿವಸವೂ ನಾನು ಅದರಿಂದ ಒಂದು ಚಿಟಿಕೆಯಷ್ಟನ್ನು ಪ್ರತಿದಿನ ಸೇವಿಸುತ್ತಿದ್ದೆ. ಸ್ವಾಮಿಯಲ್ಲಿ ಭಕ್ತಿಯಿದ್ದವರು ಯಾರಾದರೂ ನನ್ನನ್ನು ನೋಡಲು ಬಂದರೆ, ಅವರಿಗೆ ಆ ವಿಭೂತಿಯನ್ನು ನೀಡುತ್ತಿದ್ದೆ. ಪ್ರತಿದಿನವೂ ನನ್ನನ್ನು ಕಾಣಲು ಬರುತ್ತಿದ ನನ್ನ ಮೊಮ್ಮಗ ಬರುವಾಗಲೇ "ವಿಭೂತಿ" ಎಂದು ಕೂಗುತ್ತಾ ಬಂದು ಕೈ ಚಾಚುತ್ತಿದ್ದ; ನಾನು ಹೊರತೆಗೆದ ಪೊಟ್ಟಣದಿಂದ ಒಂದು ಚಿಟಿಕೆ ತೆಗೆದು ಬಾಯಿಗೆ ಹಾಕಿಕೊಳ್ಳುತ್ತಿದ್ದ ಇಷ್ಟೆಲ್ಲ ರೀತಿಯಲ್ಲಿ ದಿನವೂ ವಿನಿಯೋಗವಾಗುತ್ತಿದ್ದರೂ ವಾಸ್ತವವಾಗಿ ಒಂದು ವಾರದಲ್ಲಿ ಮುಗಿದುಹೋಗಬೇಕಾಗಿದ್ದ ಆ ವಿಭೂತಿಯ ಪೊಟ್ಟಣ ಆರು ತಿಂಗಳುಗಳ ಕಾಲ ಅಕ್ಷಯವಾಗಿ ಇದ್ದದ್ದು— ಅದೇ ಒಂದು ಮರೆಯಲಾರದ ಮಹಾನುಭವ.

ಇಂತಹ ಮಹಿಮೆಯನ್ನುಳ್ಳ "ಬಾಬಾವಿಭೂತಿ"ಯನ್ನು "ಲೀಲಾ ವಿಭೂತಿ" ಎಂದು ಕರೆಯುವುದರ ಔಚಿತ್ಯದ ಬಗ್ಗೆ ನನಗೆ

ಏನೂ ಸಂಶಯವಿಲ್ಲ. ಬಾಬಾ ವಿಭೂತಿಯ ಮಹಿಮೆಯನ್ನು ಅರಿಯದವರು ಏನೇ ಅಪಹಾಸ್ಯ ಮಾಡಬಹುದಾದರೂ "ಮೃತ್ಯೋರ್ಮಾ ಅಮೃತಂ ಗಮಯ" ಎಂಬ ಪ್ರಾರ್ಥನೆಗೆ ಈ ವಿಭೂತಿಯು ಪುಷ್ಟಿಕೊಡುತ್ತದೆ ಎಂಬ ಬಗ್ಗೆ ನನಗೆ ಏನೂ ಸಂಶಯವಿಲ್ಲ.

—ಜಿ. ಪಿ. ರಾಜರತ್ನಂ

◆ ಚಮ್ಮಾರನ ಭಾಗ್ಯ ◆

["ಸತ್ಯಂ ಶಿವಂ ಸುಂದರಂ" ಎಂಬುದು ಭಗವಾನ್ ಶ್ರೀ ಸತ್ಯಸಾಯಿ ಬಾಬಾ ಅವರ 'ಬಯಾಗ್ರಫಿ', ಜೀವನಚರಿತ್ರೆ. ಇದನ್ನು ಸಿದ್ದಪಡಿಸಿದವರು ಶ್ರೀ ನಾ. ಕಸ್ತೂರಿ ಅವರು, ಇದುವರೆಗೆ ಈ ಗ್ರಂಥದ ಮೂರು ಭಾಗಗಳು ಪ್ರಕಟವಾಗಿವೆ.

"ಯಸ್ಮಾನ್ನೋದ್ವಿಜತೇ ಲೋಕೋ, ಲೋಕಾನ್ನೋದ್ವಿಜತೇ ಚ ಯಃ" ಎಂಬ ಗೀತಾವಾಕ್ಯಕ್ಕೆ ಈ ಗ್ರಂಥದ ಪುಟಗಳು ನಿದರ್ಶನ ವಾಗಿವೆ. ಸ್ವಾಮಿ ಯಾರಿಗೂ ಉದ್ವೇಗವನ್ನು ಉಂಟುಮಾಡು ವುದಿಲ್ಲ. ಹಾಗೆಯೇ ಯಾರು ಏನು ಮಾಡಿದರೂ ಸ್ವಾಮಿ ಉದ್ವಿಗ್ನರಾಗುವುದಿಲ್ಲ ಎಂಬುದನ್ನು ಇಲ್ಲಿ ಕಾಣಬಹುದು.

ಸ್ವಾಮಿಯವರ ಜೀವನಚರಿತ್ರೆಯ ಮೊದಲನೆಯ ಸಂಪುಟ ದಿಂದ (ಪುಟ94-97) ಆಯ್ದ ಒಂದು ಮಹತ್ವದ ಘಟನೆಯನ್ನು ಇಲ್ಲಿ ಕೊಟ್ಟಿದೆ. ಇದನ್ನು ಓದಿದರೆ, ಬುದ್ಧನ ಜೀವನದಲ್ಲಿ ನಡೆದ ಒಂದು ಸಂಗತಿ ನೆನಪಾಗುತ್ತದೆ. ವಾಚಕರು ಇದನ್ನೂ ಅದನ್ನೂ ಹೋಲಿಸಿ ನೋಡಲೆಂದು ಅದನ್ನೂ ಮುಂದೆ ಕೊಟ್ಟಿದೆ.]

ಅವರ ಕರುಣೆಯ ವಿಷಯ ಬಂದಾಗ, ಬೆಂಗಳೂರಿನಲ್ಲಿ ಆಗ ನಡೆದ ಒಂದು ಸಣ್ಣ ಘಟನೆಯ ನೆನಪಾಗುತ್ತದೆ. ಕಂಟೋನ್ ಮೆಂಟ್ ಇನ್‌ಫೆಂಟ್ರಿ ರಸ್ತೆಯ ಒಂದು ಬಂಗಲೆಗೆ ಆ ದಿನ

ಚಿತ್ತೈಸಿದ್ದರು. ಆ ಬಂಗಲೆಯ ಗೇಟು ಮುಂದಿನ ರಸ್ತೆ ಪಕ್ಕದಲ್ಲಿ ಕುಳಿತಿದ್ದ ಒಬ್ಬ ಬಡ ಚಮ್ಮಾರ, ದಾರಿಹೋಕರ ಚಪ್ಪಲಿಗಳನ್ನು ರಿಪೇರಿ ಮಾಡುವವ, ಕಾಂಪೌಂಡಿನೊಳಗೆ ಹೋಗುತ್ತಿದ್ದ ಭಕ್ತರ ತಂಡವನ್ನೇ ಪರೀಕ್ಷಿಸುತ್ತಿದ್ದ. ಹೂವು ಹಣ್ಣು ಇತ್ಯಾದಿಗಳನ್ನು ಹೊತ್ತು, ವಸ್ತ್ರಗಳನ್ನು ಧರಿಸಿ ಭಯ ಭಕ್ತಿಯಿಂದ ಹೋದವರು "ನಾನು ಬಾಬನಿಗೆ ನಮಸ್ಕಾರ ಮಾಡಿದೆ", "ಬಾಬಾ ನನಗೆ ವಿಭೂತಿ ಕೊಟ್ಟರು", ಬಾಬಾ ನನ್ನ ಕಡೆ ನೋಡಿದರು", "ನನ್ನನ್ನು ಕರೆದು ಮಾತಾಡಿದರು" ಎಂದೆಲ್ಲ ಹೇಳುತ್ತ ಹೊರಬಂದರು.

ಇದ್ದಕ್ಕಿದ್ದ ಹಾಗೆ, ಆತನಿಗೂ ಅಲ್ಲಿಗೆ ಹೋಗಿ ಆ ಬಾಬಾನನ್ನು ನೋಡಬೇಕೆನ್ನಿಸಿತು. ಎದ್ದು ಹೋಗಿ ಗೇಟು ದಾಟಿ ಬಂಗಲೆಯ ಹೊಸ್ತಿಲ ಹತ್ತಿರ ಬಾಗಿ ನಿಂತು, ಒಳಕ್ಕೆ ಬಗ್ಗಿ ನೋಡಿದ. ಎಂತಹ ಮನೋಹರ ದೃಶ್ಯ! ಪುಷ್ಪಮಾಲಾಲಂಕೃತನಾಗಿ ಬಾಲಕೃಷ್ಣನೇ ಅಲ್ಲಿ ಕುರ್ಚಿಯಮೇಲೆ ಕುಳಿತಿರುವನೆಂದು ತೋರಿತು, ಅವನಿಗೆ. ಆದರೆ ಏನಿದು! ಬಾಬಾ ಎದ್ದರು; ತನ್ನ ಕಡೆಗೇ ನಡೆದು ಬಂದರು; ತನ್ನನ್ನು ಮಾತಾಡಿಸಿದರು! ಬಂಗಲೆಯ ಮುಂದುಗಡೆ ಬೆಳೆದಿದ್ದ ಗುಲಾಬಿ ಗಿಡದಿಂದ ತಾನು ಕಿತ್ತು ತಂದಿದ್ದ ಒಂದು ಹಳದಿ ಹೂವು, ಅದನ್ನು ಅವರೇ ತೆಗೆದುಕೊಂಡರು. "ಏನಯ್ಯಾ? ಏನು ಬೇಕು?" ಎಂಬ ಪ್ರಶ್ನೆಯನ್ನೂ ಹಾಕಿದರು. ತಮಿಳು ನುಡಿಯಲ್ಲಿ.

ಚಮ್ಮಾರನಿಗೇನೂ ತೋಚಲಿಲ್ಲ! ಹಾಗೊಂದು ಪ್ರಶ್ನೆ ಏಳುತ್ತದೆ, ಅದಕ್ಕೆ ಉತ್ತರವನ್ನು ಸಿದ್ಧಪಡಿಸಿ ಇಟ್ಟುಕೊಂಡಿರಬೇಕು ಎಂಬ ಅರಿವೇ ಅವನಿಗಿರಲಿಲ್ಲ. ಆದರೂ, (ಅಂಥ ಉತ್ತರ

ಕೊಡಲು ಬೇಕಾದ ಧೈರ್ಯವನ್ನು ಬಾಬಾ ಅವರೇ ಅವನಿಗೆ ಕರುಣಿಸಿರಬೇಕು ಅನ್ನಿ!) ಅವನು "ನನ್ನ ಗುಡಿಸಿಲಿಗೆ ಬರಬೇಕು" ಎಂದ. ಅವನ ಭುಜದ ಮೇಲೆ ಕೈಯಿರಿಸಿ, ಒಂದೆರಡು ಬಾರಿ ಪ್ರೀತಿ ಯಿಂದ ಬೆನ್ನು ತಟ್ಟಿ, 'ಬರ್ತೇನೆ! ಖಂಡಿತ ಬರ್ತೇನೆ' ಎಂದು ಮಾತು ಕೊಟ್ಟು ಮೆಲ್ಲನೆ ಹಿಂತಿರುಗಿ, ಬಾಬಾ ಕುರ್ಚಿಯಲ್ಲಿ ಮತ್ತೆ ಕುಳಿತರು.

ಚಮ್ಮಾರನ ಕಣ್ಣುಗಳಲ್ಲಿ ನೀರು ತುಂಬಿತು; ತನ್ನ ಎದೆಗಾರಿಕೆಗೆ ಅವನು ಬೆರಗಾದ. ಆದರೆ, ಯಾವಾಗ ಚಿತ್ತೈಸುತ್ತಾರೆ, ಅವರಿಗೆ ತನ್ನ ಬಡಗುಡಿಸಿಲನ್ನು ತೋರಿಸಿಕೊಡುವವರು ಯಾರು, ಹೇಗೆ? ತಾನು ಅವರ ಆರಾಧನೆಗಾಗಿ ಎಂದು, ಯಾವಾಗ, ಎಲ್ಲಿ, ಹೇಗೆ ಕಾದು ನಿಂತಿರಬೇಕು ಎಂಬ ಗೊಂದಲದಲ್ಲಿ ಸಿಕ್ಕಿ, ಅವನು ಅಲ್ಲೇ ನಿಂತಿದ್ದ. ಇದ್ದಕ್ಕಿದ್ದಂತೆ ಅವನ ಮುಂದೆ ಯಾರೋ ಮಿಂಚಿದ ಹಾಗಾಯಿತು; ಬಾಬಾ ಈಚೆಗೆ ಬಂದು, ಕಾರು ಹತ್ತಿ, ಹೊರಟೇ ಬಿಟ್ಟರು! ಪಾಪ, ಮುದುಕ ಯಾರು ಯಾರನ್ನೋ ವಿಚಾರಿಸಿದ, ತನ್ನ ಮನೆಗೆ ಬಾಬಾ ಯಾವಾಗ ಬರಬಹುದು, ಎಂದು ಕೆಲವರು ನಕ್ಕರು! ಕೆಲವರು ಬೈದರು; ಕೆಲವರು ಹಿಡಿದು ನೂಕಿದರು. ಹುಚ್ಚ, ಕುಡುಕ, ಎಂದು ದೂರಿದರು. "ಈ ಶ್ರೀಮಂತರ ಗೊಡವೆಗೆ ನಾನೇಕಪ್ಪ ಸಿಕ್ಕಿದೆ?" ಎಂದು ನಿರಾಶೆಪಟ್ಟು, ತನ್ನ ತೊಗಲುತುಂಡುಗಳ ಚೀಲಕ್ಕೊರಗಿ ಕುಳಿತ.

ದಿನಗಳುರುಳಿದುವು. ಆ ಬಂಗಲೆಗೆ ಮತ್ತೆ ಬಾಬಾ ಬರಲೇ ಇಲ್ಲ. ಅವರ ದರ್ಶನಭಾಗ್ಯದ ರೇಖೆ ತನ್ನ ಹಸ್ತದಲ್ಲಿಲ್ಲ, ಎಂದು ನಿಶ್ಚಯಿಸಿ, ಚಮ್ಮಾರ ಸುಮ್ಮನಾದ ! ಅದೊಂದು ದಿನ, ಸುಮಾರು

ಎರಡು ಎರಡೂವರೆ ಗಂಟೆ ಮಧ್ಯಾಹ್ನದ ಬಿಸಿಲಲ್ಲಿ, ಭಾರಿ ಕಾರೊಂದು ಭೂಂ ಭೂಂಗೆಯುತ್ತ ಅವನ ಬಳಿ ಬ್ರೇಕ್ ಹಾಕಿತ್ತು. ಚಮ್ಮಾರ ಗಡಗಡ ನಡುಗಿದ: ಪೋಲೀಸ್ ಐ.ಜಿ. ಸಾಹೇಬರೇ ಖುದ್ದಾಗಿ ತನ್ನನ್ನು ಆರೆಸ್ಟ್ ಮಾಡಲು ಬಂದಿರಬೇಕು, ಅಥವಾ ಕಾರ್ಪೊರೇಷನ್ ಕಮೀಷನರ್ ಸಾಹೇಬರೇ ತನ್ನ ಮೇಲೆ ಕೇಸ್ ಜಾರಿ ಮಾಡಲು ಬಂದಿರಬೇಕು ಎಂದು ಹೆದರಿದ. ಆದರೆ ಕಾರಿನಲ್ಲಿದ್ದವರು.... ಬಾಬಾ ! ನಗುನಗುತ್ತಾ ಅವರು ಅವನ ಬೆನ್ನು ತಟ್ಟಿ "ಬಾ, ಹತ್ತು! ಮನೆಗೆ ಹೋಗೋಣ!" ಎಂದರು. ಚಮ್ಮಾರನನ್ನು ಎಳೆದು ಕಾರಿನಲ್ಲಿ ಕೂರಿಸಿಕೊಂಡರು ಮೂಟೆ ಸಹಿತ! ಬಾಯಿ ತೆರೆದರೆ ಶಬ್ದವೇ ಹೊರಡದು, ಮುದುಕನಿಗೆ! ಆದರೂ ಹೇಗೋ ಬಾಬಾ ಕಾರನ್ನು ಮೆಯಿನ್ ರೋಡಿನಿಂದ ಕ್ರಾಸ್ ರಸ್ತೆಗೆ ತಿರುಗಿಸಿ, ಸಂದಿಯೊಳಕ್ಕೆ ತೂರಿ ಕೆರೋಸಿನ್ ಟಿನ್ ತಗಡುಗಳಿಂದಲೇ ತಯಾರಾದ ಅವನ ಗುಡಿಸಿಲ ಹತ್ತಿರ ನಿಲ್ಲಿಸಿದರು! ಇಳಿದು ಕೊಚ್ಚೆ ತಗಲದೆ ನಡೆಯಲು ಹಾಕಿದ್ದ ಇಟ್ಟಿಗೆಗಳ ಸಾಲಮೇಲಿಂದ ದಡದಡನೆ ಪಾದ ಬೆಳೆಸಿದರು.

ಚಮ್ಮಾರ ಬೇಗ ಬೇಗ ಧಾವಿಸಿ, ಮನೆಯನ್ನು ಪ್ರವೇಶಿಸಿದ. 'ಬೇಡ ಬೇಡ, ನೀನೇನನ್ನೂ ತರಬೇಡ, ಪಾಪ' ಎನ್ನುತ್ತಾ ಬಾಬಾ ತಮ್ಮ ಹಸ್ತಚಲನೆಯಿಂದ ಹಣ್ಣುಗಳನ್ನು ತರಿಸಿ, ಅವನ ಕೈಯಲ್ಲಿಟ್ಟರು. ವಿಭೂತಿ ತರಿಸಿ, ಅವನ ಹಣೆಗೂ ಅವನ ಹೆಂಡತಿ ಮಕ್ಕಳ ನೊಸಲಿಗೂ ಹಚ್ಚಿ ಆಶೀರ್ವಾದ ಮಾಡಿದರು. "ಇದು ಕನಸೋ ನನಸೋ" ಎಂಬ ಪರಿಜ್ಞಾನ ಆ ಚಮ್ಮಾರನ ಮೆದುಳಿನಲ್ಲಿ ಅಂಕುರಿಸುವುದರೊಂದಿಗೆ, ಮತ್ತೆ ಕಾರನ್ನು ಸಮೀಪಿಸಿದರು.

ಹತ್ತಿರ ಓಡಿಬಂದ ಚಮ್ಮಾರನ ತಲೆಯ ಮೇಲೆ ಹಸ್ತವಿರಿಸಿ ಅಭಯವಿತ್ತು. ಹೊರಟೇಹೋದರು. ಅವನ ಆ ತಗಡಿನ ಹಟ್ಟಿ, ದೇಗುಲವಾಗಿ ಮಾರ್ಪಟ್ಟಿತು. ತಿಂಗಳುಗಳ ಅನಂತರವೂ ಅನೇಕ ಮಂದಿ ಅಲ್ಲಿಗೆ ಬಂದು, "ಬಾಬಾ ಎಲ್ಲಿ ನಿಂತರು? ಎಲ್ಲಿ ಕುಳಿತರು? ಹೇಗೆ ಪ್ರಸಾದ ತೆಗೆದರು?" ಎಂದು ಆ ಕುಟುಂಬ ದವರನ್ನು ವಿಚಾರಿಸಿ, "ನಿಮ್ಮ ಪೂಣ್ಯವೇ ಪುಣ್ಯ!" ಎನ್ನುತ್ತ ಮನೆಯ ಮುಂದೆ ಅಡ್ಡಬಿದ್ದು ತೆರಳುತ್ತಿದ್ದರು.

ಸ್ಥವಿರ ಸುನೀತ

[ಅನಾಮಧೇಯನಾಗಿದ್ದ ಚಮ್ಮಾರನೊಬ್ಬನು (ಆಗಿನ್ನೂ ಹದಿನಾಲ್ಕು ಹದಿನೈದು ವರ್ಷಗಳ ಬಾಲಕನಾಗಿದ್ದ) ಶ್ರೀ ಸತ್ಯ ಸಾಯಿ ಬಾಬಾ ಅವರ ಗುರುಕರುಣೆಗೆ ಪಾತ್ರನಾದ ಹಾಗೆ—

ಭಗವಂತನಾದ ಬುದ್ಧನ ಮಹಾಕರುಣೆಗೆ ಪಾತ್ರನಾಗಿ ಉದ್ಧಾರವಾದ ಸುನೀತನೆಂಬ ಕಸ ಗುಡಿಸುವವನ ವೃತ್ತಾಂತವು ಬೌದ್ಧರ ಧರ್ಮಗ್ರಂಥಗಳಲ್ಲಿ ಪ್ರಸಿದ್ಧವಾಗಿದೆ. "ಥೇರಗಾಥಾ" ಎಂಬ ಗ್ರಂಥದಲ್ಲಿ ಸುನೀತನು ತನ್ನ ಉದ್ಧಾರದ ಕತೆಯನ್ನು 12 ಪದ್ಯಗಳಲ್ಲಿ ತಾನೇ ಹಾಡಿದ್ದಾನೆ. ಅದರ ಕನ್ನಡ ಅನುವಾದವನ್ನು ಕೆಳಗೆ ಕೊಟ್ಟಿದ್ದೇನೆ.]

ನೀಚಕುಲದಲಿ ಜನನ,
ನಾನಲ್ಪಭೋಜನನು, ನಾ ದರಿದ್ರ;
ಹೂಗಳನು ಗುಡಿಸುವುದು-
ಅದುವೆ ಆಗಿತ್ತೆನ್ನ ಹೀನಕರ್ಮ ೧

ಹೀನೈಸಿ ಪರಿಭವಿಸಿ
ಜರೆದು ಪೋಗುವರೆನ್ನ ಕಂಡ ಜನರು:
ಎನ್ನ ಮನ ಕಿರಿದಪ್ಪು-
ದಾನು ಬರುಜನರಿಗೆ ನಮಿಸುತಿದ್ದೆ ೨

ಅಂದು ಕಂಡೆನು ನಾನು
ಭಿಕ್ಷು ಸಂಘವು ಬಳಸಿ ಬೆಂಬಿಡಿದನ,
ಮಗಧದ ಪುರೋತ್ತಮವ
ಪುಗುವಾ ಮಹಾವೀರ ಸಂಬುದ್ಧನ ೩

ಹೆಗಲಿನಡ್ಡೆಯನಾಗ
ಕೆಳಗಿರಿಸಿ ವಂದಿಸಲು ಬಳಿಸಾರಿದೆ;
ನನ್ನದೇ ಮೇಲಿನನು-
ಕಂಪನದಿ ನಿಂತನಾ ಪುರುಷೋತ್ತಮ ೪

ವಂದನೆಗಳನು ಸಲಿಸಿ
ಗುರುಚರಣಗಳಿಗೊಂದು ಬಳಿಗೆ ನಿಂತು,
ಸರ್ವಸತ್ತ್ವೋತ್ತಮನ
ಯಾಚಿಸಿದೆನಾನಾಗ ಪ್ರವ್ರಜ್ಯವ ೫

ಕಾರುಣಿಕನವನದಕೆ
ಸರ್ವಲೋಕಾನುಕಂಪಕನಾದ ಗುರುವು
"ಬಾ ಭಿಕ್ಷು"ವೆಂದೆನ್ನ
ನುಡಿಸಲಾಯ್ತೆನಗದುವೆ "ಉಪಸಂಪದಾ" ೬

ಅಪ್ರಮತ್ತನೆ ಆಗಿ
ವಿಹರಿಸುತ ವನಗಳೊಳಗೇ ಕಾಕಿಯಾಗಿ
ಎನಗೆ ಜಿನನುಪದೇಶ-
ಗೈದ ಗುರುವಚನಗಳ ನಡೆದೆ ನಾನು ೭

ರಾತ್ರಿಯಾಯಿತು: ಮೊದಲ
ಯಾಮದಲಿ ನೆನಪಾಯ್ತು ಪೂರ್ವಜಾತಿ;
ಮಧ್ಯಮದ ಯಾಮದಲಿ
ಪರಿಶುದ್ಧವಾಯಿತ್ತೈ ದಿವ್ಯಚಕ್ಷು;

ಕಡೆಯ ಯಾಮಕೆ ಸಿಡಿದು
ಪುಡಿಯಾಯ್ತು ಕತ್ತಲೆಯ ದೊಡ್ಡ ಮೊತ್ತ ೮

ಅಂದು ಕತ್ತಲೆ ಕರಗಿ
ಸೂರ್ಯನೇಳುವ ಮೊದಲಿನುದಯಕಾಲದಲಿ
ಇಂದ್ರಬ್ರಹ್ಮರು ಬಂದು
ಬೊಗಸೆಗೈಗಳನೆತ್ತಿ ಪೊಡಮಟ್ಟರೆನಗೆ ೯

“ನಮಿಸುವೆವು ನಿನಗಿದೋ
ಪುರುಷ ಆಜಾನೇಯ! ಪುರುಷೋತ್ತಮಾ!
ನಿನ್ನಾಸ್ರವಗಳೆಲ್ಲ
ಕ್ಷಿಣವ್ಯೆ! ಮಾರಿಷ! ನೀ ದಕ್ಷಿಣಾರ್ಹ!” ೧೦

ಇಂತು ದೇವರ ಸಂಘ
ಸುತ್ತಿ ಬಳಸಿದ ನನ್ನ ನೋಡಿ ಗುರುವು
ಮುಗುಳುನಗೆಯನು ಮೆರೆದು
ನುಡಿದನಹ ಅರ್ಥವಿಂತಾಗುವಂತೆ: ೧೧

“ತಪದಿಂದ ದಮದಿಂದ
ಬ್ರಹ್ಮಚರ್ಯವು ಮೇಣು ಸಂಯಮಗಳಿಂದ-
ಇವುಗಳಿಂದಲೆ ಪ್ರಾಪ್ತಿ
ಬ್ರಾಹ್ಮಣ್ಯ! ಬ್ರಾಹ್ಮಣೋತ್ತಮನಿವನೆ ತಾನೆ!” ೧೨

"ಶ್ರೀನಿವಾಸ"ರ 'ಸುನೀತ'

"ಶ್ರೀನಿವಾಸ"(ಡಾಕ್ಟರ್ ಮಾಸ್ತಿ ವೆಂಕಟೇಶ ಅಯ್ಯಂಗಾರ್) ಅವರು ಬರೆದಿರುವ ಸಣ್ಣಕತೆಗಳಲ್ಲಿ "ಸಾರಿಪುತ್ರನ ಕೊನೆಯ ದಿನಗಳು" ಹೇಗೋ, ಅವರು ಬರೆದಿರುವ ನಾಟಕಗಳಲ್ಲಿ "ಯಶೋಧರಾ" ಹೇಗೋ, ಅವರು ಬರೆದಿರುವ ಪದ್ಯಗಳಲ್ಲಿ "ಸುನೀತ" ಹಾಗೆ. ಇವು ಮೂರೂ ಬುದ್ಧ ಗುರುವಿನ ಮಹಿಮೆಯನ್ನು ತಿಳಿಯಪಡಿಸುವ ರಚನೆಗಳು. ಹತ್ತು ಸಲ ಓದಿದ ಮೇಲೂ ಹನ್ನೊಂದನೆಯ ಸಲಕ್ಕೆ ಹಳತು ಎನ್ನಿಸದೆ ನಿತ್ಯವೂ ನೂತನವೆನ್ನಿಸುವ ಗುಣದಿಂದ ಕೂಡಿವೆ.

ಇವುಗಳಲ್ಲಿ 'ಸುನೀತ' ಸುಮ್ಮನೆ ಓದಿಕೊಳ್ಳುವುದಕ್ಕೆ ಮಾತ್ರವಲ್ಲ, ರಾಗವಾಗಿ ಹೇಳಿಕೊಳ್ಳಲೂ ಬರುತ್ತದೆ.

ಗುರುವಿನ ಮಹಿಮೆಯ ಹೊಗಳುವ ಗೀತಾ
ಇದ ಹಾಡಿದನು ಸುನೀತಾ

ಎಂದು ಪದ್ಯ ಆರಂಭವಾಗುತ್ತದೆ, 108 ಪಂಕ್ತಿಗಳಲ್ಲಿ, 12 ಪಂಕ್ತಿಗಳ 9 ಚರಣಗಳಲ್ಲಿ ಸುನೀತ ತನ್ನ ಉದ್ಧಾರದ ಕತೆಯನ್ನು ಹೇಳಿ ಕೊಳ್ಳುತ್ತಾನೆ.

ರಾಜಗೃಹದಲ್ಲಿ ಬೀದಿಯ ಕಸವನ್ನು ಗುಡಿಸುವನವನು. ಅವನು ಹುಟ್ಟಿದ್ದು ಕೀಳುಜಾತಿಯಲ್ಲಿ, ಬೆಳೆದದ್ದು ಕೀಳುಜನರ ನಡುವೆ. ಅವನ ಬಡತನ ಹೇಳತೀರದು. ಮೇಲುಕುಲದವರು,

ಐಶ್ವರ್ಯವಂತರು ಅವನನ್ನು ಹತ್ತಿರ ಸೇರಿಸರು. ಹೀಗೆ ಬೆಲೆ ಬಾಳದ ಬಾಳುವೆಯನ್ನು ಅವನು ಬಾಳುತ್ತಿರುವಾಗ—

ಕಸವನು ಗುಡಿಸುತ ಕಸವೇ ಆಗಿ,
ಕಸಕೂ ಕಡಮೆ, ಅಧಮರ ಮೊದಲಿ

ಎನ್ನಿಸಿದ ಸುನೀತನಿಗೆ—

ಬಂದಿತು ಕಾಲ, ಹರಿಯಿತು ಸಾಲ,
ಕಂಡನು ಅವನೂ ಬಾಳಿನ ಮೇಲ

ಏನಾಯಿತು? ಅದು ಹೇಗಾಯಿತು? ಒಂದು ಸಲ ಬುದ್ಧಗುರು ಸಾವಿರ ಶ್ರಮಣರೊಡನೆ ರಾಜಗೃಹಕ್ಕೆ ಬಂದರು. ನಗರದ ಉತ್ತಮರೆಲ್ಲರೂ ಅವರನ್ನು ಎದುರುಗೊಂಡು ಸ್ವಾಗತಿಸಿ, ಮೆರವಣಿಗೆಯಲ್ಲಿ ಕರೆದುಕೊಂಡು ಹೋಗುತ್ತಿದ್ದಾರೆ. ಆಗ ಹಾದಿಯ ಬದಿಯಲ್ಲಿ ನಿಂತಿದ್ದ ಸುನೀತ ಅವರನ್ನು ನೋಡಿದ. ಅವರ ಮುಖದಲ್ಲಿ ತೊಳಗಿದ ಕರುಣೆಯನ್ನು ನೋಡಿ, ಅವನಿಗೆ ಯಾವುದೋ ಪ್ರೇಮ, ಸಲುಗೆ ಉಂಟಾಯಿತು. ಒಳಗೆ ಏನೋ ಹೊರಳಿತು, ಹೇಗೋ ಆಯಿತು. ಮಡಿ ಮೈಲಿಗೆ ನೀತಿಗಳನ್ನು ಮರೆತು ಸುನೀತನು ಗುರುವಿನ ಬಳಿ ಸಾರಿ, ಕಣ್ಣೀರು ಸುರಿಸುತ್ತ ಅವರ ಪಾದಗಳನ್ನು ಅಪ್ಪಿಕೊಂಡನು. ಆಗ—

ಹಾ ಎಂದರು ಜನ; ಬಿಡಿಸಲು ಬಂದರು;
ಗುರುದೇವರು, ಬಿಡಿ ಬಿಡಿ ಇರಲೆಂದರು.

ಅಷ್ಟೇ ಅಲ್ಲ. ಬುದ್ಧಗುರು ಮತ್ತೇನು ಮಾಡಿದರೆಂಬುದನ್ನು ಸುನೀತನ ಮಾತುಗಳಲ್ಲೆ ಕೇಳಬೇಕು:

ಬಿಡಿಸಲು ಬಂದವರನು ತಡೆಯುತ್ತ
ಗುರುದೇವರು ಹಿಡಿದೆತ್ತಿದರೆನ್ನ;
ಕಣ್ಣೀರನು ಕಿರುಬೆರಳಿಂದೊರಸಿ
ಕೆಂದಳಿರಂದದ ಕೈಯಲಿ ಬೆನ್ನ
ತಡವಿದರಯ್ಯ; ಮೈಯಿಗೆ ಮೆಯ್ಯ
ಸೋಕಿಸಿ ನಿಂತರು; ಇಲ್ಲ ಅಸಯ್ಯ;
'ದೇವಾ, ನಿಮ್ಮನು ಮುಟ್ಟಿದೆನಲ್ಲಾ!'
ಎನ್ನುತ ನಾನು ಕಾತರ ನುಡಿಯೆ
ಮೆಲ್ಲನೆ ನಕ್ಕರು: ಹಣತೆಗೆ ಜಿಡ್ಡನೆ
ಜಿಡ್ಡೇ ಎಣ್ಣೆ ದೀಪದ ಕುಡಿಗೆ?
ಪಾವನನಾದೆನು ಅಂದು ಸುನೀತಾ
ಗುರುವರನಡಿಯನು ಸೋಕಿ ಪುನೀತಾ.

ಆ ದಿನವೆಲ್ಲ ಸುನೀತ ಗುರುವಿನ ಜೊತೆಯಲ್ಲೆ ನಡೆದನು. ಗುರು ಅವನಿಗೆ ಅಂದೇ ತತ್ತ್ವದ ಪರಿಯನ್ನು ಕಲಿಸಿದರು. ಮನಸಿನ ಕಣ್ಣಿನ ಎವೆಯನ್ನು ಬಿಡಿಸಿ, ಪಾಪೆಯನ್ನು ಮರೆಸಿದ್ದ ತೆರೆಯನ್ನು ಸೆಳೆದರು. ಸುನೀತ ಮುಕ್ತನಾದ. ದೇವಗಣವೆಲ್ಲ ಬಂದು ಅವನನ್ನು ಕೊಂಡಾಡಿತು. ಆಗ—

ವಿಶ್ವಜೀವನಾಬ್ಧಿಯ ವಕ್ಷದಲಿ
ಅಲೆ ತೇಲಿದೆನು ಅಧಮರ ಮೊದಲಿ

ಎಂದು ಸುನೀತನು ಧನ್ಯನಾದನು.

ಉಳಿದವರಿಗೆ ಬರುವರುಷದ ಮೇಲೆ
ದೊರೆಯುವ ತಪಸಿನ ಫಲವನು ನನಗೆ
ಗುರು ಒಂದೇ ದಿನದಲಿ ನೀಡಿದರು;
ಮನಸು ಮಾಡಿದರೆ ಕಷ್ಟವೆ ಧಣಿಗೆ?

ಗುರುವಿನ ಕೃಪೆಯಿಂದ ಸುನೀತನಿಗೆ ಜ್ಞಾನೋದಯ

ವಾಯಿತು. ಹಿಂದೆ ಅವನು ಅನುಭವಿಸುತ್ತಿದ್ದ ದೀನತೆ ಕೃಪಣತೆಗಳು ಸುಲಿದುಹೋದುವು.

ಲೋಕದ ಜೀವನವೇ ನಾನಾದೆ
ಹರಿಯಿತು ನಾನು ಎನ್ನುವ ಬಾಧೆ

ಎಂಬ ಅನುಭವ ಸುನೀತನಿಗೆ ಉಂಟಾಯಿತು. ಆಗ ಆತನು ಹೀಗೆ ಜಯಗೀತೆಯನ್ನು ಹಾಡಿದನು:

ಜಯವಾಗಲಿ ಗುರುವರ ಬುದ್ಧನಿಗೆ;
ಜಯ ಅರಗುವರೆಗೆ ಸಿದ್ಧಾರ್ಥನಿಗೆ;
ಜಯವಾಗಲಿ ಅಂತ್ಯಜಭ್ರಾತೃವಿಗೆ;
ವಿಶ್ವಪ್ರೇಮದ ಜೀವನ್ಮಣಿಗೆ;
ಜಯ ಗುರುದೇವ, ದೀನರ ಕಾವ.
ಜಯ ಜಯ ನನ್ನ ಜೀವದ ಜೀವ;
ಎಲ್ಲೆಡೆ ಹರಡಲಿ ನಿನ್ನುಪದೇಶ;
ಹರಿಯಲಿ ಎಲ್ಲಾ ಮನಸಿನ ಭ್ರಾಂತಿ;
ಎಲ್ಲೆಡೆ ಅರಳಲಿ ತಿಳಿವಿನ ಮೊಗ್ಗು;
ಎಲ್ಲಾ ಹೃದಯದಿ ಮೊಳೆಯಲಿ ಶಾಂತಿ;
ಜಯ ಶಾಕ್ಯಸಿಂಹ, ಜಯ ಮೌನಿವರ,
ಜಯ ಗುರುದೇವ, ಭವಭೀತಿಹರ.

◆ "ಸ್ಥವಿರ ಸುನೀತ" ಎಂಬ ಕವನಕ್ಕೆ ◆

ಕೆಲವು ಟಿಪ್ಪಣಿಗಳು

೧. ಹೂಗಳು — ಬಲಿಪೀಠಗಳಲ್ಲಿಯೂ ಪೂಜಾಸ್ಥಾನಗಳಲ್ಲಿಯೂ ಒಣಗಿ ಕೊಳೆತ ಹೂಗಳು.

೨. ಪುರೋತ್ತಮ- ರಾಜಧಾನಿಯಾದ ರಾಜಗೃಹ. ಮಹಾವೀರ-ಬುದ್ಧನ ಒಂದು ಹೆಸರು.

೪. ಅಡ್ಡೆ-ಕೊಳೆತ ಹೂಗಳನ್ನು ಹೊತ್ತು ಹಾಕುವ ಸಾಧನ. ಅನುಕಂಪ-ಸಹಾನುಭೂತಿ.

೫. ಪ್ರವ್ರಜ್ಯ-ಸಂನ್ಯಾಸ.

೬. ಕಾರುಣಿಕ-ಕರುಣಾಮೂರ್ತಿ, ಭಿಕ್ಷು-ಬೌದ್ಧ ಸಂನ್ಯಾಸಿ. ಉಪಸಂಪದಾ-ಭಿಕ್ಷುವಾಗಿ ಸಂಘವನ್ನು ಪ್ರವೇಶಿಸುವ ಎರಡನೇ ಹೆಜ್ಜೆ.

೭. ಅಪ್ರಮತ್ತ-ಎಚ್ಚರ ತಪ್ಪದವನು. ಜಿನ-ಬುದ್ಧ. ಗುರುವಚನ-ಉಪದೇಶ.

೮. ಪೂರ್ವಜಾತಿ-ಹಿಂದಿನ ಜನ್ಮಗಳು. ದಿವ್ಯಚಕ್ಷು-ಅಲೌಕಿಕವಾದದ್ದನ್ನು ಕಾಣುವ ಅಂತರ್ದೃಷ್ಟಿ. ಕತ್ತಲೆ-ಅವಿದ್ಯೆ.

೯. ಕತ್ತಲೆ -ರಾತ್ರಿ. ಬೊಗಸೆಗೈಗಳನೆತ್ತು-ಕೈಮುಗಿ. ಪೊಡಮಡು-

ಅಡ್ಡಬೀಳು.

೧೦. ಪುರುಷ ಆಜಾನೇಯ-ಪ್ರಾಣಿಗಳಲ್ಲಿ ಜಾತ್ಯಶ್ವ ಹೇಗೋ ಹಾಗೆ ಮನುಷ್ಯರಲ್ಲಿ ಉತ್ತಮನಾದವನು. ಆಸ್ರವ-ಮೋಕ್ಷಕ್ಕೆ ಅಡ್ಡಿಯಾಗುವ ಕೆಟ್ಟ ಪ್ರವೃತ್ತಿಗಳು. ಮಾರಿಷ-ಮಹಾನುಭಾವ. ದಕ್ಷಿಣಾರ್ಹ-ಪೂಜಾರ್ಹ.

◆ ಸಾಯಿ ಸೌಲಭ್ಯ ◆

ತಾನು ಹೀನಕುಲದಲ್ಲಿ ಹುಟ್ಟಿದವನಾದರೂ, ಹೀನವೃತ್ತಿಯಿಂದ ಬದುಕುತ್ತಿದ್ದವನಾದರೂ, ತಾನೂ ಉತ್ತಮನಾಗಬೇಕೆಂಬ ಹಂಬಲ ಸುನೀತನ ಅಂತರಂಗದಲ್ಲಿ ತೀವ್ರವಾಗಿತ್ತಾದ ಕಾರಣದಿಂದ ಆತನು ಬುದ್ಧ ಗುರುವಿನ ಕರುಣೆಗೆ ಭಾಜನನಾದನು. ಆತನೊಳಗಿನ ಯೋಗ್ಯತೆಯನ್ನು ಕಂಡುಕೊಂಡು ಗುರು ಆತನನ್ನು "ಬಾ, ಭಿಕ್ಷು. ಭಿಕ್ಷುವಾಗುವ ಯೋಗ್ಯತೆ ನಿನಗಿದೆ, ಬಾ" ಎಂದು ಬಳಿಗೆ ಕರೆದುಕೊಂಡರು. ಉದ್ಧಾರವಾಗುವುದಕ್ಕೆ ಏನೇನು ಮಾಡಬೇಕೆಂದು ಆ ಮುಕ್ತಿಮಾರ್ಗವನ್ನು ಆತನಿಗೆ ಉಪದೇಶ ಮಾಡಿದರು. ಸುನೀತನಾದರೂ ಗುರುವಚನಕ್ಕೆ ವಿಧೇಯನಾಗಿ ನಡೆದು, "ಇಹೈವ ಫಲ ಮಶ್ನುತೇ" ಎನ್ನುವ ಹಾಗೆ, ತನ್ನ ಶ್ರಮಣಜೀವನದ ಫಲವನ್ನು ಕ್ಷಿಪ್ರದಲ್ಲಿಯೇ ಕಂಡುಕೊಂಡನು. ಆಗ ಇಂದ್ರ ಬ್ರಹ್ಮ ಮೊದಲಾದ ದೇವರುಗಳೆಲ್ಲ ಆತನನ್ನು ಮೆಚ್ಚಿ ಕೊಂಡಾಡಿದರು. ಸುನೀತನು ಸಾಧಿಸಿದ ಸದ್ಗತಿಯನ್ನು ಕಂಡು ಭಗವಂತನು ಆತನನ್ನು "ಬ್ರಾಹ್ಮಣೋತ್ತಮ"ನೆಂದು ಪ್ರಶಂಸಿಸಿದನು. ಬುದ್ಧನ ಸಂಘದಲ್ಲಿ ತಮ್ಮ ವಯಸ್ಸಿನಿಂದಲೂ ಜ್ಞಾನದಿಂದಲೂ ಹಿರಿಯ ('ಸ್ಥವಿರ') ರಾದವರಲ್ಲಿ ಸುನೀತನೂ ಒಬ್ಬನಾದನು.

‘ಅಂತ್ಯಜ’ನೆನಿಸಿದ್ದ ಸುನೀತನು ತನ್ನ ಸಾಧನೆಯಿಂದ ‘ಅಗ್ರಜ’ನಾದ ಹಾಗೆಯೇ—ಪರಮವಾದ ಶಿವಭಕ್ತಿಯಿಂದ ಶಿವ ಸಾಯುಜ್ಯವನ್ನು ಪಡೆದ ನಂದಕಾರ್ ಅವರ ಕಥೆಯನ್ನೂ, ಪರಮವಾದ ವಿಷ್ಣುಭಕ್ತಿಯಿಂದ ವಿಷ್ಣು ಸನ್ನಿಧಿಯನ್ನು ಸೇರಿದ ತಿರುಪಾಣಿ ಎಂಬ ಆಳ್ವಾರರ ಕಥೆಯನ್ನೂ ಇದರೊಡನೆ ಪರಿಭಾವಿಸಬಹುದು.

ಈ ಪ್ರಸಂಗಗಳನ್ನು ನೆನೆಪಿಗೆ ತರುವ “ಚಮ್ಮಾರನ ಭಾಗ್ಯ”ವು ಶ್ರೀ ಸತ್ಯ ಸಾಯಿ ಬಾಬಾ ಅವರ ಸೌಲಭ್ಯಕ್ಕೆ ಒಂದು ನಿದರ್ಶನ.

ತಮ್ಮ ಅನನ್ಯದುರ್ಲಭ ವ್ಯಕ್ತಿತ್ವ ಮತ್ತು ವೈವಿಧ್ಯತರ ಬರವಣಿಗೆಯಿಂದ ಕನ್ನಡ ಸಾಹಿತ್ಯಕ್ಕೆ ಬೆಲೆ ಬಾಳುವ ಬಳುವಳಿಯನ್ನು ಒದಿಸಿರುವ ಮಹನೀಯ ಚೇತನ ಡಾ. ಜಿ. ಪಿ. ರಾಜರತ್ನಂ. ಸುದೀರ್ಘ ಕಾಲದ ಬಹು ವಿಪುಲ ಬರಹಗಳ ಜೊತೆಗೆ ಹಿರಿಯ ಮತ್ತು ನವೋದಿತರ ಲಿಖಾವಟ್ಟುಗಳ ಸತ್ವ, ಸವಿಗಳನ್ನು ಕನ್ನಡ ಸಾಹಿತ್ಯಾಭಿಮಾನಿಗಳಿಗೆ ಮನಗಾಣಿಸುವ ಕೈಂಕರ್ಯವನ್ನು ಕೈಕೊಂಡು ಕೃತಕೃತ್ಯರಾದವರು ಜಿ. ಪಿ. ರಾಜರತ್ನಂ.

ಅವರಿಂದ ರಚಿತವಾದ ಶಿಶು ಸಾಹಿತ್ಯ, ನಾಟಕ ಹಾಗೂ ಇತರ ಗದ್ಯ ಲೇಖನಗಳ ಇಪ್ಪತ್ತೈದು ಕೃತಿಗಳು ಇದೀಗ ಬೆಂಗಳೂರಿನ ಸುವಿಖ್ಯಾತ ಸಪ್ನ ಬುಕ್ ಹೌಸ್ ವತಿಯಿಂದ ಪುನಃ ಬೆಳಕು ಕಾಣುತ್ತಿವೆ. ಇಲ್ಲಿನ ಬರಹಗಳಲ್ಲಿ ರಾಜರತ್ನಂ ಅವರ ಹೃದಯಂಗಮ ಶೈಲಿಯ, ಸುಗಮ ಗ್ರಹಿಕೆಯ ಆಪ್ತ ನುಡಿಗಾರಿಕೆಯ ಮೊಹರು ಅಚ್ಚೊತ್ತಿದೆ. ಅವರ ಸರ್ವ ಸಮನ್ವಯ ರೂಪಿ ನಿರ್ಮಲಾಂತಃಕರಣದ ಮುಕ್ತ ಸೆಲೆಯ ಗಂಡು ಧ್ವನಿ ಅನುರಣಿಸಿದೆ.

ಜಿ. ಪಿ. ರಾಜರತ್ನಂ ವಿರಚಿತ ಇನ್ನೂರ ಐವತ್ತಕ್ಕೂ ಹೆಚ್ಚು ಪುಸ್ತಕಗಳನ್ನು ಹೊರತರುವ ಗುರುತರ ಹಾಗೂ ಸಾಹಸಮಯ ಯೋಜನೆಯನ್ನು ಸಪ್ನ ಬುಕ್ ಹೌಸ್ ಹಮ್ಮಿಕೊಂಡಿರುವುದು ಅಭಿನಂದನೀಯ ಸಂಗತಿ. ಕನ್ನಡದ ರತ್ನಪ್ರಾಯ ಸಾಹಿತ್ಯ ಪರಿಚಾರಕನ ಕೃತಿಗಳಿಗೆ ಮರುಜೀವ ಹಾಗೂ ಪ್ರಸಾರವನ್ನು ಒದಗಿಸಲಿರುವ ಈ ಪ್ರಕಾಶನ ಸಂಸ್ಥೆಗೆ ಅಮಿತ ಯಶಸ್ಸನ್ನು ಹಾರೈಸುತ್ತೇನೆ. ಸಿರಿಗನ್ನಡಂ ಗೆಲ್ಗೆ.

೧೨.೦೩.೨೦೦೮ • ಪ್ರೊ. ಕೆ. ಎಸ್. ನಿಸಾರ್ ಅಹಮದ್

SINCE 1967 Sapna

ಸಪ್ನ ಬುಕ್ ಹೌಸ್®

3ನೇ ಮುಖ್ಯ ರಸ್ತೆ, ಗಾಂಧಿನಗರ, ಬೆಂಗಳೂರು - 560 009

ದೂರವಾಣಿ : 40114455

ISBN : 978-81-280-0827-6

ಬೆಲೆ ರೂ. 150/-

9 788128 008276